ರಕ್ಷಣಾ ವಾಸ್ತು ಶಿಲ್ಪ : ಚಿತ್ರದುರ್ಗ ಜಿಲ್ಲೆ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾ ಪ್ರಬಂಧ)

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೪

ಮಾರ್ಗದರ್ಶಕರು-ಡಾ: ವಿ. [illegible]

63

ರಕ್ಷಣಾ ವಾಸ್ತು ಶಿಲ್ಪ : ಚಿತ್ರದುರ್ಗ ಜಿಲ್ಲೆ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾ ಪ್ರಬಂಧ)

ಸಂಶೋಧಕರು
ಶ್ರೀ ಎಸ್. ತಿಪ್ಪೇಸ್ವಾಮಿ


ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೪

ಪರಿವಿಡಿ

ಸಂಕ್ಷೇಪಗಳ ವಿಸ್ತೃತ ರೂಪಗಳು

ಎ.ಕ	:	ಎಫಿಗ್ರಫಿಯ ಕರ್ನಾಟಕ ಸಂಪುಟ
ಇ.ದ	:	ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಂಚಿಕೆ, ಬೆಂಗಳೂರು
ಕ.ವಿ.ವಿ.	:	ಕನ್ನಡ ವಿಷಯ ವಿಶ್ವಕೋಶ
ಕ.ಚ.ಸಂ	:	ಕರ್ನಾಟಕ ಚರಿತ್ರೆ ಸಂಪುಟಗಳು
ದ.ಕ.ಅ.ಮ	:	ದಕ್ಷಿಣ ಕರ್ನಾಟಕದ ಅರಸು ಮನೆತನಗಳು
ಪ್ರಾ.ಶಾ.ಲೇ.ಸಂ.	:	ಪ್ರಾಚೀನ ಶಾಸನಗಳ ಲೇಖನ ಸಂಗ್ರಹ
ಹು.ಶ್ರೀ.ಜೋ.ಐ.ಲೇ	:	ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು
ಹು.ಶ್ರೀ.ಜೋ.ಸಂ.ಲೇ	:	ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು
D.A.I.E.K	:	Defence Archiecture in Early Karnataka
I.A.	:	Indian Antiqury
I.A.R.	:	Indian Archaeaology - A Review (New Delhi)
M.A.R.	:	Mysore Archaeaological Report
Q.J.M.S.	:	Quaterly Journal of Mithic Society

ಚಿತ್ರದುರ್ಗ ಜಿಲ್ಲಾ ನಕ್ಷೆ



ಚಿತ್ರದುರ್ಗ ಜಿಲ್ಲೆಯ ಪ್ರಮುಖ ಕೋಟೆಗಳು



೧. ಸಂತೇಗುಡ್ಡ
೨. ಜಟಂಗಿರಾಮೇಶ್ವರ
೩. ಬ್ರಹ್ಮಗಿರಿ
೪. ಗುಡ್ಡದಹಳ್ಳಿ
೫. ಉಚ್ಚಂಗಿದುರ್ಗ
೬. ಲುಂಕೇಕೋಟೆ
೭. ಮೊಳಕಾಲ್ಮೂರು
೮. ತುರುವನೂರು
೯. ರಾಮದುರ್ಗ
೧೦. ಸಿದ್ದವ್ವನದುರ್ಗ
೧೧. ಚಿತ್ರದುರ್ಗ
೧೨. ಐಮಂಗಲ
೧೩. ಕಣಜನಹಳ್ಳಿ
೧೪. ವೇಣುಕಲ್ಲುಗುಡ್ಡ
೧೫. ಭರಮಗಿರಿ
೧೬. ಭರಮ್ಮಣನಾಯಕನದುರ್ಗ
೧೭. ಜಾನಕಲ್ಲು
೧೮. ಸಿಂಗೇನಹಳ್ಳಿ
೧೯. ರಾಮಗರಿ
೨೦. ಹೊಸದುರ್ಗ
೨೧. ಶ್ರೀರಾಂಪುರ

ಅಧ್ಯಾಯ ೧

ಪ್ರಸ್ತಾವನೆ

೧

ಪ್ರಸ್ತಾವನೆ

ಜೀವಜಗತ್ತಿನಲ್ಲಿ ಮಹತ್ವದ ಸ್ಥಾನ ಪಡೆದಿರುವ ಮಾನವನ ಬದುಕಿಗೆ ಪೃಥ್ವಿಯೇ ಆಧಾರಪೀಠ. ಇಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳು ಸೇರಿಕೊಳ್ಳುತ್ತವೆ. ಇವು ಯಾವಾಗಲೂ ಮಾರ್ಪಾಟು ಹೊಂದುತ್ತಲೇ ಇರುತ್ತವೆ. ಈ ಮಾರ್ಪಾಡು ನಾಗರೀಕ ಸಮಾಜದ ಸೂಚಕವೆನ್ನಬಹುದು. ನಾಗರೀಕತೆ ಬೆಳೆದಂತೆಲ್ಲಾ ಮಾನವನು ತನ್ನ ಸುತ್ತಮುತ್ತಲ ಪ್ರಕೃತಿಯಿಂದ ಕೆಲವೊಂದು ಪಾಠಗಳನ್ನು ಕಲಿತನಲ್ಲದೆ ತನ್ನ ಬುದ್ಧಿಯನ್ನು ಜೀವನ ವಿಧಾನಕ್ಕೆ ತಕ್ಕಂತೆ ಬೆಳೆಸಿಕೊಂಡನು. ಇದಕ್ಕೆ ಈ ಪ್ರಕೃತಿಯು ಕೂಡ ಸಹಕಾರಿಯಾಗಿತೆನ್ನಬಹುದು. ಮರದ ಪೊಟರೆ, ಬೆಟ್ಟಗುಡ್ಡ, ಗವಿ, ಕಲ್ಲಾಸರೆಗಳಲ್ಲಿ ಜೀವನ ನಡೆಸುತ್ತಿದ್ದ ಆದಿಮಾನವ ಕ್ರಮೇಣ ಬೆಟ್ಟಗಳ ತಪ್ಪಲು, ಹಳ್ಳ-ಕೊಳ್ಳಗಳ ಪರಿಸರದಲ್ಲಿ ಜೀವಿಸುತ್ತಾ ಶಾಶ್ವತವಾಗಿ ಒಂದು ಕಡೆ ನೆಲೆಸಿ ಕೃಷಿಯೊಂದಿಗೆ ತನ್ನ ಜೀವನ ವಿಧಾನವನ್ನು ಪ್ರಾರಂಭಿಸಿ ಗ್ರಾಮೀಣ ಬದುಕಿಗೆ ನಾಂದಿ ಹಾಡಿದನು. ಸಮುದಾಯದ ಬದುಕು, ಸಂಘಟಿತ ಬದುಕಿಗೆ ದಾರಿ ಮಾಡಿಕೊಟ್ಟಿತು. ಇದು ಮುಂದೆ ರಾಜ್ಯ-ಸಾಮ್ರಾಜ್ಯಗಳ ಸಂಘಟನೆಗಳಿಗೂ ಅವಕಾಶ ಕಲ್ಪಿಸಿಕೊಟ್ಟಿತೆಂದು ಹೇಳಬಹುದು. ಆಹಾರ ಉತ್ಪಾದನಾ ಹಂತದೊಂದಿಗೆ ಆರಂಭಗೊಂಡ ಸಮುದಾಯದ ಬದುಕು ಸಹಜವಾಗಿಯೇ ಸಮುದಾಯದ ಹಿತರಕ್ಷಣೆಗೆ ಗಮನ ನೀಡಿತು. ಏಕೆಂದರೆ ಪ್ರಪಂಚದಲ್ಲಿ ಮಾನವನನ್ನು ಹೊರತುಪಡಿಸಿ ಇತರೆ ಎಲ್ಲಾ ಜೀವಿಗಳಿಗೂ ಒಂದಲ್ಲಾ ಒಂದು ರೀತಿಯಲ್ಲಿ

ಬಾಹ್ಯ ಅಪಾಯಗಳಿಂದ ತಮ್ಮನ್ನು ರಕ್ಷಣೆ ಮಾಡಿಕೊಳ್ಳಲು ತಮ್ಮ ಶರೀರದಲ್ಲೇ ಒಂದು ಬಗೆಯ ಸಂರಕ್ಷಣಾತ್ಮಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿಕೊಂಡಿವೆ. ಉದಾ: ಮುಳ್ಳುಹಂದಿ, ಬಸವನಹುಳು, ಆಮೆ ಮುಂತಾದವು.

ಮಾನವನು ಈ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ, ಶಾರೀರಿಕವಾಗಿ ಯಾವುದೇ ತೆರನಾದ ರಕ್ಷಣಾತ್ಮಕ ವ್ಯವಸ್ಥೆಗಳನ್ನು ಹೊಂದಿಲ್ಲವಾದುದರಿಂದ, ಮಾನವನು ತನ್ನನ್ನು ಇತರರು, ಕ್ರೂರ ಪ್ರಾಣಿಗಳು ಹಾಗೂ ಪ್ರವಾಹದಂತಹ ನೈಸರ್ಗಿಕ ವಿಕೋಪಗಳಿಂದ ರಕ್ಷಣೆ ಪಡೆಯಲು ಕೃತಕ ರಕ್ಷಣಾ ಸಾಧನಗಳನ್ನು ಕಂಡುಕೊಂಡನು. ತಾನು ವಾಸಿಸುವ ಪ್ರದೇಶದ ಸುತ್ತಲೂ ಮಣ್ಣಿನ ದಿಬ್ಬವನ್ನು ಏರಿಸುವುದು, ಆಳವಾದ ಕಂದಕವನ್ನು ತೋಡುವುದು, ಇಟ್ಟಿಗೆ ಮತ್ತು ಕಲ್ಲುಗಳಿಂದ ಗೋಡೆ ನಿರ್ಮಿಸಿಕೊಳ್ಳುವ ಕುರಿತು ಯೋಚಿಸಿದನು. ನಂತರ ದಿನಗಳಲ್ಲಿ ಜನಸಂಖ್ಯೆ ಮತ್ತು ಆರ್ಥಿಕಾಭಿವೃದ್ಧಿಯ ಹೆಚ್ಚಳದಿಂದಾಗಿ ಶತ್ರುಗಳಿಂದ ಇಡೀ ಮಾನವನ ವಾಸಸ್ಥಳಕ್ಕೆ ರಕ್ಷಣೆ ಅಗತ್ಯವೆಂದು ಯೋಚಿಸಿದನಲ್ಲದೆ ಸೂಕ್ತ ಭೌಗೋಳಿಕ ನೆಲೆಗಳನ್ನು ಹುಡುಕಿ ರಕ್ಷಣಾವ್ಯವಸ್ಥೆಯನ್ನು ರೂಪಿಸಿಕೊಂಡನು. ವಾಸ್ತವವಾಗಿ ರಕ್ಷಣೆ ಎಂಬುದು ಇಲ್ಲಿ ಕೋಟೆಯಾಗಿದೆ. ಬಿದಿರಿನ ತಡೆಗೋಡೆ ರಚಿಸುವುದು ಮುಂತಾದವು ರಕ್ಷಣಾ ವ್ಯವಸ್ಥೆಗೆ ಇಂಬು ನೀಡಿದವು. ಹೀಗೆ ಇತಿಹಾಸ ಪೂರ್ವಕಾಲದಿಂದಲೂ ಆರಂಭಗೊಂಡ ರಕ್ಷಣಾ ವಿಧಾನವು ಮುಂದೆ ಸಾಕಷ್ಟು ಸಂಕೀರ್ಣಗೊಂಡಿರುವುದನ್ನು ನಾಡಿನ ಉದ್ದಗಲಕ್ಕೂ ಇರುವ ಕೋಟೆಗಳು ಧೃಡಪಡಿಸುತ್ತವೆ.

ಇಂದು ಇತಿಹಾಸ ಸಂಶೋಧನೆಯು ಹೊಸ ತಿರುವನ್ನು ಪಡೆದುಕೊಂಡಿದೆ. ಇದುವರೆಗೂ ಕೇವಲ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಗಣ್ಯ ಮನೆತನಗಳ ಬಗ್ಗೆ ನಡೆದಿದ್ದ ಸಂಶೋಧನೆಯು ಕೆಲವು ದಶಕಗಳಿಂದ ಸಾಂಸ್ಕೃತಿಕ ಸಂಶೋಧನೆಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಅದರಲ್ಲೂ ಪ್ರಾದೇಶಿಕ ಇತಿಹಾಸದ ಹೆಚ್ಚು ಹೆಚ್ಚು ಸಂಶೋಧನ ಗ್ರಂಥಗಳು ಹೊರಬರುತ್ತಿವೆ. ಇಂತಹ ಪ್ರಾದೇಶಿಕ ಇತಿಹಾಸ ರಚನೆಯಿಂದ ಇತಿಹಾಸಕ್ಕೆ ಸ್ಪಷ್ಟ ಚಿತ್ರಣ ದೊರೆಯುತ್ತದೆನ್ನುವ ಮಾತಿನಲ್ಲಿ ಯಾವುದೇ ಸಂಶಯವಿಲ್ಲ. ಸ್ಥಳೀಯ ಅಥವಾ ಪ್ರಾದೇಶಿಕ ಚರಿತ್ರೆ ಬೆಳೆಯದಿದ್ದರೆ ರಾಜ್ಯ ಅಥವಾ ರಾಷ್ಟ್ರದ ಇತಿಹಾಸ ಮುಂದು ವರೆಯಲಾರದು; ಅರ್ಥಾತ್ ಅಂತಹ ಇತಿಹಾಸ ಸ್ಪಷ್ಟತೆಯನ್ನು ಕಾಣಲಾರದು. ಹಾಗಾಗಿ ಸ್ಥಳೀಯ ಇತಿಹಾಸ ಆಯಾಯ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಮಜಲುಗಳನ್ನು ಸಮಗ್ರವಾಗಿ ಒಂದು ಕಡೆ ತಂದಾಗ ನಮ್ಮ ಇತಿಹಾಸ ಸ್ಪಷ್ಟಗೊಳ್ಳುತ್ತದೆ. ಕರ್ನಾಟಕ

[illegible]

[illegible]

[illegible]

[illegible]

ವಿಶ್ವವಿದ್ಯಾಲಯದಲ್ಲಿ ನಡೆದ ೧೯೭೧ರ ವಿಚಾರಗೋಷ್ಠಿಯಲ್ಲಿ ಪ್ರಾದೇಶಿಕ ಇತಿಹಾಸ ರಚನೆಗೆ ಹೆಚ್ಚು ಒತ್ತುಕೊಡಬೇಕೆಂದು ಅಭಿಪ್ರಾಯಪಟ್ಟಿರುವುದು ಸ್ಮರಣಾರ್ಹ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮವಾರು ಮಟ್ಟದಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಇತ್ತೀಚೆಗೆ ಪ್ರಾದೇಶಿಕ ಇತಿಹಾಸದ ರಚನೆಗೆ ಹೆಚ್ಚು ಒತ್ತು ಕೊಡಲಾಗಿದೆ. ಏಕೆಂದರೆ ಹೊಸ ಆಕರಗಳು, ವಿನೂತನ ವಿಧಾನಗಳು, ಚರಿತ್ರೆಕಾರರ ಅಧ್ಯಯನದ ದೃಷ್ಟಿಕೋನಗಳಿಂದ, ಸಂಶೋಧನೆಯ ಪ್ರಗತಿ ಹೊಸದಿಕ್ಕಿನತ್ತ ಸಾಗುತ್ತಿದೆ. ಹಿರಿಯ ವಿದ್ವಾಂಸರು, ತರುಣ ಸಂಶೋಧಕರು, ಹಲವಾರು ಗ್ರಂಥ ಮತ್ತು ಲೇಖನಗಳನ್ನು ಬರೆದು ಪ್ರಾದೇಶಿಕ ಇತಿಹಾಸಕ್ಕೆ ಹೊಸ ಮೆರುಗನ್ನು ನೀಡಿದ್ದಾರೆ.

ಪ್ರಸ್ತುತ ಅಧ್ಯಯನವು 'ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ' ಎಂಬ ಶೀರ್ಷಿಕೆಯನ್ನು ಹೊತ್ತಿದೆ. ಇದುವರೆಗಿನ ಕನ್ನಡದಲ್ಲಿ ನಡೆದ ಅನೇಕ ಅಧ್ಯಯನಗಳು 'ಕೋಟೆಗಳು' ಎಂಬ ಶೀರ್ಷಿಕೆಯನ್ನು ಹೊಂದಿವೆ. ಇವುಗಳಲ್ಲಿ 'ಕೋಟೆ' ಎಂಬ ಪದಕ್ಕೆ ಅರ್ಥವನ್ನು ಕೊಡುವುದು ಮಾತ್ರ ರೂಢಿಯಾಗಿದೆ. ಆದರೆ ಪ್ರಸ್ತುತ ಅಧ್ಯಯನವನ್ನು ರಕ್ಷಣಾ ವಾಸ್ತುಶಿಲ್ಪ ಎಂಬ ಶಿರೋನಾಮೆಯನ್ನು ಬಳಸಿಕೊಂಡು ಅಭ್ಯಸಿಸಲಾಗುತ್ತದೆ. ಪ್ರಸ್ತುತ ಶಿರೋನಾಮೆಯಲ್ಲಿ ರಕ್ಷಣೆ, ವಾಸ್ತು, ಶಿಲ್ಪ ಎಂಬ ಮೂರು ಶಬ್ದಗಳಿವೆ.[೨] ರಕ್ಷಣೆ ಎಂಬುದಕ್ಕೆ ಕಾಪಾಡುವುದು, ಕಾವಲು, ಸಂರಕ್ಷಕ ಮುಂತಾದ ಅರ್ಥಗಳಿವೆ. ವಾಸ್ತು ಎಂದರೆ ಕಟ್ಟಡ; ಮನುಷ್ಯ-ದೇವತೆಗಳು ವಾಸ ಮಾಡುವ ಸ್ಥಳ ಅಥವಾ ವಾಸಕ್ಕೆ ಮನೆಯನ್ನು ಕಟ್ಟಲು ಯೋಗ್ಯವಾದ ಭೂಮಿ. ಶಿಲ್ಪವೆಂದರೆ ಕಟ್ಟಡಗಳನ್ನು ಕಟ್ಟುವಿಕೆ, ಈ ಕಟ್ಟಡಗಳು ದೇವಾಲಯಗಳಾಗಿರ ಬಹುದು, ಕೋಟೆ ಕೊತ್ತಲಗಳಾಗಿರಬಹುದು, ಒಟ್ಟಾರೆ ರಕ್ಷಣಾ ವಾಸ್ತುಶಿಲ್ಪವೆಂದರೆ ಮನುಷ್ಯ ತನ್ನನ್ನು ರಕ್ಷಿಸಿಕೊಳ್ಳಲು ಯೋಗ್ಯವಾದ ಪ್ರದೇಶದಲ್ಲಿ ನಿರ್ಮಿಸಿಕೊಂಡ ಶಿಕ್ಷಣಾ ಕಟ್ಟಡ ಎಂಬುದಾಗಿದೆ. ಈ ವಾಸ್ತುಶಿಲ್ಪದಲ್ಲಿ ಸಾಕಷ್ಟು ವೈವಿಧ್ಯತೆ ಇದೆ. ಕೇವಲ ಗೃಹ, ದೇವಾಲಯ, ನಿರ್ಮಾಣವಷ್ಟೇ ವಾಸ್ತುಶಿಲ್ಪವಲ್ಲ. ನಗರಯೋಜನೆ, ಕಾಲುವೆ, ರಸ್ತೆ, ಉದ್ಯಾನ, ಕೋಟೆಕೊತ್ತಲ ಮೊದಲಾದ ನಿರ್ಮಿತಿಗಳು 'ವಾಸ್ತುಶಿಲ್ಪ' ಪದದ ವ್ಯಾಪ್ತಿಯಲ್ಲಿ ಬರುತ್ತವೆ. ಈ ಹಿನ್ನೆಲೆಯಲ್ಲಿ 'ರಕ್ಷಣಾ ವಾಸ್ತಶಿಲ್ಪ' ಎಂಬುದು ಸೂಕ್ತವೆಂದು ನಿರ್ಧರಿಸಿ ಪ್ರಸ್ತುತ ಅಧ್ಯಯನಕ್ಕೆ 'ರಕ್ಷಣಾ ವಾಸ್ತಶಿಲ್ಪ : ಚಿತ್ರದುರ್ಗ ಜಿಲ್ಲೆ' ಎಂಬ ಶೀರ್ಷಿಕೆಯಡಿಯಲ್ಲಿ ಅಭ್ಯಸಿಸಲಾಗಿದೆ.

ಯುದ್ಧತಂತ್ರ ಮತ್ತು ರಕ್ಷಣಾ ದೃಷ್ಟಿಯಿಂದ ನಿರ್ಮಿಸಿರುವ ಇಂತಹ ಕೋಟೆಗಳು ಮಾನವನ ಜೀವನ ವಿಧಾನಕ್ಕೆ ಸಾಕ್ಷಿಯಾಗಿವೆ. ವಿಶಾಲ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದ

ಕೋಟೆಗಳು ರಾಜ್ಯದ ಅವಿಭಾಜ್ಯ ಅಂಗಗಳಾಗಿದ್ದವು. ಇವು ಇತಿಹಾಸದ ಸಾಂಸ್ಕೃತಿಕ ಸ್ಮಾರಕಗಳೂ ಹೌದು. ಇವು ನಮ್ಮನ್ನು ನಮ್ಮ ಸಂಸ್ಕೃತಿಯನ್ನು ರಕ್ಷಿಸಿದ್ದವಲ್ಲದೆ ಇತಿಹಾಸ ರಚನೆಗೆ ಪ್ರಮುಖ ಪುರಾತತ್ವ ಆಕರಗಳಾಗಿವೆ. ಚಿತ್ರದುರ್ಗ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ಕೊಂಡಿಗಳಾಗಿರುವ ಇಂತಹ ಕೋಟೆ-ಕೊತ್ತಲುಗಳು ಪ್ರಾಚೀನ ಸ್ಮಾರಕಗಳಾಗಿ ವಿನಾಶದ ಅಂಚನ್ನು ತಲುಪಿವೆಯಲ್ಲದೆ ಇತಿಹಾಸದ ಮೂಕ ಸಾಕ್ಷಿಗಳಾಗಿ ನಿಂತಿವೆ. ಬದಲಾದ ರಾಜಕೀಯ ಸನ್ನಿವೇಶ, ಯುದ್ಧನೀತಿ, ಪ್ರಕೃತಿ ವಿಕೋಪ ಹಾಗೂ ಮನುಷ್ಯನ ಸ್ವಾರ್ಥ ಜೀವನದ ಹಿಡಿತಕ್ಕೆ ಸಿಕ್ಕಿ ಹೇಳ ಹೆಸರಿಲ್ಲದೆ ಕಣ್ಮರೆಯಾಗುವುದರೊಂದಿಗೆ ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಇಂತಹ ಅಪೂರ್ವ ಸ್ಮಾರಕಗಳ ಹಿಂದೆ ಅದೆಷ್ಟೋ ಇತಿಹಾಸ ಅಡಗಿದೆ. ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿರುವವರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಏಳುಬೀಳಿನ ಹಾದಿಯನ್ನು ವಿವಿಧ ಮಗ್ಗಲುಗಳಿಂದ ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಾದ್ಯಂತ ಹರಡಿರುವ ಪ್ರಮುಖ ಗ್ರಾಮಕೋಟೆಗಳು, ಗಡಿಕೋಟೆಗಳು, ರಾಜಧಾನಿ ಕೋಟೆಗಳು (ಕೇಂದ್ರ ಕೋಟೆಗಳು) ಈಗಾಗಲೇ ವಿನಾಶದ ಅಂಚನ್ನು ತಲುಪಿವೆ. ಇವು ಸಂಪೂರ್ಣವಾಗಿ ನಾಶವಾಗುವ ಮುನ್ನ ದಾಖಲಿಸಿ ಮುಂದಿನ ಜನಾಂಗಕ್ಕೆ ಮಾದರಿಯಾಗಿಸುವ ಸಂಕ್ಷಿಪ್ತ ಪ್ರಯತ್ನವನ್ನು ಪ್ರಸ್ತುತ ಅಧ್ಯಯನ ಹೊಂದಿದೆ.

ಚಿತ್ರದುರ್ಗ ಎಂದರೆ ಸಾಮಾನ್ಯವಾಗಿ ನಮಗೆ ನೆನಪಿಗೆ ಬರುವುದು ದೈತ್ಯಾಕಾರದ ಗಿರಿದುರ್ಗ ಏಳು ಸುತ್ತಿನಕೋಟೆ. ಆದರೆ ಇಂತಹ ಭವ್ಯ ಕೋಟೆಯಾಗದಿದ್ದರೂ ರಚನೆ, ವಿನ್ಯಾಸ ಮತ್ತು ತಂತ್ರಗಾರಿಕೆಯನ್ನು ಹೋಲುವ ಹಾಗೂ ಮಾರ್ಪಾಟಾಗಿರುವ ಕೋಟೆಗಳು ಜಿಲ್ಲೆಯಾದ್ಯಂತ ಇವೆ. ಇದುವರೆಗೆ ಇವುಗಳ ಅಧ್ಯಯನವೇ ನಡೆದಿಲ್ಲವೆಂದು ಹೇಳಬಹುದು. ಚಿತ್ರದುರ್ಗ ಕೋಟೆಯ ಬಗ್ಗೆ ಈಗಾಗಲೇ ವಿದ್ವಾಂಸರಿಂದ ಅನೇಕ ಸಂಶೋಧನ ಲೇಖನ, ಪರಿಚಯಾತ್ಮಕ ಕೃತಿ, ಮಾರ್ಗದರ್ಶಿ ಗ್ರಂಥಗಳು ಹೊರಬಂದಿವೆಯಾದರೂ ಜಿಲ್ಲೆಯಾದ್ಯಂತ ಇರುವ ಇತರೆ ಕೋಟೆಗಳ ಬಗ್ಗೆ ಅಧ್ಯಯನವೇ ನಡೆದಿಲ್ಲವೆನ್ನಬಹುದು. ಉದಾ : ಹಿರಿಯೂರು ತಾಲೂಕಿನ ವೇಣುಕಲ್ಲುಗುಡ್ಡ, ಹೊಳಲ್ಕೆರೆ ತಾಲೂಕಿನ ಭರಮಣ್ಣನಾಯಕನದುರ್ಗ, ಸಿಂಗೇನಹಳ್ಳಿ, ರಾಮಗಿರಿ, ಹೊಸದುರ್ಗ ತಾಲೂಕಿನ ಜಾನಕಲ್ಲು, ಬೂದಿಹಾಳು, ಮೊಳಕಾಲ್ಮೂರು ತಾಲೂಕಿನ ಉಚ್ಚಂಗಿದುರ್ಗ, ನುಂಕಿಮಲೆ, ಸಂತೆಗುಡ್ಡ ಹೀಗೆ ಹತ್ತುಹಲವು ಕೋಟೆಗಳ ಅಧ್ಯಯನ ನಡೆದಿಲ್ಲ. ಆದ್ದರಿಂದ ಜಿಲ್ಲೆಯ ಪ್ರಮುಖ ಕೋಟೆಗಳನ್ನು ಒಂದೆಡೆ ತಂದು ಅಧ್ಯಯನ ಮಾಡುವುದು ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರದುರ್ಗ ಪಾಳೆಗಾರರಲ್ಲದೆ ಇತರೆ ಪಾಳೆಗಾರರು ಆಳ್ವಿಕೆ ಮಾಡಿದ್ದಾರೆ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಇವರು ಸಾಮಂತರಾಗಿ, ಕೆಲವರು ಸ್ವತಂತ್ರರಾಗಿ ಆಳ್ವಿಕೆ ನಡೆಸಿದ್ದಾರೆ. ಜಿಲ್ಲೆಯಲ್ಲಿ ಪಾಳೆಗಾರರ ಕಾಲದಲ್ಲಿ ಕೋಟೆಗಳ ನಿರ್ಮಾಣ ಹೆಚ್ಚಾಗಿರುವುದು ಅಧ್ಯಯನದಿಂದ ಕಂಡುಬಂದಿದೆ. ಚಿತ್ರದುರ್ಗ ಪಾಳೆಯಗಾರರು, ಹಟ್ಟಿ ಪಾಳೆಯಗಾರರು, ಹರತಿಕೋಟೆ ಪಾಳೆಯಗಾರರು, ಮತ್ತೋಡು ಪಾಳೆಗಾರರು, ಬೂದಿಹಾಳು ಪಾಳೆಯಗಾರರು ಕಟ್ಟಿದ ಪಾಳೆಯಪಟ್ಟುಗಳು ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಬರುತ್ತವೆ. ಇವುಗಳಲ್ಲಿ ಕೆಲವು ಗಿರಿದುರ್ಗಗಳಾದರೆ ಮತ್ತೆ ಕೆಲವು ಸ್ಥಳದುರ್ಗಗಳಾಗಿವೆ. ಇಂತಹ ಎಲ್ಲಾ ದುರ್ಗಗಳನ್ನು ಒಂದೆಡೆ ಕ್ರೋಢಿಕರಿಸಿ ಅಧ್ಯಯನ ಮಾಡುವುದು ಈ ಪ್ರಬಂಧದ ಉದ್ದೇಶವಾಗಿದೆ.

ಸಂಪೂರ್ಣವಾಗಿ ಕ್ಷೇತ್ರಕಾರ್ಯ ಆಧಾರಿತವಾದ ಈ ಅಧ್ಯಯನವು ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಆರು ತಾಲೂಕುಗಳು ಸೇರಿದಂತೆ ಗೋಚರಿತ ಕೋಟೆ-ಕೊತ್ತಲಗಳ ಎಲ್ಲಾ ಆಯಾಮಗಳನ್ನು ಅಭ್ಯಸಿಸುವ ಮೂಲಕ ಪ್ರತಿಯೊಂದು ಕೋಟೆಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುತ್ತಾ ಅಲಕ್ಷಿತ ಕೋಟೆಗಳ ಜೊತೆಗೆ ಅನೇಕ ಬುರುಜು, ಕಾವಲುಗೋಪುರಗಳ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ. ಈ ಭಾಗದಲ್ಲಿ ಆಳ್ವಿಕೆ ನಡೆಸಿದ ಅರಸರು ತಮ್ಮ ಆರ್ಥಿಕ ಶಕ್ತಿಯ ಇತಿಮಿತಿಯಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಸಾಮ್ರಾಜ್ಯದ ರಕ್ಷಣೆಗಾಗಿ ಮಾಡಿಕೊಂಡ ಕೋಟೆ-ಕೊತ್ತಲಗಳನ್ನು ಕಾಲಮಾನದ ಚೌಕಟ್ಟಿನಲ್ಲಿ ತಂದು ಅವುಗಳ ರಚನೆ, ಕೋಟೆಯನ್ನು ಕಟ್ಟಿದ ಉದ್ದೇಶ, ತಂತ್ರಗಾರಿಕೆ, ಕೋಟೆಯ ಸ್ಥಿತಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಇಷ್ಟೇ ಅಲ್ಲದೆ ಈ ವ್ಯವಸ್ಥೆಗೆ ಪೂರಕವಾಗಿರುವ ಇತರೆ ಸ್ಮಾರಕಗಳಾದ ದೇವಾಲಯ, ಉಗ್ರಾಣ, ನೀರಿನ ಆಶ್ರಯ, ಮದ್ದಿನ ಮನೆ, ದ್ವಾರಬಾಗಿಲು, ವಸತಿನೆಲೆ, ಬುರುಜು-ಬತೇರಿ, ಕಂದಕಗಳನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವ ಮೂಲಕ ಪ್ರಾದೇಶಿಕ ಚರಿತ್ರೆಯನ್ನು ಕಟ್ಟಿಕೊಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

೧.೧ ಅಧ್ಯಯನದ ವ್ಯಾಪ್ತಿ

ಯಾವುದೇ ಸಂಶೋಧನೆಗೆ ಒಂದು ಚೌಕಟ್ಟು ಅಂದರೆ ವ್ಯಾಪ್ತಿ ಬಹು ಮುಖ್ಯ. ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತವಾದ ಸಂಶೋಧನೆ ಯಶಸ್ಸು ಕಾಣಬೇಕೆಂದರೆ ಅದಕ್ಕೆ ಒಂದು ಚೌಕಟ್ಟು ಅಗತ್ಯ.

ಈ ಚೌಕಟ್ಟಿನ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನ ಮಿತಿಯನ್ನು ತೀವ್ರಗೊಳಿಸುವುದಲ್ಲದೆ ಸಂಶೋಧಕನನ್ನು ದಾರಿ ತಪ್ಪಿಸುತ್ತದೆ. ಪ್ರಸ್ತುತ ಅಧ್ಯಯನದ ಶೀರ್ಷಿಕೆಯನ್ವಯ ಚಿತ್ರದುರ್ಗ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ. ಹಾಗಿದ್ದೂ ಚಿತ್ರದುರ್ಗ ಪಾಳೆಯಗಾರರ ಕಾಲದ ಕೋಟೆಗಳು ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯನ್ನು ಮೀರಿನಿಂತಿವೆ. ಇವುಗಳನ್ನು ಸಾಂದರ್ಭಿಕವಾಗಿ ಆಯಾಯ ವಿಷಯಗಳಿಗನುಗುಣವಾಗಿ ಬಳಸಿಕೊಳ್ಳಲಾಗಿದೆ.

ಒಟ್ಟಾರೆ 'ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ' ಎಂಬ ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ, ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಹೊಸದುರ್ಗ ತಾಲೂಕುಗಳಲ್ಲಿರುವ ಕೋಟೆಗಳನ್ನು ಚರ್ಚಿಸಲಾಗಿದೆ. ಇದರಂತೆ ಚಿತ್ರದುರ್ಗ ತಾಲೂಕಿನಲ್ಲಿ ತುರುವನೂರು, ಸಿದ್ದಪ್ಪನದುರ್ಗ, ಚಿತ್ರದುರ್ಗ, ಮೊಳಕಾಲ್ಮೂರು ತಾಲೂಕಿನಲ್ಲಿ ಮೊಳಕಾಲ್ಮೂರು, ಬ್ರಹ್ಮಗಿರಿ, ಲುಂಕೆಮಲೆ, ಜಟಂಗಿ ರಾಮೇಶ್ವರ, ಸಂತೇಗುಡ್ಡ, ಗುಡ್ಡದಹಳ್ಳಿ, ಚಳ್ಳಕರೆ ತಾಲೂಕಿನ ಹೊಸಗುಡ್ಡ, ಹಿರಿಯೂರು ತಾಲೂಕಿನ ಐಮಂಗಲ, ವೇಣುಕಲ್ಲುಗುಡ್ಡ, ಕಣಜನಹಳ್ಳಿ, ಭರಮಗಿರಿ, ಹೊಸದುರ್ಗ ತಾಲೂಕಿನ ಬೂದಿಹಾಳು, ಹೊಸದುರ್ಗ, ಹೊಳಲ್ಕೆರೆ ತಾಲೂಕಿನ ಭರಮಣ್ಣನಾಯಕನದುರ್ಗ, ಸಿಂಗೇನಹಳ್ಳಿ, ಜಾನಕಲ್ಲು, ರಾಮಗಿರಿ ಮುಂತಾದ ಕೋಟೆಗಳು ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುತ್ತವೆ.

೧.೨ ಆಕರಗಳು

ಸಂಶೋಧನೆಗೆ ಆಕರಗಳು ತುಂಬಾ ಮುಖ್ಯ. ಪ್ರಸ್ತುತ ಅಧ್ಯಯನದಲ್ಲಿ ಕೋಟೆಗಳೇ ಮೂಲ ಆಕರಗಳಾಗಿವೆ. ಜೊತೆಗೆ ಆಯಾ ಕಾಲದ ಸಾಹಿತ್ಯ ಕೃತಿಗಳು, ಪ್ರವಾಸಿ ವರದಿಗಳು, ಶಾಸನಗಳು, ಶಿಲ್ಪಗಳು, ವೀರಗಲ್ಲುಗಳು, ಉತ್ಖನನ ಮುಂತಾದವು ಪ್ರಾಥಮಿಕ ಆಕರಗಳಾಗಿ ನೆರವಾಗಿವೆ. ಮುಖ್ಯವಾಗಿ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಕೋಟೆಯ ಅವಶೇಷಗಳು, ಸಂಶೋಧನೆಗೆ ಅಗತ್ಯವಾದ ಪೂರಕ ಮಾಹಿತಿ ಒದಗಿಸಿವೆ. ಜೊತೆಗೆ ಅಧ್ಯಯನದ ಅವಶ್ಯಕತೆಗೆ ಅನುಗುಣವಾಗಿ ಅಲ್ಲಲ್ಲಿ ಸಮಕಾಲೀನ ಕಾವ್ಯಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಲಿಂಗಣ್ಣಕವಿಯ ಕೆಳದಿ ನೃಪವಿಜಯಂ, ಕೆಳದಿ ಬಸವರಾಜನ ಶಿವತತ್ವ ರತ್ನಾಕರ, ಗೋವಿಂದವೈದ್ಯನ ಕಂಠೀರವ ನರಸರಾಜವಿಜಯಂ, ಕನಕದಾಸರ

ಮೋಹನತರಂಗಿಣಿ, ನಂಜುಂಡ ಕವಿಯ ರಾಮನಾಥಚರಿತೆ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ ಮುಂತಾದ ಕೃತಿಗಳಲ್ಲದೆ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಪಟ್ಟ ಬಖೈರು, ಹಸ್ತಪ್ರತಿಗಳಲ್ಲೂ ಕೋಟೆಗೆ ಸಂಬಂಧಿಸಿದಂತೆ ಮಾಹಿತಿಗಳಿವೆ. 'ಸಿರುಮನ ಸಾಂಗತ್ಯ'ದಲ್ಲಿ ಹೊಸದುರ್ಗ ತಾಲೂಕಿನ ಶ್ರೀರಾಂಪುರ (ಬೂದಿಹಾಳು) ಕೋಟೆಯ ಬಗೆಗಿನ ವಿವರವನ್ನು ಕಾಣಬಹುದು. ಜನಪದ ಕಾವ್ಯಗಳಲ್ಲೂ ಚಿತ್ರದುರ್ಗದ ಕೋಟೆಯ ಬಗ್ಗೆ ಮನದಣಿಯೆ ವರ್ಣಿಸಿದ್ದಾರೆ. ಇವುಗಳಲ್ಲದೆ ಕೋಟೆ ಸಂಬಂಧಿ ಐತಿಹ್ಯಗಳನ್ನೂ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಸಾಹಿತ್ಯ ಕೃತಿಗಳಲ್ಲದೆ ವಿದೇಶಿ ಬರವಣಿಗೆಗಳೂ ಕೂಡ ಕೋಟೆಗಳಿಗೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ನೀಡಿರುವುದರಿಂದ ಇವೂ ಪ್ರಮುಖ ಆಕರಗಳಾಗಿವೆ. ಫ್ರಾನ್ಸಿಸ್ ಬುಕಾನನ್‌ರವರ 'ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಕೆನರಾ ಅಂಡ್ ಮಲಬಾರ್' ಎಂಬ ಗ್ರಂಥದಲ್ಲಿ ಚಿತ್ರದುರ್ಗದ ಐಮಂಗಲ ಕೋಟೆಗಳ ಬಗ್ಗೆ ಕೆಲವು ಮಾಹಿತಿಗಳನ್ನು ನೀಡಿದ್ದಾರೆ. ಉಳಿದಂತೆ ಪ್ರಾಕ್ತನ ಆಧಾರಗಳು ಕೂಡ ಕೋಟೆಯ ಇತಿಹಾಸವನ್ನು ರಚಿಸುವಲ್ಲಿ ತುಂಬಾ ಪ್ರಾಮುಖ್ಯತೆ ವಹಿಸಿವೆ. ಇವುಗಳಲ್ಲಿ ಶಾಸನ, ಸ್ಮಾರಕ, ಶಿಲ್ಪಕಲೆ, ಚಿತ್ರಕಲೆ, ವೀರಗಲ್ಲು ಹಾಗೂ ಉತ್ಖನನ ವರದಿಗಳು ಮುಖ್ಯವಾಗಿವೆ. ಶಾಸನಗಳಲ್ಲಿ ಕೋಟೆ ಕೊತ್ತಲ ಮತ್ತು ಅವುಗಳನ್ನು ಗೆದ್ದುಕೊಂಡ ರೀತಿ ಮುಂತಾದ ವಿಷಯಗಳಿವೆ. ಚಿತ್ರದುರ್ಗದ ಒಂದು ಶಾಸನವು ಗರಡಿ ಮನೆಗಳು ಮತ್ತು ಕೊತ್ತಲಗಳ ಬಗ್ಗೆ ಮಾಹಿತಿಯನ್ನು ನೀಡಿದರೆ, ಕ್ರಿ.ಶ.೧೦೭೩ರ ಶಾಸನವು ಚಿತ್ರದುರ್ಗದಲ್ಲಿದ್ದ ಕೋಟೆಯ ಮಾಹಿತಿಯನ್ನು ತಿಳಿಸುತ್ತದೆ. ಕ್ರಿ.ಶ.೧೨೧೮ರ ಹೊಯ್ಸಳ ಬಲ್ಲಾಳನ ಶಾಸನವು ಹನೆಯ ಕೋಟೆಯನ್ನು ಗೆದ್ದು ವಿಜಯಗಿರಿ ಎಂಬ ಪಟ್ಟಣ ನಿರ್ಮಿಸಿರುವುದನ್ನು ತಿಳಿಸುತ್ತದೆ. ವಿಜಯನಗರದ ಸಾಮಂತ ಅರಸರು ಗ್ರಾಮ ಕೋಟೆಗಳನ್ನು ನಿರ್ಮಿಸಿರುವ ಉಲ್ಲೇಖಗಳಿವೆ. ಹೀಗೆ ಶಾಸನಗಳು ಜಿಲ್ಲೆಯಾದ್ಯಂತ ಕೋಟೆಗಳ ಇರುವಿಕೆಯ ಬಗ್ಗೆ ಸ್ವಲ್ಪ ಮಟ್ಟಿಗೆ ಮಾಹಿತಿಗಳನ್ನು ಒದಗಿಸಿವೆ. ಕೋಟೆಗಳೇ ಅತಿ ಮುಖ್ಯ ಆಧಾರಗಳಾಗಿದ್ದು, ಇವುಗಳಿಂದ ಕೋಟೆಗಳಿಗೆ ಸಂಬಂಧಿಸಿದಂತೆ ವಿಶೇಷ ಮಾಹಿತಿಗಳು ದೊರೆಯುತ್ತವೆ. ಇದೇ ರೀತಿ ಕೋಟೆಗೋಡೆಗಳ ಮೇಲೆ ಕಂಡುಬರುವ ಉಬ್ಬುಶಿಲ್ಪ, ರೇಖಾಚಿತ್ರಗಳಿಂದ ಅನೇಕ ಮಾಹಿತಿಗಳು ಸಿಗುತ್ತವೆ. ಉದಾಹರಣೆಗೆ ಮೊಳಕಾಲ್ಮೂರು ಮತ್ತು ಸಂತೆಗುಡ್ಡ ಕೋಟೆಗಳಲ್ಲಿ ಕೆತ್ತಿರುವ ಗೀರು ಚಿತ್ರ, ವರ್ಣ ಮತ್ತು ರೇಖಾ ಚಿತ್ರಗಳು ಅಂದಿನ ಆಚರಣೆ ಹಬ್ಬಹರಿದಿನಗಳು ಹಾಗೂ ಸಾಮಾಜಿಕ ಜೀವನವನ್ನು ಪ್ರತಿನಿಧಿಸುತ್ತವೆ. ವೇಣುಕಲ್ಲು ಗುಡ್ಡದ ಕೋಟೆಯ ಒಳಗೆ ದೊಡ್ಡ ಬಂಡೆಯ

ವೀರಗಲ್ಲಿನಲ್ಲಿ ಅಂದು ಉಪಯೋಗಿಸಿದ ಆಯುಧ, ಉಡುಪು, ಪರಿಕರಗಳ ಬಗೆಗಿನ ವಿವರಗಳನ್ನು ಗಮನಿಸಬಹುದು. ಉತ್ಖನನ ವರದಿಗಳು ಸಂಪೂರ್ಣ ಮಾಹಿತಿ ನೀಡದಿದ್ದರೂ ಕೋಟೆಗಳನ್ನು ಪತ್ತೆಹಚ್ಚುವಲ್ಲಿ ನೆರವಾಗಿವೆ. ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ಉತ್ಖನನ ವರದಿಗಳಲ್ಲಿ ಆ ಸ್ಥಳದಲ್ಲಿ ತುಂಡು ಗೋಡೆಗಳಿರುವುದನ್ನು ಗಮನಿಸಿ ಈ ಹಿಂದೆ ಇಲ್ಲಿ ಕೋಟೆಯಿದ್ದಿರಬಹುದೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಹೀಗೆ ಪ್ರಾಕ್ತನ ಆಕಾರಗಳು ಒಂದು ಪ್ರದೇಶದ ಮತ್ತು ಜನತೆಯ ಚಾರಿತ್ರಿಕ ಪ್ರಜ್ಞೆಯನ್ನು ಅವರ ಸೃಷ್ಟಿ ಪರಂಪರೆಗಳನ್ನು ತಿಳಿದುಕೊಳ್ಳಲು ಪ್ರಾಸಂಗಿಕವಾದ ಆಕರ ಸಾಮಗ್ರಿಗಳಾಗಿ ಮಹತ್ವವನ್ನು ಪಡೆದಿವೆ. ಹೀಗೆ ದೊರೆತ ಎಲ್ಲ ಬಗೆಯ ಆಕರಗಳಿಂದ ಚಿತ್ರದುರ್ಗ ಜಿಲ್ಲೆಯ ರಕ್ಷಣಾವಾಸ್ತುಶಿಲ್ಪವನ್ನು ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

೧.೩ ಅಧ್ಯಯನದ ಸಮೀಕ್ಷೆ

ಕರ್ನಾಟಕದಲ್ಲಿ ಕೋಟೆಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು. ಅದರಲ್ಲೂ ಅತ್ಯಂತ ಪ್ರಮುಖ ಕೋಟೆಗಳಿಗೆ ಮಾತ್ರ ಈ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಜೊತೆಗೆ ಅಧ್ಯಯನಗಳ ಒಂದು ಭಾಗವಾಗಿ ಕೆಲವು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಅಭ್ಯಸಿಸಿರುವರು. ಅವರಲ್ಲಿ ಬೆಟಗೇರಿ ಕೃಷ್ಣಶರ್ಮರು ಮುಖ್ಯರು. ಅವರು ಕರ್ನಾಟಕದ ಜನಜೀವನದಲ್ಲಿ ಚರ್ಚಿಸಿದ ಕನ್ನಡಿಗರ ಕೋಟೆಕಾಳಗ ಕುರಿತ ಅಧ್ಯಾಯ ಮಹತ್ವದ್ದು. ಅದರಲ್ಲಿ ಕೃಷ್ಣಶರ್ಮರು ಮಧ್ಯಯುಗದ ಕಾವ್ಯಗಳಲ್ಲಿ ಉಲ್ಲೇಖವಾದ ಕೋಟೆ ಮತ್ತು ಅದರ ಭಾಗಗಳು, ಕೋಟೆಕಾಳಗ ಮುಂತಾದವುಗಳನ್ನು ವಿಶ್ಲೇಷಿಸಿದ್ದಾರೆ. ಎಂ.ಚಿದಾನಂದಮೂರ್ತಿಯವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನವು ಕನ್ನಡದ ಮೇರು ಕೃತಿಗಳಲ್ಲೊಂದು. ಶಾಸನಗಳನ್ನಾಧರಿಸಿದ ಈ ಕೃತಿಯಲ್ಲಿ ಕೋಟೆಕಾಳಗದ ಬಗ್ಗೆ ಉಪಯುಕ್ತ ಚರ್ಚೆಯನ್ನು ನಡೆಸಿದ್ದಾರೆ. ಇದೇ ರೀತಿ ಆರ್.ಶೇಷಶಾಸ್ತ್ರಿಯವರು ಕರ್ನಾಟಕದ ವೀರಗಲ್ಲುಗಳು ಎಂಬ ಕೃತಿಯಲ್ಲಿ ವೀರಗಲ್ಲುಗಳಲ್ಲಿ ಕಂಡುಬರುವ ಕೋಟೆ, ಕೋಟೆಕಾಳಗ, ಕಾಳಗದಲ್ಲಿ ಬಳಸಿರುವ ಆಯುಧ ಮುಂತಾದ ವಿಷಯಗಳ ಬಗ್ಗೆ ವಿಶ್ಲೇಷಿಸಿರುವರು. ಇದೇ ರೀತಿ ಡಿ.ವಿ.ಪರಮಶಿವಮೂರ್ತಿಯವರು ಕನ್ನಡ ಶಾಸನ ಶಿಲ್ಪದಲ್ಲಿ ಕೋಟೆಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಡಾ.ಎಸ್.ಕೆ.ಜೋಶಿಯವರು ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ ಎಂಬ ಮಹಾಪ್ರಬಂಧವನ್ನು ಸಿದ್ಧಗೊಳಿಸಿ ಪ್ರಕಟಿಸಿದ್ದಾರೆ. ಈ ಪ್ರಬಂಧವು ಕರ್ನಾಟಕದ ಪ್ರಾಚೀನ ಕೋಟೆ ಕುರಿತು ಹೊರಬಂದ ಮೊಟ್ಟಮೊದಲ ಶಿಸ್ತುಬದ್ಧ

[illegible]

[illegible]

[illegible]

ಅಧ್ಯಯನವಾಗಿದೆ. ಇದರಲ್ಲಿ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಕೋಟೆಗಳ ಬಗ್ಗೆ ಅಧ್ಯಯನ ಮಾಡಲು ಸಹಕಾರಿಯಾಗಿರುವುದಲ್ಲದೆ ಇದು ಪ್ರಮುಖ ಆಕರ ಗ್ರಂಥವೂ ಆಗಿದೆ. ಡಾ.ಚನ್ನಬಸಪ್ಪ ಎಸ್.ಪಾಟೀಲರು ವ್ಯಾಪಕ ಕ್ಷೇತ್ರಕಾರ್ಯ ಮಾಡಿ ಇಡೀ ಕರ್ನಾಟಕದಲ್ಲಿರುವ ಪ್ರಮುಖ ಕೋಟೆಗಳನ್ನು ಸಂಪಾದಿಸಿ ಕರ್ನಾಟಕದ ಕೋಟೆಗಳು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ, ಮೊಳಕಾಲ್ಮೂರು ಮತ್ತು ರಾಮದುರ್ಗ ಕೋಟೆಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಹಾಗೆಯೇ ಕೋಟೆಗಳ ಬಗ್ಗೆ ಇಡಿಯಾದ ಅಧ್ಯಯನವನ್ನು ಡಾ.ಸುಜಾತ ಮಲ್ಲನಗೌಡರು ನಡೆಸಿದ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳ ಬಗ್ಗೆ ಮತ್ತು ಡಾ.ಎಂ.ಕೊಟ್ರೇಶ್ ಅವರು ನಡೆಸಿದ ಬಳ್ಳಾರಿ ಜಿಲ್ಲೆಯ ಕೋಟೆ-ಕೊತ್ತಲಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ.

ಚಿತ್ರದುರ್ಗ ಇತಿಹಾಸಕ್ಕೆ ಸಂಬಂಧಿಸಿದಂತೆ ೧೯೭೭ರಲ್ಲಿ ಡಾ.ಎಚ್.ಟಿ.ದೇಶಪಾಂಡೆಯವರು ದಿ ಚಿತ್ರದುರ್ಗ ಸ್ಟೇಟ್ ಎಂಬ ಮಹಾಪ್ರಬಂಧವನ್ನು ರಚಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ದೇಶಪಾಂಡೆಯವರು ಚಿತ್ರದುರ್ಗ ಮತ್ತು ಐಮಂಗಳ ಕೋಟೆಗಳ ಬಗ್ಗೆ ಸಾಂದರ್ಭಿಕವಾಗಿ ಚರ್ಚೆ ನಡೆಸಿದ್ದಾರೆ.

ಪ್ರೊ.ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗದ ಕೋಟೆ ಮತ್ತು ರಾಜಕೀಯ ಚರಿತ್ರೆಯ ಬಗ್ಗೆ ಅಧ್ಯಯನವನ್ನು ನಡೆಸಿ, ಅನೇಕ ಲೇಖನಗಳು ಮತ್ತು ಗ್ರಂಥಗಳನ್ನು ಹೊರತಂದಿದ್ದಾರೆ. ಇವರು ಸಂಪಾದಿಸಿರುವ ಚಂದ್ರವಳ್ಳಿಯಲ್ಲಿ ಕೋಟೆಗಳನ್ನು ಉಲ್ಲೇಖಿಸಲಾಗಿದೆ. ಇದೇ ಲೇಖಕರು ಕೆ.ವೆಂಕಣ್ಣಾಚಾರ್ ಜೊತೆಗೂಡಿ ರಚಿಸಿರುವ ಐತಿಹಾಸಿಕ ಚಿತ್ರದುರ್ಗ ಹಾಗೂ ಇವರೀರ್ವರು ಪಾಂಡುರಂಗ ಜೋಯಿಸರು ಜೊತೆಗೂಡಿ ಸಿದ್ಧಪಡಿಸಿದ ಚಿತ್ರದುರ್ಗ ದರ್ಶಿನಿಯಲ್ಲಿ ಚಿತ್ರದುರ್ಗ ಕೋಟೆ ಹಾಗೂ ಕೋಟೆಯಲ್ಲಿರುವ ವಿವಿಧ ದೇವಾಲಯ, ಶಾಸನ, ಬುರುಜು-ಬತೇರಿಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ. ಇದೇ ಸಾಲಿನಲ್ಲಿ ನಿಲ್ಲುವಂತಹ ಮತ್ತೊಂದು ಗ್ರಂಥ ಚಿತ್ರದುರ್ಗದ ಏಳು ಸುತ್ತಿನ ಕೋಟೆ ಎಂಬ ಕಿರುಹೊತ್ತಿಗೆಯನ್ನು ಶಂಕರ ಎಸ್.ಅಥಣಿ ಮತ್ತು ಪಾಂಡುರಂಗ ಜೋಯಿಸರು ರಚಿಸಿದ್ದಾರೆ. ಟಿ.ಎನ್.ಗಂಡುಗಲಿಯವರು ಕೂಡ ನೋಡಬನ್ನಿ ಚಿತ್ರದುರ್ಗ ಎಂಬ ಮಾರ್ಗದರ್ಶಿ ಗ್ರಂಥವನ್ನು ರಚಿಸಿ ಕೋಟೆಯ ಭಾಗಗಳನ್ನು ಪರಿಚಯಿಸಿದ್ದಾರೆ. ಎಂ.ಎಸ್.ಪುಟ್ಟಣನವರ ಚಿತ್ರದುರ್ಗದ ಪಾಳೆಯಗಾರರು ಎಂಬ ಕೃತಿಯಲ್ಲಿ ಕೋಟೆಗಳಿಗೆ ಸಂಬಂಧಿಸಿದಂತೆ ಅಲ್ಲಲ್ಲಿ ಉಲ್ಲೇಖಗಳಿವೆ. ಹೊಸದುರ್ಗ ತಾಲೂಕಿನ

ಬೂದಿಹಾಳು ಪಾಳೆಯಗಾರರ ಬಗ್ಗೆ ಡಾ.ಶೈಲಜಾ ಹೊಸಹಳ್ಳಿಯವರ ಸಿರುಮನ ಸಾಂಗತ್ಯಗಳು : ಒಂದು ಅಧ್ಯಯನ ಎಂಬ ಮಹಾಪ್ರಬಂಧದಲ್ಲಿ ಬೂದಿಹಾಳು ಕೋಟೆಯ ಬಗ್ಗೆ, ಬಾಗೂರು ಆರ್.ನಾಗರಾಜಪ್ಪ ಹೊಸದುರ್ಗ ಸುತ್ತ ಎಂಬ ಗ್ರಂಥಗಳಲ್ಲಿ ಸಾಂದರ್ಭಿಕವಾಗಿ ವಿವರಿಸಿದ್ದಾರೆ. ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಮೈಸೂರು ಪುರಾತತ್ವ ವರದಿಗಳಲ್ಲೂ ಕೋಟೆಗಳ ಬಗ್ಗೆ ಉಲ್ಲೇಖವಿದೆ. ಈ ಮೇಲ್ಕಂಡ ಎಲ್ಲಾ ಆಕರಗ್ರಂಥಗಳನ್ನು ಸಾಂದರ್ಭಿಕವಾಗಿ ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೧.೪ ಅಧ್ಯಯನದ ಸ್ವರೂಪ

ಈ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಯನಗಳಲ್ಲಿ ಉಪಶೀರ್ಷಿಕೆಗಳೂ ಇವೆ. ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಜಿಲ್ಲೆಯ ಕೋಟೆಗಳನ್ನು ಕುರಿತದ್ದೇ ಆಗಿದೆ. ಈ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಪ್ರಥಮ ಅಧ್ಯಯನದಲ್ಲಿ ಸ್ಪಷ್ಟಪಡಿಸಲಾಗಿದೆ. ಈ ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಸೇರಿದಂತೆ, ಕೋಟೆಗಳ ಬಗ್ಗೆ ಜಿಲ್ಲೆಯಲ್ಲಿ ಹಿಂದೆ ನಡೆದಿರುವ ಅಧ್ಯಯನ ಹಾಗೂ ಪ್ರಸ್ತುತ ಅಧ್ಯಯನದ ವಿಧಾನಗಳಲ್ಲದೆ ಮಹತ್ವ, ಸ್ವರೂಪ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಈ ವಿವರಗಳು ಪ್ರಸ್ತುತ ನಿಬಂಧಕ್ಕೆ ಅಗತ್ಯವಾದ ತಾತ್ವಿಕ ಹಿನ್ನೆಲೆಯನ್ನು ರೂಪಿಸುತ್ತವೆಂದು ಹೇಳಬಹುದು.

ಚಿತ್ರದುರ್ಗವು ಕರ್ನಾಟಕದ ಮಧ್ಯಭಾಗದಲ್ಲಿರುವ ಪ್ರಮುಖ ಜಿಲ್ಲೆಗಳಲ್ಲೊಂದಾಗಿದೆ. ಇದು ಉತ್ತರ ಮತ್ತು ದಕ್ಷಿಣ ಕರ್ನಾಟಕದ ಸಂಸ್ಕೃತಿಯನ್ನು ಬೆಸೆಯುವ ಕೊಂಡಿಯಂತಿದೆ. ಪ್ರಾಚೀನ ಕಾಲದಿಂದಲೇ ಜನವಸತಿಯ ಪ್ರದೇಶವಾಗಿದ್ದು, ಆಧುನಿಕ ಕಾಲದವರೆಗೂ ತನ್ನದೇ ಆದ ಚಾರಿತ್ರಿಕ ಘಟ್ಟಗಳನ್ನು ಗುರುತಿಸಿಕೊಂಡಿದೆ. ವಿಶೇಷವಾಗಿ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ ಪ್ರಾಚೀನ ನೆಲೆಗಳಿಗೆ ಪ್ರಮುಖ ಸ್ಥಾನವಿದೆ. ಈ ನೆಲೆಗಳು ಪ್ರಾಕ್ಚಾರಿತ್ರಿಕ ಇತಿಹಾಸದ ಮೇಲೆ ಹೊಸಬೆಳಕನ್ನು ಚೆಲ್ಲಿವೆ. ಹೀಗೆ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದ್ದ ಚಿತ್ರದುರ್ಗ ಜಿಲ್ಲೆಯ ರಾಜಕೀಯ ಚರಿತ್ರೆಗೆ ತುಂಬಾ ಮಹತ್ವವಿದೆ.

ಕ್ರಿ.ಶ.೧೯೯೭ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲೂಕುಗಳು ಜಿಲ್ಲೆಯಿಂದ ಬೇರ್ಪಟ್ಟವು. ಸರ್ಕಾರದ ಅಧಿಕಾರಿ ವಿಕೇಂದ್ರಿಕರಣ ನೀತಿಯಿಂದ ದಾವಣಗೆರೆ ಪ್ರತ್ಯೇಕ ಜಿಲ್ಲೆಯಾಗಿ ರೂಪಗೊಂಡಿತು. ಆಗ ಜಿಲ್ಲೆಯು ಕೇವಲ

ಆಡಳಿತಾತ್ಮಕವಾಗಿ ಬೇರೆಯಾಗದೆ, ಭೌಗೋಳಿಕ ನೆಲೆ ಮತ್ತು ಚರಿತ್ರೆಯ ಮೇರೆಗಳನ್ನು ಕಳೆದುಕೊಳ್ಳಬೇಕಾಯಿತು. ರಾಜ್ಯದ ವಿಸ್ತೀರ್ಣದಲ್ಲಿ ಏಳನೆಯ ಸ್ಥಾನದಲ್ಲಿದ್ದ ಚಿತ್ರದುರ್ಗ ೯ನೆಯ ಸ್ಥಾನಕ್ಕೆ ಬರುವಂತಾಯಿತು. ಈ ಎಲ್ಲ ಹಿನ್ನೆಲೆಯೊಂದಿಗೆ ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಭೌಗೋಳಿಕತೆ, ಪರಿಸರ ಮತ್ತು ರಾಜಕೀಯ ಚರಿತ್ರೆಯನ್ನು, ಈಗ ಇರುವ ಆರು ತಾಲೂಕು ಗಳನ್ನೊಳಗೊಂಡಂತೆ ಚಿತ್ರದುರ್ಗ ಜಿಲ್ಲೆಯ ಚರಿತ್ರೆಯನ್ನು ಅಧ್ಯಯನ ಮಾಡಲಾಗಿದೆ. ಇದುವರೆಗೂ ನಡೆದ ಅಧ್ಯಯನಗಳು ಈ ಹಿಂದೆ ಇದ್ದ ೯ ತಾಲೂಕುಗಳನ್ನೊಳಗೊಂಡ ಜಿಲ್ಲೆಯ ಚರಿತ್ರೆಯನ್ನು ಕಟ್ಟಿಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು. ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಶಾತವಾಹನರ ಮಾಂಡಲಿಕರಾದ ಚುಟುಗಳಿಂದ ಸ್ವಾತಂತ್ರ್ಯ ಚಳವಳಿಯವರೆಗೆ ರಾಜಕೀಯ ಚರಿತ್ರೆಯನ್ನು ಸ್ಥೂಲವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಅಲ್ಲದೆ ಪ್ರಸ್ತುತ ಅಧ್ಯಯನದಲ್ಲಿ ಇತ್ತೀಚೆಗೆ ದೊರೆತ ಶಾಸನಗಳು, ವಿದ್ವಾಂಸರು ಪತ್ತೆಹಚ್ಚಿದ ಪುರಾತತ್ವ ನೆಲೆಗಳು, ನಾಣ್ಯಗಳು ಮತ್ತಿತರೆ ವಿಷಯಗಳನ್ನು ಎರಡನೆಯ ಅಧ್ಯಾಯ ರಾಜಕೀಯ ಚರಿತ್ರೆಯಲ್ಲಿ ಹೇಳಲಾಗಿದೆ. ಈ ಚರಿತ್ರೆಯನ್ನು ರಚಿಸಲು ಮುಖ್ಯವಾಗಿ ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಚಿತ್ರದುರ್ಗದ ಬಖೈರು, ಚಂದ್ರವಳ್ಳಿ, ದಕ್ಷಿಣ ಕರ್ನಾಟಕದ ಅರಸು ಮನೆತನಗಳು ಹಾಗೂ ಎಪಿಗ್ರಾಫಿಯ ಕರ್ನಾಟಕ ಭಾಗ ೧೧, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳ ೨ ಸಂಪುಟಗಳನ್ನು ವಿಶೇಷವಾಗಿ ಬಳಸಿಕೊಳ್ಳಲಾಗಿದೆ.

ಮೂರನೆ ಅಧ್ಯಾಯವು ರಕ್ಷಣಾ ವಾಸ್ತುಶಿಲ್ಪದ ಸಮಗ್ರ ಪಕ್ಷಿನೋಟವಾಗಿದೆ. ರಕ್ಷಣಾ ವಾಸ್ತುಶಿಲ್ಪದ ಅರ್ಥ, ವ್ಯಾಖ್ಯಾನಗಳನ್ನು ಇಲ್ಲಿ ವಿಶೇಷವಾಗಿ ವಿವರಿಸಲಾಗಿದೆ. ಕೋಟೆಗಳು ಬೆಳೆದುಬಂದ ರೀತಿ, ಅವುಗಳ ಪ್ರಾಚೀನತೆಯನ್ನು ವಿವಿಧ ಮಟ್ಟದಲ್ಲಿ ಕೋಟೆಗಳ ಬೆಳವಣಿಗೆಯನ್ನು ಗುರುತಿಸಲಾಗಿದೆ. ಇಂತಹ ಕೋಟೆಗಳು ಬೆಳೆದುಬಂದ ಪ್ರಾಕೃತಿಕ ಪರಿಸರವನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ. ಅಲ್ಲದೆ ಪ್ರಕೃತಿಯು ಕೋಟೆಯ ನಿರ್ಮಾಣದಲ್ಲಿ ಯಾವ ರೀತಿ ಸಹಕಾರಿಯಾಗಿತ್ತೆಂಬುದನ್ನು ಸಾಂದರ್ಭಿಕವಾಗಿ ಹೇಳಲು ಪ್ರಯತ್ನಿಸಲಾಗಿದೆ. ಅಲ್ಲದೆ ಜಿಲ್ಲೆಯ ಕೋಟೆಗಳ ಪ್ರಾಚೀನತೆ, ಅವುಗಳ ರಚನೆ, ವಿನ್ಯಾಸ, ಪ್ರಕಾರಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ವಾಸ್ತವವಾಗಿ ಕೋಟೆಗಳನ್ನು ನಿರ್ಮಾಣ ಮಾಡಿದುದರ ಹಿನ್ನೆಲೆ, ಅವುಗಳ ಮಹತ್ವವನ್ನು ಸಮಕಾಲೀನ ಗ್ರಂಥಗಳ ಸಹಾಯದಿಂದ ವಿವೇಚಿಸಲಾಗಿದೆ. ಶಿಲ್ಪಶಾಸ್ತ್ರಗಳು ಪ್ರತಿಪಾದಿಸುವಂತೆ ವಾಸ್ತುಶಿಲ್ಪದ ಅಂಗಭಾಗಗಳಾದ ಬುರುಜು, ಬತೇರಿ, ಕಂದಕ, ಪ್ರಾಕಾರ, ಕೋಟೆಯ ತೆನೆ, ಅಂಬುಗಂಡಿ,

[illegible]

ದ್ವಾರಬಾಗಿಲು, ಮುಗಿಲಟ್ಟಣೆ ಮುಂತಾದ ಸ್ಮಾರಕಗಳ ಬಗ್ಗೆ ವಿವರಣೆ ನೀಡಲಾಗಿದೆ. ಇವುಗಳನ್ನು ರಕ್ಷಣಾ ದೃಷ್ಟಿಯಿಂದ ನಿರ್ಮಿಸಿದ ರೀತಿ, ಬಳಸಿಕೊಂಡ ಬಗೆ, ಇವುಗಳ ಮಹತ್ವ, ಪ್ರಕಾರ, ಮತ್ತಿತರೆ ವಿಷಯಗಳ ಮಾಹಿತಿಯನ್ನು ಸಂಗ್ರಹಿಸಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಜಿಲ್ಲೆಯಲ್ಲಿ ಕಂಡುಬಂದಿರುವ ಪ್ರಮುಖ ೨೧ ಕೋಟೆಗಳನ್ನು ಕುರಿತದ್ದು. ಚಿತ್ರದುರ್ಗ ಜಿಲ್ಲೆಯ ಎಲ್ಲ ಕೋಟೆಗಳನ್ನು ಇಲ್ಲಿ ಕಾಲಾನುಕ್ರಮವಾಗಿ ಹೇಳಲು ಯತ್ನಿಸಲಾಗಿದೆ. ಕೋಟೆಯ ಚರಿತ್ರೆ, ಕಾಲಮಾನ, ನಿರ್ಮಾಣದ ಉದ್ದೇಶ, ಮಹತ್ವ, ವಾಸ್ತುವಿನ್ಯಾಸ ಮತ್ತಿತರೆ ವಿಷಯಗಳನ್ನು ಕ್ಷೇತ್ರಕಾರ್ಯಾಧಾರಿತ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ರಕ್ಷಣಾ ವಾಸ್ತುಶಿಲ್ಪವು ಅನೇಕ ಅಂಗಭಾಗಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕೆಲವು ಸ್ಮಾರಕಗಳ ಮಹತ್ವದ ಬಗ್ಗೆ ಸಾಮಾನ್ಯ ದೃಷ್ಟಿಕೋನದಲ್ಲಿ ಮೂರನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಪ್ರಸ್ತುತ ಐದನೇ ಅಧ್ಯಯನದಲ್ಲಿ ಈ ಸ್ಮಾರಕಗಳನ್ನು ಚಿತ್ರದುರ್ಗ ಜಿಲ್ಲೆಯ ಕೋಟೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಚರ್ಚಿಸಿದೆ. ಬುರುಜು, ಬತೇರಿ, ಕೊತ್ತಲ, ಕಂದಕ, ದ್ವಾರಬಾಗಿಲು, ಕಾವಲು ಗೋಪುರ, ನೀರಿನ ಆಶ್ರಯತಾಣ, ಗರಡಿಮನೆ, ಮದ್ದಿನಮನೆ, ಕಣಜ, ದೇವಾಲಯ ಮುಂತಾದ ಸ್ಮಾರಕಗಳ ಬಗ್ಗೆ ವಿವರಣೆ ನೀಡಲಾಗಿದೆ. ಇವುಗಳ ಬಳಕೆ, ರಚನೆ, ವಿನ್ಯಾಸ, ಮಹತ್ವ-ಹೀಗೆ ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ನಡೆಸಿ ವಿವರಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪವಾಗಿದ್ದು ಇದು ಇಡೀ ಅಧ್ಯಯನದ ಸಂಕ್ಷಿಪ್ತ ರೂಪ. ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಪ್ರಮುಖ ಸಂಗತಿಗಳ ಸಮೀಕ್ಷೆಯಿದು.

ಅಧ್ಯಯನಕ್ಕೆ ಪೂರಕವಾಗಿ ಕೋಟೆಗಳ ನಕ್ಷೆ, ಛಾಯಾಚಿತ್ರ, ಕೋಟೆ ಪದಕೋಶಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಕೋಟೆಯ ಸ್ಥಳವನ್ನು ಗುರುತಿಸುವ ಸಲುವಾಗಿ ತಾಲೂಕು ಕೇಂದ್ರ, ಅಕ್ಷಾಂಶ, ರೇಖಾಂಶ ಹಾಗೂ ಪ್ರಸಿದ್ಧ ಸ್ಥಳಗಳ ಮೂಲಕ ಪರಿಚಯಿಸಲಾಗಿದೆ.

೧.೫ ಅಧ್ಯಯನ ವಿಧಾನ

ಸಂಶೋಧನೆಗೆ ಅಧ್ಯಯನ ಕ್ರಮವು ಅತಿಮುಖ್ಯ. ಅಧ್ಯಯನವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಉಪಯುಕ್ತ ಹಾಗೂ ಕ್ರಮಬದ್ಧವಾದ ಅಧ್ಯಯನ ಕ್ರಮವಿರಬೇಕಾಗುತ್ತದೆ. ಅಂತೆಯೇ

ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ಚಿತ್ರದುರ್ಗ ಜಿಲ್ಲೆಯಲ್ಲಿ ಇತಿಹಾಸ ಮತ್ತು ಪುರಾತತ್ವಗಳಿಗೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನೆಗಳ ಪಟ್ಟಿ ಮಾಡಿ, ವಿವಿಧ ವಿದ್ವಾಂಸರೊಂದಿಗೆ ಚರ್ಚಿಸಿ ಪ್ರಸ್ತುತ ವಿಷಯವನ್ನು ತೆಗೆದುಕೊಳ್ಳಲಾಯಿತು. ವಿಷಯದ ಆಯ್ಕೆಯು ಅಧಿಕೃತಗೊಂಡ ಬಳಿಕ **'ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ'**ಯಲ್ಲಿ ಯಾವ ಯಾವ ಅಂಶಗಳು ಒಳಗೊಂಡಿರಬೇಕೆಂಬ ಪಟ್ಟಿಯನ್ನು ತಯಾರಿಸಲಾಯಿತು. ನಂತರ ಕರ್ನಾಟಕ ಅದರಲ್ಲೂ ಚಿತ್ರದುರ್ಗ ಜಿಲ್ಲೆಯಲ್ಲಿ ಇದುವರೆಗೂ ಅಧ್ಯಯನ ನಡೆದಿರುವ ಕೋಟೆಗಳ ಬಗ್ಗೆ ವಿವಿಧ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಲಾಯಿತು. ಕರ್ನಾಟಕ ಹಾಗೂ ಹೊರರಾಜ್ಯಗಳ ವಿಶ್ವವಿದ್ಯಾಲಯ ಮತ್ತಿತರ ಗ್ರಂಥಾಲಯಗಳಿಗೆ ಭೇಟಿ ನೀಡಿ ರಕ್ಷಣಾ ವಾಸ್ತುಶಿಲ್ಪದ ಬಗ್ಗೆ ನಡೆದಿರುವ ಅಧ್ಯಯನಗಳು ಮತ್ತು ಆಕರಗಳಲ್ಲಿ ಅಧ್ಯಯನ ಯೋಗ್ಯ ಅಂಶಗಳನ್ನು ಕಾಲಾನುಕ್ರಮವಾಗಿ ದಾಖಲಿಸಿಕೊಳ್ಳಲಾಯಿತು. ಈ ನಿಟ್ಟಿನಲ್ಲಿ ಹೆಚ್ಚು ಮಾಹಿತಿ ದೊರೆತದ್ದು ಪೂನಾ ವಿಶ್ವವಿದ್ಯಾಲಯ ಮತ್ತು ದಖನ್ ಕಾಲೇಜುಗಳಲ್ಲಿ. ಇಲ್ಲಿ ದೊರೆತ ಸುರಪುರ ಸಂಸ್ಥಾನ, ಚಿತ್ರದುರ್ಗ ಮತ್ತು ಮಹಾರಾಷ್ಟ್ರದ ಕೋಟೆಗಳಿಗೆ ಸಂಬಂಧಿಸಿದ ಅಪ್ರಕಟಿತ ಮಹಾಪ್ರಬಂಧಗಳಿಂದ ಅನೇಕ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ. ಇದೇ ರೀತಿ ಧಾರವಾಡ ವಿಶ್ವವಿದ್ಯಾಲಯದಲ್ಲಿ ಉತ್ತರ ಕರ್ನಾಟಕದ ಕೋಟೆಗಳು, ರಾಯಚೂರು ಕೋಟೆಗಳು, ಆಂಧ್ರಪ್ರದೇಶದ ಕೋಟೆಗಳಯ, ಮರಾಠ ಕೋಟೆಗಳು, ಕೆಳದಿ ಕೋಟೆಗಳ ಬಗ್ಗೆ ನಡೆದ ಸಂಶೋಧನ ಮಹಾಪ್ರಬಂಧಗಳು ನನ್ನ ಅಧ್ಯಯನಕ್ಕೆ ಪೂರಕ ಸಾಮಗ್ರಿಗಳಾಗಿವೆ.

ಚಿತ್ರದುರ್ಗ ಜಿಲ್ಲೆಯ ಗೆಜೆಟಿಯರ್, ಜಿಲ್ಲಾದರ್ಶಿನಿ, ವರದಿಗಳು ಮತ್ತು ಸ್ಥಳನಾಮಗಳನ್ನು ಇಟ್ಟುಕೊಳ್ಳುವುದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಯಿಂದ ಕೋಟೆಗಳ ಬಗ್ಗೆ ಮಾಹಿತಿಯನ್ನು ಪಡೆದು ಕ್ಷೇತ್ರಕಾರ್ಯ ಕೈಗೊಳ್ಳಬೇಕಾದ ಸ್ಥಳಗಳನ್ನು ಖಚಿತಪಡಿಸಿಕೊಳ್ಳಲಾಯಿತು. ಅಂತಿಮವಾಗಿ ಭಾರತೀಯ ಸರ್ವೇಕ್ಷಣ ಇಲಾಖೆ ತಯಾರಿಸಿದ ಭೂಪಟಗಳು ಅಧ್ಯಯನಕ್ಕೆ ಉಪಯುಕ್ತ ಮಾಹಿತಿಯನ್ನು ನೀಡಿವೆ.

ಹೀಗೆ ದಾಖಲಿಸಿಕೊಂಡ ಕೋಟೆಗಳನ್ನು ತಾಲೂಕುವಾರು ವಿಂಗಡಿಸಿ ಅಕಾರಾದಿಯಾಗಿ ಕೆಳಕಂಡಂತೆ ಪಟ್ಟಿ ಮಾಡಲಾಯಿತು.

೧. ತಾಲೂಕಿನ ಹೆಸರು

೨. ಕೋಟೆಯ ಹೆಸರು

[illegible]

೩. ಕೋಟೆಗೆ ಇರುವ ಇನ್ನಿತರ ಹೆಸರು

೪. ಕೋಟೆ ಇರುವ ಸ್ಥಳದ ಅಕ್ಷಾಂಶ, ರೇಖಾಂಶ

೫. ಸಮುದ್ರ ಮಟ್ಟದಿಂದ ಇರುವ ಎತ್ತರ

೬. ಈ ಸ್ಥಳವನ್ನು ಹತ್ತಿರವಿರುವ ಪ್ರಸಿದ್ಧ ಸ್ಥಳದ ಮೂಲಕ ಅಂತರವನ್ನು ಗುರುತಿಸುವುದು.

೭. ಕೋಟೆ ಯಾವ ವರ್ಗಕ್ಕೆ ಸೇರಿದ.

೮. ಕೋಟೆಯನ್ನು ಕಟ್ಟಿಸಿದವರು

೯. ಕೋಟೆಯ ಕಾಲ

೧೦. ಭೌಗೋಳಿಕ ಹಿನ್ನೆಲೆ

೧೧. ಐತಿಹಾಸಿಕ ಮಹತ್ವ

೧೨. ಕೋಟೆಯ ಸ್ಥಿತಿ

೧೩. ಕೋಟೆಯ ವಿಸ್ತೀರ್ಣ

೧೪. ನಕ್ಷೆ

೧೫. ರೇಖಾಚಿತ್ರ, ದೇವಾಲಯ, ಶಾಸನಗಳು

ಹೀಗೆ ವಿವಿಧ ರೀತಿಯಲ್ಲಿ ಪ್ರಪತ್ರ ಪಟ್ಟಿಯೊಂದನ್ನು ಸಿದ್ಧಪಡಿಸಿಕೊಂಡು ಪ್ರತಿಯೊಂದು ಕೋಟೆಯ ಮಾಹಿತಿಯನ್ನು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿಕೊಳ್ಳಲಾಯಿತು. ನಂತರ ಕೋಟೆಯ ಬಗ್ಗೆ ಇರುವ ಐತಿಹ್ಯ, ಜಾನಪದ, ಸ್ಥಳೀಯರ ಹೇಳಿಕೆಗಳನ್ನು ಧ್ವನಿಮುದ್ರಿಕೆಯಲ್ಲಿ ಸಂಗ್ರಹಿಸಿ ಮುಖ್ಯವಾದ ಭಾಗಗಳ ಛಾಯಾಚಿತ್ರಗಳನ್ನು ತೆಗೆದುಕೊಂಡು ಸ್ಥಳದಲ್ಲಿಯೇ ನಕ್ಷೆಯನ್ನು ತಯಾರಿಸಲಾಯಿತು. ಸಾಂದರ್ಭಿಕವಾಗಿ ಕೋಟೆಯ ಅಂಗಗಳಾದ ಕೋಟೆಗೋಡೆ, ಬಾಗಿಲು, ಬುರುಜು-ಬತೇರಿ, ಕಂದಕ ಮುಂತಾದವುಗಳನ್ನು ಸ್ನೇಹಿತರ ಸಹಾಯದಿಂದ ಅಳತೆ ಮಾಡಲಾಯಿತು. ಕೆಲವು ಕಡೆ ಅಳತೆ ಮಾಡಿ ತುಂಬಾ ಅಪಾಯದ ಪರಿಸ್ಥಿತಿಯನ್ನು ಎದುರಿಸಿ ಪ್ರಾಣಾಪಾಯದಿಂದ ಪಾರಾಗಬೇಕಾಯಿತು. ಈ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪೂರಕ ಸಾಮಗ್ರಿಯೆಂದು ಪರಿಗಣಿಸಿ, ಜಿಲ್ಲೆಯಲ್ಲಿ ನಡೆದಿರುವ ಚಾರಿತ್ರಿಕ ಘಟನೆಗಳನ್ನು ಆಧರಿಸಿ ನಿಯತಕಾಲಿಕೆಗಳಲ್ಲಿ ಬರೆದ ಬಿಡಿಬರಹಗಳು ಹಾಗೂ ತಾಲೂಕು ದರ್ಶಿನಿಗಳನ್ನು ಗಮನಿಸಿ ವಿವರ ಪಡೆಯಲಾಗಿದೆ. ಈ ಮಹಾಪ್ರಬಂಧದಲ್ಲಿ ಗ್ರಾಮನಾಮ, ಗ್ರಾಮಚರಿತ್ರೆಯನ್ನು ಪರಿಚಯಿಸುವುದರೊಂದಿಗೆ ಅಧ್ಯಯನಕ್ಕೆ ಒಳಪಡಿಸಿರುವ ಪ್ರತಿಯೊಂದು ಕೋಟೆಗೆ ಪೂರಕವಾಗಿ ನಕ್ಷೆ, ಛಾಯಾಚಿತ್ರ, ಪದಕೋಶಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

❑❑

ಅಧ್ಯಾಯ ೨

ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨

ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಇತಿಹಾಸ ಮತ್ತು ಭೂಗೋಳಶಾಸ್ತ್ರಗಳು ಪರಸ್ಪರ ನಿಕಟವಾದ ಸಂಬಂಧವನ್ನು ಹೊಂದಿವೆ. ಭೌಗೋಳಿಕ ಅಂಶಗಳು ಪ್ರಭಾವ ಬೀರದ ಪ್ರದೇಶವಿಲ್ಲವೆಂದೇ ಹೇಳಬಹುದು. ಆ ಪ್ರದೇಶದ ಪರ್ವತಶ್ರೇಣಿ, ಬೆಟ್ಟಗುಡ್ಡ, ನದಿ, ನದಿಬಯಲು, ತೀರಪ್ರದೇಶ, ಬಂದರು ಮತ್ತು ಮಣ್ಣಿನ ರಚನೆಗಳು ಆ ದೇಶದ ಸಂಪತ್ತನ್ನು ಹೆಚ್ಚಿಸಿ ಜನ-ಜೀವನವನ್ನು ಉತ್ತಮಪಡಿಸುತ್ತವೆ. ಸಮಾಜವನ್ನು ರೂಪಿಸುವುದು ನಾಗರೀಕತೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಸಹಕಾರಿಯಾಗಿವೆ; ಪರಕೀಯರ ಧಾಳಿಯಿಂದ ದೇಶವನ್ನು ಸುರಕ್ಷಿತವಾಗಿಸುತ್ತವೆ. ಪರಕೀಯರ ಧಾಳಿಯಿಂದ ದೇಶವನ್ನು ಸುರಕ್ಷಿತವಾಗಿಟ್ಟಿರುವ ಭಾರತದ ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕಿರುವ ಸಮುದ್ರಗಳು ಮತ್ತು ಉತ್ತರ ಭಾಗದಲ್ಲಿ ಪ್ರಪಂಚದಲ್ಲೇ ಎತ್ತರವಾದ, ದಾಟಲು ಅಸಾಧ್ಯವಾದ ಹಿಮಾಲಯ ಪರ್ವತಗಳು ನಮ್ಮ ದೇಶವನ್ನು ಕೋಟೆಗಳಂತೆ ರಕ್ಷಿಸಿ, ಸಂಪತ್ತನ್ನು ಹೆಚ್ಚಿಸಿ, ಸಾಂಸ್ಕೃತಿಕ ಅಭಿವೃದ್ಧಿಗೆ ಸಹಾಯಕವಾಗಿವೆ.

ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಸಂಸ್ಕೃತಿಗಳನ್ನು ಬೆಸೆಯುವ ಕೊಂಡಿಯಂತಿದೆ. ೧೯೯೭ರಲ್ಲಿ ದಾವಣಗೆರೆ ಹೊಸ ಜಿಲ್ಲೆಯಾಗಿ ಘೋಷಣೆಯಾದ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿದ್ದ ದಾವಣಗೆರೆ, ಜಗಳೂರು ಮತ್ತು ಹರಿಹರ ಮೂರು ತಾಲ್ಲೂಕುಗಳು ಬೇರ್ಪಟ್ಟವು. ಇದರಿಂದ ಭೌಗೋಳಿಕ ನೆಲೆ, ಮೇರೆ, ವಿಸ್ತೀರ್ಣದಲ್ಲಿ ತನ್ನ

[illegible]

[illegible]

ಮೂಲಸ್ಥಾನವನ್ನು ಕಳೆದುಕೊಂಡಿತಲ್ಲದೆ, ರಾಜ್ಯದಲ್ಲಿ ಏಳನೆಯ ಸ್ಥಾನದಲ್ಲಿದ್ದ ಚಿತ್ರದುರ್ಗ ೯ನೇ ಸ್ಥಾನಕ್ಕೆ ಬರಬೇಕಾಯಿತು. ಈಗ ಈ ಜಿಲ್ಲೆಯಲ್ಲಿ ಚಿತ್ರದುರ್ಗವು ಸೇರಿದಂತೆ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗಗಳನ್ನೊಳಗೊಂಡಂತೆ ಆರು ತಾಲೂಕುಗಳ ೨೨ ಹೋಬಳಿಗಳು ಸೇರಿವೆ. ಆಡಳಿತ ವಿಕೇಂದ್ರಿಕರಣವಾದ ಬಳಿಕ ಜಿಲ್ಲೆಯಲ್ಲಿ ೧೮೫ ಗ್ರಾಮ ಪಂಚಾಯ್ತಿಗಳು ಇಂದು ಕಾರ್ಯನಿರ್ವಹಿಸುತ್ತಿವೆ.

ಜಿಲ್ಲೆಯ ಮೇರೆಗಳೆಂದರೆ ಉತ್ತರಕ್ಕೆ ಬಳ್ಳಾರಿ, ಪೂರ್ವಕ್ಕೆ ಆಂಧ್ರಪ್ರದೇಶ, ಆಗ್ನೇಯ ದಿಕ್ಕಿಗೆ ತುಮಕೂರು, ಪಶ್ಚಿಮಕ್ಕೆ ದಾವಣಗೆರೆ ಮತ್ತು ನೈಋತ್ಯಕ್ಕೆ ಚಿಕ್ಕಮಗಳೂರು ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿದೆ. ಚಿತ್ರದುರ್ಗ ಜಿಲ್ಲೆಯ ಒಟ್ಟು ಜನಸಂಖ್ಯೆ ೧೫,೧೦,೨೨೭ ಆಗಿದ್ದು, ಇದರಲ್ಲಿ ಪುರುಷರು ೭,೭೨,೬೪೯, ಮಹಿಳೆಯರು ೭,೩೭,೫೭೮ ಇರುವರು.[೧] ಈ ಜಿಲ್ಲೆಯ ವಾಸ್ತವಿಕ ಭೌಗೋಳಿಕ ನೆಲೆಯು ಉತ್ತರ ಅಕ್ಷಾಂಶ ೧೩°-೧೫ ರಿಂದ ೧೫°-೨೦ ಮತ್ತು ಪೂರ್ವ ರೇಖಾಂಶ ೭೬°-೨೪ ರಿಂದ ೭೭°-೨೦ರಲ್ಲಿದೆ. ಇದರ ವಿಸ್ತೀರ್ಣ ೮೪೦೪.೬ ಚದರ ಕಿ.ಮೀ. ಅಥವಾ ೩೨೪೮.೯ ಚ.ಮೈಲಿಗಳಾಗಿವೆ ಎಂದು ಅಂದಾಜು ಮಾಡಲಾಗಿದೆ.[೨]

೨.೧ ಬೆಟ್ಟಗುಡ್ಡಗಳು

ಬೆಟ್ಟಗುಡ್ಡಗಳು ನಿಸರ್ಗವು ನೀಡಿದ ಉಚಿತ ನೈಸರ್ಗಿಕ ಸಂಪನ್ಮೂಲಗಳಾಗಿವೆ. ಇವು ಮಾನವನ ಜೀವನದಲ್ಲಿ ಕೆಲವೊಮ್ಮೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಅದರಂತೆ ಮಾನವನು ತನ್ನ ಬುದ್ಧಿಚಾತುರ್ಯ ಮತ್ತು ಕುಶಲತೆಗಳ ಮೂಲಕ ನೈಸರ್ಗಿಕ ಪರಿಸರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾನೆಯಾದರೂ ಆತನು ಪರಿಸರದಿಂದ ನಿರ್ಬಂದಿತವಾದ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತಾನೆ.[೩] ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬರುವ ಇಂತಹ ಬೆಟ್ಟಗುಡ್ಡ, ಗಿರಿಶಿಖರಗಳು ಸಹಜವಾಗಿಯೇ ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಸಹಕಾರಿಯಾಗಿವೆ. ಪ್ರಾಚೀನ ಕಾಲದಿಂದಲೂ ಇಂತಹ ಬೆಟ್ಟ-ಗುಡ್ಡಗಳಲ್ಲಿ ಮಾನವನು ವಾಸಮಾಡಲು ಹಲವು ಕಾರಣಗಳು ಇವೆ. ನೈಸರ್ಗಿಕ ಸಂಪನ್ಮೂಲಗಳು ಅಧಿಕವಾಗಿ ಹಾಗೂ ಉಚಿತವಾಗಿ ದೊರೆಯುತ್ತವೆಯಲ್ಲದೆ, ಸಮುದ್ರ ಮಟ್ಟಕ್ಕಿಂತ ಹೆಚ್ಚು ಎತ್ತರವಾದ ಭೂಪ್ರದೇಶದಲ್ಲಿ ಉಷ್ಣತೆ ಕಡಿಮೆಯಾಗಿ, ಹವೆ ತಂಪಾಗಿರುತ್ತದೆ.[೪] ಅಲ್ಲದೆ ಶತ್ರುಗಳು ಪ್ರವೇಶ ಮಾಡದ ಹಾಗೆ ರಕ್ಷಿಸಿಕೊಳ್ಳಲು ಪ್ರಕೃತಿನಿರ್ಮಿತ ಗುಹೆಗಳಿರುತ್ತವೆ. ಈ ಎಲ್ಲ ಕಾರಣಗಳಿಂದ ಪ್ರಾಚೀನ ಕಾಲದಿಂದಲೂ ಮಾನವ ಬೆಟ್ಟಗುಡ್ಡಗಳಲ್ಲಿ ವಾಸಮಾಡಲು ಪ್ರಾರಂಭಿಸಿದನು.

ಜಿಲ್ಲೆಯನ್ನು ಸ್ಥೂಲವಾಗಿ ಎರಡು ಭಾಗಗಳಾಗಿ ಗುರುತಿಸಬಹುದು :

೧. ಪೂರ್ವ ಪ್ರದೇಶದ ವೇದಾವತಿ ಬಯಲು (ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ತಾಲೂಕಿನ ದಕ್ಷಿಣ ಭಾಗ)

೨. ಮಧ್ಯೆ ಗುಡ್ಡಗಾಡು ಪ್ರದೇಶ (ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲೂಕಿನ ಉತ್ತರ ಹಾಗೂ ಹೊಳಲ್ಕೆರೆಯ ಪೂರ್ವಭಾಗ)

ಚಿತ್ರದುರ್ಗದ ಮುಖ್ಯ ಬೆಟ್ಟದ ಸಾಲುಗಳು ದಕ್ಷಿಣ ಆಗ್ನೇಯದಿಂದ ಉತ್ತರ ವಾಯುವ್ಯದ ಕಡೆಗೆ ಒಂದೇ ಅಂತರದಲ್ಲಿ ಸಾಗುತ್ತವೆ.[೫] ಪ್ರಕೃತಿಯೇ ಕೋಟೆಯಂತೆ ಮೈದಳೆದಿರುವ ಚಿತ್ರದುರ್ಗದ ಬೆಟ್ಟಕ್ಕೆ 'ಚಿನ್ಮೂಲಾದ್ರಿ'[೬] ಎಂದು ಕರೆಯುತ್ತಾರೆ. ಈ ಪರಿಸರದ ದವಳಪ್ಪನಗುಡ್ಡ(೩೨೮೫)[೭] ಬೀರನಕಲ್ಲದುರ್ಗ (೩೮೬೩), ಈಚಲಗುಡ್ಡ(೩೮೦೪), ಓಬಳದೇವರಗುಡ್ಡ(೩೬೬೦) ಮತ್ತು ಜೋಗಿಮರಡಿ (೩೮೦೩) ಮುಂತಾದ ಬೆಟ್ಟಶ್ರೇಣಿಗಳು ಕಂಡುಬರುತ್ತವೆ. ಜಿಲ್ಲೆಯಲ್ಲಿ ಅತಿ ಎತ್ತರದ ಪ್ರದೇಶವಾದ ಜೋಗಿ ಮರಡಿಯು ಚಿತ್ರದುರ್ಗ ಜಿಲ್ಲೆಯ ಜನತೆಗೆ ಸುಂದರ ಮಲೆನಾಡಾಗಿದ್ದು, ಒಟ್ಟು ೨೬,೪೭೪ ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ.[೮]

ಮೊಳಕಾಲ್ಮೂರು ತಾಲೂಕಿನಲ್ಲಿರುವ ಜಟಿಂಗರಾಮೇಶ್ವರ(೩೪೬೯), ಬ್ರಹ್ಮಗಿರಿ(೨೩೧೭), ನುಂಕಪ್ಪನ ಗುಡ್ಡ(೩೦೨೨), ಜೋಗಪ್ಪನಗುಡ್ಡ(೯೩೬), ಸಂತೇಗುಡ್ಡ(೨೨೭೩) ಮುಂತಾದ ಬೆಟ್ಟದ ಶ್ರೇಣಿಗಳಿವೆ. ಈ ಬೆಟ್ಟಗುಡ್ಡ ಪರಿಸರವನ್ನು ವಿಶಿಷ್ಟ ಸೌಂದರ್ಯದಿಂದ ಕೂಡಿದ ಪ್ರದೇಶವೆಂದು ಬ್ರೂಸ್‌ಫ್ರೂಟ್ ವರ್ಣಿಸಿದ್ದಾರೆ.[೯]

ಹೊಳಲ್ಕೆರೆ ತಾಲೂಕಿನ ದೊಡ್ಡರಂಗಪ್ಪಗುಡ್ಡ(೩೭೫೧), ವಡೇರಗುಡ್ಡ(೩೧೩೮), ಜಾನಕಲ್ಲಗುಡ್ಡ (೨೪೫೪), ಹಿರೇಕಂದವಾಡಿಗುಡ್ಡ(೨೭೦೩) ಮುಂತಾದ ಬೆಟ್ಟಗಳಿವೆ. ಹೊಸದುರ್ಗ ತಾಲೂಕಿನಲ್ಲಿ ನೀರ್ಗುಂದ(೩೧೭೨), ಕೋಟಕಲ್ಲುಗುಡ್ಡ(೩೩೭೨), ದೊಡ್ಡರಸಿಗುಡ್ಡ(೩೦೬೨), ತಿರುಮಲದೇವರಗುಡ್ಡ (೩೦೭೮), ಹಾಲುರಾಮೇಶ್ವರ(೩೮೭೫) ಗುಡ್ಡಗಳಿದ್ದರೆ, ಹಿರಿಯೂರಿನಲ್ಲಿ ಮಾರಿ ಕಣಿವೆ ಬೆಟ್ಟಗಳ ಸಾಲು (೩೬೭೫), ಹಿಂಡಸನಕಟ್ಟೆ(೯೦೪) ಮತ್ತು ವೇಣುಕಲ್ಲುಗುಡ್ಡ(೨೦೮೮)ಗಳಿವೆ. ಇವು ಸಹಜವಾಗಿಯೇ ಕೋಟೆ-ಕೊತ್ತಲಗಳನ್ನು ನಿರ್ಮಿಸಲು ಸಹಕಾರಿಯಾಗಿವೆ. ಇಡೀ ಜಿಲ್ಲೆಯು ಸಮುದ್ರ ಮಟ್ಟದಿಂದ ಸಾಮಾನ್ಯವಾಗಿ ೨೦೦೦ ಅಡಿಗಳಷ್ಟು ಎತ್ತರವಾಗಿದ್ದು ಉತ್ತರ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಇಳಿಜಾರಾಗಿದೆ.[೧೦]

೨.೨ ಜಲಸಂಪತ್ತು

ಜಲಸಂಪತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷೀಣವೆಂದೇ ಹೇಳಬೇಕು. ವೇದಾವತಿ, ಚಿನ್ನಹಗರಿ, ಸುವರ್ಣಮುಖಿಗಳು ನೀರು ಸಂಪರ್ಕ ಕಲ್ಪಿಸಿರುವ ಮುಖ್ಯವಾದ ನದಿಗಳಾಗಿವೆ. ವೇದಾವತಿ ನದಿಗೆ ಹೊಸದುರ್ಗ, ಹಿರಿಯೂರು ತಾಲೂಕುಗಳ ಗಡಿಯಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದನ್ನು 'ಮಾರೀಕಣಿವೆ ಜಲಾಶಯ' ಎಂದೇ ಕರೆಯುತ್ತಾರೆ. ಪ್ರಸ್ತುತ ಅಣೆಕಟ್ಟಿನ ಉದ್ದ ೧,೩೩೦ ಅಡಿಗಳು ಎತ್ತರ ೧೬೨ ಅಡಿಗಳಿದ್ದು ೨೧,೬೪೫ ಎಕರೆ ಪ್ರದೇಶಕ್ಕೆ ನೀರುಣಿಸುತ್ತಿದೆ. ೧೮೯೮ರಲ್ಲಿ ಕೃಷ್ಣರಾಜ ಒಡೆಯರಿಂದ ಪ್ರಾರಂಭವಾದ ಈ ಅಣೆಕಟ್ಟು ೧೯೦೭ರಲ್ಲಿ ಮುಕ್ತಾಯವಾಯಿತು. ಇದು ಸ್ವಾತಂತ್ರ್ಯಪೂರ್ವ ಭಾರತದ ಮೊಟ್ಟಮೊದಲನೆಯ ಕೃತಕ ಸರೋವರವೆಂಬ ಕೀರ್ತಿಗೂ ಭಾಜನವಾಗಿದೆ. ಇದು ರಾಜ್ಯದ ನೀರಾವರಿ ಯೋಜನೆಗಳಲ್ಲಿ ಅತ್ಯಂತ ಹಳೆಯದು.[೧೧] ಉಳಿದಂತೆ ಜನಗಿಹಳ್ಳ(ಚಿನ್ನಹಗರಿ), ಚಿತ್ರದುರ್ಗ, ಜಗಳೂರು ಮತ್ತು ಮೊಳಕಾಲ್ಮೂರು ತಾಲೂಕುಗಳಲ್ಲಿ ಹರಿದು ವೇದಾವತಿಗೆ ಸೇರುತ್ತದೆ. ಸ್ವರ್ಣಮುಖಿ ನದಿಯು ಜಿಲ್ಲೆಯಲ್ಲಿ ಸುಮಾರು ೭೮ ಕಿ.ಮೀ. ಹರಿದು ಹಿರಿಯೂರು ತಾಲೂಕು ಇಕ್ಕನೂರು ಬಳಿ ವೇದಾವತಿಗೆ ಸೇರುತ್ತದೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಪ್ರಾಚೀನ ಕೆರೆಗಳಿದ್ದು, ಇವುಗಳ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ.[೧೨]

೨.೩ ಭೂ-ಇತಿಹಾಸ ಮತ್ತು ಖನಿಜ ಸಂಪತ್ತು

ಪ್ರಪಂಚದಲ್ಲಿಯೇ ಚಿತ್ರದುರ್ಗ ಶಿಲಾಪದರು ವಲಯವು ಪ್ರಸಿದ್ಧಿ ಹೊಂದಿದೆ. ಮರಡಿಹಳ್ಳಿಯ ದಿಂಬುರಚನೆ ಶಿಲಾಪದರಗಳು(ಪಿಲ್ಲೋಲಾವಸ್) ಸುಮಾರು ೨೭೦ ಕೋಟಿ ವರ್ಷಗಳಿಗಿಂತ ಹಿಂದೆ ಸಮುದ್ರದ ತಳಭಾಗವಾಗಿತ್ತೆಂದು ಭೂವಿಜ್ಞಾನಿಗಳಾದ ಬ್ರೂಸ್‌ಫೂಟ್(೧೮೭೬), ಪಿಚಿಮುತ್ತು(೧೯೩೮), ರಸ್ಸೆಲ್(೧೯೫೪) ಮುಂತಾದವರು ಅಭಿಪ್ರಾಯಪಟ್ಟಿದ್ದಾರೆ. ಇವರು ಚಿತ್ರದುರ್ಗದ ಪದರು ಶಿಲೆಗಳನ್ನು 'ಕಿರಿಯ ಹಸಿರುಕಲ್ಲು ವಲಯ' ಎಂದು ಗುರುತಿಸಿದ್ದಾರೆ. ಈ ವಲಯದಲ್ಲಿ ಒರಟು ಕಣಶಿಲೆ(ಗ್ರಾನೈಟ್), ಡಯೋರೈಟ್, ಡಾಲೋರೈಟ್ ಮುಂತಾದ ಶಿಲೆಗಳಿದ್ದವು.[೧೩] ಇಂದು ಈ ಸ್ಥಳವನ್ನು ರಾಷ್ಟ್ರೀಯ ಶಿಲಾ ಉದ್ಯಾನದ ಸ್ಮಾರಕವನ್ನಾಗಿ ಸಂರಕ್ಷಿಸಿದ್ದಾರೆ.[೧೪]

ಚಿತ್ರದುರ್ಗ ಜಿಲ್ಲೆಯು ಭಾರತದ ಖನಿಜ ಭೂಪಟದಲ್ಲಿ ತಾಮ್ರದ ನಿಕ್ಷೇಪಗಳಿಂದಾಗಿ ತನ್ನದೇ ಆದ ಸ್ಥಾನವನ್ನು ದೊರಕಿಸಿಕೊಂಡಿದೆ. ಕರ್ನಾಟಕದ ಅತಿ ಪ್ರಾಚೀನ ತಾಮ್ರಗಣಿ ಚಿತ್ರದುರ್ಗ ಸಮೀಪದ

ಇಂಗಳದಾಳಿನಲ್ಲಿದೆ.[೧೫] ೧೯೭೪ರಲ್ಲಿ ತಾಮ್ರದ ಅದಿರು ಸಂಸ್ಕರಣದ ಕಾರ್ಯಾಗಾರವನ್ನು ಇಲ್ಲಿ ಸ್ಥಾಪಿಸಲಾಗಿದೆ. ಈ ಪರಿಸರದಲ್ಲಿ ಸೀಸ ಮತ್ತು ತಾಮ್ರದ ಅದಿರುಗಳನ್ನು ತೆಗೆಯಲಾಗುತ್ತಿದೆ. ಚಾಲ್ಕೊಪೈರೇಟ್, ಪೆರ್ರೊಟೈಟ್ ಎಂಬ ತ್ರಾಮ ಹಾಗೂ ಗಂಧಕ, ಸಲ್ಫಟೈಟ್ ಮತ್ತು ಗೆಲಿನಾ ಎಂಬ ಸತುಗಳು ಶಿಲಾಗರ್ಭದಲ್ಲಿವೆ. ಹೀಗೆ ಪುರಾತನ ಗಣಿ ಉದ್ಯಮದಿಂದ ಈ ಪ್ರದೇಶ ಬೆಳ್ಳಿಗುಡ್ಡ ಎಂಬ ಆಕರ್ಷಣೆಯ ಹೆಸರಿನಿಂದ ಕರೆಸಿಕೊಳ್ಳಲಾರಂಭಿಸಿತು.[೧೬]

ಚಿತ್ರದುರ್ಗ ಜಿಲ್ಲೆ ಸಲ್ಫೈಡ್ ಲೋಹ, ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು, ಸುಣ್ಣಶಿಲೆ, ಕಯನೈಟ್, ಹಾಸುಗಲ್ಲು, ಸಿಲಿಕಾದಿಂದ ಕೂಡಿದ ಬಾಕ್ಸೈಟ್, ಕಾವಿಮಣ್ಣು ಮುಂತಾದ ಖನಿಜಗಳಿಗೆ ಹೆಸರಾಗಿದೆ. ಜಿಲ್ಲೆಯಾದ್ಯಂತ ಗ್ರಾನೈಟ್ ಹೆಚ್ಚಾಗಿ ಹರಡಿದೆ. ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕುಗಳಲ್ಲಿ ಚದುರಿದಂತೆ ಕಣಶಿಲೆಯ ಬೆಟ್ಟಗಳಿವೆ. ಚಿತ್ರದುರ್ಗ ತಾಲೂಕಿನ ಕೋಟೆಮರಡಿ, ಗೋನೂರು, ಹೊಸದುರ್ಗ ತಾಲೂಕಿನ ಬೂದಿಮರಡಿ, ಹಿರಿಯೂರು ತಾಲೂಕಿನ ಜವಗೊಂಡನಹಳ್ಳಿ ಆನೆಸಿದ್ರಿ, ದಿಂಡಾವರ ಹಾಗೂ ಇತ್ತೀಚೆಗೆ ಗುಡ್ಡದರಂಗವ್ವನಹಳ್ಳಿ ಮುಂತಾದೆಡೆ ಚಿನ್ನದ ನಿಕ್ಷೇಪಗಳು ಕಂಡುಬಂದಿವೆ.[೧೭]

೨.೪ ಅರಣ್ಯ ಹಾಗೂ ಪ್ರಾಣಿಸಂಪತ್ತು

ಅರಣ್ಯ ಸಂಪತ್ತಿನಲ್ಲಿ ಜಿಲ್ಲೆಯು ಬೇರೆ ಜಿಲ್ಲೆಗಳಿಗಿಂತ ಹಿಂದುಳಿದಿದೆ. ಕಾರಣ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆಯಿದೆ. ಹಾಗಾಗಿ ಜಿಲ್ಲೆಯನ್ನು ಬಯಲು ಸೀಮೆಯಾಗಿ ಗುರುತಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೭೩,೭೧೯ ಹೆಕ್ಟೇರ್ ಅರಣ್ಯ ಪ್ರದೇಶವಿದೆ.[೧೮] ಇದರಲ್ಲಿ ಹೆಚ್ಚಾಗಿ ಕುರುಚಲು ಗಿಡಗಳಿದ್ದು, ಮೂರನೆಯ ಒಂದು ಭಾಗವು ಜಾಲಿಗಿಡಗಳಿಂದ ಕೂಡಿದೆ. ಉಳಿದಂತೆ ಅಲ್ಲಲ್ಲಿ ಹುಣಸೆ, ಕರಿಜಾಲಿ, ಸೀತಾಫಲ, ಬೇವು ಮುಂತಾದ ಮರಗಳು ಕಂಡುಬರುತ್ತವೆ. ಬೆಟ್ಟಗುಡ್ಡಗಳಲ್ಲಿ ಚಿರತೆ, ಕರಡಿ, ಕಾಡುಹಂದಿ, ಕತ್ತೆಕಿರುಬ, ಜಿಂಕೆ, ಉರುಗಾ, ನೀರುಕುಳಿ, ನವಿಲು ಮುಂತಾದ ಪ್ರಾಣಿಗಳನ್ನು ಕಾಣಬಹುದು. ಇವುಗಳಲ್ಲದೆ ಜಿಲ್ಲೆಯಲ್ಲಿ ಪಶುಪಾಲನೆ ಹೆಚ್ಚಾಗಿ ಕಂಡುಬಂದಿದೆ.[೧೯]

೨.೫ ಭೂಗುಣ ಮತ್ತು ವಾಯುಗುಣ

ಹವಾಮಾನವು ಏರಿಳಿತಗಳಿಂದ ಕೂಡಿದ್ದು, ಬಿಸಿಲಿನ ತಾಪ ಏಪ್ರಿಲ್ ತಿಂಗಳಿನಲ್ಲಿ ಅತಿ ಹೆಚ್ಚು ಉಷ್ಣಾಂಶವನ್ನು ಹೊಂದಿರುತ್ತದೆ. ಸಾಮಾನ್ಯ ಉಷ್ಣಾಂಶ ೪೧° ಸೆಂಟಿಗ್ರೇಡ್‌ವರೆಗೆ ಇರುತ್ತದೆ.

ನವೆಂಬರ್, ಡಿಸೆಂಬರ್ ತಿಂಗಳುಗಳು ಅತಿ ಹೆಚ್ಚು ತಂಪಾದ ತಿಂಗಳಾಗಿರುತ್ತವೆ. ಈ ತಿಂಗಳುಗಳಲ್ಲಿ ಕನಿಷ್ಠ ಉಷ್ಣಾಂಶವು ೧೬.೬ರಷ್ಟಿರುತ್ತದೆ. ವರ್ಷಕ್ಕೆ ಸರಾಸರಿ ಸುಮಾರು ೨೧.೮೫ ಅಂಗುಲ ಮಳೆಯಾಗುತ್ತಿದ್ದು, ಇತ್ತೀಚೆಗೆ ಅದು ತುಂಬಾ ಕಡಿಮೆಯಾಗಿದೆ. ಜಿಲ್ಲೆಯ ದಕ್ಷಿಣದಲ್ಲಿ ಕೆಂಪು ಉತ್ತರದಲ್ಲಿ ಕಪ್ಪುಮಣ್ಣುಗಳಿಂದ ಕೂಡಿದ ಭೂಮಿ ಹೆಚ್ಚಾಗಿದ್ದು ಜಿಲ್ಲೆಯ ಮಧ್ಯಭಾಗದಲ್ಲಿ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿನವರೆಗೆ ಭೂಪ್ರದೇಶವು ಉಳಿದ ಪ್ರದೇಶಗಳಿಗಿಂತ ಫಲವತ್ತಾಗಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ.[೨೦]

೨.೬ ಚಾರಿತ್ರಿಕ ಹಿನ್ನೆಲೆ

ಜಗತ್ತಿನ ಅತ್ಯಂತ ಪುರಾತನವೆನಿಸಿದ ಭೂಮಿಯೆಂದರೆ ಕರ್ನಾಟಕದ ಪೀಠಭೂಮಿಯಾಗಿದೆ. ಇದು ಪರ್ಯಾಯ ದ್ವೀಪ ಭಾಗದ ಅತಿ ಪುರಾತನ ಪ್ರಸ್ಥಭೂಮಿ. ಇಂತಹ ಪೀಠಭೂಮಿಯ ಕೇಂದ್ರ ಭೂಭಾಗವೆಂದರೆ ಚಿತ್ರದುರ್ಗ ಜಿಲ್ಲೆ. ಇತ್ತೀಚಿನ ಸಂಶೋಧನೆಗಳಿಂದ ಈ ಜಿಲ್ಲೆಯು ಸುಮಾರು ೨೬೦ ಕೋಟಿ ವರ್ಷಗಳ ಹಿಂದೆ ಸಮುದ್ರದ ತಳಭಾಗವಾಗಿತ್ತೆಂದು ತಿಳಿದುಬಂದಿದೆ.[೨೧] ೧೯೨೯ರ ಚಂದ್ರವಳ್ಳಿಯ ಭೂಶೋಧನೆಗಿಂತ ಮೊದಲು ಚಿತ್ರದುರ್ಗ ಇತಿಹಾಸವನ್ನು ಸ್ಥಳಪುರಾಣಗಳಿಂದ, ದಂತಕಥೆಗಳಿಂದ ವಿವರಿಸಲಾಗುತ್ತದೆ. ದ್ವಾಪರಯುಗದಲ್ಲಿ ಈ ಪ್ರದೇಶವು ಹಿಡಿಂಬಿ ಕ್ಷೇತ್ರ,[೨೨] ಹಿಡಿಂಬಿ ಪಟ್ಟಣವಾಗಿತ್ತೆಂದೂ[೨೩] ಹೇಳಲಾಗಿದೆ. ಇಂದಿಗೂ ಈ ಬೆಟ್ಟದ ಮೇಲೆ ಹಿಡಿಂಬೇಶ್ವರ ಹೆಸರಿನ ದೇವಾಲಯವಿದೆ. ಈ ದೇವಾಲಯದ ಉತ್ತರದ ಒಂದು ಭಾಗವನ್ನು ೧೧ನೇ ಶತಮಾನದ ಶಾಸನವೊಂದು 'ಹಿಡಿಂಬಿವನ' ಎಂದು ವರ್ಣಿಸಿದೆ.[೨೪] ಪಾಂಡವರು ವನವಾಸಕ್ಕೆ ಹೋದಾಗ ಕುಂತಿಯ ರಾಜಕುಮಾರನಾದ ಭೀಮನಿಗೂ ಮತ್ತು ಇಲ್ಲಿಯೇ ವಾಸವಾಗಿದ್ದ ಹಿಡಿಂಬ ಎಂಬ ರಾಕ್ಷಸನಿಗೂ ಯುದ್ಧ ನಡೆಯಿತೆಂದೂ, ಈ ಯುದ್ಧದಲ್ಲಿ ಭೀಮನು ಹಿಡಿಂಬನನ್ನು ಕೊಂದು ಅವನ ತಂಗಿ ಹಿಡಿಂಬಿಯನ್ನು ಮದುವೆಯಾದನೆಂದೂ ತರುವಾಯ ಇವರು ಘಟೋತ್ಕಜನೆಂಬ ಪುತ್ರನನ್ನು ಪಡೆದನೆಂಬ ಐತಿಹ್ಯವಿದೆ.[೨೫] ಚಂದ್ರವಳ್ಳಿಯ ಅಂಕಲಿಮಠದ ಬಳಿಯ ಪಂಚಲಿಂಗ ದೇವಾಲಯದಲ್ಲಿರುವ ಐದು ಲಿಂಗಗಳನ್ನು ಪಂಚಪಾಂಡವರು ತಮ್ಮ ಹೆಸರಿನಲ್ಲಿ ಪ್ರತಿಷ್ಠಾಪಿಸಿದರೆಂದು ಅದೇ ದೇವಾಲಯದ ಹೊಯ್ಸಳ ಶಾಸನವೊಂದು ತಿಳಿಸುತ್ತದೆ.[೨೬] ಡಾ.ಅ.ಸುಂದರ ಅವರು, ಉತ್ಖನನದಲ್ಲಿ ದೊರಕಿದ ಅವಶೇಷಗಳ ಆಧಾರದಿಂದ ಇಲ್ಲಿ ಹಿಡಂಬಿ ಪಟ್ಟಣವಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.[೨೭]

[illegible]

ಚಿತ್ರದುರ್ಗ ಜಿಲ್ಲೆಯು ರಾಮಾಯಣ ಕಾಲದಿಂದಲೂ ಪ್ರಸಿದ್ಧಿ ಹೊಂದಿತ್ತೆಂಬುದಕ್ಕೆ ಮೊಳಕಾಲ್ಮೂರು ತಾಲ್ಲೂಕಿನ ಜಟಂಗಿರಾಮೇಶ್ವರ ಬೆಟ್ಟದ ಮೇಲಿರುವ ಶಾಸನ ಮತ್ತು ಐತಿಹ್ಯಗಳು ಆಧಾರವಾಗಿವೆ. ಈ ಬೆಟ್ಟದ ಮೇಲೆ ಜಟಂಗಿರಾಮೇಶ್ವರ ದೇವಾಲಯವಿದ್ದು, ಇಲ್ಲಿ ಶ್ರೀರಾಮಚಂದ್ರನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿ ಅವನ ಹೆಸರಿನಲ್ಲಿ ಲಿಂಗ ಪ್ರತಿಷ್ಠೆ ಮಾಡಿದನೆಂಬುದು ಸ್ಥಳದ ಐತಿಹ್ಯ. ಆದ್ದರಿಂದ ಜಟಾಯು, ರಾಮ ಮತ್ತು ಈಶ್ವರ - ಈ ಮೂವರ ಹೆಸರಿನಲ್ಲಿಯೇ ಈ ದೇವರಿಗೆ 'ಜಟಂಗಿರಾಮೇಶ್ವರ' ನೆಂದೂ, ಈ ಗುಡ್ಡವು 'ಜಟಂಗಿರಾಮಗಿರಿ' ಎಂದೇ ಪ್ರಸಿದ್ಧಿ ಪಡೆದಿದೆ.[೨೮] ಕ್ರಿ.ಶ.೯೬೧ರ ಶಾಸನವೊಂದು ರಾವಣ ಸೀತೆಯನ್ನು ಕದ್ದೊಯ್ಯುತ್ತಿದ್ದಾಗ, ಜಟಾಯು ಅವನನ್ನು ಇಲ್ಲಿ ತಡೆದು ಹೋರಾಡಿ ಸತ್ತಿತೆಂಬ ಪ್ರತೀತಿಯನ್ನು ಈ ಶಾಸನವು ಉಲ್ಲೇಖಿಸುತ್ತದೆ.[೨೯]

ಚಿತ್ರದುರ್ಗ ಜಿಲ್ಲೆಯು ಶಿಲಾಯುಗ ಕಾಲದಿಂದಲೂ ಮಾನವನಿಗೆ ಆಶ್ರಯತಾಣವಾಗಿದ್ದಿತೆಂಬುದನ್ನು ಜಿಲ್ಲೆಯಾದ್ಯಂತ ಇದುವರೆಗೆ ಪತ್ತೆಯಾಗಿರುವ ಸುಮಾರು ೫೦ಕ್ಕೂ ಹೆಚ್ಚು ಪುರಾತತ್ವ ನೆಲೆಗಳು ಸಾಕ್ಷಿಗಳಾಗಿವೆ.[೩೦] ಕರ್ನಾಟಕದ ಪುರಾತತ್ವ ಅಧ್ಯಯನದ ಮೇಲೆ ಹೊಸಬೆಳಕನ್ನು ಚೆಲ್ಲಿದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯ ಪುರಾತತ್ವ ನೆಲೆಗಳು ವಿಶ್ವಪ್ರಸಿದ್ಧಿಯಾಗಿವೆ. ಚಿನ್ನವನ್ನು ಪತ್ತೆ ಮಾಡುವುದಕ್ಕಾಗಿ ಖನಿಜತಜ್ಞರು ಮತ್ತು ಇಂಜನೀಯರರು ಚಂದ್ರವಳ್ಳಿಯಲ್ಲಿ ಪ್ರಾಯೋಗಿಕ ಕುಳಿಗಳನ್ನು ಅಗೆದಾಗ ಸೀಸದ ನಾಣ್ಯಗಳು ದೊರಕಿದವು. ತರುವಾಯ ಈ ನೆಲೆಯ ಪ್ರಾಮುಖ್ಯತೆ ಬಗ್ಗೆ ಕ್ರಿ.ಶ.೧೯೦೯ರಲ್ಲಿ ಆರ್. ನರಸಿಂಹಾಚಾರ್ ಮತ್ತು ಡಾ.ವೆಂಕಟಸುಬ್ಬಯ್ಯನವರು ಮೊದಲಬಾರಿಗೆ ಅಧ್ಯಯನ ಮಾಡಿ ಪ್ರಕಟಿಸಿ ವಿದ್ವಾಂಸರ ಗಮನಸೆಳೆದರು.[೩೧] ನಂತರ ೧೯೨೮ರಲ್ಲಿ ಬಿ.ಎಲ್.ರೈಸ್‌ರವರು ಈ ನೆಲೆಯನ್ನು ವಿಸ್ತಾರವಾಗಿ ಶೋಧಿಸಿ ಈ ಪರಿಸರದಲ್ಲಿ ನಾಲ್ಕು ಶಾಸನಗಳನ್ನು ಪತ್ತೆಹಚ್ಚಿದರು. ೧೯೨೮ರಲ್ಲಿ ಎಂ.ಎಚ್.ಕೃಷ್ಣರವರು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ಉತ್ಖನನ ನಡೆಸಿದರು. ಇವರು ಇಲ್ಲಿಯ ನೆಲೆಗಳನ್ನು ೬ ಭಾಗಗಳಾಗಿ ವಿಂಗಡಿಸಿದ್ದು, ಶಿಲಾಯುಗದ ಮೈಕ್ರೋಲಿಥಿಕ್, ನಿಯೋಲಿಥಿಕ್, ಮೆಗಾಲಿಥಿಕ್ ಮತ್ತು ಮೌರ್ಯ ಹಾಗೂ ಶಾತವಾಹನರ ಕಾಲಕ್ಕೆ ಸಂಬಂಧಿಸಿದ ಅವಶೇಷಗಳನ್ನು ಪತ್ತೆಹಚ್ಚಿದರು.[೩೨] ೧೯೪೭ ಮಾರ್ಟಿಮರ್ ವ್ಹೀಲರ್‌ರವರು ಪುನಃ ಮೇಲಿನ ಎರಡೂ ನೆಲೆಗಳನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿ, ಇಲ್ಲಿ ಕಂಡುಬಂದ ಅವಶೇಷಗಳ ಆಧಾರದ ಮೇಲೆ ಮೆಗಾಲಿಥಿಕ್ ಸಂಸ್ಕೃತಿ ಇದ್ದ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ತಿಳಿಸಿದರು. ಜೊತೆಗೆ ಬ್ರಹ್ಮಗಿರಿಯ ಪಕ್ಕದಲ್ಲಿ ರೊಪ್ಪ ಸಂಸ್ಕೃತಿಯನ್ನು ಕೂಡ ಪತ್ತೆ ಹಚ್ಚಿದರು. ಇಲ್ಲಿ

ಬೃಹತ್‌ಶಿಲಾಯುಗ, ಇತಿಹಾಸ ಆರಂಭಕಾಲದ ಸಂಸ್ಕೃತಿಗಳಲ್ಲದೆ ಸೂಕ್ಷ್ಮಶಿಲಾಯುಗ ಸಂಸ್ಕೃತಿಯು ಸಹ ಕಂಡುಬಂದಿತು.[೩೩] ಡಾ.ಅ.ಸುಂದರರವರು ಚಿತ್ರದುರ್ಗ ಜಿಲ್ಲೆಯ ಪರಿಸರದಲ್ಲಿ ಅನೇಕ ಪುರಾತತ್ವ ನೆಲೆಗಳನ್ನು ಶೋಧಿಸಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ.[೩೪] ಲಕ್ಷ್ಮಣ್ ತೆಲಗಾವಿಯವರು ಜಿಲ್ಲೆಯಲ್ಲಿ ಅನೇಕ ಪುರಾತತ್ವ ನೆಲೆ ಮತ್ತು ಬಯಲುಬಂಡೆ ರೇಖಾಚಿತ್ರಗಳನ್ನು ಪತ್ತೆಹಚ್ಚಿದ್ದಾರೆ.[೩೫] ಮೊಳಕಾಲ್ಮೂರು ತಾಲ್ಲೂಕಿನ ಪರಿಸರದಲ್ಲಿ ಶ್ರೀಜಯಣ್ಣ ಎಂಬುವರು ಪುರಾತತ್ವ ನೆಲೆಗಳನ್ನು ಶೋಧಿಸಿದ್ದಾರೆ.[೩೬] ಅಲ್ಲದೆ ಜಿಲ್ಲೆಯ ಇತರೆ ಸಂಶೋಧಕರು ಇತ್ತೀಚೆಗೆ ಅನೇಕ ನೆಲೆಗಳನ್ನು ಪತ್ತೆಹಚ್ಚಿ ಪ್ರಕಟಿಸಿದ್ದಾರೆ.[೩೭] ಈ ಎಲ್ಲಾ ನೆಲೆಗಳ ಪಟ್ಟಿಯನ್ನು ಈ ಕೆಳಕಂಡಂತೆ ನೋಡಬಹುದು :

ಚಳ್ಳಕೆರೆ ತಾಲೂಕಿನಲ್ಲಿ ದೊರೆತ ನೆಲೆಗಳ ವಿವರ

ಕ್ರ.ಸಂ.	ಗ್ರಾಮ ಹೆಸರು	ಹಳೆಯ ಏಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಇತಿಹಾಸ ಕಾಲ
೧.	ಚಿಕ್ಕಮಧುರೆ	---	---	---	✓	✓
೨.	ಕೋಲೂರು	---	---	---	---	✓
೩.	ಪರಶುರಾಮಪುರ	---	---	✓	---	---
೪.	ಲಕುಮಗೊಂಡನಹಳ್ಳಿ	---	---	---	✓	---

ಚಿತ್ರದುರ್ಗ ತಾಲೂಕಿನಲ್ಲಿ ದೊರೆತ ನೆಲೆಗಳ ವಿವರ

ಕ್ರ.ಸಂ.	ಗ್ರಾಮ ಹೆಸರು	ಹಳೆಯ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಇತಿಹಾಸ ಕಾಲ
೧.	ಇಂಗಳದಾಳ	---	---	---	✓	✓
೨.	ಕೂನಬೇವು	---	---	---	✓	---
೩.	ಚಂದ್ರವಳ್ಳಿ	---	---	✓	✓	✓
೪.	ಚಿತ್ರದುರ್ಗ	---	---	✓	✓	✓
೫.	ಚಿಪ್ಪಿನಕೆರೆ	---	---	---	✓	✓
೬.	ಜಂಪಣ್ಣ ನಾಯಕನಕೋಟೆ	---	---	---	✓	---
೭.	ತಮಟಕಲ್ಲು	---	---	✓	✓	✓
೮.	ಚಂದ್ರವಳ್ಳಿ(ನೇರಲಗೊಂದಿ)	---	---	---	✓	---
೯.	ಚಂದ್ರವಳ್ಳಿ (ಬಾರ್ಲಗೊಂದಿ)	---	---	✓	✓	✓
೧೦.	ಸಂಗೇನಹಳ್ಳಿ ಕೆರೆ	---	---	✓	---	✓

[illegible]

[illegible]

[illegible]

[illegible]

೧೧.	ಬೆಳಗಟ್ಟ	---	---	---	✓	---
೧೨.	ಹಾಯಕಲ್ಲು	---	---	---	✓	---
೧೩.	ತುರುವನೂರು	---	---	---	✓	---

ಮೊಳಕಾಲ್ಮೂರು ತಾಲೂಕಿನಲ್ಲಿ ದೊರೆತ ನೆಲೆಗಳ ವಿವರ

ಕ್ರ.ಸಂ.	ಗ್ರಾಮ ಹೆಸರು	ಹಳೆಯ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಇತಿಹಾಸ ಕಾಲ
೧.	ಜಟಂಗಿ ರಾಮೇಶ್ವರ	---	---	✓	✓	✓
೨.	ಬ್ರಹ್ಮಗಿರಿ	---	✓	✓	✓	✓
೩.	ನುಂಕೆಮಲೆ	---	✓	✓	✓	---
೪.	ಮೊಳಕಾಲ್ಮೂರು	---	---	---	✓	---
೫.	ಹಳೆಕೆರೆ	---	✓	---	✓	---
೬.	ಹಾನಗಲ್ಲು	---	---	---	✓	---
೭.	ಅಕ್ಕಮ್ಮನಗುಡ್ಡ	---	---	---	✓	---
೮.	ಕೈಗುಡ್ಡ	---	---	---	✓	---
೯.	ಮೋರ್ಲುಬಂಡೇಗುಡ್ಡ	---	---	---	✓	---

ಹೊಸದುರ್ಗ ತಾಲೂಕಿನಲ್ಲಿ ದೊರೆತ ನೆಲೆಗಳ ವಿವರ

ಕ್ರ.ಸಂ.	ಗ್ರಾಮ ಹೆಸರು	ಹಳೆಯ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಇತಿಹಾಸ ಕಾಲ
೧.	ಜಾನಕಲ್ಲು	✓	---	---	---	---

ಹೊಳಲ್ಕೆರೆ ತಾಲೂಕಿನಲ್ಲಿ ದೊರೆತ ನೆಲೆಗಳ ವಿವರ

ಕ್ರ.ಸಂ.	ಗ್ರಾಮ ಹೆಸರು	ಹಳೆಯ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಇತಿಹಾಸ ಕಾಲ
೧.	ಗಂಜಿಗಟ್ಟೆ	---	---	---	✓	---
೨.	ತಾಳ್ಯ	✓	---	---	---	---
೩.	ನಂದನಹೊಸೂರು	---	---	---	✓	---
೪.	ಬೂದಿಪುರ	---	---	---	✓	---
	ಒಟ್ಟು	೨	೩	೯	೨೬	೧೧

ಈ ಎಲ್ಲ ನೆಲೆಗಳಿಂದ ಮಾನವನು ಈ ಜಿಲ್ಲೆಯ ಪರಿಸರದಲ್ಲಿ ಕ್ರಿ.ಪೂ. ಸುಮಾರು ೨೦೦೦ರಿಂದ ಕ್ರಿ.ಶ.ಒಂದನೆಯ ಶತಮಾನದವರೆಗೂ ಮಾನವ ತನ್ನ ಸತತ ಪ್ರಯತ್ನಗಳ ಫಲವಾಗಿ ನಾಗರೀಕತೆಯನ್ನು ಕಟ್ಟಿ ಮಹಾಸಾಮ್ರಾಜ್ಯಗಳ ನಿರ್ಮಾಣಕ್ಕೆ ಅಡಿಗಲ್ಲನ್ನು ಹಾಕಿದನೆಂಬುದು ಪುರಾತತ್ವ ಶೋಧನೆಗಳಿಂದ ತಿಳಿದುಬರುತ್ತದೆ.

೨.೬. ಮೌರ್ಯರು

ಉತ್ತರ ಭಾರತದಲ್ಲಿ ಪ್ರಪ್ರಥಮವಾಗಿ ಐತಿಹಾಸಿಕ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದ ಮೌರ್ಯರು ತಮ್ಮ ಸಾಮ್ರಾಜ್ಯವನ್ನು ಕುಂತಲ ದೇಶದವರೆಗೂ ವಿಸ್ತರಿಸಿದರೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಈ ಕುಂತಲ ದೇಶವು ಭೀಮ ಮತ್ತು ವೇದಾವತಿ ನದಿಗಳ ಮಧ್ಯಪ್ರದೇಶವಾಗಿದ್ದು ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಹಾವೇರಿ, ಧಾರವಾಡ, ಗದಗ, ಬಿಜಾಪುರ, ರಾಯಚೂರು ಮುಂತಾದ ಪ್ರದೇಶಗಳು ಕುಂತಲ ದೇಶದಲ್ಲಿ ಸೇರಿದ್ದವೆಂದು ಹೇಳಲಾಗಿದೆ.[೩೮] ಕುಂತಲ ದೇಶವನ್ನು ಆಳಿದವರಲ್ಲಿ ನಂದರು ಮೊದಲಿಗರೆಂಬ ಅಭಿಪ್ರಾಯವಿದೆ.[೩೯] ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯನು ನಂದರನ್ನು ಸೋಲಿಸಿದ ಪರಿಣಾಮವಾಗಿ ಆ ಸಾಮ್ರಾಜ್ಯದ ಭಾಗವಾಗಿದ್ದ ಕರ್ನಾಟಕದ ಭಾಗಗಳು ಮೌರ್ಯರ ಸ್ವಾಧೀನಕ್ಕೆ ಬಂದಿರಬಹುದು. ಬಿಂದುಸಾರನು ತನ್ನ ಸಾಮ್ರಾಜ್ಯವನ್ನು, ಮೈಸೂರು ರಾಜ್ಯದ ಚಿತ್ರದುರ್ಗವನ್ನು ಒಳಗೊಂಡಂತೆ ದಖನ್ನಿನ ಸ್ವಲ್ಪಭಾಗವನ್ನು ಸೇರಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದನೆನ್ನಲಾಗಿದೆ.[೪೦] ಈ ವೇಳೆಗಾಗಲೇ ಕರ್ನಾಟಕದಲ್ಲಿ ಬೃಹತ್ ಶಿಲಾಸಂಸ್ಕೃತಿಯವರು ಕಬ್ಬಿಣದ ಅದಿರನ್ನು ಕರಗಿಸುವುದರಲ್ಲಿ ಮತ್ತು ಕಮ್ಮಾರಿಕೆಯಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದ್ದರು. ಈ ಕಸುಬಿನಲ್ಲಿ ತುಂಬಾ ಮುಂದುವರೆದಿದ್ದ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರಿನ ಪ್ರದೇಶ ಸಹಜವಾಗಿಯೇ ಅಶೋಕ ಚಕ್ರವರ್ತಿಯ ಗಮನವನ್ನು ಸೆಳೆಯಿತು. ಇಂತಹ ಉಪಯುಕ್ತ ಹಾಗೂ ಲಾಭದಾಯಕವಾದ ದೊಡ್ಡ ಪ್ರಮಾಣದ ಕಸುಬುಳ್ಳ ಜನರ ದೇಶವನ್ನು ಸ್ವತಃ ಅಶೋಕನೇ ಗೆದ್ದುಕೊಂಡನೆಂದು ತಿಳಿದು ಬರುತ್ತದೆ. ಹೊಸದಾಗಿ ಸೇರಿಸಲ್ಪಟ್ಟ ಈ ಭಾಗದ ಜನರಿಗೆ ತನ್ನ ಪರಿಚಯ ಮತ್ತು ಧೋರಣೆಗಳನ್ನು ತಿಳಿಸುವುದಕ್ಕಾಗಿ ಈ ಪ್ರದೇಶದಲ್ಲಿ ದೊಡ್ಡ ಬಂಡೆಶಾಸನಗಳನ್ನು ಹಾಕಿಸಿದನೆಂದು ತೋರುತ್ತದೆ. ಕಬ್ಬಿಣದ ಮತ್ತು ಉಕ್ಕಿನ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಉತ್ತಮ ಕೇಂದ್ರವಾಗಿದ್ದ ಅಂದಿನ ಇಸಿಲಾನಗರ (ಬ್ರಹ್ಮಗಿರಿ)ದಲ್ಲಿ ತನ್ನ ಅಧಿಕಾರಿಗಳಾದ ಮಹಾಮಾತ್ರರನ್ನು ವಿಚಾರಪರನಾಗಿಯೇ ಇಟ್ಟಿದ್ದನೆಂದು ಹೇಳಬಹುದು.[೪೧]

[illegible]

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿ,[೪೨] ಸಿದ್ಧಾಪುರ,[೪೩] ಜಟಂಗಿ ರಾಮೇಶ್ವರಗಳಲ್ಲಿ[೪೪] ದೊರೆತಿರುವ ಅಶೋಕನ ಮೂರು ಶಾಸನಗಳನ್ನು ಬಿ.ಎಲ್.ರೈಸ್ ಪತ್ತೆಹಚ್ಚಿದಾಗ ಚಿತ್ರದುರ್ಗವು ಇಡೀ ವಿಶ್ವದ ಗಮನವನ್ನು ಸೆಳೆಯಿತು. ಈ ಶಾಸನಗಳು ಅಶೋಕನ ಸಾಮ್ರಾಜ್ಯದ ಗಡಿಗಳನ್ನು ಸೂಚಿಸುವ ಗುರುತಾಗಿವೆಯೆಂಬುದು ಚರಿತ್ರೆಕಾರರ ಅಭಿಮತ. ಹೀಗೆ ಚಿತ್ರದುರ್ಗವು ನೇರವಾಗಿ ಮೌರ್ಯ ಸಾಮ್ರಾಜ್ಯದ ಅಧೀನಕ್ಕೊಳಪಟ್ಟ ಪ್ರದೇಶವೆಂಬುದು ಸ್ಪಷ್ಟವಾಯಿತು.[೪೫] ಜೊತೆಗೆ ಈ ಜಿಲ್ಲೆಯಲ್ಲಿ ದೊರೆತ ಸಾಕಷ್ಟು ಸಂಖ್ಯೆಯ ಮೆಗಾಲಿಥಿಕ್ ಸ್ಮಾರಕಗಳು ಮೌರ್ಯರೊಂದಿಗೆ ಇರುವ ಸಂಬಂಧವನ್ನು ಸೂಚಿಸುತ್ತವೆಯೆಂದು ಮಾರ್ಟಿಮರ್ ವ್ಹೀಲರ್ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಚಂದ್ರವಳ್ಳಿ ಸಹ ಮೌರ್ಯರ ಕಾಲದ ಒಂದು ಸಣ್ಣ ಊರಾಗಿತ್ತೆಂದು ಹೇಳಲಾಗಿದೆ.[೪೬] ಅಶೋಕನ ಬ್ರಹ್ಮಗಿರಿ ಶಾಸನದಲ್ಲಿರುವ ಇಸಿಲ ಪ್ರದೇಶದ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯವಿತ್ತು. ನಂತರ ೧೯೪೦ರಲ್ಲಿ ಎಂ.ಎಚ್.ಕೃಷ್ಣ ಮತ್ತು ಡಾ.ಶೇಷಾದ್ರಿಯವರು ಬ್ರಹ್ಮಗಿರಿಯ ಸುತ್ತ ವ್ಯಾಪಕ ಶೋಧನೆ ನಡೆಸಿ ಒಂದು ಪಟ್ಟಣದ ಅಸ್ತಿತ್ವಕ್ಕೆ ಸಾಕಾಗುವಷ್ಟು ಆಧಾರಗಳನ್ನು ದೊರಕಿಸಿಕೊಟ್ಟು ಜನವಸತಿ ಪ್ರದೇಶದ ಸ್ಥಳವೇ ಇಸಿಲ ನಗರವೆಂದು ಅಭಿಪ್ರಾಯಪಟ್ಟರು.[೪೭]

ಅಶೋಕನು ತನ್ನ ಶಾಸನಗಳಲ್ಲಿ ಹೇಳಿಕೊಂಡಿರುವಂತೆ ಮಾನವ ಹಾಗೂ ಪ್ರಾಣಿಗಳ ಆರೋಗ್ಯ ರಕ್ಷಣೆಗೆ ತಕ್ಕ ವ್ಯವಸ್ಥೆ ಮಾಡಿದ್ದು, ಜೊತೆಗೆ ಅನೇಕ ಸನ್ಯಾಸಿ ಮಠಗಳು ಮತ್ತು ದೇವಾಲಯಗಳ ಒಂದು ಭವ್ಯವಾದ ಅರಮನೆಯನ್ನು ಸಹ ಕಟ್ಟಿಸಿದನೆಂದು ಪರಂಪರಾನುಗತವಾಗಿ ಬಂದ ದಾಖಲೆಗಳು ತಿಳಿಸುತ್ತವೆ.[೪೮] ಈ ಹಿನ್ನೆಲೆಯಲ್ಲಿ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ' ಎಂಬ ಹೆಸರಿನ ಊರಿದ್ದು ಹಾಗೂ ಕೋಟೆ ಎಂಬ ಅರ್ಥ ಅದಕ್ಕಿರುವುದರಿಂದ ಕೋಟೆಯಿಂದ ಆವೃತ್ತವಾಗಿರುವ ಊರು ಅದಾಗಿರಬಹುದೆಂದೂ ಹೇಳಲಾಗಿದೆ. ಹೀಗಾಗಿ ಜಿಲ್ಲೆಯಲ್ಲಿ ಕೋಟೆಗಳ ಪ್ರಾಚೀನತೆಯನ್ನು ಮೌರ್ಯರ ಕಾಲಕ್ಕೆ ಕೊಂಡಯ್ಯಬಹುದು.[೪೯]

ಇಸಿಲ ಎಂಬ ಸ್ಥಳವಾಚಿ ಪದವು ಅತ್ಯಂತ ಪ್ರಾಚೀನ ಕನ್ನಡ ಪದವೆಂದು ಡಿ.ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.[೫೦] ಅವರು ಮುಂದುವರೆದು ಇಸಿಲವು ಬಹುತೇಕ ಆರ್ಯೇತರ ಪದ; ದ್ರಾವಿಡವೇ ಆಗಿರಬೇಕು. ತಮಿಳಿನಲ್ಲಿ 'ಇಸಿಲ'ಕ್ಕೆ ಸಂವಾದಿಯಾದ 'ಎಯಿಲ್' ಪದವಿದೆ; 'ಎಯಿಲ್' ಎಂದರೆ ಕೋಟೆ ಕೋಟೆಯ ಗೋಡೆ ಎಂದರ್ಥ; ಆದ್ದರಿಂದ 'ಇಸಿಲ' ಕನ್ನಡದ ಪದ ಅದರ ಅರ್ಥ ಕೋಟೆ ಅಥವಾ ಕೋಟೆಯೊಳಗಿನ ಊರು ಎಂದು ಅಭಿಪ್ರಾಯಪಟ್ಟಿದ್ದಾರೆ.[೫೧]

ಬ್ರಹ್ಮಗಿರಿ ಶಾಸನದಲ್ಲಿ ಹೇಳಿರುವ ಮಹಾಮಾತ್ರರು ಮತ್ತು ಆರ್ಯಪುತ್ರರು ಇಸಿಲದ ಮಹಾಮಾತ್ರರಿಗೆ ರಾಜಾಜ್ಞೆಗಳನ್ನು ತಿಳಿಸಿದ ಉಲ್ಲೇಖವಿದೆ. ಇಲ್ಲಿ ಆರ್ಯಪುತ್ರ ಎಂದರೆ ಯುವರಾಜನಿಗೆ ಸಂಬಂಧಿಸಿದ ಪದವಾಗಿದ್ದು, ಸಹಜವಾಗಿಯೇ ಈ ಭಾಗ ಸಾಮ್ರಾಜ್ಯದ ಆಡಳಿತ ಪ್ರಾಂತ್ಯಗಳಲ್ಲೊಂದಾಗಿತ್ತು. ಈ ಆಡಳಿತ ವಿಭಾಗಕ್ಕೆ ಮಹಾಮಾತ್ರನೆಂಬ ಅಧಿಕಾರಿಯು ನೇಮಕಗೊಂಡಿದ್ದನು. ಸುವರ್ಣಗಿರಿಯು ಹಿರಿಯ ಆಡಳಿತ ವಿಭಾಗವಾಗಿದ್ದು, ಇದು ಬ್ರಹ್ಮಗಿರಿಯೇ ಆಗಿರಬಹುದೆಂಬ ಅಭಿಪ್ರಾಯವನ್ನು ಬಹುಮಟ್ಟಿಗೆ ಒಪ್ಪಲಾಗಿದೆ.[೫೨] ಅಲ್ಲದೆ ಕರ್ನಾಟಕದ ಬೌದ್ಧ ಧರ್ಮದ ಅತ್ಯಂತ ಪ್ರಾಚೀನ ಕುರುಹುಗಳು ಸಿಕ್ಕಿದ್ದು ಸಿದ್ಧಾಪುರ, ಜಟಂಗಿರಾಮೇಶ್ವರ ಮತ್ತು ಬ್ರಹ್ಮಗಿರಿಯಲ್ಲಿ ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ.[೫೩] ಒಟ್ಟಾರೆ ಚಿತ್ರದುರ್ಗ ಪ್ರದೇಶವು ಮೌರ್ಯರ ಆಡಳಿತಕ್ಕೆ ಒಳಪಟ್ಟಿದ್ದು, ಇವರಿಂದ ಬಂದ ಉದಾತ್ತ ಧ್ಯೇಯ, ಆಡಳಿತ ಪದ್ಧತಿ ಹಾಗೂ ಧಾರ್ಮಿಕ ಸಹಿಷ್ಣುತೆಯನ್ನು ಮುಂದೆ ಈ ಭಾಗದಲ್ಲಿ ಏಳಿಗೆಗೆ ಬಂದ ರಾಜಮನೆತನದವರು ಮುಂದುವರೆಸಿಕೊಂಡು ಹೋದರೆಂದು ಹೇಳಬಹುದು.

೨.೬.೨ ಶಾತವಾಹನರು

ಕರ್ನಾಟಕವನ್ನಾಳಿದ ಶಾತವಾಹನರ ಅನೇಕ ಮಾಂಡಲಿಕರಲ್ಲಿ ಚುಟುಗಳು ಮತ್ತು ಮಹಾರಥಿಗಳು ಪ್ರಮುಖರಾಗಿದ್ದಾರೆ. ಚುಟುಗಳನ್ನು ಆನಂದ ಅರಸರು ಎಂದು ಗುರುತಿಸುತ್ತಾರೆ. ಚುಟುಗಳು ಶಾತವಾಹನರ ಮಾಂಡಲಿಕರಾಗಿ ಚಿತ್ರದುರ್ಗದಲ್ಲಿ ಆಳ್ವಿಕೆ ನಡೆಸಿದ್ದಾರೆ.[೫೪] ಚಂದ್ರವಳ್ಳಿ ಚುಟುವಂಶದ ಪ್ರಾಂತೀಯ ರಾಜಧಾನಿಯಾಗಿತ್ತೆಂದು ಹೇಳಲಾಗಿದೆ.[೫೫] ಚಿತ್ರದುರ್ಗ ಪರಿಸರದಲ್ಲಿ ಚುಟು ಅರಸರಿಗೆ ಸಂಬಂಧಿಸಿದಂತೆ ಅನೇಕ ಸೀಸದ ನಾಣ್ಯಗಳು ಕಂಡುಬಂದಿವೆ. ೧೮೮೮ರಲ್ಲಿ ಮೆರಿವನ್ ಸ್ಮಿಥ್ ಎಂಬುವವನು ಚಿತ್ರದುರ್ಗ ಜಿಲ್ಲೆಯಲ್ಲಿ ಸೀಸದ ನಾಣ್ಯಗಳನ್ನು ಮೊದಲಬಾರಿಗೆ ಪತ್ತೆಹಚ್ಚಿದನು.[೫೬] ಇಂತಹ ಸೀಸದ ನಾಣ್ಯಗಳನ್ನು ಮೊದಲು ಟಂಕಿಸಿದ ಕೀರ್ತಿ ಮಹಾರಥಿ, ಚುಟು(ಆನಂದ) ಕುಲದ ಅರಸರಿಗೆ ಸಲ್ಲುತ್ತದೆ. ಚಂದ್ರವಳ್ಳಿ ಉತ್ಖನನದ ೭, ೮, ೯ ಮತ್ತು ೧೦ ಪದರಗಳಲ್ಲಿ ಸೀಸದ ನಾಣ್ಯಗಳು ವಿಶೇಷವಾಗಿ ದೊರೆತಿವೆ. ಇವು ಆ ಕಾಲದ ಇತರೆ ನಾಣ್ಯಗಳಿಗಿಂತ ಗಾತ್ರದಲ್ಲಿ ಹೆಚ್ಚು ದೊಡ್ಡದಾಗಿವೆ. ಇವುಗಳ ವ್ಯಾಸ ಸುಮಾರು ೨.೫ ಸೆಂ.ಮೀ. ನಿಂದ ೩ ಸೆಂ.ಮೀ.ನಷ್ಟಿರುತ್ತದೆ. ಸುಮಾರು ೪.೯ ಗ್ರಾಂನಿಂದ ೧೨.೯ ಗ್ರಾಂ ಭಾರವಾಗಿವೆ. ನಾಣ್ಯಗಳ ಮುಂಭಾಗದಲ್ಲಿ ಏಳೆಂಟು ಕಮಾನುಗಳುಳ್ಳ ಗುಪ್ಪ ಅದರ ಕೆಳಭಾಗದಲ್ಲಿ ನದಿಯನ್ನು ಸಾಂಕೇತಿಸುವ ವಕ್ರರೇಖೆ ಕಂಡುಬರುತ್ತದೆ.[೫೭] ಈ ನಾಣ್ಯಗಳ ಆಧಾರದಿಂದ

[illegible]

[illegible]

ಈ ಭಾಗದಲ್ಲಿ ನಾಲ್ವರು ಮಹಾರಥಿ ಅರಸರ ಆಳ್ವಿಕೆಯನ್ನು ಗುರುತಿಸಲಾಗಿದೆ.[೫೮] ಇತ್ತೀಚೆಗೆ ಡಾ.ಎಸ್.ವೈ.ಸೋಮಶೇಖರ್ ಮುಲಾನಂದನಿಗೆ ಸಂಬಂಧಿಸಿದ ನಾಣ್ಯಗಳನ್ನು ತುರುವನೂರು ಮತ್ತು ಚಿಪ್ಪಿನಕೆರೆಗಳಲ್ಲಿ ಸಂಗ್ರಹಿಸಿ ಅವುಗಳ ಮಹತ್ವವನ್ನು ಪ್ರಕಟಿಸಿದ್ದಾರೆ.[೫೯]

ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯಲ್ಲಿ ನಡೆದ ಶೋಧನೆಗಳು ಮತ್ತು ಉತ್ಖನನದಿಂದ ಜಿಲ್ಲೆಯಲ್ಲಿ ಶಾತವಾಹನರ ಆಳ್ವಿಕೆಯ ಮೇಲೆ ಬೆಳಕು ಬೀರಿದಂತಾಗಿದೆ. ಶಾತವಾಹನರ ಆಳ್ವಿಕೆಯನ್ನು ಸಮರ್ಥಿಸುವಂತೆ ಜಿಲ್ಲೆಯಲ್ಲಿ ಶಾಸನಗಳು ದೊರೆಯದಿದ್ದರೂ ಸಾಕಷ್ಟು ಸಂಖ್ಯೆಯಲ್ಲಿ ನಾಣ್ಯಗಳು, ಪುರಾತತ್ವ ಅವಶೇಷಗಳು ಅವರ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸಿಕ್ಕಿರುವ ಚಿನ್ನ, ಬೆಳ್ಳಿ, ತಾಮ್ರ, ಪೋಟಿನ್, ಸೀಸ ಮುಂತಾದ ಬಗೆಯ ಶಾತವಾಹನರ ನಾಣ್ಯಗಳು ಈಗಾಗಲೇ ವಿದ್ವಾಂಸರ ಗಮನಸೆಳೆದಿವೆ. ೧೯೦೯ರಲ್ಲಿ ನರಸಿಂಹಾಚಾರ್[೬೦] ೧೯೨೮ ಎಂ.ಎಚ್.ಕೃಷ್ಣ[೬೧] ೧೯೪೭ರಲ್ಲಿ ಮಾರ್ಟಿಮರ್ ವ್ಹೀಲರ್[೬೨] ಇತ್ತೀಚೆಗೆ ಡಾ.ಮಿಶ್ರ ಮತ್ತು ಡಾ.ಕೆ.ವಿ.ರಾವ್ ಮೊದಲಾದವರು ಈ ಪ್ರದೇಶಗಳಲ್ಲಿ ನಡೆಸಿದ ಶೋಧನೆಗಳು ಶಾತವಾಹನರ ಆಳ್ವಿಕೆಯನ್ನು ಸಮರ್ಥಿಸಿವೆ. ಕೇವಲ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಗೆ ಸೀಮಿತವಾಗಿದ್ದ ಶಾತವಾಹನರ ಸಂಸ್ಕೃತಿ ಇತ್ತೀಚೆಗೆ ಸಂಶೋಧನೆಗಳಿಂದ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಹರಡಿರುವುದು ಕಂಡುಬರುತ್ತದೆ.[೬೩]

ಮೇಲಿನ ಎಲ್ಲಾ ವಿದ್ವಾಂಸರ ಸಂಶೋಧನೆಯಿಂದ ತಿಳಿದುಬರುವುದೇನೆಂದರೆ ಶಾತವಾಹನರು ಮೌರ್ಯರ ನಂತರ ಈ ಭಾಗದಲ್ಲಿ ಆಳ್ವಿಕೆ ನಡೆಸಿ ತಮ್ಮದೇ ಆದಂತಹ ಕಾಣಿಕೆಯನ್ನು ನೀಡಿರುವುದಂತೂ ಸ್ಪಷ್ಟ. ಮೌರ್ಯರ ಕಾಲಕ್ಕೆ ಪ್ರಸಿದ್ಧ ಪಟ್ಟಣವಾಗಿದ್ದ ಚಂದ್ರವಳ್ಳಿಯ ಶಾತವಾಹನರ ಕಾಲಕ್ಕೆ ವಾಣಿಜ್ಯ ಕೇಂದ್ರವಾಗಿತ್ತಲ್ಲದೆ, ರೋಮ್ ಮತ್ತು ಚೀನಾ ದೇಶಗಳೊಡನೆ ವ್ಯಾಪಾರ ಸಂಪರ್ಕ ಹೊಂದಿತ್ತೆಂಬುದಕ್ಕೆ ಇಲ್ಲಿ ದೊರೆತಿರುವ ನಾಣ್ಯಗಳು ಪ್ರಮುಖ ಆಕರಗಳಾಗಿವೆ.

ಇವು ಈ ಭಾಗಗಳಲ್ಲಿ ಆಳ್ವಿಕೆ ಮಾಡಿದ ಶಾತವಾಹನರ ಆರ್ಥಿಕ ಪರಿಸ್ಥಿತಿಯನ್ನು ಸೂಚಿಸುವುದು, ಜೊತೆಗೆ ಇಲ್ಲಿ ದೊರೆತಿರುವ ಇಟ್ಟಿಗೆ ಚೂರು, ಕಬ್ಬಿಣ, ದಂತ, ಲೋಹದ ಬಳೆ, ಮಣ್ಣಿನ ಪಾತ್ರೆ -ಇವೆಲ್ಲಾ ಅವರ ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುತ್ತವೆ. ಇವರ ನಾಣ್ಯಗಳ ಮೇಲೆ ಇರುವ ವೃಕ್ಷ, ವೃಷಭ, ಚೈತ್ಯ, ಅರ್ಧಸ್ತೂಪ ಮುಂತಾದ ಸಂಕೇತಗಳು ಇವರ ಧಾರ್ಮಿಕತೆಗೆ ಹಿಡಿದ ಕನ್ನಡಿ ಯಾಗಿವೆ. ಅಲ್ಲದೆ ಇವರು ಬೌದ್ಧ ಧರ್ಮವನ್ನು ಅನುಸರಿಸುತ್ತಿದ್ದರೆಂಬುದು ಇವುಗಳಿಂದ ತಿಳಿದು ಬರುತ್ತದೆ.

ಒಟ್ಟಾರೆ, ಚಿತ್ರದುರ್ಗ ಜಿಲ್ಲೆ ಶಾತವಾಹನರ ಆಳ್ವಿಕೆಗೆ ಒಳಪಟ್ಟಿದ್ದು, ಕ್ರಿ.ಶ.ಸುಮಾರು ೨೦೦ರ ತರುವಾಯ ಎಂದು ಹೇಳಬಹುದು. ಈ ಜಿಲ್ಲೆಯ ಚಂದ್ರವಳ್ಳಿಯು ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಇಲ್ಲಿ ದೊರೆತಿರುವ ಅವಶೇಷಗಳಿಂದ ಹೇಳಬಹುದಾಗಿದೆ.

೧.೬.೩ ಕದಂಬರು

ಕರ್ನಾಟಕ ಚರಿತ್ರೆಯಲ್ಲಿ ಶಾತವಾಹನರ ಅಧಿಪತ್ಯ ಅಳಿದ ಮೇಲೆ ಪಲ್ಲವರ ಆಳ್ವಿಕೆ ಆರಂಭಗೊಳ್ಳುತ್ತದೆ. ಆದರೆ ಮುಂದೆ ಪಲ್ಲವರನ್ನು ಸೋಲಿಸಿ ಈ ಭಾಗದಲ್ಲಿ ಅಧಿಕಾರ ಸ್ಥಾಪಿಸಿದ ಕೀರ್ತಿ ಬನವಾಸಿ ಕದಂಬರಿಗೆ ಸಲ್ಲುತ್ತದೆ. ಇವರು ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಉತ್ತರ ಕರಾವಳಿ, ದಕ್ಷಿಣ ಕರಾವಳಿ, ಧಾರವಾಡ, ಬೆಳಗಾಂ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಮತ್ತಿತರ ಭಾಗಗಳಲ್ಲಿ ಕ್ರಿ.ಶ.೩ನೇ ಶತಮಾನದಿಂದ ಅಂತ್ಯದ ೭ನೆಯ ಶತಮಾನದ ಮಧ್ಯದವರೆಗೆ ಸುಮಾರು ೩೭೫ ವರ್ಷಗಳ ಕಾಲ ಆಳಿದರು.[೬೪] ನಂತರ ಬಾದಾಮಿ ಚಾಲುಕ್ಯರ ಏಳಿಗೆಯಿಂದ ಈ ಮನೆತನ ಕಣ್ಮರೆಯಾಯಿತು. ಪ್ರಾಚೀನ ಕದಂಬರ ಹಲವಾರು ಶಾಖೆಗಳು ದಕ್ಷಿಣ ಭಾರತದ ಬೇರೆ ಬೇರೆ ಭಾಗಗಳಲ್ಲಿ ಸುಮಾರು ೧೪ನೆಯ ಶತಮಾನದವರೆಗೂ ಆಳ್ವಿಕೆ ನಡೆಸಿದ್ದರು. ಇವರಲ್ಲಿ ಗೋವೆ, ಹಾನಗಲ್ಲು, ಬೇಲೂರು, ಉಚ್ಚಂಗಿ, ನಾಗರಖಂಡ, ಕಲಿಂಗ, ಬಯಲುನಾಡು ಹಾಗೂ ಬಂಕಾಪುರದ ಕದಂಬರು ಮುಂತಾದ ಮನೆತನಗಳಿವೆ. ಮೂಲ ಕದಂಬರೊಂದಿಗೆ ಸಂಬಂಧ ಕಲ್ಪಿಸುವುದು ಕಷ್ಟ ಸಾಧ್ಯವಾದರೂ ನಂತರಬಂದ ಕದಂಬರು ತಮ್ಮನ್ನು 'ಬನವಾಸಿ ಪುರವಾಧೀಶ್ವರ'ರೆಂದೇ ಕರೆದು ಕೊಂಡಿದ್ದಾರೆ.[೬೫]

ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ ಪ್ರಾರಂಭವಾದುದು ಮಯೂರವರ್ಮನಿಂದ. ಈತನಿಗೆ ಸಂಬಂಧಿಸಿದ ಶಾಸನವೊಂದು ಚಂದ್ರವಳ್ಳಿಯ ಹುಲಿಗೊಂದಿಯ ಭೈರವೇಶ್ವರದ ದೇವಸ್ಥಾನದ ಬಲಭಾಗದ ಬಂಡೆಯ ಮೇಲಿದೆ. ಈ ಶಾಸನವನ್ನು ೧೯೨೯ರಲ್ಲಿ ಪ್ರಪ್ರಥಮವಾಗಿ ಎಂ.ಹೆಚ್.ಕೃಷ್ಣ ಪತ್ತೆಹಚ್ಚಿ ಇದರ ಮಹತ್ವವನ್ನು ಪ್ರಕಟಿಸಿದರು.[೬೬] ಆದರೆ ಈ ಶಾಸನದ ಬಗ್ಗೆ ವಿದ್ವಾಂಸರಲ್ಲಿದ್ದ ಭಿನ್ನಾಭಿಪ್ರಾಯವನ್ನು ಅರಿತ ಬಿ.ರಾಜಶೇಖರಪ್ಪನವರು ಈ ಶಾಸನದ ಪಾಠವನ್ನು ಪುನರ್‌ಪರಿಶೀಲಿಸಿ ಶಾಸನದ ಬಗ್ಗೆ ಹೊಸ ಬೆಳಕನ್ನು ಚೆಲ್ಲಿದರು.[೬೭] ಕರ್ನಾಟಕದ ಇತಿಹಾಸದ ಬಗ್ಗೆ ಈ ಶಾಸನದ ಮೂಲಕ ಅನೇಕ ಪ್ರಥಮಾಂಸಗಳನ್ನು ಪ್ರಕಟಿಸಿದರು.[೬೮] ಇದರಿಂದ ಮಯೂರವರ್ಮನ ಜೀವನದ ಬಗ್ಗೆ ಹಿಂದೆ

ಇದ್ದ ಇತಿಹಾಸ ಈಗ ಬದಲಾಯಿತೆನ್ನಬಹುದು. ಮಯೂರವರ್ಮನಿಗೆ ಸಕಲ ವಿಧದಲ್ಲೂ ಅವನಿಗೆ ಸಹಕಾರ ನೀಡಿ ರಾಜ್ಯಸ್ಥಾಪನೆಯ ಕಾರ್ಯದಲ್ಲಿ ಯುದ್ಧ ಚಟುವಟಿಕೆಗಳಿಗೆ ಸ್ಫೂರ್ತಿ ಕೊಟ್ಟು ಹಾಗೂ ಕನ್ನಡ ನಾಡಿಗೆ ಕನ್ನಡ ನಾಡಿನದೇ ಅಧಿರಾಜತ್ವವೊಂದು ಉದಯವಾಗಲು ಅನುವಿತ್ತ ತಾಣವಾಗಿ ಪರಿಣಮಿಸಿದ ಶ್ರೀಪರ್ವತಾರಣ್ಯವು ಚಿತ್ರದುರ್ಗದ ಚಂದ್ರವಳ್ಳಿಯ ಬಳಿಯ ದವಳಪ್ಪನ ಗುಡ್ಡದ ಸುತ್ತಮುತ್ತಲ ಪ್ರದೇಶವಿರಬಹುದು ಎಂದು ಸಹ ಅಭಿಪ್ರಾಯಪಟ್ಟಿದ್ದಾರೆ.[೬೯]

ಮೌರ್ಯ ಹಾಗೂ ಶಾತವಾಹನರ ಕಾಲದಿಂದಲೇ ಪ್ರಸಿದ್ಧಿ ಪಡೆದಿದ್ದ ಚಂದ್ರವಳ್ಳಿ ಮತ್ತು ಚಿತ್ರದುರ್ಗದ ಕೋಟೆಯ ಪರಿಸರಕ್ಕೆ ಮಯೂರವರ್ಮನೇ ರಾಜನಾಗಿದ್ದನೆಂದು ಹೇಳಬಹುದು. ಈಗಾಗಲೇ ಅಭಿಪ್ರಾಯಪಡುವಂತೆ ಚಂದ್ರವಳ್ಳಿ ಉತ್ಖನನದಿಂದ ಚಂದ್ರವಳ್ಳಿಯಲ್ಲಿ ಮೌರ್ಯರ ಕಾಲಕ್ಕೆ ಒಂದು ಕೋಟೆಯಿತ್ತೆಂಬುದಾಗಿ ಅಭಿಪ್ರಾಯಪಡಲಾಗಿದೆ.[೭೦] ಇಲ್ಲಿ ನಡೆದ ಉತ್ಖನನದಿಂದ ಕಂಡುಬಂದ ಭಾರೀ ಕಟ್ಟಡಗಳು, ರಾಜಬೀದಿ, ಇಕ್ಕೆಲಗಳಲ್ಲಿ ವೈದ್ಯರು, ಅಕ್ಕಸಾಲಿಗರು, ಕುಂಬಾರರು ಮತ್ತಿತರ ಅಂಗಡಿಗಳು ಇದ್ದವೆಂದು ತಿಳಿದುಬರುತ್ತದೆ. ಅಂಗಡಿಗಳ ಹಿಂಭಾಗದಲ್ಲಿ ಲೌಕಿಕ ಕಟ್ಟಡಗಳ ಅವಶೇಷಗಳು ದೊರಕಿವೆ. ಅನೇಕ ಕಡೆ ಬಾವಿ ಮತ್ತು ಕಟ್ಟಡಗಳನ್ನು ಕಟ್ಟಲು ಉಪಯೋಗಿಸಿದ್ದ ೧೬x೮x೨ ಅಳತೆಯ ಇಟ್ಟಿಗೆಗಳನ್ನು ಬಳಸಲಾಗಿತ್ತು. ಇಲ್ಲಿನ ಕಟ್ಟಡದ ಅವಶೇಷಗಳನ್ನು ನೋಡಿದರೆ ಚಂದ್ರವಳ್ಳಿ ಕದಂಬರ ವೇಳೆಗಾಗಲೇ ತೀರ ಮುಂದುವರೆದ ನಗರವಾಗಿತ್ತೆಂದು ಹೇಳಬಹುದು.[೭೧] ಇಂತಹ ನಗರಕ್ಕೆ ಸಾಮಾನ್ಯವಾಗಿ ರಕ್ಷಣಾದೃಷ್ಟಿಯಿಂದ ಶಾತವಾಹನರ ಕಾಲದಲ್ಲಿದ್ದ ಕೋಟೆಯನ್ನೇ ಇವರು ಬಲಪಡಿಸಿಕೊಂಡಿರಬೇಕು. ಒಟ್ಟಾರೆ ಈ ಪ್ರದೇಶದಲ್ಲಿ ವಿಸ್ತಾರವಾದ ಉತ್ಖನನವನ್ನು ಕೈಗೊಂಡಾಗ ಮಾತ್ರ ಸತ್ಯಸಂಗತಿ ಹೊರಬರಬಹುದು.

ಮೊಳಕಾಲ್ಮೂರು ತಾಲೂಕಿನ ನುಂಕೆಮಲೆಯಲ್ಲಿ ದೊರೆತ ಶಾಸನಗಳಿಂದ ಕದಂಬ ಮನೆತನದವರಾದ ಅಜವರ್ಮ (ಕ್ರಿ.ಶ.೯೮೭) ಮತ್ತು ಬೆಂಚರಸದೇವ (ಕ್ರಿ.ಶ.೧೧೦೦) ಚಾಲುಕ್ಯ ಮನೆತನದ ಸಾಮಂತರಾಗಿ ಆಳ್ವಿಕೆ ಮಾಡಿರುವುದು ತಿಳಿದುಬರುತ್ತದೆ.[೭೨] ಈ ಬೆಟ್ಟದ ದೇವಾಲಯದಲ್ಲಿರುವ ಲುಂಕೇಶ್ವರನನ್ನು ಕದಂಬ ವಂಶದ ರಾಜನೊಬ್ಬನು ೧೧ನೆಯ ಶತಮಾನದಲ್ಲಿ ಪ್ರತಿಷ್ಠಾಪಿಸಿದನೆಂದು ತಿಳಿದುಬರುವುದಲ್ಲದೆ, ಕದಂಬರು ಈ ಪ್ರದೇಶದಲ್ಲಿ ಲುಂಕೆ ಹೆಸರಿನ ಕೋಟೆ ನಿರ್ಮಿಸಿದರೆಂದೂ, ಇದೇ ಕಾಲಾನಂತರ ಲುಂಕೆಕೋಟೆಯಾಗಿದೆಯೆಂದೂ ಹೇಳಲಾಗಿದೆ.[೭೩] ಮೊಳಕಾಲ್ಮೂರಿಗೆ ಉತ್ತರದಲ್ಲಿರುವ ಹಿರೇಅರ್ಯರದುರ್ಗ (ಹಿರಾನನ ಗುಡ್ಡ)ವೆಂದು ಪ್ರಸಿದ್ಧವಾಗಿರುವ ಉಚ್ಚಂಗಿದುರ್ಗವು ಕದಂಬರ ರಾಜಧಾನಿಯಾಗಿತ್ತೆಂಬುದು

[illegible]

ಕದಂಬರ ದಾಖಲೆಗಳಿಂದ ತಿಳಿದುಬರುತ್ತದೆ.[೨೪] ಇವರ ತರುವಾಯ ಕದಂಬರ ಆಳ್ವಿಕೆ ಕಂಡುಬರುವುದಿಲ್ಲ. ಈ ವೇಳೆಗಾಗಲೇ ಚಾಲುಕ್ಯರು ಈ ಭಾಗದಲ್ಲಿ ಪ್ರಬಲರಾಗಿದ್ದರು.

೨.೬.೪ ಚಾಲುಕ್ಯರು

ಕದಂಬರ ತರುವಾಯ ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದವರೆಂದರೆ ಚಾಲುಕ್ಯರು. ಚಾಲುಕ್ಯರಲ್ಲಿ ಬಾದಾಮಿ, ಕಲ್ಯಾಣ, ವೆಂಗಿ ಮುಂತಾದ ಶಾಖೆಗಳಿವೆ. ಇವರಲ್ಲಿ ಕ್ರಿ.ಶ. ಸುಮಾರು ೬ರಿಂದ ೮ನೆಯ ಶತಮಾನದವರೆಗೆ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ಬಾದಾಮಿ ಚಾಲುಕ್ಯರ ಮನೆತನ ಪ್ರಾಚೀನವಾದುದು. ಕ್ರಿ.ಶ.೧೦ನೇ ಶತಮಾನದಿಂದ ೧೨ನೆಯ ಶತಮಾನವರೆಗೂ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ಕಲ್ಯಾಣ ಚಾಲುಕ್ಯ ಮನೆತನದವರು. ಈ ಎರಡು ಮನೆತನದ ಶಾಸನಗಳು ಜಿಲ್ಲೆಯಲ್ಲೂ ದೊರೆತಿವೆ.[೨೫] ಬಾದಾಮಿ ಚಾಲುಕ್ಯರ ಕಾಲದಲ್ಲಿ ಚಿತ್ರದುರ್ಗವನ್ನು 'ಸೂಳ್ಗಲ್ಲುನಾಡು' ಎಂದು ಕರೆಯಲಾಗುತ್ತಿದ್ದು,[೨೬] ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಚಿತ್ರದುರ್ಗಕ್ಕೆ ಬೆಮ್ಮತ್ತನಕಲ್ಲು ಎಂಬ ಹೆಸರು ಪ್ರಚಲಿತವಾಯಿತು. ಇವರಿಗೆ ಚೋಳರು ಕಡುವೈರಿಗಳಾಗಿದ್ದರು. ಚೋಳ ಮತ್ತು ಚಾಲುಕ್ಯ ರಾಜ್ಯಗಳ ನಡುವೆ ಅನೇಕ ಬಾರಿ ಯುದ್ಧಗಳು ಈ ಭಾಗದಲ್ಲಿ ನಡೆದವು.

ಚಾಲುಕ್ಯ ಮನೆತನದ ಮುಖ್ಯ ಅರಸರಾದ ೧ನೇ ಪುಲಕೇಶಿ, ೨ನೇ ಪುಲಕೇಶಿ, ೨ನೇ ವಿಕ್ರಮಾದಿತ್ಯ ನಾಡಿನ ಗಡಿಯನ್ನು ಉತ್ತರದಲ್ಲಿ ನರ್ಮದೆಯಿಂದ ಹಿಡಿದು ದಕ್ಷಿಣದಲ್ಲಿ ಕಾವೇರಿಯವರೆಗೂ ವಿಸ್ತರಿಸಿದರು. ಈ ಮಧ್ಯೆ ಚಾಲುಕ್ಯ ಮತ್ತು ಪಲ್ಲವ ಮನೆತನಗಳಲ್ಲಿ ನಿರಂತರವಾಗಿ ನಡೆಯುತ್ತಿದ್ದ ಕಾದಾಟದಿಂದ ಎರಡೂ ರಾಜ್ಯಗಳ ಗಡಿಯಲ್ಲಿದ್ದ ಚಿತ್ರದುರ್ಗ ಪ್ರದೇಶದಲ್ಲಿ ಅಶಾಂತಿ ಏರ್ಪಟ್ಟಿತ್ತೆಂದು ಹೇಳಬಹುದು. ಈ ಅವಧಿಯಲ್ಲಿ ಚಿತ್ರದುರ್ಗವು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದುದು ದೃಢವಾಗುತ್ತದೆ.[೨೭]

ಕರ್ನಾಟಕದ ಕೋಟೆಗಳ ಇತಿಹಾಸದಲ್ಲಿ ಪ್ರಥಮ ಶಾಸನೋಕ್ತ ಕೋಟೆಯೆಂದರೆ ಬಾದಾಮಿಯ ಕೋಟೆ. ಈ ಶಾಸನವು ರಾಜಧಾನಿ ಬಾದಾಮಿಗೆ ಕೋಟೆಯನ್ನು ನಿರ್ಮಿಸಿದ್ದನ್ನು ಇದು ಹೇಳುತ್ತದೆ.[೨೮] ಚಾಲುಕ್ಯರು ದುರ್ಗಗಳಿಗೆ ಅತ್ಯಂತ ಹೆಚ್ಚು ಮಹತ್ವ ಕೊಟ್ಟಿದ್ದರಲ್ಲದೆ, ದುರ್ಗಪತಿ ಎಂಬ ಕೋಟೆಯ ಆಡಳಿತಾಧಿಕಾರಿ ಇದ್ದುದು ತಿಳಿದುಬರುತ್ತದೆ. ದುರ್ಗಗಳು ಚಾಲುಕ್ಯ ಸೈನ್ಯದ ಭದ್ರನೆಲೆಗಳಾಗಿದ್ದವು.[೨೯]

[illegible]

[illegible]

[illegible]

[illegible]

ಈ ವೇಳೆಗಾಗಲೇ ಚಿತ್ರದುರ್ಗದಲ್ಲಿ ಕೋಟೆ ಇದ್ದುದರಿಂದ ಚಿತ್ರದುರ್ಗವು ಕೂಡ ಅವರ ಸೇನಾನೆಲೆಯಾಗಿದ್ದಿತೆಂದು ಹೇಳಬಹುದು.

೨.೬.೫ ನೊಳಂಬರು

ನೊಳಂಬ ಅಥವಾ ನೊಳಂಬ ಪಲ್ಲವರ ಮನೆತನವು ಕರ್ನಾಟಕದಲ್ಲಿ ಆಳಿದ ಅನೇಕ ಪ್ರಮುಖ ರಾಜಮನೆತನಗಳಲ್ಲಿ ಒಂದು. ಕಂಚಿಯ ಪಲ್ಲವರ ವಂಶದೊಂದಿಗೆ ಮೂಲವನ್ನು ಕಲ್ಪಿಸಿಕೊಳ್ಳುವ ಈ ಮನೆತನವು ಕ್ರಿ.ಶ.೮ನೇ ಶತಮಾನದಿಂದ ಸುಮಾರು ೧೧ನೇ ಶತಮಾನದವರೆಗೆ ಆಳ್ವಿಕೆ ನಡೆಸಿದೆ. ಕ್ರಿ.ಶ.೭೩೫ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನೊಳಗೊಂಡಂತೆ, ದಾವಣಗೆರೆ ಜಿಲ್ಲೆಯ ಹರಿಹರ, ಜಗಳೂರು, ದಾವಣಗೆರೆಗಳನ್ನೊಳಗೊಂಡ ನೊಳಂಬರಿಗೆ ಸಾಸಿರ ಎಂಬ ಸಣ್ಣ ಪ್ರಾಂತ್ಯದ ಮೇಲೆ ಆಡಳಿತವನ್ನು ಪ್ರಾರಂಭಿಸಿದರು.[೮೦] ನಂತರ ಕ್ರಿ.ಶ.೯೦೦ರ ಹೊತ್ತಿಗೆ ನೊಳಂಬವಾಡಿ-೩೨೦೦೦ ಎಂಬ ವಿಶಾಲ ಪ್ರಾಂತ್ಯಕ್ಕೆ ಸಾಮ್ರಾಜ್ಯವನ್ನು ವಿಸ್ತರಿಸಿದರು.[೮೧] ಇವರು ರಾಜಕೀಯ ಅವಶ್ಯಕತೆಗಳಿಗೆ ಅನುಗುಣವಾಗಿ, ರಾಷ್ಟ್ರಕೂಟ, ಗಂಗ, ಚಾಲುಕ್ಯ ಮುಂತಾದ ರಾಜಮನೆತನಗಳೊಂದಿಗೆ ರಾಜಕೀಯ ಹಾಗೂ ವೈವಾಹಿಕ ಸಂಬಂಧಗಳನ್ನು ಬೆಳೆಸಿದರು.

ನೊಳಂಬವಾಡಿ-೩೨೦೦೦ ಎಂಬ ಪ್ರಾಂತ್ಯವು ಅಷ್ಟೇನೂ ವಿಸ್ತಾರವಾಗಿರದಿದ್ದರೂ ಚಿಕ್ಕದಾಗಿರಲಿಲ್ಲ. ಈ ಪ್ರಾಂತ್ಯವು ಚಿತ್ರದುರ್ಗ ಜಿಲ್ಲೆಯ ಪ್ರದೇಶವನ್ನು ಒಳಗೊಂಡಂತೆ ಬೆಂಗಳೂರು, ಕೋಲಾರ, ತುಮಕೂರು, ಕಡೂರು, ಅನಂತಪುರ, ಧರ್ಮಪುರ ಹಾಗೂ ಚಿತ್ತೂರು ಜಿಲ್ಲೆಗಳನ್ನು ಒಳಗೊಂಡ ಭಾಗವಾಗಿದ್ದಿತು.[೮೨] ಇತ್ತೀಚೆಗೆ ದೊರೆತ ಶಾಸನಗಳಿಂದ, ಹಳೆಯ ಶಿವಮೊಗ್ಗ ಜಿಲ್ಲೆಯ ಭಾಗಗಳು ಸಹ ನೊಳಂಬವಾಡಿ-೩೨೦೦೦ದಲ್ಲಿ ಸೇರಿಕೊಂಡಿರುವುದು ತಿಳಿದುಬರುತ್ತದೆ.[೮೩] ಇಷ್ಟೊಂದು ವಿಸ್ತಾರವಾದ ಪ್ರಾಂತ್ಯವನ್ನು ನೊಳಂಬರು ತಮ್ಮ ಆಡಳಿತದ ಅನುಕೂಲಕ್ಕಾಗಿ ಅನೇಕ ಭಾಗಗಳನ್ನಾಗಿ ವಿಂಗಡಿಸಿದ್ದರು. ಅಂತಹ ವಿಂಗಡಣೆಗಳೆಂದರೆ ವಾಡಿ, ನಾಡು, ಊರು, ವಳ್ಳಿ, ಹಳ್ಳಿ ಇಂತಹ ಭಾಗಗಳ ಹೆಸರು ಅವರ ಶಾಸನಗಳಲ್ಲಿ ಕಂಡುಬಂದಿದೆ.[೮೪] ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಅಮ್ಮವಳ್ಳಿ, ಮುದರಿಕಲ್ಲು, ನೀರಗುಂದನಾಡು, ನೊಳಂಬರಿಗೆ-೧೦೦೦. ಇವು ಆಡಳಿತದ ವಿಭಾಗಗಳಾದರೆ, ಹಿರೇಮದುರೆ, ಚಿಕ್ಕಮದುರೆ, ದೊಡ್ಡುಳ್ಳಾರ್ಥಿ, ಗಂಜಿಗಟ್ಟೆ, ಬಾಗೇನಾಳು, ಧರ್ಮಪುರ, ಐಮಂಗಲ, ಸಿದ್ದಾಪುರ, ಮೊಳಕಾಲ್ಮೂರು ತುರುವನೂರು ಮುಂತಾದ ಗ್ರಾಮಗಳು ನೊಳಂಬರ ಶಾಸನಗಳನ್ನು ಹೊಂದಿದ ಗ್ರಾಮಗಳಾಗಿವೆ.[೮೫]

ಕ್ರಿ.ಶ.೮೧೦ಕ್ಕೆ ಸಂಬಂಧಿಸಿದ ದೊಡ್ಡಉಳ್ಳಾರ್ಥಿ ಬಳಿ ಇರುವ ಮೂರು ವೀರಗಲ್ಲುಗಳು ಸಿಂಹಪೋತ ಕಲಿ ನೊಳಂಬಾಡಿ ರಾಜನು ನೊಳಂಬವಾಡಿಯಲ್ಲಿ ಆಳುತ್ತಿದ್ದನೆಂದು ತಿಳಿಸಿವೆ. ಮೊದಲನೆಯ ವೀರಗಲ್ಲು ಓರ್ವ ಮುಖಂಡನ ಸಾವನ್ನು, ೨ನೇ ವೀರಗಲ್ಲು ದತ್ತಿ ನೀಡಿದ ಬಗ್ಗೆ,[೬೬] ೩ನೇ ವೀರಗಲ್ಲು ಸಿಂಹಪೋತನು ಶಿವಮಾರನ ಆಜ್ಞೆಯಂತೆ ಹೋರಾಟ ನಡೆಸಿದುದನ್ನು ತಿಳಿಸುತ್ತವೆ.[೬೭] ನಂತರ ಚಿಕ್ಕಮಧುರೆ ಶಾಸನಗಳು ನೊಳಂಬರು ರಾಷ್ಟ್ರಕೂಟರ ಸಾಮಂತರಾಗಿ ಕೆಲವು ನಾಡುಗಳ ಆಡಳಿತ ನಡೆಸುತ್ತಿದ್ದರೆಂದು ತಿಳಿಸುತ್ತವೆ.[೬೮] ಕ್ರಿ.ಶ.೮೯೦ರ ಹಿರಿಯೂರು ಶಾಸನವು ನೊಳಂಬಪಲ್ಲವ ರಾಜಮಹೇಂದ್ರನ ಆಳ್ವಿಕೆಯಲ್ಲಿ ಚಿತ್ತಪ್ಪನಕೆರೆ ನಿರ್ಮಾಣಗೊಂಡಿರುವುದನ್ನು ತಿಳಿಸುತ್ತದೆ.[೬೯] ಕ್ರಿ.ಶ.೯೧೮ರ ಬಾಗೇನಾಳು ಶಾಸನವು ಅಯ್ಯಪ್ಪದೇವನು ನೊಳಂಬವಾಡಿಯನ್ನು ಆಳುತ್ತಿದ್ದನೆಂಬ ಮಾಹಿತಿ ನೀಡುತ್ತದಲ್ಲದೆ, ಅಯ್ಯಪ್ಪದೇವನ ಕಾಲವನ್ನು ತಿಳಿಸುವ ಮೊದಲ ಶಾಸನವಿದು.[೭೦] ಕ್ರಿ.ಶ.೮ನೇ ಶತಮಾನದ ನೊಳಂಬ ಪಲ್ಲವರ ಶಾಸನ ತುರುವನೂರಿನಲ್ಲಿದ್ದು, ಈ ಶಾಸನದ ಬಳಿ ಇರುವ ರಾಮಲಿಂಗ ದೇವಾಲಯ ಮತ್ತು ನಂದಿ ಇವರ ಕಾಲದವೆಂದು ಹೇಳಲಾಗಿದೆ.[೭೧] ನೊಳಂಬ ರಾಜರು ತಮ್ಮ ಸಾಮಂತ ಅಧಿಕಾರಿಗಳು ಕೆಲವು ವೇಳೆ ಅವಿಧೇಯರಾಗಿ ನಡೆದುಕೊಂಡ ಸಾಮಂತನನ್ನು ಶಿಕ್ಷಿಸುವಂತೆ ಮತ್ತೊಬ್ಬ ಸಾಮಂತನಿಗೂ, ಮಂತ್ರಿಗೂ ಆಜ್ಞೆ ನೀಡುತ್ತಿದ್ದ ಬಗ್ಗೆ ಐಮಂಗಲ ಶಾಸನ ತಿಳಿಸುತ್ತದೆ.[೭೨] ಈ ಅಯ್ಯಪ್ಪ ಮಂಗಲನಿಂದಲೇ ಐಮಂಗಲ ಎಂಬ ಹೆಸರು ಬಂದಿರುವುದು. ಈ ಐಮಂಗಲದ ಪೂರ್ವಕ್ಕೆ ಸುಮಾರು ೪ ಕಿ.ಮೀ. ದೂರದಲ್ಲಿ ನೊಣಬಿ ಪಟ್ಟಣವೆಂಬ ಬೇಚರಾಕ್ ಗ್ರಾಮವಿದೆ. ಈ ಪ್ರದೇಶದಲ್ಲಿ ಹಾಳುಬಿದ್ದಿರುವ ಅವಶೇಷಗಳು ಹಾಗೂ ಇಲ್ಲಿಯ ಜಾನಪದ ಸಾಹಿತ್ಯದಿಂದ ನೊಣಬಿ ಪಟ್ಟಣವು ನೊಳಂಬ ರಾಜ್ಯಕ್ಕೆ ಸೇರುತ್ತೆನ್ನಬಹುದು.[೭೩]

ಮೊಳಕಾಲ್ಮೂರು ಶಾಸನವು ಕನಕಮಲ್ಲರಸನೆಂಬುವನು ರಾಮೇಶ್ವರ ದೇವಾಲಯಕ್ಕೆ ದತ್ತಿ ನೀಡಿದನೆಂದು ಹೇಳುವುದು.[೭೪] ಜಟಿಂಗ ರಾಮೇಶ್ವರ ಬೆಟ್ಟ[೭೫] ಮತ್ತು ಚಿತ್ರದುರ್ಗದ ಹುಲೆಗೊಂದಿ ಸಿದ್ಧೇಶ್ವರ ದೇವಾಲಯದ ಶಾಸನಗಳಲ್ಲಿ[೭೬] ತ್ರೈಲೋಕ್ಯ ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗದೇವ ನೀಡಿದ ದಾನದತ್ತಿಗಳ ವಿವರಣೆ ಕಂಡುಬರುವುದು. ಹೀಗೆ ಅನೇಕ ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಇವರ ಆಳ್ವಿಕೆಯನ್ನು ಸಮರ್ಥಿಸುತ್ತವೆ. ಕಲ್ಯಾಣ ಚಾಲುಕ್ಯರ ಪ್ರಭುತ್ವ ಕುಸಿದನಂತರ ನೊಳಂಬರು ಚೋಳರ ಸಾರ್ವಭೌಮತ್ವವನ್ನು ಅಂಗೀಕರಿಸಿ ಹೊಯ್ಸಳರು ಪ್ರವರ್ಧಮಾನಕ್ಕೆ ಬಂದನಂತರ ಹೊಯ್ಸಳರ ಸಾಮಂತರಾಗಿಯೂ ಪ್ರಭುತ್ವ ನಡೆಸಿದರು. ಇಮ್ಮಡಿ ಬಲ್ಲಾಳ ಚಕ್ರವರ್ತಿಯ ಮಹಾಸಾಮಂತ ಹೊಯ್ಸಳ ರಕ್ತಸಂಬಂಧಿ, ನರಸಿಂಗದೇವನ ಸಾಮಂತನಾಗಿ ಪ್ರಭುತ್ವ ನಡೆಸಿದ ಮಾಚಿದೇವನ ನಂತರ ನೊಳಂಬ

[illegible]

ಮನೆತನದ ಅರಸರು ಈ ಜಿಲ್ಲೆಯ ಯಾವ ಭಾಗದಲ್ಲಿಯೂ ಪ್ರಭುತ್ವ ನಡೆಸಿರುವ ಕುರುಹುಗಳಿಲ್ಲದಿರುವುದರಿಂದ ಈತನೇ ನೊಳಂಬ ಮನೆತನದ ಕೊನೆಯ ರಾಜನೆಂದು ಹೇಳಬಹುದು.[೯೭]

೨.೬.೬ ರಾಷ್ಟ್ರಕೂಟರು

ಚಿತ್ರದುರ್ಗ ಜಿಲ್ಲೆಯಲ್ಲಿ ರಾಷ್ಟ್ರಕೂಟರು ಕ್ರಿ.ಶ.ಸುಮಾರು ೭೯೮ರಿಂದ ೯೮೨ರವರೆಗೆ ಆಳ್ವಿಕೆ ಮಾಡಿದ್ದರೆಂದು ಕಂಡುಬರುತ್ತದೆ. ರಾಷ್ಟ್ರಕೂಟರ ದೊರೆಗಳಾದ ೩ನೇ ಗೋವಿಂದ, ೨ನೇ ಕೃಷ್ಣ, ಅಮೋಘವರ್ಷ, ೩ನೇ ಕೃಷ್ಣ ಮುಂತಾದ ರಾಜರ ಕಾಲದಲ್ಲಿ ಅವರ ಮೂಲಶಾಖೆಯ ಜೊತೆಗೆ ಉಪಶಾಖೆಗಳು ಇಲ್ಲಿ ಆಳ್ವಿಕೆ ನಡೆಸುತ್ತಿದ್ದವೆನ್ನುವುದಕ್ಕೆ ಶಾಸನಗಳು ಲಭ್ಯವಾಗಿವೆ. ಸೂಳ್ಗಲ್ಲು,[೯೮] ಸೂಳಿಂಗಲ್ ೨೦,[೯೯] ಕದಂಬಳಿಗೆ - ೧೦೦೦,[೧೦೦] ಮಣ್ಣಲೆ - ೧೦೦೦,[೧೦೧] ನೊಳಂಬಳಿಗೆ[೧೦೨] ಮುಂತಾದ ಪ್ರದೇಶಗಳು ಇವರ ಆಳ್ವಿಕೆಗೆ ಒಳಪಟ್ಟಿದ್ದವು. ಚಳ್ಳಕರೆಯ ಚಿಕ್ಕಮಧುರೆಯ ಶಾಸನಗಳು ನೊಳಂಬ ರಾಜನಾದ ಚಾರುಪೊನ್ನೇರನು ಜಗತ್ತುಂಗ ಪ್ರಭೂತವರ್ಷ, ಪ್ರತಾಪಲೋಕ ಮತ್ತು ಶ್ರೀವಲ್ಲಭ ಗೋವಿಂದನ ಸಾಮಂತನಾಗಿ ಬಾಳಿದುದನ್ನು ಹೇಳುತ್ತವೆ.[೧೦೩] ಕದಂಬ ಶಾಸನದಿಂದ ಕ್ರಿ.ಶ.೮೧೫ರಲ್ಲಿ ಸಿಂಹಪೋತನ ಮಗ ಪರಮೇಶ್ವರ ಪಲ್ಲವರಾದಿರಾಜ ಅಥವಾ ಚಾರುಪನ್ನೇರ ಮತ್ತು ಅವನ ಮಗ ಪಲ್ಲವಮಲ್ಲರು ಅನೇಕ ಬಿರುದುಗಳನ್ನು ಪಡೆದು ರಾಷ್ಟ್ರಕೂಟರ ದೊರೆ ಗೋವಿಂದನ ಸಾಮಂತರಾಗಿ ನೊಳಂಬಾಳಿಗೆ, ನೀಲ್ಗುಂದ ನಾಡನ್ನು ಆಳುತ್ತಿದ್ದಾಗ ಅವನ ರಾಣಿಯರು ಶಿವಾಲಯಕ್ಕೆ ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ.[೧೦೪]

ರಾಷ್ಟ್ರಕೂಟರ ಕಾಲದಲ್ಲಿ ಕದಂಬಳಿಗೆ ಸಾಸಿರ ಪ್ರದೇಶದಲ್ಲಿ ಅಂತರ್ಗತವಾಗಿದ್ದ ಜಿಲ್ಲೆಯ ಅನೇಕ ಗ್ರಾಮಗಳ ಉಲ್ಲೇಖಗಳು ಕಂಡುಬರುತ್ತವೆ. ಈ ಪ್ರದೇಶವನ್ನು ರಾಷ್ಟ್ರಕೂಟರ ಮಹಾ ಸಾಮಂತಾಧಿಪತಿಗಳಾದ ಕನ್ನಯ್ಯ ಅಥವಾ ಕನ್ನರಸ, ಸೂದ್ರಕಯ್ಯ, ಪಡಿಯಂಕದೇವ ಮುಂತಾದವರು ಆಳ್ವಿಕೆ ಮಾಡಿರುವರು. ಈ ಕದಂಬಳಿಗೆ ಸಾಸಿರ ಪ್ರದೇಶವು, ಚಿತ್ರದುರ್ಗ ಜಿಲ್ಲೆ ಮತ್ತು ಆಸುಪಾಸಿನ ಪ್ರದೇಶವಾಗಿರಬೇಕೆಂಬ ಅಭಿಪ್ರಾಯವಿದೆ.[೧೦೫] ಈ ಕನ್ನರಸನ ವಂಶಾವಳಿಯನ್ನು ತಿಳಿಸುವ ಶಾಸನ ಚಿತ್ರದುರ್ಗ ತಾಲೂಕಿನ ಕೋಗುಂಡೆ ಗ್ರಾಮದಲ್ಲಿದೆ.[೧೦೬]

ಓೀಗೆ ಜಿಲ್ಲೆಯ ಶಾಸನಗಳು ರಾಷ್ಟ್ರಕೂಟರ ಆಡಳಿತ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮುಂತಾದ ವ್ಯವಸ್ಥೆಗಳನ್ನು ನಿರೂಪಿಸುತ್ತವೆ. ಕ್ರಿ.ಶ.೯೭೩ರಲ್ಲಿ ರಾಷ್ಟ್ರಕೂಟರ ಗದ್ದುಗೆಯನ್ನೇರಿದ ರಾಷ್ಟ್ರಕೂಟ ದೊರೆ

೨ನೇ ಕರ್ಕನನ್ನು ಕಲ್ಯಾಣ ಚಾಲುಕ್ಯ ವಂಶದ ಎರಡನೇ ತೈಲಪನು ಅಧಿಕಾರದಿಂದ ಕೆಳಗಿಳಿಸಿ ಚಾಲುಕ್ಯ ವಂಶದ ವೈಭವವನ್ನು ಮತ್ತೆ ಮರುಸ್ಥಾಪಿಸಿದರು.

೨.೬.೭ ಕಲ್ಯಾಣಿ ಚಾಲುಕ್ಯರು

ಕಲ್ಯಾಣಿ ಚಾಲುಕ್ಯರ ಇತಿಹಾಸ ಆರಂಭವಾಗುವುದು ನಮ್ಮ ಜಿಲ್ಲೆಯಲ್ಲಿ ನೊಳಂಬವಾಡಿ-೩೨೦೦೦ ಎಂಬ ಪ್ರಾಂತ್ಯದಿಂದ ಎಂದು ಹೇಳಬಹುದು. ಬಾದಾಮಿ ಚಾಲುಕ್ಯರ ಕಾಲದಿಂದಲೂ ಈ ಪ್ರದೇಶದ ಕಲಹಕ್ಕೆ ದಾರಿ ಮಾಡಿಕೊಟ್ಟಿತು. ನೊಳಂಬವಾಡಿ-೩೨೦೦೦ದ ಮೇಲೆ ಅಧಿಕಾರ ಸ್ಥಾಪಿಸಲು ಉತ್ತರ ಮತ್ತು ದಕ್ಷಿಣದ ಮನೆತನಗಳ ಮಧ್ಯೆ ಕಲಹಗಳು ಏರ್ಪಡುತ್ತಿದ್ದವು. ಬಾದಾಮಿ ಚಾಲುಕ್ಯರಿಗೆ ಪಲ್ಲವರು ಕಡು ವೈರಿಗಳಾದರೆ, ಕಲ್ಯಾಣ ಚಾಲುಕ್ಯರಿಗೆ ಚೋಳರು ಕಡುವೈರಿಗಳಾಗಿದ್ದರು. ತೈಲಪನ ನಂತರ ಅಧಿಕಾರಕ್ಕೆ ಬಂದ ಸತ್ಯಾಶ್ರಯ ಮತ್ತು ೫ನೇ ವಿಕ್ರಮಾದಿತ್ಯರಿಗೆ ಸಂಬಂಧಿಸಿದ ಶಾಸನಗಳು ಜಿಲ್ಲೆಯಲ್ಲಿ ದೊರಕುವುದಿಲ್ಲ. ಬಹುತೇಕ ಆ ವೇಳೆಗಾಗಲೇ ಚೋಳರು ದಕ್ಷಿಣದಲ್ಲಿ ತುಂಬಾ ಪ್ರಾಮುಖ್ಯತೆ ಗಳಿಸಿ ಗಂಗಾವಾಡಿ ಮತ್ತು ನೊಳಂಬವಾಡಿಗಳನ್ನು ಜಯಿಸಿದಂತೆ ತೋರುತ್ತದೆ. ಚೋಳರಿಗೆ ಸಂಬಂಧಿಸಿದ ಶಾಸನಗಳು ಹಿರಿಯೂರು,[೧೦೭] ಚಳ್ಳಕೆರೆ,[೧೦೮] ಮೊಳಕಾಲ್ಮೂರು[೧೦೯] ಪ್ರದೇಶಗಳಲ್ಲಿ ಕಂಡುಬಂದಿವೆ.

ಕ್ರಿ.ಶ.೧೦೧೫ರಿಂದ ೧೦೪೪ರಲ್ಲಿ ಆಳ್ವಿಕೆ ನಡೆಸಿದ ಜಯಸಿಂಹನ ಅನೇಕ ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಈತನು ಜಗದೇಕಮಲ್ಲನೆಂಬ ಬಿರುದು ಪಡೆದು ಚೋಳರನ್ನು ಹಿಂದಕ್ಕೆ ಅಟ್ಟಿ ರಾಜ್ಯವನ್ನು ವಿಸ್ತರಿಸಿದ್ದನು. ಈತನು ರೊದ್ದನಾಡು, ಸೀರೆನಾಡು, ಹರುವೆನಾಡು, ಕಣೆಯಕಲ್ಲು ನಾಡು ಮುಂತಾದ ವನ್ನು ಆಳುತ್ತಿದ್ದನೆಂದು ಚಳ್ಳಕೆರೆ ತಾಲೂಕಿನ ಓಬಳಾಪುರದ ಶಾಸನದಿಂದ ಕಂಡುಬರುವುದು.[೧೧೦] ಇದೇ ಕಾಲದಲ್ಲಿ ಕ್ರಿ.ಶ.೧೦೭೩ರಿಂದ ೧೧೪೩ವರೆಗೆ ಉಚ್ಚಂಗಿ ಪಾಂಡ್ಯರು ಚಾಲುಕ್ಯರ ಸಾಮಂತರಾಗಿ ಅಧಿಕಾರ ನಡೆಸಿದರು. ಕ್ರಿ.ಶ.೧೦೭೩ರ ಚಿತ್ರದುರ್ಗ ಶಾಸನವೊಂದು ಚಿತ್ರದುರ್ಗದಲ್ಲಿ ಕೋಟೆಯಿದ್ದ ವಿಚಾರವನ್ನು ತಿಳಿಸುತ್ತದೆ.[೧೧೧] ಬಹುಶಃ ಚಿತ್ರದುರ್ಗದ ಕೋಟೆಯ ವಿಷಯ ಶಾಸನೋಕ್ತವಾಗಿರುವುದು ಇದೇ ಮೊದಲು. ಅಂದರೆ ಕ್ರಿ.ಶ.೧೧ನೇ ಶತಮಾನಕ್ಕಿಂತ ಹಿಂದೆಯೇ ಇಲ್ಲಿ ಕೋಟೆಯಿತ್ತೆನ್ನುವ ವಿಚಾರ ಈ ಶಾಸನದಿಂದ ತಿಳಿದುಬರುತ್ತದೆ. ಗಾರೆಹಟ್ಟಿಯ ೧೧೨೪ರ ಮತ್ತೊಂದು ಶಾಸನವು ತ್ರಿಭುವನಮಲ್ಲದೇವನ ಮಹಾ ಮಾಂಡಳಿಕ ಪಾಂಡ್ಯದೇವರು ನೊಳಂಬವಾಡಿಯನ್ನು ಚೋಳಂಗಲ್ಲು-೭೦ ನಾಡಿನ ಮಹಾಸಾಮಂತನೊಬ್ಬ ಇಲ್ಲಿ ಚೋಳೇಶ್ವರ ಲಿಂಗವನ್ನು ಸ್ಥಾಪಿಸಿರುವ ಉಲ್ಲೇಖವಿದೆ.[೧೧೨] ಕ್ರಿ.ಶ. ೧೧೮೪ರ ಶಾಸನದಲ್ಲಿ

[illegible]

ಚಿತ್ರದುರ್ಗಕ್ಕೆ ಬೆಮ್ಮತ್ತನೂರು ನೆಲೆವೀಡು ಎಂದು ಉಲ್ಲೇಖಿಸಿರುವುದರಿಂದ ಈ ವೇಳೆಗಾಗಲೇ ಸೂಳ್ಗಲ್ಲುನಾಡು, ಬೆಮ್ಮತ್ತನೂರು ನೆಲೆವೀಡಾಗಿ ಪರಿವರ್ತನೆಗೊಂಡಂತೆ ಕಂಡುಬರುತ್ತದೆ.

ಕಲ್ಯಾಣಿ ಚಾಲುಕ್ಯರಲ್ಲಿ ಶ್ರೇಷ್ಠನಾದ ೬ನೇ ವಿಕ್ರಮಾದಿತ್ಯನು ಕ್ರಿ.ಶ.೧೦೭೬ರಿಂದ ೧೧೨೬ರವರೆಗೆ ಆಳ್ವಿಕೆ ನಡೆಸಿದನು. ಈತನಿಗೆ ಪೆರ್ಮಾಡಿ, ತ್ರಿಭುವನಮಲ್ಲ ಮುಂತಾದ ಬಿರುದುಗಳುಳ್ಳ ಶಾಸನಗಳು ಸಾಕಷ್ಟು ಸಂಖ್ಯೆಯಲ್ಲಿ ಈ ಜಿಲ್ಲೆಯಲ್ಲಿ ದೊರೆಯುತ್ತವೆ.[೧೧೩] ಈತನು ಚೋಳರೊಡನೆ ಕೈಗೊಂಡ ಯುದ್ಧಗಳಲ್ಲಿ ಸಾಮಂತ ಅರಸರಾದ ಉಚ್ಚಂಗಿ ಪಾಂಡ್ಯರು ಹೆಚ್ಚಿನ ಸಹಾಯ ನೀಡಿದರು. ವಿಕ್ರಮಾದಿತ್ಯನ ತರುವಾಯ ಅಧಿಕಾರಕ್ಕೆ ಬಂದ ವಿಕ್ರಮಾದಿತ್ಯ ಮತ್ತು ಸೋಮೇಶ್ವರ ದೊರೆಗಳ ಕಾಲದಲ್ಲಿ ವೀರಪಾಂಡ್ಯನು ನೊಳಂಬವಾಡಿಗೆ ಮಂಡಲೇಶ್ವರನಾಗಿದ್ದನೆಂದು ಶಾಸನಗಳು ಹೇಳುತ್ತವೆ.[೧೧೪] ಇವನ ತರುವಾಯ ಬಂದ ರಾಜರು ಸಮರ್ಥವಾದ ಆಳ್ವಿಕೆಯಲ್ಲಿ ನೀಡಲು ವಿಫಲವಾದುದರಿಂದ ಅನೇಕ ಸಾಮಂತರು ಸ್ವತಂತ್ರರಾದರು. ನಂತರ ಹೊಯ್ಸಳರು ಅಧಿಕಾರಕ್ಕೆ ಬಂದರು.

೨.೬.೮ ಹೊಯ್ಸಳರು

ಕ್ರಿ.ಶ.೧೧ನೇ ಶತಮಾನದಿಂದ ೧೪ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ಹೊಯ್ಸಳರು ಕರ್ನಾಟಕದ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನವನ್ನು ಉಳಿಸಿಕೊಂಡು ಬಂದಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ದೊರಕಿರುವ ಸುಮಾರು ೬೫ಕ್ಕೂ ಹೆಚ್ಚು ಶಾಸನಗಳು ಅವರ ಆಳ್ವಿಕೆಯನ್ನು ಸಮರ್ಥಿಸುತ್ತವೆ. ಕ್ರಿ.ಶ. ಸುಮಾರು ೧೨೧೦ರ ವೇಳೆಗೆ ಹೊಯ್ಸಳ ಇಮ್ಮಡಿ ವೀರಬಲ್ಲಾಳನು ನೊಳಂಬವಾಡಿಯ ಪೂರ್ವ ಮತ್ತು ದಕ್ಷಿಣ ಭಾಗಗಳನ್ನು ಆಕ್ರಮಿಸಿದ್ದನು. ಚಿಮ್ಮತ್ತೂರು ನಗರವು ಹೊಯ್ಸಳರಿಗೆ ಸೇರಿದ ನೊಳಂಬವಾಡಿಯ ಭಾಗದ ರಾಜಧಾನಿಯಾಯಿತು.[೧೧೫] ಈ ಭಾಗವು ಹೊಯ್ಸಳ ದಂಡನಾಯಕರ ನೆಲೆವೀಡಾಗಿ ಮುಂದುವರಿಯಿತು. ವರ್ತಕರು ಮುಂತಾದ ನಖರ ವರ್ಗಗಳಿಂದ ಕೂಡಿದ ಬೆಮ್ಮತ್ತೂರು ಪಟ್ಟಣವೆಂಬ ಅಭಿದಾನವನ್ನು ಇದು ಪಡೆದುಕೊಂಡಿತು. ಹಾಗೆಯೇ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಂಡು ಹೊಯ್ಸಳ ಸಾಮ್ರಾಜ್ಯದ ಉತ್ತರಗಡಿಯ ಒಂದು ಮುಖ್ಯ ದುರ್ಗವಾಗಿ ರೂಪ ತಾಳತೊಡಗಿತು. ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿದ ಶಾಸನವೊಂದು ಇಲ್ಲಿ ಕೋಟೆಯ ನಿರ್ಮಾಣವಾಗಿದ್ದ ಬಗ್ಗೆ ಸುಳಿವು ನೀಡುತ್ತದೆ ಯಾದರೂ ಕ್ರಿ.ಶ.೧೨೩೫ರ ಶಾಸನವು ಮೊದಲಬಾರಿಗೆ ಬೆಮ್ಮತ್ತನೂರು ದುರ್ಗ ಎಂಬ ಸ್ಪಷ್ಟ ಉಲ್ಲೇಖವನ್ನು ನೀಡುತ್ತದೆ.[೧೧೬]

[illegible]

[illegible]

ಬೆಮ್ಮತ್ತನೂರು ದುರ್ಗವು ಕ್ರಿ.ಶ.ಸುಮಾರು ೧೩ನೇ ಶತಮಾನದ ವೇಳೆಗೆ ಸ್ವತಂತ್ರ ವಿಭಾಗದ ಕೇಂದ್ರಸ್ಥಳವಾಗಿ ನಾಡಿನ ರೂಪವನ್ನು ತಾಳಿತೆನ್ನಬಹುದು. ಬೆಮ್ಮತ್ತೂರು ನಾಡನ್ನು ಉಲ್ಲೇಖಿಸುವ ಶಾಸನಗಳು ಇಂದಿನ ಚಿತ್ರದುರ್ಗ[೧೧೭] ಮತ್ತು ಹುಲಿಗೊಂದಿ[೧೧೮] ಪ್ರದೇಶದಲ್ಲಿ ಕಂಡುಬರುತ್ತವೆ. ಜೊತೆಗೆ ಇವರ ಕಾಲದಲ್ಲಿ ನಿರ್ಮಾಣಗೊಂಡ ಕೆರೆ, ಕಾಲುವೆ, ದೇವಾಲಯ, ಅಗ್ರಹಾರ ಇತ್ಯಾದಿಗಳ ಬಗ್ಗೆ ಈ ಪ್ರದೇಶದ ಶಾಸನಗಳು ತಿಳಿಸುತ್ತವೆ. ಚಿತ್ರದುರ್ಗ ಜಿಲ್ಲೆಯ ಹೊಯ್ಸಳರ ರಾಜಪ್ರತಿನಿಧಿಗಳಾಗಿ ಆಳ್ವಿಕೆ ಮಾಡಿದವರಲ್ಲಿ ಮುಖ್ಯರೆಂದರೆ, ಹಿರಿಯಣ್ಣದಣಾಯಕ, ಸೋಮನಾಯಕ, ನರಸಿಂಹನಾಯಕ, ಪೆರುಮಾಳ ಮಂತ್ರಿ, ಬಲ್ಲಾಳದ ನಾಯಕ, ಸಿಂಗಯ್ಯನಾಯಕ ಮುಂತಾದವರು ಪ್ರಮುಖರಾಗಿದ್ದಾರೆ.[೧೧೯] ಜಿಲ್ಲೆಯಲ್ಲಿ ಕ್ರಿ.ಶ.೧೧೭೩ರಿಂದ ೧೨೨೦ರಷ್ಟು ಆಳ್ವಿಕೆ ಮಾಡಿದ ವೀರಬಲ್ಲಾಳನ ಶಾಸನವೇ ಹೊಯ್ಸಳ ಮನೆತನದ ಪ್ರಥಮ ಶಾಸನವಾಗಿದ್ದರೂ ಬಲ್ಲಾಳನಗಿಂತ ಮುಂಚೆಯೇ ವಿಷ್ಣುವರ್ಧನನು ನೊಳಂಬವಾಡಿ ಪ್ರದೇಶವನ್ನು ಗೆದ್ದುಕೊಂಡನೆಂದು ಬೇಲೂರಿನ ಶಾಸನವೊಂದರಿಂದ ತಿಳಿದುಬರುತ್ತದೆ.[೧೨೦] ವಿಷ್ಣುವರ್ಧನನು ಕರ್ನಾಟಕದ ವಿವಿಧ ರಾಜಕೀಯ ಶಕ್ತಿಗಳನ್ನು ಹೊಯ್ಸಳ ಲಾಂಛನದಡಿಯಲ್ಲಿ ಒಂದುಗೂಡಿಸಬೇಕೆಂಬ ಸಂಕಲ್ಪದಿಂದ ಅನೇಕ ದಂಡೆಯಾತ್ರೆಗಳನ್ನು ಅವನು ಕೈಗೊಂಡಿದ್ದನು. ಕ್ರಿ.ಶ.ಸು.೧೧೧೭ರಲ್ಲಿ ಉಚ್ಚಂಗಿ ಪಾಂಡ್ಯರನ್ನು ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ದುಮ್ಮಿ ಎಂಬ ಸ್ಥಳದಲ್ಲಿ ಸೋಲಿಸಿ, ವಿಶೇಷ ಕಪ್ಪಕಾಣಿಕೆಯನ್ನು ಸ್ವೀಕರಿಸಿ ತನ್ನ ರಾಜ್ಯದ ಗಡಿಗಳನ್ನು ವಿಸ್ತರಿಸಿದನು. ಹೀಗೆ ವಿಷ್ಣುವರ್ಧನನು ಚಿತ್ರದುರ್ಗ ಜಿಲ್ಲೆಯಲ್ಲಿ ಪರೋಕ್ಷವಾಗಿ ಆಳ್ವಿಕೆ ನಡೆಸಿದ್ದುದನ್ನು ಕಾಣಬಹುದು.[೧೨೧]

ವಿಷ್ಣುವರ್ಧನನ ತರುವಾಯ ಹೊಯ್ಸಳ ರಾಜವಂಶದಲ್ಲಿ ಕಾಣಿಸಿಕೊಂಡ ಮತ್ತೊಬ್ಬ ಪ್ರಖ್ಯಾತ ಅರಸ ೨ನೇ ಬಲ್ಲಾಳ. ಇವನಿಗೆ 'ವೀರಬಲ್ಲಾಳ' ಎಂಬ ಮತ್ತೊಂದು ಹೆಸರಿತ್ತು. ಈತನ ಆಳ್ವಿಕೆಗೆ ಸಂಬಂಧಿಸಿದ ೧೦ಕ್ಕಿಂತ ಹೆಚ್ಚು ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿವೆ. ಕ್ರಿ.ಶ.೧೧೭೩ರಿಂದ ೧೨೨೦ರವರೆಗೆ ಆಳ್ವಿಕೆ ನಡೆಸಿದ ಬಲ್ಲಾಳನು ಇಡೀ ಭಾರತ ಪರ್ಯಾಯ ದ್ವೀಪಕ್ಕೆ ಪ್ರಬಲನಾಗಲು ಬಯಸಿದನು. ಕ್ರಿ.ಶ.೧೩ನೇ ಶತಮಾನದ ಆದಿಯಲ್ಲಿ ಉಚ್ಚಂಗಿ ಪಾಂಡ್ಯರನ್ನು ಹತ್ತಿಕ್ಕಿ ನೊಳಂಬವಾಡಿ ರಾಜ್ಯದ ಪೂರ್ವ ಮತ್ತು ದಕ್ಷಿಣ ಭಾಗಗಳನ್ನು ಆಕ್ರಮಿಸಿದನು. ಆಗ ಬೆಮ್ಮತ್ತನೂರು ನಗರವು ಈ ರಾಜ್ಯದ ರಾಜಧಾನಿಯಾಯಿತು. ದಂಡಾಧಿಪತಿಗಳು, ಮಹಾಪ್ರಧಾನರು ಅಥವಾ ರಾಜಸಂಬಂಧಿಗಳೂ ಈ ಹೊಸ ರಾಜ್ಯದಲ್ಲಿ ರಾಜಪ್ರತಿನಿಧಿಗಳಾಗಿದ್ದರು. ಈತನ ಆಳ್ವಿಕೆಯ ಕಾಲದಲ್ಲಿದ್ದ ಮಂತ್ರಿ ಬೇಬೆಯ ದಣ್ಣಾಯಕ. ಬಲ್ಲಾಳನಿಗೆ ಸಂಬಂಧಪಟ್ಟಂತೆ ನಮ್ಮ ಜಿಲ್ಲೆಯಲ್ಲಿ ಸುಮಾರು ೧೦ಕ್ಕಿಂತ ಹೆಚ್ಚು ಶಾಸನಗಳು

[illegible]

ದೊರಕಿವೆ. ಬೇಬೆಯ ದಣ್ಣಾಯಕ[೧೨೨] ಸೋಮದಣ್ಣಾಯಕರು[೧೨೩] ಬಲ್ಲಾಳನ ಆಪ್ತ ಮಂತ್ರಿಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಚಿತ್ರದುರ್ಗದ ಕೋಗುಂಡೆ ಶಾಸನವು ಬಲ್ಲಾಳನಿಗೆ ಇದ್ದ ಬಿರುದಾವಳಿಗಳನ್ನು ಪ್ರಸ್ತಾಪಿಸುವುದಲ್ಲದೆ, ಹೊಯ್ಸಳ ವಂಶವನ್ನು ಪ್ರಸ್ತಾಪಿಸುತ್ತದೆ.[೧೨೪] ಕ್ರಿ.ಶ.೧೨೧೫ರ ಮೊಳಕಾಲ್ಮೂರು ವೀರಗಲ್ಲು ಶಾಸನವು ಹೊಯ್ಸಳರ ಸಾಮಾಜಿಕ ಜೀವನದ ಬಗ್ಗೆ ಬೆಳಕು ಚೆಲ್ಲುತ್ತದೆ. ಚಕ್ರವರ್ತಿ ಬಲ್ಲಾಳನು ಹನೆಯ ಕೋಟೆಯನ್ನು ಸಾಧಿಸಿ ವಿಜಯಗಿರಿ ಎಂಬ ಪಟ್ಟಣವನ್ನು ಸ್ಥಾಪಿಸಿದನು. ಇದೇ ಸಂದರ್ಭದಲ್ಲಿ ಬಲ್ಲಾಳನು ಮೊದಲೇ ಇದ್ದ ಕೋಟೆಯನ್ನು ವಿಸ್ತರಿಸಿ ಬಲಪಡಿಸಿದನು. ತರುವಾಯ ತನ್ನ ನೆಚ್ಚಿನ ಭಂಟನೂ ಹಾಲಿವಾಣರ ಸಾಮಂತನೂ ಆದ ಸಿವೋದನಾಯಕನನ್ನು ಕೋಟೆ ಕಾವಲಿಗಾಗಿ ನೇಮಿಸಿ, ತಾನು ದ್ವಾರಸಮುದ್ರದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಈ ಮಧ್ಯ ಸಿವೋದನಾಯಕನ ತಾಯಿ ನಾಗತಿಯು ವಿಜಯಗಿರಿಗೆ ಬಂದು ನೆಲೆಸಿದಳು. ಶಿವಭಕ್ತೆಯಾದ ನಾಗತಿಯು ಅನೇಕ ದಾನಧರ್ಮಗಳನ್ನು ಕೈಗೊಂಡು ಸ್ವರ್ಗಸ್ಥಳಾದಳು. ಈ ನಾಗತಿಯ ಸೇವಕಿಯಾದ ಹೊನ್ನಿಯು ತನ್ನ ಯಜಮಾನಿಯು ಮಡಿದ ಮೇಲೆ ತಾನು ಜೀವಿಸಬಾರದೆಂದು ನಿರ್ಧರಿಸಿ ಸಿಡಿತಲೆ ಕೊಟ್ಟು, ಮರಣಹೊಂದಿ ಸುರಲೋಕವನ್ನು ಸೇರಿದ್ದಳು.[೧೨೫]

ಬಲ್ಲಾಳನ ತರುವಾಯ ಇವನ ಮಗ ೩ನೇ ನರಸಿಂಹನು ಕ್ರಿ.ಶ. ೧೨೨೦-೧೨೩೫ರವರೆಗೆ ರಾಜ್ಯಭಾರ ಮಾಡಿದನು. ಈತನಿಗೆ ಸಂಬಂಧಿಸಿದ ಶಾಸನಗಳು ಜಿಲ್ಲೆಯ ಹೊಳಲ್ಕೆರೆ, ಚಿತ್ರದುರ್ಗ ಮುಂತಾದೆಡೆ ಕಂಡುಬಂದಿವೆ. ಕ್ರಿ.ಶ.೧೨೨೮ರ ಬಾಗೂರು ಹೋಬಳಿ, ಮಳಲಿ ಗ್ರಾಮದ ಈಶ್ವರ ದೇವಾಲಯದ ವೀರಗಲ್ಲು, ಇಮ್ಮಡಿ ನರಸಿಂಹನು ಆಳುತ್ತಿದ್ದಾಗ ನಡೆದ ತುರುಗಾಳಗದಲ್ಲಿ ಚಿಕ್ಕಬೋವನೆಂಬುವನು ವೀರಸ್ವರ್ಗವನ್ನು ಪಡೆದ ವಿಚಾರವನ್ನು ತಿಳಿಸುತ್ತದೆ.[೧೨೬] ಕ್ರಿ.ಶ.೧೨೩೫ರಲ್ಲಿ ನರಸಿಂಹನು ಮರಣಹೊಂದಿದ ತರುವಾಯ ಸೋಮೇಶ್ವರನು ಮೂಲ ಹೊಯ್ಸಳ ನಾಡನ್ನು ವಹಿಸಿಕೊಂಡನು. ಈತನು ಕ್ರಿ.ಶ.೧೨೩೫ ರಿಂದ ೧೨೬೩ರವರೆಗೆ ರಾಜ್ಯಭಾರ ಮಾಡುತ್ತಿರುವ ಸಂದರ್ಭದಲ್ಲಿ ಈತನ ಮಂತ್ರಿಗಳಾದ ಸೋವಿ ದಣ್ಣಾಯಕನು ಚಿತ್ರದುರ್ಗ ಬೆಟ್ಟದ ಮೇಲೆ ಇರುವ ಪಲ್ಗುಣೇಶ್ವರ ದೇವಾಲಯದ ಮುಂದಿನ ಮಂಟಪವನ್ನು ಮಾಡಿಸಿದನೆಂದು ಶಾಸನವೊಂದು ಹೇಳುತ್ತದೆ.[೧೨೭]

ಸೋಮೇಶ್ವರನು ಕ್ರಿ.ಶ.೧೨೬೩ರಲ್ಲಿ ಮರಣ ಹೊಂದುವ ಮೊದಲೇ ಕ್ರಿ.ಶ.೧೨೫೪ರಲ್ಲಿ ಅವನ ಮಗ ಮುಮ್ಮಡಿ ನರಸಿಂಹನು ಯುವರಾಜನಾಗಿ ಪಟ್ಟಾಭಿಷಕ್ತನಾದನು. ಈತನು ಜಿಲ್ಲೆಯ ಹೊಳಲ್ಕೆರೆ, ಚಿತ್ರದುರ್ಗ, ಹಿರಿಯೂರು ಪ್ರಾಂತ್ಯಗಳಲ್ಲಿ ಅಧಿಕಾರ ನಡೆಸಿರುವುದು ಕಂಡುಬರುತ್ತದೆ. ಮುಮ್ಮಡಿ

ನರಸಿಂಹನ ಪ್ರಸಿದ್ಧ ಮಂತ್ರಿ ಪೆರುಮಾಳದೇವ ದಣ್ಣಾಯಕನು ಪ್ರಜಾಹಿತ ಕಾರ್ಯಗಳಲ್ಲಿ ಅತ್ಯಂತ ಆಸಕ್ತನಾಗಿದ್ದು ಈತನಿಗೆ ಸಂಬಂಧಿಸಿದ ಸುಮಾರು ೧೫ಕ್ಕೂ ಹೆಚ್ಚು ಶಾಸನಗಳು ಚಿತ್ರದುರ್ಗ ಪರಿಸರದಲ್ಲಿ ದೊರಕಿವೆ.[೧೨೮] ಕ್ರಿ.ಶ.೧೨೮೫ರಲ್ಲಿ ಚಿತ್ರದುರ್ಗದ ಬೆಟ್ಟದ ಗೋಪಾಲಸ್ವಾಮಿ ಹೊಂಡದ ಮೇಲಿನ ಬಂಡೆಯೊಂದರ ಶಾಸನದಲ್ಲಿ ಮಹಾಪ್ರಧಾನ ಪೆರುಮಾಳದೇವ ದಣ್ಣಾಯಕರು ಪೆರುಮಾಳಪುರವಾಗಿ ಮಾಡಿದ ಬ್ರಹ್ಮಪುರಗಿರಿ ಎಂದು ಹೇಳುತ್ತದೆ.[೧೨೯] ಆದರೆ ಇದು ಬ್ರಹ್ಮಪುರಿಗಿರಿ ಅಲ್ಲ ಬ್ರಹ್ಮಪುರಿಗೇರಿ ಎಂಬ ಅಭಿಪ್ರಾಯವನ್ನು ಇತ್ತೀಚೆಗೆ ವ್ಯಕ್ತಪಡಿಸಲಾಗಿದೆ.[೧೩೦] ಶಾಸನದಲ್ಲಿ ವ್ಯಕ್ತವಾಗಿರುವ ಪೆರುಮಾಳಪುರ ಚಿತ್ರದುರ್ಗಕ್ಕೆ ಇದ್ದ ಪ್ರಾಚೀನ ಹೆಸರುಗಳಲ್ಲಿ ಇದು ಕೂಡ ಒಂದು ಎಂಬ ಅಭಿಪ್ರಾಯವಿತ್ತು.[೧೩೧] ಆದರೆ ಬಿ.ರಾಜಶೇಖರಪ್ಪನವರು ಪೆರುಮಾಳಪುರ ಚಿತ್ರದುರ್ಗಕ್ಕೆ ಇದ್ದ ಹೆಸರಲ್ಲ. ದಣ್ಣಾಯಕನು ತಾನು ಸ್ಥಾಪಿಸಿದ್ದ ಬ್ರಹ್ಮಪುರಿಗೇರಿಗೆ ಮಾತ್ರ ಆ ಹೆಸರಿಟ್ಟನೇ ಹೊರತು ಇಡೀ ಬೆಮ್ಮತ್ತೂರಿಗಲ್ಲವೆಂದು ಹೇಳಿದ್ದಾರೆ.[೧೩೨] ಲಕ್ಷ್ಮಣ್ ತೆಲಗಾವಿಯವರು ಬ್ರಹ್ಮಪುರಿಗೇರಿ ಬೇರೆಯಾಗಿದ್ದರೂ ಪೆರುಮಾಳಪುರದ ಸ್ಥಾಪನೆಯ ಬಗ್ಗೆ ಸಮರ್ಥಿಸಿಕೊಂಡಿದ್ದಾರೆ.[೧೩೩] ಈ ಅವಧಿಯಲ್ಲಿನ ಶಾಸನಗಳು ಚಿತ್ರದುರ್ಗವನ್ನು ಬೆಂಮತ್ತನಕಲ್ಲುನಾಡು,[೧೩೪] ಬೆಂಮತರಕಲ್ಲುಸೀಮೆ,[೧೩೫] ಬೆಮ್ಮತ್ತೂರುಪಟ್ಟಣ[೧೩೬] ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ. ಒಟ್ಟಾರೆ ಪೆರುಮಾಳೆ ಮಂತ್ರಿಯ ಕಾಲದಲ್ಲಿ ಚಿತ್ರದುರ್ಗವು ಅಭಿವೃದ್ದಿ ಪಥದತ್ತ ಸಾಗಿತ್ತು ಎಂಬುದು ಗಮನಾರ್ಹ.

ಮೂರನೇ ನರಸಿಂಹನ ತರುವಾಯ ಮೂರನೇ ಬಲ್ಲಾಳನು ಕ್ರಿ.ಶ.೧೨೯೧ರಿಂದ ೧೩೪೨ರವರೆಗೆ ಆಳ್ವಿಕೆ ನಡೆಸಿದನು. ಈತನು ಹೊಯ್ಸಳರ ಕೊನೆಯ ಶ್ರೇಷ್ಠ ಅರಸ. ಇವನು ತಮ್ಮ ಮನೆತನದ ಪ್ರಾಚೀನತೆಯನ್ನು ಪುನರ್‌ಸ್ಥಾಪಿಸಲು ಪ್ರಯತ್ನಪಟ್ಟನು. ಕ್ರಿ.ಶ.೧೩೦೩ರಲ್ಲಿ ಬಲ್ಲಾಳನ ತಂಗಿಯ ಗಂಡ ಸೋವೆಯ ದಂಡನಾಯಕನು, ಬೆಮ್ಮತ್ತೂರು ದುರ್ಗದಲ್ಲಿ ರಾಜ್ಯಪಾಲನಾಗಿದ್ದನು. ಈ ಸಂದರ್ಭದಲ್ಲಿ ಸೇವುಣ ಸೇನಾನಾಯಕ ಕಂಪಿಲದೇವನು ಹೊಯ್ಸಳ ನಾಡನ್ನು ಮುತ್ತಿದಾಗ ಸೋವೆದಂಡನಾಯಕನು ಕಂಪಿಲದೇವನೊಂದಿಗೆ ಹೋರಾಡಿ ಮರಣಹೊಂದಿದ್ದನು.[೧೩೭]

ಹೊಳಲ್ಕೆರೆ ಶಾಸನದ ಪ್ರಕಾರ ಬಲ್ಲಾಳನು ಮದಗಿದೇವ ದಣ್ಣಾಯಕನೊಂದಿಗೆ ಸಾಮ್ರಾಜ್ಯವಾಳುತ್ತಿದ್ದ ಸಂದರ್ಭದಲ್ಲಿ ನೀರಗುಂದವು ೧೨೦ ಬ್ರಾಹ್ಮಣರನ್ನೊಳಗೊಂಡ ಅಗ್ರಹಾರವಾಗಿತ್ತು.[೧೩೮] ಹೊಳಲ್ಕೆರೆಯ ಮತ್ತೊಂದು ಶಾಸನವು ಹೊಯ್ಸಳರ ಸ್ಥಳೀಯ ಆಡಳಿತವನ್ನು ಹೇಳುವುದಲ್ಲದೆ, ಇಲ್ಲಿದ್ದ ವ್ಯಾಪಾರಿ ವರ್ಗವಾದ ವೀರಬಣಜಿಗರನ್ನು ಶೆಟ್ಟರೆಂದು ಕರೆಯುತ್ತದೆ.[೧೩೯] ಹಿರಿಯೂರು ಶಾಸನ ಆಗ ಈ

ಪ್ರದೇಶದಲ್ಲಿ ಪ್ರಸಿದ್ಧ ಪಡೆದಿದ್ದ ಶಾಲುಗಳ ಬಗ್ಗೆ ವರ್ಣಿಸುತ್ತಾ ಈ ಶಾಲುಗಳನ್ನು ಬಿದಿರುಕೊಳವೆಯಲ್ಲಿ ಇಡಬಹುದಲ್ಲದೆ, ಕೆಲವು ವೇಳೆ ಉಂಗುರದಲ್ಲೂ ತೂರಿಸಬಹುದಾಗಿತ್ತೆಂದು ಹೇಳುತ್ತದೆ. ಇಂತಹ ಶಾಲೊಂದನ್ನು ಬಲ್ಲಾಳನಿಗೆ ಉಡುಗೊರೆಯಾಗಿ ಕೊಡಲಾಯಿತೆಂದು ಶಾಸನದಲ್ಲಿ ಹೇಳಿದೆ.[೧೪೦] ಚಿತ್ರದುರ್ಗದ ಶಾಸನವು ಮುಮ್ಮಡಿ ಬಲ್ಲಾಳನ ದಂಡನಾಯಕರಾದ ಬಲ್ಲಪ್ಪದಂಡನಾಯಕ ಅವನ ಸಹೋದರ ಸಿಂಗೇಯ ದಣ್ಣಾಯಕ ಇವರು ತಮ್ಮ ತಂದೆ ಬೇಬದಣ್ಣಾಯಕನ ಹೆಸರಿನಲ್ಲಿ ಬೇಬನಾಥ ಲಿಂಗವನ್ನು ಬೆಮ್ಮತ್ತಕಲ್ಲಿನಲ್ಲಿ ಪ್ರತಿಷ್ಠಾಪಿಸಿ, ಬೆಣ್ಣೆದೊಣೆ ಪ್ರದೇಶವನ್ನು ಈ ದೇವರಿಗೆ ದತ್ತಿ ನೀಡಿದರೆಂದು ತಿಳಿಸುವುದು.[೧೪೧] ಮತ್ತೊಂದು ಶಾಸನವು ಈತನ ಬಿರುದಾವಳಿಗಳನ್ನು ಪ್ರಸ್ತಾಪಿಸಿ ಅವನ ಮಂತ್ರಿ ಹಿರಿಯ ಬಲ್ಲಪ್ಪ ದಣ್ಣಾಯಕನು ಚಿತ್ರದುರ್ಗವನ್ನು ಆಳುತ್ತಿದ್ದು, ಬೆಟ್ಟದ ಮೇಲಿನ ಗೋಪಾಲದೇವರ ಪೂಜೆಪುರಸ್ಕಾರಗಳಿಗೆ ದತ್ತಿ ನೀಡಿದ್ದುದಾಗಿ ತಿಳಿಸುತ್ತದೆ.[೧೪೨]

ಈ ಮಧ್ಯೆ ಚಿತ್ರದುರ್ಗ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಕೆಲವು ಸಾಮಂತ ಮನೆತನಗಳಾದ ಗಂಗರು, ಸಿಂಧರು ಮತ್ತು ಚೋಳರು ಕ್ರಿ.ಶ.೭೫೦ರಿಂದ ೧೨೦೦ರವರೆಗೆ ಆಳ್ವಿಕೆ ಮಾಡಿರುವುದು ಶಾಸನಗಳಲ್ಲಿ ಕಂಡುಬರುತ್ತದೆ.[೧೪೩] ಚಿತ್ರದುರ್ಗ[೧೪೪] ಹಾಗೂ ಹೊಳಲ್ಕೆರೆಗಳಲ್ಲಿ ದೊರೆತ ಎರಡು ಶಾಸನಗಳು ಗಂಗರಿಗೆ ಸಂಬಂಧಿಸಿದ ಶಾಸನಗಳಾಗಿವೆ.[೧೪೫] ಜಿಲ್ಲೆಯಲ್ಲಿ ಸಿಂಧರ ಆಳ್ವಿಕೆಯನ್ನು ಸಮರ್ಥಿಸುವ ಶಾಸನವೊಂದು ಹೊಳಲ್ಕೆರೆಯಲ್ಲಿ ದೊರೆತಿದೆ.[೧೪೬] ಚೋಳರಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಚಳ್ಳಕೆರೆ,[೧೪೭] ಹಿರಿಯೂರು,[೧೪೮] ಮತ್ತು ಮೊಳಕಾಲ್ಮೂರು,[೧೪೯] ಪ್ರದೇಶಗಳಲ್ಲಿ ದೊರೆತಿವೆ.

ಚಾಲುಕ್ಯರ ಸಾಮಂತರಾಗಿದ್ದ ಸೇವುಣರು ದೇವಗಿರಿಯನ್ನು ರಾಜಧಾನಿಯನ್ನು ಮಾಡಿಕೊಂಡು ಆಳ್ವಿಕೆ ನಡೆಸಿದರು. ಚಾಲುಕ್ಯರಿಗೂ ಕಲಚೂರ್ಯರಿಗೆ ಯುದ್ಧ ನಡೆಯುತ್ತಿದ್ದಾಗ ಈ ಸಾಮಂತರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಕ್ರಿ.ಶ.ಸು.೧೧೮೦ರ ಹೊತ್ತಿಗೆ ಸೇವುಣ ೫ನೇ ಬಿಲ್ಲಮನು ಚಾಲುಕ್ಯರ ಆಶ್ರಯದಿಂದ ಸ್ವತಂತ್ರನಾಗಿ ರಾಜ್ಯ ಕಟ್ಟಿದನು. ಇದೇ ಸಮಯದಲ್ಲಿ ಪಾಂಡ್ಯರು ದಕ್ಷಿಣದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿದರು. ಈ ವೇಳೆಗಾಗಲೇ ಹೊಯ್ಸಳರು ಕರ್ನಾಟಕದ ಬಹುಭಾಗವನ್ನು ಆಕ್ರಮಿಸಿಕೊಂಡು ಪ್ರಭಾವಶಾಲಿಗಳಾಗಿದ್ದರು. ಉತ್ತರ ಭಾಗದಲ್ಲಿ ಪಾರಮಾರರು, ಗುಜರಾತಿನಲ್ಲಿ ಚಾಲುಕ್ಯರು ಪ್ರಬಲರಾಗತೊಡಗಿದ್ದರು. ಈ ಎಲ್ಲ ರಾಜಮನೆತನಗಳು ದಕ್ಷಿಣಪಥದಲ್ಲಿ ತಮ್ಮ ತಮ್ಮ ಮೇಲ್ಮೈಗೋಸ್ಕರ ಪರಸ್ಪರ ಯುದ್ಧಗಳನ್ನು ಮಾಡುತ್ತಿದ್ದರು. ೧೪ನೆಯ ಶತಮಾನದ ಮೊದಲ ಭಾಗದಲ್ಲಿ ಮುಸ್ಲಿಂರ ಪ್ರಾಬಲ್ಯದಿಂದ ಈ ಮನೆತನಗಳು ಇತಿಹಾಸದಿಂದ ಸಂಪೂರ್ಣವಾಗಿ ಕಣ್ಮರೆಯಾದವು.[೧೫೦]

ಸೇವುಣರ ರಾಜ್ಯವು ಬಹುಮಟ್ಟಿಗೆ ಕನ್ನಡದ ಜಿಲ್ಲೆಗಳನ್ನು ಒಳಗೊಂಡಿತ್ತು. ಶಿವಮೊಗ್ಗ, ಹಾಸನ, ಚಿತ್ರದುರ್ಗ, ದಾವಣಗೆರೆ, ಬಿಜಾಪುರ, ರಾಯಚೂರು ಮುಂತಾದ ಜಿಲ್ಲೆಗಳ ಕೆಲವು ಭಾಗಗಳು ಸೇವುಣರ ರಾಜ್ಯದಲ್ಲಿ ಸೇರಿದ್ದವು.[೧೫೧] ಸೇವುಣರ ಹೆಚ್ಚಿನ ಶಾಸನಗಳು ದಾವಣಗೆರೆ ಜಿಲ್ಲೆಯಲ್ಲಿ ದೊರೆತಿದ್ದು, ಹೊಳಲ್ಕೆರೆ ತಾಲೂಕಿನಲ್ಲಿ ಒಂದು ಶಾಸನ ಮಾತ್ರ ದೊರಕಿದೆ.[೧೫೨] ದಾವಣಗೆರೆಯಲ್ಲಿ ದೊರಕಿರುವ ಶಾಸನಗಳ ಪ್ರಕಾರ ಸೇವುಣರು ನೊಳಂಬವಾಡಿ-೩೨೦೦೦ ಅವರ ಆಳ್ವಿಕೆಗೆ ಒಳಪಟ್ಟಿತೆಂದು ತಿಳಿದು ಬರುತ್ತದೆ.[೧೫೩] ಉಳಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಅವರ ಶಾಸನಗಳು ಅಷ್ಟಾಗಿ ದೊರಕಿರುವುದಿಲ್ಲ. ಈ ಮಧ್ಯೆ ಕುಮ್ಮಟದ ಅರಸನಾದ ಮುಮ್ಮಡಿ ಸಿಂಗ ಹಾಗೂ ಆತನ ಮಗ ಕಂಪಿಲದೇವ ಸೇವುಣರ ಸಾಮಂತರಾಗಿ ಮೊಳಕಾಲ್ಮೂರು ಪ್ರದೇಶದಲ್ಲಿ ಅಧಿಕಾರ ನಡೆಸಿರುವುದು ಕಂಡುಬರುತ್ತದೆ.[೧೫೪]

ಕ್ರಿ.ಶ.೧೩೪೨ರಲ್ಲಿ ೩ನೇ ಬಲ್ಲಾಳನು ಶತ್ರುಗಳ ಹತನಾಗುವ ಮುನ್ನ ಹೊಯ್ಸಳ ಸಾಮ್ರಾಜ್ಯದ ಸ್ಥಿತಿ ಡೋಲಾಯಮಾನವಾಗಿದ್ದಿತು. ಈತನ ಕಾಲದಲ್ಲಿ ಮುಸ್ಲಿಮರು ಪ್ರಥಮವಾಗಿ ದಕ್ಷಿಣಭಾರತದ ಮೇಲೆ ದಾಳಿ ಮಾಡಿದರು. ದಕ್ಷಿಣದ ಸಂಪತ್ತನ್ನು ಕೊಳ್ಳೆ ಹೊಡೆಯುವ ಉದ್ದೇಶದಿಂದ ಅಲ್ಲಾವುದ್ದೀನ್ ಖಿಲ್ಜಿಯು ತನ್ನ ಸೇನಾನಿ ಮಲ್ಲಿಕಾಫರನೊಡನೆ ದಂಡು ಕಳುಹಿಸಿದ್ದನು. ಮಲ್ಲಿಕಾಫರನು ದೇವಗಿರಿಯ ಮೇಲೆ ಚಂಡಮಾರುತದಂತೆ ಎರಗಿದ. ಇವನ ದಾಳಿಗೆ ತುತ್ತಾದವರಲ್ಲಿ ಸೇವುಣರು ಮತ್ತು ಕಾಕತೀಯರು ಮೊದಲಿಗರು. ಅಂತಿಮವಾಗಿ ಮುಸ್ಲಿಮರ ಮೋಸ ಯುದ್ಧದ ಕೃತ್ರಿಮಕ್ಕೆ ಸಿಲುಕಿದ ಬಲ್ಲಾಳನು ೧೩೪೩ರಲ್ಲಿ ವೀರಮರಣವನ್ನಪ್ಪಿದನು. ೧೩೪೩ರಲ್ಲಿ ಇವನ ಮಗ ೪ನೇ ಬಲ್ಲಾಳನು ಅಧಿಕಾರಕ್ಕೆ ಬಂದರೂ ತನ್ನ ಹಿಂದಿನ ಪ್ರಾಂತ್ಯವನ್ನು ಪಡೆಯಲಾಗಲಿಲ್ಲ. ಈತನ ಮರಣದೊಂದಿಗೆ ಹೊಯ್ಸಳರು ಇತಿಹಾಸದಿಂದ ಕಣ್ಮರೆಯಾದರೂ ವಿಜಯನಗರ ಸಾಮ್ರಾಜ್ಯವು ಹೊಯ್ಸಳರ ಧ್ಯೇಯೋದ್ದೇಶಗಳನ್ನು ಹೊತ್ತುನಿಂತಿತು.

೨.೬.೯ ವಿಜಯನಗರ ಸಾಮ್ರಾಜ್ಯ

ಹೊಯ್ಸಳರ ನಂತರ ಅಧಿಕಾರಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ಕ್ರಿ.ಶ.೧೩೩೬ರಿಂದ ೧೫೬೫ರವರೆಗೆ ಸುಮಾರು ೨೨೯ ವರ್ಷಗಳ ಕಾಲ ಆಳ್ವಿಕೆ ನಡೆಸಿತು. ವಿಜಯನಗರ ಸ್ಥಾಪನೆ ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಮುಸ್ಲಿಮರ ದಾಳಿಗಳಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮದ ಶ್ರೀರಕ್ಷೆಯಾಗಿ ಉದಯವಾದ ಕಟ್ಟಕಡೆಯ ಹಿಂದೂ ಸಾಮ್ರಾಜ್ಯವಾಗಿದೆ. ಇದು ರಾಜಕೀಯ

[illegible]

[illegible]

[illegible]

ಅಸ್ಥಿರತೆಯನ್ನು ತೊಡೆದುಹಾಕಿತಲ್ಲದೆ, ಮುಸ್ಲಿಮರ ದಾಳಿಯನ್ನು ಸತತವಾಗಿ ಮೂರು ಶತಮಾನಗಳ ಕಾಲ ತಡೆಯಿತು. ವಿಜಯನಗರ ಅರಸರು ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದರು. ಈ ಭಾಗವು ವಿಜಯನಗರದ ಆಸೆ, ಆಕಾಂಕ್ಷೆ ಹಾಗೂ ಧ್ಯೇಯೋದ್ದೇಶಗಳನ್ನು ಪೂರೈಸುವ ಬಹುಮುಖ್ಯವಾದ ಘಟಕವಾಗಿತ್ತು. ಏಕೆಂದರೆ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯವನ್ನು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ವಿಸ್ತರಿಸಿದರು. ಹಂಪಿ ಮತ್ತು ಕರ್ನಾಟಕದ ದಕ್ಷಿಣ ಭಾಗದ ಮಧ್ಯೆ ಇರುವ ವಿಸ್ತಾರವಾದ ಭೂಪ್ರದೇಶವನ್ನು ಸಹಜವಾಗಿ ಅವರು ರಾಜಕೀಯ ಹಾಗೂ ಸೈನಿಕ ನೆಲೆಯನ್ನಾಗಿ ಬಳಸಿಕೊಂಡರು. ಚಿತ್ರದುರ್ಗ ಪ್ರದೇಶವು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿತ್ತು. ಹಾಗಾಗಿ ಸಹಜವಾಗಿಯೇ ಕೋಟೆ-ಕೊತ್ತಲಗಳನ್ನು ಕಟ್ಟಿಸಿಕೊಳ್ಳಲು ಇದು ವಿಜಯನಗರದ ಅರಸರಿಗೆ ಸಹಕಾರಿಯಾಗಿತ್ತು. ಅಲ್ಲದೆ ಉತ್ತಮ ಸಂಪನ್ಮೂಲಗಳು ದೊರಕುತ್ತಿದ್ದರಿಂದಲೂ ಮಿಲಿಟರಿ ದೃಷ್ಟಿಯಿಂದ ಬಹುಮುಖ್ಯ ಪ್ರದೇಶವಾಗಿತ್ತು.[೧೫೫] ಜೊತೆಗೆ ಭಾರತದ ಉತ್ತರ ಹಾಗೂ ನೈರುತ್ಯ ಭಾಗಗಳ ನಡುವೆ ಹೋಗುವ ಹೆದ್ದಾರಿಯಲ್ಲಿ ಇದ್ದುದರಿಂದ ಸಹಜವಾಗಿಯೇ ವಿಜಯನಗರದ ರಾಜರು ಈ ಪ್ರದೇಶವನ್ನು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡು, ಈ ಪ್ರದೇಶದಲ್ಲಿ ಸಾಮ್ರಾಜ್ಯವನ್ನು ರಾಜ್ಯ, ವಳಿತ, ವೇಂಟೆ, ನಾಡು, ಸೀಮೆ, ಚಾವಡಿ, ಮಾಗಣಿ, ಸಂಮತ್ತ, ಹೋಬಳಿ, ಕಸುಬೆ ಮುಂತಾದ ಪ್ರಾದೇಶಿಕ ವಿಭಾಗಗಳನ್ನು ಸ್ಥಾಪಿಸಿಕೊಂಡು ಆಳ್ವಿಕೆ ನಡೆಸಿದ್ದರೆಂಬುದನ್ನು ಚಿತ್ರದುರ್ಗ ಪ್ರದೇಶದಲ್ಲಿ ಅವರ ಕಾಲದಲ್ಲಿ ದೊರೆತ ಶಾಸನಗಳಿಂದ ತಿಳದುಬರುತ್ತದೆ.[೧೫೬]

ವಿಜಯನಗರ ಆಡಳಿತಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ೧೨ ಸೀಮೆಗಳು, ೧೯ ಸ್ಥಳಗಳು ಹಾಗೂ ೬ ನಾಡುಗಳು ಅಸ್ತಿತ್ವದಲ್ಲಿದ್ದವು. ಸೀಮೆಗಳಲ್ಲಿ ಪ್ರಮುಖವಾಗಿ ರಾಮಗಿರಿ,[೧೫೭] ಜಾಜೂರು,[೧೫೮] ಚಿತ್ರಹಳ್ಳಿ,[೧೫೯] ದುಮ್ಮಿ,[೧೬೦] ಬಾಗೂರು,[೧೬೧] ಬೂದಿಹಾಳು,[೧೫೨] ಮತ್ತೋಡು,[೧೬೩] ಹಿರಿಯೂರು,[೧೬೪] ಗುಂಟನೂರು,[೧೬೫] ದೊಡ್ಡೇರಿ,[೧೬೬] ನವಬಕುವಾಡ,[೧೬೭] ಮತ್ತು ಹೊಳಲ್ಕೆರೆ ಸೀಮೆಗಳು ಮುಖ್ಯವಾಗಿದ್ದವು.[೧೬೮] ಸ್ಥಳಗಳಲ್ಲಿ ಅರಳಿಹಾಳ,[೧೬೯] ಕುರುಬರಹಳ್ಳಿ,[೧೭೦] ಗೌಡನಹಳ್ಳಿ,[೧೭೧] ತನನಿಧಿ,[೧೭೨] ನಂದನಸೋಮ,[೧೭೩] ನುಲಿಯನೂರು,[೧೭೪] ಬಗ್ಗನಡು,[೧೭೫] ಮಧ್ವಸಮುದ್ರ,[೧೭೬] ಮಲೆಯನೂರು,[೧೭೭] ಇಕ್ಕನೂರು,[೧೭೮] ಲಕ್ಕಿಹಳ್ಳಿ,[೧೭೯] ಹರತಿ[೧೮೦] ಮತ್ತು ಹೊಸೂರು ಮುಖ್ಯವಾಗಿವೆ.[೧೮೧] ಅಂಕಸಮುದ್ರ,[೧೮೨] ವೇಣುಕಲ್ಲುಗುಡ್ಡ,[೧೮೩] ಗೋಸಿಕೆರೆ,[೧೮೪] ಚಿಂಮತ್ತನಕಲ್ಲು,[೧೮೫] ಚಿತ್ರಹಳ್ಳಿ[೧೮೬] ನಾಡುಗಳಲ್ಲಿ ಮುಖ್ಯವಾದವುಗಳೆಂದು ಹೇಳಲಾಗಿದೆ.[೧೮೭]

[illegible]

[illegible]

ಮೇಲ್ಕಂಡ ವಿಭಾಗಗಳಲ್ಲದೆ ಬಾಗೂರುವಳಿತ,[೧೮೮] ಕೋಟೆಕೆರೆಯವೇಂಟೆ,[೧೮೯] ಬಯಕಾರ ರಾಮಪ್ಪನ ಮಾಗಣಿ,[೧೯೦] ಧರ್ಮಪುರ ಸಮ್ಮತ್ತು,[೧೯೧] ಚಿಮ್ಮತ್ತನೂರವಿತ್ತಿ[೧೯೨] ಇನ್ನು ಮುಂತಾದ ಆಡಳಿತ ವಿಭಾಗಗಳು ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಇವುಗಳಿಂದ ವಿಜಯನಗರ ಅರಸರು ಇಡೀ ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಆಡಳಿತದ ಭಾಗಗಳನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ.

ಚಿತ್ರದುರ್ಗ ಬೆಟ್ಟದ ಮೇಲಿರುವ ಸಂಪಿಗೆ ಸಿದ್ಧೇಶ್ವರ ದೇವಾಲಯದ ೧ನೇ ಬುಕ್ಕರಾಯನ ಶಾಸನದಲ್ಲಿ ಬೆಮ್ಮತ್ತನಕಲ್ಲು ನಾಡನ್ನು ಮಲ್ಲಿನಾಥ ಒಡೆಯನು ಆಳುತ್ತಿದ್ದಾಗ ಈತನು ಸಂಪಿಗೆ ಸಿದ್ಧೇಶ್ವರ ದೇವರಿಗೆ ಕಲ್ಲಿನ ಉಪ್ಪರಿಗೆ ಮತ್ತು ಉಯ್ಯಾಲೆಯನ್ನು ಮಾಡಿಸಿ ಶಿಖರ ಪ್ರತಿಷ್ಠೆ ಮಾಡಿಸಿ ಎರಡು ಗ್ರಾಮಗಳನ್ನು ದತ್ತಿ ಬಿಟ್ಟುದಾಗಿ ಹೇಳುತ್ತದೆ.[೧೯೩] ಈ ಮಲ್ಲಿನಾಥ ಒಡೆಯನಿಗೆ ನಡೆಗೋಂಟೆಮಲ್ಲ ಎಂಬ ಬಿರುದಿತ್ತು. ನಡೆಗೋಂಟೆ ಎಂದರೆ ವೀರರು ಕೋಟೆಯಂತೆಯೇ ನೀಡುತ್ತಿದ್ದ ರಕ್ಷಣೆಯನ್ನು ಕವಿಗಳು ಗಮನಿಸಿ ಅವರನ್ನು ನಡೆಗೋಂಡೆ ಎಂಬುದಾಗಿ ಕರೆದಿದ್ದಾರೆ.[೧೯೪] ಇದೇ ರೀತಿ ಮತ್ತಿ ಶಾಸನವು ದೇವಾಲಯ ದತ್ತಿಗಳ ರಕ್ಷಣೆಯನ್ನು ಪೌರಾಣಿಕವಾಗಿ ಕಾವ್ಯಮಯ ಶೈಲಿಯಲ್ಲಿ ಹೇಳುತ್ತದೆ.[೧೯೫] ಹಿಡಿಂಬೇಶ್ವರ ದೇವಾಲಯದಲ್ಲಿನ ಶಾಸನವು ವಿಜಯನಗರ ವೀರ ಪ್ರತಾಪದೇವರಾಯನ ಮಗ ವೀರಮಲ್ಲಣ ಒಡೆಯನು ಮಹಾಮಂಡಲೇಶ್ವರನಾಗಿ ಬೆಮ್ಮತ್ತನಕಲ್ಲು ಪಟ್ಟಣದಲ್ಲಿ ಆಳುತ್ತಿದ್ದಾಗ ಇದೇ ದೇವಾಲಯದ ದಕ್ಷಿಣ ದ್ವಾರಕ್ಕೆ ಕಲ್ಲುಗೋಪುರ ಕಟ್ಟಿಸಿದನೆಂದು ತಿಳಿಸುತ್ತದೆ. ಈಗಲೂ ಈ ಗಾಳಿಗೋಪುರಗಳು ಆ ಕಾಲದ ಜೀವಂತ ಸಾಕ್ಷಿಗಳಾಗಿವೆ.

ವಿಜಯನಗರ ಅರಸರು ಈ ಜಿಲ್ಲೆಯಲ್ಲಿ ಸುವ್ಯವಸ್ಥಿತವಾದ ಹಾಗೂ ಕ್ರಮಬದ್ಧವಾದ ಆಡಳಿತವನ್ನು ಏರ್ಪಡಿಸುವುದರ ಜೊತೆಗೆ ಕೃಷಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡರು. ಕೃಷ್ಣದೇವರಾಯನ ಕಾಲದಲ್ಲಿ ಈ ಜಿಲ್ಲೆಯ ಒಂದು ಭಾಗದ ಜನರು ತೆರಿಗೆಗಳ ಭಾರದಿಂದ ಬಳಲುತ್ತಿದ್ದಾಗ, ಅವನ ಕೈಕೆಳಗಿನ ಅಧಿಕಾರಿ ಕಾಣಿಕೆ, ಮೇಲುಪಣ ಮತ್ತು ಕಬ್ಬಿನ ಮೇಲಿನ ಸುಂಕವನ್ನು ರದ್ದುಪಡಿಸಿದ.[೧೯೬] ಅದೇ ರೀತಿ ಅಚ್ಯುತರಾಯನ ಆಜ್ಞೆಯ ಮೇರೆಗೆ ಬಾಗೂರು ಸೀಮೆಯಲ್ಲಿ ಮದುವೆಯ ತೆರಿಗೆಯನ್ನು ರದ್ದುಪಡಿಸಲಾಯಿತು.[೧೯೭] ಹಾಗೆಯೇ ಜಿಲ್ಲೆಯ ಅನೇಕ ಕಡೆ ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯಾರ್ಜನೆಗೆ ಪ್ರೋತ್ಸಾಹ ಕೊಟ್ಟಿದ್ದರಲ್ಲದೆ, ಹಿಂದೂ ಧರ್ಮದ ರಕ್ಷಣೆ ಮತ್ತು ಪೋಷಣೆಯನ್ನು ವಿಜಯನಗರ ಅರಸರು ಕೈಗೊಂಡಿದ್ದರೆಂಬುದಕ್ಕೆ ಈ ಶಾಸನಗಳು ಆಧಾರಗಳಾಗಿವೆ.[೧೯೮]

ವಿಜಯನಗರದ ಅರಸರು ಆಡಳಿತದ ದೃಷ್ಟಿಯಿಂದ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯ ಹಾಗೂ ರಾಜ್ಯಗಳನ್ನಾಗಿ ವಿಭಾಗ ಮಾಡಿರುವುದನ್ನು ಈಗಾಗಲೇ ಹೇಳಲಾಗಿದೆ. ವಿಜಯನಗರ ಅರಸರು ಆಡಳಿತದಲ್ಲಿ ರೂಢಿಸಿಕೊಂಡು ಬಂದ ವಿಶಿಷ್ಟ ವ್ಯವಸ್ಥೆಯೇ 'ಅಮರನಾಯಕ' ಅಥವಾ 'ನಾಯಂಕರ ಪದ್ಧತಿ'. ನಾಯಕ ಅಥವಾ ಅಮರನಾಯಕ ಅರಸನು ನಿರ್ದಿಷ್ಟಪಡಿಸಿದ ಸೈನಿಕ ಸೇವೆಯನ್ನು ಸಲ್ಲಿಸಬೇಕಾದ ಸಾಮಂತ ಅಧಿಕಾರಿಗಳಾಗಿದ್ದರು. ಇವರು ದ್ರವ್ಯ ಮತ್ತು ಸೈನಿಕ ಸೇವೆಯನ್ನು ಸಲ್ಲಿಸಲು ಇಂತಿಷ್ಟು ಭೂಮಿಯನ್ನು ಉಂಬಳಿಯಾಗಿ ಪಡೆಯುತ್ತಿದ್ದರು. ಭೂಮಿಯ ಉತ್ಪತ್ತಿಗೆ ಅನುಗುಣವಾಗಿ ಸೈನ್ಯವನ್ನು ಸಲಹಬೇಕಾಗಿದ್ದಿತು. ಈ ವ್ಯವಸ್ಥೆಯಿಂದ ವಿಜಯನಗರ ಸಾಮ್ರಾಜ್ಯದ ಅಧಿಕಾರವು ಕೇಂದ್ರದಲ್ಲಿ ಸಂಚಯಗೊಳ್ಳದೆ ಹಲವಾರು ಮಿಲಿಟರಿ ಆಡಳಿತ ಘಟಕಗಳ ಮೂಲಕ ಅಧೋಮುಖವಾಗಿ ಹಂಚಿಹೋಗಿತ್ತೆಂಬುದು ವಿದ್ವಾಂಸರ ಅಭಿಮತ.[೧೯೯]

ಅಮರನಾಯಕರಿಗೆ ನೀಡಿದ ಭೂಮಿಗೆ ಅಮರಂ ಎಂದು ಕರೆಯುತ್ತಿದ್ದರು. ರಾಜಕೀಯ, ಆಡಳಿತ, ಆರ್ಥಿಕ ಮತ್ತು ನ್ಯಾಯ ಅಧಿಕಾರಗಳು ತಮ್ಮ ಅಮರಂ ಪ್ರದೇಶ ವ್ಯಾಪ್ತಿಗೆ ಅನ್ವಯಿಸುವಂತೆ ದೊರಕುತ್ತಿದ್ದವು. ಈ ಅಮರನಾಯಕ ವ್ಯವಸ್ಥೆಯು ಅವರ ಭೌಗೋಳಿಕ ಸ್ಥಾನ, ಗಾತ್ರ ಮತ್ತು ಸಂಪನ್ಮೂಲಗಳ ಮೇಲೆ ನಿರ್ಧಾರಿತವಾಗುತ್ತಿತ್ತು. ಇಂತಹ ಭೂದಾನವನ್ನು ಅಮರಮಾಗಣಿ, ಅಮರ ನಾಯಕ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಅಮರನಾಯಕರು ತಮ್ಮ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಲು ಹಾಗೂ ಸೇನೆಯನ್ನು ಇಟ್ಟುಕೊಳ್ಳಲು ಅವರಿಗೆ ಅವಕಾಶವಿತ್ತು.[೨೦೦] ಈ ಪದ್ಧತಿಯ ಆಧಾರದ ಮೇಲೆ ಈ ಜಿಲ್ಲೆಯಲ್ಲಿ ಅನೇಕ ಪ್ರದೇಶಗಳನ್ನು ಅಮರನಾಯಕರಿಗೆ ಕೊಡಲಾಗಿತ್ತು. ಅಂತಹ ಅಮರನಾಯಕತ್ವ ಪಡೆದ ಮನೆತನಗಳು ಜಿಲ್ಲೆಯಲ್ಲಿ ಚಿತ್ರದುರ್ಗ, ಹರತಿ, ಹಟ್ಟಿ, ಮತ್ತಿನಾಡುಗಳಾಗಿವೆ. ಇವರು ವಿಜಯನಗರದ ಸಾಮಂತರಾಗಿ ಆಳ್ವಿಕೆ ನಡೆಸಿದರು.[೨೦೧] ಅಚ್ಯುತರಾಯನ ಕಾಲದಲ್ಲಿ ಹೊಳಲ್ಕೆರೆ ಪ್ರದೇಶದಲ್ಲಿ ಹಡಪ ಬೈಯಪೇಂದ್ರ ನಾಯಕ ಒಬ್ಬ ಅಮರನಾಯಕನಾಗಿದ್ದನು. ಅವನು ವಿದ್ವಾಂಸ ರಾಗಿದ್ದ ಬ್ರಾಹ್ಮಣರಿಗೆ ಸ್ವಲ್ಪ ಭೂಮಿಯನ್ನು ದಾನವಾಗಿ ಕೊಡಬೇಕೆಂದು ಚಕ್ರವರ್ತಿ ಅಚ್ಯುತರಾಯನ ಅನುಮತಿಯನ್ನು ಕೋರಿ ಪಡೆದನು. ಅಮರನಾಯಕರು ಯಾವುದೇ ಭೂದಾನ ಮಾಡುವ ಮೊದಲು ಚಕ್ರವರ್ತಿಯ ಅನುಮತಿ ಪಡೆಯಬೇಕಾಗಿದ್ದುದನ್ನು ಇದು ತೋರಿಸುತ್ತದೆ.[೨೦೨]

ಚಿತ್ರದುರ್ಗದ ಪ್ರಥಮ ದೊರೆ ಮತ್ತಿ ತಿಮ್ಮಣ್ಣನಾಯಕನು ಒಬ್ಬ ಸಾಧಾರಣ ಅಮರನಾಯಕನಾಗಿದ್ದನು.

ಈತನ ಪರಿಶ್ರಮ ಮತ್ತು ಪರಾಕ್ರಮಗಳನ್ನು ಗುರುತಿಸಿ ವಿಜಯನಗರದ ಅರಸರು ಕ್ರಿ.ಶ.೧೪೬೫ರಲ್ಲಿ ಅವನಿಗೆ ಹೊಳಲ್ಕೆರೆಯ ಅಮರನಾಯಕನಾಗಿ ಬಡ್ತಿ ನೀಡಿ ಪುರಸ್ಕರಿಸಿದರು. ಕ್ರಿ.ಶ.೧೪೯೫ರಲ್ಲಿ ಅವನು ಚಿತ್ರದುರ್ಗದ ನಾಯಕನೆಂದು ಕರೆಸಿಕೊಳ್ಳಲು ಸಾಧ್ಯವಾಯಿತು. ಕ್ರಿ.ಶ.೧೫೦೨ರಲ್ಲಿ ಸಾಮ್ರಾಜ್ಯ ಸೌಧದ ಮುಖ್ಯ ಆಧಾರಸ್ತಂಭಗಳಲ್ಲಿ ಒಬ್ಬನೆಂದು ಗೌರವಿಸಲಾಯಿತು.[೨೦೩]

ಇಂತಹ ಅಮರನಾಯಕರನ್ನು ಸೃಷ್ಟಿಸಿದ ವಿಜಯನಗರ ಸಾಮ್ರಾಜ್ಯ ಕ್ರಿ.ಶ.೧೫೬೫ರ ಯುದ್ಧದಲ್ಲಿ ಸೋತು ಹೋದಮೇಲೆ, ಪರಿಸ್ಥಿತಿಯ ಲಾಭ ಪಡೆದು ಇವರು ಮುಂದೆ ಪ್ರಬಲರಾಗಿ ಅರೆ, ಸ್ವತಂತ್ರ ಸಂಸ್ಥಾನಗಳ ಸಮೂಹವಾಗಿ ಮಾರ್ಪಟ್ಟವು. ಅಂಥ ಸಂಸ್ಥಾನಗಳಲ್ಲಿ ಚಿತ್ರದುರ್ಗವೂ ಒಂದು. ಇವರೇ ಮುಂದೆ ಪಾಳೆಯಗಾರರು ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದು ಅಧಿಕಾರಕ್ಕೆ ಬಂದರು.

೨.೬.೧೦ ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರ ಆಳ್ವಿಕೆ

ಪ್ರಾಚೀನ ಭಾರತದಲ್ಲಿ ದಕ್ಷಿಣಾಪಥದ ಪ್ರಸ್ಥಭೂಮಿಯಲ್ಲಿ ಚಿಕ್ಕಪುಟ್ಟ ಬಣಗಳ ನಾಯಕರು ಪಾಳೆಯಗಾರರೆಂಬ ಹೆಸರಿನಿಂದ ಅಲ್ಲಲ್ಲಿ ಅರಸರೆನಿಸಿಕೊಂಡಿದ್ದರು. ಈ ಪಾಳೆಯಗಾರರು ಪಶುಪಾಲನೆ ಮಾಡುತ್ತ, ತಮ್ಮದೇ ಆದ ಗುಂಪುಗಳನ್ನು ಕಟ್ಟಿಕೊಂಡು ಬದುಕುತ್ತಿದ್ದ ಇವರು ಮ್ಯಾಸಬೇಡರಾಗಿದ್ದರು. ಅರಣ್ಯ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಇವರು ಸಹಜವಾಗಿಯೇ ಧೈರ್ಯವಂತರು, ದೃಢಕಾಯರೂ ಆಗಿದ್ದರು. ಇಂಥವರನ್ನು ರಾಜಮಹಾರಾಜರು ಒಂದು ಕಡೆ ನಿಲ್ಲಿಸಿ ಪಾಳೆಯಪಟ್ಟುಗಳನ್ನು ನಿರ್ಮಿಸಿ ಕೊಟ್ಟು, ತಮ್ಮ ಸಹಾಯಕ್ಕೆ ಬಳಸಿಕೊಂಡಂತೆ ಕಂಡುಬರುತ್ತದೆ.[೨೦೪] ಕನ್ನಡದ ಪಾಳೆಯಗಾರರೆಂಬ ಹೆಸರಿನ ಇವರಿಗೆ ತೆಲುಗಿನಲ್ಲಿ ಪಾಳೆಯಗಾಡು, ತಮಿಳಿನಲ್ಲಿ ಪಾಲ್ಯೈಕ್ಕಾರನ್, ಮರಾಠಿಯಲ್ಲಿ ಪಾಳೇಗಾರ ಎಂದು ಕರೆಯಲಾಗಿದೆ. ಇವರಿಗೆ ಅಧೀನವಾಗಿದ್ದ ಭೂಪ್ರದೇಶಕ್ಕೆ ಪುಲ್ಲಂ ಎಂದು ಹೆಸರಿದ್ದ ಕಾರಣ ಇವರಿಗೆ ಪಾಳೆಯಗಾರ ಎಂಬ ಹೆಸರು ಪ್ರಾಪ್ತವಾದಂತೆ ತೋರುವುದು.[೨೦೫] ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾ ವಿಭಾಗ, ಶಿಬಿರ, ಠಾಣೆ ಎಂಬ ವಿವಿಧ ಅರ್ಥವನ್ನು ಸೂಚಿಸುತ್ತದೆ. ಇವುಗಳ ಮುಖ್ಯಸ್ಥರೇ ಪಾಳೆಯಗಾರರು.[೨೦೬] ಇವರು ಚಿಕ್ಕಚಿಕ್ಕ ಪ್ರಾಂತ್ಯಗಳಲ್ಲಿ ಪ್ರಬಲರಾಗಿ ದೊರೆಗಳಂತೆ ಆಳಿಕೊಂಡು ಜನರಿಂದ ಕಂದಾಯ, ಕಾಣಿಕೆ ಮೊದಲಾದ ವರಿಗಳನ್ನು ತೆಗೆದುಕೊಳ್ಳುತ್ತ ದುಷ್ಟರನ್ನು ನಿಗ್ರಹಿಸುತ್ತ, ಸಮುದಾಯವನ್ನು ಕಾಪಾಡುತ್ತಿದ್ದ ಮುಖಂಡರನ್ನು ಪಾಳೆಯಗಾರರು ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದು ಎಂ.ಎಸ್.ಪುಟ್ಟಣ್ಣನವರು ಅಭಿಪ್ರಾಯಪಟ್ಟಿದ್ದಾರೆ.[೨೦೭]

ಪಾಳೆಯಗಾರರು ಸರ್ವೇ ಸಾಮಾನ್ಯವಾಗಿ ಬೇಡ ಜನಾಂಗದವರಾಗಿದ್ದಾರೆ. ಇವರ ಮುಖ್ಯ ಕಸುಬು ಬೇಟೆ, ಕೃಷಿ ಮತ್ತು ಪಶುಪಾಲನೆಯಾಗಿದೆ. ಬಿಲ್ಲು-ಬಾಣ ಹಿಡಿದು ಬೇಟೆಯಾಡುವುದಷ್ಟೇ ಅಲ್ಲದೆ ಸೈನಿಕರಾಗಿ, ನಾಯಕರಾಗಿ ಇವರು ಕೆಲಸ ನಿರ್ವಹಿಸುತ್ತಿದ್ದರು. ಇಂತಹ ಪಾಳೆಯಗಾರರು ವಿಜಯನಗರ ಸಾಮ್ರಾಜ್ಯಕ್ಕಿಂತ ಹಿಂದೆ ಇದ್ದವರಾದರೂ ಇವರು ಹೆಚ್ಚಾಗಿ ಗುರುತಿಸಿಕೊಂಡದ್ದು ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಎಂದು ಹೇಳಬಹುದು. ವಿಜಯನಗರ ಕಾಲದಲ್ಲಿ ಸಾಮಂತರಾಗಿ, ಅಮರನಾಯಕರಾಗಿ ಆಳ್ವಿಕೆ ಮಾಡಿ ನಂತರ ಪಾಳೆಯಗಾರರೆನಿಸಿಕೊಂಡು ಸ್ವತಂತ್ರ ಆಳ್ವಿಕೆ ನಡೆಸಿದರು.[೨೦೮]

ಪ್ರಕೃತಿಯನ್ನೇ ಆರಾಧಿಸುತ್ತಿದ್ದ ಬೇಡನಾಯಕರು ಸಾಧಾರಣವಾಗಿ ಇವರು ರಾಜಧಾನಿಯನ್ನು ದುರ್ಗಮವಾದ ಒಂದು ಗುಡ್ಡ ಅಥವಾ ಬೆಟ್ಟದ ಮೇಲೆ ಕಟ್ಟಿಕೊಂಡಿರುತ್ತಿದ್ದರು. ಇಂತಹ ಸ್ಥಳಗಳಲ್ಲಿ ಬಲವಾದ ಕೋಟೆ-ಕೊತ್ತಲಗಳನ್ನು ಕಟ್ಟಿಕೊಂಡು ಶತ್ರುವಿನ ಆಗಮನಕ್ಕೆ ಬಹಳ ಕಷ್ಟವಾಗುವಂತೆ ಮಾಡುತ್ತಿದ್ದರು.[೨೦೯] ಕ್ರಿ.ಶ.೧೫೫೬ರಲ್ಲಿ ನಡೆದ ರಕ್ಕಸತಂಗಡಿ ನಿರ್ಣಾಯಕ ಕಾಳಗದಲ್ಲಿ ವಿಜಯನಗರವು ಸಾಮ್ರಾಜ್ಯವು ಪತನಹೊಂದಿತು. ಅದರ ಅಧೀನದಲ್ಲಿದ್ದ ಹಲವಾರು ಪಾಳೆಯಗಾರರು ಸ್ವತಂತ್ರರಾದರು. ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪಾಳೆಯಪಟ್ಟುಗಳು ಒಟ್ಟು ಏಳು. ಅವುಗಳೆಂದರೆ ರಾಯದುರ್ಗ, ಹರತಿಕೋಟೆ, ಬೇಲೂರು, ಚಿತ್ರದುರ್ಗ, ಸಂತೆಬೆನ್ನೂರು, ಹಟ್ಟಿ, ಮತ್ತಿನಾಡು (ಮತ್ತೋಡು) ಮುಖ್ಯವಾಗಿವೆ.

ಶಾಸನಗಳು ವ್ಯಕ್ತಪಡಿಸುವಂತೆ ಚಿತ್ರದುರ್ಗ ಪಾಳೆಯಗಾರರಿಗಿಂತ ಮೊದಲೇ ರಾಯದುರ್ಗ, ಹರತಿ, ಮತ್ತೆ ಬೇಲೂರು ಪಾಳೆಯಗಾರರು ಈ ಜಿಲ್ಲೆಯ ಕೆಲವು ಪ್ರದೇಶಗಳ ಮೇಲೆ ಆಳ್ವಿಕೆ ನಡೆಸಿದ್ದಾರೆ. ಚಿತ್ರದುರ್ಗ ಪ್ರದೇಶದಲ್ಲಿ ಕ್ರಿ.ಶ.ಸು.೧೪೩೦ರಿಂದ ೧೪೭೭ರವರೆಗೆ ಬೂದಿಹಾಳ್ ಪಾಳೆಯಗಾರರು ಹೊಸದುರ್ಗ ತಾಲೂಕಿನ ಶ್ರೀರಾಂಪುರ(ಬೂದಿಹಾಳ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುವುದನ್ನು ಕಾವ್ಯಗಳು ವರ್ಣಿಸುತ್ತವೆ.[೨೧೦] ಚಿತ್ರದುರ್ಗ ಪಾಳೆಯಗಾರರು ಇಲ್ಲಿ ನೆಲೆಸಿದ ನಂತರ ಕ್ರಿ.ಶ.೧೫೫೬ ಸಂತೆಬೆನ್ನೂರು, ಹಟ್ಟಿ ಮತ್ತು ಮತ್ತಿನಡು ಪಾಳೆಯಗಾರರು ಈ ಜಿಲ್ಲೆಯ ಕೆಲವು ಭಾಗಗಳನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿದರು. ಈ ಜಿಲ್ಲೆಯಲ್ಲಿಯೇ ರಾಜಧಾನಿಗಳನ್ನು ಸ್ಥಾಪಿಸಿ ಆಳಿದವರು ಹರತಿ (ಹಿರಿಯೂರು ತಾಲೂಕು), ಹಟ್ಟಿ (ಚಳ್ಳಕೆರೆ ತಾಲೂಕು), ಮತ್ತಿನಾಡು (ಹೊಸದುರ್ಗ) ಚಿತ್ರದುರ್ಗ ಪಾಳೆಯಗಾರರು. ಉಳಿದ ಪಾಳೆಯಗಾರರ ರಾಜಧಾನಿಗಳು ಜಿಲ್ಲೆಯ ಹೊರಗಡೆ ಇದ್ದವು.[೨೧೧] ಅವುಗಳೆಂದರೆ ರಾಯದುರ್ಗ, ಸಂತೇಬೆನ್ನೂರು, ಬೇಲೂರು.

[illegible]

೨.೬.೧೧ ಬೂದಿಹಾಳು ಪಾಳೆಯಗಾರರು(ಶ್ರೀರಾಂಪುರ)

ಬೂದಿಹಾಳು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಒಂದು ಹೋಬಳಿ ಕೇಂದ್ರ. ಸುಮಾರು ೭೦ ವರ್ಷಗಳಿಂದೀಚೆಗೆ ಈ ಊರನ್ನು ಶ್ರೀರಾಂಪುರ ಎಂಬ ಹೊಸ ಹೆಸರಿನಿಂದ ಕರೆಯ ತೊಡಗಿದ್ದಾರೆ. ಈ ಹಿಂದೆ ಈ ಊರಿಗೆ ಭಸ್ಮಪುರ, ವಿಭೂತಿಪುರ, ಬೂದಿಹಾಳು, ಕಾಯಿಬೂದಿಹಾಳು ಮುಂತಾದ ಹೆಸರುಗಳಿವೆ. ಇವಲ್ಲದೆ ಕೆಲವು ಶಾಸನ ಗ್ರಂಥಗಳಲ್ಲಿ ಈ ಊರನ್ನು ಹರಪುರ, ಬೇದಂಡಕೋಟೆ, ಅವನಗಿರಿದುರ್ಗ, ಗಿರಿಜಾನಗರ, ಸಿರುಮನಾಡು ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ.[೨೧೨] ಬೂದಿಹಾಳು ಸ್ಥಳವು ೧೨ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿದ್ದು ಪ್ರಸಿದ್ಧ ಊರಾಗಿತ್ತೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ.[೨೧೩] ಕ್ರಿ.ಶ.೧೫ನೇ ಶತಮಾನದ ಪೂರ್ವಾರ್ದದಲ್ಲಿ ಇಲ್ಲಿಯ ಪಾಳೆಯಪಟ್ಟೊಂದನ್ನು ಸ್ಥಾಪಿಸಿಕೊಂಡು ಆಳ್ವಿಕೆ ಮಾಡಿದವರು ಬೂದಿಹಾಳು ಪಾಳೆಯಗಾರರು. ಈ ಪಾಳೆಯಪಟ್ಟೊಂದನ್ನು ಕುರಿತ ಶಾಸನಗಳು ಈವರೆಗೆ ಲಭ್ಯವಿಲ್ಲ. ಆದರೂ ಸಾಂಗತ್ಯ ಪ್ರಕಾರದ ಮೂರು ಕಾವ್ಯಗಳು ರಚನೆಯಾಗಿವೆ. ಅವುಗಳೆಂದರೆ ಸಿದ್ದಕವಿಯ ಸಿರುಮಣ ಸಾಂಗತ್ಯ, ಮಲ್ಲಕವಿಯ ಗೊಲ್ಲಸಿರುಮನಚರಿತೆ, ರಾಮಕವಿಯ ಸಿರುಮನಚರಿತ್ರೆಗಳಾಗಿವೆ. ಈ ಕಾವ್ಯಗಳನ್ನು ಎಂ.ಎಂ. ಕಲಬುರ್ಗಿ ಯವರು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಮೂರು ಕಾವ್ಯಗಳನ್ನು ಆಧಾರವಾಗಿಟ್ಟುಕೊಂಡು ಇತ್ತೀಚೆಗೆ ಸಂಶೋಧನಾ ಪ್ರಬಂಧವನ್ನು ರಚಿಸಲಾಗಿದೆ.[೨೧೪] ಈ ಕಾವ್ಯಗಳ ಸಾರಾಂಶವೆಂದರೆ ಬೂದಿಹಾಳು ಕೇಂದ್ರವನ್ನು ಇಟ್ಟುಕೊಂಡು ಆಳ್ವಿಕೆ ನಡೆಸಿದ ಗೊಲ್ಲ ಸಿರುಮಣನಾಯಕನು ಪೆನುಗೊಂಡೆಯಿಂದ ರಾಜ್ಯವನ್ನಾಳುತ್ತಿದ್ದನು. ವಿಜಯನಗರ ಸಾಳುವ ನರಸಿಂಹನು ಇವನ ಸಮಕಾಲೀನ. ಇವರಿಬ್ಬರ ಮಧ್ಯೆ ಪ್ರಾಂತೀಯ ಯುದ್ಧ ಸಂಘರ್ಷ ಏರ್ಪಟ್ಟು ನರಸಿಂಹನ ವಿರುದ್ಧ ನಡೆಸಿದ ಹೋರಾಟದಲ್ಲಿ ಸಿರುಮನು ತನ್ನ ಪರಾಕ್ರಮ ಮರೆದ ರೀತಿಯನ್ನು ಹಾಗೂ ಬೂದಿಹಾಳು ಪಟ್ಟಣವನ್ನು ಕಾವ್ಯದಲ್ಲಿ ವರ್ಣಿಸಲಾಗಿದೆ.

ಬೂದಿಹಾಳು ಪಾಳೆಯಪಟ್ಟು ಕ್ರಿ.ಶ.೧೪೩೦-೩೫ರ ಸುಮಾರಿಗೆ ಆರಂಭವಾಗಿ ೧೪೭೦-೭೭ ನಡುವಣ ಅವಧಿಯಲ್ಲಿ ಆಳ್ವಿಕೆ ಮಾಡಿರಬಹುದೆಂದು ಊಹಿಸಲಾಗಿದೆ. ಈ ಪಾಳೆಯಗಾರರ ಪ್ರಸಿದ್ಧ ವ್ಯಕ್ತಿ ಎಂದರೆ ಸಿರುಮ. ಈತನು ಕ್ರಿ.ಶ.ಸು.೧೪೬೦-೭೯ರ ಅವಧಿಯಲ್ಲಿ ಆಳ್ವಿಕೆ ಮಾಡಿರಬೇಕೆಂದು ಅಭಿಪ್ರಾಯ ಪಡಲಾಗಿದೆ.[೨೧೫] ಸಿರುಮನು ಸೂಜಿಗಲ್ಲಿನಿಂದ ಬೂದಿಹಾಳಿಗೆ ಕೇಂದ್ರಸ್ಥಳವನ್ನು ಸ್ಥಳಾಂತರಿಸಿ ಅಲ್ಲಿ ಕೋಟೆ-ಕೊತ್ತಲಗಳನ್ನು ಬಲಪಡಿಸಿದನು. ಕಾವ್ಯಗಳು ಬೂದಿಹಾಳು ಕೋಟೆಯನ್ನು ರಾವಣನ ಲಂಕೆಗೂ ಕುಮರಾರರಾಮನ ಕುಮ್ಮಟದುರ್ಗಕ್ಕೂ ಹೋಲಿಸುತ್ತವೆ. ಸಿರುಮನ ಬೂದಿಹಾಳು ರಾಜ್ಯವು

ಹಿರಿಯೂರು, ಹೊನ್ನವಳ್ಳಿ, ಎಕ್ಕಟ್ಟಿ, ಕಂದಿಕೆರೆ, ಹಾರನಹಳ್ಳಿ, ಹಾಲುಕುರಿಕೆ, ಬಾಗೂರು ಪ್ರಾಂತ್ಯಗಳ ನಡುವೆ ಸಾಕಷ್ಟು ವಿಶಾಲವಾದ ಪ್ರದೇಶವಾಗಿತ್ತೆಂದು ಹೇಳಲಾಗಿದೆ.[೨೧೬]

ರಾಮಕವಿಯು ಸಿರುಮನನ್ನು 'ನಡುನಾಡ ಗೂಳಿ' ಎಂದು ವರ್ಣಿಸಲಾಗಿದೆ. ಕಾವ್ಯಗಳು, ಸಿರುಮನನ್ನು 'ಮನ್ನೆಯರ ಕೋಲಾಹಲ'. 'ಮಂಡಲೇಶ್ವರ', 'ನಡುನಾಡಿನ ಮನ್ನೆಯರ ಗಂಡ' ಎಂದು ಕರೆದಿರುವುದರಿಂದ ಸಿರುಮನು ಬಲಿಷ್ಠ ವ್ಯಕ್ತಿಯಾಗಿದ್ದು, ಬೂದಿಹಾಳು ಬಲಿಷ್ಠ ಪಾಳೆಯಪಟ್ಟಾಗಿತ್ತೆಂದು ಹೇಳಬಹುದು. ಸಿರುಮನ ಬಳಿ ೩೦೦ ಕುದುರೆ, ೩೦೦೦ ಪರಿವಾರವಿತ್ತೆಂದು ಮಲ್ಲಕವಿ ವರ್ಣಿಸುತ್ತಾನೆ. ಹುಲಿಮುಖ, ವಂಕರಿ, ಕೊತ್ತಲ, ವ್ಯವಸ್ಥಿತವಾದ ಅಗಳು, ಚಿತ್ರಕೆಲಸದ ತೆನೆಗಳು, ಅಲ್ಲಲ್ಲಿ ಡೆಂಕಣಿ, ಯಂತ್ರ ಹೂಡಿಸಿದ್ದ ಪರಿಘಗಳಿಂದ ಕೋಟೆ ಬಲಿದುರ್ಗವಾಗಿ ಕಂಚಿನ ಕೋಟೆಯೆನಿಸಿತ್ತು. ಸುಭದ್ರ ಜಾಗೃತಾ ರಕ್ಷಣಾ ವ್ಯವಸ್ಥೆ, ವೀರಭಂಟರು, ಯುದ್ಧಸಾಮಗ್ರಿಗಳು ಕೋಟೆಗಳಲ್ಲಿದ್ದವು. ಸಮುದ್ರ ಆದಾಯ ತರುವ ವ್ಯಾಪಾರ ಮಾರ್ಪಾಟು ಕೃಷಿ ಉತ್ಪನ್ನ ಇವನ ರಾಜ್ಯವನ್ನು ಸುಭಿಕ್ಷವನ್ನಾಗಿಸಿತು. ಬೂದಿಹಾಳಿನಲ್ಲಿ ಸೂರ್ಯಬೀದಿ, ಶಶಿಬೀದಿಗಳಿದ್ದು ಅಲ್ಲಿ ದಿನನಿತ್ಯ ಜನರಿಗೆ ಕೊರತೆಯಾಗದಂತೆ ಆಹಾರಪದಾರ್ಥಗಳು ಮಾರಾಟವಾಗುತ್ತಿದ್ದವು. ಹೀಗೆ ಕಾವ್ಯಗಳು ಬೂದಿಹಾಳು ಕೋಟೆಯನ್ನು ಮತ್ತೆ ಸಿರುಮನು ಅಧಿಕಾರ ನಡೆಸಿದ ರೀತಿಯನ್ನು ವರ್ಣನೆ ಮಾಡುತ್ತವೆ.

ಸಿರಮನ ಪತನಾನಂತರ ಬೂದಿಹಾಳು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿ ಆಡಳಿತದ ಒಂದು ಸೀಮೆಯಾಯಿತು.[೨೧೭] ನಂತರ ತರೀಕೆರೆ ಪಾಳೆಯಗಾರರು, ಬಿಜಾಪುರದ ಸುಲ್ತಾನರು ಇಲ್ಲಿ ಆಳ್ವಿಕೆ ನಡೆಸಿದರು. ಮೊಘಲ್ ಸುಲ್ತಾನನು ಕರ್ನಾಟಕದ ದಕ್ಷಿಣ ಭಾಗವನ್ನು ವಶಪಡಿಸಿಕೊಂಡಾಗ ಬೂದಿಹಾಳು ಪಾಳೆಯವು ಸಿರಾ ಸುಬೇದಾರರಿಗೆ ಸೇರಿತು. ಆಗ ಇದು ಸಿರಾದ ಏಳು ಪರಗಣಗಳಲ್ಲಿ ಒಂದೆನಿಸಿತು. ನಂತರ ಚಿತ್ರದುರ್ಗ ಪಾಳೆಯಗಾರರು, ಮರಾಠರು. ಹಾಗೂ ಕ್ರಿ.ಶ.೧೭೬೧ರಲ್ಲಿ ಮೈಸೂರಿನ ಹೈದರಾಲಿ ಬೂದಿಹಾಳನ್ನು ವಶಪಡಿಸಿಕೊಂಡನು. ಅಂತಿಮವಾಗಿ ಟಿಪ್ಪುಸುಲ್ತಾನನ ಕಾಲಕ್ಕೆ ಬೂದಿಹಾಳು ಮೈಸೂರು ಸಂಸ್ಥಾನಕ್ಕೆ ಸೇರಿಸಲಾಯಿತು.[೨೧೮]

೨.೬.೧೨ ಹರತಿ(ಹರ್ತಿಕೋಟೆ) ಪಾಳೆಯಗಾರರು

ಜಿಲ್ಲೆಯ ಹಿರಿಯೂರು ತಾಲೂಕಿನ ಹರ್ತಿಕೋಟೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.೧೩೫೦ರಿಂದ ೧೮೦೦ರವರೆಗೂ ಆಳ್ವಿಕೆ ಮಾಡಿರುವ ಪಾಳೆಯಗಾರರು ಹರತಿ ಪಾಳೆಯಗಾರರೆಂದೇ

ಪ್ರಸಿದ್ಧರಾಗಿದ್ದಾರೆ. ಇವರು ಜಿಲ್ಲೆಯ ವಿವಿದ ಭಾಗಗಳಲ್ಲಿ ಆಳ್ವಿಕೆ ಮಾಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಈ ನಾಯಕರ ಮೂಲದ ಬಗ್ಗೆ ವಿವಿಧ ವಿದ್ವಾಂಸರು ಈಗಾಗಲೇ ಅನೇಕ ಚರ್ಚೆಯನ್ನು ನಡೆಸಿದ್ದಾರೆ.[೨೧೯] ಈ ಎಲ್ಲ ಅಂಶಗಳನ್ನು ಕ್ರೋಢಿಕರಿಸಿ ಲಭ್ಯವಿರುವ ಶಾಸನಗಳಿಂದ ವಂಶಾವಳಿಯನ್ನು ಎಂ.ವಿ. ಚಿತ್ರಲಿಂಗಪ್ಪನವರು ಪ್ರಕಟಿಸಿದ್ದಾರೆ.[೨೨೦] ಈ ಎಲ್ಲಾ ದಾಖಲೆಗಳು ಈ ಮನೆತನದ ಮೂಲಪುರುಷ ತಿಪ್ಪರಾಜು(ತಿಪ್ಪನಾಯಕ) ಎಂದು ಈತನ ಪೂರ್ವಿಕರು ಬಿಜಾಪುರದ ಹರತಿ ಸಾರವಾಡದ ಪ್ರಾಂತದವರು ಎಂದು ಅಭಿಪ್ರಾಯಪಟ್ಟಿದ್ದಾರೆ. ಜಿಲ್ಲೆಯಲ್ಲಿನ ಶಾಸನಗಳು ಇವರನ್ನು ಹರತಿ-ಐಮಂಗಲ,[೨೨೧] ಹರತಿ ನಿಡಗಲ್ಲು[೨೨೨] ಮನೆತನದವರೆಂದು ಕರೆಯಲ್ಪಟ್ಟಿವೆ.

ಹರತಿಯವರೆಂದು ಹೇಳಿಕೊಂಡಿರುವ ಸುಮಾರು ೪೫ ಮಂದಿ ನಾಯಕರು ರಾಯದುರ್ಗ, ದೊಡ್ಡೇರಿ, ನಿಡಗಲ್ಲು, ರತ್ನಗಿರಿ, ಸಿರಾ, ಹಿರಿಯೂರು, ಐಮಂಗಲ ಮುಂತಾದ ಕಡೆಗಳಲ್ಲಿ ಆಳ್ವಿಕೆ ನಡೆಸಿದ್ದಾರೆ. ಈ ಮನೆತನದ ಮೂಲ ಪುರುಷ ತಿಪ್ಪರಾಜನು ವಾಸ್ತವವಾಗಿ ವಿಜಯನಗರದ ಹಕ್ಕಬುಕ್ಕರ ಸಮಕಾಲೀನನಾಗಿದ್ದು, ಅವರ ಸೈನ್ಯದಲ್ಲಿ ಪ್ರಮುಖ ದಳಪತಿಯಾಗಿದ್ದನು. ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿ, ವೇದಾವತಿ ತೀರ ಪ್ರದೇಶವನ್ನು ಜಹಗೀರಾಗಿ ಪಡೆದು ಅಲ್ಲಿ ತನ್ನ ಪೂರ್ವಿಕರ ವಾಸಸ್ಥಾನದ ನೆನಪಿಗಾಗಿ ಹರತೀಕೋಟೆಯನ್ನು ನಿರ್ಮಿಸಿ ಕ್ರಿ.ಶ.ಸು.೧೩೪೦ರಿಂದ ೫೫೫ರವರೆಗೆ ಆಳಿದನು. ತಿಪ್ಪರಾಜನು ತಂದೆಯ ಹೆಸರಿನಲ್ಲಿ ಚಂದ್ರಗಿರಿಯನ್ನು, ತಾಯಿಯ ಹೆಸರಿನಲ್ಲಿ ರತ್ನಗಿರಿಯನ್ನು ಸ್ಥಾಪಿಸಿದನು.[೨೨೩]

ತಿಪ್ಪರಾಜನ ಮಗ ಕಾಮಯ್ಯನಾಯಕನಿಗೆ ಅಬ್ಬಯ್ಯನಾಯಕ ಮತ್ತು ಕೋಟೆನಾಯಕ ಎಂಬ ಮಕ್ಕಳಿದ್ದರು. ಇವರಲ್ಲಿ ಅಬ್ಬಯ್ಯನಾಯಕನು ಪ್ರಸಿದ್ಧನಾಗಿದ್ದು, ಕೋಟೆಕೆರೆ ಎಂಬಲ್ಲಿ ತನ್ನ ನೆಲೆವೀಡನ್ನು ಮಾಡಿಕೊಂಡಿದ್ದನು. ಕೋಟೆನಾಯಕನಿಗೆ ಮಲ್ಲೆಯನಾಯಕ ಎಂಬ ಮಗನಿದ್ದನು. ಈತನ ಕುಟುಂಬ ಪರಶುರಾಂಪುರವನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಿತು. ಇಲ್ಲಿನ ಶಾಸನವು ಹನುಮಂತ ಮತ್ತು ಗರುಡ ದೇವರನ್ನು ಪ್ರತಿಷ್ಠೆ ಮಾಡಿಸಿದುದಾಗಿ ತಿಳಿಸುತ್ತದೆ.[೨೨೪] ಅಬ್ಬೆಯನಾಯಕನ ನಂತರ ಹಿರಿಯ ಮಗ ಪಾಲನಾಯಕ ಕೋಟೆಕೆರೆ ಮತ್ತು ಹರತಿ ಕೋಟೆಯನ್ನಾಳಿದ್ದನು. ಈತನ ೨ ಮತ್ತು ೩ನೇ ಮಕ್ಕಳಾದ ಕಾಮನಾಯಕ ಮತ್ತು ಬೊಮ್ಮನಾಯಕರು ಐಮಂಗಲದ ಸುತ್ತಲಿನ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಈ ಬೊಮ್ಮನಾಯಕನು ವಿಜಯನಗರ ಅರಸರ ಅನುಮತಿ ಪಡೆದು ದೊಡ್ಡೇರಿ ಮತ್ತು ತಳಕುಗಳನ್ನು ಸ್ಥಾಪಿಸಿ ಗೋಸಿಕೆರೆಯನ್ನು ನಿರ್ಮಿಸಿದರು. ಬೊಮ್ಮನಾಯಕನ ಮಗನಾದ ಎರಂಬಾಪೆ ನಾಯಕನು ತನ್ನ ಹೆಸರಿನಲ್ಲಿ ಯರಂಬಾಪೆನಹಳ್ಳಿ(ಯರಬಳ್ಳಿ) ನಿರ್ಮಿಸಿದನು. ಈತನ ಮಗ ಚಿಕ್ಕತಿಪ್ಪರಾಜನು ನಿಡಗಲ್ಲು ದುರ್ಗಕ್ಕೆ ಅಧಿಪತಿಯಾಗಿದ್ದನಲ್ಲದೇ ಈತನು ಹರತಿ ಪಾಳೆಯಗಾರರಲ್ಲಿ ಪ್ರಮುಖನಾಗಿದ್ದನು.[೨೨೫]

ಅಬ್ಬೆನಾಯಕನ ೩ನೇ ಮಗನಾದ ಕಾಮನಾಯಕನು ಮೊದಲಿಗೆ ಐಮಂಗಲದಲ್ಲಿದ್ದು ಕ್ರಿ.ಶ. ಸುಮಾರು ೧೩೪೨ರ ನಂತರ ಈತನ ಕುಟುಂಬದವರು ಹರತಿಕೋಟೆಯಲ್ಲಿ ಬಹುಕಾಲ ಅಪ್ರಸಿದ್ಧರಾಗಿಯೇ ಉಳಿದಿದ್ದರು. ಇವರಲ್ಲಿ ಕಾಮಿನಾಯಕ-ಗಡ್ಡದ ಬ್ರಹ್ಮನಾಯಕ-ಹೊಟ್ಟೆಣ್ಣನಾಯಕ ಇಮ್ಮಡಿ ಬೀರಣ್ಣ ನಾಯಕ-ಈಶ್ವರ ದೇವಿನಾಯಕ-ಬಸವಿನಾಯಕ-ಮುಮ್ಮಡಿ ಬ್ರಹ್ಮನಾಯಕ-ಈಶ್ವರ ದೂಳಪ್ಪನಾಯಕ-ದೊಡ್ಡಪ್ಪನಾಯಕ-ಲಕ್ಷ್ಮೀಪತಿನಾಯಕ-ಹೀಗೆ ಒಬ್ಬರ ನಂತರ ಒಬ್ಬರು ಅಧಿಕಾರಕ್ಕೆ ಬಂದರು. ಲಕ್ಷ್ಮೀಪತಿನಾಯಕನಿಗೆ ಇಬ್ಬರು ಮಕ್ಕಳಿದ್ದು, ಮೊದಲ ರಂಗಪ್ಪನಾಯಕ ಮತ್ತು ಹರತಿಸ್ಥಳದ ಚಿಕ್ಕರಂಗಪ್ಪನಾಯಕರಿದ್ದರು. ಚಿಕ್ಕ ರಂಗಪ್ಪನಾಯಕನು ಹರತಿಕೋಟೆಯಲ್ಲಿದ್ದುಕೊಂಡು ತನ್ನ ಕಾಳಾಮುಖ ಗುರುಗಳಾದ ಹೊಟ್ಟೆಯೀಶ್ವರಯ್ಯ ಎಂಬುವರ ಸಿಂಹಾಸನ ಮಠಕ್ಕೆ ಹೆಮಂಡಿಹಾಳು(ಹೇಮದಳ) ಗ್ರಾಮವನ್ನು ಕ್ರಿ.ಶ.೧೫೯೨ರ ಜುಲೈ ತಿಂಗಳಿನಲ್ಲಿ ದಾನ ಮಾಡಿದನು. ಈ ದಾನ ಶಾಸನದಲ್ಲಿ ಹಿಂದೆ ಹೇಳಿದ ವಂಶಾವಳಿ ಇದೆ.[೨೨೬] ಈತನ ನಂತರ ವಿಚಾರ ತಿಳಿಯುವುದಿಲ್ಲ. ಮುಂದೆ ಬರುವ ಇವರ ಚರಿತ್ರೆ ಗೊಂದಲಮಯವಾಗಿದೆ.

ಹೀಗೆ ಹರತಿ ಪಾಳೆಯಗಾರರು ಸೈನ್ಯಾಧಿಕಾರಿಗಳಾಗಿ, ಜಾಗೀರುದಾರರಾಗಿ, ಪಾಳೆಯಗಾರರಾಗಿ, ಹರತಿಕೋಟೆ, ಕೋಟೆಕೆರೆ, ಬುಕ್ಕಪಟ್ಟಣ, ಮಡಕಶಿರಾ, ಹಿರಿಯೂರು, ಪರಶುರಾಂಪುರ, ರತ್ನಗಿರಿ, ಮಿಡಗೇಸಿ, ದೊಡ್ಡೇರಿ, ನೀಡಗಲ್ಲು, ಐಮಂಗಲ ಮುಂತಾದ ಕಡೆ ಆಳ್ವಿಕೆ ನಡೆಸಿರುವುದು ಕಂಡು ಬರುತ್ತದೆ. ವಿಜಯನಗರದಲ್ಲಿ ಪತನಾನಂತರ ಜಿಲ್ಲೆಯಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಬಂದರು. ತಮ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳು ವಿಜಯನಗರದ ಕಾಲಕ್ಕೆ ಇದ್ದಂತೆ ಸೀಮೆ, ವೇಂಠೆ, ಸ್ಥಳ ಮುಂತಾದ ಘಟಕಗಳಾಗಿ ವಿಂಗಡಿಸಿ ಸೂಕ್ತ ಆಡಳಿತ ವ್ಯವಸ್ಥೆಯನ್ನು ಮಾಡಿದ್ದಾರೆ. ಇವರು ಮಠ, ದೇವಸ್ಥಾನ, ಬ್ರಾಹ್ಮಣರು ಹಾಗೂ ವೀರರಿಗೆ ಯಥೋಚಿತವಾಗಿ ದಾನದತ್ತಿಗಳನ್ನು ನೀಡುತ್ತಿದ್ದರು. ಇವರು ಕರ್ನಾಟಕದಲ್ಲಿ ಅನೇಕ ಅಭೇದ್ಯವಾದ ಕೋಟೆ-ಕೊತ್ತಲಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಹರತಿಕೋಟೆ, ನಿಡಗಲ್ಲುದುರ್ಗ, ಶಿರಾ, ರತ್ನಗಿರಿ, ಮಿಡಿಗೇಶಿ ಇವರ ಕಾಲದಲ್ಲಿ ನಿರ್ಮಿತವಾಗಿದ್ದವು. ಕೋಟೆ ಕಾಳಗಗಳು, ಕೋಟೆಗೆ ಲಗ್ಗೆ ಹಾಕುವ ಕಾಳಗ ತಂತ್ರಗಳು ಇವರ ಅವಧಿಯಲ್ಲಿ ಹೆಚ್ಚು ವಿಶಿಷ್ಟವಾಗಿದ್ದವು.[೨೨೭]

[illegible]

೨.೬.೧೩ ಹಟ್ಟಿ(ನಾಯಕನಹಟ್ಟಿ) ಪಾಳೆಯಗಾರರು

ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಅನೇಕ ಪಾಳೆಯಪಟ್ಟುಗಳಲ್ಲಿ ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿಯೂ ಒಂದಾಗಿತ್ತು. ನಾಯಕನಹಟ್ಟಿಯನ್ನು ತಮ್ಮ ಆಡಳಿತದ ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಇವರನ್ನು ಹಟ್ಟಿ ಪಾಳೆಯಗಾರರೆಂದು ಕರೆಯಲಾಗುತ್ತದೆ. ಹಿಂದೆ ಈ ಊರನ್ನು ಕಟ್ಟಿಸಿದವನು ಕೋಟೆ ಮಲ್ಲನಾಯಕನೆಂಬುವನು. ಈತನ ಮೂಲ ಒಂದು ರೀತಿ ಜಾನಪದ ಕಥೆಯ ರೂಪದಲ್ಲಿ ಪ್ರಾರಂಭವಾಗುತ್ತದೆ. ನಾಯಕನಹಟ್ಟಿ ಬಖೈರಿನ ಪ್ರಕಾರ ಈ ಮಲ್ಲನಾಯಕನು ಶ್ರೀಶೈಲ ಪರ್ವತದ ಬಳಿಯ ಕರಮಲೆ ಮತ್ತು ಕೊಮ್ಮಮಲೆ ಪ್ರದೇಶಗಳ ಸಮೀಪ ನೆಲೆಸಿದ್ದು, ಅಸಂಖ್ಯಾತ ತುರುಕರುಗಳ ಒಡೆಯನಾಗಿದ್ದನು. ಒಮ್ಮೆ ಈ ಪ್ರದೇಶದ ಭೀಕರ ಕ್ಷಾಮಕ್ಕೆ ತುತ್ತಾದ ನಂತರ ಈತ ತನ್ನ ೧೨ ಪೆಟ್ಟಿಗೆ ದೇವರು, ೧೨೦೦ ಪಶುಗಳೊಂದಿಗೆ ಹಾಗೂ ೫೦೦ ಜನ ಮ್ಯಾಸರು ಮತ್ತು ತನ್ನ ಆರುಜನ ಅಣ್ಣತಮ್ಮಂದಿರೊಡನೆ ಹುಲ್ಲು ನೀರು ಹುಡುಕುತ್ತಾ ಇಂದಿನ ನಾಯಕನಹಟ್ಟಿಯ ಬಳಿಬಂದು ನೆಲೆನಿಂತನು. ಈ ಪ್ರದೇಶದಲ್ಲಿ ಬೆಳೆದಿದ್ದ ಕಾಡನ್ನು ಕಡಿದು ಹಟ್ಟಿಯನ್ನು ಹಾಕಿಕೊಂಡು ಇಲ್ಲಿ ನೆಲೆಸಿದನು. ಆದರೆ ದೊರೆಗಳ ಅನುಮತಿಯಿಲ್ಲದೆ ಹಟ್ಟಿ ಹಾಕಿಕೊಂಡಿದ್ದ ಇವನನ್ನು ವಿಜಯನಗರದವರು ಈತನ ಮೇಲೆ ಯುದ್ಧ ಮಾಡಲು ಸೈನ್ಯವನ್ನು ಕಳುಹಿಸಿದರು. ಈ ಸೈನ್ಯವನ್ನು ಮಲ್ಲನಾಯಕರ ದನಕರುಗಳು ವಿಜಯನಗರದ ಸೈನ್ಯದ ಮೇಲೆ ನುಗಿದ್ದಾಗ ಸೈನ್ಯ ದಿಕ್ಕೆಟ್ಟು ಓಡಿ ಹೋಗುತ್ತದೆ. ತರುವಾಯ ಈತನ ಸಾಹಸವನ್ನು ಮೆಚ್ಚಿ ವಿಜಯನಗರದವರು ಈತನಿಗೆ ಹಟ್ಟಿ ಕಟ್ಟಿಕೊಳ್ಳಲು ಮಾನ್ಯತೆ ನೀಡುತ್ತಾರೆ. ಜೊತೆಗೆ ದುರ್ಗದ ಆಡಳಿತವನ್ನು ಇವನಿಗೆ ವಹಿಸುವುದರ ಮೂಲಕ ಪಾಳೆಯಗಾರರ ಪದವಿ ನೀಡಿದರೆಂದು ತಿಳಿದುಬರುವುದು.[೨೨೮]

ಹಟ್ಟಿಮಲ್ಲಪ್ಪನಾಯಕನ ತರುವಾಯ ಬಂದ ಈ ಮನೆತನದ ಪಾಳೆಯಗಾರರಲ್ಲಿ ಅತ್ಯಂತ ಪ್ರಸಿದ್ಧಿ ಪಡೆದವನೆಂದರೆ ಬೋಡಿ ಮಲ್ಲಪ್ಪನಾಯಕ ಎಂಬುವನು. ಈತನ ಕಾಲದಲ್ಲಿ ನಾಯಕನಹಟ್ಟಿ ತನ್ನ ಸರ್ವತೋಮುಖ ಬೆಳವಣಿಗೆಯನ್ನು ಕಾಣುತ್ತದೆ. ಇವನಿಗೆ ಚಿತ್ರದುರ್ಗದ ಚಿಕ್ಕಣ್ಣ ನಾಯಕರ ತಂಗಿ ಸರ್ಜಮ್ಮನಾಗತಿಯನ್ನು ಕೊಟ್ಟು ಮದುವೆ ಮಾಡಲಾಯಿತು. ಬಹುಶಃ ಚಿತ್ರದುರ್ಗದ ಪಾಳೆಯಗಾರರು ಈತನಿಗೆ ಸಹಕರಿಸಿದಂತೆ ಕಂಡುಬರುವುದು.[೨೨೯] ಈತನು ವಿಜಯನಗರದ ಅರಸರಿಗೆ ಸೇವೆ ಸಲ್ಲಿಸಿದ್ದ ರಿಂದಲೂ, ಜಟ್ಟಿಯೊಬ್ಬನನ್ನು ಸೋಲಿಸಿ ತನ್ನ ಬಲದ ಪ್ರದರ್ಶನ ಮಾಡಿದ್ದರಿಂದಲೂ ಅವನಿಗೆ ಭೀಮ ಎಂಬ ಬಿರುದು ನೀಡಿ ಗೌರವಿಸಲಾಯಿತು. ಇದರ ಜ್ಞಾಪಕಾರ್ಥವಾಗಿ ಮಲ್ಲಪ್ಪನು ನಾಯಕನಹಟ್ಟಿ

ಪ್ರದೇಶದಲ್ಲಿ ೭ ಕೆರೆಗಳು ಹಾಗೂ ೭ ಪುರಗಳನ್ನು ಕಟ್ಟಿಸಿದಂತೆ ಕಂಡುಬರುವುದು. ಅವುಗಳೆಂದರೆ ೧. ಭೀಮನಕೆರೆ, ೨. ಹಿರೇಕೆರೆ, ೩. ಚಿಕ್ಕೆರೆ, ೪. ರಾಮಸಾಗರ ಕೆರೆ, ೫. ವರವಿನ ಕೆರೆ, ೬. ಹೊಸಕೆರೆ, ೭. ನಾಯಕನಕೆರೆ. ಇದೇ ರೀತಿ ೧. ಕಾಶೀಪುರ, ೨. ಗಿಡ್ಡಾಪುರ, ೩. ಮಲ್ಲಾಪುರ, ೪. ಬಸವಾಪುರ, ೫. ಖುಧಾಪುರ, ೬. ಮಹದೇವಪುರ, ೭. ಗೌರೀಪುರ ಎಂಬ ಪುರಗಳನ್ನು ಸ್ಥಾಪಿಸಿದನು. ಇವುಗಳಲ್ಲಿ ಕೆಲವು ಈಗಲೂ ಅಸ್ತಿತ್ವದಲ್ಲಿವೆ. ಗೌರೀಪುರದಲ್ಲಿ ಗೌರೀಶಂಕರ ದೇವಸ್ಥಾನ ಈತನ ಅವಧಿಯಲ್ಲಿಯೇ ನಿರ್ಮಾಣವಾಗಿರುವುದೆಂದು ಹೇಳಲಾಗಿದೆ.[೨೩೦]

ಬೋಡಿ ಮಲ್ಲಪ್ಪನಾಯಕನ ಕಾಲದಲ್ಲಿ ನಿರ್ಮಾಣವಾದದ್ದೆಂದು ಹೇಳಲಾಗಿರುವ ನಾಯಕನಹಟ್ಟಿಗೆ ಸಮೀಪದ ಹೊಸಗುಡ್ಡ (ರಾಮದುರ್ಗ) ಗುಹಾಂತರ ದೇವಾಲಯ ದಕ್ಷಿಣ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿದೆ. ಈತನ ಕಾಲಾವಧಿಯಲ್ಲಿಯೇ ಈ ದೇವಾಲಯದ ಸುತ್ತ ಕೋಟೆಕೊತ್ತಲಗಳನ್ನು ನಿರ್ಮಿಸಿರುವುದು ಬಖೈರುವಿನಿಂದ ತಿಳಿದುಬರುತ್ತದೆ.[೨೩೧]

ಬೋಡಿಮಲ್ಲಪ್ಪನಾಯಕರ ನಂತರ ಬಂದ ಮಲ್ಲಪ್ಪನಾಯಕನೆಂಬುವನು ರಾಯದುರ್ಗದ ಬೊಮ್ಮನಾಯಕನ ಪ್ರಾರ್ಥನೆಯಂತೆ ೨೦೦೦ ಕೆಂಪು ಮತ್ತು ೧೦೦೦ ಬಿಳಿ ಹಸುಗಳನ್ನು ಒದಗಿಸಿದನಂತೆ. ಅದಕ್ಕೆ ಪ್ರತಿಯಾಗಿ ಬೊಮ್ಮನು ಮೊಳಕಾಲ್ಮೂರು ಬೆಟ್ಟವನ್ನು ಮಲ್ಲಪ್ಪನಾಯಕನಿಗೆ ಬಿಟ್ಟುಕೊಟ್ಟನು. ಮಲ್ಲಪ್ಪನಾಯ್ಕನು ಈ ಬೆಟ್ಟದ ಮೇಲೆ ಕೋಟೆಕೊತ್ತಲಗಳನ್ನು ನಿರ್ಮಿಸಿದನು.[೨೩೨] ತರುವಾಯ ಚಿತ್ರದುರ್ಗದ ದೊರೆ ಬಿಚ್ಚುಗತ್ತಿ ಭರಮಣ್ಣನಾಯಕನು ಕ್ರಿ.ಶ.೧೬೭೮ರಲ್ಲಿ ಮೊಳಕಾಲ್ಮೂರನ್ನು ಆಕ್ರಮಿಸಿಕೊಂಡು ನಾಯಕನಹಟ್ಟಿ ಅವನಿಗೆ ಬಿಟ್ಟುಕೊಟ್ಟನು. ಕ್ರಿ.ಶ.೧೭೭೮ರಲ್ಲಿ ಹೈದರಾಲಿಯು ಚಿತ್ರದುರ್ಗವನ್ನು ವಶಪಡಿಸಿಕೊಳ್ಳುವವರೆಗೆ ನಾಯಕನಹಟ್ಟಿಯು ಚಿತ್ರದುರ್ಗ ಪಾಳೆಯಗಾರರ ಅಧೀನದಲ್ಲಿಯೇ ಇದ್ದಿತು. ನಂತರ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಅಧೀನಕ್ಕೊಳಪಟ್ಟಿತು.[೨೩೩]

ಮೊಳಕಾಲ್ಮೂರು ಬೆಟ್ಟದ ಮೇಲೆ ದೊರಕಿರುವ ಶಾಸನವೊಂದು ಹಟ್ಟಿ ಪಾಳೆಯಗಾರರಿಗೆ ಸಂಬಂಧಿಸಿದ್ದು, ಈ ಶಾಸನದಲ್ಲಿ ಮಲ್ಲಪ್ಪನಾಯಕನು ತನ್ನ ತಾಯಿ ಲಕ್ಷ್ಮಮ್ಮನಾಗತಿಯ ಹೆಸರಿನಲ್ಲಿ ಕೆರೆ ಕಟ್ಟಿಸಿದನೆಂದು ಹೇಳುತ್ತದೆ.[೨೩೪] ಬಸವನಬಾಗಿಲ ಬಳಿಯಿರುವ ಮತ್ತೊಂದು ಶಾಸನವು ಕೋಟೆಬಾಗಿಲು ಕಾಯುವವನಿಗೆ ಸಂಬಂಧಿಸಿದೆ. ಈ ಶಾಸನವು ಕೋಟೆಬಾಗಿಲ ಕಾಯುವವನು ದಾರಿತಪ್ಪಿದರೆ ಹೊಟ್ಟೆಬಗಿಸಿ ತಲೆ ಒಸಿ ಸೂಲಕ್ಕೆ ಹಾಕಿಸಲಾಗುತ್ತದೆಂಬ ಕಟ್ಟಪ್ಪಣೆಯನ್ನು ಕುರಿತು ಸಾರುತ್ತದೆ.[೨೩೫] ಚಳ್ಳಕೆರೆಯ ಮತ್ತೊಂದು ಶಾಸನವು ದತ್ತಿಕೊಟ್ಟ ಬಗ್ಗೆ ವಿವರ ನೀಡುತ್ತದೆ.[೨೩೬]

[illegible]

ನಾಯಕನಹಟ್ಟಿಯಲ್ಲಿ ಸ್ಥಾಪಿತವಾಗಿರುವ ಶ್ರೀಗುರುತಿಪ್ಪೇರುದ್ರಸ್ವಾಮಿಯ ಬಗ್ಗೆ ಶಾಸನಗಳಲ್ಲಿ ಅಥವಾ ಬಖೈರಿನಲ್ಲಾಗಲಿ ಯಾವುದೇ ಉಲ್ಲೇಖವಿಲ್ಲವಾದರೂ, ಪಾಳೆಯಗಾರರು ತಿಪ್ಪೇರುದ್ರಸ್ವಾಮಿಯ ಅನನ್ಯ ಭಕ್ತರಾಗಿದ್ದರು ಎಂಬುದನ್ನು ನೂರಾರು ಜನಪದ ಗೀತೆಗಳು ಸ್ಪಷ್ಟಪಡಿಸುತ್ತವೆ. ಈ ಪಾಳೆಯಗಾರರ ಕುರಿತ ಜಾನಪದ ಗೀತೆಗಳು ಕೂಡ ಸಾಕಷ್ಟಿವೆ.[೨೩೭] ಹಟ್ಟಿ ಮಲ್ಲಪ್ಪನಾಯಕನು ಕಟ್ಟಿದ ಕೆರೆ, ಪುರಗಳ ಕೆಲಸ ಕಾರ್ಯಗಳಲ್ಲಿ ತಿಪ್ಪೇಸ್ವಾಮಿ ಅಪಾರ ಆಸಕ್ತಿ ಹೊಂದಿದ್ದು ಮಾಡಿದವರಿಗೆ ನೀಡು ಭಿಕ್ಷೆ ಎನ್ನುವ ಸೂತ್ರದಿಂದ ಎಲ್ಲರನ್ನೂ ಅಳೆದು ನೋಡುತ್ತಿದ್ದರಂತೆ. ಸಮಕಾಲೀನ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಲ್ಲಿ ತಿಪ್ಪೇಸ್ವಾಮಿ ನಿಪುಣನಾಗಿದ್ದನು. ಹಟ್ಟಿಯ ಆಳ್ವಿಕೆಗೆ ಮಲ್ಲಪ್ಪನಾಯಕ ಅಣಿಯಾಗಲು ತಿಪ್ಪಯ್ಯನ ಪ್ರೋತ್ಸಾಹ ಮುಖ್ಯವೆನಿಸಿತ್ತು.[೨೩೮] ಪ್ರತಿ ವರ್ಷ ಕರ್ನಾಟಕದಲ್ಲಿಯೇ ಅತಿ ದೊಡ್ಡ ಜಾತ್ರೆ ಈ ಊರಿನಲ್ಲಿ ನಡೆಯುತ್ತದೆ.

೨.೬.೧೪ ಮತ್ತೋಡು ಪಾಳೆಯಗಾರರು

ಇಂದು ಮತ್ತೋಡು ಹೊಸದುರ್ಗ ತಾಲೂಕಿನ ಹೋಬಳಿ ಕೇಂದ್ರವಾಗಿದೆ. ಕ್ರಿ.ಶ.೧೭ನೇ ಶತಮಾನದಿಂದ ೧೮ನೇ ಶತಮಾನದವರೆಗೂ ಮತ್ತೋಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಪಾಳೆಯಗಾರರೇ ಮತ್ತೋಡು ಪಾಳೆಯಗಾರರು. ಇಂದಿನ ಮತ್ತೋಡು ಹಿಂದಿನ ಮತ್ತಿನಾಡು ಆಗಿದ್ದಿತು. ಶಾಸನಗಳು ಮತ್ತಿನಡು,[೨೩೯] ಮತ್ತನಡ,[೨೪೦] ಮತ್ತೇಡು,[೨೪೧] ಎಂದು ಉಲ್ಲೇಖಿಸಿವೆ. ಜನಪದರು ಇದನ್ನು ಮುತ್ತೈದರ ನಾಡು, ಮತಿವಂತರನಾಡು ಎಂದೆಲ್ಲಾ ಕರೆಯುತ್ತಾರೆ. ಈ ಮತ್ತೋಡು ಪಾಳೆಯಗಾರರ ಮೂಲಪುರುಷ ಗಿರಿಯಪ್ಪನಾಯಕ. ಈತನು ಬಲಶಾಲಿ ಪ್ರಸಿದ್ಧ ಬೇಟೆಗಾರನೂ, ಪ್ರಾಣಿಗಳನ್ನು ಪಳಗಿಸುವ ಕಲೆಯನ್ನು ಚೆನ್ನಾಗಿ ಬಲ್ಲವನೂ ಆಗಿದ್ದನು. ಈತನ ಸಾಹಸ ಪರಾಕ್ರಮಗಳ ಬಗ್ಗೆ ತಿಳಿದುಕೊಂಡ ಪೆನುಗೊಂಡೆ ಅರಸು ವೆಂಕಪತಿರಾಯ ಗಿರಿಯಪ್ಪ ನಾಯಕನನ್ನು ಪೆನುಗೊಂಡೆಗೆ ಕರೆಸಿದ ಸಂದರ್ಭದಲ್ಲಿ, ಹುಚ್ಚೆದ್ದ ಆನೆಯನ್ನು ಪಳಗಿಸಿದ ರೀತಿಯನ್ನು ಕಂಡು ವೆಂಕಟಪತಿರಾಯನು ಗಿರಿಯಪ್ಪನನ್ನು ಸತ್ಕರಿಸಿ, ೯೦೦೦ ಪಗೋಡಗಳ ಆದಾಯವುಳ್ಳ ಹಾಗೂ ಲಕ್ಕವ್ವನಹಳ್ಳಿ, ಅದರ ಸುತ್ತಮುತ್ತಲ ಪ್ರದೇಶವನ್ನು ಕ್ರಿ.ಶ. ೧೬೦೪ರಲ್ಲಿ ನೀಡಿದನೆಂದು ಹೇಳಲಾಗಿದೆ.[೨೪೨]

ಈತನ ತರುವಾಯ ಮೊದಲನೆಯ ದೊಡ್ಡಣ್ಣನಾಯಕ, ಮೊದಲನೆಯ ಹಾಲಪ್ಪನಾಯಕ, ಎರಡನೆಯ ದೊಡ್ಡಣ್ಣನಾಯಕ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ದೊಡ್ಡಣ್ಣನಾಯಕನಿಗೆ ಚಿನ್ನದ

ಗಿರಿಯಪ್ಪನಾಯಕ, ಸಂಗಪ್ಪನಾಯಕ ಎಂಬ ಮಕ್ಕಳಿದ್ದರು. ಈ ಸಂಗಪ್ಪನಾಯಕನು ಕ್ರಿ.ಶ.೧೬೮೫ರಲ್ಲಿ ಹೊನ್ನಪ್ಪ ಎಂಬುವನಿಗೆ ಹೊಲವನ್ನು ದಾನವಾಗಿ ನೀಡಿದ ಶಾಸನವೊಂದಿದೆ. ಈ ಸಂಗಪ್ಪನಾಯಕನು ತನ್ನ ಶೌರ್ಯ ಪರಾಕ್ರಮಗಳಿಂದಾಗಿ ಶ್ರೀರಂಗಪಟ್ಟಣದ ಆಸ್ಥಾನಿಕರ ಮೆಚ್ಚುಗೆಗೆ ಪಾತ್ರನಾಗಿದ್ದನು. ಸಂಗಪ್ಪನಾಯಕನ ನಂತರ ಈತನ ಮಗನಾದ ಹಾಲಪ್ಪನಾಯಕ ಅಧಿಕಾರಕ್ಕೆ ಬಂದನು. ಈತನನ್ನು ಮತ್ತೋಡು ತಾಮ್ರಶಾಸನದಲ್ಲಿ ಹಿರಿಯ ಹಾಲಪ್ಪನಾಯಕರು ಎಂದು ಹೇಳಿದೆ.[೨೪೩] ಈತನು ಕ್ರಿ.ಶ.೧೭೦೭ರಿಂದ ೧೭೩೬ರವರೆಗೆ ಆಳ್ವಿಕೆ ನಡೆಸಿದಂತೆ ಕಂಡುಬರುವುದು. ಈ ಹಿರಿಯ ಅಥವಾ ದೊಡ್ಡ ಹಾಲಪ್ಪನಾಯಕನು ಉತ್ತಮ ಆಡಳಿತಗಾರನಾಗಿ, ವಿದ್ಯಾಪ್ರೇಮಿಯಾಗಿ, ಪ್ರಜಾಚಿಂತಕನೂ ಧರ್ಮಾಭಿಮಾನಿಯೂ ಆಗಿದ್ದನು. ಮತ್ತೋಡು ಪಾಳೆಯಗಾರರಲ್ಲೇ ಅತ್ಯಂತ ಶ್ರೇಷ್ಠವಾದ ಹಾಲಪ್ಪನಾಯಕನು ಮತ್ತೋಡನ್ನು ಮಹಾನಗರವನ್ನಾಗಿ ಮಾರ್ಪಡಿಸಿದನು. ಈತನು ಕ್ರಿ.ಶ.೧೭೧೦ರಲ್ಲಿ ಮತ್ತೋಡಿನಲ್ಲಿ ನಗರದ ಸುತ್ತಲೂ ಭದ್ರವಾದ ಕೋಟೆಕೊತ್ತಲ, ಬತೇರಿ, ಮಹಾದ್ವಾರ, ದೇವಾಲಯಗಳು, ಅರಮನೆ, ಉಗ್ರಾಣ, ಗಜಶಾಲೆ, ಅಶ್ವಶಾಲೆ, ಸದರಚಾವಡಿ, ಸಚಿವಗೃಹಗಳು, ಬಾವಿ, ರಾಜಬೀದಿಗಳನ್ನು ನಿರ್ಮಿಸಿದನು.[೨೪೪] ಈತನು ಶೈವಭಕ್ತನಾಗಿದ್ದು ಮತ್ತೋಡಿನಲ್ಲಿ ಮುರಿಗೆಸ್ವಾಮಿಗಳ ಮಠವೊಂದನ್ನು ಕಟ್ಟಿಸಿ ಅದರ ನಿರ್ವಹಣೆಗಾಗಿ ಅರೆಹಳ್ಳಿ ಎಂಬ ಹಳ್ಳಿಯನ್ನು ದತ್ತಿ ಬಿಟ್ಟ ಬಗ್ಗೆ ಶಾಸನವೊಂದು ಹೇಳುತ್ತದೆ.[೨೪೫] ಮತ್ತೊಂದು ಶಾಸನವು ಗಂಜಿಗೆರೆಯ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿದ್ದರ ಬಗ್ಗೆ ತಿಳಿಸುತ್ತದೆ.[೨೪೬]

ಹಾಲಪ್ಪನಾಯಕನಿಗೆ ಸಿದ್ಧರಾಮಪ್ಪ, ದೊಡ್ಡಣ್ಣ ಮತ್ತು ಸಂಗಪ್ಪನಾಯಕ ಎಂಬ ಮಕ್ಕಳಿದ್ದರು. ಸಿದ್ಧರಾಮಪ್ಪ ನಾಯಕನನ್ನು ಸಿದ್ಧಪ್ಪನಾಯಕನೆಂದು, ದೊಡ್ಡಣನಾಯಕನನ್ನು ಹಾಲಪ್ಪನಾಯಕನೆಂದು ಕರೆಯುವುದುಂಟು. ಈ ಇಬ್ಬರು ಮಕ್ಕಳಲ್ಲಿ ಕಿರಿಯವನಾದ ಸಿದ್ದಪ್ಪನಾಯಕನಿಗೆ ಪಟ್ಟ ಕಟ್ಟಲಾಯಿತು. ಇದರಿಂದ ಕುಪಿತಗೊಂಡ ದೊಡ್ಡಣ್ಣನಾಯಕನು ಚಿತ್ರದುರ್ಗ ಪಾಳೆಯಗಾರರಲ್ಲಿ ಹೋಗಿ ತಾನು ಪಟ್ಟಕ್ಕೆ ಬರಲು ಅವರ ನೆರವನ್ನು ಯಾಚಿಸಿದನು. ನಂತರ ಒಪ್ಪಂದವೊಂದರ ಪ್ರಕಾರ ಚಿತ್ರದುರ್ಗ ಪಾಳೆಯಗಾರರು ಸಿದ್ದಪ್ಪನಾಯಕನನ್ನು ಸೆರೆಹಿಡಿದು ತಂದು ಚಿತ್ರದುರ್ಗದ ಕಾರಾಗೃಹದಲ್ಲಿಟ್ಟರು. ಕಾರಾಗೃಹದಲ್ಲಿದ್ದ ಈ ಸುಂದರ ಸಿದ್ದಪ್ಪನಾಯಕನನ್ನು ಕಂಡ ಚಿತ್ರದುರ್ಗದ ರಾಜಕುಮಾರಿ ಆಕರ್ಶಿತಳಾಗಿ ವಿವಾಹವಾಗಲು ಬಯಸಿದಳು. ಇವಳ ಆಸೆಯಂತೆ ವಿವಾಹವೂ ನಡೆಯಿತು. ಸೆರೆಯಾಳಾಗಿದ್ದ ಸಿದ್ಧಪ್ಪನು ಚಿತ್ರದುರ್ಗ ಪಾಳೆಯಗಾರರಿಗೆ ಅಳಿಯನಾದನು. ಚಿತ್ರದುರ್ಗ ಪಾಳೆಯಗಾರರು ಹಿಂದೆ ತಾವೇ ಪಟ್ಟಕ್ಕೆ

[illegible]

[illegible]

ಕೂರಿಸಿದ್ದ ಹಾಲಪ್ಪನಾಯಕನನ್ನು ಗದ್ದುಗೆಯಿಂದ ಇಳಿಸಿ ಮತ್ತೆ ಸಿದ್ದಪ್ಪನಾಯಕನನ್ನು ರಾಜನನ್ನಾಗಿ ಮಾಡಿದರು.[೨೪೬] ಈ ಸಿದ್ಧಪ್ಪ ನಾಯಕನಿಗೆ ಹಾಲಪ್ಪನಾಯಕ, ಸಂಗಪ್ಪನಾಯಕ ಮತ್ತು ದೊಡ್ಡ್ಮಳನಾಯಕ ಎಂಬ ಮೂರುಜನ ಮಕ್ಕಳಿದ್ದರು. ಸಿದ್ದಪ್ಪನಾಯಕನ ತರುವಾಯ ಹಿರಿಯ ಮಗ, ಹಾಲಪ್ಪನಾಯಕ ಅಧಿಕಾರಕ್ಕೆ ಬಂದನು. ಈತನು ಚಿತ್ರದುರ್ಗದ ಪಾಳೆಯಗಾರರ ಮೇಲೆ ದ್ವೇಷವನ್ನು ತೀರಿಸಿಕೊಳ್ಳುವ ಸಲುವಾಗಿ ಕ್ರಿ.ಶ.೧೭೭೬ರಲ್ಲಿ ಚಿತ್ರದುರ್ಗದ ಮೇಲೆ ಹೈದರನು ದಾಳಿ ಮಾಡಿದಾಗ ಈತನ ಜೊತೆ ಹಾಲಪ್ಪನಾಯಕನು ಸೇರಿದನು. ಚಿತ್ರದುರ್ಗದ ದನಗಳನ್ನು ಹಿಡಿಯುವುದರ ಮೂಲಕ ಬೂದಿಹಾಳು ಪ್ರದೇಶದಲ್ಲಿ ಹೈದರಾಲಿಗೂ ಮತ್ತು ಚಿತ್ರದುರ್ಗದವರಿಗೂ ಕಾಳಗ ನಡೆಯಿತು. ಈ ಕಾಳಗದಲ್ಲಿ ಹೈದರಾಲಿಯ ಕಡೆಯವರು ಸೋತುಹೋದರೆ, ಹಾಲಪ್ಪನಾಯಕನು ಮತ್ತೋಡಿಗೆ ಓಡಿಹೋದನು. ನಂತರ ಚಿತ್ರದುರ್ಗದ ಪಾಳೆಯಗಾರರು ಈತನನ್ನು ಬೆನ್ನಟ್ಟಿ ಸೆರೆಹಿಡಿದು ಮತ್ತೋಡನ್ನು ಆಕ್ರಮಿಸಿ ಕೊಂಡರು.[೨೪೭] ನಂತರ ಹೈದರಾಲಿ ಕ್ರಿ.ಶ.೧೭೭೯ರಲ್ಲಿ ಚಿತ್ರದುರ್ಗದ ಮೇಲೆ ಯುದ್ಧ ಮಾಡಿದಾಗ ಚಿತ್ರದುರ್ಗವು ಹೈದರಾಲಿಯ ವಶವಾಗಿ ಹಾಲಪ್ಪನಾಯಕನನ್ನು ಬಿಡುಗಡೆ ಮಾಡಲಾಯಿತಾದರೂ ಮತ್ತೋಡು ಅಧಿಕಾರ ದೊರಕದೆ ಅಧಿಕಾರಭ್ರಷ್ಟನಾದನು.

ಮತ್ತೋಡಿನಲ್ಲಿ ಈಗಲೂ ಕೋಟೆಕೊತ್ತಲಗಳ ಅವಶೇಷಗಳು, ಅಸಂಖ್ಯಾತ ಬಾವಿಗಳು, ರುಬ್ಬುವ ಕಲ್ಲುಗಳು, ಹಗೇವುಗಳು, ದೇವಾಲಯಗಳು, ಬಾಗೀಮರದಮ್ಮಗುಡಿ ಮತ್ತು ಚಿತ್ರಮಠ ಆಕರ್ಷಕವಾಗಿವೆ. ಯೋಗಮಂಟಪ, ಪುರಾದ್ವಾರಗಳು ಮುಂತಾದ ಅವಶೇಷಗಳನ್ನು ಈಗಲೂ ಕಾಣಬಹುದಾಗಿದೆ.

ಮತ್ತೋಡು ಪಾಳೆಯಗಾರರು ಕೃಷಿ, ವ್ಯಾಪಾರ, ಉದ್ದಿಮೆ ಮತ್ತು ಕುಶಲಕಲೆಗೆ ವಿಶೇಷ ಪ್ರೋತ್ಸಾಹ ನೀಡಿದ್ದರು. ಮತ್ತೋಡು ಗಾಜಿನ ಬಳೆ ನೀಡಿ ತಯಾರು ಮಾಡುವುದರಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ಬಳೆಗಳನ್ನು ತಯಾರುಮಾಡುವ ಪ್ರತ್ಯೇಕ ಕೇರಿಯಿತ್ತು. ಕಪ್ಪು, ಹಸಿರು, ನೀಲಿ, ಕೆಂಪು, ಹಳದಿ ಈ ರೀತಿ ಐದು ಬಣ್ಣದ ಬಳೆಗಳನ್ನು ತಯಾರಿಸುತ್ತಿದ್ದರು. ಬ್ರಿಟೀಷ್ ಸರ್ವೇಕ್ಷಣಾಧಿಕಾರಿ ಬುಕಾನನ್ ೧೮೦೧ ಮೇ ೬ ರಂದು ಮತ್ತೋಡಿಗೆ ಭೇಟಿ ನೀಡಿ, ಗಾಜಿನ ಬಳೆಗಳ ತಯಾರಿಕೆಯ ಬಗ್ಗೆ ವಿವರ ನೀಡಿದ್ದಾನಲ್ಲದೆ, ಈ ಬಳೆಗಳು ಕಲೆಗಾರಿಕೆಯಿಂದ ಹೆಚ್ಚು ಆಕರ್ಷಕವಾಗಿದ್ದುದರಿಂದ ಇಲ್ಲಿನ ಕಪ್ಪುಬಳೆಗಳಿಗೆ ಹೆಚ್ಚಿನ ಬೇಡಿಕೆಯಿತ್ತೆಂದು ಅಭಿಪ್ರಾಯಪಟ್ಟಿದ್ದಾನೆ.[೨೪೮]

ಹೀಗೆ ಮತ್ತೋಡು ಪಾಳೆಯಗಾರರು ಎಲ್ಲಾ ರಂಗಗಳಲ್ಲೂ ವಿಶಿಷ್ಟ ಸೇವೆಯನ್ನು ಸಲ್ಲಿಸಿದ್ದರೆಂದು ಹೇಳಬಹುದು.

೨.೬.೧೫ ಚಿತ್ರದುರ್ಗದ ಪಾಳೆಯಗಾರರು

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥಾನಗಳಲ್ಲಿ ಚಿತ್ರದುರ್ಗವೂ ಒಂದು. ಚಿತ್ರದುರ್ಗವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಕ್ರಿ.ಶ.೧೬ನೇ ಶತಮಾನದ .ಮಧ್ಯಕಾಲದಿಂದ ಕ್ರಿ.ಶ.೧೮ನೇ ಶತಮಾನದ ಉತ್ತರಾರ್ಧವರೆಗೆ ಆಳ್ವಿಕೆ ನಡೆಸಿದ ಇವರು ಚಿತ್ರದುರ್ಗದ ನಾಯಕರೆಂದೇ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಈ ಮನೆತನದಲ್ಲಿ ೧೪ ಜನ ಪಾಳೆಯಗಾರರು ಸುಮಾರು ೨೧೧ ವರ್ಷಗಳ ಕಾಲ ಆಳ್ವಿಕೆ ನಡೆಸಿದರಲ್ಲದೆ, ವಿಜಯನಗರದ ಅರಸರು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುನ್ನಡೆದು ಅವರ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದುವರೆಸಿದರೆಂದು ಹೇಳಬಹುದು. ಅಲ್ಲದೆ ಪ್ರಾದೇಶಿಕ ಮಟ್ಟದ ಬುಡಕಟ್ಟು ಸಂಸ್ಕೃತಿ ಮತ್ತು ರಾಷ್ಟ್ರೀಯ ಮಟ್ಟದ ಶಿಷ್ಟಸಂಸ್ಕೃತಿಗಳನ್ನು ಸಂಯೋಜಿಸುವುದರ ಜೊತೆಗೆ ಸಾಂಸ್ಕೃತಿಕ ಸಂಪರ್ಕವನ್ನು ಸೃಷ್ಟಿಸಿದರು. ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ವೈವಿಧ್ಯತೆಯನ್ನು ಕಾಪಾಡಿಕೊಂಡು ಬರುತ್ತಾ ಕರ್ನಾಟಕದ ಪರಂಪರೆಯನ್ನು ಎತ್ತಿ ಹಿಡಿದರಲ್ಲದೆ ರಾಜಕೀಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡರು. ಇವರು ವಾಲ್ಮೀಕಿ ಮತಸ್ಥರೂ, ಕಾಮಗೇತಿ ವಂಶಜರೂ ಆಗಿದ್ದು 'ಕಸ್ತೂರಿ' ಎಂಬ ಅಭಿದಾನವನ್ನು 'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಬಿರುದನ್ನು ಧರಿಸಿಕೊಂಡು ಇತಿಹಾಸದಲ್ಲಿ ಮದಕರಿನಾಯಕರೆಂದೇ ಪ್ರಸಿದ್ಧರಾಗಿದ್ದಾರೆ.[೫೦]

ಇವರು ಇಡೀ ಜಿಲ್ಲೆಯನ್ನು ಮಾತ್ರವಲ್ಲದೆ ಚಿತ್ರದುರ್ಗದ ಸುತ್ತಮುತ್ತಲ ಪ್ರದೇಶಗಳಾದ ದಾವಣಗೆರೆ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಬಳ್ಳಾರಿ ಜಿಲ್ಲೆಗಳಲ್ಲಿ ತಮ್ಮ ಅಧಿಪತ್ಯ ಸ್ಥಾಪಿಸಿದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಮೊಗಲರೊಂದಿಗೆ ಮರಾಠಿಯವರೊಂದಿಗೆ, ಶ್ರೀರಂಗಪಟ್ಟಣದ ನವಾಬರೊಂದಿಗೆ, ಕರ್ನಾಟಕದ ಇತರೆ ಪಾಳೆಯಪಟ್ಟುಗಳಾದ ತರೀಕೆರೆ, ಸಂತೆಬೆನ್ನೂರು, ಉಚ್ಚಂಗಿದುರ್ಗ, ನಿಡಗಲ್ಲು, ಗುಡೇಕೋಟೆ ಮುಂತಾದವರೊಂದಿಗೆ ನಡೆಸಿದ ಹೋರಾಟ ಅಥವಾ ರಾಜಕೀಯ ಹೊಂದಾಣಿಕೆ, ಏರ್ಪಡಿಸಿದ್ದ ಬಾಂಧವ್ಯಗಳು ಇತಿಹಾಸದಲ್ಲಿ ಸ್ಮರಣೀಯವಾಗಿವೆ. ಇವರು ಕೆಲಕಾಲ ವಿಜಯನಗರದ ಅಧೀನರಾಗಿ ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದರು. ಇವರ ಕಾಲದಲ್ಲಿ ಅನೇಕ ಪ್ರಜಾಹಿತ ಕಾರ್ಯಗಳು ನಡೆದವು. ದೇವಾಲಯಗಳು, ಅಗ್ರಹಾರಗಳು, ಕೆರೆಗಳು, ಮಠಮಾನ್ಯಗಳು, ಕೋಟೆ-ಕೊತ್ತಲಗಳು ಇವರ ಕಾಲದಲ್ಲಿ ನಿರ್ಮಾಣಗೊಂಡವು. ಒಟ್ಟಾರೆ ಚಿತ್ರದುರ್ಗವು ಅಂದು ಪ್ರಸಿದ್ಧ ಪಡೆಯುವುದಕ್ಕೆ ಇವರು ಕಾರಣೀಭೂತರಾಗಿದ್ದರು.

ಚಿತ್ರದುರ್ಗ ಪಾಳೆಯಗಾರರ ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದು, ಇವರು ಆಂಧ್ರದ ತಿರುಪತಿ ಸಮೀಪದ ಜಡೆಕಲ್‌ದುರ್ಗದಿಂದ ವಲಸೆ ಬಂದವರೆಂದು ನಂತರ ಭರಮಸಾಗರದ ನೀರ್ಥಡಿಯಲ್ಲಿ ನೆಲಸಿದರೆಂದು ಹೇಳಲಾಗಿದೆ.[೨೫೧] ಮತ್ತೊಂದು ಅಭಿಪ್ರಾಯದಲ್ಲಿ ಇವರು ಆಂಧ್ರದ ಆಹೋಬಲಂ ಪ್ರದೇಶದವರಿರಬೇಕೆಂದು ಅಭಿಪ್ರಾಯಪಡಲಾಗಿದೆ.[೨೫೨] ಈ ವಂಶದ ಮೂಲಪುರುಷ ಚಿತ್ರನಾಯಕನಿಂದ ಚಿತ್ರದುರ್ಗ ಎಂಬ ಹೆಸರು ಬಂದಿದೆಂದು ಬಖೈರುವಿನಲ್ಲಿ ಹೇಳಲಾಗಿದೆ.[೨೫೩] ವಾಸ್ತವವಾಗಿ ಮತ್ತಿತಿಮ್ಮಣ್ಣನಾಯಕನೇ ಈ ವಂಶದ ಮೂಲ ಪುರುಷನೆಂದು ಶಾಸನಗಳು ಧೃಡಪಡಿಸುತ್ತವೆ. ಮತ್ತಿ ತಿಮ್ಮಣ್ಣನಾಯಕನು ವಿಜಯನಗರದ ಪ್ರತಿನಿಧಿಯಾಗಿ ತನ್ನ ರಾಜಕೀಯ ಜೀವನವನ್ನು ಅಮರನಾಯಕನಾಗಿ ಪ್ರಾರಂಭಿಸಿದನು. ತನ್ನ ಶೌರ್ಯ-ಸಾಹಸಗಳಿಂದ ಅರಸರ ಪ್ರೀತಿಯನ್ನು ಸಂಪಾದಿಸಿ ಕೃಷ್ಣದೇವರಾಯನಿಂದ ಉಂಬಳಿಯಾಗಿ ಹೊಳಲ್ಕೆರೆಯನ್ನು ಕ್ರಿ.ಶ.೧೫೬೦ರಲ್ಲಿ ಪಡೆದನು. ನಂತರ ಅರಸರ ಅನುಮತಿಯಿಂದ ಹಿರಿಯೂರು ಮತ್ತು ಚಿತ್ರದುರ್ಗ ಪ್ರದೇಶಗಳನ್ನು ಸೇರಿಸಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಚಿತ್ರದುರ್ಗ ಬೆಟ್ಟದ ಮೇಲೆ ಒಂದು ಕೋಟೆಯನ್ನು ನಿರ್ಮಿಸಿದನು.[೨೫೪] ಈತನು ಕಲಬುರ್ಗಿ ಕೋಟೆಯನ್ನು ಗೆದ್ದುಕೊಟ್ಟಿದ್ದರಿಂದ ವಿಜಯನಗರದ ಅರಸರು ಈತನಿಗೆ 'ಹಗಲುಕಗ್ಗೊಲೆಯಮಾನ್ಯ' ಎಂಬ ಬಿರುದು ದಯಪಾಲಿಸಿದ್ದರು.

ಈತನ ತರುವಾಯ ಓಬಣ್ಣನಾಯಕನು ಮದಕರಿನಾಯಕ ಎಂಬ ಬಿರುದನ್ನು ಧರಿಸಿ ಕ್ರಿ.ಶ.೧೫೬೮ರಿಂದ ೧೬೦೨ರವರೆಗೆ ಆಳ್ವಿಕೆ ನಡೆಸಿದನು. ಈ ಓಬಣ್ಣನಾಯಕನೇ ಮೊದಲನೆ ಮದಕರಿನಾಯಕ ಎಂದು ಬಿ.ರಾಜಶೇಖರಪ್ಪನವರು ಅಭಿಪ್ರಾಯಪಟ್ಟಿದ್ದಾರೆ.[೨೫೫] ಈತನು ದುರ್ಗದ ಸೀಮೆಯನ್ನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದನು. ಓಬಣ್ಣನಾಯಕನಿಗೆ ಕನಕಗಿರಿ ರಂಗಪ್ಪನಾಯಕನ ಮಗಳು ಕನಕವ್ವಳೊಂದಿಗೆ ವಿವಾಹವಾಯಿತು. ಗುಂಟನೂರು ಮಲ್ಲಪ್ಪನು ಈತನ ಪ್ರಧಾನಿಯಾಗಿದ್ದನು. ಓಬಣ್ಣನಾಯಕ ಆಡಳಿತಾವಧಿಯಲ್ಲಿ ಹುಲ್ಲೂರಿನ ಕೆರೆ ಮತ್ತು ಚಿತ್ರದುರ್ಗದಲ್ಲಿ ದೊಡ್ಡಣ್ಣನ ಕೆರೆಗಳು ನಿರ್ಮಾಣಗೊಂಡವು.[೨೫೬]

ಓಬಣ್ಣನಾಯಕನ ತರುವಾಯ ಕಸ್ತೂರಿ ರಂಗಪ್ಪನಾಯಕನು ಕ್ರಿ.ಶ.೧೬೦೨ರಿಂದ ೧೬೫೨ರವರೆಗೆ ಅಧಿಕಾರ ನಡೆಸಿದನು. ಈತನಿಗೆ ಹಿರಿಯೂರು ತಾಲೂಕು ಚಿಲ್ಲಹಳ್ಳಿಯ ತಿಮ್ಮವ್ವನಾಗ್ತಿಯನ್ನು ಕೊಟ್ಟು ಮದುವೆ ಮಾಡಲಾಗಿತ್ತು. ಕ್ರಿ.ಶ.೧೬೩೨ರಲ್ಲಿ ತರೀಕೆರೆ ಪಾಳೆಯಗಾರನಾದ ಹನುಮಪ್ಪನಾಯಕನು ಚಿತ್ರದುರ್ಗ ಪ್ರಾಂತ್ಯದ ಮೇಲೆ ದಾಳಿ ಮಾಡಿ ದೇವಪುರದ ಕೋಟೆ, ಜಾನಕಲ್ಲುದುರ್ಗ, ಹೊಳಲ್ಕೆರೆ,

ಮಾಯಕೊಂಡ, ಚಿತ್ರಹಳ್ಳಿ, ಗಡಿಗಳಿಗೆ ಮುತ್ತಿಗೆ ಹಾಕಿ ತೆಗೆದುಕೊಂಡನು. ನಂತರ ರಂಗಪ್ಪನಾಯಕ ಕೈಜೀತದ ಮಂದಿಯನ್ನು ತೆಗೆದುಕೊಂಡು ಹೋಗಿ ಕಂದವಾಡಿ ಗುಡ್ಡದಲ್ಲಿ ನಿಂತು ದಂಡಿನ ಮೇಲೆ ಬಾಣಗಳ ಪ್ರಯೋಗ ಮಾಡಿ ಜಯಿಸಿದನಲ್ಲದೆ ಕಳೆದುಕೊಂಡಿದ್ದ ಗಡಿಗಳನ್ನೆಲ್ಲಾ ಪುನಃ ತೆಗೆದುಕೊಂಡನು. ಇದರಿಂದ ಈತನು ಗಾದ್ರಿಮಲೆಹೆಬ್ಬುಲಿ ಎಂಬ ಬಿರುದನ್ನು ಧರಿಸಿದನಲ್ಲದೆ, ತರೀಕೆರೆಯ ಸೀಮೆಯ ೫ ಗ್ರಾಮಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.[೨೫೮] ಕ್ರಿ.ಶ.೧೬೩೭ರಲ್ಲಿ ಹರಪ್ಪನಹಳ್ಳಿಯವರನ್ನು, ಕ್ರಿ.ಶ.೧೬೩೮ರಲ್ಲಿ ಸಿರಾದ ರಂಗಪ್ಪನಾಯಕನನ್ನು ಸೋಲಿಸಿದನು. ಈತನ ಅಧಿಕಾರಾವಧಿಯಲ್ಲಿ ಸಾಮ್ರಾಜ್ಯವು ಹೆಚ್ಚು ವಿಸ್ತಾರವಾಯಿತು. ರಂಗಪ್ಪನಾಯಕರು ಚಿತ್ರದುರ್ಗ ಬೆಟ್ಟದ ಮೇಲೆ ಅರಮನೆ ಮತ್ತು ಇದರ ಸುತ್ತ ಕೋಟೆಯನ್ನು ಕಟ್ಟಿಸಿದರು. ಈತನ ಆಡಳಿತಾವಧಿಯಲ್ಲಿ ಚಿತ್ರದುರ್ಗವು ೨೨ ಸೀಮೆಗಳ ಸಂಸ್ಥಾನವಾಗಿ ಬೆಳೆಯಿತಲ್ಲದೆ, ಇವುಗಳಿಂದ ಸುಮಾರು ೬೫೦೦೦ ಪಗೋಡಗಳಷ್ಟು ಆದಾಯ ಬರುತ್ತಿತ್ತು. ಈತನು ಕ್ರಿ.ಶ.೧೬೫೨ರಲ್ಲಿ ಮರಣ ಹೊಂದಿದನು.

ಈತನ ಮಗನಾದ ಮದಕರಿನಾಯಕನು ಕ್ರಿ.ಶ.೧೬೫೨ರಲ್ಲಿ ಅಧಿಕಾರಕ್ಕೆ ಬಂದನು. ಈತನ ಅವಧಿಯಲ್ಲಿ ಚಿತ್ರದುರ್ಗದ ಏಳಿಗೆಯನ್ನು ಸಹಿಸದ ಸುತ್ತಮುತ್ತಲ ಪಾಳೆಯಗಾರರು ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಲು ಕಾಯುತ್ತಿದ್ದರು. ನಂತರ ಮದಕರಿನಾಯಕರಿಗೆ ಜಡಕಲ್ಲು ದುರ್ಗದ ಗೌರವ್ವ ನಾಗತಿಯೊಂದಿಗೆ ವಿವಾಹವಾಯಿತು. ಈತನು ತರೀಕೆರೆಯ ಪಾಳೆಯಗಾರ ಚಿಕ್ಕ ಹನುಮಪ್ಪನಾಯಕ ಮತ್ತು ಪಟ್ಟಾಭಿರಾಮನಾಯಕರೊಡನೆ ಹೋರಾಡಿದನಲ್ಲದೆ ಅವರನ್ನು ಸೋಲಿಸಿದನು. ಈ ಜಯದ ಪ್ರತೀಕವಾಗಿ ತನ್ನ ಕಾಲಿಗೆ ಬಾರೀ ಬಿರುದಿನ ಬಳೆಯನ್ನು ಧರಿಸಿದನು. ಈತನ ಕಾಲದಲ್ಲಿ ಗಾರೆಬಾಗಿಲು ಸುತ್ತಿನಕೋಟೆ-ಕೊತ್ತಲಗಳು ಸಹ ಮುರಿದು ಕಟ್ಟಲ್ಪಟ್ಟವು. ಹೇವಿಳಂಬಿ ಸಂವತ್ಸರದಲ್ಲಿ ಬಸವನ ಬುರುಜು ಹಾಗೂ ರಾಮದೇವರ ಗುಡಿ ಹಿಂದಿನ ಕೋಟೆಸುತ್ತು ನಿರ್ಮಾಣವಾದವು. ಗೋಡೆಕೆರೆ, ನನ್ನಿವಾಳ, ಐಮಂಗಲ ಮುಂತಾದ ಕೋಟೆಗಳನ್ನು ಮುತ್ತಿ ಠಾಣ್ಯ ಹಾಕಿದರು. ತರುವಾಯ ಹಿರಿಯೂರು ಕೋಟೆಯನ್ನು ವಶಪಡಿಸಿಕೊಂಡರು. ಇದೇ ಕಾಲದಲ್ಲಿ ಕಾಮಗೇತಿ ತಿಮ್ಮಣ್ಣನಾಯಕನ ಅರಮನೆ ಬಳಿ ಇರುವ ಮದ್ದಿನಕಣಜ, ಪಚ್ಚೇದಕಣಜ, ತುಪ್ಪದಕಣಜ, ಏಕನಾಥೇಶ್ವರಿ ಗುಡಿಗಳನ್ನು ಕಟ್ಟಿಸಿದನು. ಇವನ ಕಾಲಕ್ಕೆ ಚಿತ್ರದುರ್ಗ ಸಂಸ್ಥಾನಕ್ಕೆ ಒಂದು ಲಕ್ಷ ವರಹದ ಆದಾಯದ ಸೀಮೆಯಿದ್ದು ಪ್ರತಿಯೊಂದು ಭಾಗಕ್ಕೂ ಒಬ್ಬ ಅಧಿಕಾರಿಯನ್ನು ನೇಮಿಸಿದ್ದನು. ಈತನಿಗೆ ಮಕ್ಕಳಿಲ್ಲದ ಕಾರಣ ಈತನ ಸಾಕುಮಗ ಓಬಣ್ಣನಾಯಕನಿಗೆ ಪಟ್ಟ ಕಟ್ಟಲಾಯಿತು.[೨೫೯]

ಓಬಣ್ಣನಾಯಕನು ಕ್ರಿ.ಶ.೧೬೭೪-೭೫ರವರೆಗೆ ಕೇವಲ ಒಂದು ವರ್ಷ ಮಾತ್ರ ಅಧಿಕಾರದಲ್ಲಿದ್ದನು. ಈತನ ಅವಧಿಯಲ್ಲಿ ಓಲೆಕಾರರಿಗೆ, ಗುರಿಕಾರರಿಗೆ, ಉಡುಗೊರೆ, ಬಹುಮಾನ ನೀಡದ ಕಾರಣ ದಂಗೆಯೆದ್ದ ದಳವಾಯಿಗಳು ಈತನನ್ನು ಕೊಂದು ಹಾಕಿದರು. ಇದರಿಂದ ಚಿತ್ರದುರ್ಗ ಕೋಟೆಯಲ್ಲಿ ರಾಜಕೀಯ ಅನೈತಿಕತೆ ಏರ್ಪಟ್ಟಾಗ ದಂಗೆಯೆದ್ದ ದಳವಾಯಿಗಳೇ ಇಮ್ಮಡಿ ಮದಕರಿನಾಯಕನ ಅಣ್ಣನಾದ ಸಚ್ಚೆರಾಯನ ೨ನೇ ಮಗನಾದ ಚಿಕ್ಕಣ್ಣ ನಾಯಕನನ್ನು ಕಣಕುಪ್ಪೆಗೆ ಹೋಗಿ ಕರೆದುಕೊಂಡು ಬಂದು ಕ್ರಿ.ಶ.೧೬೭೫ರಲ್ಲಿ ಚಿತ್ರದುರ್ಗದ ದೊರೆಯನ್ನಾಗಿ ಮಾಡಿದರು.[೨೦]

ಚಿಕ್ಕಣ್ಣನಾಯಕನು ಕ್ರಿ.ಶ.೧೬೭೫-೧೬೮೬ರವರೆಗೆ ಅಧಿಕಾರ ನಡೆಸಿದನು. ಧಾರ್ಮಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಚಿಕ್ಕಣ್ಣನಾಯಕನ ಕಾಲ ಮುಖ್ಯವಾದುದು. ಯುದ್ಧತಂತ್ರದಲ್ಲಿ ನಿಪುಣನಾದ ಚಿಕ್ಕಣ್ಣನಾಯಕನು ೧೬೭೫ರಲ್ಲಿ ನಿಡಗಲ್ಲು ಪಾಳೆಯಗಾರರನ್ನು ಸೋಲಿಸಿ ಸಾಣೆಕೆರೆ ಕೋಟೆಯನ್ನು ವಶಪಡಿಸಿಕೊಂಡನು. ಅಣಜಿ ಕೋಟೆಯಿಂದ ಹರಪ್ಪನಹಳ್ಳಿಯವರನ್ನು ಓಡಿಸಿದನು. ಕ್ರಿ.ಶ.೧೬೭೬ರಲ್ಲಿ ಮೊಘಲರು ಹರಿಹರವನ್ನು ಮುತ್ತಿದ್ದಾಗ ಚಿಕ್ಕಣ್ಣನಾಯಕರು ಹೂಡಿದ ಯುದ್ಧತಂತ್ರಕ್ಕೆ ಮೊಘಲರ ಸೈನ್ಯ ಸುಲಭವಾಗಿ ಬಲಿಯಾಯಿತಲ್ಲದೆ, ಹರಿಹರದ ಕೋಟೆ ಈತನ ವಶವಾಯಿತು. ಬಸವಾಪಟ್ಟಣ, ತರೀಕೆರೆ ಮತ್ತು ಹಟ್ಟಿ ಪಾಳೆಯಗಾರರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸುವುದರ ಮೂಲಕ ಅವರೊಡನೆ ಸ್ನೇಹ ಸಂಪಾದಿಸಿದನು. ಕ್ರಿ.ಶ.೧೬೭೯ರಲ್ಲಿ ಬಿಜಾಪುರದ ಸೇನಾನಿ ರಣದುಲ್ಲಾಖಾನ್‌ನ ದಂಡು ದುರ್ಗದ ಗಡಿಗಳಲ್ಲಿ ಹಾವಳಿ ಮಾಡಿತು. ಈ ಮಧ್ಯೆ ಹರಪ್ಪನಹಳ್ಳಿಯವರು ಮಾಳಗೊಂಡನಹಳ್ಳಿಯನ್ನು ಮುತ್ತಿದ್ದರು. ದೊರೆಯು ಈ ಮುತ್ತಿಗೆಯನ್ನು ವಿಫಲಗೊಳಿಸಿ ಜಯ ಸಾಧಿಸಿದನು. ಹೀಗೆ ಅನೇಕ ಕದನಗಳಲ್ಲಿ ಹೋರಾಡಿ ಚಿಕ್ಕಣ್ಣನಾಯಕನು ಸೋಲುಗೆಲವುಗಳೆರಡನ್ನೂ ಕಂಡು ಕ್ರಿ.ಶ.೧೬೮೬ರಲ್ಲಿ ಸ್ವರ್ಗಸ್ಥನಾದನು.

ಚಿಕ್ಕಣ್ಣನಾಯಕನು ವೀರಶೈವನಾಗಿ ಮತಾಂತರಗೊಂಡನಲ್ಲದೆ ಉಗ್ರ ಚೆನ್ನವೀರದೇವರೆಂಬ ವಿರಕ್ತಜಂಗಮರನ್ನು ಗುರುವಾಗಿ ಸ್ವೀಕರಿಸಿದನು. ಇವರೊಂದಿಗೆ ರಾಜಪರಿವಾರದವರೆಲ್ಲಾ ವೀರಶೈವರಾದರು. ಗುರುಗಳಿಗಾಗಿ ಲಾಲಕೋಟೆ ಬಾಗಿಲ ಬಳಿಯಲ್ಲಿ ವೀರಶೈವ ಕಲ್ಲುಮಠವನ್ನು ಕಟ್ಟಿಸಿಕೊಟ್ಟನು. ತರುವಾಯ ಕಾರಣಾಂತರದಿಂದ ಚಿಕ್ಕಣ್ಣ ನಾಯಕನು ವೀರಶೈವ ಧರ್ಮವನ್ನು ತ್ಯಜಿಸಿದನು. ಈ ನಾಯಕನ ಅವಧಿಯಲ್ಲಿಯೇ ಇವರ ಮೂಲ ಗುರುಗಳೆನಿಸಿದ ಕೂಡಲ ಶೃಂಗೇರಿ ಜಗದ್ಗುರುಗಳಿಗೆ ಚಿತ್ರದುರ್ಗಕ್ಕೆ ಸೇರಿದ ಬಾಗೂರು ಸೀಮೆಯೊಳಗಿನ ಮಾರಬಗಟ್ಟ ಗ್ರಾಮವನ್ನು ವಹಿಸಿಕೊಟ್ಟನು.[೨೧]

ಚಿಕ್ಕಣ್ಣನಾಯಕರ ಅವಧಿಯಲ್ಲಿ ಉಚ್ಚಂಗಿದುರ್ಗದ ಕೋಟೆ,[೨೨] ಕಣಕುಪ್ಪೆಕೋಟೆ,[೨೩] ಹೊಸದುರ್ಗ[೨೪] ಮುಂತಾದ ಕೋಟೆಗಳು ಕಟ್ಟಲ್ಪಟ್ಟವು. ಚಿತ್ರದುರ್ಗದ ಮೇಲುದುರ್ಗದ ಮೇಲೆ ವಿನಾಯಕಗುಡಿ, ಹೊಂಡ, ಹೊರಕೆರೆದೇವಪುರದ ದೇವಸ್ಥಾನದ ಸುತ್ತು, ಉಯ್ಯಾಲೆ ಕಂಬಗಳನ್ನು ನಿರ್ಮಿಸಿದನು. ಈತನ ಪಾರುಪತ್ಯೆಗಾರರು ಜಿಲ್ಲೆಯ ವಿವಿಧ ಕಡೆ ಅನೇಕ ಗುಡಿಗೋಪುರಗಳನ್ನು ಕಟ್ಟಿಸಿದರು. ಚಿಕ್ಕಣ್ಣನಾಯಕನಿಗೆ ಮಕ್ಕಳಿಲ್ಲದೆ ಇವರ ಅಣ್ಣ ಲಿಂಗಣ್ಣನಾಯಕನಿಗೆ(೩ನೇ ಮದಕರಿನಾಯಕ) ಪಟ್ಟವಾಯಿತು.

ಲಿಂಗಣ್ಣನಾಯಕನು ಮುಮ್ಮಡಿ ಮದಕರಿನಾಯಕನೆಂದು ಪ್ರಸಿದ್ಧನಾಗಿದ್ದಾನೆ. ಈತನ ಅವಧಿಯಲ್ಲಿ ದಳವಾಯಿಗಳ ಉಪಟಳ ಹೆಚ್ಚಾಗಿ ದೀರ್ಘಕಾಲ ಆಳ್ವಿಕೆ ನಡೆಸಲಾಗಲಿಲ್ಲ. ಕ್ರಿ.ಶ.೧೬೮೬ರಿಂದ ೧೬೮೯ರವರೆಗೆ ಕೇವಲ ೩ ವರ್ಷಗಳ ಮಾತ್ರ ಅಧಿಕಾರದಲ್ಲಿದ್ದನು. ದಳವಾಯಿಗಳಲ್ಲೇ ಬಲಿಷ್ಠನಾದ ಪಂಚಮರ ಮುದ್ದಣ್ಣನು ತನ್ನ ಸಹೋದರನ ಬೆಂಬಲದಿಂದ ಲಿಂಗಣ್ಣ ನಾಯಕನನ್ನು ದೇವರ ಮನೆಗೆ ಹೋಗಿದ್ದ ಸಂದರ್ಭದಲ್ಲಿ ಹಿಡಿದುತಂದು ಆತನ ಮೂಗು ಕೊಯಿಸಿ ಹುಣಸೆ ಮರದ ಗಿರಿಯಣ್ಣನೆಂಬುವನ ಮನೆಯಲ್ಲಿ ಬಂಧಿಯಾಗಿರಿಸಿದನು. ಈತನ ಸ್ಥಾನದಲ್ಲಿ ದೊಣೆರಂಗಪ್ಪ ನಾಯಕ ಎಂಬುವನಿಗೆ ಪಟ್ಟ ಕಟ್ಟಲಾಯಿತಾದರೂ ಸಿಂಹಾಸನದ ನಿಜವಾದ ಹಕ್ಕುದಾರ ಬಿಚ್ಚುಗತ್ತಿ ಭರಮಣ್ಣ ನಾಯಕನಾಗಿದ್ದನು. ಬಿಚ್ಚುಗತ್ತಿ ಭರಮಣ್ಣ ನಾಯಕನು ದಳವಾಯಿ ಮುದ್ದಣ್ಣನ ಉಪಟಳದಿಂದ ಕೆಲಕಾಲ ಬಿಳಿಚೋಡು ಗ್ರಾಮದಲ್ಲಿ ತಲೆ ಮರೆಸಿಕೊಂಡಿದ್ದನು. ಚಿತ್ರದುರ್ಗದ ದಳವಾಯಿಗಳಲ್ಲಿ ನಿಷ್ಠಾವಂತನಾಗಿದ್ದ ದಳವಾಯಿ ಭರಮಪ್ಪ ನಾಯಕನ ಸಹಾಯದಿಂದ ಶತ್ರುಗಳನ್ನು ಸಂಹರಿಸಿ ಕ್ರಿ.ಶ. ೧೦೮೯ರಲ್ಲಿ ಅರಸನಾದನು.[೨೫] ಇಲ್ಲಿಗೆ ಮತ್ತಿತಿಮ್ಮಣ್ಣನಾಯಕನ ಸಂತತಿಯ ಆಳ್ವಿಕೆ ಮುಕ್ತಾಯವಾಗಿ ಚಿತ್ರದುರ್ಗದ ಇತಿಹಾಸದಲ್ಲಿ ಬಿಳಿಚೋಡು ಸಂತತಿಯ ಆಳ್ವಿಕೆ ಪ್ರಾರಂಭವಾಯಿತು.

ಬಿಚ್ಚುಗತ್ತಿ ಭರಮಣ್ಣನಾಯಕನು ಕ್ರಿ.ಶ.೧೬೮೯-೧೭೨೧ರವರೆಗೆ ಚಿತ್ರದುರ್ಗದಲ್ಲಿ ಆಳ್ವಿಕೆ ನಡೆಸಿದನು. ಈತನು ಅಧಿಕಾರಕ್ಕೆ ಬಂದಾಗ ಚಿತ್ರದುರ್ಗ ಸಂಸ್ಥಾನದಲ್ಲಿ ದಳವಾಯಿಗಳ ಪ್ರಾಬಲ್ಯ ಹೆಚ್ಚಿ ಅರಮನೆಯಲ್ಲಿ ಭಯಾನಕ ಸ್ಥಿತಿ ಒದಗಿತ್ತು. ಕೊಲೆ, ಕಗ್ಗೊಲೆ, ದೌರ್ಜನ್ಯ, ದಳವಾಯಿಗಳ ಅಮಾನುಷ ಆಡಳಿತವು ಪ್ರಜೆಗಳನ್ನು ಬಿಸಿಮೂಡಿಸಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಧಿಕಾರಕ್ಕೆ ಬಂದ ಭರಮಣ್ಣನಾಯಕರು ತನ್ನ ಶಕ್ತಿ, ಸಾಮರ್ಥ್ಯದಿಂದ ಹಾಗೂ ಚಿತ್ರದುರ್ಗದ ಬೃಹನ್ಮಠದ ಗುರುಗಳಾದ ಮುರಿಗಾ ಶಾಂತವೀರರ ಆಶಿರ್ವಾದ, ಮಾರ್ಗದರ್ಶನದಿಂದ ಯಶಸ್ವಿಯಾಗಿ ಆಳ್ವಿಕೆ ನಡೆಸಿದನು. ಚಿತ್ರದುರ್ಗ ಸಂಸ್ಥಾನಕ್ಕೆ ನಿಜವಾದ ಅರ್ಥದಲ್ಲಿ ಈತ ಬಿಚ್ಚುಗತ್ತಿಯೇ ಆಗಿದ್ದ. ಈತನ ಅವಧಿಯಲ್ಲಿ

ಚಿತ್ರದುರ್ಗ ಸಂಸ್ಥಾನವು ವಿಸ್ತಾರವಾಯಿತಲ್ಲದೆ ಎಲ್ಲಾ ರಂಗಗಳಲ್ಲಿ ತನ್ನ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡಿತು.

ಚಿತ್ರದುರ್ಗದ ಸಂಸ್ಥಾನದಲ್ಲಿದ್ದ ಅರಾಜಕತೆಯ ಲಾಭ ಪಡೆದ ದುರ್ಗದ ಹಳೆ ವೈರಿಗಳಾದ ಹರಪ್ಪನಹಳ್ಳಿ ಮತ್ತು ಬಿದನೂರಿನವರೂ ಸೇರಿ ದುರ್ಗದ ಸೀಮೆಗೆ ಸೇರಿದ್ದ ಅಣಜಿಕೋಟೆಗೆ ಮುತ್ತಿಗೆ ಹಾಕಿದರು. ಭರಮಣ್ಣನಾಯಕನು ತನ್ನ ದಳವಾಯಿ ಭರಮಣ್ಣ ನಾಯಕರು ಹಾಗೂ ಜರಿಮಲೆ, ತರೀಕೆರೆ ಮುಂತಾದ ಪಾಳೆಯಗಾರರ ಸಹಾಯದಿಂದ ಹರಪ್ಪನಹಳ್ಳಿಯವರನ್ನು ಸೋಲಿಸಿದರು. ಕ್ರಿ.ಶ.೧೬೯೬ರಲ್ಲಿ ಮರಾಠ ಸಂತತಿಯ ದೊಡ್ಡ ಸೈನ್ಯವು ಸೀರ್ಯಾವನ್ನು ಮುತ್ತಿದಾಗ, ಸೀರ್ಯಾದಲ್ಲಿ ಮೊಘಲರ ಸುಬೇದಾರ ನಾಗಿದ್ದ ಖಾಸಿಂಖಾನನು ಓಡಿಬಂದು ದೊಡ್ಡೇರಿ ಕೋಟೆಯೊಳಗೆ ಅವಿತುಕೊಂಡನು. ಈತನೊಂದಿಗೆ ಔರಂಗಜೇಬ್‌ನ ಖಾನ್‌ಜಾದ್‌ಖಾನ್ ಮತ್ತಿತರ ಸರದಾರರು ಇದ್ದರು. ದುರ್ಗದ ದಂಡು ಸಂತಾಜಿ ಯೊಂದಿಗೆ ಸೇರಿಕೊಂಡು ಖಾಸಿಂಖಾನನ ವಿರುದ್ಧ ಹೋರಾಡಿತು. ಈ ಮುಂಚೆ ಯೋಚಿಸದೆ ಮೊಗಲರ ದಂಡು ರಭಸವಾಗಿ ಈ ಚಿಕ್ಕ ಕೋಟೆಗೆ ಬಂದು ಬಿದ್ದುದರಿಂದ ಕೋಟೆಯಲ್ಲಿ ಎಲ್ಲರಿಗೂ ಸ್ಥಳವಕಾಶ ಮತ್ತು ಆಹಾರಸಾಮಗ್ರಿಗಳ ತೊಂದರೆಯಿಂದ ಮುಕ್ಕಾಲು ಭಾಗ ಸೈನ್ಯ ಯುದ್ಧರಂಗದಿಂದ ಹಿಂದಕ್ಕೆ ಸರಿಯಿತು. ಅಲ್ಲದೆ ಹಸಿವಿನಿಂದ ಮೊಘಲ್ ಸೈನ್ಯ ಶರಣಾಯಿತು. ಖಾಸಿಂಖಾನ್ ಆತ್ಮಹತ್ಯೆ ಮಾಡಿಕೊಂಡ. ತರುವಾಯ ಸಂತಾಜಿಯು ದೊಡ್ಡೇರಿ ಕೋಟೆಯನ್ನು, ಎರಡು ಮಿಲಿಯನ್ ಹಣ, ಅನೇಕ ಕುದುರೆಗಳು ಮತ್ತು ಇತರೆ ಸಂಪತ್ತನ್ನು ದುರ್ಗದವರಿಗೆ ಉಚಿತವಾಗಿ ಬಿಟ್ಟುಕೊಟ್ಟು ಹೋದನು.[೨೬೬]

ಕ್ರಿ.ಶ.೧೬೯೮ರಲ್ಲಿ ಗುಡೇಕೋಟೆಯವರಿಗೆ ಸೇರಿದ ನಾಗಸಮುದ್ರವನ್ನು ಮುತ್ತಿ ತೆಗೆದುಕೊಂಡನು. ತರುವಾಯ ಆ ನಾಯಕರ ಕುಟುಂಬದ ಬಂಗಾರ ನಾಗತಿಯನ್ನು ವಿವಾಹವಾದನು. ಕ್ರಿ.ಶ.೧೬೯೯ರಲ್ಲಿ ಇಂದೂರಾಯನೂ ರಾಯದುರ್ಗದವರು ಸೇರಿ ನಾಯಕನಹಟ್ಟಿ ಕೋಟೆಯನ್ನು ಮುತ್ತಿದರು. ನಂತರ ಭರಮಪ್ಪನಾಯಕನು ಹಟ್ಟಿಮಲ್ಲಪ್ಪನಾಯಕನು, ಮತ್ತಿತರೆ ಪಾಳೆಯಗಾರರನ್ನು ಸೇರಿಸಿಕೊಂಡು ನನ್ನಿವಾಳದ ಕಾಳಗದಲ್ಲಿ ಶತ್ರು ಸೈನ್ಯವನ್ನು ಸದೆಬಡೆದನು. ಹಟ್ಟಿಯನ್ನು ಶತ್ರುಗಳಿಂದ ಮುಕ್ತಗೊಳಿಸಿದರು. ಮಲೆನಾಡು ಸೀಮೆಯ ಹೊಳೆಹೊನ್ನೂರನ್ನು ಸಿರಾದ ಸುಬೇದಾರ ಫಜರುಲ್ಲಾಖಾನನಿಗೆ ಗೆದ್ದುಕೊಟ್ಟಿದ್ದಕ್ಕಾಗಿ ಖಾನನು ದುರ್ಗದವರಿಗೆ ದೊಡ್ಡೇರಿ ಮತ್ತು ಜಾಜೂರು ಸೀಮೆಗಳನ್ನು ಕೊಟ್ಟನು. ಕ್ರಿ.ಶ.೧೭೦೯ರಲ್ಲಿ ಪುನಃ ಹರಪನಹಳ್ಳಿಯ ಮೇಲೆ ಯುದ್ಧ ಮಾಡಿ ಹಲವಾರು ಗಡಿಗಳನ್ನು ವಶಪಡಿಸಿಕೊಂಡನು. ಹೀಗೆ

[illegible]

ಅನೇಕ ಕಾಳಗಗಳಲ್ಲಿ ಭಾಗಿಯಾಗಿ ಜಯ ತಂದುಕೊಟ್ಟನಲ್ಲದೆ ದುರ್ಗದ ಸಾಮ್ರಾಜ್ಯ ವಿಸ್ತರಣೆಗೆ ಕಾರಣನಾದನು.

ಭರಮಪ್ಪನ ಆಡಳಿತಾವಧಿಯಲ್ಲಿ ಅನೇಕ ಜನೋಪಕಾರಿಯಾದ ಕಾಮಗಾರಿಗಳು ನಡೆದವು. ಈತನು ಇಮ್ಮಡಿ ಮರುಘರಾಜೇಂದ್ರಸ್ವಾಮಿಗಳ ಪರಮಭಕ್ತನಾಗಿ ಬೆಟ್ಟದ ಮೇಲೆ ಸಂಪಿಗೆ ಸಿದ್ದೇಶ್ವರ ದೇವಾಲಯದ ಬಳಿ ಕಲ್ಲುಮಠವನ್ನು ಕಟ್ಟಿಸಿಕೊಟ್ಟನು. ದೈವಭಕ್ತನಾದ ಭರಮಣ್ಣನಾಯಕನು ಶಂಕರ ಭಾರತಿಸ್ವಾಮಿಗಳಿಗೆ ಭರಮನಾಯಕ ದುರ್ಗದ ಸೀಮೆಯ, ಜಾಜೂರು ಹೋಬಳಿ ಹನುಮನಹಳ್ಳಿ ಎಂಬ ಗ್ರಾಮವನ್ನು ದಾನ ಮಾಡುತ್ತಾನೆ.[೨೬೭] ಅಲ್ಲದೆ ಭೀಮಸಮುದ್ರದ ಭೀಮೇಶನ ಗುಡಿ, ಬಿಳಿಚೋಡು ಹನುಮಂತರಾಯನ ಗುಡಿ, ನೀಲಕಂಠೇಶ್ವರ ದೇವಸ್ಥಾನ ಮೊದಲಾದ ೬೧ ದೇವಾಲಯಗಳು ಈತನ ಕಾಲದಲ್ಲಿ ನಿರ್ಮಿತವಾದವು. ಚಿತ್ರದುರ್ಗದ ಬೆಟ್ಟದ ಮೇಲೆ ಟೆಂಕಮುಖದ ಚಾವಡಿ, ನೆಲ್ಲಿಕಾಯಿ ಸಿದ್ದಪ್ಪನ ಗುಡ್ಡದ ಕೊತ್ತಲ, ಏಕನಾಥಮ್ಮನ ಗುಡಿಯ ಬಳಿ ಸುತ್ತಿನ ಬಾಗಿಲು, ಹಿಡಿಂಬೇಶ್ವರ ಸುತ್ತಿನ ಕೋಟೆ ಊರಬಾಗಿಲು, ಇದಕ್ಕೆ ಕದಗಳು, ಪಚ್ಚೆ ಕಣಿವೆಯಲ್ಲಿ ಚಿಕ್ಕಣ್ಣನಾಯಕರ ಸುತ್ತಿನಬಾಗಿಲು ಮುಂತಾದ ಕಾಮಗಾರಿಗಳನ್ನು ಮಾಡಿಸಲಾಯಿತು.

ಭರಮಣ್ಣನಾಯಕನು ಗಡಿಗಳಿಗೆ ಹೆಚ್ಚು ಪ್ರಾಮುಖ್ಯ ನೀಡಿ ಐದು ಬಲವಾದ ಗಡಿಕೋಟೆಗಳನ್ನು ನಿರ್ಮಿಸದನೆಂದು ಹೇಳಲಾಗಿದೆ.[೨೬೮] ಆದರೆ ದಾಖಲೆಗಳಲ್ಲಿ ಈ ಗಡಿಕೋಟೆಗಳ ನಿರ್ದಿಷ್ಟ ಸ್ಥಳದ ಉಲ್ಲೇಖವಿರುವುದಿಲ್ಲ. ಬಹುಶಃ ಈತನ ಹೆಸರಿನಲ್ಲಿರುವ ಭರಮಣ್ಣನಾಯಕರ ದುರ್ಗದ ಕೋಟೆ ಮತ್ತು ಭರಮಗಿರಿಕೋಟೆ ಎರಡನ್ನು ಗುರುತಿಸಬಹುದು. ಭರಮಣ್ಣನಾಯಕನು ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಸುಮಾರು ೨೦ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಅವುಗಳಲ್ಲಿ ಮುಖ್ಯವಾಗಿ ಭರಮಸಾಗರ, ಕಸ್ತೂರಿರಂಗಪ್ಪನಹಳ್ಳಿ, ಚಿತ್ರಹಳ್ಳಿ, ಮಾಯಕೊಂಡ, ಹಾಲಘಟ್ಟ, ಮಾಯಕೊಂಡ, ಮುರುಗಿಮಠ ಮುಂತಾದ ಕೆರೆಗಳು ನಿರ್ಮಾಣಗೊಂಡವು. ಮೇಲುದುರ್ಗದ ಸಿದ್ಧರಂಗಯ್ಯನ ಹೊಂಡ, ಕರೆಕಲ್ಲುಹೊಂಡ, ಹನುಮನಹೊಂಡ, ಹುಚ್ಚಂಗೆಮ್ಮನಹೊಂಡ, ಸಿಹಿ ನೀರಿನಹೊಂಡ, ಸಂತೆಹೊಂಡ ಮುಖ್ಯವಾಗಿವೆ.[೨೬೯] ಈತನಿಗೆ ದೊಡ್ಡಸಿದ್ದವ್ವ, ಚಿಕ್ಕಸಿದ್ದವ್ವ ನಾಗತಿಯರು ಪಟ್ಟದ ರಾಣಿಯರಾಗಿದ್ದರಲ್ಲದೆ, ಇತರೆ ೮ ಜನ ಬಂಗಾರದ ಸ್ತ್ರೀಯರು ೨೯ ಜನ ಮಕ್ಕಳಿದ್ದರೆಂದು ಕಂಡುಬರುವುದು. ಹೀಗೆ ಈತನ ಕಾಲದಲ್ಲಿ ಚಿತ್ರದುರ್ಗ ಸಂಸ್ಥಾನವು ಹೆಚ್ಚು ವಿಸ್ತಾರವಾಯಿತಲ್ಲದೆ ಜನಪ್ರಿಯತೆಯನ್ನು ಪಡೆಯಿತು. ಈತನು ಕ್ರಿ.ಶ.೧೭೨೧ರಲ್ಲಿ ಮರಣಹೊಂದಿದನು.

[illegible]

[illegible]

[illegible]

ಭರಮಣ್ಣನಾಯಕನ ತರುವಾಯ ಈತನ ಹಿರೇಮಗನಾದ ಹಿರೇಮದಕರಿನಾಯಕರು ಕ್ರಿ.ಶ.೧೭೨೧ರಲ್ಲಿ ಅಧಿಕಾರಕ್ಕೆ ಬಂದರು. ಶೂರನಾದ ಮದಕರಿಯು ಎಂತಹ ಯುದ್ಧಕ್ಕೂ ಹೆದರುತ್ತಿರಲಿಲ್ಲ. ಹರಪನಹಳ್ಳಿ, ಬಿದನೂರು, ಸಂತೆಬೆನ್ನೂರು ಪಾಳೆಯಗಾರರು, ಸವಣೂರು ನವಾಬರು, ಮದಕರಿಯ ರಾಜ್ಯದ ಮೇಲೆ ದಂಗೆಯೇರಿ ಬರುತ್ತಿದ್ದರು. ಮರಾಠ ಸರದಾರರು, ಮೊಘಲರು ಆಗಾಗ್ಗೆ ದುರ್ಗದ ಮೇಲೆ ದಾಳಿ ಇಡುತ್ತಿದ್ದರು. ಆದ್ದರಿಂದ ನಾಯಕರು ಸದಾ ಒಂದಲ್ಲ ಒಂದು ಯುದ್ಧದಲ್ಲಿ ನಿರತರಾಗಬೇಕಾಯಿತು. ತಂದೆಯ ಕಾಲದಿಂದಲೇ ಯುದ್ಧಗಳಲ್ಲಿ ಭಾಗವಹಿಸಿ ಅಪಾರವಾದ ಅನುಭವಗಳನ್ನು ಪಡೆದಿದ್ದ ಮದಕರಿನಾಯಕನಿಗೆ ಅಸಾಧ್ಯವಾದುದು ಯಾವುದೂ ಇರಲಿಲ್ಲ.

ಮದಕರಿನಾಯಕನು ಕ್ರಿ.ಶ.೧೭೨೮ರಲ್ಲಿ ರತ್ನಗಿರಿಸೀಮೆಯ ವೇಣುಕಲ್ಲುಗುಡ್ಡ ಮತ್ತು ಇಕ್ಕನೂರನ್ನು ಗೆದ್ದುಕೊಂಡನು. ಕ್ರಿ.ಶ.೧೭೩೩ರಲ್ಲಿ ಗುಡೇಕೋಟೆಯನ್ನು ಗೆದ್ದುಕೊಳ್ಳಲಾಯಿತು. ರಾಯದುರ್ಗದ ಪಾಳೆಯಗಾರ ಮೊಳಕಾಲ್ಮೂರನ್ನು ಮುತ್ತಿಗೆ ಹಾಕಿದಾಗ ದುರ್ಗದ ಭಟ್ಟರು ಅವರನ್ನು ಹೊಡೆದೋಡಿಸಿ ಪುನಃ ಮೊಳಕಾಲ್ಮೂರು ಕೋಟೆಯನ್ನು ಗೆದ್ದುಕೊಂಡರು. ಸಿರಾದ ಸುಬೇದಾರನಿಗೆ ಸೇರಿದ್ದ ಅಜ್ಜಂಪುರ, ದುಮ್ಮಿಳ ಕೋಟೆಗಳನ್ನು ಸಹ ಗೆದ್ದುಕೊಂಡರು. ಆನೆಗೊಂದಿ ದೊರೆಯ ಮಗಳು ಓಬವ್ವನಾಗತಿ, ಕನಕಗಿರಿಯ ವೆಂಕಟಾಚಲನಾಗತಿ ಇವರೊಂದಿಗೆ ನಾಯಕನ ವಿವಾಹವಾಗಿ ಈ ಸಂಸ್ಥಾನಗಳೊಂದಿಗೆ ಮಧುರಬಾಂಧವ್ಯ ಏರ್ಪಟ್ಟಿತು. ದಳವಾಯಿ ಭರಮಣ್ಣ ನಾಯಕನ ಸೈನ್ಯ ಹಾಗಲವಾಡಿಯವರನ್ನು ಓಡಿಸಿದನಲ್ಲದೆ ಹರ್ತಿಕೋಟೆಯನ್ನು ಕೂಡ ಸ್ವಾಧೀನಪಡಿಸಿಕೊಂಡನು.

ಕ್ರಿ.ಶ.೧೭೪೧ರಲ್ಲಿ ಸವಣೂರು ನವಾಬ ಮಜೀದಾಖಾನನು ಹಿರೇಮದಕರಿನಾಯಕನ ಮೇಲೆ ಯುದ್ಧಕ್ಕೆ ಹೋದನು. ಈ ಮಧ್ಯೆ ಕೆಳದಿ ಸಂಸ್ಥಾನದವರು ಇತರೆ ಸಂಸ್ಥಾನಿಕರೊಂದಿಗೆ ಸೇರಿಕೊಂಡು ಚಿತ್ರದುರ್ಗವನ್ನು ಹಾಳುಮಾಡುವ ಪ್ರಯತ್ನವನ್ನು ಮಾಡಿದರು. ಕೆಳದಿ ಬಸಪ್ಪನಾಯಕನು ಸವಣೂರು, ಆನೆಗೊಂದಿ, ರಾಯದುರ್ಗ, ಹರಪನಹಳ್ಳಿ, ಪಾಳೆಯಗಾರರನ್ನು ಸೇರಿಕೊಂಡು ಮದಕರಿನಾಯಕನ ಮೇಲೆ ಕ್ರಿ.ಶ.೧೭೪೧ರಲ್ಲಿ ದಾಳಿಮಾಡಿ ರಾಮಗಿರಿ ಕೋಟೆಯನ್ನು ವಶಪಡಿಸಿಕೊಂಡನು. ಆದರೆ ಹಿರೇಮದಕರಿ ನಾಯಕನು ಶೌರ್ಯದಿಂದ ಹೋರಾಡಿ ಆ ಕೋಟೆಯನ್ನು ಪುನಃ ಆಕ್ರಮಿಸಿಕೊಂಡನು. ಈ ಪಾಳೆಯಗಾರರು ಮತ್ತೆ ಚಿತ್ರದುರ್ಗ ಸಂಸ್ಥಾನದ ಮೇಲೆ ದಾಳಿಮಾಡಿ ಮಾಯಕೊಂಡ ಕೋಟೆಯನ್ನು ವಶಪಡಿಸಿಕೊಂಡರು. ಈ ಕಾಳಗದಲ್ಲಿ ಹಿರೇಮದಕರಿನಾಯಕನು ಹರಪನಹಳ್ಳಿ ಪಾಳೆಯಗಾರನಾದ ಸೋಮಶೇಖರನಾಯಕನಿಂದ ಗಾಯಗೊಂಡು ಹತನಾದನು. ಆದರೆ *ದಿಲೇರಜಂಗ್* ಕಾವ್ಯದಲ್ಲಿ

ಹಿರೇಮದಕರಿನಾಯಕನನ್ನು ಸವಣೂರು ನವಾಬ ಅಬ್ದುಲ್ ಮಜೀದಖಾನನು ಗಾಯಗೊಳಿಸಿದ್ದರಿಂದ ಸತ್ತನೆಂದು ದಾಖಲಿಸಲ್ಪಟ್ಟಿದೆ. ಪ್ರಾಯಶಃ ನವಾಬರೇ ಬರೆದ ಈ ಕಾವ್ಯವು ನವಾಬರ ಕೀರ್ತಿಯನ್ನು ಹೆಚ್ಚಿಸಲು ಬರೆಸಿರುವ ಸಂಭವವಿದೆ.[೨೦]

ಈತನ ಅವಧಿಯಲ್ಲಿ ರಾಯದುರ್ಗ ಸೀಮೆಯ ೧೮ ಪಟ್ಟಡಿಗಳನ್ನು ಒಳಗೊಂಡಂತೆ ಒಟ್ಟು ೬೦ ಸೀಮೆಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿದನು. ಈ ಎಲ್ಲಾ ಪಟ್ಟಡಿಗಳ ಒಟ್ಟು ಹುಟ್ಟುವಳಿ ಮೂರುಲಕ್ಷ ವರಹಗಳು. ಈತನ ಆಳ್ವಿಕೆಯಲ್ಲಿ ೬೪ ಗಡಿಗಳಿದ್ದು ಪ್ರತಿಯೊಂದಕ್ಕೂ ಗಡಿ ನಾಯಕರನ್ನು ನೇಮಿಸಲಾಗಿತ್ತೆಂದು ಹೇಳಲಾಗಿದೆ. ಈ ಪ್ರತಿಯೊಬ್ಬ ಗಡಿನಾಯಕರಿಗೆ ಗಡಿ ಒಂದಕ್ಕೆ ೭೫೦ ಜನರನ್ನೊಳಗೊಂಡ ಶಸ್ತ್ರಸಜ್ಜಿತ ಸೈನ್ಯವನ್ನು ಮೀಸಲಿರಿಸಲಾಗಿತ್ತು. ಈ ಎಲ್ಲಾ ಗಡಿಗಳ ಕಾರುಬಾರು ಮಾಡುವುದಕ್ಕೆ ೮ ಜನ ದಳವಾಯಿಗಳನ್ನು ನೇಮಕ ಮಾಡಿದ್ದರೆಂತಲೂ ತಿಳಿದುಬರುತ್ತದೆ. ಈ ಅರಸರ ಕಾಲದಲ್ಲಿ ಜಾನ್ ಎಂಬ ಪರಂಗಿಯವನು ಚಾವಡಿಯನ್ನು ಹೊಂದಿದ್ದು ಈತನು ದಿನವೊಂದಕ್ಕೆ ಕಲ್ಲಿನ ಉಯ್ಯಾಲೆ ಮತ್ತು ದೀಪಸ್ತಂಭಗಳನ್ನು ನಿಲ್ಲಿಸಿದನಂತೆ.[೨೧] ಮದಕರಿನಾಯಕನು ಅಪಾರ ದೈವಭಕ್ತನಾಗಿದ್ದ ಈತನು ಪ್ರತಿ ಸೋಮವಾರ ಉಪವಾಸಮಾಡಿ ಪ್ರದೋಶ ಕಾಲದಲ್ಲಿ ಚಂದ್ರಮೌಳೇಶ್ವರ ಪೂಜೆಯನ್ನು ಮಾಡುತ್ತಿದ್ದನು. ಅಲ್ಲದೆ ಈತನು ಕೂಡ ಶಂಕರಭಾರತಿ ಸ್ವಾಮಿಗಳಿಗೆ ಬಾಗೂರು ಸೀಮೆಯ ಮಾರಬಗಟ್ಟಿ ಗ್ರಾಮವನ್ನು ದಾನ ಮಾಡಿ ಗೌರವ ವ್ಯಕ್ತಪಡಿಸಿದ್ದನು.[೨೨] ಈತನ ತರುವಾಯ ೨ನೇ ಕಸ್ತೂರಿ ರಂಗಪ್ಪ ನಾಯಕನ ಅಧಿಕಾರಕ್ಕೆ ಬಂದನು.

ಹಿರಿಯ ಮದಕರಿನಾಯಕನ ಹಿರಿಯ ಪುತ್ರನಾದ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನು ಕ್ರಿ.ಶ. ೧೭೪೦ರಲ್ಲಿ ಯುವರಾಜನಾಗಿ ಪಟ್ಟಾಭಿಷಕ್ತನಾದನು. ಹರಪನಹಳ್ಳಿಯವರ ವಶದಲ್ಲಿದ್ದ ಮಾಯಕೊಂಡವನ್ನು ಮರಾಠಿ ಮುರಾರಿರಾಯನ ಸಹಾಯದಿಂದ ಗೆದ್ದು ತಂದೆಯ ಕೀರ್ತಿಯನ್ನು ಉಳಿಸಿದನು. ಹಾಗೆಯೇ ಮುರಡಿ, ಹೊನ್ನೂರು ಕೋಟೆಗಳನ್ನು ಗೆದ್ದುಕೊಂಡನು. ರಾಯದುರ್ಗ ಸೀಮೆಯ ಕರೆಕಲ್ಲು ತಿಮ್ಮಲಾಪುರ ಕೋಟೆಯನ್ನು ತೆಗೆದುಕೊಂಡು ಅದಕ್ಕೆ ಮಹಾದೇವನಕೋಟೆ ಎಂದು, ಬೂದಿಹಾಳು ಕೋಟೆಯನ್ನು ತೆಗೆದುಕೊಂಡು ಅದಕ್ಕೆ ಗಿರಿಜಾನಗರವೆಂದು ನಾಮಕರಣ ಮಾಡಿದನು.[೨೩] ಈತನ ಅವಧಿಯಲ್ಲಿ ಆನೆಗೊಂದಿಯಿಂದ ಚಿತ್ರದುರ್ಗದವರೆಗೂ ಸಣ್ಣಪುಟ್ಟ ಕದನಗಳು ನಡೆದವು. ಅನೇಕ ಬಾರಿ ಮರಾಠರಿಗೆ ಪೊಗದಿಯನ್ನು ಕೊಡುತ್ತಿದ್ದ ರಂಗಪ್ಪನಾಯಕನು ಅನಾರೋಗ್ಯದಿಂದ ಕ್ರಿ.ಶ.೧೭೫೪ರಲ್ಲಿ ಮರಣ ಹೊಂದಿದನು. ಇವನು ದುರ್ಗದ ಬೆಟ್ಟದ ಮೇಲೆ ಕಣಜಗಳನ್ನು, ಒಂದು ಬಣ್ಣದ ಚಾವಡಿಯನ್ನು

ಸಹ ಕಟ್ಟಿಸಿದನೆಂದು ಕಂಡುಬರುತ್ತದೆ. ಈತನಿಗೆ ಮಕ್ಕಳಿಲ್ಲದ ಕಾರಣ ಜಾನಕಲ್ಲುದುರ್ಗದಲ್ಲಿದ್ದ ತೊದಲ ಭರಮಪ್ಪನಾಯಕನ ಮಗನಾದ ಮದಕರಿನಾಯಕನು ಚಿತ್ರದುರ್ಗದ ಸಿಂಹಾಸನವನ್ನೇರಿದನು. ಈತನನ್ನು ರಾಜವೀರ ಮದಕರಿನಾಯಕನೆಂದು ಕರೆಯಲಾಗಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಚಿತ್ರದುರ್ಗ ರಾಜ್ಯದ ಹೆಸರನ್ನು ಚಿರಸ್ಥಾಯಿಗೊಳಿಸುವಲ್ಲಿ ಈತನು ಪ್ರಮುಖಪಾತ್ರ ವಹಿಸಿದ್ದನು.

ಚಿತ್ರದುರ್ಗದ ಪಾಳೆಯಗಾರರಲ್ಲಿ ಅತ್ಯಂತ ಪ್ರಬಲನೂ ಪ್ರಸಿದ್ಧನೂ ಆಗಿದ್ದವನು ರಾಜವೀರ ಮದಕರಿನಾಯಕ. ಕ್ರಿ.ಶ.೧೭೫೪ರಲ್ಲಿ ಕಸ್ತೂರಿ ರಂಗಪ್ಪ ನಾಯಕನ ತಾಯಿ ರಾಜ್ಯಮಾತೆ ಓಬವ್ವ ನಾಗತಿಯ ಇಚ್ಛೆಯಂತೆ ಮದಕರಿನಾಯಕನನ್ನು ಜಾನಕಲ್ಲಿನಿಂದ ದುರ್ಗಕ್ಕೆ ಕರೆಸಿ ಪಟ್ಟಕಟ್ಟಲಾಯಿತು. ಈತನ ತಂದೆ ಜಾನಕಲ್ಲಿನ ಭರಮಣ್ಣನಾಯಕ. ಮದಕರಿನಾಯಕನು ಸಿಂಹಾಸನಾರೂಢನಾದಾಗ ಕೇವಲ ೧೨ ವರ್ಷದ ಅಪ್ರಾಪ್ತ ವಯಸ್ಕನಾಗಿದ್ದನು. ಈ ಮಧ್ಯೆ ೨ ವರ್ಷ ಮದಕರಿಯ ಪರವಾಗಿ ರಾಜಮಾತೆ ಸರ್ವಾಧಿಕಾರವನ್ನು ನಡೆಸಿದಳು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡ ನೆರೆಯ ಪಾಳೆಯಗಾರರು ಚಿತ್ರದುರ್ಗದ ಗಡಿ ಹಾಗೂ ಚಿತ್ರದುರ್ಗವನ್ನು ಕಬಳಿಸಲು ಸಂಚು ಹೂಡಿದರು. ರಾಯದುರ್ಗದವರು, ಮರಾಠರು, ಹೈದರಾಲಿ ಮುಂತಾದವರ ಚಿತ್ರದುರ್ಗವನ್ನು ಪಡೆದುಕೊಳ್ಳುವ ಹೊಂಚಿನಲ್ಲಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸಿ ೨೫ ವರ್ಷಗಳ ಕಾಲ ಚಿತ್ರದುರ್ಗವನ್ನು ಸಂರಕ್ಷಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಅಲ್ಲದೆ, ಈತನ ಕಾಲದಲ್ಲಿ ಚಿತ್ರದುರ್ಗವು ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧಿ ಪಡೆಯಿತು. ಮದಕರಿನಾಯಕನು ಪ್ರಾಪ್ತವಯಸ್ಕನಾಗುವಷ್ಟರಲ್ಲಿ ರಾಜಯೋಗ್ಯವಾದ ಎಲ್ಲಾ ವಿದ್ಯೆಗಳಲ್ಲೂ ಪಾರಂಗತನಾಗಿ, ಶತ್ರುಗಳನ್ನು ಹಿಮ್ಮೆಟ್ಟಿಸುವ ಪ್ರಯತ್ನದಲ್ಲಿ ನಿರತನಾದನು.

ರಾಯದುರ್ಗದ ಪಾಳೆಯಗಾರರು ಹರಪನಹಳ್ಳಿಯವರ ಸಹಾಯ ಪಡೆದು ಚಿತ್ರದುರ್ಗದ ಸೀಮೆಯಲ್ಲಿ ಮೇಯುತ್ತಿದ್ದ ದನಗಳನ್ನು ತಿರುಗಿಸಿಕೊಂಡು ಹೋದರು. ಈ ವಿಷಯ ದುರ್ಗದವರಿಗೆ ತಿಳಿದಕೂಡಲೇ ದುರ್ಗದ ಸೇನೆ ಓಬಳಾಪುರದ ಕೋಟೆಗೆ ಬಂದು ಇಳಿಯಿತು. ಶತ್ರು ಕಡೆಯವರ ಹೋರಾಟದ ಮಧ್ಯೆಯೂ ಕೋನಾಪುರ, ಕೊಡಗನೂರುಗಳನ್ನು ತೆಗೆದುಕೊಂಡು ರಾಯದುರ್ಗವನ್ನು ವಶಪಡಿಸಿಕೊಂಡಿತು. ಕ್ರಿ.ಶ.೧೭೬೦ರಲ್ಲಿ ಹರಪನಹಳ್ಳಿ ಸೋಮಶೇಖರನಾಯಕನು ಸವಣರು ಹಖಿಂಖಾನ್, ರಾಯದುರ್ಗದ ಕೃಷ್ಣಪ್ಪನಾಯಕ ಮತ್ತು ಬಿದನೂರಿನವರನ್ನು ಸೇರಿಕೊಂಡು ದುರ್ಗದಗಡಿ ತೂಯಿಲಹಳ್ಳಿ ಯನ್ನು ಮುತ್ತಿದನು. ಪ್ರಾರಂಭದಲ್ಲಿ ದುರ್ಗದವರಿಗೆ ಜಯ ದೊರಕಿದರೂ ಶತ್ರುಗಳನ್ನು ಹೊಡೆ ದೋಡಿಸಲು ಸಾಧ್ಯವಾಗದೇ ಸೈನ್ಯ ವಾಪಾಸಾಗಬೇಕಾಯಿತು. ಕ್ರಿ.ಶ.೧೭೬೧ರಲ್ಲಿ ಜರಿಮಲೆ ಮತ್ತು

ತರೀಕೆರೆಯವರನ್ನು ಅಡಗಿಸಿದನು. ಚಿತ್ರದುರ್ಗವು ಈ ವೇಳೆಗಾಗಲೇ ದಕ್ಷಿಣ ಭಾರತದಲ್ಲಿ ಒಂದು ಬಲಿಷ್ಠ ಸಂಸ್ಥಾನವಾಗಿತ್ತು. ಇದನ್ನು ವಶಪಡಿಸಿಕೊಳ್ಳಲು ಮರಾಠರು ಮತ್ತು ಆಗ ತಾನೆ ಮೈಸೂರಿನ ಚರಿತ್ರೆಯಲ್ಲಿ ಹೆಸರಾದ ಶ್ರೀರಂಗಪಟ್ಟಣದ ನವಾಬ ಹೈದರಾಲಿಯು ಕರ್ನಾಟಕದ ಎಲ್ಲಾ ಸಂಸ್ಥಾನಗಳನ್ನು ಹತ್ತಿಕ್ಕಿ ಏಕಸಾಮ್ರಾಜ್ಯವನ್ನು ಸ್ಥಾಪಿಸಿ ಬ್ರಿಟೀಷರನ್ನು ಓಡಿಸಬೇಕೆಂಬ ಪ್ರಯತ್ನದಲ್ಲಿದ್ದನು.

ಅಲ್ಲದೆ ಮೈಸೂರು ಒಡೆಯರನ್ನು ಮೂಲೆಗೊತ್ತಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದ ಹೈದರನಿಗೆ ರಾಜ್ಯ ವಿಸ್ತರಣೆಯ ಆಕಾಂಕ್ಷೆ ಹೆಚ್ಚಾಯಿತು. ಈಗಾಗಲೇ ಚಿಕ್ಕಬಳ್ಳಾಪುರ, ಸಿರಿಸಂಸ್ಥಾನ ಅವನ ಅಧೀನವಾಗಿದ್ದವು. ಪಾಳೆಯಗಾರರಿಗೆ ಸಿಂಹಸ್ವಪ್ನವಾಗಿದ್ದ ಹೈದರನನ್ನು ಮದಕರಿನಾಯಕ ಕಡೆಗಣಿಸಿ ಸ್ವತಂತ್ರವಾಗಿ ಯಾರಿಗೂ ಜಗ್ಗದೆ ಅಧಿಕಾರ ನಡೆಸುತ್ತಿದ್ದನು. ಇದಕ್ಕೆ ಮುನ್ನ ಹೈದರಾಲಿಯು ಮದಕರಿನಾಯಕನಿಂದ ಪಡೆದ ರಾಜಕೀಯ ಲಾಭವೇ ಹೆಚ್ಚೆಂದು ಹೇಳಬಹುದು. ಕ್ರಿ.ಶ.೧೭೬೩ರಲ್ಲಿ ಬಿದನೂರನ್ನು, ಅದೇ ವರುಷ ಬಸವಾಪಟ್ಟಣ ಮತ್ತು ಬಂಕಾಪುರಗಳನ್ನು ಹೈದರಾಲಿಗೆ ಗೆದ್ದುಕೊಟ್ಟಿದ್ದನು. ಚತುರನಾದ ಮದಕರಿಯು ಹೈದರಾಲಿಯ ಉದ್ದೇಶವನ್ನು ಅರಿತು ಒಂದು ಕಡೆ ಸಹಾಯ ನೀಡುತ್ತಿದ್ದರೆ ಮತ್ತೊಂದು ಕಡೆ ಮರಾಠರೊಂದಿಗೆ ಸಖ್ಯಬೆಳಸಿ ತನ್ನ ಭದ್ರತೆಗೆ ಸಂಚಕಾರ ಒದಗದಂತೆ ಜಾಗೃತಿ ವಹಿಸಿದನು.

ಮದಕರಿನಾಯಕನು ಪೇಶ್ವೆ ಮಾಧವರಾಯನಿಗೆ ಅಸಾಧ್ಯವೆನಿಸಿದ ಹಾಗೂ ಹೈದರಾಲಿಗೆ ಸೇರಿದ್ದ ಸಾವನದುರ್ಗ, ಹುತ್ತರಿದುರ್ಗ, ನುಗ್ಗೆಹಳ್ಳಿ, ಹಾಗಲವಾಡಿ, ಬಾಣಾವರ ಮೊದಲಾದ ಕೋಟೆಗಳನ್ನು ಆಕ್ರಮಿಸಿದನು. ಕ್ರಿ.ಶ.೧೭೬೯ರಲ್ಲಿ ತುರುವೇಕೆರೆ, ಬೇಳ್ಳೂರು, ಕೋಲಾರ, ಮುಳಬಾಗಿಲು, ದೇವರಾಯನದುರ್ಗ, ಮಂಜರಾಬಾದ್, ದಾರಿನಾಯಕನಪಾಳ್ಯ ಮುಂತಾದ ಕೋಟೆಗಳಿಗೆ ಠಾಣ್ಯ ಹಾಕಿದನು. ಮೂರು ಭಾರಿ ಹೈದರಾಲಿಯು ವಶಪಡಿಸಿಕೊಳ್ಳಲು ಸಾಧ್ಯವಾಗದಿದ್ದ ನಿಜಗಲ್ಲು ಕೋಟೆ ಮದಕರಿನಾಯಕನ ಸಹಾಯದಿಂದ ಸುಲಭವಾಗಿ ವಶಕ್ಕೆ ಬಂದಿತು. ಈ ನಿಜಗಲ್ಲು ಸೋಲಿನ ನೆನಪುಗಳು ಹೈದರ್ ಮರೆಯಲಾಗದ ಘಟನೆಗಳಲ್ಲಿ ಒಂದಾಗಿತ್ತು.[೨೪] ಆನವಟ್ಟಿ ಕೋಟೆಯನ್ನು ಹಿಡಿಯುವಲ್ಲಿ ದುರ್ಗದ ಸೇನೆಯು ಮರಾಠರ ಪರವಾಗಿ ವಿಶೇಷಕಾರ್ಯವನ್ನು ಪ್ರದರ್ಶಿಸಿತು. ಈ ಎಲ್ಲಾ ಕ್ರಮಗಳಿಂದ ಹೈದರಾಲಿಯು ಮದಕರಿನಾಯಕನನ್ನು ದ್ವೇಷಿಸತೊಡಗಿದನೆಂಬುದು ಸ್ಪಷ್ಟವಾಗುತ್ತಗೆ.[೨೫] ಈ ನಿಟ್ಟಿನಲ್ಲಿ ಹೈದರಾಲಿಯು ಚಿತ್ರದುರ್ಗದ ಮೇಲೆ ಒಟ್ಟು ನಾಲ್ಕು ಬಾರಿ ಯುದ್ಧ ಮಾಡಿದನು. ಕ್ರಿ.ಶ. ೧೭೬೨ರಲ್ಲಿ ಹೈದರಾಲಿಯು ಮೊದಲಬಾರಿಗೆ ದಂಡೆತ್ತಿ ಬಂದು ಧರ್ಮಪುರ, ಪರಶುರಾಂಪುರ, ವೇಣಕಲ್ಲು,

[illegible]

ಇಕ್ಕನೂರು, ದೋಡ್ಡೇರಿ, ತಳಕು, ಗೌರಸಮುದ್ರ, ನಾಯಕನಹಟ್ಟಿ, ಹಿರಿಯೂರು, ಹೊಸದುರ್ಗ, ಜಾನಕಲ್ಲು, ಭರಮಣ್ಣನಾಯಕದುರ್ಗ, ಹೊಳಲ್ಕೆರೆ, ರಾಮಗಿರಿ, ರಂಗಯ್ಯನದುರ್ಗ, ಬಾಗೂರು ಹೀಗೆ ಪ್ರಮುಖ ಗಡಿಗಳನ್ನು ತೆಗೆದುಕೊಂಡನು. ಆಗ ಹೈದರಾಲಿಗೆ ೩ ಲಕ್ಷ ವರಾಹಗಳನ್ನು ಕೊಡುವುದರೊಂದಿಗೆ ಮದಕರಿಯು ಸಂಧಾನ ಮಾಡಿಕೊಂಡನು.

ಕ್ರಿ.ಶ.೧೭೭೪ರ ಮಾರ್ಚ್‌ನಲ್ಲಿ ೨ನೇ ಬಾರಿ ಹಾಗೂ ೧೭೭೭ರಲ್ಲಿ ೩ನೇ ಬಾರಿ ಅಂತಿಮವಾಗಿ ೧೭೭೯ರಲ್ಲಿ ದುರ್ಗದ ಮೇಲೆ ಹೈದರಾಲಿ ಧಾಳಿ ನಡೆಸಿದನು. ಕೊನೆಯ ಧಾಳಿ ನಾಲ್ಕು ತಿಂಗಳುಗಳ ಕಾಲ ಸತತವಾಗಿ ನಡೆಯಿತು.[೨೭೬] ಇದಕ್ಕೆ ಮುಂಚೆ ಮದಕರಿನಾಯಕನು ಜಿಲ್ಲೆಯಾದ್ಯಂತ ಹೈದರಾಲಿ ಧಾಳಿಯನ್ನು ತಡೆಯಲು ಮುಜಾಗ್ರತಾಕ್ರಮವಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡನು. ಸೈನಿಕರನ್ನು ಆಯಾ ಸ್ಥಳಗಳಲ್ಲಿಟ್ಟು ಸದಾ ಸನ್ನದ್ಧರಾಗಿರಲು ಸೂಚಿಸಿದನು. ಈತನ ಆದೇಶದಂತೆ ಪೂರ್ವಭಾಗದ ದೊಡ್ಡೇರಿ ಕೋಟೆಗೆ ೫೦೦ ಸೈನ್ಯ, ಆಗ್ನೇಯ ಭಾಗದ ಹಿರಿಯೂರು, ಮಸ್ಕಲ್(ಮಸಗಲ್ಲು) ಕೋಟೆಗಳಿಗೆ ೧೦೦೦ ಸೈನ್ಯ, ನೈರುತ್ಯದ ಬೂದಿಹಾಳು, ಹೊಸದುರ್ಗ ಕೋಟೆಗಳಿಗೆ ೧೦೦೦, ಪಶ್ಚಿಮದ ರಾಮಗಿರಿಯಲ್ಲಿ ೨೦೦, ಹೊಳಲ್ಕೆರೆ ೩೦೦, ವಾಯುವ್ಯದ ಮಾಯಕೊಂಡದಲ್ಲಿ ೫೦೦, ಅಣಜಿಯಲ್ಲಿ ೫೦೦, ಉತ್ತರದ ಬಿಳಿಚೋಡಿನಲ್ಲಿ ೫೦೦, ಕಣಕುಪ್ಪೆ ೧೦೦೦, ಈಶಾನ್ಯದಲ್ಲಿ ಮೊಳಕಾಲ್ಮೂರು, ಹಾನಗಲ್ಲು ಜಟಂಗಿರಾಮೇಶ್ವರ ಕೋಟೆಗಳಿಗೆ ೧೦೦೦, ಜರಿಮಲೆ ೨೦೦೦ ಹೀಗೆ ಗಡಿಪ್ರದೇಶಗಳಲ್ಲಿ ಶಸ್ತ್ರ ಸಜ್ಜಿತವಾದ ಸೈನ್ಯವನ್ನು ಇಡಲಾಯಿತು.

ಇದೇ ರೀತಿ ಕೇಂದ್ರ ಸ್ಥಾನ ಚಿತ್ರದುರ್ಗ ಹಾಗೂ ಸುತ್ತಲಿನ ಪ್ರದೇಶದಲ್ಲಿ ವಿಶೇಷ ಭದ್ರತಾವ್ಯವಸ್ಥೆ ಹಾಗೂ ಸೈನ್ಯವ್ಯವಸ್ಥೆಗಳನ್ನು ಕಲ್ಪಿಸಲಾಯಿತು. ಬೆಟ್ಟದ ಮೇಲಿರುವ ರಣಮಂಡಲ, ನೆಲ್ಲಿಕಾಯಿ ಸಿದ್ದಪ್ಪ, ಹಿಡಿಂಬೇಶ್ವರ, ಪಚ್ಚಕಣಿವೆ, ಮುತ್ತಿನ ಶಿವಾಲಯಗಳ ಬತೇರಿಗಳಿಗೆ, ಬತೇರಿ ಒಂದಕ್ಕೆ ೫-೧೮ ತ್ರೈಲಿ ಬಾಬತು ತೋಪು, ಆಯಾಬತೇರಿಯ ಮೇಲೆ ೫೦೦ ಜನ ಗೋಲಿಯರು, ನವ ಕರ್ನಾಟಕ ಮಟ್ಟಿನ ಥೈಲಿ, ತೋಪುಗಳನ್ನು ಗಾಡಿಗಳ ಮೇಲಿಟ್ಟು ಇದಕ್ಕೆ ಗಜ ವಗೈರಿ ಒದಗಿಸಬೇಕೆಂದು ಹಾಗೂ ಬತೇರಿ ಒಂದಕ್ಕೆ ಐದೈದು ಕುರಿಗಳನ್ನು ಆಹುತಿಕೊಟ್ಟು ತೋಪುಗಳಿಗೆ ಪೂಜೆ ಸಲ್ಲಿಸಿ ಸದಾ ಸಿದ್ಧವಾಗಿರುವಂತೆ ಹುಕ್ಕುಂ ಆಯಿತು. ಲಾಲ್‌ಗಡದ ಬತೇರಿಗೆ ೧೮ ತೋಪು, ೧೦೦೦ ಮಹತಾಲೂ, ೧೦೦೦ ಬಾಣದಾರರು, ಇವರಿಗೆ ಗೋಲಿ, ಮದ್ದು, ಗಜ, ವಗೈರಿ ಕೊಡುವುದು. ಸಿಹಿನೀರು ಹೊಂಡದ ಬಾಗಿಲ ಬಳಿ ಕಾಡುಮರಿ ಕಲ್ಲಪ್ಪ ನಾಯಕನಿಗೆ ಸರಿದಾರಿ ಮಕ್ತಕೊಟ್ಟು ೨೦೦೦ ಪ್ಯಾದೆ, ಯುದ್ಧ ಸಾಮಗ್ರಿಗಳನ್ನು ಕೊಟ್ಟು,

ಪೂರ್ವದ ಸಿರಾಧರ್ವಾಜ್‌ಗೆ ಭಾವ ಪರಶುರಾಮಪ್ಪನಾಯಕರಿಗೆ, ೩೦೦೦ ಸೈನಿಕರನ್ನು ಕೊಟ್ಟು, ಅಳಿಯ ಹುಚ್ಚಪ್ಪನಾಯಕರಿಗೆ ಉತ್ತರ ದಿಕ್ಕಿನ ಪತೇದರ್ವಾಜ್‌ಗೆ (ಗೆಲುವಿನ ಬಾಗಿಲು) ಕಳುಹಿಸಿ, ಸಾದ್‌ಜಾದೆ ಭರಮಪ್ಪನಾಯಕರನ್ನು ದಕ್ಷಿಣದ ಲಾಲ್‌ಕೋಟೆಗೆ ಕಳುಹಿಸಲಾಯಿತು. ಇವರಿಗೆ ೩೦೦೦ ಪ್ಯಾದೆ, ೧೦ ಡೇರಿ ಚಾವಣಿ ಹಾಕಿ, ೩೦ ಜನ ಕಾಮಟಿಯವರು, ೫ ಜನ ಪತ್ತೇದಾರರು ಮುಂತಾದವರು ಕೊಟ್ಟು ವ್ಯವಸ್ಥೆ ಮಾಡಲಾಯಿತು. ಇಷ್ಟೇ ಅಲ್ಲದೆ ದುರ್ಗದ ಪಶ್ಚಿಮ ದಿಕ್ಕಿನಲ್ಲಿರುವ ಹೆಬ್ಬುಲಿ ಕಲ್ಲಿನ ೩ ಬತೇರಿ, ದುಂಡನಾಗರಸುತ್ತಿನ ೪ ಬತೇರಿಗಳಿಗೆ, ಒನಕೆಕಿಂಡಿ ಧರ್ವಾಜ್‌ನ ೨ ಬತೇರಿಗಳಿಗೆ ೫ x ೫ರ ಪ್ರಕಾರದಂತೆ ತೋಪುಗಳನ್ನು ಇಟ್ಟು ಸಿಹಿನೀರು ಹೊಂಡದ ಕಡೆ ಶತ್ರುಗಳು ಬಾರದಂತೆ ತೋಪಿನಂತೆ ಹೊಡೆಯುವುದು ಎಂಬುದು ಆಜ್ಞೆಯಾಯಿತು.[೨೭೭]

ಚಿತ್ರದುರ್ಗಕ್ಕೆ ಬರುವ ಶತ್ರುಸೈನಿಕರನ್ನು ದೂರದಿಂದಲೇ ತಡೆಯುವಂತೆ ದುರ್ಗದ ಸುತ್ತಲು ಕೋಟೆಯಂತೆ ಹಬ್ಬಿರುವ ಕಣಿವೆಗಳಿಗೆ ವಿಶೇಷ ರಕ್ಷಣಾವ್ಯವಸ್ಥೆಯನ್ನು ಮಾಡಲಾಯಿತು. ಇಂಗಳದಾಳು, ಕುಂಚಿಗನಾಳು, ಮದಕೇರಿಪುರ, ಗೋನೂರು, ಗುಡ್ಡದ ರಂಗವ್ವನಹಳ್ಳಿ, ತಮಟಕಲ್ಲು, ಕಿರುಬನಕಲ್ಲು ಮುಂತಾದ ಕಣಿವೆಗಳಿಗೆ ಕಣಿವೆಯೊಂದಕ್ಕೆ ೫೦೦ ಪ್ಯಾದೆ, ೫೦ ಕಂದಾಜು ಸರಗೋಲಿ, ೧೦೦ ಬಾಣದಾರರು, ೩ ತೋಪುಗಳು ಮುಂತಾದ ಯುದ್ಧ ಸಾಮಗ್ರಿಗಳನ್ನು ಕೊಟ್ಟು ದಂಡುಬಾರದಂತೆ ಬಂದೋಬಸ್ತು ಮಾಡಲಾಯಿತಲ್ಲದೆ ದುರ್ಗದೊಳಕ್ಕೆ ಹೊರಗಿನಿಂದ ಯಾವ ಟೇಪು ಕಾಗದ ಪತ್ರಗಳೂ ಬಾರದಂತೆ ನೋಡಿಕೊಳ್ಳಲು ನೇಮಕ ಮಾಡಿದನು.

ಇತ್ತ ಕಡೆ ಮದಕರಿಯ ಬಗ್ಗೆ ಹೈದರಾಲಿಯ ದ್ವೇಷಭಾವನೆಗಳು ಬೆಳೆಯುತ್ತಿರುವಾಗಲೇ, ಚಿತ್ರದುರ್ಗ ಸಂಸ್ಥಾನದ ಸಂಬಂಧಿಯಾದ ಮತ್ತೋಡು ಹಾಲಪ್ಪನಾಯಕನು ಹೈದರಾಲಿಯ ಜೊತೆ ಸೇರಿ ಚಿತ್ರದುರ್ಗದವರ ದನಗಳನ್ನು ಹಿಡಿದಿದ್ದು ಯುದ್ಧಕ್ಕೆ ತತ್‌ಕ್ಷಣದ ಕಾರಣವಾಯಿತೆನ್ನಬಹುದು. ಆದರೆ ದುರ್ಗದವರ ದಂಡಿನ ಮುಂದೆ ಹೈದರಾಲಿಯ ಸೈನ್ಯ ಸೋತುಹೋಯಿತಲ್ಲದೆ, ಹೈದರನ ಸಂಬಂಧಿ ಮೊಹಿದ್ದೀನ್‌ಸಾಬ್ ಮತ್ತು ಮೊಕುದುಂಸಾಬ್ ಎಂಬುವರನ್ನು ಬಂಧಿಸಿ ದುರ್ಗದಲ್ಲಿ ಸೆರೆ ಹಿಡಿಯಲಾಯಿತು. ತರುವಾಯ ಹೈದರಾಲಿಯು ಹಾಲಪ್ಪನಾಯಕನ ಮಾತಿನ ಮೇಲೆ ತಾವು ಮಾಡಿದ್ದು ತಪ್ಪು ಎಂದು ನಮಗೀಗ ಅರಿವಾಗಿದೆ. ತಾವುಗಳು ಸೆರೆಹಿಡಿದಿಟ್ಟಿರುವ ನಮ್ಮ ಭಾವ ಮೈದುನರನ್ನು ಬಿಟ್ಟು ಕಳುಹಿಸುವಂತೆ ಪತ್ರ ಬರೆದು ವಕೀಲರ ಸಂಗಡ ಕಳುಹಿಸಿದನು. ವಾಸ್ತವವಾಗಿ ಹೈದರಾಲಿಯ ವಕೀಲರನ್ನು ಕಳುಹಿಸಿದ ಉದ್ದೇಶ ಕೋಟೆಯಲ್ಲಿರುವ ಶತ್ರುಸೈನ್ಯದ ಚಲನವಲನ, ಮದ್ದುಗುಂಡು, ಆಹಾರಸಾಮಗ್ರಿ

ಮುಂತಾದವುಗಳನ್ನು ತಿಳಿದುಕೊಂಡು ಬರುವುದೇ ಆಗಿತ್ತೆಂದು ಹೇಳಬಹುದು. ನಂತರ ಹೈದರಾಲಿಯು ಅವರ ಪತ್ರಕ್ಕೆ ಗೌರವವಿತ್ತು ಬಂಧಿಸಿದ ಸರದಾರರನ್ನು ಬಿಡುಗಡೆಗೊಳಿಸಲಾಯಿತು.

ತಮ್ಮ ಸರದಾರರು ಬಂದ ತಕ್ಷಣವೇ ವಕೀಲರನ್ನು ಹೈದರ್ ವಿಚಾರಿಸಿದ ಚಿತ್ರದುರ್ಗ ಕೋಟೆಯ ಬಗ್ಗೆ ಮಾಹಿತಿ ಪಡೆಯುತ್ತಾನೆ. ವಕೀಲರು ಚಿತ್ರದುರ್ಗದ ಕೋಟೆಯಲ್ಲಿ ೧೨ ವರ್ಷ ಮಳೆಬಾರದೇ ಇದ್ದರು, ಇರುವಷ್ಟು ನೀರಿನ ಸಂಗ್ರಹ ಇದೆ. ಕೋಟೆಯ ಅಭೇದ್ಯವಾಗಿದೆ. ಚಿತ್ರದುರ್ಗಕ್ಕಷ್ಟೇ ಅಲ್ಲದೆ ಮಾಂಡಲಿಕರಿಗೂ ಕಳುಹಿಸುವಷ್ಟು ಯುದ್ಧ ಸಾಮಗ್ರಿಗಳು, ಕೋಟೆಯಲ್ಲಿ ಈಗಾಗಲೇ ಇದೆಯಲ್ಲದೆ ಹೊಸದಾಗಿ ತಯಾರಿಸುವ ಅವಶ್ಯಕತೆಯೇ ಇಲ್ಲ ಎಂಬುದಾಗಿ ವಕೀಲರು ಹೈದರಾಲಿಗೆ ಮಾಹಿತಿಯನ್ನು ನೀಡುತ್ತಾರೆ.[೨೭೮] ನಂತರ ದಿವಾನ್‌ಪೂರ್ಣಯ್ಯನವರ ಸಲಹೆಯಂತೆ ಹರಪನಹಳ್ಳಿ ಮತ್ತು ರಾಯದುರ್ಗ ಮುಂತಾದ ಪಾಳೆಗಾರರ ಸಹಕಾರವನ್ನು ಪಡೆದು ಹೈದರಾಲಿ ಯುದ್ಧಕ್ಕೆ ಸಿದ್ಧನಾದನು. ಹೈದರಾಲಿಯು ಮದಕರಿನಾಯಕರಿಗೆ ಮತ್ತೊಂದು ಪತ್ರವನ್ನು ಬರೆದು ತಮ್ಮನ್ನು ಭೇಟಿ ಮಾಡಬೇಕೆಂದು ತಿಳಿಸುತ್ತಾನೆ. ಇದಕ್ಕೆ ಉತ್ತರವಾಗಿ ಮದಕರಿಯು ಯುದ್ಧಭೂಮಿಯಲ್ಲಿ ಬೇಟೆಯಾಗುತ್ತೇನೆಂದು ವಕೀಲರ ಕಡೆ ಹೇಳಿಕಳುಹಿಸುವ ಮೂಲಕ ಯುದ್ಧ ಪ್ರಾರಂಭವಾಗುತ್ತದೆ. ದುರ್ಗದ ಮುಖಂಡರಲ್ಲಿ ಆಲೋಚನೆ ಮಾಡಿದ ಮದಕರಿಯ ದಂಡಿನವರೆಗೆ ವಿವಿಧ ರೀತಿಯ ಪ್ರಶಸ್ತಿ ಹಾಗೂ ಬಹುಮಾನಗಳನ್ನು ಘೋಷಿಸಿ ಉತ್ತೇಜಿಸಿದನು. ಇತ್ತಕಡೆ ಹೈದರಾಲಿಯ ಸೈನ್ಯ ಮಲ್ಲಾಪುರದ ಬಳಿ ಡೇರೆ ಹಾಕಿಕೊಂಡು ನಿಂತು ಚಿತ್ರದುರ್ಗದ ಕೋಟೆಯನ್ನು ದುರ್ಬೀನು ಹಾಕಿಕೊಂಡು ವೀಕ್ಷಣೆ ಮಾಡುತ್ತಿದ್ದಿತು. ದುರ್ಗದವರು ಏಕಕಾಲಕ್ಕೆ ಕೋಟೆ, ಬತೇರಿಗಳ ಮೇಲಿಂದ ಫಿರಂಗಿಗಳನ್ನು ರೂಪಿಸಿದರಲ್ಲದೆ ಬಾಣಗಳನ್ನು ಹತ್ತಿಸಿದರು. ಹೀಗೆ ಭೀಕರ ಕೋಟೆಕಾಳಗ ಪ್ರಾರಂಭವಾಯಿತು. ಹೈದರನ ದಂಡಿನವರು ಕೋಟೆಯನ್ನು ಮುತ್ತಿದರು.

ಮುತ್ತಿಗೆ ಬಹಳ ಕಾಲ ಮುಂದುವರೆಯಿತು. ಆಕ್ರಮಣ ಮಾಡಿದ ಸೈನ್ಯವು ಮೊದಲು ಆಸುಮಾಸಿನ ಕಾಡುಗಳನ್ನು ಕಡಿದು ಬೆಟ್ಟದ ಇಳುಕಲಿನಲ್ಲಿ ಬತೇರಿಯನ್ನು ಕಟ್ಟಿ ಅವುಗಳ ಮೇಲೆ ಫಿರಂಗಿಗಳನ್ನು ಜೋಡಿಸಿ ಕೋಟೆಯ ಗೋಡೆಗೆ ಹೊಡೆಯತೊಡಗಿತು, ಕೋಟೆಯ ಗೋಡೆಯು ಎಲ್ಲಿಯಾದರೂ ಜಖಂ ಮಾಡಿದರೆ, ಉರುಳಿಸಿದರೆ, ದುರ್ಗದ ಕಾರ್ಯಾಗಾರವು ಇಡೀ ರಾತ್ರಿ ಕೆಲಸಮಾಡಿ ಗೋಡೆಯನ್ನು ಕಟ್ಟಿ ಬಿಡುತ್ತಿದ್ದರು. ಪ್ರತಿದಿನವೂ ಕೋಟೆಯಿಂದ ಹೊರಕ್ಕೆಬಂದು ಇವರು ನಿರ್ಮಿಸಿದ ಬತೇರಿಗಳ ಕಾವಲುಗಾರರನ್ನು ಹೆದರಿಸಿ, ತಲ್ಲಣಗೊಳಿಸಿ ಗೊಂದಲವುಂಟುಮಾಡಿ ಹೊರಟುಹೋಗುತ್ತಿದ್ದರು. ಕೋಟೆಯನ್ನು ವಶಪಡಿಸಿಕೊಳ್ಳಲು ಇವರು ಮಾಡಿದ ಪ್ರಯತ್ನಗಳೆಲ್ಲವನ್ನು ಅವರು ನಿಷ್ಫಲಗೊಳಿಸಿದರು.

ಕೋಟೆಯ ಮೂಗಿನ ಹಾಗಿರುವ ಬತೇರಿಯನ್ನು ಹೇಗಾದರೂ ಮಾಡಿ ಕೈವಶ ಮಾಡಿಕೊಳ್ಳಬೇಕೆಂದು ಹೈದರನು ಮಹಮದ್ ಅಲಿಗೆ ಆಜ್ಞಾಪಿಸಿದನು. ಮಹಮ್ಮದ್‌ಅಲಿಯು ಅದನ್ನು ಸಾಧಿಸಿದನು. ಅಲ್ಲಿಂದ ಕೋಟೆಯೊಳಗೆ ಪದಾರ್ಥಗಳು ಹೋಗುವುದನ್ನು ತಡೆಗಟ್ಟಲು ಸಾಧ್ಯವಾಯಿತು. ಕೊನೆಗೆ ಬಲವಾದ ಆಕ್ರಮಣ ಮಾಡಲು ಆಜ್ಞೆ ಮಾಡಿದನು. ಉಗ್ರವಾದ ಕಾಳಗದಲ್ಲಿ ಚಿತ್ರದುರ್ಗ ಪತನಗೊಂಡಿತು. ರಾಜನನ್ನು ಸೆರೆಹಿಡಿದು ಅವನ ಕುಟುಂಬ ಸಮೇತ ಶ್ರೀರಂಗಪಟ್ಟಣಕ್ಕೆ ಕಳುಹಿಸಿದನು. ಹೀಗೆ ಹೈದರನು ಚಿತ್ರದುರ್ಗವನ್ನು ವಶಪಡಿಸಿಕೊಂಡಿದ್ದು ಬಹಳ ಕಷ್ಟ ಪಡಬೇಕಾಯಿತು. ಈ ಗೆಲುವಿಗೆ ಸೇನೆಯ ಸಾಮರಸ್ಯದ ಜೊತೆಗೆ ಹೈದರನ ಬುದ್ಧಿಕೌಶಲ್ಯ ಮುಖ್ಯವಾಗಿದ್ದಿತು.[೨೬]

ಹೈದರನ ಈ ನಿಲುವಿಗೆ ೨ ಕಾರಣಗಳಿದ್ದವು. ಒಂದು ಹೈದರನ ಸಮರ್ಥ ಸೇನೆ ಹಾಗೂ ಆತನ ಬುದ್ಧಿಕೌಶಲ್ಯ ಒಂದು ಕಡೆಯಾದರೆ ಮತ್ತೊಂದು ಕಡೆ ದುರ್ಗದ ಸೈನ್ಯದಲ್ಲಿದ್ದ ಮುಸ್ಲಿಂ ಅಧಿಕಾರಿಗಳು ಮತ್ತು ಕೆಲವು ಹಿಂದೂ ಅಧಿಕಾರಿಗಳು ಹಾಗೂ ಮರಾಠರ ಸಮಯ ಸಾಧಕತನ - ಇವು ಹೈದರಾಲಿಗೆ ವರದಾನವಾಗಿ ಚಿತ್ರದುರ್ಗ ಸಂಸ್ಥಾನವು ಕ್ರಿ.ಪೂ.೧೭೭೯ರ ಮಾರ್ಚ್‌ನಲ್ಲಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಶ್ರೀರಂಗಪಟ್ಟಣದ ನಾವಾಬನಿಗೆ ಶರಣಾಯಿತು. ನಂತರ ಹೈದರಾಲಿಯು ಚಿತ್ರದುರ್ಗ ಖಜಾನೆಯಲ್ಲಿದ್ದ ಅಪಾರ ಸಂಪತ್ತನ್ನು ಸಾಗಿಸಿಕೊಂಡುಹೋದನು. ಚಿತ್ರದುರ್ಗಕ್ಕೆ ಷೇರ್‌ಅಯಾಸ್ ಎಂಬುವವನ್ನು ಮಿಲಿಟರಿ ಗರ್ವನರ್ ಆಗಿ ನೇಮಿಸಲಾಯಿತು. ಹೀಗೆ ಚಿತ್ರದುರ್ಗ ಪ್ರದೇಶವು ಹೈದರಾಲಿಯ ನೇರ ಆಡಳಿತಕ್ಕೆ ಒಳಪಟ್ಟಿತು.

ಶ್ರೀರಂಗಪಟ್ಟಣಕ್ಕೆ ಕರೆದೊಯ್ದಿದ್ದ ದುರ್ಗದ ಕುಟುಂಬದವರಲ್ಲಿ ಮದಕರಿನಾಯಕ, ಅವನ ತಮ್ಮ ಪರಶುರಾಮನಾಯಕನ ಮಗ ಕುಮಾರ ಭರಮಪ್ಪನಾಯಕ ಮತ್ತು ದೊಡ್ಡ ಮದಕರಿನಾಯಕ ಇವರನ್ನು ಬೇರೆ ಬೇರೆಯಾಗಿ ಬಂಧನದಲ್ಲಿರಿಸಲಾಯಿತು. ಪರಶುರಾಮಪ್ಪನಾಯಕ ಮತ್ತು ಕುಮಾರ ಭರಮಪ್ಪ ನಾಯಕರನ್ನು ಕಬ್ಬಾಳುದುರ್ಗಕ್ಕೆ ಸಾಗಿಸಿದಾಗ ಅವರು ತಪ್ಪಿಸಿಕೊಳ್ಳಲು ಯತ್ನಿಸಿದುದಕ್ಕೆ ಅವರನ್ನು ನೇಣು ಹಾಕಲಾಯಿತು. ಇತ್ತ ಬಂಧನದಲ್ಲಿದ್ದ ದೊರೆ ವಿಷಪ್ರಾಷನವಾಗಿ ಮರಣಹೊಂದಿದನು. ಉಳಿದ ದೊಡ್ಡ ಮದಕರಿನಾಯಕನನ್ನು ಪೂರ್ಣಯ್ಯನವರು ಸೆರೆಯಿಂದ ಬಿಡಿಸಿದರು. ಟಿಪ್ಪುವಿನ ಕಾಲದಲ್ಲಿ ದೊಡ್ಡ ಮದಕರಿನಾಯಕನನ್ನು ಕೊಲ್ಲಿಸುವ ಪ್ರಯತ್ನ ನಡೆಯಲು ತಿರುವನಂತಪುರದ ಮಹಾರಾಜರ ಹತ್ತಿರಹೋಗಿ ಆಶ್ರಯ ಪಡೆದು ಅವರ ಪರವಾಗಿ ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ಪಾಲ್ಗೊಂಡು ಬ್ರಿಟೀಷ್‌ರಿಗೆ ನೆರವಾದನು. ಈ ಕಾರ್ಯಾಚರಣೆಯಿಂದ ಟಿಪ್ಪು ಮರಣಹೊಂದಿದ ಮೇಲೆ, ದೊಡ್ಡ

[illegible]

ಮದಕರಿನಾಯಕನಿಗೆ ಪೂರ್ಣಯ್ಯ ಹುಸಿ ಭರವಸೆಯನ್ನು ನೀಡಿದ್ದರಿಂದ ಮೈಸೂರನ್ನು ಬಿಟ್ಟು ಚಿತ್ರದುರ್ಗ ಸಂಸ್ಥಾನದ ದೊಡ್ಡೇರಿ ತಾಲೂಕಿಗೆ ಸೇರಿದ್ದ ಚಳ್ಳಕೆರೆಗೆ ಬಂದು ನೆಲೆಸಿ, ನಂತರ ಕ್ರಿ.ಶ. ೧೮೭೫ರಲ್ಲಿ ಮರಣಹೊಂದಿದನು. ಈತನ ಮರಣದೊಂದಿಗೆ ಚಿತ್ರದುರ್ಗ ಪಾಳೆಯಗಾರರ ಅವಧಿ ಮುಕ್ತಾಯವಾದಂತೆ ಕಂಡುಬರುತ್ತದೆ.[೨೮೦]

೨.೬.೧೬ ಬೇಲೂರು ಪಾಳೆಯಗಾರರು

ಹಾಸನ ಜಿಲ್ಲೆಯ ಬೇಲೂರಿನಿಂದ ಆಳಿದ ಈ ಪಾಳೆಯಗಾರರು ಜಿಲ್ಲೆಯ ವಿವಿಧ ಭಾಗಗಳ ಮೇಲೆ ತಮ್ಮ ಆಳ್ವಿಕೆ ನಡೆಸಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಈ ಶಾಸನಗಳು ಅವರ ವಂಶಾವಳಿ, ಬಿರುದಾವಳಿಗಳನ್ನು ತಿಳಿಸುವುದಲ್ಲದೆ, ತೆರಿಗೆ, ದಾನದತ್ತಿ ಮುಂತಾದ ವಿಷಯಗಳನ್ನು ತಿಳಿಸುತ್ತವೆ. ಬೇಲೂರು ಸೀಮೆಯ ಅಧಿಪತಿಯಾಗಿ ವಿಜಯನಗರ ಅರಸರಿಂದ ನೇಮಿಸಲ್ಪಟ್ಟ ಎರ್ರಕೃಷ್ಣಪ್ಪ(ಹಡಪದ ಕೃಷ್ಣಪ್ಪ) ನಾಯಕನು ಜಿಲ್ಲೆಯ ಹೊಸದುರ್ಗ ತಾಲೂಕಿನ ಬೇಗೂರು(ಬಾನೂರು) ಸೀಮೆಯನ್ನು ಆಳುತ್ತಿದ್ದನು. ಈತನ ಪ್ರತಿನಿಧಿ ನಾಯಕನ ಹೆಸರಿನಲ್ಲಿ ಕೃಷ್ಣಾಪುರವನ್ನು ನಿರ್ಮಿಸಿದನು. ಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿಯು ಕ್ರಿ.ಶ.೧೫೫೯ರಲ್ಲಿ ಈ ಗ್ರಾಮಕ್ಕೆ ದತ್ತಿ ನೀಡಿದ್ದನು. ಈ ಪಾಳೆಯಗಾರರು ತಾವು ಆಳುತ್ತಿದ್ದ ಸೀಮೆಗಳಲ್ಲಿ ಕೆರೆಗಳು ಮತ್ತು ದೇವಾಲಯಕ್ಕೆ ದುರಸ್ಥಿ ಕಾರ್ಯವನ್ನು ಕೈಗೊಂಡು, ಪ್ರಜಾಕಾರ್ಯಕ್ಕೆ ದತ್ತಿ ನೀಡಿದ್ದಾರೆ. ಈ ಪಾಳೆಯಗಾರರಿಗೆ ಹಡಪದ, ಸಿಂಧುಗೋವಿಂದ, ಶಿತಕಾರಗಂಡ, ಭೀಮ, ದವಳಂಕ ಮುಂತಾದ ಬಿರುದುಗಳಿರುವುದು ಕಂಡುಬರುತ್ತದೆ.[೨೮೧]

೨.೬.೧೭ ಸಂತೆಬೆನ್ನೂರು ಪಾಳೆಯಗಾರರು

ದಾವಣಗೆರೆ ಜಿಲ್ಲೆಯು ಚನ್ನಗಿರಿ ತಾಲೂಕು ಸಂತೇಬೆನ್ನೂರು ಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಸಂತೆಬೆನ್ನೂರು ಪಾಳೆಯಗಾರರು ಜಿಲ್ಲೆಯ ಕೇಂದ್ರ ಭಾಗಗಳ ಮೇಲೆ ಆಳ್ವಿಕೆ ನಡೆಸಿದರು. ತಮ್ಮ ಆಳ್ವಿಕೆಯಲ್ಲಿ ಹಲವಾರು ದೇವಾಲಯಗಳ ಜೀರ್ಣೋದ್ಧಾರವನ್ನು ಕೈಗೊಂಡು ದತ್ತಿಗಳನ್ನು ಬಿಟ್ಟಿರುವರು. ಹನುಮಪ್ಪನಾಯಕನ ಮೊಮ್ಮಗ ರಾಜಪ್ಪನಾಯಕನೆಂಬುವನು ಬಾಗೂರು ಲಕ್ಷ್ಮೀದೇವಿಯ ಜೀರ್ಣೋದ್ಧಾರ ಪ್ರತಿಷ್ಠೆ ಕಾರ್ಯವನ್ನು, ಇಮ್ಮಡಿ ಹನುಮಪ್ಪನಾಯಕನ ಪ್ರಜೆ ಅಡಿಗೆರೆಯ ಮಲ್ಲಣ್ಣನೆಂಬುವನು ವಡೇರಹಳ್ಳಿಯ ಕಲ್ಲೇಶ್ವರ ದೇವಾಲಯಕ್ಕೆ ನೀಡಿದ ದತ್ತಿಯನ್ನು, ಹನುಮಪ್ಪನಾಯಕರಿಗೆ ಧರ್ಮವಾಗಲಿ ಎಂದು ಅವನ ಸಾಮಂತವರ್ಗದ ನಾಯಕನೊಬ್ಬನು ಹೊರಕೆರೆ

ರಂಗನಾಥ ದೇವರ ನೈವೇದ್ಯಕ್ಕೆ ಕೋಡಿಹಳ್ಳಿ ಗ್ರಾಮವನ್ನು, ಹನುಮಪ್ಪನಾಯಕನ ಮೊಮ್ಮಗ ದಳನಾಯಕನು ಕಲ್ಲೋಡು ಹನುಮಂತ ದೇವರಿಗೆ ಕುರುಬರಹಳ್ಳಿ ಗ್ರಾಮವನ್ನು ದತ್ತಿಕೊಟ್ಟ ಬಗ್ಗೆ ಶಾಸನಗಳು ತಿಳಿಸುತ್ತವೆ.[೨೮೩]

೨.೬.೧೮ ರಾಯದುರ್ಗದ ಪಾಳೆಯಗಾರರು

ಕ್ರಿ.ಶ.೧೩೮೯ರಿಂದ ೧೫೫೯ರ ವರೆಗಿನ ಶಾಸನಗಳು ರಾಯದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಶಾಸನಗಳಾಗಿದ್ದು, ಇವು ಜಿಲ್ಲೆಯ ಮೊಳಕಾಲ್ಮೂರು, ಹಿರಿಯೂರು, ಚಳ್ಳಕೆರೆ ತಾಲೂಕುಗಳಲ್ಲಿ ದೊರೆತಿವೆ. ವೀರಭೂಪತಿ ಒಡೆಯ, ಪಾಪಯ್ಯದೇವ, ತಿರುಮಲಯ್ಯದೇವ ಮತ್ತು ಹೊಟ್ಟಣ್ಣನಾಯಕ- ಈ ನಾಲ್ಕು ಜನ ಪಾಳೆಯಗಾರರು ಜಿಲ್ಲೆಯಲ್ಲಿ ವಿವಿಧ ಭಾಗಗಳಲ್ಲಿ ಆಳ್ವಿಕೆ ಮಾಡಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಈ ಪಾಳೆಯಗಾರರು ಮಹಾಮಂಡಲೇಶ್ವರರೆಂತಲೂ, ಸೂರ್ಯವಂಶಕ್ಕೆ ಸೇರಿದವರೆಂತಲೂ ತಮ್ಮನ್ನು ಕರೆದುಕೊಂಡಿದ್ದಾರೆ. ವಿಜಯನಗರ ಅರಸರ ಆಡಳಿತ ಪದ್ಧತಿಯನ್ನೇ ಇವರು ಅನುಸರಿಸುತ್ತಿದ್ದು, ಅಗ್ರಹಾರಗಳಿಗೂ, ದೇವಾಲಯಗಳಿಗೂ ದಾನದತ್ತಿ ನೀಡಿರುವುದನ್ನು ಅವರ ಶಾಸನಗಳಲ್ಲಿ ಕಾಣಬಹುದು.[೨೮೪]

೨.೬.೧೯ ಬಿಜಾಪುರ ಮತ್ತು ಮೊಘಲರ ಆಳ್ವಿಕೆ

ತಾಳಿಕೋಟೆ ಕದನದ ತರುವಾಯ ಬಿಜಾಪುರದ ಆದಿಲ್‌ಶಾಹಿಗಳು ವಿಜಯನಗರ ಸಾಮ್ರಾಜ್ಯದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡು ಅಧಿಕಾರಕ್ಕೆ ಬಂದರು. ಕ್ರಿ.ಶ.೧೬೮೬ರಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನು ಬಿಜಾಪುರವನ್ನು ವಶಪಡಿಸಿಕೊಂಡನು. ಬಿಜಾಪುರಕ್ಕೆ ಸೇರಿದ ಪ್ರದೇಶಗಳು ಮೊಘಲರ ವಂಶಕ್ಕೆ ಬಂದಾಗ ಆಡಳಿತದ ಅನುಕೂಲಕ್ಕಾಗಿ ಹಲವಾರು ಬದಲಾವಣೆಗಳನ್ನು ಮಾಡಲಾಯಿತು. ಆಗ ಚಿತ್ರದುರ್ಗ ಜಿಲ್ಲೆಯ ಬೂದಿಹಾಳ್ ಪ್ರದೇಶವು ಮೊಘಲ್ ಸಾಮ್ರಾಜ್ಯದ ಪರಗಣವಾಯಿತು. ಚಿತ್ರದುರ್ಗದ ಸಾಮಂತ ಅರಸರು ಮತ್ತು ಪಾಳೆಯಗಾರ ಮೊಘಲ್ ಅಧಿಕಾರಿಯ ಆಡಳಿತಕ್ಕೆ ಒಳಪಟ್ಟರು. ಈ ವೇಳೆಗೆ ಪ್ರಖ್ಯಾತಿ ಪಡೆದಿದ್ದ ಚಿತ್ರದುರ್ಗ ಪಾಳೆಯಗಾರ ಭರಮಪ್ಪ ನಾಯಕನು ಈ ಹಿಂದೆಯೇ ಬಿಜಾಪುರ ಮತ್ತು ಮೊಘಲ್ ಸೈನ್ಯವನ್ನು ಸೋಲಿಸಿ ಕಳುಹಿಸಿದ್ದನು.[೨೮೫] ವಿಜಯನಗರ ಸಂಸ್ಕೃತಿಯನ್ನು ಮುಂದುವರೆಸಿದ್ದ ಚಿತ್ರುದರ್ಗ ಪಾಳೆಯಗಾರರು ಮೊಘಲರಿಗೆ ತಲೆಬಾಗಿಲು ಸಿದ್ಧವಿರಲಿಲ್ಲ. ಸಮರ್ಥರೂ, ಸಾಹಸಿಗಳೂ ಆಗಿದ್ದ ಇವರನ್ನು ತಮ್ಮ ಸಾಮಂತರನ್ನಾಗಿ

ಮಾಡಿಕೊಳ್ಳಲು ಮೊಘಲರು ಪ್ರಯತ್ನಿಸಿದರು. ಕ್ರಿ.ಶ.೧೬೯೩ರ ದೊಡ್ಡೇರಿ ಕದನದಲ್ಲಿ ಭರಮಪ್ಪನಾಯಕನು ಮರಾಠರ ಪರವಾಗಿ ಮೊಗಲರ ವಿರುದ್ಧ ಹೋರಾಡಿ ಜಯಗಳಿಸಿದ್ದನು. ದೊಡ್ಡೇರಿಯಲ್ಲಿ ಮೊಘಲರು ನಿರ್ಮಿಸಿದ್ದ ಕಂದಕಗಳು, ಬತೇರಿಗಳು ಮೊದಲಾದ ರಹಸ್ಯ ಸೇನಾ ವ್ಯವಸ್ಥೆಗಳನ್ನು ಮರಾಠ ಸೇನಾಪತಿಗೆ ತಿಳಿಸಿದವನೇ ಭರಮಪ್ಪನಾಯಕ. ಈ ಕದನದ ತರುವಾಯವೆ ಮೊಘಲರು ಚಿತ್ರದುರ್ಗದ ಮೇಲೆ ದಾಳಿಮಾಡಿ ೩ ಲಕ್ಷ ವರಾಹಗಳನ್ನು ಪರಿಹಾರದ್ರವ್ಯವಾಗಿ ಪಡೆದರು. ನಂತರ ಚಿತ್ರದುರ್ಗ ಪಾಳೆಯಗಾರರು ಮತ್ತು ಮೊಘಲರು ಸೇರಿಕೊಂಡು ಕೊಟ್ಟೂರು ಕದನದಲ್ಲಿ ಮರಾಠರನ್ನು ಸೋಲಿಸಿ ಓಡಿಸಿದರು.[೨೮೫] ಸಿರಾದ ಮೊಘಲ್ ಸುಬೇದಾರನು ಚಿತ್ರದುರ್ಗ ಪಾಳೆಯಗಾರ ನೊಡನೆ ಸ್ನೇಹ ಸಂಬಂಧ ಹೊಂದಿ ಹೊಳಲ್ಕೆರೆ ಮತ್ತಿತರ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಈ ಶಾಸನಗಳಿಂದ ಮೊಘಲರ ಕಂದಾಯ ಆಡಳಿತ, ದಾನದತ್ತಿ ಮುಂತಾದ ವಿಷಯಗಳನ್ನು ತಿಳಿಸುತ್ತವೆ.[೨೮೬] ಹೀಗೆ ಜಿಲ್ಲೆಯ ಕೆಲವು ಪ್ರದೇಶಗಳು ಮೊಘಲರ ಅಧೀನದಲ್ಲಿದ್ದರೂ ಅವರ ಆಳ್ವಿಕೆ ಈ ಪ್ರದೇಶದಲ್ಲಿ ಬಹುಕಾಲ ಉಳಿಯಲಿಲ್ಲ. ಬಹುಶಃ ಔರಂಗಜೇಬನ ಧಾರ್ಮಿಕ ನೀತಿ ಮತ್ತು ಈತನ ನಂತರ ಸಮರ್ಥವಾದ ಅರಸರು ಇಲ್ಲದೆ ಇದ್ದುದು ಈ ಪ್ರದೇಶದಲ್ಲಿ ಅವರ ಆಳ್ವಿಕೆ ಕ್ಷೀಣಿಸಿತೆಂದು ಹೇಳಬಹುದು.

೨.೬.೨೦ ಶ್ರೀರಂಗಪಟ್ಟಣದ ನವಾಬರ ಆಳ್ವಿಕೆ

ಕರ್ನಾಟಕದಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಏಳಿಗೆಯು ಭಾರತದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಘಟನೆ ಎನ್ನಬಹುದು. ಇವರು ಏಳಿಗೆಗೆ ಬರಲು ಪ್ರಮುಖ ಕಾರಣಗಳೆಂದರೆ ಆಗತಾನೆ ಪ್ರಬಲರಾಗಿದ್ದ ಆಂಗ್ಲರು, ಮರಾಠರು, ನಿಜಾಮರು, ಮೈಸೂರು ಒಡೆಯರ ದೌರ್ಬಲ್ಯ, ಅಧಿಕಾರಕ್ಕಾಗಿ ಕಚ್ಚಾಟ ನಡೆಸಿದ ದಳವಾಯಿಗಳು, ಸದಾ ಪರಸ್ಪರ ಜಗಳಗಳಲ್ಲಿ ತೊಡಗಿರುತ್ತಿದ್ದ ಪಾಳೆಯಗಾರರು ಹೈದರ್ ಎಂಬ ಚತುರ ರಾಜಕಾರಣಿಯು ಏಳಿಗೆಗೆ ಬರಲು ದಾರಿ ಮಾಡಿದವೆಂದು ಹೇಳಬಹುದು. ಮಹತ್ವಾಕಾಂಕ್ಷಿಯಾದ ಹೈದರಾಲಿಯು ತನಗೆ ಸಿಕ್ಕ ಯಾವುದೇ ಅವಕಾಶವನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಿಸ್ಸೀಮವಾಗಿದ್ದನು. ಕರ್ನಾಟಕದಲ್ಲಿದ್ದ ಪಾಳೆಯಗಾರರ ಅಧಿಕಾರವನ್ನು ಮೊಟಕುಗಳಿಸುತ್ತಾ ಬಂದನಲ್ಲದೆ, ಒಂದೊಂದೇ ಪಾಳೆಯಪಟ್ಟನ್ನು ವಶಕ್ಕೆ ತೆಗೆದುಕೊಳ್ಳುತ್ತಾ ಬಂದನು. ಹೀಗೆ ಈತನು ತೆಗೆದುಕೊಂಡುಬಂದ ಕೊನೆಯ ಸಂಸ್ಥಾನವೇ ಚಿತ್ರದುರ್ಗ. ಕ್ರಿ.ಶ.೧೭೭೯ರಲ್ಲಿ ಫೆಬ್ರವರಿ ಮಾಹೆಯಲ್ಲಿ ಹೈದರಾಲಿಯು ಚಿತ್ರದುರ್ಗವನ್ನು ತೆಗೆದುಕೊಂಡ ಮೇಲೆ ಚಿತ್ರದುರ್ಗ ಜಿಲ್ಲೆಯು ಹೈದರಾಲಿಯ ಆಡಳಿತಕ್ಕೊಳಪಟ್ಟಿತು.

ತರುವಾಯ ತನ್ನ ನಂಬಿಕೆಗೆ ಅರ್ಹರಾದ ಷೇಕ್‌ಅಯಾಜ್‌ನನ್ನು ಚಿತ್ರದುರ್ಗದ ಸಿವಿಲ್ ಮತ್ತು ಮಿಲಿಟರಿ ಗರ್ವನರ್ ಆಗಿ ನೇಮಿಸಿದನು. ಸಂಧುಅಯಾಜ್‌ನನ್ನು ಕೋಟೆಯ ಬಂದೋಬಸ್ತಿಗೆ ನೇಮಿಸಿ ಮಲ್ಕಿಬಾಜಿಗೆ, ಕಳ್ಳಿನರಸಪ್ಪನನ್ನು ನೇಮಿಸಿದನು. ತರುವಾಯ ಚಿತ್ರದುರ್ಗವು ಮೈಸೂರಿನ ಒಂದು ಪ್ರಾಂತ್ಯವಾಯಿತು.[೨೮೭] ಷೇಕ್‌ಅಯಾಜ್ ಸುಬೇದಾರನಾಗಿ ನೇಮಿಸಲ್ಪಟ್ಟನು. ಈ ಪ್ರಾಂತ್ಯದಲ್ಲಿ ಕಸಬಾ, ಹೊಸದುರ್ಗ, ನಾಯಕನಹಟ್ಟಿ, ಮೊಳಕಾಲ್ಮೂರು, ಹಿರಿಯೂರು, ದೊಡ್ಡೇರಿ, ಐಮಂಗಲ, ಬಾಗೂರು, ರಾಮಗಿರಿ, ಥಳಕು ಮುಂತಾದ ಪ್ರದೇಶಗಳು ಸೇರಿಕೊಂಡಿದ್ದವು.[೨೮೮]

ಹೈದರಾಲಿಯು ದುರ್ಗವನ್ನು ತೆಗೆದುಕೊಂಡ ಮೇಲೆ ಮದಕರಿನಾಯಕ ಮತ್ತು ಅವನ ಕುಟುಂಬದವರನ್ನು ಬಂಧಿಸಿ ಅರಮನೆ ಹಾಗೂ ಖಜಾನೆಯನ್ನು ಮೂರು ದಿನಗಳ ಕಾಲ ಲೂಟಿ ಮಾಡಿ ಅಪಾರ ಸಂಪತ್ತನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸಿದನು. ಯುದ್ಧದಲ್ಲಿ ದುರ್ಗದ ಸೈನಿಕರು ತೋರಿಸಿದ ಸಾಹಸಕ್ಕೆ ಹೈದರ್ ಮಾರುಹೋಗಿದ್ದನು. ಇವರನ್ನು ಹಾಗೆಯೇ ಬಿಟ್ಟರೆ ಮತ್ತೆ ತನಗೆ ಅಪಾಯ ಸಂಭವಿಸಿಬಹುದೆಂದು ಭಾವಿಸಿ ೨೦ ಸಾವಿರ ಬೇಡಪಡೆಯನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸಿ, ನಗರದ ಸಮೀಪದ ಬೇಡರಹಳ್ಳಿ ಎಂಬಲ್ಲಿ ಬೀಡನ್ನು ಹೊಸದಾಗಿ ನಿರ್ಮಿಸಿ ಅಲ್ಲಿ ನೆಲೆಸುವಂತೆ ಮಾಡಿದನು. ನಂತರ ಅವರೊಡನೆ ಬಹಳ ಚತುರತೆಯಿಂದ ವರ್ತಿಸಿದನಲ್ಲದೆ, ಅವರಿಗೆ ತನ್ನ ಉದ್ದೇಶಕ್ಕೆ ತಕ್ಕಂತೆ ಸೈನಿಕ ತರಬೇತಿಯನ್ನು ಕೊಟ್ಟು ಅತ್ಯುತ್ತಮ ಸೈನಿಕರನ್ನಾಗಿ ಪರಿವರ್ತಿಸಿದನು. ಇವರು ಮುಂದೆ ಹೈದರಾಲಿಗೆ ನಿಷ್ಠಾವಂತ ಚೇಲಾಪಡೆಗಳಾದರು. ಆದರೆ ಈ ಚೇಲಾಪಡೆಗಳಿಂದ ಹೈದರಾಲಿಗಿಂತ ಟಿಪ್ಪು ಹೆಚ್ಚಾಗಿ ಲಾಭ ಪಡೆದುಕಂಡನು.[೨೮೯]

ಹೈದರಾಲಿ ಚಿತ್ರದುರ್ಗವನ್ನು ಗೆದ್ದುಕೊಂಡ ಮರುವರ್ಷವೇ ತನ್ನ ಪ್ರಬಲ ವೈರಿಗಳಾದ ಬ್ರಿಟೀಷರ ವಿರುದ್ಧ ಯುದ್ಧ ಮಾಡಬೇಕಾಗಿದ್ದರಿಂದ ಚಿತ್ರದುರ್ಗದ ಅಭಿವೃದ್ಧಿ ಕಡೆ ಗಮನಹರಿಸಲು ಸಾಧ್ಯವಾಗಲಿಲ್ಲ. ಆದರೆ ಹೈದರಾಲಿಯು ಅಧಿಕಾರಿಗಳನ್ನು ಆಗಾಗ್ಗೆ ಬದಲಾಯಿಸಿ, ಆಡಳಿತವನ್ನು ಕಠಿಣಗೊಳಿಸಿ ಸೈನ್ಯವನ್ನು ವ್ಯವಸ್ಥೆಗೊಳಿಸಿದನು. ಅವರ ತರಬೇತಿಗೆ ವಿಶೇಷ ಏರ್ಪಾಡು ಮಾಡಿದ್ದನು. ತನಗೆ ಸಹಾಯ ಮಾಡಿದ ಮಹಮದೀಯ ನಾಯಕರಿಗೆ ಕೊಟ್ಟ ಮಾತಿನಂತೆ ಚಿತ್ರದುರ್ಗದಲ್ಲಿ ಒಂದು ಮಖಾನ್ ಕಟ್ಟಿಸಿ ಅದರ ರಕ್ಷಣೆಯ ಖರ್ಚಿಗಾಗಿ ಸಜ್ಜನಕೆರೆಯನ್ನು ಜಹಗೀರಾಗಿ ನೀಡಿದನು. ಚಿತ್ರದುರ್ಗಕ್ಕೆ ೭ ಕಿ.ಮೀ. ದೂರದಲ್ಲಿರುವ ವಿಜಾಪುರದಲ್ಲಿ ಹೈದರಾಲಿ ಒಂದು ಅಂತಃಪುರವನ್ನು ಕಟ್ಟಿಸಿದ್ದನು.[೨೯೦]

ಹೈದರಾಲಿಯ ತರುವಾಯ ಅಧಿಕಾರಕ್ಕೆ ಬಂದ ಟಿಪ್ಪುವು ಚಿತ್ರದುರ್ಗದ ಕೋಟೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳಬೇಕೆಂಬ ಅಭಿಪ್ರಾಯವುಳ್ಳವನಾಗಿ ಇಲ್ಲಿ ಒಂದು ಅರಮನೆಯನ್ನು, ಒಂದು ಫೌಜು ಕಛೇರಿಯನ್ನು, ಒಂದು ಮಸೀದಿಯನ್ನು ಕಟ್ಟಿಸಿ ಚಿತ್ರದುರ್ಗಕ್ಕೆ ಫರ್ರುಕಬಾದ್ ಎಂದು ಹೆಸರಿಟ್ಟನು.[೨೯೧] ಕೋಟೆಯಲ್ಲಿ ಟಂಕಸಾಲೆಯನ್ನು ನಿರ್ಮಿಸಿ ಅಲ್ಲಿ ಫರೂಬಿ, ಅಹ್ಮದಿ, ಹೈದರ್, ಜೀಹ್ರ ಮೊದಲಾದ ಹೊಸ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದನು.[೨೯೨] ಈತನ ಅವಧಿಯಲ್ಲಿ ಜೈನುಲ್-ಅಧಿ-ದೀನ್ ಚಿತ್ರದುರ್ಗದಲ್ಲಿ ಭಕ್ಷಿಯಾಗಿ ನೇಮಿಸಲ್ಪಟ್ಟಿದ್ದನು. ಇದೇ ರೀತಿ ದಿವಾನ್ ಸಿಫಾದಾರ್, ರಿಸಾಲ್‌ದಾರ್ ಮೊದಲಾದ ಅಧಿಕಾರಿಗಳು ಅಲ್ಲಿ ನೇಮಿಸಲ್ಪಟ್ಟರು. ಹೀಗೆ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿದ ಟಿಪ್ಪುವು ಚಿತ್ರದುರ್ಗದ ವಾಸ್ತುಶಿಲ್ಪದ ಮೇಲೂ ತನ್ನ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಬೆಟ್ಟದ ಮೇಲೆ ಅನೇಕ ಕಣಜಗಳು, ಎಣ್ಣೆತುಪ್ಪ ಸಂಗ್ರಹಿಸಲು ಬಂಡೆಗಳಲ್ಲಿ ಗುಂಡಿಗಳನ್ನು ಕೊರೆಯಿಸಿದನೆಂದು ಹೇಳಲಾಗಿದೆ. ಹಿಂದೆ ಇದ್ದ ಬಸವನಬುರುಜನ್ನು ಬಲಪಡಿಸಿ ಅದಕ್ಕೆ ಸುಲ್ತಾನ್ ಬತೇರಿ ಎಂದು ನಾಮಕರಣ ಮಾಡಿದನು. ಟೀಕಿನ ಬಾಗಿಲಿನಲ್ಲಿ ಕೆಲವು ಬದಲಾವಣೆ ಮಾಡಿ ಇಸ್ಲಾಂಶೈಲಿಯ ಕಮಾನು ಮತ್ತು ಅಲಂಕರಣೆ ಮಾಡಿಸಿದನು. ಟಿಪ್ಪುವಿನ ಕಾಲಕ್ಕೆ ಸಂಬಂಧಿಸಿದ ಎರಡು ಪರ್ಷಿಯನ್ ಶಾಸನಗಳು ಇಲ್ಲಿ ದೊರಕಿದ್ದು, ಸೈಯದ್ ಷಾಅಹಮದ್ ಎಂಬ ಸಂತನಿಗಾಗಿ ಟಿಪ್ಪು ಸಮಾಧಿಯನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ. ಒಂದು ಶಾಸನವು ಕಟ್ಟಡದ ಸೌಂದರ್ಯವನ್ನು ಮತ್ತೊಂದು ಶಾಸನವು ಅಹಮದ್‌ಷಾನ ಗುಣಗಳನ್ನು ವರ್ಣಿಸುತ್ತವೆ.[೨೯೩]

ಟಿಪ್ಪು ಚಿತ್ರದುರ್ಗದಲ್ಲಿ ಮದ್ದುಗುಂಡು, ತುಪಾಕಿ, ಕೋವಿಮದ್ದು ಮುಂತಾದ ಕಾರ್ಖಾನೆಗಳನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಫಿರಂಗಿಯನ್ನು ಕೊರೆಯಲು ಅನುಕೂಲಕರವಾಗಿರುವಂತೆ ಪ್ರಚಲಿತ ಯಂತ್ರವೊಂದನ್ನು ಒಬ್ಬ ಫ್ರೆಂಚ್ ಕುಶಲಕರ್ಮಿ ಸಿದ್ಧಪಡಿಸಿದನೆಂದು ಹೇಳಲಾಗಿದೆ.[೨೯೪] ಕೊನೆಗೆ ೧೭೯೯ರಲ್ಲಿ ಬ್ರಿಟೀಷರು ಶ್ರೀರಂಗಪಟ್ಟಣದ ಮೇಲೆ ಸೈನಿಕ ಕಾರ್ಯಾಚರಣೆಯನ್ನು ಕೈಗೊಂಡು ಟಿಪ್ಪುಸುಲ್ತಾನನ್ನು ಕೊಂದುಹಾಕಿದರು. ಕ್ರಿ.ಶ.೧೭೭೯ರಿಂದ ೧೭೯೯ರವರೆಗೆ ಹೈದರಾಲಿ, ಟಿಪ್ಪು ಆಳ್ವಿಕೆಗೆ ಒಳಪಟ್ಟಿದ್ದ ಚಿತ್ರದುರ್ಗ ಪ್ರಾಂತ್ಯವು ಅವರ ತರುವಾಯ ಬ್ರಿಟೀಷರ ವಶವಾಯಿತು.

೨.೬.೨೧ ಮೈಸೂರು ಒಡೆಯರ ಆಳ್ವಿಕೆ

ಕ್ರಿ.ಶ.೧೭೯೯ರಲ್ಲಿ ಟಿಪ್ಪುವಿನ ಸಾವಿನೊಂದಿಗೆ ಶ್ರೀರಂಗಪಟ್ಟಣದ ನವಾಬರ ಆಳ್ವಿಕೆ ಕೊನೆಗೊಂಡಿತು. ಬ್ರಿಟೀಷರು ಈ ಪ್ರದೇಶವನ್ನು ವಶಪಡಿಸಿಕೊಂಡ ಮೇಲೆ ಚಿತ್ರದುರ್ಗವು ಬ್ರಿಟೀಷ್‌ರಿಗೆ ಸೇರಿಹೋಯಿತು. ಕ್ರಿ.ಶ.೧೭೯೯ ಜಿಲ್ಲೆ ೬ ರಂದು ಬ್ರಿಟೀಷ್ ದಳಪತಿ ಕರ್ನಲ್ ಜೇಮ್ಸ್ ಡಾರ್ಲಿಂಪಲ್ ಚಿತ್ರದುರ್ಗವನ್ನು

[illegible]

ಆಕ್ರಮಿಸಿದನು. ಹೀಗೆ ಚಿತ್ರದುರ್ಗವು ಕೆಲವು ಕಾಲ ಬ್ರಿಟೀಷರ ಆಡಳಿತಕ್ಕೆ ಒಳಪಟ್ಟು ಚಿತ್ರಕಲ್ಲು ಫೌಜುದಾರಿಯಾಗಿ ಮುಂದುವರೆಯಿತು. ಶ್ರೀರಂಗಪಟ್ಟಣವು ಬ್ರಿಟೀಷರ ವಶವಾದ ಮೇಲೆ ಮೈಸೂರಿನ ಒಡೆತನವು ಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ಬ್ರಿಟೀಷರೊಡನೆ ಮಾಡಿಕೊಂಡ ಕರಾರಿನ ಮೇರೆಗೆ ಒಡೆಯರಿಗೆ ಮತ್ತೆ ಅಧಿಕಾರ ದೊರಕಿತು. ಅದರಂತೆ ಮೈಸೂರು ಸಂಸ್ಥಾನದ ಅರಸನಾದ ಚಾಮರಾಜ ಒಡೆಯರ್ ಪುತ್ರರೂ ಮಹಾರಾಣಿ ಲಕ್ಷ್ಮಮ್ಮ ಅವರ ದತ್ತುಪುತ್ರರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ.೧೭೯೯ ಜೂನ್ ೩೦ರಂದು ಬ್ರಿಟೀಷ್‌ರಿಂದ ನೇಮಕಗೊಂಡರು. ಆಗ ಇವರು ಇನ್ನು ಬಾಲಕರಾಗಿದ್ದರಿಂದ ಆಡಳಿತವನ್ನು ನಡೆಸಲು ರಾಜಪ್ರತಿನಿಧಿ ಸಮಿತಿ ರಚಿಸಲಾಯಿತು. ಟಿಪ್ಪುಸುಲ್ತಾನ ಕೈಕೆಳಗೆ ಸೇವೆ ಸಲ್ಲಿಸುತ್ತಿದ್ದ ದಿವಾನ್ ಪೂರ್ಣಯ್ಯನವರೇ ಬ್ರಿಟೀಷ್‌ರ ಕೈಕೆಳಗೆ ಹಾಗೂ ಮುಮ್ಮಡಿ ಕಷ್ಣರಾಜ ಒಡೆಯರು ಪ್ರಾಪ್ತ ವಯಸ್ಕರಾಗುವವರೆಗೆ ರೀಜೆಂಟ್ ಆಗಿ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಇವರು ಚಿತ್ರದುರ್ಗದ ಬಗ್ಗೆ ವಿಶೇಷ ಕಾಳಜಿವಹಿಸಿ ಜಿಲ್ಲೆಯ ನ್ಯಾಯ ವಿತರಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಚಿತ್ರದುರ್ಗ ಹಾಗೂ ಬಿದನೂರಿಗೆ ಮೂರು ಜನ ಸುಬೇದಾರರನ್ನು ನೇಮಕ ಮಾಡಿದನು.[೨೯೫]

ಮುಮ್ಮಡಿ ಕೃಷ್ಣರಾಜ ಒಡೆಯರು ನೇರ ಆಡಳಿತದಲ್ಲಿ ಚಾಲ್ತಿಯಲ್ಲಿರುವ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಆಡಳಿತ ದೃಷ್ಟಿಯಿಂದ ರಾಜ್ಯವನ್ನು ೬ ಫೌಜುದಾರಿಗಳಾಗಿ ವಿಭಾಗಿಸಿ, ಅವುಗಳನ್ನು ೧೨೨ ತಾಲೂಕುಗಳನ್ನಾಗಿ ವಿಭಜಿಸಲಾಯಿತು. ಈ ಆರು ಫೌಜುದಾರುಗಳಲ್ಲಿ ಚಿತ್ರದುರ್ಗವು ಒಂದು ಫೌಜುದಾರಿಯಾಗಿತ್ತು. ಇದರಲ್ಲಿ ಚಿತ್ರದುರ್ಗವು ಸೇರಿದಂತೆ ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಮತ್ತೋಡು, ತಳಕು, ದೊಡ್ಡೇರಿ, ಮೊಳಕಾಲ್ಮೂರು ಇಂದಿನ ದಾವಣಗೆರೆಯು ಸೇರಿದಂತೆ ಅಣಜಿ, ಬಿಳಿಚೋಡು, ಕಣಕುಪ್ಪೆ, ಮಾಯಕೊಂಡ ಹೀಗೆ ಒಟ್ಟು ೧೩ ತಾಲೂಕುಗಳಿದ್ದವು. ಅಲ್ಲದೆ ೫ ಸರಸಾಯಿಗಳನ್ನು ವಿಂಗಡಿಸಿದ್ದು, ಚಿತ್ರದುರ್ಗ ತುಕಡಿಯೂ ಒಂದು ಸರಸಾಯಿಯಾಗಿದ್ದಿತು. ಪ್ರತಿ ತಾಲ್ಲೂಕಿಗೂ ಒಬ್ಬ ಸುಬೇದಾರ, ಒಬ್ಬ ಷೇಖ್‌ದಾರ, ಇಬ್ಬರು ಶಿರಸ್ತೆದಾರರು, ಒಬ್ಬ ಗುಮಾಸ್ತ, ಒಬ್ಬ ಮನ್ನಿ ಇರುತ್ತಿದ್ದರು. ಇವರೊಡನೆ ಓಲೆಕಾರ, ಕಿಲ್ಲೆದಾರ, ಠಾಣಾದಾರ, ಅಂಚೆ ಮುತ್ಸದ್ದಿ, ಗೌಡ, ಶ್ಯಾನುಭೋಗ, ಷೇಕ್‌ದಾರ, ಫೌಜುದಾರ ಇವರ ಕಛೇರಿಗಳಲ್ಲಿ ಕೆಲಸ ಮಾಡಲು ಶಿರಸ್ತೆದಾರ, ಗುಮಾಸ್ತ, ಮುನ್ನಿ ಮುಂತಾದವರಿರುತ್ತಿದ್ದರು.[೨೯೬]

ಇದೇ ಸಂದರ್ಭದಲ್ಲಿ ಬ್ರಿಟೀಷ್ ವಸಾಹತು ಸರಕಾರಕ್ಕೆ ವಿರುದ್ಧವಾಗಿ ಸ್ಥಳೀಯ ನಾಯಕರುಗಳು ಪ್ರತಿಭಟಿಸುತ್ತಿದ್ದರು. ಅಂತಹ ನಾಯಕರುಗಳಲ್ಲಿ ಪ್ರಖ್ಯಾತಿ ಪಡೆದಿದ್ದವನೆಂದರೆ ಚನ್ನಗಿರಿಯ ದೊಂಡೀಯ

[illegible]

ವಾಘ ಎಂಬುವನು. ಈತನು ಹೈದರಾಲಿ ಮತ್ತು ಟಿಪ್ಪು ಕಾಲದಲ್ಲಿ ಸೇನಾನಾಯಕನಾಗಿದ್ದು ಟಿಪ್ಪುವಿನ ಅವಧಿಯಲ್ಲಿ ಇಬ್ಬರಿಗೂ ಮನಸ್ತಾಪವುಂಟಾಗಿದ್ದರಿಂದ ಈತನನ್ನು ಟಿಪ್ಪು ಬಂಧಿಸಿ ಸೆರೆಯಲ್ಲಿಟ್ಟಿದ್ದನು. ಬ್ರಿಟೀಷರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಮೇಲೆ ಈತನನ್ನು ಬಿಡುಗಡೆಗೊಳಿಸಿದರು. ಬಿಡುಗಡೆಯಾದ ನಂತರ ಬ್ರಿಟೀಷರ ದಾಸ್ಯದಲ್ಲಿ ಬದುಕಲು ಇಷ್ಟಪಡದ ದೊಂಡಿಯಾವಾಘ ಸ್ವತಂತ್ರ ಸೇನೆಯನ್ನು ಕಟ್ಟಿಕೊಂಡು ಅನೇಕ ಪ್ರದೇಶಗಳನ್ನು ಗೆದ್ದುಕೊಂಡನಲ್ಲದೆ, ರೈತರನ್ನು ಬ್ರಿಟಿಷರ ವಿರುದ್ಧ ದಂಗೆಯೇಳುವಂತೆ ಪ್ರಚೋದಿಸುತ್ತಿದ್ದನು. ಹೀಗೆ ಕ್ರಿ.ಶ.೧೭೯೯ರ ಜುಲೈನಲ್ಲಿ ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು.

ಆದರೆ ಅದು ಆತನಿಂದ ಸಾಧ್ಯವಾಗದೆ ಬ್ರಿಟೀಷರ ವಶವಾಯಿತು. ಇಂತಹ ಬಂಡಾಯಗಾರರ ವಿರುದ್ಧ ಹೋರಾಡಲು ಕೋಟೆಗಳ ಕಾವಲಾಗಿದ್ದ ಸೈನಿಕರನ್ನು ಹಿಂದಕ್ಕೆ ಪಡೆದು ಬ್ರಿಟೀಷರು ಎಲ್ಲಾ ಕೋಟೆಗಳಲ್ಲಿ ದೇಸೀಯ ಸೈನಿಕರನ್ನು ಕಾವಲಿಗೆ ಇರಿಸಬೇಕೆಂದು ಪೂರ್ಣಯ್ಯನಿಗೆ ಆಜ್ಞೆ ಮಾಡಿದರಲ್ಲದೆ, ಕೋಟೆಗಳನ್ನು ದುರಸ್ತಿಪಡಿಸಿ ಬಂಡಾಯಗಾರರ ವಿರುದ್ಧ ಹೋರಾಡಲು ಬ್ರಿಟೀಷರಿಗೆ ಅಗತ್ಯವಾದ ಆಹಾರವಸ್ತುಗಳನ್ನು ದಾಸ್ತಾನು ಮಾಡುವಂತೆ ಹರಿಹರದ ಕಿಲ್ಲೇದಾರನಿಗೆ ಆಜ್ಞೆ ಮಾಡಲಾಯಿತು.[೨೯೭]

ಈ ಮಧ್ಯೆ ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತದಲ್ಲಿ ಪ್ರಮುಖ ಘಟನೆಯೊಂದು ನಡೆಯಿತು. ಶಿವಮೊಗ್ಗ ಜಿಲ್ಲೆಯ ಬಿದನೂರಿನಲ್ಲಿ ಪ್ರಾರಂಭವಾದ ಈ ದಂಗೆಯು ಪಕ್ಕದ ಜಿಲ್ಲೆಗೆ ವ್ಯಾಪಿಸಿತು. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ, ಬೂದಿಹಾಳು, ಚಿತ್ರದುರ್ಗ ಮುಂತಾದ ಸ್ಥಳಗಳಲ್ಲಿ ದಂಗೆಗಳು ಕಾಣಿಸಿಕೊಂಡವು. ಸರ್ಕಾರಿ ಅಧಿಕಾರಿಗಳ ವಿರುದ್ಧ ದಂಗೆಯೇಳಬೇಕೆಂದು ವಿನಂತಿಸಿ ಜನರಿಗೆ ಬರೆದ ಪತ್ರವನ್ನು ಚಿತ್ರದುರ್ಗದಲ್ಲಿ ಹಂಚಲು ದಂಗೆಕೋರರು ವ್ಯವಸ್ಥೆ ಮಾಡಿದ್ದರು. ಬಿದನೂರು ದಂಗೆಯ ಪರಿಣಾಮದಿಂದ ಮುಮ್ಮಡಿ ಕೃಷ್ಣರಾಜರು ಅಧಿಕಾರವನ್ನು ಕಳೆದುಕೊಂಡರು. ಆಗ ಗರ್ವನಲ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂಬೆಂಟಿಕ್ ಸರ್ಕಾರದ ಆಜ್ಞೆಯಂತೆ ಕರ್ನಾಟಕದಲ್ಲಿ ಕಮಿಷನರ್ ಆಳ್ವಿಕೆಯನ್ನು ಜಾರಿಗೆ ತಂದನು. ಮುಮ್ಮಡಿ ಕೃಷ್ಣ ಒಡೆಯರ್ ತಮ್ಮ ಆಡಳಿತಾವಧಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಕೈಗೊಂಡ ಕಾರ್ಯಗಳ ವಿವರ ಶಾಸನಗಳಿಂದ ವ್ಯಕ್ತವಾಗುತ್ತದೆ. ಕೆಲವು ಶಾಸನಗಳು ಅಂದಿನ ಆಡಳಿತ ಪದ್ಧತಿಯನ್ನು ವ್ಯಕ್ತಪಡಿಸುತ್ತವೆ. ಚಿತ್ರದುರ್ಗ ಶಾಸನವೊಂದು ವೀರಮದಕರಿಪುರದಿಂದ ಹಾಯಕಲ್ಲು ಗಂಗಯ್ಯನ ಕಟ್ಟೆಯವರೆಗೆ ೫೭೮೦ ಗಜಗಳು ಅಥವಾ ಕೃಷ್ಣರಾಜ ರಹದಾರಿ ಇದ್ದಿತೆಂದು ಸೂಚಿಸುತ್ತದೆ. ಬಹುಶಃ ಗಡಿಗಳನ್ನು ಅಳೆದು ದಾಖಲೆ ಮಾಡುತ್ತಿದ್ದುದು ಈ ಶಾಸನದಲ್ಲಿ

ಕಂಡುಬರುತ್ತದೆ.[೯೮] ಮತ್ತೊಂದು ಶಾಸನವು ನಾರಾಯಣನೆಂಬ ಸಿಪಾಯಿಯೊಬ್ಬನು ದೇವಾಲಯವನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸುತ್ತದೆ.[೯೯] ಓರೆಗುಂಟನೂರು ಹೋಬಳಿ ಬೊಮ್ಮನಹಳ್ಳಿ ಶಾಸನದವು ಚನ್ನಬಸವಪ್ಪಶಾಸ್ತ್ರಿಯವರಿಗೆ ಭೂದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.[೧೦೦] ಹಾಗೆಯೇ ಮುಮ್ಮಡಿ ಕೃಷ್ಣರಾಜ ಒಡೆಯರು ಚಿತ್ರದುರ್ಗದ ಶ್ರೀಮುರುಘರಾಜೇಂದ್ರ ಬೃಹನ್ಮಠದ ಜಗದ್ಗುರುಗಳೊಂದಿಗೆ ಸಂಬಂಧವಿರಿಸಿ ಕೊಂಡಿದ್ದು, ಜಗದ್ಗುರುಗಳ ಸಂಚಾರಕ್ಕೆ ಯಾರೊಬ್ಬರೂ ತಡೆಯುಂಟು ಮಾಡದಿರಲು ಎಚ್ಚರಿಕೆ ಕೊಟ್ಟಿದ್ದರಲ್ಲದೆ ಅವರ ಪ್ರಯಾಣಕಾಲದಲ್ಲಿ ಅವರಿಗೆ ಸ್ವಾಗತ, ಸೌಕರ್ಯ ನೀಡಲು ಸೂಚಿಸಿದ ರಹದಾರಿ ಪತ್ರಗಳು ಸಾಕಷ್ಟು ಸಂಖ್ಯೆಯಲ್ಲಿವೆ. ವಿವಿಧ ಭಾಷೆಗಳಲ್ಲಿರುವ ಈ ಬರಹಗಳ ಅಂತ್ಯದಲ್ಲಿ ಶ್ರೀಕೃಷ್ಣ ಎನ್ನುವ ಒಡೆಯರ್‌ರವರ ಕನ್ನಡ ಸಹಿಯನ್ನು ಕಾಣಬಹುದು.[೧೦೧] ಕೃಷ್ಣರಾಜರ ನಂತರ ಬಂದ ನಾಲ್ವಡಿ ಕೃಷ್ಣರಾಜ ಒಡೆಯರು, ಜಯಚಾಮರಾಜೇಂದ್ರ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಜಿಲ್ಲೆಯಲ್ಲಿ ನಡೆದಿವೆ. ಅದರಲ್ಲಿ ಮುಖ್ಯವಾಗಿ ಕ್ರಿ.ಶ.೧೮೯೮ರಲ್ಲಿ ಕೆ. ಶೇಷಾದ್ರಿಯವರ ಪರಿಶ್ರಮದ ಫಲವಾಗಿ ಹಿರಿಯೂರು ತಾಲೂಕು ಮಾರಿಕಣಿವೆ ಅಣೆಕಟ್ಟು ಪ್ರಾರಂಭವಾಗಿ ೧೯೦೭ಕ್ಕೆ ಮುಕ್ತಾಯಗೊಂಡು ಜಿಲ್ಲೆಯ ನೀರಾವರಿ ವ್ಯವಸ್ಥೆಗೆ ವರದಾನವಾಯಿತು.

ಚಿತ್ರದುರ್ಗ ಜಿಲ್ಲೆ ಆಡಳಿತಾತ್ಮಕ ದೃಷ್ಟಿಯಿಂದ ಮಹತ್ತರ ಬದಲಾವಣೆ ಕಂಡಿದೆ. ಈ ಹಿಂದೆ ಹೇಳಿದಂತೆ ೩ನೇ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದ ೬ ಫೌಜುದಾರಿಗಳು ೧೯೩೪ರಲ್ಲಿ ೪ ವಿಭಾಗಗಳನ್ನಾಗಿ ಮಾಡಲಾಯಿತು. ಆಗ ಮಾರ್ಕ್ಸ್‌ಕಬ್ಬನ್ ಕಮಿಷನರ್‌ರಾಗಿದ್ದರು. ಈ ನಾಲ್ಕು ವಿಭಾಗದಲ್ಲಿ ಚಿತ್ರದುರ್ಗಗಳಲ್ಲಿ ಒಂದು ವಿಭಾಗವಾಯಿತು. ೧ ಪೌಜುದಾರಿಗಳು ೧೦೧ ಉಪ ವಿಭಾಗದ ತಾಲೂಕುಗಳಿದ್ದವು. ಚಿತ್ರದುರ್ಗ ಜಿಲ್ಲೆಗೆ ೧೩ ತಾಲೂಕುಗಳು ಅಂದು ಸೇರಿದ್ದವು. ೧೮೩೪ರಲ್ಲಿ ೬ ಪೌಜುದಾರಿಗಳನ್ನು ೪ ವಿಭಾಗಗಳಾಗಿ ಮಾಡಲಾಯಿತು. ಬೆಂಗಳೂರು ನಗರ, ಚಿತ್ರದುರ್ಗ ಮತ್ತು ಅಷ್ಟಗ್ರಾಮ, ಮದುಗಿರಿ ಚಿತ್ರದುರ್ಗಕ್ಕೆ ಮತ್ತು ಅಷ್ಟಗ್ರಾಮ ಮಂಜರಾಬಾದ್‌ಗೆ ಸೇರಿದ್ದವು. ಪೌಜುದಾರಿ ಕೇಂದ್ರಸ್ಥಳ ತುಮಕೂರಾಗಿತ್ತು. ಪ್ರತಿಯೊಂದು ವಿಭಾಗಗಳಲ್ಲಿ ಯುರೋಪಿಯನ್ ಸೂಪರಿನ್‌ಟೆಂಡೆಂಟ್ ನ್ಯಾಯಾಂಗದ ಅಧಿಕಾರ ಪಡೆಯುತ್ತಿದ್ದ. ಕ್ರಿ.ಶ.೧೮೬೨ರಲ್ಲಿ ಬೌರಿಂಗ್ ಕಮಿಷನರ್ ಆಗಿದ್ದಾಗ, ರಾಜ್ಯವನ್ನು ೮ ಜಿಲ್ಲೆಗಳನ್ನು ವಿಭಜಿಸಿದನು. ಅದರಲ್ಲಿ ಚಿತ್ರದುರ್ಗವು ಒಂದು ಜಿಲ್ಲೆಯಾಗಿತ್ತು. ೮ ಜಿಲ್ಲೆಗಳನ್ನು ಸೇರಿಸಿ ೩ ವಿಭಾಗಗಳನ್ನು ಮಾಡಿದ್ದರು. ಈ ಎಲಾ ವಿಂಗಡಣೆಗಳು ಜಿಲ್ಲಾ ಸೂಪರಿ ಟೆಂಡೆಂಟ್ ಅಧೀನದಲ್ಲಿರುತ್ತಿದ್ದವು. ಕ್ರಿ.ಶ.೧೮೬೩ರಲ್ಲಿ ಚಿತ್ರದುರ್ಗ ವಿಭಾಗವು ರದ್ದಾಯಿತು. ಇದು

[illegible]

ನಗರ ವಿಭಾಗಕ್ಕೆ ಮತ್ತು ತುಮಕೂರು ಜಿಲ್ಲೆಯು ಹೊಸದಾಗಿ ಆದ ನಂದಿದುರ್ಗ ವಿಭಾಗಕ್ಕೆ ಸೇರಿದವು. ಸಿರಾ ತಾಲೂಕು ಕ್ರಿ.ಶ.೧೮೬೬ರವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿತ್ತು. ಅನಂತರ ಅದು ತುಮಕೂರು ಜಿಲ್ಲೆಗೆ ವರ್ಗವಾಯಿತು. ಕ್ರಿ.ಶ.೧೮೮೬ರಲ್ಲಿ ಚಿತ್ರದುರ್ಗ ಜಿಲ್ಲೆ ಪುನರ್‌ವಿಂಗಡಣೆ ಮಾಡುವಾಗ ಪಾವಗಡ ತಾಲೂಕು ತುಮಕೂರು ಜಿಲ್ಲೆಗೆ ಸೇರಿತು. ಸ್ವತಂತ್ರ ಜಿಲ್ಲೆಯಾಗಿ ರೂಪು ಪಡೆದ ನಂತರ ಸ್ವಾತಂತ್ರ್ಯ ಹೋರಾಟ ಹಾಗೂ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ತನ್ನದೇ ಆದ ಸ್ಥಾನ ಉಳಿಸಿಕೊಂಡು ಬಂದಿದೆ.

ಕ್ರಿ.ಶ.೧೯೫೬ರಲ್ಲಿ ಮಹಾರಾಜರ ಪದವಿ ರದ್ದಾದ ಮೇಲೆ ಜಯಚಾಮರಾಜ ಒಡೆಯರ್ ಮೈಸೂರು ರಾಜ್ಯದ ರಾಜ ಪ್ರಮುಖರಾಗಿ ನೇಮಕಗೊಂಡರು. ೧೯೫೬ ನವೆಂಬರ್ ೧ರಂದು ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದ ಮೇಲೆ ಮೈಸೂರು ರಾಜ್ಯದಲ್ಲಿ ೧೯ ಜಿಲ್ಲೆಗಳು ಇದ್ದವು. ಅದರಲ್ಲಿ ಚಿತ್ರದುರ್ಗವು ಒಂದು ಪ್ರಮುಖ ಜಿಲ್ಲೆಯಾಗಿತ್ತು. ಜಿಲ್ಲೆಯಲ್ಲಿ ಆಗ ೯ ತಾಲೂಕುಗಳಿದ್ದವು. ೧೯೯೭ರಲ್ಲಿ ಜೆ.ಹೆಚ್.ಪಟೇಲ್ ಸರ್ಕಾರ ಮತ್ತೆ ಹೊಸದಾಗಿ ಜಿಲ್ಲೆಗಳನ್ನು ರಚಿಸಿದಾಗ ಚಿತ್ರದುರ್ಗ ಜಿಲ್ಲೆಯಲ್ಲಿದ್ದ ದಾವಣಗೆರೆ ತಾಲೂಕನ್ನು ಪ್ರತ್ಯೇಕ ಜಿಲ್ಲೆಯಾಗಿ ಮಾರ್ಪಾಟು ಮಾಡುವುದರೊಂದಿಗೆ ಜಿಲ್ಲೆಯಲ್ಲಿ ದಾವಣಗೆರೆಯು ಸೇರಿದಂತೆ ಮತ್ತೆರಡು ತಾಲ್ಲೂಕುಗಳಾದ ಜಗಳೂರು ಮತ್ತು ಹರಿಹರಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಸಧ್ಯಕ್ಕೆ ಜಿಲ್ಲೆಯಲ್ಲಿ ೬ ತಾಲೂಕುಗಳಿದ್ದು, ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಉಳಿಸಿಕೊಂಡುಬಂದಿದೆ.

೨.೬.೨೨ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ

ಚಿತ್ರದುರ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯಲು ಬ್ರಿಟೀಷರ ವಸಾಹತುಶಾಹಿಯ ನೀತಿಗಳೇ ಕಾರಣವೆಂದು ಹೇಳಬಹುದು. ಕ್ರಿ.ಶ.೧೮೭೬-೭೮ರ ಮಧ್ಯೆ ಭೀಕರವಾದ ಕ್ಷಾಮವು ಜಿಲ್ಲೆಯಲ್ಲಿ ತಲೆದೋರಿತು. ಆಗ ಆಡಳಿತವು ಬ್ರಿಟೀಷ್ ಕಮಿಶನರ್‌ಗಳ ಕೈಕೆಳಗೆ ನಡೆಯುತ್ತಿತ್ತು. ಅವರು ಜಿಲ್ಲೆಯಲ್ಲಿ ಕೈಗೊಂಡ ಪರಿಹಾರ ಕಾರ್ಯಕ್ರಮಗಳು ತೀರಾ ಅತೃಪ್ತಿಕರವಾಗಿದ್ದು, ಜಿಲ್ಲೆಯ ಜನತೆಯು ಆಳವಾದ ದುಃಖ ಕಷ್ಟಕಾರ್ಪಣ್ಯಗಳಲ್ಲಿ ಮುಳುಗಿತು. ಮಹಾ ಅನರ್ಥಕಾರಿಯಾಗಿದ್ದ ಕ್ಷಾಮವನ್ನು ಕುರಿತು ಆಡಳಿತಾಧಿಕಾರಿಗಳು ತೀವ್ರ ಉದಾಸೀನ, ಅಲಕ್ಷ್ಯವನ್ನು ತೋರಿಸಿದ್ದರು. ೧೮೭೭ರ ಅಕ್ಟೋಬರ್‌ನಲ್ಲಿ ಚಿತ್ರದುರ್ಗದ ಡೆಪ್ಯುಟಿ ಕಮಿಷನರ್ ಮೇಜರ್ ಆರ್ಮ್‌ಸ್ಟ್ರಾಂಗ್ ಜಿಲ್ಲೆಯ ಕ್ಷಾಮದ ಬಗ್ಗೆ ರಾಜ್ಯದ

ಕಮಿಷನರ್‌ಗೆ ವರದಿ ಸಲ್ಲಿಸಿದರು. ಅದರಂತೆ ಚೀಫ್ ಕಮಿಷನರ್ ಮಿಸ್ಟರ್ ದಲ್ಯೆಲ್‌ನು ಕರ್ನಲ್ ಕ್ಯಾಂಪ್‌ಬೆಲ್‌ನ್ನು ಕ್ಷಾಮಪೀಡಿತ ಪ್ರದೇಶಗಳಿಗೆ ಪ್ರವಾಸಮಾಡಿ ಪರೀಕ್ಷೆ ಮಾಡುವಂತೆ ಕಳುಹಿಸಿದನು. ಕ್ಯಾಂಪ್‌ಬೆಲ್‌ನು ಜಿಲ್ಲೆಯ ಹಳ್ಳಿಗಳು ಪೂರ್ತಿಯಾಗಿ ಬರಪೀಡಿತವಾಗಿಲ್ಲವೆಂದೂ ವರದಿ ಮಾಡಿದನು. ಈ ಮಧ್ಯೆ ಕ್ಷಾಮದ ಪರಿಹಾರ ಕಾರ್ಯದಲ್ಲಿ ಬ್ರಿಟೀಷರ ಆಡಳಿತಗಾರರು ಹೆಚ್ಚು ಗಮನಕೊಡದೆ, ಕಂದಾಯವನ್ನು ಬಿಡದೆ ವಸೂಲಿ ಮಾಡುತ್ತಿರುವ ಕಾರಣ ಜಿಲ್ಲೆಯಲ್ಲಿ ರಾಷ್ಟ್ರೀಯವಾದ ಬೆಳೆಯಲು ಕಾರಣವಾಯಿತು. ಈ ರಾಷ್ಟ್ರೀಯವಾದದ ಬೆಳವಣಿಗೆಯಲ್ಲಿ ಆರ್ಥಿಕ ಅಂಶಗಳು ಬಹಳ ಮಹತ್ವದ ಪಾತ್ರವಹಿಸುತ್ತವೆ.

ಬ್ರಿಟಿಷರ ನೀತಿಗೆ ಮತ್ತೊಂದು ಉದಾಹರಣೆಯೆಂದರೆ ಮದರಾಸು ಸರ್ಕಾರದ ಚೌಕಾಶಿ ವಿಧಾನಗಳಿಂದ ನೀರಾವರಿ ಕ್ಷೇತ್ರದಲ್ಲಿ ಮೈಸೂರು ಗಣನೀಯ ಪ್ರಗತಿ ಸಾಧಿಸದೇ ಹೋದುದು ಸಹಜವೇ ಆಗಿದೆ. ಮೈಸೂರು ಕೈಗೊಂಡ ಪ್ರತಿಯೊಂದು ಯೋಜನೆಗೂ ಮದರಾಸು ಸರ್ಕಾರ ತಡೆಯೊಡ್ಡಿದ ಪರಿಣಾಮವಾಗಿ ಹತಾಶೆಯಿಂದ ಮೈಸೂರು ತನ್ನೆಲ್ಲಾ ಯೋಜನೆಗಳನ್ನು ಕೈಬಿಡಬೇಕಾಯಿತು. ಈ ವಿಷಯದಲ್ಲಿ ಬಲಿಯಾದ ಮೊದಲನೆ ಯೋಜನೆ ಎಂದರೆ ಹಿರಿಯೂರು ತಾಲೂಕಿನಲ್ಲಿರುವ ಮಾರಿಕಣಿವೆ ಜಲಾಶಯ ಯೋಜನೆ. ಚಿತ್ರದುರ್ಗದಂತಹ ಜಿಲ್ಲೆಗೆ ಈ ಯೋಜನೆ ಬಹಳ ಅವಶ್ಯಕವಾಗಿತ್ತು. ಇದರ ನಿರ್ಮಾಣಕ್ಕಾಗಿ ಅನೇಕ ಬಾರಿ ಯೋಜನೆ ಸಿದ್ಧವಾಗಿದ್ದರೂ ಮಾರೀ ಕಣಿವೆ ಜಲಾಶಯ ಯೋಜನೆ ಮುಂದೂಡಲ್ಪಡುತ್ತಿತ್ತು. ಬ್ರಿಟಿಷ್ ಆಯುಕ್ತರ ಆಡಳಿತಾವಧಿಯಲ್ಲೇ ಕ್ರಿ.ಶ.೧೮೫೫ರಲ್ಲಿ ಇದರ ಅಗತ್ಯತೆ ಬಗ್ಗೆ ಮನವರಿಕೆಯಾಗಿದ್ದರೂ ಕ್ರಿ.ಶ.೧೮೯೨ರಲ್ಲಿ ಮದರಾಸು ಸರ್ಕಾರ ಇದಕ್ಕೆ ತಡೊಯೊಡ್ಡಿತು. ಕೊನೆಗೆ ಮೈಸೂರು ಸರ್ಕಾರ ರೆಸಿಡೆಂಟಿಗೆ ಪತ್ರ ಬರೆದಾಗ ಕ್ರಿ.ಶ.೧೮೯೪ರ ಫೆಬ್ರವರಿಯಲ್ಲಿ ಮದ್ರಾಸ್ ಸರ್ಕಾರ ಸಮ್ಮತಿ ನೀಡಿತು. ಪುನಃ ಕ್ರಿ.ಶ.೧೮೯೮ರಲ್ಲಿ ಪುನಃ ತಕರಾರು ತೆಗೆದ ಮದ್ರಾಸ್ ಸರ್ಕಾರಕ್ಕೆ ಮೈಸೂರು ಸರ್ಕಾರದ ಒತ್ತಾಯದ ಮೇರೆಗೆ ಕ್ರಿ.ಶ.೧೮೯೯ರ ಏಪ್ರಿಲ್‌ನಲ್ಲಿ ಮದರಾಸು ಸರ್ಕಾರ ತನ್ನ ತಕರಾರನ್ನು ವಾಪಸ್ಸು ಪಡೆಯಿತು.[೧೦೨] ಈ ಯೋಜನೆ ಅನುಷ್ಠಾನಗೊಳ್ಳಲು ೪೪ ವರ್ಷಗಳು ಹಿಡಿಯಿತು. ಇದರಿಂದ ಬ್ರಿಟೀಷರ ಇಬ್ಬಗೆಯ ನೀತಿ ಜನತೆಗೆ ತಿಳಿದು ಹೋರಾಟದ ಹಾದಿಯನ್ನು ಹಿಡಿದರು. ಚಿತ್ರದುರ್ಗ ಜಿಲ್ಲೆಯು ೧೯೩೦ರ ಸುಮಾರಿಗೆ ಬ್ರಿಟಿಷ್ ಕರ್ನಾಟಕದೊಂದಿಗೆ ರಾಜಕೀಯ ಬಾಂಧವ್ಯ ಏರ್ಪಡಿಸಿಕೊಂಡಿತ್ತು. ಮುಂದೆ ಸುಮಾರು ೫ ವರ್ಷಗಳ ಕಾಲ ಅವಿರತವಾಗಿ ಎಲ್ಲೆಡೆಯೂ ಚಳುವಳಿಗಳು ನಡೆದವು. ಈ ವೇಳೆಗಾಗಲೆ ಜಿಲ್ಲೆಯಲ್ಲಿ ಕಾಂಗ್ರೆಸ್ ಎಸ್.ನಿಜಲಿಂಗಪ್ಪನವರ ನಾಯಕತ್ವದಲ್ಲಿ ಒಂದು ಪ್ರಬಲ ಸಂಘಟನೆಯಾಗಿ ಬೆಳೆದಿತ್ತು.

೧೯೩೨ರ ಕಾನೂನುಭಂಗ ಚಳುವಳಿಯು ಜಿಲ್ಲೆಯಲ್ಲಿ ಬಲವಾಗಿ ಪ್ರಾರಂಭವಾಯಿತು. ಚಿತ್ರದುರ್ಗ ಮತ್ತು ದಾವಣಗೆರೆಗಳಲ್ಲಿ ವಿದೇಶಿ ವಸ್ತ್ರ ದಹನವಾಯಿತು. ಗಾಂಧೀಜಿಯವರು ಅಂದಿನ ಚಿತ್ರದುರ್ಗ ಜಿಲ್ಲೆಗೆ ಸೇರಿದ ದಾವಣಗೆರೆಗೆ ಭೇಟಿ ನೀಡಿದುದು ಅವಿಸ್ಮರಣೀಯ ಘಟನೆಯಾಗಿದೆ. ಈ ಘಟನೆಯು ಜಿಲ್ಲೆಯ ಸ್ವಾತಂತ್ರ್ಯ ಯೋಧರಲ್ಲಿ ನವಚೈತನ್ಯ ತುಂಬಿತು. ೧೯೩೬ರಿಂದ ೧೯೪೨ರವರೆಗಿನ ವರ್ಷಗಳು ಜಿಲ್ಲೆಯ ಇತಿಹಾಸದಲ್ಲಿ ಮಹತ್ವದ ವರ್ಷಗಳು. ಪ್ರತಿಯೊಂದು ಹಳ್ಳಿ-ಹಳ್ಳಿಗಳ ರಾಷ್ಟ್ರೀಯತೆಯು ಉಕ್ಕಿಹರಿದ ವರ್ಷಗಳಿವು. ೧೯೩೭ ಮೇ ೧೬ರಂದು ಎನ್.ಎಸ್.ಹರ್ಡೀಕರ್ ಮುಂತಾದವರು ಜಿಲ್ಲೆಯ ದೊಡ್ಡ ಸಿದ್ದವ್ವನಹಳ್ಳಿಗೆ ಭೇಟಿ ನೀಡಿದರು. ಭೂಕಂದಾಯದ ವಿರುದ್ಧ ಹೋರಾಡುವಂತೆ ಪ್ರೇರೇಪಿಸಿದರು. ನಂತರ ಹರ್ಡೀಕರರು ಹೊಸದುರ್ಗ ಮತ್ತು ಬಾಗೂರು ಗ್ರಾಮಗಳಿಗೆ ಭೇಟಿ ನೀಡಿ ಜನತೆಯನ್ನು ಉದ್ದೇಶಿಸಿ ಮಾತನಾಡಿದರು. ೧೯೩೭ರಲ್ಲಿ ನಡೆದ ಸಭೆ ಸಮಾರಂಭಗಳಿಂದ ಎಚ್ಚರವಹಿಸಿದ ಸರ್ಕಾರ ಕಾಯಿದೆಗಳ ಮೂಲಕ ಅಂಥ ಸಭೆಗಳನ್ನು ತಡೆಯಲು ಪ್ರಯತ್ನಿಸಿತು. ಜಿಲ್ಲೆಯಲ್ಲಿ ಯಾವ ತಾಲ್ಲೂಕು ಮತ್ತು ಹಳ್ಳಿಗಳಲ್ಲೂ ಸಭೆ ನಡೆಯದಂತೆ ಸರ್ಕಾರ ಕಾಯಿದೆ ರೂಪಿಸಿತು. ಇದರ ವಿರುದ್ಧವಾಗಿ ೧೯೩೭ರಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ರೈತರ ಸಮ್ಮೇಳನಗಳು ನಡೆದವು. ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಚಳ್ಳಕೆರೆಯಲ್ಲಿ ನಡೆದ ರೈತ ಸಮ್ಮೇಳನಯಲ್ಲಿ ೨೫,೦೦೦ ಜನ ಸೇರಿದ್ದರು. ಹರ್ಡೀಕರ್, ಕೆ.ಸಿ.ರೆಡ್ಡಿ, ನಿಜಲಿಂಗಪ್ಪ ಮುಂತಾದವರು ಸೇರಿ ಜಿಲ್ಲೆಯಲ್ಲಿ ವ್ಯಾಪಕ ಪ್ರವಾಸ ಮಾಡಿದ್ದರಿಂದ ತಾಲೂಕು ಮಟ್ಟದಲ್ಲಿ ಕಾಂಗ್ರೆಸ್ ಸಮಿತಿಗಳು ಅಸ್ತಿತ್ವಕ್ಕೆ ಬಂದವು.

೧೯೩೭ ಮೇ ೧೬ರಂದು ಹಿರಿಯೂರಿನಲ್ಲಿ ತೇರುಮಲ್ಲೇಶ್ವರ ದೇವಸ್ಥಾನದಲ್ಲಿ ರೈತ ಸಮ್ಮೇಳನವನ್ನು ಸಂಘಟಿಸಿದರು. ಆಗಸ್ಟ್ ೧೯೩೭ರಲ್ಲಿ ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕರ್ತರು ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಚಿತ್ರದುರ್ಗದ ಜಯದೇವ ಹಾಸ್ಟಲ್ ಕಾಂಪೌಂಡಿನಲ್ಲಿ ಕಾಂಗ್ರೆಸ್ ಬಾವುಟ ಹಾರಿಸಿದರು. ಅಲ್ಲಿಂದ ಧೀರ ತಿಲಕ್‌ರವರ ಮಾರ್ಗದರ್ಶನದಲ್ಲಿ ಸ್ವತಂತ್ರ ಚಳುವಳಿಯು ನಡೆಯಬೇಕೆಂದು ವಿವರಿಸಿದರು. ೧೯೩೭ ಆಗಸ್ಟ್‌ನಲ್ಲಿ ಹೆಚ್.ಹನುಮಂತಪ್ಪನವರ ಮನೆಯಲ್ಲಿ ಹೊಳಲ್ಕೆರೆ ತಾಲೂಕು ಕಾಂಗ್ರೆಸ್ ಸಮಿತಿ ಸಭೆ ಸೇರಿ ತಿಲಕ್ ಜಯಂತಿಯನ್ನು ಆಚರಿಸಿದರು.[೩೦೩]

೧೯೩೯ ಮೇ ತಿಂಗಳಿನಲ್ಲಿ ಕಾಂಗ್ರೆಸ್ ಸಪ್ತಾಹವನ್ನು ಜಿಲ್ಲೆಯ ಅನೇಕ ಸ್ಥಳಗಳು ಆಚರಿಸಲಾಯಿತು. ಬಳ್ಳಾರಿ ಸಿದ್ದಮ್ಮ, ನಿಜಲಿಂಗಪ್ಪ, ಶ್ರೀನಿವಾಸಮೂರ್ತಿ, ನಾಗರತ್ನಮ್ಮ, ಹಿರೇಮಠ ಮುಂತಾದವರು

ತುರುವನೂರಿಗೆ ತೆರಳಿ, ಅಲ್ಲಿ ಅರಣ್ಯ ಸತ್ಯಾಗ್ರಹದಲ್ಲಿ ಪ್ರಾರಂಭಿಸಿದರು. ಪುರುಷ ಮಹಿಳೆಯರೆನ್ನದೆ ಊರಿನಲ್ಲಿ ಸಾಕಷ್ಟು ಪ್ರಮಾಣದ ಜನತೆ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡು ನೂರಾರು ಜನರು ಜೈಲು ಸೇರಿ, ಉಗ್ರವಾದ ಶಿಕ್ಷೆಯನ್ನು ಅನುಭವಿಸಿದ ದಾಖಲೆಯಿದೆ.[೩೦೪] ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಸತ್ಯಾಗ್ರಹಗಳೂ ಕೂಡ ಯಶಸ್ವಿಯಾದವು. ಇದೇ ಸಂದರ್ಭದಲ್ಲಿ ಚಿತ್ರದುರ್ಗದ ಇತಿಹಾಸತಜ್ಞ, ಸಾಹಿತಿ ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಸರ್ಕಾರವು ಬಂಧಿಸಿತು. ಆದರೆ ದೇಶಾದ್ಯಂತ ಚಳುವಳಿಯು ತೀವ್ರಗೊಂಡಿದ್ದರಿಂದ ಸರ್ಕಾರವು ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿ ಪ್ರಜಾಸರ್ಕಾರ ಸ್ಥಾಪನೆಮಾಡಿಸುವ ಹೇಳಿಕೆಯೊಂದಿಗೆ ಚಿತ್ರದುರ್ಗ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ ಕೊನೆಗೊಂಡಿತು.

ಟಿಪ್ಪಣಿಗಳು

೧. ಚಿತ್ರದುರ್ಗ ಜಿಲ್ಲೆಯ ಅಂಕಿಅಂಶಗಳ ನೋಟ ೨೦೦೦-೨೦೦೧, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಿತ್ರದುರ್ಗ, ಪು.೩-೪,(ಈ ಗ್ರಂಥವನ್ನು ಅಧ್ಯಯನಕ್ಕೆ ಕೊಟ್ಟು ಸಹಕರಿಸಿದರವರು ಜಿಲ್ಲಾ ಸಹಾಯಕ ಸಾಂಖ್ಯಿಕ ಅಧಿಕಾರಿ ಶ್ರೀ ಕೆ.ಆರ್. ಬಸವರಾಜಯ್ಯನವರು.)

೨. ದಾವಣಗೆರೆ ಜಿಲ್ಲೆಯಾದ ನಂತರ ಚಿತ್ರದುರ್ಗವು ತನ್ನ ಭೂವಿಸ್ತೀರ್ಣದಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ಮೊದಲು ಇದ್ದ ಪೂರ್ವರೇಖಾಂಶ ೭೫°೩೮ ಪ್ರಸ್ತುತ ಅಧ್ಯಯನದಲ್ಲಿ ೭೬°೭೪ ಎಂದು ಗುರುತಿಸಲಾಗಿದೆ. ಮೊದಲು ವಿಸ್ತೀರ್ಣದಲ್ಲಿ ೧೦೮೫೨ ಚ.ಕೀ ಇದ್ದು, ಈಗ ೮೪೦೪.೬ ಚ.ಕಿ.ಮೀ.ಗಳಿಷ್ಟಿದೆ. ರೇಖಾಂಶವನ್ನು ಗುರುತಿಸಲು ಭಾರತ ಸರ್ಕಾರದ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನೆರವನ್ನು ಪಡೆಯಲಾಗಿದೆ.

೩. ನಂಜಣ್ಣನವರ ಎಸ್.ಎಸ್., ೨೦೦೨, ಮಾನವ ಭೂಗೋಳಶಾಸ್ತ್ರ, ಪು.೧

೪. ಸಮಾಜವಿಜ್ಞಾನ, ಪ್ರಯೋನಿಧಿ ಎಂಟರ್ಸ್ ಪ್ರೈ.ಲಿಮಿಟೆಡ್, ಬೆಂಗಳೂರು, ಪು.೧೪

೫. ರಮೇಶ್ ಬಿ.ಗೋ., ೧೯೮೫, ಸಂಪನ್ಮೂಲಗಳು ಮತ್ತು ಕೈಗಾರಿಕಾವಕಾಶಗಳು ಚಿತ್ರದುರ್ಗ ಜಿಲ್ಲೆ, ಪು.೭

೬. ಮಂಜುನಾಥರಾವ್ ಕೆ.ವಿ., ೧೯೭೯, ಚಿತ್ರದುರ್ಗ ಇತಿಹಾಸದಲ್ಲಿ ಐತಿಹ್ಯ, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಕೆ.(ಸಂ), ಪು.೧೧೪

೭. ಆವರಣದಲ್ಲಿ ಕೊಟ್ಟಿರುವ ಅಂಕಿಅಂಶಗಳು ಸಮುದ್ರ ಮಟ್ಟದಿಂದ ಇರುವ ಅಂತರವನ್ನು ಸೂಚಿಸುತ್ತದೆ.

[illegible]

[illegible]

[illegible]

೮. ನಾರಾಯಣ್‌ರಾವ್ ಎ.ಎಸ್., ಬೆಂಗಾಡಿನಲ್ಲೊಂದು ಸುಂದರ ಮಲೆನಾಡು, ಪ್ರಜಾವಾಣಿ ದಿನಪತ್ರಿಕೆ ದಿ.೭.೪.೨೦೦೧

೯. ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಪು.೭

೧೦. ಅದೇ, ಪು.೮

೧೧. ಕ.ವಿ.ವಿ., ಪು.೧೧೫೪

೧೨. ರಮೇಶ್ ಬೆ.ಗೋ., ಪೂರ್ವೋಕ್ತ, ಪು.೮

೧೩. ಶಿವರುದ್ರಪ್ಪ ಜಿ.ವಿ., ೧೯೮೭, ಚಿತ್ರದುರ್ಗ ಜಿಲ್ಲೆಯ ಭೂಇತಿಹಾಸ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೫೭೪-೭೫

೧೪. ಪ್ರಜಾವಾಣಿ ದಿನಪತ್ರಿಕೆ, ದಿ.೧೬.೧.೧೯೯೯

೧೫. ಕ.ವಿ.ವಿ., ಪು.೭೧

೧೬. ಅದೇ, ಪು.೭೧

೧೭. ರಮೇಶ್ ಬೆ.ಗೋ., ಪೂರ್ವೋಕ್ತ, ಪು.೨೪

೧೮. ಚಿತ್ರದುರ್ಗ ಜಿಲ್ಲೆಯ ಅಂಕಿಅಂಶಗಳ ನೋಟ, ಪು.೫

೧೯. ಅದೇ, ಪು.೧೨

೨೦. ಅದೇ, ಪು.೨೮

೨೧. ಶಿವರುದ್ರಪ್ಪ ಜಿ.ವಿ., ೧೯೮೭, ಪೂರ್ವೋಕ್ತ, ಪು.೫೭೫

೨೨. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ), ೧೯೭೬, ಹುಲ್ಲೂರು ಶ್ರೀನಿವಾಸಜೋಯಿಸರ ಐತಿಹಾಸಿಕ ಲೇಖನಗಳು, ಪು.೩

೨೩. ಎ.ಕ., ಸಂ.೧೧, ಚಿತ್ರದುರ್ಗ-೩೨

೨೪. ಅದೇ, ಪು.೨೮

೨೫. ಐತಿಹ್ಯಕ್ಕೆ ಸಾಕ್ಷೀಕರಿಸುವೆಂಬಂತೆ ದೇವಾಲಯದಲ್ಲಿ ಸುಲಿದ ತೆಂಗಿನಕಾಯಿ ಗಾತ್ರದಲ್ಲಿರುವ ಹಲ್ಲನ್ನು ಹಿಡಂಬನ ಹಲ್ಲು ಎಂದೂ, ಇಲ್ಲಿರುವ ಎರಡು ಗುಂಡುಗಳಲ್ಲಿ ಒಂದನ್ನು ಭೀಮನಕಲ್ಲು ಮತ್ತೊಂದನ್ನು ಹಿಡಂಬನ ಕಲ್ಲೆಂದು ತೋರಿಸಿ, ಇವುಗಳ ವೃತ್ತಾಂತವನ್ನು ದೇವಾಲಯದ ಪೂಜಾರಿಗಳು ಹೇಳುತ್ತಾರೆ. ಜಿಲ್ಲಾ ಗೆಝುಟಿಯರ್‌ನಲ್ಲೂ ಇದೇ ರೀತಿ ಹೇಳಲಾಗಿದೆ. ಪು. ೨೭

೨೬. ಎ.ಕ., ಸಂ.೧೧, ಚಿತ್ರದುರ್ಗ-೩೨

೨೭. ಸುಂದರ ಅ., ೧೯೯೨, ಹಿಡಂಬಿಪಟ್ಟಣ-ಒಂದು ವಿಮರ್ಶಾತ್ಮಕ ಟಿಪ್ಪಣಿ, ಇತಿಹಾಸದರ್ಶನ, ಸಂ.೭, ಪು.೮೫

೨೮. ಹು.ಶ್ರೀ.ಜೋ.ಐ.ಲೇ., ಪೂರ್ವೋಕ್ತ, ಪು.೩೫೯

೨೯. ಎ.ಕ., ಸಂ.೧೧, ಮೊಳಕಾಲ್ಮೂರು-೨೭

೩೦. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು.೨೬೭

೩೧. ಕ.ವಿ.ವಿ., ಪು.೫೩೯

೩೨. ಕೃಷ್ಣ ಎಂ.ಎಚ್., ೧೯೫೩, ಕರ್ನಾಟಕ ಪೂರ್ವಚರಿತ್ರೆ

೩೩. ಶ್ರೀಕಂಠಶಾಸ್ತ್ರೀ ಎಸ್., ೧೯೭೫, ಪುರಾತತ್ವ ಶೋಧನೆ, ಪು.೧೭೦

೩೪. ಅ. ಸುಂದರ ಅ., ಚಿತ್ರದುರ್ಗ ಪರಿಸರದಲ್ಲಿ ಪುರಾತತ್ವಶೋಧನೆ, ಮಾನವಿಕ ಭಾರತಿ, ಸಂ.೨, ಪು.೧

ಆ. ಸುಂದರ ಅ., ಜಟಿಂಗ ರಾಮೇಶ್ವರದಲ್ಲಿ ಪ್ರಾಗೈತಿಹಾಸಿಕ ಪುರಾತತ್ವ ಅವಶೇಷಗಳು ಮತ್ತು ಐತಿಹ್ಯ, ಇತಿಹಾಸ ದರ್ಶನ, ಸಂ.೧೯, ಪು.೬

೩೫. ಲಕ್ಷ್ಮಣ್ ತೆಲಗಾವಿ. ಶಿಲಾಯುಗದ ಶಿಲಾಸಮಾಧಿ ನಿಲುವುಗಲ್ಲುಗಳು ಪತ್ತೆ, ಪ್ರಜಾವಾಣಿ, ದಿ.೭.೮.೧೯೯೮

೩೬. ಜಯಣ್ಣ ಉಲ್ಲಾನಹಳ್ಳಿ, ಮೊಳಕಾಲ್ಮೂರು ತಾಲೂಕಿನಲ್ಲಿನ ಪುರಾತತ್ವ ಸಮೀಕ್ಷೆ, ಇತಿಹಾಸದರ್ಶನ ಸಂ.೧೭, ಪು.೩೧

೩೭. ಪ್ರಜಾಪ್ರಗತಿ, ದಿ.೭.೧೦.೧೯೯೮ ಮತ್ತು ಪ್ರಜಾವಾಣಿ ದಿ.೮.೦೨.೨೦೦೩

೩೮. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ೧೯೭೬, ಪು.೧೫೭

೩೯. ಕರ್ನಾಟಕ ಚರಿತ್ರೆ, ಸಂ.೧, ಪು.೨೮೬

೪೦. ಮಜುಮ್‌ದಾರ್ ಆರ್.ಸಿ., ಭಾರತದ ಪ್ರೌಢ ಇತಿಹಾಸ, ಪು.೮೬

೪೧. ಕರ್ನಾಟಕ ಚರಿತ್ರೆ, ಸಂ.೧, ಪೂರ್ವೋಕ್ತ, ಪು.೨೮೫

೪೨. ಎ.ಕ., ಸಂ.೧೧, ಮೊಳಕಾಲ್ಮೂರು-೨೧

೪೩. ಅದೇ, ೨೧

೪೪. ಅದೇ, ೩೪

೪೫. ಕರ್ನಾಟಕದ ಪರಂಪರೆ, ಭಾಗ-೧, ಪು.೨೧

೪೬. ಕೃಷ್ಣ ಎಂ.ಹೆಚ್., ೧೯೫೩, ಕರ್ನಾಟಕ ಪೂರ್ವಚರಿತ್ರೆ, ಪು.೩೨

೪೭. ಕ.ವಿ.ವಿ., ಪು.೧೦೭೬

೪೮. ಮುಜುಮ್‌ದಾರ್‌ಆರ್.ಸಿ., ಪೂರ್ವೋಕ್ತ, ಪು.೮೬

೪೯. ಕ.ವಿ.ವಿ., ಪು.೪೦೫

೫೦. ಚಿದಾನಂದಮೂರ್ತಿ ಎಂ., ೧೯೯೮, ಹೊಸತುಹೊಸತು, ಪು.೨

೫೧. ಕ.ವಿ.ವಿ., ಪೂರ್ವೋಕ್ತ, ಪು.೪೦೫

೫೨. ಕರ್ನಾಟಕ ಚರಿತ್ರೆ, ಸಂ.೧, ಪು.೨೮೭

೫೩. ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೧೩

೫೪. ಕರ್ನಾಟಕ ಚರಿತ್ರೆ, ಸಂ.೧, ಪು.೩೦೮

೫೫. ಉಷಾ ಎಂ.ಎಚ್., ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೧೩

೫೬. ರಘುನಾಥ್ ಎಚ್.ಆರ್., ೧೯೭೭, ಚಿತ್ರದುರ್ಗ ಜಿಲ್ಲೆಯ ಕೆಲವು ಸೀಸದ ನಾಣ್ಯಗಳು, ಚಿನ್ಮೂಲಾದ್ರಿ, ವಾರ್ಷಿಕ ಸಂಚಿಕೆ, ಲಕ್ಷ್ಮಣ್ ತೆಲಗಾವಿ(ಸಂ), ಪು.೩೭

೫೭. ಅದೇ, ಪು.೩೮

೫೮. ಕ.ಚ.ಸಂ., ಸಂ.೧, ಪು.೩೦೯

೫೯. Somshekara S.Y., Two Maharthi Coins of Turuvanur And Chippinkere, Chitradurga Dt. National Seminar on South Indian Numismatics society, Pandichari, 7-9th February, 2003

೬೦. ಎಂ.ಎ.ಆರ್., ೧೯೧೦, ಪು.೪೪

೬೧. ಕೃಷ್ಣ ಎಂ.ಹೆಚ್., ೧೯೫೧, ಕರ್ನಾಟಕ ಪೂರ್ವಚರಿತ್ರೆ, ಪು.೫೨

೬೨. ಶ್ರೀಕಂಠಶಾಸ್ತ್ರಿ ಎಸ್., ಪುರಾತತ್ವ ಶೋಧನೆ, ಪು.೬೨

೬೩. ಲಕ್ಷ್ಮಣ್‌ತೆಲಗಾವಿ, ೨೦೦೨, ವೇದಾವತಿ ನದಿದಂಡೆ ಹಾಗೂ ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನ ಹೊಸ ನಾಣ್ಯಗಳು, ಇತಿಹಾಸದರ್ಶನ, ಸಂ.೧೭, ಪು.೪೦

೬೪. ಶ್ರೀನಿವಾಸಮೂರ್ತಿ ಹೆಚ್.ವಿ., ರಾಮಕೃಷ್ಣ ಆರ್., ೧೯೯೫, ಸಮಗ್ರ ಕರ್ನಾಟಕ ಚರಿತ್ರೆ, ಪು.೪೭

೬೫. ಚೆನ್ನಕ್ಕ ಎಲಿಗಾರ, ೧೯೯೧, ಬಂಕಾಪುರದ ಕದಂಬರು, ಸಂಶೋಧನ, ಲಕ್ಷ್ಮಣ್‌ತೆಲಗಾವಿ(ಸಂ), ಪು.೭೭೪

೬೬. ಎಂ.ಎ.ಆರ್., ೧೯೨೯, ಪು.೫೦-೬೦

೬೭. ರಾಜಶೇಖರಪ್ಪ ಬಿ., ೨೦೦೧, ದುರ್ಗಶೋಧನ, ಪು.೬-೭

೬೮. ಅದೇ, ಪು.೬-೭

೬೯. ರಾಜಶೇಖರಪ್ಪ ಬಿ., ೨೦೦೧, ಇತಿಹಾಸ ಕಥನ, ಪು.೩೯

೭೦. ಕ.ವಿ.ವಿ., ಪು.೪೦೫

೭೧. ಕೃಷ್ಣ ಎಂ.ಹೆಚ್., ೧೯೫೧, ಪೂರ್ವೋಕ್ತ, ಪು.೩೧

೭೨. ಎ.ಕ., ಸಂ.೧೧, ಮೊಳಕಾಲ್ಮೂರು-೪೧, ೪೨

೭೩. ಕ.ವಿ.ವಿ., ಪು.೨೦೪

೭೪. ಚಿತ್ರದುರ್ಗ ಜಿಲ್ಲಾ ಗೆಝೆಟಿಯರ್, ಪು.೩೩

೭೫. ಲಕ್ಷ್ಮಣ್ ತೆಲಗಾವಿ, ೧೯೭೯, ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಕೆ.(ಸಂ), ಪು.೭

೭೬. ದೀಕ್ಷಿತ್ ಸಿ.ಕೆ.ವೈ., ೧೯೭೬, ಚಿತ್ರದುರ್ಗದಲ್ಲಿ ಚಾಳುಕ್ಯರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಪು.೧೮

೭೭. ಅದೇ, ಪು.೧೮

೭೮. Joshi S.K., 1985, Defence Architecture in Early Karntaka, P.53

೭೯. ಕ.ಚ., ಸಂ.೧, ಪು.೪೬೬

೮೦. ಕೃಷ್ಣಮೂರ್ತಿ ಎಂ.ಎಸ್., ೧೯೯೯, ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು, ಪ್ರಾಚೀನ ಕರ್ನಾಟಕ ಆಡಳಿತ ವಿಭಾಗಗಳು, ಕಲಬುರ್ಗಿ ಎಂ.ಎಂ.(ಸಂ), ಪು.೧೭೫-೧೮೨

೮೧. Krishnamurty .M.S., 1980, The Nolambas, P.136

೮೨. ಕೃಷ್ಣಮೂರ್ತಿ ಎಂ.ಎಸ್., ೧೯೮೭, ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು, ಹರತಿಸಿರಿ, ಲಕ್ಷ್ಮಣ್‌ತೆಲಗಾವಿ(ಸಂ), ಪು.೩೬೬

೮೩. ರಾಜಶೇಖರಪ್ಪ ಬಿ., ಓರೇಕೋಗಲೂರು ಅಪ್ರಕಟಿತ ಶಾಸನ, ಇತಿಹಾಸ ದರ್ಶನ, ಸಂ.೧೭, ಪು.೫೦

೮೪. ಎ.ಕ., ಸಂ.೧೧, ಚಳ್ಳಕೆರೆ-೩೩

೮೫. ಅದೇ, ೫

೮೬. ಅದೇ, ೭

೮೭. ಅದೇ, ೮

೮೮. ಅದೇ, ೩೩-೩೪

೮೯. ಅದೆ, ಹಿರಿಯೂರು-೩೩

೯೦. ಅದೇ, ಚಿತ್ರದುರ್ಗ-೬೨

೯೧. ಎಂ.ಎ.ಆರ್., ೧೯೫೬, ಪು.೩೫

೯೨. ಎ.ಕ., ಸಂ.೧೧, ಹಿರಿಯೂರು-೦೧

೯೩. ಕೃಷ್ಣಪ್ಪ ಕೆ. ೧೯೯೬, ವದ್ದೀಕೆರೆ ಶ್ರೀ ಸಿದ್ದೇಶ್ವರಸ್ವಾಮಿ ಕಥಾಮೃತ, ಪು.೩

೯೪. ಎ.ಕ., ಸಂ.೧೧, ಮೊಳಕಾಲ್ಮೂರು-೩೩

೯೫. ಅದೇ, ೨೮

೯೬. ಅದೇ, ಚಿತ್ರದುರ್ಗ-೮೨

೯೭. ಬಸವಲಿಂಗ ಸಿ.ಎಸ್., ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ನೊಳಂಬರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್‌ತೆಲಗಾವಿ(ಸಂ), ಪು.೩೪

೯೮. ಅದೇ, ಪು.೩೪

೯೯. ಎ.ಕ., ಸಂ.೧೧, ಚಿತ್ರದುರ್ಗ-೭೮

೧೦೦. ಅದೇ, ಹೊಳಲ್ಕೆರೆ-೩೦

೧೦೧. ಅದೇ, ಚಿತ್ರದುರ್ಗ-೭೮

೧೦೨. ಅದೇ, ಚಳ್ಳಕೆರೆ-೩೩,೩೪

೧೦೩. ಅದೇ, ೩೩-೩೪

೧೦೪. ಅದೇ, ೩೪

೧೦೫. ಕೃಷ್ಣಮೂರ್ತಿ ಪಿ.ವಿ., ೧೯೯೯, ಕದಂಬಳಿಗೆ ಸಾಸಿರ, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕಲಬುರ್ಗಿ ಎಂ.ಎಂ.(ಸಂ), ಪು.೨೫

೧೦೬. ಅದೇ, ಪು.೨೮

೧೦೭. ಎ.ಕ., ಸಂ.೧೧, ಹಿರಿಯೂರು-೩೦,೩೭,೨೨

೧೦೮. ಅದೇ, ಚಳ್ಳಕೆರೆ-೧೬,೪೩,೨೧,೨೨

೧೦೯. ಅದೇ, ಮೊಳಕಾಲ್ಮೂರು-೨೦,೨೩,೨೪

೧೧೦. ಅದೇ, ಚಳ್ಳಕೆರೆ-೦೧

೧೧೧. ಅದೇ, ಚಿತ್ರದುರ್ಗ-೮೨

೧೧೨. ಅದೇ, ೩೪

೧೧೩. ಅದೇ, ೮೨, ಹೊಳಲ್ಕೆರೆ-೦೩

೧೧೪. ಲಕ್ಷ್ಮಣ್‌ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ), ೧೯೭೬, ಹು.ಶ್ರೀ.ಜೋ.ಐ.ಲೇ., ಪು.೧೦

೧೧೫. ಕೃಷ್ಣಮೂರ್ತಿ ಪಿ.ವಿ., ೧೯೯೯, ಬೆಂಮತ್ತನೂರು ನಾಡು, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕಲಬುರ್ಗಿ ಎಂ.ಎಂ.,(ಸಂ), ಪು.೧೩೩

೧೧೬. ಎ.ಕ., ಸಂ.೧೧, ಚಿತ್ರದುರ್ಗ-೬

೧೧೭. ಅದೇ, ೦೬,೧೫

೧೧೮. ಎಂ.ಎ.ಆರ್., ೧೯೨೯

೧೧೯. ಲಕ್ಷ್ಮಣ್‌ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ), ೧೯೭೬, ಹು.ಶ್ರೀ.ಜೋ.ಐ.ಲೇ., ಪು.೧೦

೧೨೦. ಎ.ಕ., ಸಂ.೯, ಬೇಲೂರು-೧೦೬

೧೨೧. ಷೇಕ್ ಅಲಿ ಬಿ., ದಕ್ಷಿಣ ಭಾರತದ ಇತಿಹಾಸ, ಪು.೩೧೪

೧೨೨. ಎ.ಕ., ಸಂ.೧೧, ಹಿರಿಯೂರು-೧೧೭

೧೨೩. ಅದೇ, ಹೊಳಲ್ಕೆರೆ-೦೨

೧೨೪. ಅದೇ, ಚಿತ್ರದುರ್ಗ-೭೯

೧೨೫. ಲಕ್ಷ್ಮಣ್‌ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ), ೧೯೭೬, ಹು.ಶ್ರೀ.ಜೋ.ಐ.ಲೇ., ಪು.೩೪೪

೧೨೬. ಎ.ಕ., ಸಂ.೧೧, ಹೊಳಲ್ಕೆರೆ-೧೩೧

೧೨೭. ಅದೇ, ಚಿತ್ರದುರ್ಗ-೧೨೩

೧೨೮. ಈತನಿಗೆ ಸಂಬಂಧಿಸಿದ ಮೂರು ಶಾಸನಗಳನ್ನು ಈ ಹಿಂದೆ ಬಿ.ಎಲ್.ರೈಸ್ ಅವರು ಶಾಸನವನ್ನು ಪತ್ತೆಹಚ್ಚಿ ಪ್ರಕಟಿಸಿದ್ದರು(ಎ.ಕ.ಸಂ.೧೧, ಚಿತ್ರದುರ್ಗ ೭, ೧೨, ೩೨). ಇತ್ತೀಚೆಗೆ ಬಿ.ರಾಜಶೇಖರಪ್ಪನವರು ೯ ಶಾಸನಗಳು ಪತ್ತೆಹಚ್ಚಿ ಪ್ರಕಟಿಸಿದ್ದಾರೆ(ದುರ್ಗಶೋಧನ, ಪು.೩೫). ಎಂ.ಹೆಚ್.ಕೃಷ್ಣರವರು ಒಂದು ಶಾಸನವನ್ನು ಪತ್ತೆಹಚ್ಚಿದ್ದಾರೆ(ಎಂ.ಎ.ಆರ್.೧೯೩೯). ಮತ್ತೊಂದು ಶಾಸನವನ್ನು ಲಕ್ಷ್ಮಣ್ ತೆಲಗಾವಿಯವರು ಪತ್ತೆಹಚ್ಚಿ ಪ್ರಕಟಿಸಿದ್ದಾರೆ(ಪ್ರಜಾವಾಣಿ, ೨೮.೭.೧೯೯೩).

೧೨೯. ಎ.ಕ., ಸಂ.೧೧, ಚಿತ್ರದುರ್ಗ-೭

೧೩೦. ರಾಜಶೇಖರಪ್ಪ ಬಿ., ೨೦೦೧, ದುರ್ಗಶೋಧನ, ಪು.೩೩

೧೩೧. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ), ೧೯೭೬, ಹು.ಶ್ರೀ.ಜೋ.ಐ.ಲೇ., ಪು.೧೧

೧೩೨. ರಾಜಶೇಖರಪ್ಪ ಬಿ., ೧೯೮೯, ಶಾಸನಗಳ ಮರುಪರಿಶೀಲನೆ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ),ಪು.೬೪೭

೧೩೩. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ಬೆಟ್ಟದ ಪೆರುಮಾಳೆಪುರ ಮರುಶೋಧನೆ, ಇತಿಹಾಸದರ್ಶನ, ಸಂ.೫, ಪು.೧೧೬,೧೩೩

೧೩೪. ಎ.ಕ., ಸಂ.೧೧, ಚಿತ್ರದುರ್ಗ-೨

೧೩೫. ಅದೇ, ೪೫

೧೩೬. ಅದೇ, ೧೨

೧೩೭. ಕ.ಚ.ಸಂ.,೨, ಪು.೧೨೯

೧೩೮. ಅದೇ, ಹೊಳಲ್ಕೆರೆ-೧೩೬

೧೩೯. ಅದೇ, ೧೪೦

೧೪೦. ಅದೇ, ಹಿರಿಯೂರು-೦೪

೧೪೧. ಅದೇ, ಚಿತ್ರದುರ್ಗ-೦೬

೧೪೨. ಅದೇ, ೦೬

೧೪೩. ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಪು.೪೨

೧೪೪. ಎ.ಕ., ಸಂ.೧೧, ಚಿತ್ರದುರ್ಗ-೨೪

೧೪೫. ಅದೇ, ಹೊಳಲ್ಕೆರೆ-೬೮,೫೬

೧೪೬. ಅದೇ, ೨೩

೧೪೭. ಅದೇ, ಚಳ್ಳಕೆರೆ-೧೬,೨೧,೨೨

೧೪೮. ಅದೇ, ಹಿರಿಯೂರು-೩೦,೩೭

೧೪೯. ಅದೇ, ಮೊಳಕಾಲ್ಮೂರು-೨೩,೨೦

೧೫೦. ನರಸಿಂಹಮೂರ್ತಿ ಎ.ವಿ., ೧೯೭೧, ಕರ್ನಾಟಕದ ಸೇವುಣರ ಇತಿಹಾಸ, ಪು.೧

೧೫೧. ಅದೇ, ಪು.೦೩

೧೫೨. ಎ.ಕ., ಸಂ.೧೧, ಹೊಳಲ್ಕೆರೆ-೩೬

೧೫೩. ಎ.ಕ., ಸಂ.೧೧, ದಾವಣಗೆರೆ-೧೦೩

೧೫೪. ಲಕ್ಷ್ಮಣ್‌ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ), ಹು.ಶ್ರೀ.ಜೋ.ಸಂ.ಲೇ. ಪು.೪೬೫

೧೫೫. ಕ.ಚ., ಸಂ.೩, ಪು.೮೧

೧೫೬. ಕೃಷ್ಣಮೂರ್ತಿ ಪಿ.ವಿ., ೧೯೯೯, ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕಲಬುರ್ಗಿ ಎಂ.ಎಂ.(ಸಂ), ಪು.೨೧೩

೧೫೭. ಎ.ಕ., ಸಂ.೧೧, ಹೊಳಲ್ಕೆರೆ-೧೨೦

೧೫೮. ಅದೇ, ಹಿರಿಯೂರು-೬೨

೧೫೯. ಅದೇ, ಹೊಳಲ್ಕೆರೆ-೨೪

೧೬೦. ಅದೇ, ೧೫

೧೬೧. ಅದೇ, ಚಳ್ಳಕೆರೆ-೫೪

೧೬೨. ಅದೇ, ಹೊಳಲ್ಕೆರೆ-೧೨೫

೧೬೩. ಅದೇ, ೧೦೧

೧೬೪. ಅದೇ, ಹಿರಿಯೂರು-೯೪

೧೬೫. ಅದೇ, ಚಿತ್ರದುರ್ಗ-೪೫

೧೬೬. ಅದೇ, ಚಳ್ಳಕೆರೆ-೫೪

೧೬೭. ಅದೇ, ಹೊಳಲ್ಕೆರೆ-೭೬

೧೬೮. ಅದೇ, ೩೪

೧೬೯. ಅದೇ, ಹಿರಿಯೂರು-೮೫

೧೭೦. ಅದೇ, ಹಿರಿಯೂರು-೮೮

೧೭೧. ಅದೇ, ೮೮

೧೭೨. ಅದೇ, ೮೮

೧೭೩. ಅದೇ, ಹಿರಿಯೂರು-೭೬

೧೭೪. ಅದೇ, ಹೊಳಲ್ಕೆರೆ-೨೪

೧೭೫. ಅದೇ, ಹಿರಿಯೂರು-೮೮

೧೭೬. ಅದೇ, ಚಳ್ಳಕೆರೆ-೫೪

೧೭೭. ಅದೇ, ಹೊಳಲ್ಕೆರೆ-೯೮

೧೭೮. ಅದೇ, ಹಿರಿಯೂರು-೯೮

೧೭೯. ಅದೇ, ೯೮

೧೮೦. ಅದೇ, ಹೊಳಲ್ಕೆರೆ-೯೪

೧೮೧. ಅದೇ, ಹಿರಿಯೂರು-೮೮

೧೮೨. ಅದೇ, ೧೪

೧೮೩. ಅದೇ, ೩೯

೧೮೪. ಅದೇ, ೨೨

೧೮೫. ಅದೇ, ಹೊಳಲ್ಕೆರೆ-೨೪

೧೮೬. ಅದೇ, ೨೪

೧೮೭. ಅದೇ, ೨೪

೨೧೧. ಲಕ್ಷ್ಮಣ್‌ತೆಲಗಾವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್‌ತೆಲಗಾವಿ(ಸಂ), ಪು.೬೫

೨೧೨. ಬಾಗೂರು ಆರ್.ನಾಗರಾಜಪ್ಪ, ೧೯೮೪, ಹೊಸದುರ್ಗದ ಸುತ್ತ, ಪು.೫೦

೨೧೩. ಎ.ಕ., ಸಂ.೧೨, ಚಿಕ್ಕನಾಯ್ಕನಹಳ್ಳಿ-೦೯

೨೧೪. ಪೂರ್ವೋಕ್ತ, ಸಿರುಮನ ಸಾಂಗತ್ಯ

೨೧೫. ಶೈಲಜಾ ಸಿದ್ದಪ್ಪ ಹೊಸಳ್ಳೇರ, ೧೯೯೬, ಸಿರುಮನ ಸಾಂಗತ್ಯಗಳು-ಒಂದು ಅಧ್ಯಯನ(ಅಪ್ರಕಟಿತ ಮಹಾಪ್ರಬಂಧ)

೨೧೬. ರಾಜಶೇಖರಪ್ಪ ಬಿ., ೨೦೦೧, ಇತಿಹಾಸ ಕಥನ, ಪು.೧೦೦

೨೧೭. ವಸು ಎಂ.ವಿ.(ಸಂ), ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು.೧೪೦

೨೧೮. ಮೈಸೂರು ಗೆಜೆಟಿಯರ್, ಸಂ.೫, ಪು.೧೪೧೪

೨೧೯. ಹರತಿಸಿರಿ, ಪು.೨೮೨-೩೧೬

೨೨೦. ಅದೇ, ಪು.೨೮೨-೩೧೬

೨೨೧. ಎ.ಕ., ಸಂ.೧೧, ಹಿರಿಯೂರು-೩೬, ೩೯

೨೨೨. ಅದೇ, ಹಿರಿಯೂರು-೦೬

೨೨೩. ವಸು ಎಂ.ವಿ., ಪೂರ್ವೋಕ್ತ, ಪು.೧೬೦

೨೨೪. ಎ.ಕ., ಸಂ.೧೧, ಚಳ್ಳಕೆರೆ-೩೭

೨೨೫. ವಸು ಎಂ.ವಿ.. ಪೂರ್ವೋಕ್ತ, ಪು.೧೬೬

೨೨೬. ಎ.ಕ., ಸಂ.೧೧, ಹಿರಿಯೂರು-೦೬

೨೨೭. ವಸು ಎಂ.ವಿ., ಪೂರ್ವೋಕ್ತ, ಪು.೧೬೬

೨೨೮. ಲಕ್ಷ್ಮಣ್ ತೆಲಗಾವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್‌ತೆಲಗಾವಿ.(ಸಂ), ಪು.೭೦

೨೨೯. ವಸು ಎಂ.ವಿ., ಪೂರ್ವೋಕ್ತ, ಪು.೭೯

೨೩೦. ಅದೇ, ಪು.೮೧

೨೩೧. ಪ್ರಭಾಕರ,ಎಂ.ಎನ್., ೧೯೭೬, ನಾಯಕನಹಟ್ಟಿ ಬಖೈರು, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ.(ಸಂ), ಪು.೩೩

೨೩೨. ರೈಸ್, ಗೆಜೆಟಿಯರ್, ಸಂ.೪, ಪು.೫೩೬

೨೩೩. ಲಕ್ಷ್ಮಣ್ ತೆಲಗಾವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ.(ಸಂ), ಪು.೭೧

೨೩೪. ಎ.ಕ., ಸಂ.೧೧, ಮೊಳಕಾಲ್ಮೂರು-೩೭

೨೩೫. ಅದೇ, ೩೮

೨೩೬. ಅದೇ, ಚಳ್ಳಕೆರೆ-೦೨

೨೩೭. ಮುದ್ದೇಬಿಹಾಳ ಆರ್.ಸಿ., ೧೯೯೪, ಬೇಡನಾಯಕರ ಪಾಡು, ಪು.೭೭

೨೩೮. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ೨೦೦೨, ಪು.೧೫೯

೨೩೯. ಎ.ಕ., ಸಂ.೧೧, ಹೊಳಲ್ಕೆರೆ-೯೮

೨೪೦. ಅದೇ, ೯೮

೨೪೧. ಅದೇ, ೯೮

೨೪೨. ಮೈಸೂರು ಗೆಜೆಟಿಯರ್, ಸಂ.೫, ಪು.೧೪೫೬

೨೪೩. ಅದೇ, ೧೪೫೭

೨೪೪. ಬಾಗೂರು ಆರ್. ನಾಗರಾಜಪ್ಪ, ಪೂರ್ವೋಕ್ತ, ಪು.೭೦

೨೪೫. ಅದೇ, ಪು.೬೪

೨೪೬. ಅದೇ, ಹೊಳಲ್ಕೆರೆ-೧೦೧

೨೪೭. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು.೧೭೪-೭೬

೨೪೮. ಲಕ್ಷ್ಮಣ್‌ತೆಲಗಾವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೭೪

೨೪೯. Francis Buchanan, 1988, A Journey from Madras Through the Countries of Mysore, Canara and Malbar, Vol.III, P:369

೨೫೦. ಲಕ್ಷ್ಮಣ್ ತೆಲಗಾವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೭೮

೨೫೧. ಚಿತ್ರದುರ್ಗ ಜಿಲ್ಲಾ ಗೆಜಟೇಯಿರ್, ಪು.೮

೨೫೨. ಪುಟ್ಟಣ್ಣ ಎಂ.ಎಸ್.. ಪೂರ್ವೋಕ್ತ, ಪು.೯೨

೨೫೩. ಹುಲ್ಲೂರು ಶ್ರೀನಿವಾಸ ಜೋಯಿಸರು(ಸಂ), ೧೯೬೮, ಚಿತ್ರದುರ್ಗದ ಬಖೈರು, ಪು.೪೯

೨೫೪. ಕ.ಚ., ಸಂ.೩, ಪು.೮೧

೨೫೫. ವಸು.ಎಂ.ವಿ.. ಪೂರ್ವೋಕ್ತ, ಪು.೯೨

೨೫೬. ಲಕ್ಷ್ಮಣ್ ತೆಲಗಾವಿ, ೧೯೯೨, ಚಿತ್ರದುರ್ಗ ನಾಯಕರಸರ ರಾಜಕೀಯ ಚಿತ್ರಣ, ದವನಸಿರಿ ಸ್ಮರಣ ಸಂಚಿಕೆ, ಪು.೭೨

೨೫೭. ವಸು.ಎಂ.ವಿ. ಪೂರ್ವೋಕ್ತ, ಪು.೨೮

೨೫೮. ಕಲಬುರ್ಗಿ ಎಂ.ಎಂ.(ಸಂ), ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪು.೪೪

೨೫೯. ವಸು ಎಂ.ವಿ., ಪೂರ್ವೋಕ್ತ, ಪು.೪೪

೨೬೦. ಕಲಬುರ್ಗಿ ಎಂ.ಎಂ.(ಸಂ), ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪು.೨೮

೨೬೧. ಪ್ರಾಚೀನ ಶಾಸನ ಲೇಖನ ಸಂಗ್ರಹ, ೧೯೬೫, ಪು.೨೮

೨೬೨. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು.೪೨

೨೬೩. ಕಲಬುರ್ಗಿ ಎಂ.ಎಂ.(ಸಂ), ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪು.೨೭

೨೬೪. ಬಾಗೂರು ಆರ್.ನಾಗರಾಜಪ್ಪ, ಪೂರ್ವೋಕ್ತ, ಪು.೧೦೩

೨೬೫. ಲಕ್ಷ್ಮಣ್ ತೆಲಗಾವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಪು.೮೧

೨೬೬. Richard Buran, 1971, The Cambridge History Of India, Vol.IV, P.294

೨೬೭. ಪ್ರಾ.ಶಾ.ಲೇ.ಸಂ., ಪು.೭೪

೨೬೮. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು.೬೧

೨೬೯. ಪ್ರಿಯ, ದೀಪಾವಳಿ ವಿಶೇಷಾಂಕ, ೧೯೮೯, ಪು.೫೬

೨೭೦. ಗೋವಿಂದಮೂರ್ತಿ ದೇಸಾಯಿ, ೧೯೯೯, ಸವಣನೂರು ನವಾಬರು, ಪು.೨೬

೨೭೧. ಲಕ್ಷ್ಮಣ್ ತೆಲಗಾವಿ, ೧೯೯೨, ಚಿತ್ರದುರ್ಗ ನಾಯಕರಸರ ರಾಜಕೀಯ ಚಿತ್ರಣ, ದವನಸಿರಿ ಸ್ಮರಣ ಸಂಚಿಕೆ, ಪು.೮೨

೨೭೨. ಪ್ರಾ.ಶಾ.ಲೇ.ಸಂ. ಪು.೭೬

೨೭೩. ವಸು.ಎಂ.ವಿ. ಪೂರ್ವೋಕ್ತ, ಪು.೧೦೬

೨೭೪. ಲಕ್ಷ್ಮಣ್‌ತೆಲಗಾವಿ, ೧೯೯೨, ಪೂರ್ವೋಕ್ತ, ಪು.೨೭೪

೨೭೫. Srikanta Sastri, 1927, Capitalisation of Chitradurga, QJMS, Vol.xviii, P.147

೨೭೬. ಲಕ್ಷ್ಮಣ್ ತೆಲಗಾವಿ, ೧೯೯೨, ಪೂರ್ವೋಕ್ತ, ಪು.೮೪

೨೭೭. ಹುಲ್ಲೂರು ಶ್ರೀನಿವಾಸ ಜೋಯಿಸರು(ಸಂ), ೧೯೬೮, ಚಿತ್ರದುರ್ಗದ ಬಖೈರು, ಪು.೩೭

೨೭೮. QJMS, Vol.Viii, P.147

೨೭೯. ಕ.ಚ., ಸಂ.೫, ಪು.೭೧

೨೮೦. ವಸು ಎಂ.ವಿ., ಪೂರ್ವೋಕ್ತ, ಪು.೧೦೯

೨೮೧. ಲಕ್ಷ್ಮಣ್‌ತೆಲಗಾವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೭೦

೨೮೨. ಅದೇ, ಪು.೭೮

೨೮೩. ಅದೇ, ಪು.೬೬

೨೮೪. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು.೫೮

೨೮೫. ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ.(ಸಂ), ೧೯೭೬, ಚಂದ್ರವಳ್ಳಿ, ಭಾಗ ೨, ಪು.೨೩

೨೮೬. ಶ್ರೀನಿವಾಸ ಎಂ.ವಿ., ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಬಿಜಾಪುರ ಹಾಗೂ ಮೊಘಲರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಭಾಗ-೨, ಪು.೯೦-೯೪

೨೮೭. ಶ್ರೀನಿವಾಸ್ ಎಂ.ವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆ, ಪೂರ್ವೋಕ್ತ, ಪು.೯೭

೨೮೮. ಶರ್ಮ ತೀ.ತಾ., ೧೯೭೧, ಚಾರಿತ್ರಿಕ ದಾಖಲೆಗಳು, ಪು.೧೦೨

೨೮೯. QJMS, Vol.Viii, P: 153

೨೯೦. ಶ್ರೀನಿವಾಸ್ ಎಂ.ವಿ, ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್‌ತೆಲಗಾವಿ(ಸಂ), ಪು.೯೮

೨೯೧. ಹು.ಶ್ರೀ.ಜೋ.ಐ.ಲೇ., ಪು.೩೩

೨೯೨. Henderson J.N., Coins of Hyder ali and Tippusultan, P.91

೨೯೩. ಷೇಕ್ ಅಲಿ, ೧೯೭೯, ಟಿಪ್ಪುಸುಲ್ತಾನ್, ಪು.೯೧

೨೯೪. ಕ.ಚ., ಸಂ.೬, ಪು.೩೬

೨೯೫. ಎ.ಕ., ಸಂ.೧೧, ಚಿತ್ರದುರ್ಗ-೬೧

೨೯೬. ಅದೇ, ೧೭

೨೯೭. ಅದೇ, ೫೨

೨೯೮. ರಾಜಶೇಖರಪ್ಪ ಬಿ., ೨೦೦೧, ದುರ್ಗಶೋಧನ, ಪು.೧೯೩

೨೯೯. ಕ.ಚ., ಸಂ.೭, ಪು.೩೩

೨೦೦. ಬಸವರಾಜಪ್ಪ ಹೆಚ್.ಇ., ಚಿತ್ರದುರ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮೇಲೆ ಹೊಸಬೆಳಕು, ಇತಿಹಾಸ ದರ್ಶನ, ಸಂ.೧೭, ಪು.೩೪೯

೨೦೧. ಕ.ಚ., ಸಂ.೭, ಪು.೩೬-೩೭

೨೦೨. ಅದೇ, ಪು.೩೬-೩೭

೨೦೩. ಬಸವರಾಜಪ್ಪ ಹೆಚ್.ಇ., ಪೂರ್ವೋಕ್ತ, ಪು.೩೪೯

೨೦೪. ಮಲ್ಲಿಕಾರ್ಜುನಸ್ವಾಮಿ ಎಂ., ೧೯೭೫, ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು, ಪು.೩೭೭-೪೨೬

❑❑

ಅಧ್ಯಾಯ ೩

ರಕ್ಷಣಾ ವಾಸ್ತುಶಿಲ್ಪ

೩

ರಕ್ಷಣಾ ವಾಸ್ತುಶಿಲ್ಪ

೩.೧ ಕೋಟೆ

ವಾಸ್ತವವಾಗಿ ಕೋಟೆ ಎಂದರೆ ರಕ್ಷಣಾ ಆವರಣವುಳ್ಳ ಪ್ರದೇಶ ಎಂದರ್ಥ. ಮುಖ್ಯವಾಗಿ ರಾಜ್ಯ ಹಾಗೂ ರಾಜನಿಗೆ ರಕ್ಷಣೆ ಒದಗಿಸುವ ಮಹತ್ವವಾದ ಸ್ಥಳವಾಗಿದೆ.[೧] ಪ್ರಾಚೀನ ಸಂಸ್ಕೃತ ಗ್ರಂಥಗಳ ಪ್ರಕಾರ ರಾಜಕೀಯ ಬದಲಾವಣೆಯ ಪುನರುತ್ಥಾನ ಕಾಲದಲ್ಲಿ ಜನಪದಗಳ ಮಹತ್ವವನ್ನು ಚರ್ಚಿಸುವಾಗ ದುರ್ಗ ಎಂಬ ಪದವನ್ನು ಬಳಸಲಾಗುತ್ತಿತ್ತು ಎಂಬುದು ಬಹಳ ಪ್ರಮುಖವಾದ ವಿಷಯ. ಸಂಸ್ಕೃತ ಸಾಹಿತ್ಯದಲ್ಲಿ ಕೋಟೆಗಳನ್ನು ದುರ್ಗ ಎಂಬ ಹೆಸರಿನಿಂದ ಕರೆಯಲಾಗಿದೆ. ಇದರ ಅರ್ಥ ಹೊರಗಿನ ಶತ್ರುಗಳಿಂದ, ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಬಹುದಾದ ಸ್ಥಳ ಎಂಬುದಾಗಿದೆ. ದುರ್ಗಂ ಎಂಬ ಪದವು ಅಜೇಯ ಅಥವಾ ಗೆಲ್ಲಲಾಗದ ಕೋಟೆಗಳನ್ನು ಸೂಚಿಸುವುದಾಗಿದೆ.[೨] ವೈದಿಕ ಸಾಹಿತ್ಯದಲ್ಲಿ ಕೋಟೆಗಳಿಗೆ ಮಹಾಪುರ ಅಥವಾ ಪುರ ಎಂಬ ಪದವನ್ನು ಬಳಸಲಾಗಿದೆ. ಮಹಾಪುರ ಎಂದರೆ ಭದ್ರವಾದ ಗೋಡೆಗಳಿಂದ ಸುತ್ತುವರಿಯಲ್ಪಟ್ಟಿರುವ ದೊಡ್ಡ ಪಟ್ಟಣ ಎಂದರ್ಥ.[೩] ಹಳೆಗನ್ನಡದಲ್ಲಿ ಕೋಂಟೆ ಎಂಬ ಮೂಲರೂಪವಿದ್ದು, ಇದನ್ನು ಹೊಸಗನ್ನಡದಲ್ಲಿ ಕೋಟೆ ಎಂದು ಕರೆಯಲಾಗುತ್ತದೆ. ಆಂಗ್ಲ ಭಾಷೆಯಲ್ಲಿ ಫೋರ್ಟ್ ಎಂದು ಕರೆಯುತ್ತಾರೆ. ಆಂಗ್ಲ ಭಾಷೆಯ ಫೋರ್ಟ್ ಪದವನ್ನು ವಿಸ್ತರಿಸಿ ಅದಕ್ಕೆ ವಿಶಿಷ್ಟ ಅರ್ಥವೊಂದನ್ನು ಕಲ್ಪಿಸಬಹುದು. F=Formidable, O=Obstruct, R=Rampart, T=Tactics

ಎಂಬುದಾಗಿ ಹೇಳಬಹುದು. ಅಂದರೆ "ಕೋಟೆಯು ಯುದ್ಧತಂತ್ರದ ಒಂದು ರಚನೆಯಾಗಿದ್ದು ಶತ್ರುಗಳಿಗೆ ದಿಗಿಲು ಹುಟ್ಟಿಸುವಂತಹ ತಡೆಗೋಡೆಯಾಗಿದೆ".

೩.೨ ವ್ಯಾಖ್ಯಾನಗಳು

ಕೋಟೆಗಳ ಬಗ್ಗೆ ಇತ್ತೀಚೆಗೆ ಅನೇಕ ವಿದ್ವಾಂಸರು ಅಧ್ಯಯನ ಕೈಗೊಂಡಿದ್ದು ಅವರು ವಿವಿಧ ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳಲ್ಲಿ ಮುಖ್ಯವಾದ ಅಭಿಪ್ರಾಯಗಳನ್ನು ಮಾತ್ರ ಇಲ್ಲಿ ಹೇಳಲು ಯತ್ನಿಸಲಾಗಿದೆ.

೧. ಬೆಟಗೇರಿ ಕೃಷ್ಣಶರ್ಮರು : "ಹಿಂದಿನ ಕಾಲದ ನಮ್ಮ ರಾಜಕೀಯ ವ್ಯವಸ್ಥೆಗೆ ನಗರ, ಗ್ರಾಮ, ಹಳ್ಳಿ, ಪಟ್ಟಣಗಳಿಗೆ ಕೋಟೆಗಳು ಸಂರಕ್ಷಕ ಸಾಧನಗಳಾಗಿದ್ದವು" ಎಂದು ಅಭಿಪ್ರಾಯಪಟ್ಟಿದ್ದಾರೆ.[೪]

೨. ಎಸ್.ಕೆ.ಜೋಶಿಯವರು : "ಮಾನವನು ಸಂಸ್ಕೃತಿಯ ಬೆಳವಣಿಗೆಯ ಹಂತದಲ್ಲಿ ತನ್ನನ್ನಷ್ಟೆ ಅಲ್ಲದೆ, ಇಡೀ ಸಮುದಾಯವನ್ನು ರಕ್ಷಣೆ ಮಾಡಲು ರಕ್ಷಣಾವ್ಯವಸ್ಥೆಯನ್ನು ಮಾಡಿಕೊಂಡನು" ಎಂದು ಹೇಳಿದ್ದಾರೆ.[೫]

೩. ಜಿ.ಟಿ. ಡಾಟ್ ಪ್ರಕಾರ : "ಪ್ರಾಚೀನ ಕಾಲದಲ್ಲಿ ಈ ಕೋಟೆಗಳು ರಾಜಧಾನಿಯನ್ನು ಸಲುವಾಗಿ ಇರುವಂತಹವು."[೬]

೪. ಯಕ್ಟರ್ ಸ್ಟ್ರೇಟ್ ಪ್ರಕಾರ : "ವಿರೋಧಿಗಳಿಂದ ಯುದ್ಧ ತಡೆಯುವುದಕ್ಕೆ ಮತ್ತು ರಕ್ಷಣೆಗಾಗಿ ಕೋಟೆಗಳು ತುಂಬಾ ಅನುಕೂಲಕರವಾಗಿದ್ದವು."[೭]

೫. ದಿ ಎನ್‌ಸೈಕ್ಲೋಪಿಡಿಯಾ ಅಮೇರಿಕಾ : "ಕೋಟೆ ನಿರ್ಮಾಣವು ಮಾನವನ ಅತ್ಯಂತ ಪುರಾತನ ಅಥವಾ ಪ್ರಾಚೀನ ಕಲೆಯಾಗಿದೆ" ಎಂದು ವ್ಯಾಖ್ಯಾನಿಸಿದೆ.[೮]

೬. ದಿ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ ಪ್ರಕಾರ : "ಕೋಟೆ ಎಂದರೆ ಹೊರಗಿನ ಆಕ್ರಮಣಗಳಿಂದ ಜನರನ್ನು ಅಥವಾ ನಾಡನ್ನು ರಕ್ಷಿಸುವ ಸಲುವಾಗಿ ನಿರ್ಮಿಸಿರುವ ಒಂದು ಭದ್ರವಾದ ನೆಲೆಯಾಗಿದೆ" ಎಂದು ಹೇಳಲಾಗಿದೆ.[೯]

೭. ಕನ್ನಡ ವಿಶ್ವಕೋಶದಲ್ಲಿ : "ಕೋಟೆಯು ಯುದ್ಧಗತಿಯ ನಿಯಂತ್ರಣ ಕೇಂದ್ರವಾಗಿಯು ಯುದ್ಧ ವ್ಯವಸ್ಥೆಯ ನರಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿದೆ" ಎಂದು ಹೇಳಲಾಗಿದೆ.[೧೦]

ಒಟ್ಟಾರೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಜನ ಊರುಗಳ ಸುತ್ತಲು ಕ್ರೂರ ಪ್ರಾಣಿಗಳು ಮತ್ತು ಬಾಹ್ಯ ಶತ್ರುಗಳಿಂದ ರಕ್ಷಿಸಿಕೊಳ್ಳಲು ರಕ್ಷಣೆಯ ಆವರಣಗಳನ್ನು ನಿರ್ಮಿಸುತ್ತಿದ್ದರು. ಸುತ್ತಲೂ ಮಣ್ಣಿನ ದಿಬ್ಬವನ್ನು ಏರಿಸುವುದು, ಆಳವಾದ ಕಂದಕ ತೋಡುವುದು, ಇಟ್ಟಿಗೆಯಿಂದಲೋ ಅಥವಾ ಕಲ್ಲಿನಿಂದಲೋ ಗೋಡೆಯನ್ನು ನಿರ್ಮಿಸಿ, ಶತ್ರುಗಳು ತಮ್ಮ ಮೇಲೆ ನುಗ್ಗಿ ಬಾರದಂತೆ ತಡೆಯುವುದಕ್ಕೆ ಮತ್ತು ತಾವು ಸುಭದ್ರವಾದ ಸ್ಥಾನದಲ್ಲಿ ನಿಂತು ಸದೆಬಡೆಯುವದಕ್ಕೆ ಅನುಕೂಲ ಮಾಡಿಕೊಳ್ಳುವುದಕ್ಕಾಗಿ ಕೋಟೆಗಳನ್ನು ರಚಿಸಲಾಗುತ್ತಿತ್ತು ಎಂದು ಹೇಳಬಹುದು.

೩.೩ ಕೋಟೆಗಳ ಪ್ರಾಚೀನತೆ

ಕೋಟೆ ನಿರ್ಮಾಣವು ಮನುಕುಲದ ಒಂದು ಪ್ರಾಚೀನ ಕಲೆ. ಆದಿಮಾನವನು ದುಷ್ಟ ಪ್ರಾಣಿಗಳಿಂದ ಪ್ರಾಕೃತಿಕ ವಿಕೋಪಗಳಿಂದ ರಕ್ಷಿಸಿಕೊಳ್ಳುವ ಸಲುವಾಗಿ ನಿರ್ಮಿಸಿಕೊಂಡ ರಕ್ಷಣಾವ್ಯವಸ್ಥೆಯಲ್ಲಿ ಕೋಟೆ ಉಗಮವನ್ನು ಕಾಣಬಹುದು. ಇದರಲ್ಲಿ ಎರಡು ವಿಧಗಳಿವೆ :

೧. ಶಾಶ್ವತ ಕೋಟೆಗಳು

೨. ಬಯಲು ಕೋಟೆಗಳು

ಗಡಿನಾಡು, ಪುರದುರ್ಗ, ರೈಲುಸಂದಿ, ಪರ್ವತ ಕಣಿವೆ, ಸಮುದ್ರ ತೀರ, ವಾಣಿಜ್ಯ ಕ್ಷೇತ್ರ ಮುಂತಾದವುಗಳ ರಕ್ಷಣೆಗೆ ಅಣಿ ಮಾಡಿದ ಕೋಟೆ-ಕೊತ್ತಲುಗಳು ಶಾಶ್ವತ ಕೋಟೆಗಳಾಗಿವೆ. ಈ ಕಟ್ಟಡಗಳಿಗೆ ಹೆಚ್ಚು ಕಾಲಾವಧಿ ಮತ್ತು ಸಾಮಗ್ರಿಗಳು ಅಗತ್ಯವಾಗಿರುವುದರಿಂದ ಇವುಗಳನ್ನು ಶಾಂತಿ ಕಾಲದಲ್ಲಿ ನಿರ್ಮಿಸುತ್ತಾರೆ. ಯುದ್ಧರಂಗದಲ್ಲಿ ಅವಶ್ಯಕತೆಗನುಗುಣವಾಗಿ ಸೈನಿಕರು ತಮ್ಮ ಬಳಿ ಇರುವ ಆಯುಧಗಳಿಂದ ತಮ್ಮ ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಗುವ ಸಾಮಗ್ರಿಗಳಿಂದ ತರಾತುರಿಯಲ್ಲಿ ವ್ಯವಸ್ಥಾಪಿಸುವ ರಚನೆಗಳೇ ಬಯಲುಕೋಟೆಗಳು ಅಥವಾ ಹಂಗಾಮಿ ಕೋಟೆಗಳೆಂದೆನಿಸಿಕೊಂಡಿವೆ.

೩.೪ ವಿಶ್ವದ ಪ್ರಾಚೀನ ಕೋಟೆಗಳು

ವಿಶ್ವದ ಚರಿತ್ರೆಯಲ್ಲಿ ಕೋಟೆಗಳ ರಚನೆಯು ಕ್ರಿ.ಪೂ.ದಿಂದಲೇ ಪ್ರಾರಂಭವಾಗಿದ್ದುದನ್ನು ಪುರಾತತ್ವ ಸಂಶೋಧನೆಗಳು ತಿಳಿಸುತ್ತವೆ. ಕ್ರಿ.ಪೂ. ೩೦೦೦ದಿಂದ ಏಷಿಯಾಮೈನರ್ ಮತ್ತು ಈಜಿಪ್ಟ್ ದೇಶಗಳಲ್ಲಿ ಯುದ್ಧತಂತ್ರದ ಅವಶ್ಯಕತೆಗಳಿಗಾಗಿ ಸಂದರ್ಭಾನುಸಾರ ಉಪಯೋಗಿಸಲು ಹಾಗೂ ಸೈನಿಕರನ್ನು ರಕ್ಷಿಸಲು

ಹಲವು ಬಗೆಯ ಕೋಟೆಗಳನ್ನು ನಿರ್ಮಿಸಲಾಯಿತು. ಅತಿಮುಖ್ಯ ನಗರಗಳಾದ ನಿನೆವಾ, ಬ್ಯಾಬಿಲೋನಿಯಾ, ಅಸ್ಸೀರಿಯಾ, ಓಟ್ಟೈಟ್ ಮತ್ತಿತರ ನಗರಗಳಿಗೆ ೧೩ ಅಡಿ ದಪ್ಪದ ೩೫ ಅಡಿ ಎತ್ತರದ ಕಲ್ಲಿನ ಬಲಿಷ್ಠ ಗೋಡೆಗಳನ್ನು ನಿರ್ಮಿಸಿದ್ದರೆಂದು ಹೇಳಲಾಗಿದೆ.[೧೧] ಮುಂದುವರೆದು ಕ್ರಿ.ಪೂ. ೨೦೦೦ಕ್ಕಿಂತಲೂ ಹಿಂದೆಯೇ ಕಟ್ಟಿದ ನಿನೆವಾದ ಗೋಡೆಗಳು ೧೫೦ ಅಡಿ ಎತ್ತರ ಮತ್ತು ೩೦ ಅಡಿ ದಪ್ಪ, ಸುತ್ತಳತೆ ೫೦ ಮೈಲು ಇದ್ದು, ಈ ಕೋಟೆಗಳ ಮೇಲೆ ೧,೫೦೦ ರಕ್ಷಣಾ ಗೋಪುರಗಳು ಇದ್ದವೆಂದು ಹೇಳಲಾಗಿದೆ.[೧೨]

ರೋಮನ್ನರು ಕೋಟೆ ನಿರ್ಮಾಣದ ತಂತ್ರದಲ್ಲಿ ಅತ್ಯಂತ ಪ್ರವೀಣರಾಗಿದ್ದರು. ಅವರು ನಿರ್ಮಿಸಿದ ಹರ್ಡಿಯನ್ಸ್ ಗೋಡೆಯು ಒಂದು ಉತ್ತಮ ಉದಾಹರಣೆ. ಈ ಗೋಡೆಯು ಅತ್ಯಂತ ಬೃಹದಾಕಾರದ ಕೋಟೆಯಾಗಿತ್ತಲ್ಲದೆ, ೧೫-೨೦ ಅಡಿ ದಪ್ಪವಿರುವ ಆಯತಾಕಾರದ ಕೋಟೆಯ ಗೋಡೆಯ ಸುತ್ತಲೂ ಸದಾ ನೀರು ಹರಿಯುತ್ತಿದ್ದ ಆಳವಾದ ಕಂದಕವಿತ್ತೆಂದು ತಿಳಿದುಬಂದಿದೆ. ಕೋಟೆಯ ಕಾವಲಿನ ಅವಧಿಗಾಗಿ ನಿರ್ಮಿಸಿದ ವಿಶ್ರಾಂತಿತಾಣ, ಪಹರೆದುರ್ಗ, ಕಾಳಿನ ಕಣಜಗಳು, ಅಧಿಕಾರಿಗಳ ಕೊಠಡಿಗಳು, ಮರೆಯಿಂದ ಆಯುಧಗಳನ್ನು ಎಸೆದು ಶತ್ರುಗಳನ್ನು ತಡೆಗಟ್ಟಲು ನೆರವಾಗುವ ಕಿಂಡಿಗಳು ಮುಂತಾದವುಗಳನ್ನು ರಕ್ಷಣಾ ದೃಷ್ಟಿಯಿಂದ ನಿರ್ಮಿಸಿದ್ದರು.[೧೩] ಈ ಕೋಟೆಯ ಮುಖ್ಯ ಉದ್ದೇಶ ಅದರ ಗಡಿಯನ್ನು ರಕ್ಷಿಸುವುದಾಗಿತ್ತು.[೧೪] ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದಾದ ಚೀನಾ ಮಹಾಗೋಡೆಯು ಬಲಿಷ್ಠ ಹಾಗೂ ಅತೀ ಉದ್ದವಾದ ರಕ್ಷಣಾಗೋಡೆಯಾಗಿದೆ. ಚೀನಾದ ಉತ್ತರದ ಗುಡ್ಡಗಳ ಮೇಲೆ ಚೀನಾದ ಮೇಲೆ ೨೫ ಅಡಿ ಗಾತ್ರದ, ೩೦ ಅಡಿ ಎತ್ತರದ ೧೮೦೦ ಮೈಲು ಉದ್ದದ ಗೋಡೆಯನ್ನು ಷಿಹಾಂಗ್‌ಟಿ (ಜಿಂಗ್-ಷಿ-ವಾಂಗ್-ಟಿ) ಎಂಬುವನು ನಿರ್ಮಿಸಿದ. ಈ ಗೋಡೆಯ ಮೇಲೆ ೭೫೦ ಅಡಿ ಅಂತರದಲ್ಲಿ ೪೦ ಅಡಿ ಎತ್ತರದ ೧೫೦೦೦ ಗೋಪುರಗಳನ್ನು ನಿರ್ಮಿಸಲಾಗಿದೆ. ಇವುಗಳ ಮಧ್ಯೆ ಅಲ್ಲಲ್ಲಿ ೨೫,೦೦೦ ಕಾವಲು ಗೋಪುರಗಳಿವೆ. ಗೋಡೆಯ ಹೊರಭಾಗದಲ್ಲಿ ಒಂದಾದರೊಂದಂತೆ ೩ ಕಂಕದಗಳಿದ್ದು, ಕೋಟೆಯ ಗೋಡೆಗೆ ೩೦ ಕೋಟಿ ಸಾಲು ಗಜಕಲ್ಲು ಸೇರಿಸಲಾಗಿದೆ.[೧೫]

ಭೂಮಧ್ಯೆ ಸಮುದ್ರದ ಜನರು ಕ್ರಿ.ಪೂ.೬೦೦ರಲ್ಲಿ ಇಟ್ಟಿಗೆ ಮತ್ತು ಮಣ್ಣನ್ನು ಬಳಸಿ ಕೋಟೆ ಕಟ್ಟುವ ವಿಧಾನವನ್ನು ತಿಳಿದಿದ್ದರು. ಕಾನ್‌ಸ್ಟ್ಯಾಂಟಿನೋಪಲ್ ನಗರದಲ್ಲಿ ೨೨೫ ಕಿ.ಮೀ. ಉದ್ದದ ಗೋಡೆ ಹಾಗೂ ೬೦ ಅಡಿ ಆಳದ ಕಂದಕವನ್ನು ನಿರ್ಮಿಸಲಾಗಿತ್ತು. ನಂತರ ತುರ್ಕರು ಕಾನ್‌ಸ್ಟ್ಯಾಂಟಿನೋಪಲ್ ನಗರದ ಮೇಲೆ ಧಾಳಿ ಮಾಡಿದಾಗ, ಈ ಕೋಟೆಯ ಗೋಡೆಗಳು ಹಾಳಾಗದೆ ಹಾಗೆಯೇ

[illegible]

[illegible]

ಉಳಿದುಕೊಂಡಿವೆ. ಕಾರಣ ದಪ್ಪ ಹಾಗೂ ಎತ್ತರವಾದ ಕೋಟೆಗೋಡೆಗಳ ಮಧ್ಯೆ ಎರಡು ಸಮಾನಾಂತರ ಗೋಡೆಗಳನ್ನು ನಿರ್ಮಿಸಿ ಗೋಡೆಗಳ ಮಧ್ಯೆ ಕಲ್ಲು, ಮಣ್ಣು, ಇಟ್ಟಿಗೆ, ಹೆಂಡೆ ಮುಂತಾದವುಗಳನ್ನು ತುಂಬಿ ಭರ್ತಿ ಮಾಡುವುದರೊಂದಿಗೆ ಕೋಟೆಗೋಡೆಯ ದಪ್ಪವನ್ನು ಹೆಚ್ಚಿಸಲಾಗಿದೆ. ರಕ್ಷಣಾ ದೃಷ್ಟಿಯಿಂದ ವಾಸ್ತುವಿನ್ಯಾಸದಲ್ಲಿ ಈ ಬದಲಾವಣೆ ಮಾಡಿರುವುದನ್ನು ನೋಡಿದರೆ, ಕೋಟೆಯ ರಚನೆಯ ಕಲೆಯು ಪ್ರಾಚೀನ ಕಾಲಗಳಲ್ಲಿ ಅಸ್ತಿತ್ವದಲ್ಲಿತ್ತು ಎಂಬುದನ್ನು ಧೃಡಪಡಿಸುತ್ತದೆ.[೧೬]

೩.೫ ಭಾರತದಲ್ಲಿ ಕೋಟೆಗಳು

ಭಾರತದಲ್ಲಿ ಕೋಟೆಗಳ ಇತಿಹಾಸ ತುಂಬಾ ಪ್ರಾಚೀನತೆಯನ್ನು ಹೊಂದಿದೆ. ಕೋಟೆಯ ಅವಶೇಷಗಳು ಸಿಂಧೂ ನಾಗರಿಕತೆಯನ್ನು ಪ್ರತಿನಿಧಿಸುವ ಪಟ್ಟಣಗಳಾದ ಹರಪ್ಪಾ, ಮೊಹೆಂಜೋದಾರೊ ಕಾಲಿಬಂಗಾನ್, ರೂಪಾರ್, ಲೋಥಲ್, ಸುರ್‌ಕೋಟ್ ಮುಂತಾದ ಸ್ಥಳಗಳಲ್ಲಿ ಸಂಶೋಧಕರು ಸಂಶೋಧನೆ ನಡೆಸಿ ಪತ್ತಿಹಚ್ಚಿದ್ದಾರೆ.[೧೭] ಇತಿಹಾಸಪೂರ್ವ ಕಾಲದಲ್ಲೇ ಮೊಹೆಂಜೆದಾರೊದಲ್ಲಿ ಕೋಟೆಗಳನ್ನು ಕಟ್ಟುತ್ತಿದ್ದ ವಿಷಯ ಇತ್ತೀಚಿನ ಸಂಶೋಧನೆಗಳಿಂದ ಬೆಳಕಿಗೆ ಬಂದಿದೆ. ಮೊಹೆಂಜೋದಾರೊ ಸಮೀಪದ ಕೋಟ್‌ದಿಜಿ ಎಂಬಲ್ಲಿ ಆಯತಾಕಾರದ ಮಣ್ಣಿನ ಇಟ್ಟಿಗೆಯ ಗೋಡೆಯೊಂದು ಲಭ್ಯವಿದ್ದು, ಇದರ ಕಾಲ ಸುಮಾರು ಕ್ರಿ.ಪೂ.೨೪೦೦ ಎಂದು ನಂಬಲಾಗಿದೆ.[೧೮]

ಹರಪ್ಪ ಸಂಸ್ಕೃತಿಗೆ ಸ್ವಲ್ಪ ಮೊದಲಿನ ಕೋಟೆಯೊಂದು ಸಿಂಧ್ ಪ್ರಾಂತ್ಯದಲ್ಲಿ ಬೆಳಕಿಗೆ ಬಂದಿರುವುದಾಗಿ ಮಜುಮ್‌ದಾರ್ ಅಭಿಪ್ರಾಯಪಟ್ಟಿದ್ದಾರೆ.[೧೯] ಹರಪ್ಪಾ ಮತ್ತು ಮೊಹೆಂಜೋದಾರೊಗಳ ಸುತ್ತ ರಕ್ಷಣೆಗಾಗಿ ನಿರ್ಮಿಸಲಾದ ಕೋಟೆಗಳನ್ನು ಗುರುತಿಸಲಾಗಿದೆ. ಹರಪ್ಪಾದ ಕೋಟೆಯ ಗೋಡೆಗಳು ಬಿಸಿಲಿನಲ್ಲಿ ಒಣಗಿದ ಇಟ್ಟಿಗೆಗಳಿಂದ ಕಟ್ಟಿದ ಆಳವಾದ ತಳಹದಿಯಿಂದ ಕೂಡಿವೆ ಎಂದು ಹೇಳಲಾಗಿದೆ.[೨೦] ವೇದಕಾಲದಲ್ಲಿ ಕೋಟೆಗಳು ಇದ್ದ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ವೇದಗಳಲ್ಲಿ ಇಂದ್ರನನ್ನು 'ಪುರಂದರ' ಎಂದು ವರ್ಣಿಸಲಾಗಿದೆ. ಅವನನ್ನು ಶತಪುರಗಳ ಧ್ವಂಸಕನೆಂದು ಹೇಳಲಾಗಿದೆ. ಇಂದ್ರನಂತೆ ಕೋಟೆಗಳನ್ನು ಧ್ವಂಸ ಮಾಡುವಲ್ಲಿ ಅಗ್ನಿಯದು ಮಹತ್ವದ ಪಾತ್ರವಿದೆ. ಅಸಂಖ್ಯಾತವಾಗಿದ್ದ ದಾಸ್ಯ ಕೋಟೆಗಳನ್ನು ಕೇವಲ ೯೦ಕ್ಕೆ ಇಳಿಸಲು ಅಗ್ನಿಯು ಇಂದ್ರನಿಗೆ ನೆರವಾದನು.[೨೧] ಅಥರ್ವಣ ವೇದದಲ್ಲಿ ಕಲ್ಲಿನ ಗೋಡೆಗೆ ಸಂವಾದಿಯಾಗಿ ವಪ್ರ ಪದವನ್ನು ಬಳಸಿದೆ.[೨೨] ಇಲ್ಲಿ ಪುರ ಎಂಬ ಪದವು ಕೋಟೆಯಿಂದಾವೃತವಾದ ಪಟ್ಟಣವನ್ನು ಸೂಚಿಸುತ್ತದೆ ಎಂಬುದು ವಿದ್ವಾಂಸರ ಅಭಿಮತ.[೨೩]

ಮೌರ್ಯರ ಕಾಲದಲ್ಲಿ ಭೇಟಿ ನೀಡಿದ ಗ್ರೀಕ್ ರಾಯಭಾರಿ ಮೆಗಸ್ಥಾನೀಸನು ಪಾಟಲಿಪುತ್ರವು ಕೋಟೆಯನ್ನು ಹೊಂದಿದ್ದ ಬಗ್ಗೆ ದಾಖಲೆಯನ್ನು ಒದಗಿಸಿದ್ದಾನೆ. ಇತ್ತೀಚೆಗೆ ಪಾಟಲಿಪುತ್ರದಲ್ಲಿ ನಡೆದ ಭೂಉತ್ಖನನಗಳು ಮೆಗಸ್ಥಾನೀಸನ ವರದಿಯನ್ನು ಧೃಡಪಡಿಸಿವೆ.[೨೪] ಕ್ರಿ.ಶ. ೧೩೨೯ರಲ್ಲಿ ಡಾ.ಸ್ಪೂನ್ಸ್‌ರವರು ಪಾಟ್ನಾದ ಬಳಿ ಇರುವ ಬೀಲುಂದಿಭಾಷಾ ಎಂಬ ಸ್ಥಳದಲ್ಲಿ ನಡೆದ ಭೂಸಂಶೋಧನೆಯಲ್ಲಿ, ಆಗಿನ ಪಾಟಲಿಪುತ್ರ ನಗರದ ಸುತ್ತಮುತ್ತ ಹಾಕಿದ್ದ ಮರದ ದೊಡ್ಡ ಬೇಲಿಯ ಅಲ್ಪಸ್ವಲ್ಪ ಅವಶೇಷಗಳು ದೊರಕಿವೆ.[೨೫] ಮುಂದುವರೆದು ಡಾ.ಎಸ್.ಕೆ.ಜೋಶಿಯವರು ಅಲ್ಲಿನ ಭೂ ಉತ್ಖನನದ ಆಧಾರದ ಮೇಲೆ ದ್ವಾರಗಳು, ಕೋಟೆಯ ಸುತ್ತಲೂ ಕಂದಕವಿದ್ದುದನ್ನು ಧೃಡಪಡಿಸಿದ್ದಾರೆ.[೨೬] ಈ ರೀತಿಯಾಗಿ ಕ್ರಿ.ಪೂ. ಶತಮಾನಗಳಲ್ಲಿ ಪ್ರಾರಂಭಗೊಂಡ ಭಾರತದ ರಕ್ಷಣಾ ವಾಸ್ತುಶಿಲ್ಪವು ಕ್ರಮೇಣ ನಾನಾಕಡೆ ಹರಡಿ ಅಭೇದ್ಯವಾದ ಕೋಟೆಗಳು ನಿರ್ಮಿಸಲ್ಪಟ್ಟವು. ಅವುಗಳಲ್ಲಿ ಪ್ರಸಿದ್ಧ ಕೋಟೆಗಳೆಂದರೆ ಅಜೀಘರ್, ಕಲಂಜರ್, ಕನೂಜ್, ಗ್ವಾಲಿಯರ್, ನಾರ್‌ವಾರ್, ಚಂದೇರಿ, ತುಘಲಕಾಬಾದ್(ದೆಹಲಿ), ಕಾಂಗ್ರ ಮುಂತಾದ ದಕ್ಷಿಣ ಭಾರತದಲ್ಲಿ ಜಂಗೀಕೋಟೆ, ಗೋಲ್ಕಂಡ, ವೆಲ್ಲೂರ್, ಚಿತ್ರದುರ್ಗ, ರಾಜ್‌ಗೀರ್, ಶ್ರೀರಂಗಪಟ್ಟಣ ಮುಂತಾದ ಕೋಟೆಗಳನ್ನು ಹೆಸರಿಸಬಹುದು.

೩.೬ ಕರ್ನಾಟಕದ ಕೋಟೆಗಳು

ಕರ್ನಾಟಕದಲ್ಲಿ ಕೋಟೆಗಳ ಪ್ರಾಚೀನತೆಯನ್ನು ಮೌರ್ಯರ ಕಾಲಕ್ಕೆ ಕೊಂಡೊಯ್ಯಬಹುದು. ಕರ್ನಾಟಕದಲ್ಲಿ ಮೌರ್ಯರ ಕಾಲದ ಪಟ್ಟಣಗಳಾದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳು ಕೋಟೆಯಿಂದ ಆವೃತ್ತವಾಗಿದ್ದ ಊರುಗಳಾಗಿದ್ದವೆಂದು ಅಭಿಪ್ರಾಯಪಡಲಾಗಿದೆ.[೨೭] ಕ್ರಿ.ಶ.೩ನೇ ಶತಮಾನದಿಂದ ೪ನೇ ಶತಮಾನದವರೆಗೆ ಆಳ್ವಿಕೆ ಮಾಡಿದ ಶಾತವಾಹನರು ನಿರ್ದಿಷ್ಟ ಆಕಾರದ ಇಟ್ಟಿಗೆಗಳನ್ನು (೫೦x೩೦x೧೦) ಕೋಟೆ ನಿರ್ಮಾಣಕ್ಕೆ ಬಳಸಿದ್ದರೆನ್ನಲಾಗಿದೆ. ಶಾತವಾಹನರ ಕೋಟೆಗಳು ಕುರುಹೂಗಳು, ಸನ್ನತಿ, ಮಾನ್ಯಖೇಟ, ಚಂದ್ರವಳ್ಳಿ, ಬ್ರಹ್ಮಗಿರಿ ಮುಂತಾದ ಕಡೆಗಳಲ್ಲಿ ಕಂಡುಬಂದಿವೆ.[೨೮] ಕರ್ನಾಟಕದಲ್ಲಿ ಕೋಟೆಯ ರಚನೆಯ ಹಿಂದೆ ಪ್ರಾದೇಶಿಕ ಪರಿಸರದಲ್ಲಿನ ಭಿನ್ನತೆ, ಹವಾಗುಣ, . ರಾಜಕೀಯ ಭದ್ರತೆ, ಆರ್ಥಿಕ ಸಂಪನ್ಮೂಲ, ನೈಸರ್ಗಿಕ ರಕ್ಷಣೆಯ ಅಂಶಗಳನ್ನು ಗಮನಿಸಿರುವುದು ಕಂಡುಬರುತ್ತದೆ. ಕಾಲದಿಂದ ಕಾಲಕ್ಕೆ ಬದಲಾದ ಆಧುನಿಕ ಯುದ್ಧ ತಂತ್ರಕ್ಕನುಗುಣವಾಗಿ ಪ್ರಾಚೀನ ಕದಂಬರಿಂದ ಹಿಡಿದು ವಿಜಯನಗರದವರೆಗೆ ಕೋಟೆಯ ರಚನೆಯಲ್ಲಿ ಬದಲಾವಣೆ ಮತ್ತು ಬೆಳವಣಿಗೆಯಾಗಿರುವುದನ್ನು

[illegible]

[illegible]

ಗುರುತಿಸಬಹುದು. ಆದ್ದರಿಂದ ಆಧುನಿಕತೆಯ ಪರಿಜ್ಞಾನವಿದ್ದ ಚಾಣಾಕ್ಷ ವಾಸ್ತುಶಿಲ್ಪಿಗಳು ಕೋಟೆಯನ್ನು ಕಟ್ಟುವಲ್ಲಿ ದುಡಿದಿರಬೇಕು. ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಪರಿಪೂರ್ಣವಾಗಿ ಬಳಸುವ ನಿಟ್ಟಿನಲ್ಲಿ ಅವರು ಕೋಟೆಯ ರಚನೆಗೆ ಯೋಜನೆಯನ್ನು ರೂಪಿಸಿ ಅದನ್ನು ಕಾರ್ಯಗತಗೊಳಿಸಿದೆ.[೨೯]

ಕರ್ನಾಟಕದಲ್ಲಿ ಹೆಚ್ಚಾಗಿರುವ ನದಿಬಯಲು, ಬೆಟ್ಟಗುಡ್ಡಗಳ ಪ್ರಾಕೃತಿಕ ಪರಿಸರವನ್ನು ಬಳಸಿಕೊಂಡು ನಿರ್ಮಿಸಿದ ಕೋಟೆಗಳೇ ಹೆಚ್ಚಾಗಿವೆ. ಮೌರ್ಯರು ಶಾತವಾಹನರು ಆಶ್ರಯಿಸಿಕೊಂಡ ಸ್ಥಳವು ಇದೇ ರೀತಿಯದು. ಸನ್ನತಿಯು ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ ಬರುವ ಒಂದು ಹಳ್ಳಿ. ಇದು ಭೀಮಾ ನದಿಯ ದಡದಲ್ಲಿದೆ. ಭೀಮಾ ನದಿಯಿಂದ ದೊರೆಯುವ ಸ್ವಾಭಾವಿಕ ರಕ್ಷಣೆಯನ್ನು ಪರಿಗಣಿಸಿ ಇಲ್ಲಿ ಕೋಟೆಯನ್ನು ಪ್ರಾಚೀನ ಕಾಲದಲ್ಲಿಯೇ ಕಟ್ಟಲಾಗಿತ್ತು. ಇಲ್ಲಿ ನದಿಯು ದಕ್ಷಿಣ, ಪಶ್ಚಿಮ ಮತ್ತು ಸ್ವಲ್ಪಮಟ್ಟಿಗೆ ಉತ್ತರದಲ್ಲಿ ಅರ್ಧ ವರ್ತುಲಾಕಾರವಾಗಿ ಸುತ್ತುವರೆದು ರಕ್ಷಿಸುತ್ತದೆ. ಇದೇ ರೀತಿ ವರದಾನದಿಯು ಅರ್ಧ ವೃತ್ತಾಕಾರದಲ್ಲಿ ಮೂರು ಕಡೆಯಿಂದ ಸುತ್ತುವರೆದು ಹರಿಯುವುದರಿಂದ ಬನವಾಸಿಗೆ ಸ್ವಾಭಾವಿಕ ರಕ್ಷಣೆ ಸಿಕ್ಕಿದಂತಾಗಿದೆ. ಇವೆರಡೂ ನೆಲದುರ್ಗಕ್ಕೆ ಉತ್ತಮ ಉದಾಹರಣೆಗಳಾಗಿವೆ.[೩೦]

ಬಾದಾಮಿಯದು ಕರ್ನಾಟಕದ ಪ್ರಪ್ರಥಮ ಶಾಸನೋಕ್ತ ಕೋಟೆ. ಚಾಲುಕ್ಯ ದೊರೆ ಎರಡನೆ ಪುಲಕೇಶಿಯು ಬಾದಾಮಿಯಲ್ಲಿ ಕ್ರಿ.ಶ. ೫೪೩ರಲ್ಲಿ ರಾಜಧಾನಿಗೆ ಅಭೇದ್ಯ ಕೋಟೆ ಭದ್ರಪಡಿಸಿದ ಸಂಗತಿ ಶಾಸನದಲ್ಲಿದೆ.[೩೧] ಬಾದಾಮಿಯು ಗಿರಿದುರ್ಗವಾಗಿದ್ದು ರಾಜಕೀಯ ಭದ್ರತೆಯ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಆರ್ಥಿಕವಾಗಿ ಸಂಪದ್ಭರಿತವಾಗಿದ್ದ ಈ ಪ್ರದೇಶವನ್ನು ಚಾಲುಕ್ಯರು ರಾಜಧಾನಿಯಾಗಿ ಮಾಡಿಕೊಳ್ಳಲು ಇದಕ್ಕೆ ರಾಜಕೀಯ ಪ್ರಾಮುಖ್ಯವೂ ಲಭ್ಯವಾಯಿತು. ರಕ್ಷಣೆಯ ದೃಷ್ಟಿಯಿಂದ ಮೂರುಕಡೆ ಆಳವಾದ ಕಂದಕ ಅಥವಾ ಕಣಿವೆಯನ್ನು ಹೊಂದಿದ ಬಾದಾಮಿ ಆಯಕಟ್ಟಿನ ಪ್ರದೇಶವಾಗಿತ್ತು. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ದಕ್ಷಿಣದ ಗಡಿಯಲ್ಲಿರುವ ಉಚ್ಚಂಗಿದುರ್ಗ ಕದಂಬರ ಎರಡನೆಯ ರಾಜಧಾನಿಯಾಗಿತ್ತು. ಉಚ್ಚಂಗಿದುರ್ಗದ ಬೆಟ್ಟವು ಉತ್ತರ ದಕ್ಷಿಣವಾಗಿ ಸುಮಾರು ಒಂದೂವರೆ ಕಿ.ಮೀ.ಗಳಷ್ಟು ಹಬ್ಬಿದೆ. ಮಾತ್ರವಲ್ಲ ಈ ಬೆಟ್ಟ ಬಹಳ ಕಡಿದಾಗಿದ್ದು, ಕಲ್ಲಿನಿಂದ ಕಟ್ಟಿದ ಕೋಟೆಯ ಅವಶೇಷಗಳು ಈಗಲೂ ಉಳಿದುಬಂದಿವೆ. ಕುಮ್ಮಟದುರ್ಗದ ಕೋಟೆಯು ಗುಡ್ಡಗಳಿಂದ ಸುತ್ತುವರೆಯಲ್ಪಟ್ಟ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಇಲ್ಲಿನ ಗುಡ್ಡಗಳು ನೈಸರ್ಗಿಕ ರಕ್ಷಣೆಯನ್ನು ಒದಗಿಸದ್ದು, ಗುಡ್ಡಗಳು ಮಧ್ಯದ ಕಣಿವೆಯಲ್ಲಿ ಕೋಟೆಯ

[illegible]

[illegible]

ಗೋಡೆಯನ್ನು ನಿರ್ಮಿಸಲಾಗಿದೆ. ಶತ್ರುಗಳು ಯಾವ ಕಡೆಯಿಂದ ಬಂದರು ಗುಡ್ಡಗಳನ್ನು ಕೋಟೆಯ ಗೋಡೆಯನ್ನು ದಾಟಿಕೊಂಡು ಬರಬೇಕು.

ಕೌಟಿಲ್ಯನು ಹೆಸರಿಸುವ ಜಲದುರ್ಗ ಷಡ್ರೇಖಾಕೃತಿಯಲ್ಲಿದ್ದು, ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಬಂದರನ್ನು ಹೊಂದಿರುತ್ತದೆ. ಕಡಲ್‌ಗೊಂಟೆಗೆ ಪಶ್ಚಿಮ ಸಮುದ್ರ ತೀರದಲ್ಲಿರುವ ಸದಾಶಿವಗಡ, ವಿಜಯದುರ್ಗಗಳ ಹೆಸರನ್ನು ಹೇಳಬಹುದು.[೩೨] ಶ್ರೀರಂಗಪಟ್ಟಣದ ಕೋಟೆಯು ಜಲದುರ್ಗಕ್ಕೆ ಸಮಾನಾಂತರವಾಗಿರುವ ದ್ವೀಪದುರ್ಗವೇ ಆಗಿದೆ. ಕಾವೇರಿ ನದಿ ನೀರಿನಿಂದ ಸುತ್ತುವರೆದಿರುವ ಈ ಕೋಟೆಯಲ್ಲಿ ಹೊರ, ಮಧ್ಯ ಮತ್ತು ಒಳಕೋಟೆಗಳಿದ್ದು, ಪ್ರತಿಯೊಂದು ಕೋಟೆಯು ನೀರಿನಿಂದ ತುಂಬಿದ ಕಂದಕದಿಂದ ಸುತ್ತುವರೆದಿವೆ. ಈ ಜಲದುರ್ಗಗಳು ಕ್ರಿ.ಶ.೧೫ನೇ ಶತಕದ ಅನಂತರ ನಿರ್ಮಾಣವಾದವು ಎಂದು ಹೇಳಲಾಗಿದೆ.[೩೩]

ಪ್ರಾಚೀನ ಕರ್ನಾಟಕದ ರಾಜಕೀಯದಲ್ಲಿ ಕದಂಬರಿಗೆ ಮಹತ್ವದ ಸ್ಥಾನವಿರುವಂತೆ ಕೋಟೆ ನಿರ್ಮಾಣದಲ್ಲೂ ಇವರ ಕಾಲ ಒಂದು ಮಹತ್ವದ ಘಟ್ಟವಾಗಿದೆ. ವರದಾನದಿಯ ದಡದಲ್ಲಿ ಇವರು ನಿರ್ಮಿಸಿದ ಮಣ್ಣಿನ ಕೋಟೆ ಪ್ರಥಮ ದರ್ಜೆಯದು. ಗಗನಚುಂಬಿ ವೃಕ್ಷಗಳ ನಡುವೆ ನಿರ್ಮಾಣವಾದ ಇದು ವನದುರ್ಗದ ಪ್ರತಿನಿಧಿಯಂತೆ ಇತ್ತು.[೩೪] ರಾಜಧಾನಿ ಕೋಟೆಯ ನಿರ್ಮಾಣದಲ್ಲಿ ಸ್ಥಳದ ಆಯ್ಕೆ ಬಹುಮುಖ್ಯವಾದ ವಿಷಯ. ನೈಸರ್ಗಿಕ ರಕ್ಷಣೆಯ ದೃಷ್ಟಿಯಿಂದ ನದಿಯ ದಡಗಳು ಹೆಚ್ಚು ಉಪಯುಕ್ತ. ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ. ಇದು ಒಂದು ಸಣ್ಣ ಹಳ್ಳಿಯಾದರೂ ಕಾಗಿನಾ ನದಿಯ ಎಡದಂಡೆಯ ಪ್ರದೇಶದಲ್ಲಿ ಆರಂಭಕಾಲೀನ ಬದುಕಿನ ಕುರುಹುಗಳಿವೆ.[೩೫]

ರಕ್ಷಣಾದೃಷ್ಟಿಯಿಂದ ತೀರಾ ಆಯಕಟ್ಟಿನ ಸ್ಥಳವಿದು. ಭೀಮಾನದಿಯ ಉಪನದಿ ಕಾಗಿನಾ ದಕ್ಷಿಣಕ್ಕೆ ಹರಿಯುವ ನದಿ. ಇದರ ಎಡದಂಡೆಯಲ್ಲಿ ಹುಟ್ಟುವ ಸಣ್ಣಹೊಳೆ ಪೂರ್ವ ಮತ್ತು ದಕ್ಷಿಣದಲ್ಲಿ ಹರಿಯುತ್ತದೆ. ಅಲ್ಲಿ ಇನ್ನೊಂದು ಸಣ್ಣ ಹೊಳೆಯನ್ನು ಸೇರಿ ಪಶ್ಚಿಮಕ್ಕೆ ಹರಿದು ಕಾಗಿನಾವನ್ನು ಸೇರುತ್ತದೆ. ಹೀಗೆ ಮೂರುಕಡೆ ನೀರಿನಿಂದಾವೃತವಾದ ಇದು ಒಂದು ಪರ್ಯಾಯ ದ್ವೀಪ, ನದಿಬಯಲು, ಬೆಟ್ಟಗುಡ್ಡಗಳಲ್ಲಿ ಬೆಳೆದುಬಂದಿರುವುದು ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ. ಇದೇ ರೀತಿ ಇನ್ನು ಅನೇಕ ಕೋಟೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ಕಾಲಾನುಕ್ರಮದಲ್ಲಿ ತನ್ನದೇ ಆದ ಶೈಲಿಯಲ್ಲಿ ವಿವಿಧ ಹಂತಗಳಲ್ಲಿ ಬೆಳೆದು ಬಂದಿರುವುದನ್ನು ಕಾಣಬಹುದು. ಮೊದಲನೆ ಹಂತದ ಕೋಟೆಗಳೆಂದರೆ ಸನ್ನತಿ, ಮಾನ್ಯಖೇಟ, ಐಹೊಳೆ, ಚಂದ್ರವಳ್ಳಿ, ಬ್ರಹ್ಮಗಿರಿ ಮುಂತಾದವು. ಎರಡನೇ ಹಂತದ ಕೋಟೆಗಳು

[illegible]

ಬಂಕಾಪುರ, ತಾಳಗುಂದ, ಸೊರಬ, ಅಣಜಿ, ಉಚ್ಚಂಗಿದುರ್ಗ, ಬಾದಾಮಿ, ತಲಕಾಡು, ಮಾನ್ಯಖೇಟ, ಕಲ್ಯಾಣ, ಬೀದರ್, ಕಲಬುರ್ಗಿ, ರಾಯಚೂರು, ದೇವದುರ್ಗ, ದ್ವಾರಸಮುದ್ರ, ಕೊಪ್ಪಳ, ಚಿತ್ರದುರ್ಗ, ಮೊಳಕಾಲ್ಮೂರು ಮುಂತಾದ ಕೋಟೆಗಳಿವೆ. ವಿಜಯನಗರ, ಚಿತ್ರದುರ್ಗ, ರಾಯಚೂರು, ಹಂಪಿ, ಶ್ರೀರಂಗಪಟ್ಟಣ, ಕೊಪ್ಪಳ, ಬಳ್ಳಾರಿ, ಮುದಗಲ್ಲು, ಮೈಸೂರು, ಬೆಂಗಳೂರು, ಗುಲ್ಬರ್ಗ ಮುಂತಾದ ಕೋಟೆಗಳು ಕೊನೆಯ ಹಂತದಲ್ಲಿ ನಿರ್ಮಾಣಗೊಂಡವು.[೩೬]

೩.೭ ಚಿತ್ರದುರ್ಗ ಜಿಲ್ಲೆಯ ಕೋಟೆಗಳು

ಜಿಲ್ಲೆಯಲ್ಲಿ ಕೋಟೆಗಳ ಪ್ರಾಚೀನತೆಯನ್ನು ಮೌರ್ಯರ ಕಾಲದಿಂದ ಗುರುತಿಸಬಹುದು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಇಸಿಲ ಎಂಬ ಹೆಸರಿನ ಊರಿದ್ದು, ಕೋಟೆ ಎಂಬ ಅರ್ಥ ಅದಕ್ಕಿರುವುದರಿಂದ ಕೋಟೆಯಿಂದ ಆವೃತವಾಗಿರುವ ಊರು ಆದಾಗಿರಬಹುದೆಂದು ಅಭಿಪ್ರಾಯಪಡಲಾಗಿದೆ.[೩೭] ಶಾತವಾಹನರ ಕಾಲದ ಮತ್ತೊಂದು ಮುಖ್ಯ ಪಟ್ಟಣವಾಗಿದ್ದ ಚಂದ್ರವಳ್ಳಿಯಲ್ಲಿ ಮನೆಯ ಗೋಡೆಗಳಿಗೆ ಬಳಸಿದ ಇಟ್ಟಿಗೆಗಳಲ್ಲದೆ, ದೊಡ್ಡ ಪ್ರಮಾಣದ ೧೬x೮x೩ ಸೆಂ.ಮಿ. ಇಟ್ಟಿಗೆಗಳು ದೊರೆತಿದ್ದು, ಅವು ಅಲ್ಲಿ ನಿರ್ಮಿತವಾಗಿದ್ದ ಕೋಟೆಗೆ ಸೇರಿದವಾಗಿದ್ದವೆಂದು ಊಹಿಸಲಾಗಿದೆ.[೩೮] ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯಲ್ಲಿ ಪೂರ್ಣಪ್ರಮಾಣದ ಕೋಟೆಗಳು ಇದ್ದವೆಂದು ಹೇಳಲಿಕ್ಕೆ ಸಾಧ್ಯವಿಲ್ಲವಾದರೂ ಅಲ್ಲಲ್ಲಿ ಕಂಡುಬರುವ ತುಂಡುಗೋಡೆಗಳು ಹಾಗೂ ಸ್ಥರಗಳ ಅವಶೇಷಗಳಿಂದ ಇಲ್ಲಿ ರಕ್ಷಣಾಗೋಡೆಗಳು ಇದ್ದವೆಂದು ಹೇಳಬಹುದು. ಹೀಗೆ ಚಿತ್ರದುರ್ಗ ಕೋಟೆಗಳ ಇತಿಹಾಸ ಮೌರ್ಯ ಹಾಗೂ ಶಾತವಾಹನರ ಕಾಲದಿಂದಲೇ ಪ್ರಾರಂಭವಾಯಿತೆನ್ನಬಹುದು. ತರುವಾಯ ಈ ಭಾಗಗಳಲ್ಲಿ ಅನೇಕ ಕೋಟೆಗಳು ನಿರ್ಮಾಣಗೊಂಡವು.

ಕ್ರಿ.ಶ.೧೦ನೇ ಶತಮಾನದ ಚಾಲುಕ್ಯ ಸಾಮಂತನಾಗಿದ್ದುಕೊಂಡು ಆಳ್ವಿಕೆ ಮಾಡುತ್ತಿದ್ದ ಕದಂಬ ವಂಶದ ಅಜವರ್ಮ ಮತ್ತು ಬೆಂಚರಸದೇವನು ಮೊಳಕಾಲ್ಮೂರು ಬಳಿ ನುಂಕೆಮಲೆಯಿಂದ ಆಳುತ್ತಿದ್ದ ವಿಷಯವನ್ನು ಶಾಸನಗಳು ಹೇಳುತ್ತವೆ.[೩೯] ಈ ಕಾಲದಲ್ಲಿ ಇವರು ಲುಂಕೆಯ ಹೆಸರಿನ ಕೋಟೆಯನ್ನು ನಿರ್ಮಿಸಿದರು. ಇದೇ ಕಾಲಾನಂತರ ಲುಂಕೆ ಕೋಟೆಯಾಯಿತು.[೪೦] ಚಿತ್ರದುರ್ಗದ ಭೈರಸಿದ್ಧೇಶ್ವರ ದೇವಾಲಯದ ಹಿಂಬದಿಯ ಕ್ರಿ.ಶ.೧೦೭೩ರ ಶಾಸನವೊಂದು, ಚಿತ್ರದುರ್ಗದಲ್ಲಿ ೧೧ನೆಯ ಶತಮಾನಕ್ಕಾಗಲೇ ಕೋಟೆಯಿದ್ದುದನ್ನು ತಿಳಿಸುತ್ತದೆ.[೪೧] ನಿಡುಗಲ್ಲು ಚೋಳರಲ್ಲಿ ಹೆಸರಾದ ಬೊಮ್ಮಭೂಪಾಲನು ತನ್ನ

ರಾಜ್ಯ ವಿಸ್ತರಣಾ ಕಾರ್ಯದಲ್ಲಿ ತೊಡಗಿದ್ದಾಗ ಶತ್ರುಗಳ ಉಪಟಳ ತಾಳಲಾರದೆ ತನ್ನ ದಂಡನಾಯಕ ಬೈಚಪ್ಪನನ್ನು ಕರೆದು ಶತ್ರುಗಳಿಗೆ ಅಭೇದ್ಯವಾದ ಕೋಟೆಯನ್ನು ನಿರ್ಮಿಸು ಎಂದು ಹೇಳುತ್ತಾನೆ. ಬೈಚಪ್ಪನನ್ನು ರಾಜಾಜ್ಞೆಯಂತೆ ರಾಜಧಾನಿ ನಿಡುಗಲ್ಲಿನಿಂದ ಉಪರಾಜಧಾನಿ ಹನೆಯದವರೆಗೂ (ಮೊಳಕಾಲ್ಮೂರು) ಕೋಟೆಗಳ ಸಾಲನ್ನು ನಿರ್ಮಿಸಿದನು. ಈ ಕೋಟೆಯು ಶಾತವಾಹನ ಶಕ ೧೨೦೦ ಬಹುಧಾನ್ಯ ಸಂವತ್ಸರದ ಶ್ರಾವಣ ಶುದ್ಧ ಮೂರರಲ್ಲಿ ಅಂದರೆ, ಕ್ರಿ.ಶ.೧೨೭೮ರಲ್ಲಿ ಪೂರ್ಣಗೊಂಡಿತು. ಈ ಕೋಟೆಯ ಸಾಲುಗಳು ಸಿಗ್‌ಫ್ರೀಡ್ ಕೋಟೆಯಂತೆ ಅಭೇದ್ಯವಾಗಿದ್ದವು ಎಂದು ಊಹಿಸಲಾಗಿದೆ.[೪೨] ಈ ಹನೆಯ ಕೋಟೆಯನ್ನು ಕ್ರಿ.ಶ.ಸು.೧೨೧೫ರಲ್ಲಿ ಹೊಯ್ಸಳ ದೊರೆ ೩ನೇ ಬಲ್ಲಾಳನು ಗೆದ್ದು ಅಲ್ಲಿ ವಿಜಯಗಿರಿ ಎಂಬ ಪಟ್ಟಣವನ್ನು ನಿರ್ಮಿಸಿ ಮೊದಲೇ ಇದ್ದ ಕೋಟೆಯನ್ನು ವಿಸ್ತರಿಸಿ ಬಲಪಡಿಸಿದನು.[೪೩] ಹೀಗೆ ಜಿಲ್ಲೆಯಲ್ಲಿ ಕದಂಬ, ಚಾಲುಕ್ಯ, ಹೊಯ್ಸಳರ ಕಾಲದಲ್ಲಿ ಕೋಟೆಗಳು ನಿರ್ಮಾಣವಾದ ಉಲ್ಲೇಖಗಳನ್ನು ಕಾಣಬಹುದು.

ಜಿಲ್ಲೆಯಲ್ಲಿ ಕೋಟೆಗಳು ವ್ಯಾಪಕವಾಗಿ ನಿರ್ಮಾಣಗೊಂಡಿದ್ದು ವಿಜಯನಗರ ಮತ್ತು ಪಾಳೆಯಗಾರರ ಕಾಲದಲ್ಲಿ ಎಂದು ಹೇಳಬಹುದು. ಏಕೆಂದರೆ ವಿಜಯನಗರದ ಅರಸರು ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಳ್ವಿಕೆ ನಡೆಸಿದರು. ಈ ಭಾಗವು ವಿಜಯನಗರ ಆಸೆ-ಆಕಾಂಕ್ಷೆ ಹಾಗೂ ಧ್ಯೇಯೋದ್ದೇಶಗಳನ್ನು ಪೂರೈಸುವ ಬಹುಮುಖ್ಯವಾದ ಘಟಕವಾಗಿತ್ತು. ಹಂಪಿ ಮತ್ತು ದಕ್ಷಿಣ ಕರ್ನಾಟಕದ ಮಧ್ಯೆ ಇರುವ ವಿಸ್ತಾರವಾದ ಭೂಪ್ರದೇಶವನ್ನು ಸಹಜವಾಗಿಯೇ ಅವರು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡರು. ಅಲ್ಲದೆ ಚಿತ್ರದುರ್ಗ ಪ್ರದೇಶವು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು, ಕೋಟೆ-ಕೊತ್ತಲಗಳನ್ನು ಕಟ್ಟಿಕೊಳ್ಳಲು ಉತ್ತಮ ಸಂಪನ್ಮೂಲಗಳು ದೊರಕುತ್ತಿದ್ದರಿಂದ ಸಹಜವಾಗಿಯೇ ವಿಜಯನಗರದ ಅರಸರು ಈ ಭಾಗದಲ್ಲಿ ಹೆಚ್ಚು ಹೆಚ್ಚು ಕೋಟೆಗಳನ್ನು ನಿರ್ಮಿಸಿದರು. ಇವುಗಳ ಮುಖಾಂತರ ದಕ್ಷಿಣದ ದಾಳಿಗಳನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡರು. ಈ ನಿಟ್ಟಿನಲ್ಲಿ ಹಿರಿಯೂರು ತಾಲೂಕಿನ ಸೂಗೂರು ಮತ್ತು ಖಂಡೇನಹಳ್ಳಿಗಳಿಗೆ ಅವರು ನಾಲ್ಕು ನಿಟ್ಟಿನ ಬುರುಜುಗಳನ್ನು ನಿರ್ಮಿಸಿ ಕೋಟೆಯನ್ನು ನಿರ್ಮಿಸಿದುದರ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ.[೪೪] ಈ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಸಾಮಾನ್ಯವಾಗಿ ಪ್ರತೀ ಗ್ರಾಮಗಳೂ ಗ್ರಾಮದ ಸುತ್ತ ರಕ್ಷಣಾಗೋಡೆಗಳನ್ನು ನಿರ್ಮಿಸಿಕೊಂಡಿರುವುದನ್ನು ಕಾಣಬಹುದು. ಇಂತಹ ಗ್ರಾಮಕೋಟೆಗಳ ಕಲ್ಪನೆ ಹೆಚ್ಚಾಗಿ ಬೆಳೆದದ್ದು ಇವರ ಅವಧಿಯಲ್ಲಿಯೇ ಎಂದು ಹೇಳಬಹುದು. ಅಲ್ಲದೆ ಈ ಹಿಂದೆ

[illegible]

[illegible]

ನಿರ್ಮಿತವಾಗಿದ್ದ ಜಿಲ್ಲೆಯ ಅನೇಕ ಕೋಟೆಗಳು ವಿಜಯನಗರ ಮತ್ತು ಅವರ ಸಾಮಂತರ ಅವಧಿಯಲ್ಲಿ ಮಾರ್ಪಾಟಾಗಿರುವುದನ್ನು ಗಮನಿಸಬಹುದು. ಚಿತ್ರದುರ್ಗ, ಮೊಳಕಾಲ್ಮೂರು, ಬ್ರಹ್ಮಗಿರಿ ಮುಂತಾದ ಕೋಟೆಗಳಲ್ಲಿರುವ ವಾಸ್ತುರಚನೆಯನ್ನು ಗಮನಿಸಿದರೆ ಈ ಅಂಶ ನಮಗೆ ತಿಳಿದುಬರುತ್ತದೆ. ಉದಾ. ಚಿತ್ರದುರ್ಗದ ಇಡೀ ಕೋಟೆಯಲ್ಲಿ ಅತ್ಯಂತ ಸುಂದರವಾಗಿ ರಚನೆಗೊಂಡಿರುವ ಕಾಮಗೇತಿ ಬಾಗಿಲು ವಿಜಯನಗರ ಸಾಮಂತರ ಕಾಲದಲ್ಲಿ ನಿರ್ಮಾಣವಾದುದು ಎಂದು ಹೇಳಲಾಗಿದೆ.[೪೫] ಹೀಗೆ ಅನೇಕ ಕಡೆ ವಿಜಯನಗರ ಮತ್ತು ಅವರ ಸಾಮಂತರ ಕಾಲದಲ್ಲಿ ರಚಿಸಲ್ಪಟ್ಟ ಕೋಟೆಗಳು ಜಿಲ್ಲೆಯಲ್ಲಿವೆ. ಅವುಗಳಲ್ಲಿ ಬಹುತೇಕ ಕೋಟೆಗಳು ಸಂಪೂರ್ಣವಾಗಿ ಶಿಥಿಲಗೊಂಡು ಗುರುತಿಸಲಿಕ್ಕೂ ಸಾಧ್ಯವಿಲ್ಲದಂತಾಗಿವೆ.

ವಿಜಯನಗರ ತರುವಾಯ ಈ ವಿಭಾಗದಲ್ಲಿ ತಲೆಯೆತ್ತಿದ ಪಾಳೆಯಗಾರರು ವಿಜಯನಗರ ಸಾಮಂತರಾಗಿ, ಅಮರನಾಯಕರಾಗಿ ಅವರ ಸಂಪ್ರದಾಯಗಳನ್ನು ಮುಂದುವರೆಸಿದರೆಂದು ಹೇಳಬಹುದು. ಅನೇಕ ಕೋಟೆಗಳು ಈ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡವು. ಇಡೀ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿಪಡೆದ ಚಿತ್ರದುರ್ಗದ ಏಳುಸುತ್ತಿನ ಕೋಟೆಯ ರಚನೆ ಪಾಳೆಗಾರರ ಕಾಲದಲ್ಲಿ ಹೊಸ ಮೆರುಗನ್ನು ಪಡೆಯಿತಲ್ಲದೆ ಕೌಟಿಲ್ಯನ ಅರ್ಥಶಾಸ್ತ್ರದನ್ವಯ ರಚನೆಗೊಂಡಿದೆ. ಇದೇ ರೀತಿ ಭರಮಣ್ಣನಾಯಕನದುರ್ಗ, ಜಾನಕಲ್ಲುದುರ್ಗ, ಹೊಸದುರ್ಗ, ಭರಮಗಿರಿ, ಕಣಕುಪ್ಪೆ(ದಾವಣಗೆರೆ ಜಿಲ್ಲೆ), ಮೊಳಕಾಲ್ಮೂರು, ಸಿದ್ಧಪ್ಪನದುರ್ಗ, ಸಿಂಗೇನಹಳ್ಳಿ, ಐಮಂಗಲ, ವೇಣುಕಲ್ಲುಗುಡ್ಡ ಮುಂತಾದ ಇನ್ನೂ ಕೋಟೆಗಳು ಇವರ ಕಾಲದಲ್ಲಿ ನಿರ್ಮಾಣಗೊಂಡಿವೆ. ಈಗಾಗಲೇ ನಿರ್ಮಾಣಗೊಂಡಿದ್ದ ಕೋಟೆಗಳು ಇವರ ಕಾಲದಲ್ಲಿ ಪುನರ್‌ನವೀಕರಣಗೊಂಡವೆಂದು ಹೇಳಬಹುದು. ಇದೇ ರೀತಿ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಹರತಿ ಪಾಳೆಯಗಾರರು ಹರಿತಿಕೋಟೆ, ಹಟ್ಟಿ ಪಾಳೆಯಗಾರರು ಹೊಸಗುಡ್ಡ, ಬೂದಿಹಾಳ ಪಾಳೆಯಗಾರರು ಶ್ರೀರಾಂಪುರ ಹಾಗೂ ಮತ್ತಿನಡು ಪಾಳೆಯಗಾರರು ಮತ್ತೋಡಿನಲ್ಲೂ ಕೋಟೆಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ಈ ಪಾಳೆಯಗಾರರು ತಮ್ಮ ಆಳ್ವಿಕೆಗೆ ಒಳಪಡುವ ಅನೇಕ ಸ್ಥಳಗಳಲ್ಲಿ ಕೋಟೆಗಳನ್ನು ಹಾಗೂ ಅಲ್ಲಲ್ಲಿ ಎತ್ತರವಾದ ಕಾವಲು ಗೋಪುರಗಳನ್ನು ನಿರ್ಮಿಸಿದ್ದಾರೆ. ಉದಾಹರಣೆ : ಕಣಜನಹಳ್ಳಿ, ಭರಮಗಿರಿ, ಕುಂಚಿಗನಹಾಳ್, ಲಕ್ಕವ್ವನಹಳ್ಳಿ, ಸಂತೆಗುಡ್ಡ, ಪರ್ತೇನಹಳ್ಳಿ, ಮೇಗಳ ಕಣಿವೆ, ಕೆಳಗಳ ಕಣಿವೆ, ರಾಮಸಾಗರ, ಹಿರೇಕಂದವಾಡಿ, ವೀರಮದಕೇರಿಪುರ-ಹೀಗೆ ಅನೇಕ ಕಡೆಗಳಲ್ಲಿ ಇಂತಹ ಕಾವಲು ಗೋಪುರಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಕೆಲವುಕಡೆ ಇಂತಹ ಕಾವಲು ಗೋಪುರಗಳಿಗೆ ಕೋಟೆ ಮತ್ತು ಕಂದಕಗಳನ್ನು ನಿರ್ಮಿಸಲಾಗಿದೆ. ಜಿಲ್ಲೆಯಲ್ಲಿ ಕಂಡುಬರುವ ಪ್ರಾಕೃತಿಕ ಬೆಟ್ಟಗುಡ್ಡಗಳನ್ನು

ಕಾವಲು ಗೋಪುರಗಳನ್ನಾಗಿ ಬಳಸಿಕೊಂಡಿದ್ದು, ಉದಾ: ನನ್ನಿವಾಳದ ಗುಡ್ಡ, ತಳಕಿನ ಗುಡ್ಡ, ಕಂದವಾಡಿ ಗುಡ್ಡ, ಸಾಸಲು ಗುಡ್ಡ, ಗಾದ್ರಿ ಗುಡ್ಡ ಮುಂತಾದವು.

ಜಿಲ್ಲೆಯಲ್ಲಿ ಹೈದರಾಲಿ ಮತ್ತು ಟಿಪ್ಪು ಅವಧಿಯಲ್ಲಿ ಹೊಸ ಕೋಟೆಗಳ ಉಲ್ಲೇಖ ಎಲ್ಲೂ ಕಂಡುಬರುವುದಿಲ್ಲ. ಆದರೆ ಈಗಾಗಲೇ ನಿರ್ಮಾಣಗೊಂಡಿದ್ದ ಕೋಟೆಗಳನ್ನು ಅವರ ಯುದ್ಧನೀತಿಗೆ ತಕ್ಕಂತೆ ಮಾರ್ಪಾಡು ಮಾಡಿದ್ದಾರೆ. ಹೆಚ್ಚಾಗಿ ಈ ಮಾರ್ಪಾಟನ್ನು ಚಿತ್ರದುರ್ಗ ಕೋಟೆಯಲ್ಲಿ ಕಾಣಬಹುದು. ಹೀಗೆ ಕೋಟೆಗಳ ಇತಿಹಾಸ ಮೌರ್ಯರ ಕಾಲದಿಂದ ಆರಂಭವಾಗಿ ವಿಕಸನ ಹೊಂದುತ್ತಾ ಪ್ರಾದೇಶಿಕ ಕೋಟೆಗಳ ನಿರ್ಮಾಣದವರೆಗೂ ಸಾಗಿಬಂದಿದೆ.

೩.೮ ಕೋಟೆಗಳ ಮಹತ್ವ

ಕರ್ನಾಟಕವನ್ನಾಳಿದ ಅರಸರು ಕೇವಲ ಯುದ್ಧಾಶ್ವ ಮತ್ತು ಕತ್ತಿ-ಗುರಾಣಿಗಳ ಒಡೆಯರಾಗದೇ ಬಲಿಷ್ಠವಾದ ಕೋಟೆಗಳನ್ನು ನಿರ್ಮಿಸಿದರು. ಆ ಮೂಲಕ ತಾವು ಸಾಮ್ರಾಜ್ಯಗಳ ಯೋಗ್ಯ ನಿರ್ಮಾಪಕ ರೆಂಬುದನ್ನು ಸಾಬೀತು ಪಡಿಸಿದ್ದಾರೆ. ಶಕ್ತಿಪೂಜಕರಾದ ಕನ್ನಡಿಗರು ವಾಸ್ತವದಲ್ಲಿ ದುರ್ಗಹೀನರಾಗದೆ, ದುರ್ಗಗಳನ್ನು ಕಟ್ಟಿ, ಆ ಕೋಟೆಗಳಿಗೆ ಶಕ್ತಿರೂಪಿಣಿ "ದುರ್ಗ" ಎಂದು ಕರೆದರು. ಇವರ ದುರ್ಗಶಿಲ್ಪ ಅಥವಾ ಕೋಟೆಯನ್ನು ಕಟ್ಟುವ ಕಲೆಯು ನಮ್ಮ ನಾಡಿನ ಸಾಂಸ್ಕೃತಿಕ ಹಿರಿಮೆಗಳಲ್ಲೊಂದು. ರಾಜಧಾನಿ ಸಾಂಸ್ಕೃತಿಕ ಪರಂಪರೆ ಮತ್ತು ಚಕ್ರಾಧಿಪತ್ಯವನ್ನು ರಕ್ಷಿಸುವಲ್ಲಿ ಕೋಟೆಗಳು ಮಹತ್ತರ ಪಾತ್ರವಹಿಸಿದವು. ಕೋಟೆಯ ಒಳಗೆ ಜೀವನಾವಶ್ಯಕವಾದ ವಸ್ತುಗಳನ್ನು ಸಂಗ್ರಹಿಸಲಾಗುತ್ತಿತ್ತು. ಇದರಿಂದ ಹಲವು ದಿನಗಳವರೆಗೆ ಆಕ್ರಮಣಕಾರರಿಂದ ಕೋಟೆಯ ಒಳಗಿನ ನಾಗರಿಕರಿಗೆ ರಕ್ಷಣೆ ದೊರೆಯುತ್ತಿತ್ತು. ಮುಖಾಮುಖಿ ಯುದ್ಧದಲ್ಲಿ ಹೋರಾಡಲು ಅಸಮರ್ಥರಾದ ಯೋಧರು, ನಾಗರೀಕರು ಸಹ ಕೋಟೆ ಯುದ್ಧದಲ್ಲಿ ಭಾಗವಹಿಸಬಹುದಾಗಿತ್ತು. ಹೀಗಾಗಿ ಕೋಟೆ ನಿರ್ಮಾಣಕ್ಕೆ ಪ್ರಾಚೀನ ಕಾಲದಿಂದಲೇ ಅತ್ಯಂತ ಪ್ರಾಮುಖ್ಯತೆಯನ್ನು ಅರಸರು ನೀಡಿದ್ದರು. ಶತ್ರುವಿನ ವಿರುದ್ಧ ಇದು ರಕ್ಷಣೆ ನೀಡುತ್ತಿದ್ದರಿಂದ ಪ್ರತಿಯೊಂದು ರಾಜ್ಯದ ರಾಜಧಾನಿಯೂ ಕೋಟೆಯಿಂದ ಸುತ್ತುವರೆಯಲ್ಪಟ್ಟಿತು. ಕಾಡುಮೃಗಗಳಿಂದ, ನೈಸರ್ಗಿಕ ವಿಕೋಪಗಳಿಂದ ರಕ್ಷಣೆ ಪಡೆಯುವಾಗ ಕೋಟೆಗಳು ತುಂಬಾ ಮಹತ್ತರ ಪಾತ್ರವನ್ನು ವಹಿಸುತ್ತಿದ್ದವು. ರಾತ್ರಿ ವೇಳೆಯಲ್ಲಿ ಆಕ್ರಮಣ ಮಾಡಬಹುದಾದ ಹುಲಿ, ಆನೆ, ಕರಡಿ, ಮುಂತಾದ ದುಷ್ಟಪ್ರಾಣಿಗಳಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ನಗರ ಹಾಗೂ ಗ್ರಾಮಗಳ ಸುತ್ತ ಎತ್ತರವಾದ

ಕಂದಕಸಹಿತ ಗೋಡೆಯನ್ನು ನಿರ್ಮಿಸುತ್ತಿದ್ದರು. ಹೀಗಾಗಿ ಸಾಮಾಜಿಕ ಬದುಕಿನಲ್ಲೂ ಸುರಕ್ಷತೆಯ ದೃಷ್ಟಿಯಿಂದ ಕೋಟೆಗಳು ಪ್ರಮುಖ ಸ್ಥಾನ ಪಡೆದಿವೆ.

ಗತಕಾಲದ ಭವ್ಯತೆ ಮತ್ತು ವೈಭವವನ್ನು ಸಾರುತ್ತಾ ನಿಂತಿರುವ ಕೋಟೆಗಳು ತಮ್ಮದೇ ಆದ ವೈಯಕ್ತಿಕ ಪ್ರಾಮುಖ್ಯತೆ ಮತ್ತು ಮಹತ್ವಗಳ ಬಗ್ಗೆ ಬರೆಯುವಂತೆ ವಿಫುಲವಾದ ಸ್ಪೂರ್ತಿಯನ್ನು ನೀಡಿವೆ. ಕೌಟಿಲ್ಯನ ಅರ್ಥಶಾಸ್ತ್ರ, ಕಾಮಾಂಧಕನ ನೀತಿಶಾಸ್ತ್ರ, ಕನಕದಾಸರ ಮೋಹನತರಂಗಿಣಿ, ಶುಕ್ರನೀತಿಸಾರ, ಲಿಂಗಣ್ಣ ಕವಿಯ ಕೆಳದಿನೃಪವಿಜಯ, ವಿರುಪಾಕ್ಷ ಪಂಡಿತನ ಚೆನ್ನಬಸವನ ಪುರಾಣ ಮುಂತಾದ ಸಾಹಿತ್ಯ ಕೃತಿಗಳು ಕೋಟೆಗಳ ನಿರ್ಮಾಣ ಮತ್ತು ಅವುಗಳ ಮಹತ್ವದ ಬಗ್ಗೆ ವಿವರ ನೀಡುತ್ತವೆ. ಹಾಗೆಯೇ ಅನೇಕ ಶಾಸನಗಳು ಕೂಡ ಕೋಟೆಯ ಮಹತ್ವವನ್ನು ವಿವರಿಸುತ್ತವೆ. ಶುಕ್ರನು ತನ್ನ ನೀತಿಸಾರದಲ್ಲಿ ದುರ್ಗವು ರಾಜ್ಯದ ಸಪ್ತಾಂಗಗಳಲ್ಲಿ ಅತಿ ಮುಖ್ಯವಾದುದೆಂದು ಹೇಳುತ್ತಾನೆ. ಅವನು ಮುಂದುವರೆದು ಕೋಟೆಯ ಮಹತ್ವದ ಬಗ್ಗೆ ಹೇಳುತ್ತಾ "ಪ್ರಜಾರಕ್ಷಣೆಗೆ ಏಳು ಅಂಗಗಳು, ಅವು ಪ್ರಜಾರಕ್ಷಣೆ ಎಂಬ ಶರೀರಕ್ಕೆ ರಾಜನು ತಲೆ, ಮಂತ್ರಿ ಕಣ್ಣು, ಕವಿಗಳು ಅವರ ಸ್ನೇಹಿತ, ಬೊಕ್ಕಸವು ಮುಖ, ಮನಸ್ಸು ಅವರ ಸೇನೆ, ದುರ್ಗವು ಅವರ ಕೈಗಳು, ರಾಷ್ಟ್ರವು ಸಮಯ, ಹೀಗೆ ಸಪ್ತಾಂಗಗಳಿಂದ ಪೂರ್ಣ ರಾಜ್ಯವು ಏಳಿಗೆ ಹೊಂದುವುದು" ಎಂದು ಹೇಳಲಾಗಿದೆ.[೮೬] ರಾಜನು ತನ್ನ ರಾಣಿ, ಜನ ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಲೇಬೇಕೆಂದು ರಾಜನೀತಿ ಪ್ರಕಾಶದಲ್ಲಿ ಬೃಹಸ್ಪತಿಯ ವಚನವು ಉಲ್ಲೇಖಿಸುತ್ತದೆ.[೮೭]

ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ರಾಜನು ತನ್ನ ರಾಜ್ಯದ ಎಲ್ಲೆಯ ನಾಲ್ಕು ದಿಕ್ಕುಗಳಲ್ಲಿ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ತಿಳಿಸಿದ್ದಾನೆ.[೮೮] ಅಲ್ಲದೆ ಕೋಟೆಯು ಕೋಶ ಮತ್ತು ಸೈನ್ಯಕ್ಕಿಂತಲೂ ಮೀಗಿಲಾದುದೆಂದು ಹೇಳುತ್ತಾನೆ. ಕೋಶ ಮತ್ತು ಸೈನ್ಯ ಕೋಟೆಯೊಳಗೆ ಇದ್ದರೆ ಮಾತ್ರ ಸುಕ್ಷಿತವಾಗಿರಬಲ್ಲವು. ಮನು ಕೋಟೆಯಲ್ಲಿರುವ ಒಬ್ಬ ಯೋಧನು, ಹೊರಗಿನ ನೂರು ಜನ ಯೋಧರೊಂದಿಗೆ, ನೂರು ಜನ ಯೋಧರು ಹತ್ತುಸಾವಿರ ಯೋಧರೊಂದಿಗೆ ಸರಿಸಮಾನರಾಗಿ ಕಾದಾಡಬಲ್ಲರೆಂದು ಹೇಳುತ್ತಾನೆ.[೮೯] ಯುದ್ಧದಲ್ಲಿ ಸಾವಿರಾರು ಆನೆಗಳು ಮತ್ತು ಲಕ್ಷಾಂತರ ಕುದುರೆಗಳಿಂದ ನಿರ್ವಹಿಸಲಾಗದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ಆಶ್ಚರ್ಯಕರವಾಗಿ ನಿರ್ವಹಿಸಬಲ್ಲನು ಎಂದು ಪಂಚತಂತ್ರದಲ್ಲಿ ಹೀಗೆ ವಿವರಿಸಲಾಗಿದೆ.[೯೦]

ಪಂಚತಂತ್ರ ನಗಬಾನಂ ಸಹಸ್ರೇಣ ನಚ ಲಕ್ಷ್ಮೀಣ ವಾಜಿನಾಮ್

ತತ್ಕರ್ಮ ಸಾಧ್ಯತೇ ರಾಜಾಂ ದುರ್ಗೈಣೈರೇನ್ ಯದ್ರಣೆ, ಇದೇ ರೀತಿ ಆಚಾರ್ಯ ಸೇಮದೇವ ವಿರಚಿತಂ ನೀತಿ ವಾಕ್ಯಾಮೃತಂದಲ್ಲಿ,

"ಅದುರ್ಗಸ್ಯ ರಾಜ್ಞಃ ಪಯೋಧಿಮಧ್ಯೇ ಪೋತಚ್ಯುತ ಪಕ್ಷಿಸಿದಾಪದಿ ನಾಸ್ತ್ಯಾಶ್ರಯಃ"

ಅಂದರೆ ದುರ್ಗವಿಲ್ಲದ ರಾಜನಿಗೆ ಕಡಲ ನಡುವೆ ಹಡಗಿನಿಂದ ಹೊರಗೆ ಬಿದ್ದ ಪಕ್ಷಿಯ ಹಾಗೆ ಆಪತ್ತಿನಲ್ಲಿ ಆಶ್ರಯವಿರುವುದಿಲ್ಲವೆಂದು ವರ್ಣಿಸಲಾಗಿದೆ.[೫೧]

ಕಾಮಾಂಧಕನು ತನ್ನ ನೀತಿಸಾರದಲ್ಲಿ "ಭದ್ರವಾದ ಕೋಟೆ ಇಲ್ಲದ ರಾಜರ ಬಿರುಗಾಳಿಗೆ ಸಿಕ್ಕಿದ ಮೋಡದ ತುಣುಕುಗಳಿಗೆ ಸಮಾನ" ಎಂದಿದ್ದಾನೆ.[೫೨]

ಶಿವತತ್ವ ರತ್ನಾಕರದಲ್ಲಿ ಕೋಟೆಯ ಪ್ರಾಮುಖ್ಯತೆ ಬಗ್ಗೆ ಈ ಕೆಳಕಂಡಂತೆ ಹೇಳಲಾಗಿದೆ:

ವಿಷ್ಣು ಹೀನೊ ಯಥನಾಗೋ ಮದಹೀನೋ ಯಥಾಗಜೇ |

ಸರ್ವೇಕ್ಷಾಂ ವಶ್ಯತಾಂ ಯಾತಿ ದುರ್ಗಹೀನ ಸ್ಥಥಾ ನೃಪಃ ||

ಅಂದರೆ ಕೋಟೆ ಇಲ್ಲದ ರಾಜನು ವಿಷರಹಿತವಾದ ಹಾವಿನಂತೆ ಅಥವಾ ಮಧರಹಿತವಾದ ಆನೆಯಂತೆ ಸುಲಭವಾಗಿ ವಶಪಡಿಸಿಕೊಂಡಂತೆ ಕೋಟೆಯನ್ನು ವಶಪಡಿಸಿಕೊಂಡಂತೆ ಕೋಟೆಯನ್ನು ವಶಪಡಿಸಿಕೊಳ್ಳಬಹುದು. ಎಂದು ಅರ್ಥೈಸಲಾಗಿದೆ.[೫೩]

ಒಟ್ಟಾರೆ ಕೋಟೆಗಳು ಅಂದಿನ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಅವಿಭಾಜ್ಯ ಅಂಗಗಳಾಗಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸಿರುವುದು ಕಂಡುಬರುತ್ತದೆ. ಗಡಿಭಾಗದ ಕೋಟೆಗಳು ರಕ್ಷಣಾ ಉದ್ದೇಶಕ್ಕಾಗಿ ತಲೆ ಎತ್ತಿದ್ದರೆ, ಮಧ್ಯನಾಡಿನಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ ಏರ್ಪಟ್ಟ ಕೋಟೆಗಳು ಇವೆ. ಕೋಟೆಯು ಕೇವಲ ಸೈನಿಕ ವ್ಯವಸ್ಥೆಗೆ ಮಾತ್ರ ನಿಯೋಜಿತಗೊಂಡಿರಲಿಲ್ಲ. ಕೌಟಿಲ್ಯನು ಕೂಡ ಈ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ಅಂತೆಯೇ ಆರ್.ಶೇಷಶಾಸ್ತ್ರಿ "ಕೋಟೆ ಎಂಬುದು ಅಂದಿನ ರಾಜಕೀಯ ವ್ಯವಸ್ಥೆಯ ಮತ್ತು ಜನತೆಯ ರಕ್ಷಣೆಯ ಭಾರವನ್ನು ಹೊತ್ತಿತ್ತು. ಕೋಟೆಯ ಬಲದ ಮೇಲೆ ಆಡಳಿತ ವ್ಯವಸ್ಥೆಯ ಅಳಿವು-ಉಳಿವು ಅವಲಂಬಿಸುತ್ತಿತ್ತು" ಎಂದು ಹೇಳುವ ಮೂಲಕ ಕೋಟೆಯ ಮಹತ್ವವನ್ನು ತಿಳಿಸಿದ್ದಾರೆ.[೫೪] ಯುದ್ಧ ಸಂದರ್ಭದಲ್ಲಿ ವಿಜಯ ಒದಗಿಸುವಂತೆ ಪ್ರಾರ್ಥಿಸಿ ಯುದ್ಧದ ಮೊದಲ ದಿನ ಕೋಟೆ, ಕೊತ್ತಲ, ಅಟ್ಟಳೆ, ಪತಾಕೆಗಳನ್ನು ಪೂಜಿಸುತ್ತಿದ್ದರು. "ಏಜಿಸಿದ ತಿಮಿರೊಳುಮಿಟ್ಟ ತಿಲಕದೊಳಂ ಕಟ್ಟಿದ ದಂಡೆಯೊಳಂ ಅರ್ಚಿಸಿದ ಕೊತ್ತಳದೊಳಂ ಅರ್ಚಿಸಿದಟ್ಟಳೆಯೊಳಂ

ಎತ್ತಿದ ಪತಾಕೆಯೊಳಂ ಸುತ್ತಿದ ಬೇವಿನದಂಡೆಯೊಳಂ ಸಜೆಗೆಯ್ದು ಸಜಿಯೊಳಂ" ಎಂಬ ಕೋಟೆಗೆ ಹೆಚ್ಚಿನ ಮಹತ್ವ ಕಲ್ಪಿಸಿ ಪೂಜೆಯನ್ನು ಸಲ್ಲಿಸಿದ ವಿವರಗಳಿವೆ. ಹೂವು, ಗಂಧ, ಕುಂಕುಮ ಸಹಿತ ಈ ಪೂಜೆ ನಡೆಯುತ್ತಿದ್ದಿರಬೇಕು. ಪೂಜೆಯ ಅನಂತರ ರಾಷ್ಟ್ರ, ಶೌರ್ಯ, ಸ್ವಾತಂತ್ರ್ಯ, ಆತ್ಮಾಭಿಮಾನದ ಪ್ರತೀಕವಾದ ಧ್ವಜವನ್ನು ಎತ್ತಿ ನಿಲ್ಲಿಸುತ್ತಿದ್ದರು. ಹೀಗೆ ಕೋಟೆಯಲ್ಲಿದ್ದ ಸಂಪ್ರದಾಯಗಳ ಮಹತ್ವವನ್ನು ಕಾವ್ಯಗಳು ವರ್ಣಿಸುತ್ತವೆ.[೫೫]

ಕೋಟೆಗಳು ಕೇವಲ ರಾಜಕೀಯ ಸೈನಿಕ ಕೇಂದ್ರಗಳಾಗಿರದೆ, ಸಾಂಸ್ಕೃತಿಕ ಕೇಂದ್ರಗಳಾಗಿದ್ದವೆಂದು ಹೇಳಬಹುದು. ಕೋಟೆಯೊಳಗೆ ಮನರಂಜನೆಗಾಗಿ ಹಬ್ಬ-ಹರಿದಿನಗಳು, ಉತ್ಸವಗಳು, ಕ್ರೀಡಾಕೂಟಗಳು ಆಗಾಗ್ಗೆ ನಡೆಯುತ್ತಿದ್ದವು. ಅಲ್ಲದೇ ಕೋಟೆಯೊಳಗೆ ಅನೇಕ ಬೀದಿಗಳು, ಬಜಾರುಗಳು, ಕೈಗಾರಿಕಾ ಕೇಂದ್ರಗಳು, ಗುಡಿಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ಹೀಗಾಗಿ ಕೋಟೆಯು ಆಧುನಿಕ ನಗರದ ಕಲ್ಪನೆಯನ್ನು ಹೊಂದಿದ್ದವು ಎಂದು ಹೇಳಬಹುದು. ಹೀಗೆ ಕೋಟೆಯು ರಕ್ಷಣೆಯ ಪ್ರತಿರೂಪವಾಗಿ ನಾಗರೀಕರ ಬದುಕಿನ ಜೀವನಾಡಿಯಾಗಿದ್ದಿತ್ತೆನ್ನಬಹುದು.

೩.೯ ಕೋಟೆಯ ಲಕ್ಷಣಗಳು

ಕೋಟೆ ಎಂದಾಕ್ಷಣ ನಮಗೆ ನೆನಪಾಗುವುದು ಕೇವಲ ಗೋಡೆಗಳು ಮಾತ್ರ. ಆದರೆ ಕೋಟೆಯ ಗೋಡೆಯು ಸೇರಿದಂತೆ ಇತರೆ ಅನೇಕ ಅಂಗಭಾಗಗಳನ್ನು ಒಳಗೊಂಡಿದೆ. ಇದೊಂದು ಸೈನಿಕರಿಂದ ಕೂಡಿದ ರಕ್ಷಿತವಾದ ದೊಡ್ಡಸ್ಥಳ ಎಂದು. ಈ ಗೋಡೆಗಳ ಜೊತೆಗೆ ಇನ್ನು ಹಲವಾರು ಅಂಗಾಂಗಗಳು ಇವೆ. ಇವುಗಳ ಬಗ್ಗೆ ಶಾಸನಾಧಾರಗಳು ವಿರಳವಾಗಿದ್ದರೂ ಸಾಹಿತ್ಯಿಕ ಗ್ರಂಥಗಳು ವಿಫುಲವಾದ ಮಾಹಿತಿಯನ್ನು ಒದಗಿಸಿವೆ. ಈ ಕೃತಿಗಳು ಕೋಟೆಗಳ ಬುನಾದಿ ಮತ್ತು ಅವುಗಳ ವಿವಿಧ ಅಗತ್ಯ ಅಂಶಗಳ ಹಾಗೂ ಯೋಜನೆ ಬಗ್ಗೆ ನಿಯಮಗಳನ್ನು ಸೂಚಿಸುತ್ತವೆ. ಅಂಗಭಾಗಗಳ ಬಗ್ಗೆ ವಿವರಿಸುವಾಗ ಅವು ಕೋಟೆ ಹಾಗೂ ರಕ್ಷಣೋಪಾಯಗಳ ವಾಸ್ತುಲಕ್ಷಣಗಳನ್ನು ವಿವರಿಸುತ್ತವೆ. ಇಂತಹ ಕೋಟೆಗಳನ್ನು ಇತರೆ ಕೋಟೆಗಳೊಂದಿಗೆ ತುಲನಾತ್ಮಕ ಅವಲೋಕನ ಮಾಡಿ, ಅಲ್ಲಿರುವ ಅಂಗಭಾಗಗಳ ವಿವಿಧ ತಂತ್ರಗಳನ್ನು ಅರಿಯಬೇಕಾದರೆ ಇಲ್ಲಿ ಪ್ರಯತ್ನಿಸಲಾಗಿದೆ.

ಶಿಲ್ಪಶಾಸ್ತ್ರಗಳಲ್ಲಿ ಪ್ರತಿಪಾದಿಸಿರುವಂತೆ ರಕ್ಷಣಾ ವಾಸ್ತುಶಿಲ್ಪವು ವಪ್ರ(ಮಣ್ಣಿನ ಇಳಿವೋರೆ), ಪರಿಕೆ (ಕಂದಕ ಅಥವಾ ಅಗಳು), ಕೋಟೆತೆನೆ, ಪ್ರಕಾರ(ಆಳ್ವೇರಿ), ಮುಗಿಲಟ್ಟಣೆ, ಕೊತ್ತಲ(ಬುರುಜು),

ಕೋಟೆಯ ಬಾಗಿಲು, ಕೋಟೆಯ ಕದ, ದಿಡ್ಡಿ, ಕೋಟೆಯ ಮೇಲಿನ ಉಪಕರಣಗಳು ಮುಂತಾದ ಅಂಗ ಭಾಗಗಳನ್ನು ಒಳಗೊಂಡಿರುವ ಸ್ಥಳವೇ ಕೋಟೆ.

೩.೯.೧ ವಪ್ರ

ಕೋಟೆಯಿಂದ ಇಳಿಜಾರಾಗಿರುವ ಇಳಕಲ್ಲು ಮತ್ತು ಮಣ್ಣಿನ ಇಳಿವೋರೆಗೆ ವಪ್ರ ಎಂದು ಕರೆಯಲಾಗಿದೆ. ಇಲ್ಲಿ ಕೋಟೆಯ ಗೋಡೆಗೆ ಇಳಿಜಾರಾಗಿ ಗೋಡೆಯ ಎತ್ತರಕ್ಕೆ ಮಣ್ಣಿನದಿಬ್ಬವನ್ನು ಸೃಷ್ಟಿಸಲಾಗುತ್ತದೆ. ಇಂತಹ ವ್ಯವಸ್ಥೆಯನ್ನು ಕೆಲವೊಮ್ಮೆ ಗೋಡೆಯ ಹೊರಗೂ, ಒಳಗೂ ಮಾಡಲಾಗುತ್ತದೆ. ಹೊರಭಾಗದಲ್ಲಿ ಸ್ವಲ್ಪ ಎತ್ತರದಲ್ಲಿ ಮಾತ್ರ ವಪ್ರವನ್ನು ರಚಿಸಲಾಗುತ್ತದೆ. ಈ ಇಳಿವೋರೆ ವ್ಯವಸ್ಥೆಯ ವಿಧಾನವು ಹೆಚ್ಚಾಗಿ ಸ್ಥಳ ದುರ್ಗಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಐಮಂಗಲ ಕೋಟೆಯನ್ನು ಉದಾಹರಿಸಬಹುದು. ಕೋಟೆಯ ನೆಲವು ಘಂಟಾಮಾರ್ಗಕ್ಕೆ ಸಮಾನಾಂತರವಾಗಿರಬೇಕು. ಇದು ನಗರವನ್ನು ಸುತ್ತುವರೆದಿದ್ದು ನಗರ ಅಥವಾ ಪಟ್ಟಣವನ್ನು ರಕ್ಷಿಸಲು ಸಹಾಯಕವಾಗುತ್ತದೆ. ವಪ್ರವನ್ನು ನಿರ್ಮಿಸಲು ಆಯ್ಕೆ ಮಾಡಿದ ನಿವೇಶನದ ಸುತ್ತಲೂ ಕಂದಕವನ್ನು ತೋಡಬೇಕು, ಅಗೆಯಲ್ಪಟ್ಟ ನೆಲದ ಮಣ್ಣನ್ನು ಅನಾವಶ್ಯಕವಾಗಿ ವ್ಯರ್ಥ ಮಾಡದೆ ಎರಡು ರೀತಿಯಾಗಿ ಉಪಯೋಗಿಸಿಕೊಳ್ಳಬಹುದು. ಮೊದಲನೆಯದಾಗಿ ಕಂದಕದ ಒಳಗೋಡೆಗೆ ಇಳಿಜಾರಾಗಿ ಎತ್ತರವಾದ ದಿಬ್ಬವನ್ನು ನಿರ್ಮಿಸಲು ಅಗೆಯಲ್ಪಟ್ಟ ನಾಲ್ಕನೇ ಮೂರರಷ್ಟು ಮಣ್ಣನ್ನು ಮೇಲಿನ ಉದ್ದೇಶಕ್ಕೆ ಬಳಸಬೇಕು. ಉಳಿದ ಮಣ್ಣನ್ನು ಕಂದಕಗಳ ಹೊರಭಾಗದಲ್ಲಿ ಇಳಿಜಾರಾದ ಇಳುವೋರೆಗಳನ್ನು ನಿರ್ಮಿಸಲು ಬಳಸಬೇಕು. ಉಳಿದ ಮಣ್ಣನ್ನು ಪಟ್ಟಣದೊಳಗೆ ಇರುವ ಕುಳಿಗಳನ್ನು ಮುಚ್ಚಲು ನಡೆದಾಡುವ ನೆಲಕ್ಕೆ ಉಪಯೋಗಿಸಿಕೊಳ್ಳಬೇಕು. ಹೀಗೆ ತುಂಬಿದ ಮಣ್ಣನ್ನು ಜನರಿಂದ ಹಾಗೂ ಎತ್ತುಗಳ ಸಹಾಯದಿಂದ ಚೆನ್ನಾಗಿ ಗಟ್ಟಿಸಬೇಕಾಗುತ್ತಿತ್ತು.[೫೪] ಈ ವಪ್ರಗಳನ್ನು ನಿರ್ಮಿಸುವುದರ ಹಿಂದೆ ಅನೇಕ ಉದ್ದೇಶಗಳಿವೆ. ಶತ್ರುಗಳು ಬಳಸಲ್ಪಟ್ಟ ಆಯುಧಗಳನ್ನು ತಡೆಯುವುದು ಮತ್ತು ಅವುಗಳನ್ನು ಹಿಂದಕ್ಕೆ ಚಿಮ್ಮುವಂತೆ ಮಾಡುವುದಾಗಿತ್ತು. ಅಲ್ಲದೆ, ವೈರಿಯು ಸುಲಭವಾಗಿ ಕೋಟೆಯನ್ನು ಸಮೀಪಿಸಲು ಸಾಧ್ಯವಾಗದಂತೆ ತಡೆಯುವುದು ಇದರ ಉದ್ದೇಶವಾಗಿತ್ತು. ಅತಿ ಮುಖ್ಯವಾಗಿ ಶತ್ರುಗಳು ಗುಂಡುಗಳನ್ನು ಹಾರಿಸಿದಾಗ ಗುಂಡುಗಳು ನೇರವಾಗಿ ಕೋಟೆಯ ಗೋಡೆಗಳಿಗೆ ತಾಕದಂತೆ ಈ ಮಣ್ಣಿನಲ್ಲಿ ಸಿಕ್ಕಿಕೊಳ್ಳುವುದರ ಮೂಲಕ ಶತ್ರುಗಳ ಉದ್ದೇಶವನ್ನು ವಿಫಲಗೊಳಿಸುವುದಾಗಿತ್ತು.

ಅಲ್ಲದೆ, ಗೋಡೆಗಳಿಗೆ ಈ ಗುಂಡುಗಳಿಂದ ಆಗುವ ಯಾವುದೇ ಅಪಾಯವನ್ನು ತಡೆಯುವುದಾಗಿತ್ತು. ಕೆಲವು ಕಡೆ ಈ ಇಳಕಲ್ಲು ಪ್ರದೇಶದಲ್ಲಿ ಮುಳ್ಳಿನ ಪೊದೆಗಳನ್ನು ವಿಫುಲವಾಗಿ ಬೆಳಸಿ ಅಧಿಕ ರಕ್ಷಣಾವ್ಯವಸ್ಥೆಯನ್ನು ಮಾಡಿ ಕೋಟೆಯ ಗೋಡೆ ಹಾಗೂ ಕೋಟೆಯ ಒಳಗಿನ ಪ್ರದೇಶವನ್ನು ಕಾಣದಂತೆ ಮಾಡಿರುವುದೂ ಕಂಡುಬರುತ್ತದೆ. ಈ ಎಲ್ಲ ಕಾರಣಗಳಿಂದ ವಪ್ರವು ಕೋಟೆಯ ಪ್ರಮುಖ ಅಂಗಭಾಗಗಳಲ್ಲೊಂದಾಗಿದೆ.

೩.೯.೨ ಕಂದಕ(ಅಗಳು)

ಕೋಟೆಯ ಮತ್ತೊಂದು ಪ್ರಮುಖವಾದ ಭಾಗವೆಂದರೆ ಕಂದಕ. ಕಂದಕಕ್ಕೆ ಅಗಳು, ಪರಿಖೆ ಮುಂತಾದ ಹೆಸರುಗಳಿವೆ. ಸ್ಥಳದುರ್ಗದ ಸುತ್ತ ಕಂದಕವಿರುವ ವಿಷಯ ಸಾಮಾನ್ಯವಾಗಿ ಎಲ್ಲ ಕವಿಗಳ ವರ್ಣನೆಯಲ್ಲಿ ಕಂಡುಬಂದಿದೆ. ಈ ಮೇಲೆ ಚರ್ಚಿಸಿರುವಂತೆ ವಪ್ರವನ್ನು ನಿರ್ಮಿಸುವಾಗ ಆಳವಾದ ತಗ್ಗುಪ್ರದೇಶ ಉಂಟಾಗುವುದು. ಇಂತಹ ತಗ್ಗು ಪ್ರದೇಶವನ್ನು ರಕ್ಷಣೋಪಾಯದ ತಂತ್ರಗಳಿಗೆ ಉಪಯೋಗಿಸಿರುವುದು ಕಂಡುಬರುತ್ತದೆ. ತಗ್ಗಾದ ಎರಡು ಬದಿಗಳಲ್ಲಿ ಸಡಿಲವಾದ ಮಣ್ಣನ್ನು ತೆಗೆದುಹಾಕಿ, ಆ ಗೋಡೆಗಳಿಗೆ ಸ್ಥಳೀಯವಾಗಿ ಲಭ್ಯವಿರುವ ಇಟ್ಟಿಗೆ ಅಥವಾ ಕಲ್ಲುಗಳ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಕಂದಕಗಳಿಗೆ ಕೆಲ ಸಂದರ್ಭಗಳಲ್ಲಿ ನದಿ, ಅಣೆಕಟ್ಟು, ಕೆರೆ ಮತ್ತು ಆಳವಾದ ಬಾವಿಗಳಿಂದ ನೀರಿನ ಸಂಪರ್ಕ ಕಲ್ಪಿಸಲಾಗುತ್ತಿತ್ತು. ಕೆಲವೆಡೆ ನಗರದ ಚರಂಡಿ ವ್ಯವಸ್ಥೆಗಳನ್ನು ಈ ಕಂದಕಗಳೊಂದಿಗೆ ಸಂಪರ್ಕಿಸಲಾಗಿದೆ. ಸಾಮಾನ್ಯವಾಗಿ ಕಂದಕ ಮತ್ತು ಗೋಡೆಯ ನಡುವೆ ಅನಗತ್ಯ ಸ್ಥಳವಿರುವುದಿಲ್ಲ. ಕಂದಕದ ಬುಡದ ಅಗಲಕ್ಕಿಂತ ಮೇಲ್ಭಾಗದ ಅಗಲ ಯಾವಾಗಲೂ ಹೆಚ್ಚಾಗಿರುತ್ತದೆ. ಕೆಲವು ಕೋಟೆಕಂದಕಗಳು ಕಂದಕದ ಬುಡಭಾಗ ೧೫ ಮೀಟರ್ ಇದ್ದು, ಮೇಲ್ಭಾಗ ೪೦ ಮೀಟರ್‌ವರೆಗೂ ವಿಸ್ತಾರವಾಗಿರುವುದನ್ನು ಕಾಣಬಹುದು. ಇಂತಹ ಕಂದಕಗಳನ್ನು ನಿರ್ಮಿಸುವಾಗ ಸ್ಥಳದ ಆಯ್ಕೆ ಬಹುಮುಖ್ಯವಾದ ವಿಷಯವಾಗಿರುತ್ತದೆ. ನೈಸರ್ಗಿಕ ರಕ್ಷಣೆಯ ದೃಷ್ಟಿಯಿಂದ ನದಿಯ ದಡಗಳು ಹೆಚ್ಚು ಉಪಯುಕ್ತವಾಗಿವೆ. ಏಕೆಂದರೆ ಇಷ್ಟು ದೊಡ್ಡ ಕಂದಕದ ತುಂಬ ನೀರನ್ನು ತುಂಬಿಸಲು ಇಂತಹ ನದಿಗಳು ಸಹಾಯಕವಾಗುತ್ತವೆ. ಅಲ್ಲದೆ, ಸದಾ ತುಂಬಿ ಹರಿಯುವ ನದಿಗಳು ಕೋಟೆಗೆ ನಿಸರ್ಗದತ್ತ ಕಂದಕವಾಗಿ ಒಂದು ಪಾರ್ಶ್ವಕ್ಕೆ ರಕ್ಷಣೆಯನ್ನೊದಗಿಸುವುದು. ಉಳಿದ ಕಡೆ ಕೋಟೆಯ ಸುತ್ತ ಕಂದಕವನ್ನು ತೋಡಿ ಅದಕ್ಕೆ ಕಾಲುವೆ ಮೂಲಕ ನೀರನ್ನು ಹರಿಸಲಾಗುತ್ತಿತ್ತು.

ಇಂತಹ ವಿಸ್ತಾರವಾದ ಕಂದಕಗಳು, ಶತ್ರುಗಳು ಕೈಗೊಳ್ಳುವ ಎಲ್ಲ ಗುರಿಗಳನ್ನು ಸಾಮಾನ್ಯವಾಗಿ ವಿಫಲಗೊಳಿಸುತ್ತವೆ. ಶತ್ರುಗಳು ಬಿಡುವ ಬಾಣದ ಗುರಿಯು ಸಮೀಪ ಬಂದಂತೆ ವೇಗವನ್ನು ಕಳೆದುಕೊಂಡು ಪರಿಣಾಮ ತೀವ್ರವಾಗಿರುವುದಿಲ್ಲ. ಆದ್ದರಿಂದ ಶತ್ರು, ಹೊರಗಿನ ಕಂದಕದ ಅಂಚಿನಲ್ಲಿ ನಿಂತು ಪ್ರಯೋಗಿಸುವ ಬಾಣಗಳು ಅಗಲವಾದ ಕಂದಕದಲ್ಲಿ ಬೀಳುತ್ತಿದ್ದವು. ಹತ್ತಿರ ಬಂದು ಬಾಣಗಳನ್ನು ಬಿಡಲು ಹೋದರೆ, ಕೋಟೆಯ ಮೇಲ್ಭಾಗದಿಂದ ಬಿಟ್ಟ ಬಾಣಗಳು ಶತ್ರುಗಳಿಗೆ ಬೇಗ ತಾಕುತ್ತವೆ. ಅಲ್ಲದೆ ಮೇಲ್ಭಾಗದಲ್ಲಿರುವ ಸೈನಿಕರಿಗೆ ಹೆಚ್ಚು ರಕ್ಷಣೆ ಇರುತ್ತದೆ. ಈ ದೃಷ್ಟಿಯಿಂದ ಕೋಟೆಗಳಲ್ಲಿ ಕಂದಕದ ಪಾತ್ರ ತುಂಬ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಕೋಟೆ ಸುತ್ತಲಿನ ಪ್ರದೇಶವನ್ನು ಸುಂದರಗೊಳಿಸಲು ಕಂದಕಗಳಲ್ಲಿ ಕಮಲ, ಹೂಗಿಡಗಳು ಮತ್ತು ಹಸಿರು ಬಳ್ಳಿಗಳನ್ನು ಬೆಳೆಸಲಾಗುತ್ತದೆ. ಇದರ ಮತ್ತೊಂದು ಉದ್ದೇಶ ಶತ್ರುಗಳನ್ನು ಮೋಸಗೊಳಿಸುವುದೂ ಆಗಿದೆ. ಇಂತಹ ಕಂದಕಗಳಿಂದ ಶತ್ರುಗಳು ಈಜಿ ಬರದಂತೆ, ಅಪಾಯಕಾರಿ ಹಾವು, ಮೊಸಳೆ ಮುಂತಾದ ಜಲಚರಗಳನ್ನು ನೆಲೆಗೊಳಿಸುವುದರ ಮೂಲಕ ಶತ್ರುಗಳಿಗೆ ತಡೆಯೊಡ್ಡುತ್ತಿದ್ದರು. ಕೋಟೆಗೆ ಹೋಗಲು ಕಂದಕವನ್ನು ದಾಟುವ ರಸ್ತೆ ಕಿರಿದಾಗಿದ್ದು, ಅದಕ್ಕೆ ಬಲವಾದ ಕಾವಲು ಇರುತ್ತಿತ್ತು. ಶತ್ರುಗಳು ಕೋಟೆಕಾಳಗದ ಸಂದರ್ಭದಲ್ಲಿ ಇಂತಹ ಕಂದಕಗಳನ್ನು ದಾಟಲು ಹುಲ್ಲುಹೊರೆ, ಕೊರಡು, ಕಲ್ಲು ಗುಂಡುಗಳನ್ನು ಹಾಕಿ ಕಂದಕವನ್ನು ಮುಚ್ಚುತ್ತಿದ್ದರೆಂದು ಹೇಳಲಾಗಿದೆ. ಇದೇ ಸಂದರ್ಭದಲ್ಲಿ ಮೇಲಿನವರು ಪ್ರತಿ ಆಕ್ರಮಣಮಾಡುತ್ತಿದ್ದರು.[೫೬] ಕೆಲವು ಕೋಟೆಗಳಲ್ಲಿ ಕೋಟೆಗೆ ಸಂಬಂಧಪಟ್ಟವರು ಕಂದಕವನ್ನು ದಾಟಲು ತೂಗುಸೇತುವೆ ಬಳಸಿರುವುದನ್ನು ಕಾಣಬಹುದಾಗಿದೆ. ತುಂಬ ವ್ಯವಸ್ಥಿತವಾಗಿ ತೂಗುಸೇತುವೆಯನ್ನು ನಿರ್ಮಾಣಮಾಡಿರುವುದನ್ನು ಚಿತ್ರದುರ್ಗದ ಹೊರಕೋಟೆಯ ಕಂದಕದಲ್ಲಿ ಕಾಣಬಹುದು. ಕೋಟೆಯ ಪೂರ್ವಭಾಗದಲ್ಲಿ ಜೋಡುಬತೇರಿಗಳ ಪಕ್ಕದಲ್ಲಿ ಇಂತಹ ಒಂದು ವ್ಯವಸ್ಥೆ ಮಾಡಿಕೊಂಡಿರುವ ಅವಶೇಷಗಳನ್ನು ಈಗಲೂ ನೋಡಬಹುದು. ಒಟ್ಟಾರೆ ಕಂದಕವು ಶತ್ರುಗಳು ಮಾಡಬಹುದಾದ ದಾಳಿಯನ್ನು ವಿಳಂಬಗೊಳಿಸುವುದಕ್ಕಾಗಿ ಮಾಡಿದ ತಂತ್ರೋಪಾಯವೆಂದು ಹೇಳಬಹುದು.[೫೭]

ಇಂತಹ ಕಂದಕಗಳು ಚಿತ್ರದುರ್ಗ ಜಿಲ್ಲೆಯ ಬಹುತೇಕ ಎಲ್ಲಾ ಸ್ಥಳದುರ್ಗಗಳಲ್ಲಿ ಕಾಣಬಹುದು. ಅತ್ಯಂತ ದೊಡ್ಡ ಕಂದಕಗಳನ್ನು ಬೂದಿಹಾಳ್, ಐಮಂಗಲ, ಚಿತ್ರದುರ್ಗ ಮುಂತಾದ ಕೋಟೆಗಳಲ್ಲಿ ನೋಡಬಹುದು. ಆದರೆ ಗಿರಿದುರ್ಗಗಳಲ್ಲಿ ಇದೇ ತೆರನಾದ ಕಂದಕವನ್ನು ಮಾಡಲಾಗಿದ್ದರೂ, ಇಂತಹ ಕಂದಕಗಳ ಎರಡೂ ಬದಿಯಲ್ಲಿ ವ್ಯವಸ್ಥಿತವಾದ ಗೋಡೆಗಳನ್ನು ನೇರವಾಗಿ ನಿರ್ಮಿಸಲಾಗಿದೆ. ಏಕೆಂದರೆ

ಗಿರಿದುರ್ಗಗಳಲ್ಲಿ ಕೆಲವು ಕಡೆ ನೀರನ್ನು ನಿಲ್ಲಿಸಲು ಸಾಧ್ಯವಾಗದೇ ಇರುವ ಕಡೆ ಎತ್ತರವಾದ ಕಲ್ಲಿನ ಕಟ್ಟಡದ ರಚನೆ ಮಾಡಿ ಶತ್ರುಗಳನ್ನು ಕಂದಕದಲ್ಲಿ ಬೀಳಿಸುವ ತಂತ್ರಗಳನ್ನು ಅಳವಡಿಸಲಾಗಿದೆ. ಒಂದುವೇಳೆ ಈ ಕಂದಕದಲ್ಲಿ ಬೇರೆ ಕಡೆಯಿಂದ ಇಳಿದುಬಂದರೂ ಹತ್ತಲಿಕ್ಕೆ ಸಾಧ್ಯವಾಗದ ತಂತ್ರವನ್ನು ನಿರ್ಮಾಣ ಮಾಡಲಾಗಿದೆ. ಈ ರೀತಿ ನಿರ್ಮಿಸಿದ ಕಂದಕದ ಪಕ್ಕದ ಕೋಟೆಯ ಗೋಡೆಗಳಲ್ಲಿ ವ್ಯವಸ್ಥಿತವಾದ ಕಾವಲಿನ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಎಲ್ಲ ವ್ಯವಸ್ಥೆಯನ್ನು ಚಿತ್ರದುರ್ಗದ ಕೋಟೆಯಲ್ಲಿ ಕಾಣಬಹುದು.

೩.೯.೩ ಕೋಟೆಗೋಡೆ(ಪ್ರಾಕಾರ)

ಕೋಟೆಗೋಡೆಗೆ ಸಾಮಾನ್ಯವಾಗಿ 'ಶಾಲ', 'ಆಳ್ವೇರಿ' ಎಂಬ ಹೆಸರುಗಳಿವೆ. ಆಳ್ವೇರಿ ಪದವು ಕೋಟೆಯ ಗೋಡೆಯನ್ನೇ ಸೂಚಿಸುತ್ತದೆ. ಪರಿಷತ್ತಿನ ನಿಘಂಟಿನಲ್ಲಿ ಇದಕ್ಕೆ ಕೋಟೆಯಸುತ್ತಣ ಗೋಡೆ, ಕೋಟೆಯ ಎತ್ತರವಾದ ಗೋಡೆ ಎಂಬ ಅರ್ಥವನ್ನು ಹೇಳಿದೆ. ಕೋಟೆಯ ಪ್ರಾಕಾರವನ್ನು ರಚಿಸುವ ಕೌಶಲ್ಯಕ್ಕೆ 'ಸಾಲವಿದ್ಯೆ' ಎಂದು ಕರೆಯಲಾಗಿದೆ.[೫೯]

ಇಂತಹ ಕೋಟೆಗೋಡೆಯಲ್ಲಿ ಗಾತ್ರಕ್ಕೆ ತಕ್ಕಂತಹ ದ್ವಾರಬಾಗಿಲಿರುತ್ತದೆ. ಇತರ ರಕ್ಷಣಾತ್ಮಕ ವ್ಯವಸ್ಥೆಗಳಾದ ಕಿಟಕಿ, ಕಾವಲುಗೋಪುರ, ಗೋಡೆರಂಧ್ರ, ಕೋಟೆಯ ಕೈಪಿಡಿ, ಫಿರಂಗಿಗಂಡಿ, ಕವಾಯಿತು ಗೋಡೆ, ಕಂದಕದ ಉದ್ದಕ್ಕೂ ಇರುವ ಗೋಡೆ, ಸುರಂಗ ಮುಂತಾದವುಗಳನ್ನು ರಕ್ಷಣಾ ವಾಸ್ತುಶಿಲ್ಪವು ಹೊಂದಿರುತ್ತದೆ. ಆದರೆ ಕೊತ್ತಲ ಅಥವಾ ಬುರುಜು ಎಂಬ ಮತ್ತೊಂದು ಪದವು ಸಹ ಇದೇ ಅರ್ಥವನ್ನು ಸೂಚಿಸುತ್ತದೆ. ಈ ರಕ್ಷಣಾ ದಿಬ್ಬದ ಗೋಡೆಗಳನ್ನು ಮಹಾಶಾಲ, ಪ್ರತಿಶಾಲ ಮತ್ತು ರಕ್ಷಣಾಶಾಲಗಳೆಂದು ಕರೆಯಲಾಗಿದೆ.[೬೦]

ಸಾಮಾನ್ಯವಾಗಿ ರಕ್ಷಣಾ ದಿಬ್ಬವನ್ನು ಮಣ್ಣು, ಇಟ್ಟಿಗೆಗಳ ಮಿಶ್ರಣ ಹಾಗೂ ಕಲ್ಲು ಮತ್ತು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ವಿವಿಧ ಕೃತಿಗಳಲ್ಲಿ ಉಲ್ಲೇಖವಾಗಿರುವಂತೆ ಪ್ರಾಕಾರ ಗೋಡೆಗಳ ಉದ್ದಗಲವನ್ನು ಅಳವಡಿಸಲಾಗಿದೆ. ಈ ಗೋಡೆಗಳು ಕೆಳಭಾಗದಲ್ಲಿ ದಪ್ಪವಾಗಿದ್ದು ಮೇಲ್ಭಾಗದಲ್ಲಿ ಇಳಿಜಾರಾಗಿ ಹೋಗಿ ಅತ್ಯಂತ ಮೇಲ್ಭಾಗದಲ್ಲಿ ತೆಳುವಾಗಿರುವುದು. ಇಂತಹ ವಿಧಾನವು ವಾಸ್ತುಶಿಲ್ಪ ಮಾದರಿಯ ಗೋಡೆಗಳಿಗೆ ಬಲ ಹಾಗೂ ಸುಭದ್ರತೆಯನ್ನು ನೀಡುತ್ತದೆ. ವಿಶ್ವಕರ್ಮನ ಪ್ರಕಾರ ರಾಜಚಿನ್ಹೆಗಳಾದ ಧ್ವಜ, ಸೈನಿಕ, ಸಿಂಹ, ಆನೆ, ಕುದುರೆ, ಹಾವು, ಮೀನು ಮುಂತಾದ ಚಿತ್ರಗಳನ್ನು

ಈ ಗೋಡೆಗಳ ಮೇಲೆ ಚಿತ್ರಿಸಿಲಾಗಿದೆ. ವ್ಯೂಹಾತ್ಮಕ ಮತ್ತು ತಾಂತ್ರಿಕ ದೃಷ್ಟಿಯಿಂದ ಒಂದಕ್ಕಿಂತ ಹೆಚ್ಚು ರಕ್ಷಣಾಗೋಡೆಗಳನ್ನು ನಿರ್ಮಿಸುವ ಅಗತ್ಯವಿದ್ದಲ್ಲಿ, ವಿಶ್ವಕರ್ಮನು ಪ್ರತಿಪಾದಿಸಿರುವಂತೆ ಒಳಗಿನ ಗೋಡೆಯ ಎತ್ತರಕ್ಕಿಂತ ನಾಲ್ಕನೆಯ ಒಂದು ಭಾಗದಷ್ಟು ಹೊರಭಾಗದ ಗೋಡೆಯ ಎತ್ತರವನ್ನು ಹೆಚ್ಚಿಸಿ ಕಟ್ಟಬೇಕಾಗುತ್ತದೆ. ಈ ರೀತಿಯ ವಾಸ್ತುಲಕ್ಷಣಗಳನ್ನು ನಾವು ಜಿಲ್ಲೆಯ ಚಿತ್ರದುರ್ಗ, ಜಾನಕಲ್ಲು ಮುಂತಾದ ಕೋಟೆಗಳಲ್ಲಿ ಕಾಣುತ್ತೇವೆ.

ಕೋಟೆಯಲ್ಲಿ ಶತ್ರುವಿಗೆ ಸವಾಲಾಗುವ ಮೊದಲ ಅಂಶವೆಂದರೆ ಗೋಡೆಯ ಎತ್ತರ ಮತ್ತು ಅಗಲ. ಆದ್ದರಿಂದ ಅದನ್ನು ಏರಲು ವಿಶೇಷ ತಯಾರಿ ಲಗ್ಗೆ ಇಡುವವರೆಗೆ ಅಗತ್ಯವಿತ್ತು. ಚಿತ್ರದುರ್ಗ ಜಿಲ್ಲೆಯ ಕೋಟೆಯ ಗೋಡೆಗಳು ಈ ನಿಟ್ಟಿನಲ್ಲಿ ನಿರ್ಮಾಣಗೊಂಡಿವೆ. ಕೆಲವು ಕಡೆ ಕೋಟೆಗೋಡೆಯ ಅಗಲ ೫ ರಿಂದ ೮ ಮೀಟರ್‌ವರೆಗೆ ಇದ್ದು, ಎತ್ತರ ೬ರಿಂದ ೧೫ ಮೀಟರ್ ಇರುವುದನ್ನು ಕಾಣುತ್ತೇವೆ. ಈ ರೀತಿ ಎತ್ತರವಾದ ಕೋಟೆಯ ಗೋಡೆಗಳನ್ನು ಕಟ್ಟುವುದರಿಂದ ಶತ್ರುಗಳು ಒಡ್ಡಬಹುದಾದ ಆಕ್ರಮಣವನ್ನು ತಡೆವುದು ಒಂದು ದೃಷ್ಟಿಯಾದರೆ ಮತ್ತೊಂದು ಕೋಟೆ ಕಾಳಗದಲ್ಲಿ ಶತ್ರುಗಳನ್ನು ಈ ಗೋಡೆಗಳ ಮೇಲಿಂದ ಕೆಳಗಿರುವ ಕಂದಕಕ್ಕೆ ತಳ್ಳುವುದೂ ಆಗಿದ್ದಿತು. ಪ್ರಾರಂಭದಲ್ಲಿ ಚಿಕ್ಕಚಿಕ್ಕ ಕಲ್ಲುಗಳಿಂದ ಕೋಟೆಯ ಗೋಡೆಯನ್ನು ಕಟ್ಟಿ, ಕ್ರಮೇಣ ಇವುಗಳ ಗಾತ್ರವನ್ನು ತುಂಬಾ ವಿಸ್ತರಿಸಿರುವುದನ್ನು ನಾವು ಗಮನಿಸಬಹುದು. ಅದೇ ರೀತಿ ಗೋಡೆ ಕಟ್ಟುವ ಕಲೆಯು ಕ್ರಮೇಣ ಸುಧಾರಣೆಗೊಂಡಿದೆ.

ಇಂತಹ ರಕ್ಷಣಾ ಗೋಡೆಗಳು ಪ್ರಾರಂಭದಲ್ಲಿ ಮಣ್ಣಿನ ದಿಬ್ಬಗಳಿಂದ, ತರುವಾಯ ಇಟ್ಟಿಗೆ ಮತ್ತು ಕಲ್ಲುಗಳಿಂದ ನಿರ್ಮಾಣಗೊಂಡಿವೆ. ಜೊತೆಗೆ ಬಂದೂಕುಗಳಿಂದ ಬಂದ ಗುಂಡು ಹಾಗೂ ಬಾಣಗಳನ್ನು ಸಮರ್ಥವಾಗಿ ಎದುರಿಸಲು ಗೋಡೆಯ ಮೇಲ್ಭಾಗದಲ್ಲಿ ಕೆಲವೊಮ್ಮೆ ಗೋಡೆಯ ಮುಂಭಾಗದಲ್ಲಿ ಮಣ್ಣಿನ ದಿಬ್ಬಗಳನ್ನು ಏರಿಸಿರುವುದು ರೂಢಿ. ಈ ರೀತಿ ಮಾಡಿದರೆ ಬಂದೂಕಿನಿಂದ ಬಂದ ಗುಂಡುಗಳು ಮಣ್ಣಿನಲ್ಲಿ ಹೂತುಹೋಗುತ್ತಿದ್ದವು. ಇದರಿಂದ ಗೋಡೆಗೆ ಯಾವುದೇ ರೀತಿಯ ಅಪಾಯವಿರುತ್ತಿರಲಿಲ್ಲ. ಮುಚ್ಚಲ್ಪಟ್ಟ ಮಣ್ಣಿನ ಗೋಡೆಯ ಮೇಲೆ ಬಿದ್ದ ನೀರು ಹರಿದುಹೋಗಲು ಗೋಡೆಯ ಹಾಗೂ ಬುರುಜುಗಳಲ್ಲಿ ಬಂದೂಕುಕಿಂಡಿಗಳಂತಹ ಸ್ರವಿಸುವ ರಂಧ್ರಗಳನ್ನು ಮಾಡಲಾಗಿದೆ. ಈ ರೀತಿಯ ವ್ಯವಸ್ಥೆ ಚಿತ್ರದುರ್ಗ, ಜಾನಕಲ್ಲು, ಮೊಳಕಾಲ್ಮೂರು ಮತ್ತು ಬ್ರಹ್ಮಗಿರಿ ಕೋಟೆಗಳಲ್ಲಿದೆ.

[illegible]

[illegible]

[illegible]

ಕ್ರಮೇಣ ವಾಸ್ತುಶಿಲ್ಪದಲ್ಲಿ ರಚನಾತ್ಮಕ ಬದಲಾವಣೆಯಾಗಿ ಮೊದಲಿನ ಗೋಡೆಗಳು ನವೀಕರಣಗೊಂಡು ಮಣ್ಣಿನ ಎರಡೂ ಬದಿಯಲ್ಲಿ ನಿರ್ಮಿಸಲಾಗಿದ್ದ ಕಲ್ಲಿನ ಗೋಡೆ ಹಾಗೂ ಮಣ್ಣಿನ ಗೋಡೆಯ ಮಧ್ಯದಲ್ಲಿನ ಸಂಧಿಯಲ್ಲಿ ಕಲ್ಲು ಮತ್ತು ಮಣ್ಣನ್ನು ತುಂಬುವುದರ ಮೂಲಕ ಮತ್ತೊಂದು ವಾಸ್ತುಶಿಲ್ಪ ಲಕ್ಷಣವನ್ನು ಅಳವಡಿಸಿಕೊಳ್ಳಲಾಯಿತು. ಮಧ್ಯಯುಗದ ಪ್ರಾರಂಭದಲ್ಲಿ ನವೀಕರಿಸಲಾದ ಕೋಟೆಗಳು ಈ ವರ್ಗಕ್ಕೆ ಸೇರುತ್ತವೆ.

ಮುಂದುವರೆದು ಕೊನೆಯ ಹಂತದಲ್ಲಿ ವ್ಯವಸ್ಥಿತವಾದ ಭಾರೀ ಗಾತ್ರದ ನಯಗೊಳಿಸಿದ ಕಲ್ಲುಗಳನ್ನು ಒಂದರ ಮೇಲೊಂದರಂತೆ ಇಟ್ಟು ಗೋಡೆಗಳನ್ನು ನಿರ್ಮಿಸಿದ್ದಾರೆ. ಮತ್ತೆ ಕೆಲವೆಡೆ ಇಂತಹ ಗೋಡೆಗೆ ಸುಣ್ಣದ ಗಾರೆಯ ಲೇಪನವನ್ನು ಮಾಡಲಾಗುತ್ತಿತ್ತು. ಇಂತಹ ವ್ಯವಸ್ಥೆಯನ್ನು ಚಿತ್ರದುರ್ಗ, ಜಾನಕಲ್ ಮುಂತಾದ ಕೋಟೆಗಳಲ್ಲಿ ಕಾಣಬಹುದು. ಇತರೆ ಕೋಟೆಗಳಲ್ಲಿ ಕಲ್ಲುದುಂಡಿಗಳನ್ನು ಮಧ್ಯೆದಲ್ಲಿ ತುಂಬಿ ಹೊರಭಾಗದಲ್ಲಿ ಕಲ್ಲಿನ ದಿಮ್ಮಿಗಳಿಂದ, ಕತ್ತರಿಸಿದ ಕಲ್ಲುಗಳಿಂದ ಅಥವಾ ತುಂಡುಗಲ್ಲುಗಳನ್ನು ಬಳಸಿ ಕಟ್ಟಡವನ್ನು ನಿರ್ಮಿಸಿದ್ದಾರೆ. ಚಿತ್ರದುರ್ಗದ ಪಶ್ಚಿಮಭಾಗದ ಕೋಟೆಯ ಹೊರಗೋಡೆಯು ಸರ್ಪದ ನಡಿಗೆಯೋಪಾದಿಯಲ್ಲಿ ನಿರ್ಮಿಸಿದ್ದಾರಲ್ಲದೆ, ಕೆಲವು ಕಡೆ ಮೇಲುಕೋಟೆಗೆ ತಲುಪಲು ಅಂತಸ್ಥಿನ ಮೆಟ್ಟಿಲುಗಳನ್ನು ಕಟ್ಟಿಸಲಾಗಿದೆ. ಇಂತಹ ವಿಸ್ತಾರವಾದ ಹೊರಗೋಡೆಗಳು ರಕ್ಷಣಾವ್ಯವಸ್ಥೆಯ ಘನತೆಯನ್ನು ಪ್ರದರ್ಶಿಸುತ್ತವೆ. ಕರಾರುವಕ್ಕಾದ ಒಂದು ಕೋಟೆಯಲ್ಲಿ ಕನಿಷ್ಠ ಪಕ್ಷ ೧೨ ಗೋಡೆಗಳಿರಬೇಕು. ಕಲ್ಲು ಮತ್ತು ಇಟ್ಟಿಗೆಗಳಿಂದ ನಿರ್ಮಿಸಿದ ಕನಿಷ್ಠ ಪಕ್ಷ ೧೮ ಅಡಿ ಎತ್ತರವುಳ್ಳ ಮತ್ತು ಸಾಕಷ್ಟು ದಪ್ಪಗಿರುವ ಭದ್ರವಾದ ಹೊರ ಗೋಡೆಗಳಿರಬೇಕು.[೧೧]

ಗೋವಿಂದವೈದ್ಯನು ತನ್ನ ಕಂಠೀರವ ನರಸರಾಜೇಂದ್ರ ವಿಜಯದಲ್ಲಿ ಕೋಟೆಯನ್ನು ಈ ರೀತಿ ಬಣ್ಣಿಸಿದ್ದಾನೆ :

ಅಗಲಕೆ ಭೂಮಂಡಲ ಕಿರಿದು ಉಬ್ಬಲು
ಮಿಗೆ ತಾಲಮೆಟುದಿಕ್ಕೆಂದು,
ನಗುತಾಗ ಮೇಲಕ್ಕೆ ಒಲೆದೋಲು ಹೊಂ ದೋಂಟೆ
ಗಗನಮಂಡಲನ ಮುಟ್ಟಿಹುದು[೧೨]

೩.೯.೪ ಕೋಟೆಯ ತೆನೆ

ಕೋಟೆಯ ಗೋಡೆಯ ಮೇಲೆ ಉದ್ದಕ್ಕೂ ಭತ್ತದ ತೆನೆಯಾಕಾರದ ರಚನೆ ಇರುತ್ತದೆ. ಕೋಟೆಯ ಅಳ್ವೇರಿಯ ಮೇಲೆ ಇಂತಹ ತೆನೆಗಳು ಸಾಲಾಗಿರುತ್ತಿದ್ದವು. ಇಂತಹ ಸಾವಿರಾರು ತೆನೆಗಳ ಕಾರ್ಯರಚನೆ ಕೋಟೆಗೋಡೆಯನ್ನು ಪ್ರತ್ಯಕ್ಷವಾಗಿ ನೋಡಿದಾಗ ಮಾತ್ರ ತಿಳಿದುಬರುತ್ತದೆ. ಸೈನಿಕರ ಸಹಾಯದಂತೆ ಕೋಟೆಯ ತೆನೆಗಳು ಇರುತ್ತಿದ್ದವು. ಇಂತಹ ತೆನೆಗಳು ತಕ್ಕಮಟ್ಟಿಗೆ ಗಟ್ಟಿಮುಟ್ಟಾಗಿದ್ದು ದಪ್ಪವಾಗಿರುತ್ತಿದ್ದವೆಂದು 'ಮೋಹನತರಂಗಿಣಿ'ಯಲ್ಲಿ ಹೇಳಲಾಗಿದೆ.[೬೩]

ಈ ರೀತಿಯ ತೆನೆಯಾಕಾರದ ರಚನೆ ಕೋಟೆಗೆ ಅಂದವನ್ನು ತಂದುಕೊಡುತ್ತದೆ. ಆದರೆ ಕೋಟೆಯ ಅಲಂಕರಣ ತೆನೆಗಳ ಅಂತಿಮ ಉದ್ದೇಶವಲ್ಲ. ಇವು ಯುದ್ಧದ ಸಮಯದಲ್ಲಿ ರಕ್ಷಣಾದೃಷ್ಟಿಯಿಂದ ನಿರ್ಮಿಸಿದ ತಂತ್ರಗಳಾಗಿರುವುದು ಗಮನಾರ್ಹ. ಈ ತೆನೆಗಳ ಹಿಂಬದಿಯಿಂದ ನಿಂತುಕೊಂಡು ಶತ್ರುಗಳಿಗೆ ಕಾಣದಹಾಗೆ ಅವರನ್ನು ವೀಕ್ಷಿಸಬಹುದಾಗಿತ್ತು. ಕೋಟೆಯ ರಕ್ಷಣೆಗೆಂದು ನಿಂತ ಸೈನಿಕರು ತೆನೆಗಳ ಮರೆಯಲ್ಲಿ ನಿಂತು ಬಾಣ ಬಿಡಲು ಇಲ್ಲಿ ಅನುಕೂಲವಿತ್ತು. ಹೊರಗಡೆಯಿಂದ ನೋಡಿದರೆ ಈ ತೆನೆಯ ಹಿಂದೆ ಸೈನಿಕರ ಚಲನವಲನ, ಸೈನಿಕರ ಸಂಖ್ಯೆ ಯಾವುದೂ ಹೊರಗಿನವರಿಗೆ ಗೊತ್ತಾಗುತ್ತಿರಲಿಲ್ಲ. ಇದು ಕೂಡ ಶತ್ರು ಕಡೆಯವರನ್ನು ಮೋಸಗೊಳಿಸುವ ಒಂದು ತಂತ್ರ. ಕೋಟೆಗಳ ಸಂರಕ್ಷರು ತೆನೆಗಳ ನಡುವೆ ನಿಂತು ಯುದ್ಧ ಮಾಡುತ್ತಿರುವ ದೃಶ್ಯಗಳನ್ನು ವೀರಗಲ್ಲುಗಳಲ್ಲಿ ಸೊಗಸಾಗಿ ಚಿತ್ರಿಸಲಾಗಿದೆ.[೬೪]

ಎರಡು ತೆನೆಗಳ ಮಧ್ಯೆ ತಲೆಹಾಕಿ ಕೆಳಗೆ ಇಣುಕಿನೋಡಿ ಅವುಗಳ ಹಿಂದೆಯೇ ಕುಳಿತು ಕೆಳಗಿನ ಶತ್ರುಗಳ ಚಲನವಲನಗಳನ್ನು ವೀಕ್ಷಿಸಿ ಮೇಲಿಂದ ತಮ್ಮ ಶಸ್ತ್ರಗಳ ಮೂಲಕ ಶತ್ರುಗಳನ್ನು ಧ್ವಂಸಮಾಡಲು ಕೋಟೆತೆನೆಗಳನ್ನು ಬಳಸುತ್ತಿದ್ದರು.[೬೫] ಇಂತಹ ತೆನೆಗಳಿಂದ ಸೈನಿಕರಿಗೆ ದೇಹದ ಕೆಳಗಿನ ಅರ್ಧಭಾಗಕ್ಕೆ ರಕ್ಷಣೆ ದೊರೆಯುವಂತಿತ್ತು. ಆದ್ದರಿಂದ ವೈರಿಗಳ ದೃಷ್ಟಿಯಿಂದ ತೆನೆಗಳು ಅಪಾಯಕಾರಿಯಾಗಿರುತ್ತಿದ್ದವು. ಇವುಗಳನ್ನು ಮುರಿದರೆ, ಮರೆಯಲ್ಲಿ ನಿಂತವರನ್ನು ನಾಶ ಮಾಡುವ ಸಾಧ್ಯತೆಯಿರುತ್ತಿತ್ತು. ಹೀಗಾಗಿ ಕೋಟೆಯ ಕಾಳಗದಲ್ಲಿ ಕಲ್ಲುಗಳನ್ನು ಕಿತ್ತುಹಾಕುತ್ತಿದ್ದರಲ್ಲದೆ, ಕೋಟೆಯ ತೆನೆಗಳನ್ನು ಮುರಿದುಹಾಕುತ್ತಿದ್ದರು. ಅಲ್ಲಿದ್ದ ಸೈನಿಕರನ್ನು ಕೆಳಗೆ ದೂಡುತ್ತಿದ್ದರು. ಸೈನಿಕರ ಪ್ರತಿರೋಧವನ್ನು ಲೆಕ್ಕಿಸದೆ, ಶತ್ರುಸೈನಿಕರು ಕೋಟೆಯನ್ನೇರಿದಾಕ್ಷಣ ತೆನೆಯ ಮರೆಯಲ್ಲಿ ಅಡಗಿದವರನ್ನು ಕೆಳಗೆ ನೂಕಲು ಯತ್ನಿಸುತ್ತಿದ್ದರು. ಆಗ ಹತ್ತಿಬಂದಿದ್ದವರ ಕಾಲುಗಳನ್ನು ತೆನೆಗಳಿಗೆ ಬಿಗಿಯಾಗಿ ತೊಡಿಸಿ ಅಂದರೆ ತೆನೆಗಳನ್ನೇ ಆಧಾರವನ್ನಾಗಿ ಮಾಡಿಕೊಂಡು ತಲೆಕೆಳಗೆ ನೇತಾಡುತ್ತಿದ್ದರೆಂದು ಹೇಳಲಾಗಿದೆ.[೬೬]

[illegible]

ಯುದ್ಧ ಸಂದರ್ಭದಲ್ಲಿ ಕೋಟೆ ತೆನೆಯ ನಡುವೆ ದಸಿ, ಮನೆ, ಶೂಲ, ಹೇರಿಟ್ಟಿ, ಮರುಳುಗೈಗಳನ್ನು ನಿಲ್ಲಿಸುತ್ತಿದ್ದರೆಂದು ಉಲ್ಲೇಖಿಸಲಾಗಿದೆ.[೬೬] ಕನಕದಾಸರು 'ಮೋಹನತರಂಗಿಣಿ'ಯಲ್ಲಿ ಕೋಟೆತೆನೆಯನ್ನು ಈ ಕೆಳಗಿನಂತೆ ವರ್ಣಿಸಿದ್ದಾರೆ :

ತಿಂಗಳ ಜೂಟಿಗೆ ಸುರಪತಿಯವರು ತಂದ
ಮಂಗಳ ಜಲಕುಂಭದಂತ
ಕಂಗೊಳಿಸುವ ಕೋಟೆಯ ತೆನೆಗೊಂದೊಂದು
ಪೊಂಗಳ ಸಂಗಳೊಪ್ಪಿದವು[೬೭]

೩.೯.೫ ಬಂದೂಕು ರಂಧ್ರಗಳು(ಅಂಬುಗಂಡಿಗಳು)

ಬಂದೂಕಿನಿಂದ ಹೊಡೆಯಲು ಗೋಡೆಯಲ್ಲಿ ಮಾಡಿಕೊಂಡಿರುವ ಉದ್ದಕಂಡಿಗಳೇ ಬಂದೂಕು ರಂಧ್ರಗಳು. ಕೋಟೆಗಳಲ್ಲಿ ಮೊದಲು ಬಾಣ ಹೊಡೆಯಲು ಮಾಡಿಕೊಂಡ ಈ ರಂಧ್ರಗಳು ಕೋವಿಗಳು ಪರಿಚಯವಾದ ನಂತರ ಕೋವಿಕಿಂಡಿಗಳಾಗಿವೆ. ಯುದ್ಧಕಾಲದಲ್ಲಿ ವೈರಿಗಳಿಂದ ತಮಗೆ ತೊಂದರೆಯಾಗದಂತೆ ಗೋಡೆಗಳಿಗೆ ಕಂಡಿಗಳನ್ನು ಬಿಡುತ್ತಿದ್ದರು. ಈ ಕಂಡಿಗಳು ಎರಡು ರೀತಿಯಿಂದ ಕೋಟೆಯ ಸಂರಕ್ಷಕರಿಗೆ ಸಹಾಯಕವಾಗುತ್ತಿದ್ದವು. ಇವುಗಳ ರಚನೆಯು ತುಂಬಾ ತಾಂತ್ರಿಕತೆಯಿಂದ ಕೂಡಿದ್ದು ಗುರಿಯಿಟ್ಟು ಹೊಡೆದರೆ ಮುತ್ತಿಗೆ ಹಾಕಲಿದ್ದ ಶತ್ರುಸೈನ್ಯದ ಮೇಲೆ ಅಸ್ತ್ರಗಳು ಬೀಳುವಂತೆ ಇರುತ್ತಿದ್ದವು.[೬೮] ಕೋಟೆಯ ಮೇಲ್ಭಾಗದಲ್ಲಿರುವ ಕಂಡಿಗಳುಳ್ಳ ಕೈಪಿಡಿಗೋಡೆಯಲ್ಲಿ ಸಾಮಾನ್ಯವಾಗಿ ಉದ್ದಕಿಂಡಿಗಳು ಎರಡು ಅಥವಾ ಮೂರು ಪಂಕ್ತಿಗಳನ್ನು ಹೊಂದಿರುತ್ತವೆ. ಮೇಲಿನ ಪಂಕ್ತಿಯು ಕೋಟೆಯ ಚೇರುಗಂಡಿಗಳ ಭಾಗ ಹಾಗೂ ಕೋವಿಕಿಂಡಿಗಳನ್ನು ಭೇದಿಸಿಕೊಂಡು ಕವಾಯಿತು ಗೋಡೆಯಿಂದ ಕೆಳಗಿರುತ್ತವೆ. ಇಂತಹ ನೀಳಕಂಡಿಗಳನ್ನು ಸಾಮಾನ್ಯವಾಗಿ ವಿಜಯನಗರೋತ್ತರ ಕಾಲದ ಎಲ್ಲಾ ಕೋಟೆಗಳಲ್ಲಿ ಕಾಣಬಹುದು. ಇವುಗಳ ರಚನೆಯ ಮೂಲ ಉದ್ದೇಶ ಇವುಗಳ ಹಿಂದೆ ಅವಿತುಕೊಂಡು ಬಾಣ-ಭರ್ಚಿ, ಹಗುರ ಅಥವಾ ಭಾರವಾದ ಫಿರಂಗಿ ಗುಂಡುಗಳಂತಹ ಆಯುಧಗಳನ್ನು ಪ್ರಯೋಗಿಸುತ್ತಿದ್ದರು. ಈ ರೀತಿ ಬಂದೂಕು ರಂಧ್ರಗಳನ್ನು ವಿವಿಧ ಮಟ್ಟದಲ್ಲಿ ಹಾಗೂ ಎತ್ತರಗಳ ಜಾಗದಲ್ಲಿ ರಚಿಸಲಾಗಿರುವುದು. ಈ ಎರಡು ಕಡೆಗಳಲ್ಲಿಯೂ ಸಮತಲ ಮಟ್ಟದಲ್ಲಿ ಕಂಡಿಗಳನ್ನು ಕಾಣಬಹುದು.

ಕೆಲವುಕಡೆ ಶತ್ರು ಸೈನಿಕರ ಮೇಲೆ ಕುದಿಯುವ ನೀರು, ಎಣ್ಣೆ ಮುಂತಾದ ಹಾನಿಕಾರಕ ದ್ರವ್ಯಗಳನ್ನು ಎರಚಲು ಕೋವಿಕಿಂಡಿಗಳನ್ನು ರಚಿಸಿದ್ದಾರೆ. ಇವುಗಳ ಗುರಿ ಶತ್ರು ಸೈನಿಕರಿಗೆ ತೊಂದರೆ ಕೊಡುವುದು

[illegible]

[illegible]

[illegible]

[illegible]

[illegible]

ಹಾಗೂ ಶತ್ರುಗಳಿಗೆ ಗುರಿ ಇಟ್ಟು ಗುಂಡು ಹಾರಿಸುವುದಾಗಿದೆ. ಇಂತಹ ರಂಧ್ರಗಳನ್ನು ಒಬ್ಬ ಸೈನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ನಿರ್ಮಿಸಲಾಗಿದೆ. ಹಾಗೂ ಇವುಗಳನ್ನು ವಿವಿಧ ಕೋನಗಳಲ್ಲಿ ರಚಿಸಿರುವುದು ಕಂಡುಬರುತ್ತದೆ. ಒಬ್ಬ ಸೈನಿಕನು ಶತ್ರು ವೀಕ್ಷಣೆಯನ್ನು ಏಕಕಾಲದಲ್ಲಿ ಮೂರುಕಡೆ ವೀಕ್ಷಿಸಬಹುದು. ದೂರದೃಷ್ಟಿ, ಸಮೀಪದ ದೃಷ್ಟಿ ಮತ್ತು ಪಕ್ಕದ ಕಡೆ ಕಾಣಿಸುವ ಹಾಗೆ ಮತ್ತೊಂದೆಡೆ ಕೆಳಭಾಗ, ಮೇಲ್ಭಾಗ ಹಾಗೂ ನೇರಭಾಗದಲ್ಲಿ ಬಂದೂಕು ರಂಧ್ರಗಳಿವೆ. ಸಾಮಾನ್ಯವಾಗಿ ಬಂದೂಕುರಂಧ್ರ ಅಥವಾ ಕೋವಿಕಿಂಡಿಗಳನ್ನು ಗೋಡೆಗಳಲ್ಲಿ ಮಾತ್ರವಲ್ಲದೆ ಬುರುಜು, ಕಾವಲುಗೋಪುರ, ಕೊತ್ತಲಗಳಲ್ಲಿ ನಿರ್ಮಿಸಿರುವುದನ್ನು ನೋಡಬಹುದು. ಕೊತ್ತಲಗಳು ಹೊರಗಿನ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುವ ವೀಕ್ಷಣಾಕೇಂದ್ರಗಳಾಗಿದ್ದು, ಅದರೊಳಗೆ ಅಂಬುಗಂಡಿಗಳೂ ಇರುತ್ತಿದ್ದವು. ಅಪಾಯಕಾರಿ ವ್ಯಕ್ತಿಗಳನ್ನು ಕಂಡೊಡನೆ ಕೊತ್ತಲದೊಳಗಿಂತಲೇ ಬಾಣಗಳಿಂದ ಪ್ರಹರಿಸಿ ಬಿಡುತ್ತಿದ್ದರು. ಈ ನೀಳ ಕಂಡಿಗಳನ್ನು ಸಾಮಾನ್ಯವಾಗಿ ಎಲ್ಲಾ ಕೋಟೆಗಳಲ್ಲಿ ಕಾಣಬಹುದು. "ನೆಲೆವಾಳಿಗೆ ಕೊತ್ತಳದಂಬುಗಂಡಿಯಿಂದುಡುಗಡೆ ಪಾಯ್ವ ಕೂರ್ಗಪೆ" ಎಂಬ ಮಾತಿನಲ್ಲಿ ಇದೇ ಅಭಿಪ್ರಾಯವಿರುವಂತಿದೆ. ಇಲ್ಲಿ 'ಅಂಬುಗಂಡಿ' ಮತ್ತು 'ಕೊತ್ತಳ' ಬೇರೆ ಬೇರೆಯಾಗಿಲ್ಲ. ಹೀಗಾಗಿ ಕೊತ್ತಲದೊಳಗೇ ಅಂಬುಗಂಡಿಯಿರುತ್ತಿತ್ತು.[೬೦] ಇಂತಹ ರಂಧ್ರಗಳಿಂದ ಏಕಕಾಲದಲ್ಲಿ ಶತ್ರುಗಳನ್ನು ಯಾವ ದಿಕ್ಕಿನಲ್ಲಾದರೂ ನಾಶಗೊಳಿಸಬಹುದಾಗಿತ್ತು.

೩.೯.೬ ಬುರುಜು(ಕೊತ್ತಲ)

"ವಿರಾಜಿಪ ಗೊಂಟುಗೊಂಡಿನೊಳ್ ಬಳಸಿದ ಕೊತ್ತಳಂ" ಎಂಬುದಾಗಿ ಗಿರಿಜಾಕಲ್ಯಾಣದಲ್ಲಿ ಹರಿಹರನು ವರ್ಣಿಸಿದ್ದಾನೆ. "ಗೊಂಟು ಎಂಬುದು ಬಹುಶಃ ಕೋಟೆಯ ಗೋಡೆಗಳು ಸಂಧಿಸುವ ಸ್ಥಳ. ಅಂತಹ ಸಂಧಿಸ್ಥಾನಗಳಲ್ಲಿ ಅಟ್ಟಳೆಗಳಿಗಿಂತ ಎತ್ತರವಾಗಿ ಕಟ್ಟಿದ ವೀಕ್ಷಣಕೇಂದ್ರಗಳೇ ಕೊತ್ತಳಗಳು. ಕೋಟೆಯ ನಾಲ್ಕು ಅಥವಾ ಎಂಟು ದಿಕ್ಕುಗಳಲ್ಲಿಯೂ ಕೊತ್ತಲವಿರುತ್ತಿತ್ತು" ಎಂದು ಚಿದಾನಂದಮೂರ್ತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೬೧] ಅವನಿಯ ಹೊತ್ತ ದಿಗ್ಗಜರಂತೆ ನಿಂತ ಕೊತ್ತಲಗಳು ಒಪ್ಪಿದವು ಎಂಬ ಮಾತು ದಿಕ್ಕಿಗೆ ಒಂದು ಕೊತ್ತಲವಿದ್ದ ಬಗೆಗೆ ಮಾಹಿತಿ ನೀಡುತ್ತದೆ. ಹೀಗೆ ಒಂದೊಂದು ದಿಕ್ಕಿನಲ್ಲಿ ಕೋಟೆ ಗೋಡೆಗೆ ಕೊತ್ತಲವಿದ್ದ ಬಗ್ಗೆ ಅನೇಕ ಕಾವ್ಯಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಹೆಬ್ಬಾಗಿಲಿನ ಕೊತ್ತಲಗಳು ಕಾವಲು ಗೃಹಗಳಾಗಿಯೂ ಕೆಲಸ ಮಾಡುತ್ತಿದ್ದವು. ಮಹಾದ್ವಾರ ಅತೀಮುಖ್ಯ ಆಯಕಟ್ಟಿನ ಸ್ಥಳವಾದ್ದರಿಂದ ಅದರ ಅಕ್ಕಪಕ್ಕದಲ್ಲಿ ಎರಡು ಕೊತ್ತಲಗಳ ಅಗತ್ಯವಿತ್ತೆನ್ನಬಹುದು.

ಸಾಮಾನ್ಯವಾಗಿ ಕೊತ್ತಲಗಳು ಕೋಟೆಯ ತೆರೆಯೊಳಗೆ ಚಾಚಿಕೊಂಡಿರುತ್ತವೆ. ಇವು ಅರ್ಧ ವೃತ್ತಾಕಾರವಾಗಿಯೂ ಕೆಲವು ವೇಳೆ ಚೌಕಾಕಾರವಾಗಿಯೂ ನಿರ್ಮಿಸಿರುವುದನ್ನು ಕಾಣುತ್ತೇವೆ. ಈ ಬುರುಜುಗಳಿಂದ ಕೋಟೆಗೋಡೆಯು ನೋಡಲು ಸುಂದರವಾಗಿರುತ್ತದೆಯಾದರೂ ಇವುಗಳನ್ನು ರಚಿಸಿರುವುದರ ಉದ್ದೇಶವೇ ಬೇರೆ. ಈ ಬುರುಜುಗಳಿಂದ ಕೋಟೆಯ ಗೋಡೆಗೆ ಭದ್ರತೆ ಒಂದು ಕಡೆಯಾದರೆ, ವಿಶಾಲವಾದ ಪ್ರದೇಶವನ್ನು ಆವರಿಸುವಂತಹ ಬಂದೂಕು ಕೋವಿಗಳನ್ನು ಸೇರಿಸಿಕೊಂಡು ಶತ್ರುಗಳನ್ನು ನಿಗ್ರಹಿಸಲು ಉಪಯೋಗಿಸಲಾಗುತ್ತಿತ್ತು. ಅರ್ಧ ವೃತ್ತಾಕಾರದ ಬುರುಜುಗಳಂತೆಯೇ ಅನೇಕ ವರ್ತುಲಗಳುಳ್ಳ ಬುರುಜುಗಳನ್ನೂ ನಿರ್ಮಿಸಲಾಗುತ್ತಿತ್ತು. ಸೈನ್ಯದ ಬಳಕೆ ಹಾಗೂ ಯುದ್ಧತಂತ್ರಗಳು ಹೆಚ್ಚುತ್ತಾ ಹೋದಂತೆ ಬುರುಜುಗಳ ಬಳಕೆ ಮತ್ತು ರಚನೆಯು ಹೆಚ್ಚುತ್ತಾ ಹೋಯಿತು. ಚಿತ್ರದುರ್ಗ ಜಿಲ್ಲೆಯ ವಿವಿಧ ಕೋಟೆಗಳಲ್ಲಿ ಅರ್ಧ ವೃತ್ತಾಕಾರ, ವೃತ್ತಾಕಾರ, ಚೌಕಾಕಾರದ ಬುರುಜುಗಳಲ್ಲದೆ, ಎರಡು ಮತ್ತು ಮೂರು ವರ್ತುಲಾಕಾರದ ಬುರುಜುಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ವೃತ್ತಾಕಾರದ ಬುರುಜುಗಳು ವಿಸ್ತಾರವಾದ ಪ್ರದೇಶಗಳ ಮೇಲೆ ಹತೋಟಿಯನ್ನು ಹೊಂದಲು ಉಪಯೋಗವಾಗುತ್ತವೆ. ಉದಾ: ಹಿರಿಯೂರು ತಾಲೂಕಿನ ವೇಣುಕಲ್ಲುಗುಡ್ಡದ ಕೋಟೆಯ ಎತ್ತರದ ಪ್ರದೇಶದ ಕೋಟೆಯ ಮಧ್ಯಭಾಗದಲ್ಲಿರುವ ಗಾರೆ ಬುರುಜು, ಚಿತ್ರದುರ್ಗದ ಬಸವನ ಬುರುಜು ಮುಂತಾದವುಗಳನ್ನು ಹೆಸರಿಸಬಹುದು. ಇಂತಹ ಬುರುಜುಗಳಿಂದ ಕೋಟೆಯ ಸುತ್ತಲಿನ ಪ್ರದೇಶವನ್ನು ವೀಕ್ಷಿಸಬಹುದಾಗಿದೆ. ಈ ಕಾವಲು ಬುರುಜುಗಳಲ್ಲಿ ವೀಕ್ಷಣಾ ಕಿಂಡಿಗಳಿವೆ. ಮತ್ತೆ ಕೆಲವು ಬುರುಜುಗಳಲ್ಲಿ ಆಯತಾಕಾರದ ದೊಡ್ಡ ಕಿಂಡಿಗಳಿದ್ದು, ಅಲ್ಲಿ ಫಿರಂಗಿಗಳನ್ನು ಇಡಬಹುದಾಗಿದೆ. ಕಾವಲುಗಾರರು ಅಥವಾ ಸೈನಿಕರು ಇದರ ಮೇಲೆ ನಿಂತು ಶತ್ರುಗಳನ್ನು ದೂರದಿಂದಲೇ ವೀಕ್ಷಿಸಿ ಪಿರಂಗಿಗಳಿಂದ ನಾಶಪಡಿಸಲು ಬುರುಜುಗಳು ಸಹಾಯಕಾರಿಯಾಗಿವೆ. ಸಾಮಾನ್ಯವಾಗಿ ಇಂತಹ ಕೊತ್ತಲಗಳಲ್ಲಿ ಯುದ್ಧ ವಿಶಾರದರೂ ತೀಕ್ಷ್ಣಮತಿಗಳೂ ಆದ ಯೋಧರು ಇರುತ್ತಿದ್ದರೆನ್ನಬಹುದು. ಒಟ್ಟಿನಲ್ಲಿ ಬುರುಜುಗಳು ಶತ್ರುಗಳಿಗೆ ಅಪಾಯದ ಆತಂಕವನ್ನುಂಟು ಮಾಡುವ ಸ್ಥಳವಾಗಿದ್ದವು.

೩.೯.೭ ಕೋಟೆಯ ಬಾಗಿಲುಗಳು

ಕೋಟೆಗೆ ಅನುರೂಪವಾದ ಬಾಗಿಲನ್ನೇರ್ಪಡಿಸಬೇಕೆಂದು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಹೇಳಿದ್ದಾನೆ. ಕೋಟೆಯಲ್ಲಿ ಎಲ್ಲಿ ಬಾಗಿಲನ್ನಿಡಲು ಆಲೋಚಿಸುತ್ತವೆಯೋ ಅಲ್ಲಿ ಕೋಟೆಯ ಎರಡೂ

[illegible]

ಬದಿಗಳಲ್ಲಿ ದಂಡ ವಿಸ್ತಾರವುಳ್ಳ ಮಂಟಪವನ್ನು ರಚಿಸಬೇಕು.[೬೨] (ಒಂದು ದಂಡವೆಂದರೆ ೬ ಅಡಿ ಅಥವಾ ೧.೮೦ ಮೀಟರ್).


ಮಾರ್ಗಸ್ಥಲ (ಪ್ರತೋಲಿ) ದಿಂದ ಮುಚ್ಚಲ್ಪಟ್ಟು ಅದಕ್ಕೆ ಆಧಾರವಾದ ೬ ತೋರಣ ಸ್ಥಂಬದಿಂದ ಕೂಡಿದ ಬಾಗಿಲನ್ನಿಡಬೇಕು. ಒಟ್ಟಾರೆ ಉದ್ದಕ್ಕಿಂತ ಹೆಚ್ಚು ವಿಸ್ತಾರವುಳ್ಳ ಬಾಗಿಲುಗಳಿರಬೇಕು ಎಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಿಸಲಾಗಿದೆ.[೬೩] ಕೋಟೆಯ ಹೆಬ್ಬಾಗಿಲಿಗೆ 'ಹುಲಿಮೊಗ' ಎಂಬ ಹೆಸರಿದೆ. ಕೋಟೆಯ ಭವ್ಯತೆ ಭೀಕರತೆಗಳ ಮೂಲಕ ಅದನ್ನು ದೊಡ್ಡದಾದ ಹುಲಿಯೆಂದು ಕಲ್ಪಿಸಿ ಅದರ ಹೆಬ್ಬಾಗಿಲನ್ನು 'ಹುಲಿಮೊಗ' ಎಂದು ಕರೆದಿದ್ದಾರೆ. ಈ ಹೆಬ್ಬಾಗಿಲನ್ನು ಪ್ರವೇಶಿಸುವ ಶತ್ರು ಸೈನಿಕರು ಹುಲಿಯ ಬಾಯಿಗೆ ಬಿದ್ದಂತೆಯೇ ಎಂದು ತಿಳಿಯುತ್ತಿದ್ದರು. ಕನಕದಾಸರ 'ಮೋಹನತರಂಗಿಣಿ'ಯಲ್ಲಿ ಹೆಬ್ಬಾಗಿಲಿನ ಎರಡು ಕಡೆಯ ಕೊತ್ತಲಗಳನ್ನು ನಿಂತ ಎರಡು ಹುಲಿಗಳೆಂದು, ಅಗಸೆ ಬಾಗಿಲು ತೆರೆದ ಬಾಯಿಯೆಂದು ವರ್ಣಿಸಿದ್ದಾರೆ.[೬೪] ಕೋಟೆಗೆ ಸಾಮಾನ್ಯವಾಗಿ ಎರಡು ಪ್ರವೇಶ ದ್ವಾರಗಳಿದ್ದರೂ ಅವು ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣಗಳಲ್ಲಿರಬೇಕು ಅಥವಾ ನಾಲ್ಕು ಪ್ರಧಾನ ದಿಕ್ಕುಗಳಿಗೆ ಅಭಿಮುಖವಾಗಿರಬೇಕೆಂದು ಹೇಳಲಾಗಿದೆ.[೬೫] ಇಂತಹ ಬಾಗಿಲುಗಳಿಗೆ ಸ್ಥಳೀಯ ರಾಜರು ಅವರ ಧಾರ್ಮಿಕ ಕಲ್ಪನೆಯಲ್ಲಿ ದೇವರ ಹೆಸರು ಅಥವಾ ಶಕ್ತಿ ಸ್ವರೂಪದ ಹೆಸರುಳ್ಳ ಹೆಸರಿನಿಂದ ಬಾಗಿಲುಗಳನ್ನು ಕರೆಯುತ್ತಿದ್ದರು. ಉದಾ : ರಂಗಯ್ಯನ ಬಾಗಿಲು ಹನುಮನ ಬಾಗಿಲು, ಆನೆಬಾಗಿಲು, ಊರುಬಾಗಿಲು, ಮಾರಿಬಾಗಿಲು ಮತ್ತಿತರೆ ಹೆಸರುಗಳಿಂದ ಕರೆದಿರುವುದನ್ನು ನೋಡಬಹುದು. ಈ ರೀತಿ ನಿರ್ಮಿಸಿದ ಬಾಗಿಲುಗಳ ಮೇಲೆ ಗೋಪುರಗಳನ್ನು ನಿರ್ಮಿಸಿ, ಇಲ್ಲಿ ಕಾವಲುಗಾರರನ್ನು ನೇಮಿಸುತ್ತಿದ್ದುದು ಬಾಗಿಲಿಗೆ ಭದ್ರತೆ ಕೊಡುವುದೇ ಆಗಿತ್ತು.

ಹೆಬ್ಬಾಗಿಲುಗಳನ್ನು ೫ ಕೈಗಳ ಉದ್ದ, ೫ ಕೈಗಳ ಅಗಲ ಮಾಡಬೇಕು. ಕುದುರೆ ಹತ್ತಿ ಬರುವವರ ಮೇಲೆ ಎರಡು ಕೈಗಳ ಉದ್ದ ಪ್ರಮಾಣವಿರುವ ಹಾಗೆ ಕೋಟೆದ್ವಾರವನ್ನು ರಚಿಸಬೇಕೆಂದು ಕೆಳಗಿನ ಶ್ಲೋಕವೊಂದು ಹೇಳುತ್ತದೆ.

ಅಶ್ವರೂಢೆ ಸಮಾಯಾತೇತನೊ ಪರಿತಥೋಭಯಂ
ಹಸ್ತ ಮಾತ್ರ ಪ್ರಮಾಣೇಸದ್ವಾರಂ ಕರ್ಯಾದ್ವಿ ಚಕ್ಷಣಃ[೬೬]

ಕೋಟೆಗೆ ಪ್ರವೇಶ ಮತ್ತು ಕೋಟೆಯ ನಿರ್ಗಮನಗಳೆರಡೂ ಹೆಬ್ಬಾಗಿಲಿನ ಮೂಲಕವಾದ್ದರಿಂದ

[illegible]

ಇಂತಹ ರಚನೆಗಳಿಗೆ ಹೆಚ್ಚು ಗಮನಕೊಡಲಾಗಿದೆ. ಈ ಹೆಬ್ಬಾಗಿಲುಗಳನ್ನು ನೇರವಾಗಿ ನಿರ್ಮಿಸದೆ, ಆಂಗ್ಲ ಭಾಷೆಯ L ಆಕರದಲ್ಲೂ ಹಾಗೂ  ವಿವಿಧ ವಿನ್ಯಾಸಗಳಲ್ಲಿ ನಿರ್ಮಾಣ ಮಾಡಲಾಗಿದೆ. ಈ ಆಕಾರದಲ್ಲಿನ ಬಾಗಿಲುಗಳನ್ನು ನಿರ್ಮಿಸಿ ಶತ್ರುಗಳು ಸುಲಭವಾಗಿ ಪ್ರವೇಶಿಸದಂತೆ ಇಲ್ಲಿ ತಾಂತ್ರಿಕತೆಯನ್ನು ಉಪಯೋಗಿಸುತ್ತಾರೆ. ಈ ಬಾಗಿಲುಗಳ ಎರಡೂ ಬದಿಗಳಲ್ಲಿ ಕೋವಿಕಿಂಡಿಗಳು ಇರುತ್ತವೆ. ಚಿತ್ರದುರ್ಗದ ಕೋಟೆಯಲ್ಲಿ ಸಾಮಾನ್ಯವಾಗಿ ಎಲ್ಲೂ ನೇರವಾಗಿ ಪ್ರವೇಶಮಾಡುವ ಹೆಬ್ಬಾಗಿಲುಗಳು ಇಲ್ಲ. ಕಾಮಗೇತಿ ಬಾಗಿಲನ್ನು ದೂರದಿಂದ ನೋಡಿದರೆ ಸರಿಯಾಗಿ ಕಾಣುವುದಿಲ್ಲ. ಎರಡು ಕೋಟೆ ಗೋಡೆಗಳ ಮಧ್ಯೆ ಒಳಹಾದಿಯಿದೆ. ಈ ಬಾಗಿಲೊಳಗೆ ಪ್ರವೇಶ ಮಾಡಿದರೆ ರೋಮಾಂಚನವಾಗುವುದು. ಶತ್ರುಸೇನೆಯು ಒಳಹೊಕ್ಕಾಗ ಕೋಟೆಯ ಮೇಲೆ ನಿಂತಿರುವ ಯೋಧರ ಗುಂಡುಗಳಿಗೆ ಸಿಕ್ಕಿ ನಾಶವಾಗುತ್ತಿದ್ದರು. ಹೀಗೆ ಕಾವಲುಗಾರನ ಕೈಗೆ ಸುಲಭವಾಗಿ ಸಿಕ್ಕಿಬೀಳುವಂತಾಗಲು ಈ ತೆರನಾದ ವಕ್ರವಾದ ಪ್ರವೇಶದ್ವಾರಗಳನ್ನು ಕೋಟೆಗಳಲ್ಲಿ ನಿರ್ಮಿಸಲಾಗುತ್ತಿತ್ತು. ಇಂತಹ ಹೆಬ್ಬಾಗಿಲುಗಳಿಗೆ ಭಾರಿ ದಪ್ಪನಾದ ಮುಳ್ಳುಗಸೆಯಿಂದ ಕೂಡಿದ ಕದಗಳಿದ್ದವೆಂದು ತಿಳಿದುಬರುವುದು. ಇಂತಹ ಕದಗಳನ್ನು ಆನೆಗಳಿಂದ ನೂಕಿಸಿದಾಗಲೇ ಮುಚ್ಚಲಿಕ್ಕೆ ಆಗುವಂತೆ ಹಾಗೂ ಭದ್ರವಾದ ಬಾಗಿಲು ಮತ್ತು ಅಗಳಿಗಳು ಕೋಟೆಯಲ್ಲಿದ್ದವೆಂದು ಮೋಹನತರಂಗಿಣಿಯಲ್ಲಿ ಉಲ್ಲೇಖಿಸಲಾಗಿದೆ.[೭೭] ಇಂತಹ ಬಾಗಿಲುಗಳನ್ನು ಕಾವಲು ಕಾಯುವವರು ಕೋಟೆಯ ರಕ್ಷಣೆಗೆಂದೇ ಟೊಂಕಕಟ್ಟಿ ನಿಂತಿರಬೇಕಾಗಿರುತ್ತಿತ್ತು. ಇವರು ಹಗಲು ಇರುಳೆನ್ನದೆ ಸರದಿಯ ಮೇಲೆ ಕೋಟೆಯ ಬಾಗಿಲನ್ನು ಕಾಯಬೇಕಾಗುತ್ತಿತ್ತು. ಅಲ್ಲದೆ ಇವರಿಗೆ ವಿಶೇಷ ತರಬೇತಿಯನ್ನು ಕೊಡಲಾಗುತ್ತಿತ್ತು. ಒಂದು ವೇಳೆ ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದರೆ ಉಗ್ರವಾದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಜಿಲ್ಲೆಯ ಮೊಳಕಾಲ್ಮೂರು ಕೋಟೆಯ ಬಸವನ ಬಾಗಿಲ ಬಳಿಯಿರುವ ಶಾಸನವೊಂದು ಈ ಕುರಿತು, "ಕೋಟೆಯ ಬಾಗಿಲು ಕಾಯುವವನು ತಪ್ಪೆಸಗಿದರೆ ಹೊಟ್ಟೆ ಬಗಿಸಿ ತಲೆಸೂಲಕ್ಕೆ ಹಾಕಲಾಗುತ್ತದೆ" ಎಂದು ಹೇಳಿದೆ.[೭೮] ಹೆಬ್ಬಾಗಿಲುಗಳ ಪಕ್ಕ ದಿಡ್ಡಿ ಬಾಗಿಲುಗಳು ಇರುವುದನ್ನು ಕಾಣಬಹುದು. ಇವುಗಳಿಂದ ಸಂಜೆಯ ವೇಳೆ ಕೋಟೆಯ ಒಳಗೆ ಪ್ರವೇಶ ಮಾಡುವವರಿಗೆ ಮಾತ್ರ ಈ ದಿಡ್ಡಿ ಬಾಗಿಲಿನಿಂದ ಬಿಡಲಾಗುತ್ತಿತ್ತು. ಒಟ್ಟಾರೆ ಕೋಟೆಯೊಳಗಿನ ಜನರ ಬದುಕಿನ ಅಳಿವು-ಉಳಿವು ಹೆಬ್ಬಾಗಿಲನ ಭದ್ರತೆಯನ್ನೇ ಅವಲಂಬಿಸಿರುತ್ತಿತ್ತು. ಶತ್ರುಗಳ ಆಕ್ರಮಣದ ಸೂಚನೆ ದೊರೆತೊಡನೆ ಹೆಬ್ಬಾಗಿಲನ್ನು ಸರಿಪಡಿಸುತ್ತಿದ್ದರು. ಮಾತ್ರವಲ್ಲದೆ, ರಕ್ಷಣೆಯ ಒನ್ನೆಲೆಯಲ್ಲಿ ಅದನ್ನು ವಿಶೇಷ ಕ್ರಮಬದ್ಧಗೊಳಿಸುತ್ತಿದ್ದರು.

೩.೯.೮ ಬತೇರಿಗಳು

ಶತ್ರುಗಳ ಸುಳಿವನ್ನು ದೂರದಿಂದಲೇ ವೀಕ್ಷಿಸಲು ಅನುಕೂಲವಾಗುವಂತೆ ನಿರ್ಮಿತಗೊಂಡ ಕಟ್ಟಡಗಳೇ ಬತೇರಿಗಳು. ಇವುಗಳನ್ನು ಕೋಟೆ ಗೋಡೆಯನ್ನು ಕಟ್ಟಲು ಸಾಧ್ಯವಾದಂತಹ ದುರ್ಗಮಸ್ಥಳಗಳಲ್ಲಿ ಎತ್ತರ ಹಾಗೂ ವೃತ್ತಾಕಾರವಾಗಿ ನಿರ್ಮಿಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಇವು ಎಲ್ಲಾ ಕೋಟೆಗಳಲ್ಲೂ ಕಂಡುಬರುತ್ತಿದ್ದು, ಇವುಗಳನ್ನು ಹೆಚ್ಚಾಗಿ ಗಿರಿದುರ್ಗಗಳಲ್ಲಿ ನೋಡಬಹುದು. ಗಿರಿದುರ್ಗಗಳಲ್ಲಿ ಬೆಟ್ಟಗುಡ್ಡಗಳ ಮಧ್ಯೆ ಬತೇರಿಗಳನ್ನು ಸ್ಥಾಪಿಸಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಪರ್ಕ ಕಲ್ಪಿಸಲಾಗಿದೆ. ಇಂತಹ ಬತೇರಿಗಳನ್ನು ಕೇವಲ ಗಿರಿದುರ್ಗಗಳಲ್ಲದೆ, ಗಡಿದುರ್ಗಗಳಲ್ಲೂ ಈ ಗಡಿದುರ್ಗದಿಂದ ರಾಜಧಾನಿಗೆ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಮಧ್ಯೆ ಮಧ್ಯೆ ವೃತ್ತಾಕಾರದ ಕನಿಷ್ಠ ೪೦-೬೦ ಅಡಿಯ ಎತ್ತರದವರೆಗೆ ಬತೇರಿಗಳನ್ನು ನಿರ್ಮಿಸಿರುವರು. ಉದಾ: ಲಕ್ಕಿಹಳ್ಳಿ, ಹಿರೇಕಂದವಾಡಿ, ಕಣಜನಹಳ್ಳಿ, ವೀರಮದಕೇರಿಪುರ, ಪರ್ತೇನಹಳ್ಳಿ, ಕೃಷ್ಣರಾಜಪುರ, ಮೇಗಳಕಣಿವೆ, ಕೆಳಗಣಕಣಿವೆ, ಭೀಮಸಾಗರ, ಮೆಚ್ರೆ ಮುಂತಾದೆಡೆ ಇಂತಹ ಬತೇರಿಗಳಿವೆ. ಇವುಗಳ ಮೇಲಿಂದ ಹಗಲು ಮತ್ತು ರಾತ್ರಿ ವೇಳೆಯಲ್ಲೂ ರಾಜಧಾನಿಯೊಂದಿಗೆ ಸಂಪರ್ಕ ಸಾಧಿಸಲಾಗುತ್ತದೆ. ಹಗಲುವೇಳೆಯಲ್ಲಿ ವಿವಿಧ ಬಣ್ಣದ ಬಾವುಟಗಳನ್ನು ಪ್ರದರ್ಶಿಸಿದರೆ, ರಾತ್ರಿವೇಳೆ ವಿವಿಧ ಬಣ್ಣದ ಬೆಂಕಿಜ್ವಾಲೆಯನ್ನು ಹಾಕುವುದರೊಂದಿಗೆ ರಾಜಧಾನಿಗಳಿಗೆ ಅಪಾಯದ ಸಂಕೇತಗಳನ್ನು ಕೊಡುತ್ತಿದ್ದರು. ಈ ಸ್ಥಳಗಳಲ್ಲಿ ರಾಜರು ಶಸ್ತ್ರಸಜ್ಜಿತ ಸೈನಿಕಪಡೆಯೊಂದನ್ನು ಇಟ್ಟಿರುತ್ತಿದ್ದರು. ಇವುಗಳ ಕಾರ್ಯವೈಖರಿಗಳನ್ನು ಅರಿಯಲು ಹಾಗೂ ತುರ್ತು ವೇಳೆಯಲ್ಲಿ ಅವುಗಳನ್ನು ಬೇಗ ಗುರುತಿಸಲು ಸ್ಥಳೀಯವಾಗಿ ಅವುಗಳಿಗೆ ಹೆಸರುಗಳನ್ನು ಕೊಡಲಾಗಿರುತ್ತಿತ್ತು. ಕಹಳೆಬತೇರಿ, ಝುಂಡಾಬತೇರಿ, ರಣಬತೇರಿ ಇತ್ಯಾದಿ ಹೆಸರುಗಳಿವೆ. ಈ ಬತೇರಿಯ ಕರ್ತವ್ಯಗಳನ್ನು ಆಯಾಯ ಹೆಸರುಗಳಿಂದಲೇ ತಿಳಿಯಬಹುದು(ಇವುಗಳ ಉಪಯೋಗವನ್ನು ಮುಂದಿನ ಅಧ್ಯಯನದಲ್ಲಿ ಚರ್ಚಿಸಲಾಗಿದೆ).

೩.೯.೯ ಮುಗಿಲಟ್ಟಣೆ(ಅಟ್ಟಾಲಕ)

ಕೋಟೆಯ ಗೋಡೆಯ ಮೇಲೆ ಸ್ವಲ್ಪ ಎತ್ತರವಾಗಿ ನಿಂತ ವೇದಿಕೆಗೆ 'ಅಟ್ಟಾಲಕ'ವೆಂದು ಹೆಸರು. ಕನಕದಾಸರ 'ಮೋಹನತರಂಗಿಣಿ'ಯಲ್ಲಿ "ಬೆಟ್ಟವ ಕಿತ್ತು ತಂದಿರಿಸಿದಂದದಿ ಮುಗಿಲಟ್ಟಳೆ" ಎಂಬ ಮಾತುಗಳಲ್ಲಿ ಅಟ್ಟಣೆ ಸಾಕಷ್ಟು ಎತ್ತರವಾಗಿತ್ತೆಂಬ ಅಂಶವಿದೆ.[೬೯] ಇಂತಹ ಎತ್ತರವಾದ ಅಟ್ಟಣೆಗಳ

ನಿರ್ಮಾಣಕ್ಕೆ ನಿರ್ದಿಷ್ಟ ಕಾರಣವಿತ್ತು. ವೈರಿಗಳು ಬರುವ ಸುಳಿವನ್ನು ಅಟ್ಟಣೆಯ ಮೇಲೆ ನಿಂತು ದೂರದಿಂದಲೇ ಕಂಡುಹಿಡಿಯಬಹುದು. ಈ ಉದ್ದೇಶದಿಂದ ಕಾವಲುಗಾರರನ್ನು ನೇಮಿಸಲಾಗುತ್ತಿತ್ತು. ಅವರು ಕೋಟೆ ಗೋಡೆಯ ಯೋಧರಿಗೆ ಲಗ್ಗೆಯ ಬಗ್ಗೆ ಮುನಸ್ಸೂಚನೆ ನೀಡುವುದರಿಂದ ಯೋಧರು ಯುದ್ಧಕ್ಕೆ ಮುಂದಾಗಿ ಸಿದ್ಧರಿರುತ್ತಿದ್ದರು. ಅವರು ತಮ್ಮ ಕರ್ತವ್ಯದಲ್ಲಿ ತಪ್ಪಿದರೆ, ಉಘ್ರ ಶಿಕ್ಷೆ ವಿಧಿಸಲಾಗುತ್ತಿತ್ತು ಎಂಬ ವಿಷಯ ಮೊಳಕಾಲ್ಮೂರಿನ ಶಾಸನವೊಂದರಲ್ಲಿದೆ.[೮೦] ಈ ಅಟ್ಟಾಲಕಗಳನ್ನು ಕಾವಲಿನ ಉದ್ದೇಶವಲ್ಲದೇ ಯುದ್ಧಸಾಮಗ್ರಿಗಳನ್ನು ಇಟ್ಟುಕೊಳ್ಳಲು ಇವುಗಳನ್ನು ನಿರ್ಮಿಸುತ್ತಿದ್ದರು. ನಾಗಚಂದ್ರನ ಪಂಪರಾಮಾಯಣದಲ್ಲಿ 'ವಿವಿಧಟ್ಟಾಲಕ' ಎಂಬ ಪದವನ್ನು ಬಳಸಲಾಗಿದೆ.[೮೧]

ನಾಗಚಂದ್ರನ ಹೇಳಿಕೆಯನ್ನು ಗಮನಿಸಿದರೆ ಕೋಟೆಯ ಗೋಡೆಯ ಮೇಲೆ ಇಂತಹ ಅಟ್ಟಣೆಗಳು ಒಂದಕ್ಕಿಂತ ಹೆಚ್ಚಿರುವಂತೆ ಭಾಸವಾಗಬಹುದು. ಕೋಟೆಯು ವಿಸ್ತಾರವಾಗಿರುವುದರಿಂದ ಹಾಗೂ ಕೋಟೆಯೊಳಗೆ ಅನೇಕ ಗೋಡೆಗಳು ಇರುವುದರಿಂದ ಅಟ್ಟಣೆಗಳು ಹೆಚ್ಚಾಗಿರುವ ಸಾಧ್ಯತೆಯಿದೆ. ಇವು ವೈರಿಯ ಸುಳಿವನ್ನು ಗುರುತಿಸುವುದು ಮಾತ್ರವಲ್ಲದೆ ಕೋಟೆ ಕಾಳಗದ ಸಂದರ್ಭದಲ್ಲಿಯೂ ಬಳಕೆ ಯಾಗುತ್ತಿದ್ದವು. ಇಂತಹ ಅಟ್ಟಳೆಯ ಮೇಲೆ ನಿಂತು ಇಬ್ಬರು ಬಾಣ ಬಿಡುತ್ತಿರುವ ಚಿತ್ರ ಶಿವಮೊಗ್ಗ ಜಿಲ್ಲೆಯ ಬಂದಳಿಕೆಯ ವೀರಗಲ್ಲೊಂದರಲ್ಲಿದೆ. ಅಟ್ಟಣೆ ಮೇಲೆ ನಿಂತುಕೊಳ್ಳಲು ಅನುಕೂಲವಾಗುವಂತೆ ಹಲಗೆಯನ್ನು ಹಾಕುವಂತೆ ತೋರಿರುವುದು, ಎಡಗಾಲನ್ನು ಮುಂದಿಟ್ಟು ಕಿವಿಯವರೆಗೂ ಬಾಣವನ್ನು ಎಳೆದುಬಿಡುವ ಚಿತ್ರ ಈ ವೀರಗಲ್ಲಿನಲ್ಲಿ ಅಪೂರ್ವವಾಗಿ ಮೂಡಿದೆ. ಯುದ್ಧದಲ್ಲಿ ವೈರಿಗಳಿಂದ ಅಟ್ಟಣೆಯು ಆಕ್ರಮಣಕ್ಕೆ ಗುರಿಯಾಗಿ ಕೆಲ ಸಂದರ್ಭ ಮುರಿದುಹೋಗುತ್ತಿತ್ತು. ಇಂತಹ ಅಟ್ಟಣೆಗಳ ಮೇಲೆ ಧ್ವಜಗಳು ಹಾರಾಡುತ್ತಿದ್ದವು.[೮೨] ಇಂತಹ ಭಾವುಟವು ಯಾವುದೇ ಅಡತಡೆಯಿಲ್ಲದೆ ಗಾಳಿಗೆ ಹಾರಾಡುತ್ತಿತ್ತು. ಇದು ರಾಜ್ಯದ ಜನತೆಯ ಆತ್ಮವಿಶ್ವಾಸದ, ಸ್ವಾತಂತ್ರ್ಯದ ಪ್ರತೀಕ. ಆದ್ದರಿಂದ ಯುದ್ಧಸನ್ನದ್ಧ ಕೋಟೆಯಲ್ಲಿ ಧ್ವಜಾಳಿ,[೮೩] ಧ್ವಜಕೇತನಗಳು[೮೪] ಇರುತ್ತಿದ್ದವು. ಇವು ಅತ್ಯಂತ ಎತ್ತರದಲ್ಲಿ ಬಹುದೂರದವರೆಗೆ ಕಾಣುವಂತೆ ಹಾರಾಡುತ್ತಿದ್ದವು. ಅಟ್ಟಳೆಯ ಕಂಬಕ್ಕೆ ಧ್ವಜದಂಡವನ್ನು ಕಟ್ಟುತ್ತಿದ್ದರು. ಯುದ್ಧದ ಮುನ್ನಾ ದಿನ ಕೋಟೆಯ ಮೇಲಿನ ಈ ಪವಿತ್ರ ಧ್ವಜವನ್ನು ಪೂಜಿಸುವ ಕ್ರಮವಿತ್ತು. ಯುದ್ಧದ ಅಟ್ಟಣೆಯನ್ನು ಪೂಜಿಸಿ ಪತಾಕೆಯನ್ನು ಎತ್ತಿ ನಿಲ್ಲಿಸುತ್ತಿದ್ದಿರಬೇಕು. ಹಲವು ಅಟ್ಟಣೆಗಳಿರುವುದರಿಂದ ಭಾವುಟಗಳು ಅಟ್ಟಳೆಗೊಂದರಂತೆ ಇದ್ದಿರಬಹುದು. ಗಿರಿಜಾಕಲ್ಯಾಣದಲ್ಲಿ ಒಂದಕ್ಕಿಂತ ಹೆಚ್ಚು ಭಾವುಟಗಳಿದ್ದ ಬಗ್ಗೆ ಸೂಚನೆಯಿದೆ. ಯುದ್ಧ ಸಂದರ್ಭದಲ್ಲಿ ಅಟ್ಟಳೆಯ ಮೇಲೆ ನಿಂತು ಹೋರಾಡುತ್ತಿದ್ದ ಯೋಧರು, ಈ ಧ್ವಜಗಳ ರಕ್ಷಣೆಯನ್ನು ಮಾಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.[೮೫]

ಇಷ್ಟೇ ಅಲ್ಲದೆ ಕೋಟೆಯ ಅಂಗಭಾಗಗಳಲ್ಲಿ ಕುದುರುಗಂಡಿ, ಚೇರಕಂಡಿಗಳು ಸಹ ಪ್ರಮುಖವಾಗಿವೆ. ಶತ್ರುಗಳು ಮುತ್ತಿಗೆ ಹಾಕಿದಾಗ ಕೋಟೆಯ ಒಳಗಿನವರು ಕುದುರೆಗಳನ್ನು ಹೊರಕ್ಕೆ ತಂದು ಅಗಳಿನಲ್ಲಿ ನೀರು ಕುಡಿಸಲಿಕ್ಕೆಂದೇ ಕೋಟೆಯ ಇಕ್ಕಟ್ಟಿನ ಸ್ಥಳದಲ್ಲಿ ಮಾಡಿದ ಚಿಕ್ಕ ಬಾಗಿಲುಗಳಿಗೆ 'ಕುದುರೆಗಂಡಿ' ಎಂದು ಕರೆಯಲಾಗಿದೆ. ಸಂದರ್ಭಾನುಸಾರ ಶತ್ರುಗಳಿಗೆ ಕಾಣದಂತೆ ಕಳ್ಳತನದಿಂದ ಪಾರಾಗಿ ಹೋಗುವುದಕ್ಕೆ ರಚಿಸಿದ ಗುಪ್ತದ್ವಾರಗಳೇ 'ಚೋರಕಂಡಿ'ಗಳು. ಇಂತಹ ಗುಪ್ತದ್ವಾರಗಳು ನೆಲದೊಳಗಿನಿಂದ ಇದ್ದರೆ ಅವುಗಳನ್ನು 'ಸುರಂಗ' ಎಂದು, 'ಬಲದ್ವಾರ' ಎಂದು ಕರೆಯುತ್ತಿದ್ದರು.

೩.೧೦ ಕೋಟೆಗಳ ವಿನ್ಯಾಸ

ಕರ್ನಾಟಕದ ಕೋಟೆಗಳು ವಿವಿಧ ಬಗೆಯ ತಳವಿನ್ಯಾಸ ಹೊಂದಿವೆ. ಅವುಗಳಲ್ಲಿ ವೃತ್ತಾಕಾರ ಹಾಗೂ ಆಯಾತಾಕಾರದ ತಳವಿನ್ಯಾಸವುಳ್ಳ ಕೋಟೆಗಳು ಅಧಿಕ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಕೋಟೆಗಳ ತಲವಿನ್ಯಾಸಗಳನ್ನು ಮೂರು ರೀತಿಯ ಕೋಟೆಯಲ್ಲಿ ವಿಭಜಿಸಿದ್ದಾನೆ[೮೬]:

೧. ವೃತ್ತ; ವರ್ತುಲಾಕಾರ

೨. ದೀರ್ಘಚತುಸ್ರ; ಆಯತಾಕಾರ

೩. ಚತುರಸ್ರ; ಚೌಕಾಕಾರ

ಡಾ.ಚನ್ನಬಸಪ್ಪ ಎಸ್. ಪಾಟೀಲರು ಕರ್ನಾಟಕದ ಪ್ರಮುಖ ಕೋಟೆಗಳ ಬಗ್ಗೆ ಅಧ್ಯಯನ ನಡೆಸಿ ವಿವಿಧ ತಳವಿನ್ಯಾಸಗಳನ್ನು ಉದಾಹರಣೆ ಸಹಿತ ನೀಡಿದ್ದಾರೆ[೮೭] :

೧. ವೃತ್ತಾಕಾರ: ಬಿಜಾಪುರ

೨. ಆಯತಾಕಾರ: ಉಚ್ಚಂಗಿದುರ್ಗ, ಹರಪ್ಪನಹಳ್ಳಿ

೩. ಚೌಕಾಕಾರ: ಮಾಗಡಿ ಬೆಂಗಳೂರು

೪. ಕುದುರೆ ಲಾಳಾಕಾರ: ದೇವನಹಳ್ಳಿ, ಬೆಂಗಳೂರು

೫. ನಕ್ಷತ್ರಾಕಾರ: ಮಂಜರಾಬಾದ್

ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸಗುಡ್ಡದ ಕೋಟೆ ಆಯತಾಕಾರದ ಕೋಟೆಯಾದರೆ, ಬೂದಿಹಾಳ್ ಕೋಟೆ ವೃತ್ತಾಕಾರದ ಕೋಟೆಗೆ ಉದಾಹರಣೆಯಾಗಿವೆ. ಉಳಿದಂತೆ ಬೆಟ್ಟಗುಡ್ಡಗಳನ್ನು ಬಳಸಿಕೊಂಡು ಅನಿಯಮಿತಾಕಾರದ ಕೋಟೆಗಳೇ ಹೆಚ್ಚಾಗಿ ಕಂಡುಬಂದಿವೆ.

[illegible]

೩.೧೧ ಕೋಟಾಚಕ್ರಶಾಸ್ತ್ರ

ಕೋಟಾಚಕ್ರಶಾಸ್ತ್ರವೆಂದರೆ ಕೋಟೆಗಳ ಮೇಲೆ ಆಕ್ರಮಣ ಮಾಡಿದಾಗ ಆಗುವ ಜಯಪಾಜಯಗಳನ್ನು ಮೊದಲೇ ಖಚಿತಪಡಿಸಿಕೊಳ್ಳಲು ಉಪಯೋಗಿಸುವ ಶಾಸ್ತ್ರ. ಇಲ್ಲಿ ಎಂಟು ವಿಧದ ದುರ್ಗಗಳ ವರ್ಣನೆ ಮತ್ತು ಅವುಗಳನ್ನು ಆಕ್ರಮಣ ಮಾಡಿ ವಶಪಡಿಸಿಕೊಳ್ಳುವ ವಿಧಾನವನ್ನು ಕೆಳದಿ ಬಸವರಾಜು ತನ್ನ ಶಿವತತ್ವರತ್ನಾಕರದಲ್ಲಿ ವಿವರಿಸಿದ್ದಾನೆ.[೮೮]

ಯುದ್ಧವನ್ನು ಎಲ್ಲಾ ಕಾಲಗಳಲ್ಲಿ ಮಾಡುವುದು ಸಾಧ್ಯವಿಲ್ಲ. ಇದಕ್ಕೆ ಕಾರಣ ಪ್ರಾಕೃತಿಕ ವೈಪರೀತ್ಯಗಳಿರುವುದು. ಯುದ್ಧಗಳನ್ನು ಯಾವ ಯಾವ ಕಾಲಗಳಲ್ಲಿ ಮಾಡಬೇಕೆಂಬುದು ಪ್ರಾಚೀನ ಕಾಲದಿಂದಲೂ ಚರ್ಚಿತವಾದ ಸಂಗತಿ. ಶುಕ್ರನೀತಿಸಾರವು ಶರತ್, ಹೇಮಂತ ಮತ್ತು ಶಿಶಿರ ಕಾಲಗಳು ಯುದ್ಧ ಕಾರ್ಯಾಚರಣೆಗೆ ಅತ್ಯುತ್ತಮವೆಂದು, ವಸಂತವು ಮಧ್ಯಮವೆಂದು, ಗ್ರೀಷ್ಮವು ಅಧಮವೆಂದೂ ಹೇಳಿದೆ. ಮಳೆಗಾಲದಲ್ಲಿ ಯುದ್ಧವನ್ನು ಮಾಡಕೂಡದೆಂದೂ ಅದು ಹೇಳಿದೆ. ಸೂಕ್ತಿ ಸುಧಾರ್ಣವದಲ್ಲಿ "ಶರದಂ ಯಾತ್ರೆಗೆ ಲೇಸು" ಎಂದಿರುವುದು ಯುದ್ಧಕ್ಕೆ ಬಹುಯೋಗ್ಯ ಕಾಲವಾಗಿದ್ದುದನ್ನು ಸೂಚಿಸುತ್ತದೆ. ಮನುಚರಿತವು, "ರಾಜನು ದಂಡೆಯಾತ್ರೆ ಕೈಗೊಳ್ಳಲು ಮಾರ್ಗಶಿರ ಅಥವಾ ಪಾಲ್ಗುಣ ಮತ್ತು ಚೈತ್ರ ಮಾಸಗಳು ಉತ್ತಮವೆಂದು, ಈ ಕಾಲದಲ್ಲಿ ಆಹಾರ ಸಂಗ್ರಹಣೆ, ಸೇನೆಯ ಸಂಘಟನೆ ಹಾಗೂ ಪ್ರಯಾಣ ಮಾಡಲು ಅನುಕೂಲಕರ ವಾತಾವರಣ ಇರುತ್ತದೆ ಎಂದು ಹೇಳಿದೆ. ಯುದ್ಧಗಳಿಗೆ ನಿಗದಿಪಡಿಸಿರುವ ಕಾಲಗಳಂತೆ ಸೈನ್ಯದೊಂದಿಗೆ ರಾಜರು ಯುದ್ಧಕ್ಕೆ ಹೊರಡುವಾಗ ಜೋತಿಷಿ ಅಥವಾ ಜೋಯಿಸರಿಂದ ಶುಭಲಗ್ನ-ಮುಹೂರ್ತಗಳನ್ನು ಕೇಳುವ ಪದ್ಧತಿಯೂ ಇತ್ತು ಎಂದು ಹೇಳಲಾಗಿದೆ.[೮೯]

ಕೋಟೆ ರಾಜರ ಹಾಗೂ ನಾಗರೀಕರ ಜೀವನಾಡಿಯಾಗಿದ್ದರಿಂದ ಬರಲಿರುವ ಯುದ್ಧದಲ್ಲಿ ವಿಜಯ ಒದಗಿಸುವಂತೆ ಪ್ರಾರ್ಥಿಸಿ ಯುದ್ಧದ ಮೊದಲದಿನ ಕೋಟೆಕೊತ್ತಲ, ಅಟ್ಟಳೆ, ಪತಾಕೆಗಳನ್ನು ಪೂಜಿಸುತ್ತಿದ್ದರು. ಹೂವುಗಂಧ, ಕುಂಕುಮಸಹಿತ ಈ ಪೂಜೆ ನಡೆಯುತ್ತಿತ್ತು. ಪೂಜೆಯ ನಂತರ ರಾಷ್ಟ್ರದ ಶೌರ್ಯ, ಸ್ವಾತಂತ್ರ್ಯ, ಆತ್ಮಾಭಿಮಾನಗಳ ಪ್ರತೀಕವಾದ ಧ್ವಜವನ್ನು ಎತ್ತಿ ನಿಲ್ಲಿಸುತ್ತಿದ್ದರು.[೯೦]

ಕೋಟೆಯನ್ನು ಶತ್ರುಗಳು ಎಲ್ಲಾ ಕಾಲಗಳಲ್ಲಿ ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ಅದಕ್ಕೆ ಕಾಲ, ಮುಹೂರ್ತ ಮತ್ತು ಗಳಿಗೆಗಳು ಇರುತ್ತವೆಂದು ಶುಕ್ರನೀತಿಸಾರದಲ್ಲಿ ಹೇಳಲಾಗಿದೆ. ಕನಕದಾಸರು ತಮ್ಮ ಮೋಹನತರಂಗಿಣಿಯಲ್ಲಿ ವರ್ಣಿಸಿರುವಂತೆ ಪಂಡಿತ ಪಂಚಾಂಗಿಗಳು ಆತನ ಬಳಿಯಿದ್ದರೆಂದು ವರ್ಣಿಸಲಾಗಿದೆ.[೯೧]

[illegible]

ಕೆಲವು ವೇಳೆ ಪ್ರಕೃತಿಯಲ್ಲಿನ ಶಕುನಗಳನ್ನು ನಂಬುತ್ತಿದ್ದರು. ರಾಜರು ಯುದ್ಧಕ್ಕೆ ಹೊರಡುವಾಗ ಅವರ ಕುಲದೇವರಿಗೆ ಹೋಗಿ ಆಶೀರ್ವಾದವನ್ನು ಶುಭಲಗ್ನದಲ್ಲಿ ಪಡೆದುದನ್ನು ಪದ್ಯವೊಂದರಲ್ಲಿ ನೋಡಬಹುದು.

"ದೇವತಾರ್ಚನೆಯ ನೊಸೆದು ಮಾಡಿ ಶಸ್ತ್ರಾದಿ
ದೇವಿಯ ಬಳಗೊಂಡವನಿಯ
ದೇವರಾಶೀರ್ವಚನವ ನಾಲಿಸಿ ರುದ್ರ
ದೇವನುತ್ತಮ ಲಗ್ನದೊಳು"[೯೭]

ಹೀಗೆ ರಾಜರು ಯುದ್ಧಕ್ಕೆ ಹೊರಡುವ ಮುನ್ನ ಮುಹೂರ್ತಗಳನ್ನು ಗೊತ್ತುಪಡಿಸುವ ಹಾಗೂ ದೇವಾನುದೇವತೆಗಳಿಗೆ ಪ್ರಾಣಿಪಕ್ಷಿಗಳನ್ನು ಬಲಿ ಕೊಡುವ ಪದ್ಧತಿ ಮೇಲಿನ ಅಂಶಗಳಿಂದ ದೃಢವಾಗುತ್ತದೆ.

೩.೧೨ ಕೋಟೆಯ ಕಾಳಗ

ಕರ್ನಾಟಕದ ಕೋಟೆಯ ಕಾಳಗದ ಕುರಿತು ಅನೇಕ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವರ್ಣಿಸಲಾಗಿದೆ. ಕೋಟೆಗೆ ಲಗ್ಗೆ ಹಾಕುವ ಪಾಳೆಯ ಸಿದ್ಧತೆಗೂ ಅದನ್ನು ಎದುರಿಸಿ ಕೋಟೆಯನ್ನು ಉಳಿಸಿಕೊಳ್ಳಲೆಂದು ಹೋರಾಡುವವರ ತಯಾರಿಗೂ ವ್ಯತ್ಯಾಸವಿದೆ. ಒಂದು ಆಕ್ರಮಣವಾದರೆ ಇನ್ನೊಂದು ಸಂರಕ್ಷಣೆ. ಒಬ್ಬರು ಉಳಿವಿಕೆಗಾಗಿ ಹೋರಾಟ ನಡೆಸಿದರೆ ಮತ್ತೊಬ್ಬರು ಆಕ್ರಮಣ ಮಾಡುವ ದೃಷ್ಟಿಯಿಂದ ಹೋರಾಟ ಮಾಡುತ್ತಿದ್ದರು. ಇವರಿಬ್ಬರಿಗೂ ಅಗತ್ಯವಾಗಿದ್ದು ಕೋಟೆಯ ಕಾಳಗಕ್ಕಿಂತ ಮುಂಚೆ ಪೂರ್ವಸಿದ್ಧತೆ ಬಹಳ ಮುಖ್ಯವಾಗಿತ್ತು. ಕೋಟೆ ಕಾಳಗ ಪ್ರಾರಂಭವಾಗುವುದಕ್ಕಿಂತ ಮುಂಚೆ ಅನೇಕ ತಂತ್ರಗಳನ್ನು ಬಳಸಿ ಇಬ್ಬರು ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದರು. ಹಾಗೆಯೇ ಶತ್ರು ದಾಳಿ ಮಾಡುತ್ತಿದ್ದರೆಂಬ ಸುದ್ದಿ ತಿಳಿದಕೂಡಲೇ ಕೋಟೆಯನ್ನು ಸಿದ್ಧಗೊಳಿಸಿ ರಾತ್ರೋರಾತ್ರಿ ಕೋಟೆಯ ಭಾಗಗಳನ್ನು ದುರಸ್ತಿ ಮತ್ತು ಮತ್ತಿತರ ಕಾರ್ಯಗಳನ್ನು ಮಾಡುತ್ತಿದ್ದರು. ಚಿತ್ರದುರ್ಗದ ಮೇಲೆ ಹೈದರಾಲಿಯು ಯುದ್ಧಕ್ಕೆ ಬಂದಾಗ ಫಿರಂಗಿಗಳಿಂದ ಕೋಟೆಯಗೋಡೆಯನ್ನು ವಿರೂಪಗೊಳಿಸಿದಾಗ ಚಿತ್ರದುರ್ಗದವರು ರಾತ್ರೋರಾತ್ರಿ ಕೋಟೆಯ ಗೋಡೆಯನ್ನು ಕಟ್ಟಿ ಸರಿಪಡಿಸಿದ್ದರು ಎಂಬ ಮಾಹಿತಿಯನ್ನು ಎಂ.ಎಸ್.ಪುಟ್ಟಣ್ಣ ಅವರು ಚಿತ್ರದುರ್ಗ ಪಾಳೆಯಗಾರರು ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೆ, ಶತ್ರುಪಡೆಯು ದಂಡೆತ್ತಿ ಬರುವುದೆಂಬ ಶಂಕೆಯಿಂದ ಕಂಪಿಲರಾಯನು ತನ್ನ ದಂಡನಾಯಕನಾದ ಬೈಚಪ್ಪನನ್ನು ಕುಮ್ಮಟದುರ್ಗದ ರಕ್ಷಣೆಗೆ ನೇಮಿಸುತ್ತಾನೆ. ಬೈಚಪ್ಪ ದಂಡನಾಯಕನು ಕೋಟೆಯನ್ನು ಸಿದ್ಧಗೊಳಿಸಿದ ಬಗೆಯನ್ನು ರಾಮನಾಥಚರಿತದಲ್ಲಿ,

“ದಳವಾಡಸಹಿತ ಬೈಚಪ್ಪ ದುರ್ಗವ ಹೊಕ್ಕು
ತಳವದದರ ಬಲಿಕೆಯನು
ಬಳಸಿ ಬಳಸಿ ನೋಡಿ ದುರ್ಗ ಸೌರಣೆಯನಂ
ದಲಸದೆ ಮಿಗೆ ಮಾಡಿಸಿದನು
ಅಗಳಾಳ್ವೇರಿ ಕೋಟೆ ಕೊತ್ತಳ ನೆಲ ದಿಡ್ಡಿ
ಮುಗಿಲಟ್ಟಳೆ ನೆಲಗುಮ್ಮ
ಪ್ರಗಿಸಿ ಕೊಯೊಳಗಾಗಿಸಿಕೊಂಬ ಪಲಪುಲಿ
ಮೊಗಗಳನನು ಮಾಡಿಸಿದನು” ಎಂದು ಹೇಳಿದರೆ ಸಿದ್ಧಗೊಂಡ ಕೋಟೆಯನ್ನು,

“ಮುಂದಕೆ ನಡಯಿಸಿ ಪುಲಿಮೊಗವಿಕ್ಕುವ
ಬಂದರ ಕೂಡೆ ದೂರದೊಳು
ನಿಂದಿರಿದಾಡುವ ಬಲುಭದ್ರವೆಸಗುವ
ರಿಂದ ಕಣ್ಣೆಸೆದುದಾ ದುರ್ಗ”ವೆಂದು ನಂಜುಂಡ ಕವಿ ವರ್ಣಿಸಿದ್ದಾನೆ.[೯೩]

ಕೋಟೆಯ ಮುತ್ತಿಗೆಗೆ ಶತ್ರುಗಳು ಬರುವ ಮುನ್ನ ಕೇವಲ ಕೋಟೆಗಳನ್ನು ಭದ್ರಪಡಿಸುತ್ತಿದ್ದುದು ಮಾತ್ರವಲ್ಲದೆ, ಅನೇಕ ಬಗೆಯ ಪರಿಕರಗಳನ್ನು ಸಜ್ಜುಗೊಳಿಸಿರುವುದನ್ನು ನೋಡಬಹುದಾಗಿದೆ. ಕೋಟೆಯ ಕಾಳಗದಲ್ಲಿ ಬಳಸುತ್ತಿದ್ದ ಪ್ರಮುಖ ಆಯುಧಗಳನ್ನು ಕಾವ್ಯಗಳಲ್ಲಿ ಉಲ್ಲೇಖಿಸಲಾಗಿದೆ. ಡೆಂಕಣಿ, ವೀರಸೇತು, ನಡೆಸಾರು, ಬದ್ಧರಗೆಗ್ಗೆ, ಗುಮ್ಮಪಡಿಗೋಂಟೆ, ಮುಂತಾದ ಬಹುಕೋಟಾ ಯಂತ್ರಗಳನ್ನಲ್ಲದೆ ಕಲ್ಲುಗುಂಡುಗಳು, ಕಾಸಿದಂಬಲಿ, ಬಾಸಣಿಸಿದ ಹಾವು, ಪೊಣಿಸಿದ ಗಾಣ, ಪೊಣಿಸಿದಕೊಂತ, ಸುಡುವ ಎಣ್ಣೆ, ಮೇಲೆ ಕಡೆಗುವ ತೊಲೆ, ಹತ್ತಿದವರನ್ನ ಹೊಯ್ಯುವ ಬಲ್ಲುಗದಿಗೆ, ತಿವಿವ ಪಂದಿಪೊಟ್ಟೆಟ್ಟ ಗಡೆ, ಕವಣೆ ಕೈ, ಕಲ್ಲೆತ್ತು, ಗುಂಡಾರ್ಗಿಡು ಪೆಟಲುಯಂತ್ರ, ಬಿಡಿ, ಬಿಗಿಉರುಳು, ಬಿಲ್ಲಂಬು, ಕತ್ತರಿ, ಎಣ್ಣೆಗೊಡ, ಹರವಿಸುಡುವ ಸಣ್ಣಕಲ್ಲು, ಉರಿವ ಪುಲ್ಲುಳದೊಂದೆ, ಸುರಿವ ಕೆಂಡದಂತ್ರಜಿ, ಬಿರಿಕೊರಡು, ತಿರುಗೊಣೆ, ಬೀಸುಬಲೆ, ತಳಿಯ ಮರದ ಗೊಂದಣ, ಸುರಿಯಲು ಕಲ್ಲು, ನೆಲಗುಮ್ಮ, ಹಾರೆ, ಪಂದಿತಲೆ ಇನ್ನು ಮುಂತಾದ ಆಯುಧಗಳ ಬಗ್ಗೆ ಉಲ್ಲೇಖಿಸಲಾಗಿದೆ.[೯೪]

೩.೧೩ ಕೋಟೆಯ ರಚನಾಕ್ರಮ(ಕೋಟೆಯ ಸ್ವರೂಪ)

ಕೋಟೆಯ ರಕ್ಷಣಾಸ್ವರೂಪದ ರಚನೆ ಎಂಬ ಅಂಶ ದೃಢವಾಗಿದ್ದರೂ ಸಂರಕ್ಷಾತ್ಮಕ ಸ್ವರೂಪದ ಕೋಟೆಗಳ ನಿರ್ಮಾಣದಲ್ಲಿ ಆಗಿಂದಾಗ್ಗೆ ಹಲವಾರು ಬದಲಾವಣೆ ಆಗಿರುವುದು ಕಾಣಬಹುದು. ಈ

ಬದಲಾವಣೆಗಳನ್ನು ಕೋಟೆಯ ಗಾತ್ರ, ಕಟ್ಟುವ ವಿಧಾನ, ವಿವಿಧ ರಚನಾ ವಿನ್ಯಾಸ, ಅಧಿಕ ರಕ್ಷಣಾತ್ಮಕ ಸಾಧನಗಳು, ಆಯುಧಗಳು, ಬದಲಾದ ಯುದ್ಧಸಾಮಗ್ರಿಗಳು, ಸಮಕಾಲೀನ ಯುದ್ಧತಂತ್ರಗಳು ಮುಂತಾದವುಗಳಿಂದ ತಿಳಿಯಬಹುದು.

ಪ್ರಾರಂಭದಲ್ಲಿ ಮುಳ್ಳಿನ ಬೇಲಿ, ದನದರೊಪ್ಪ ಮಂದ ದಿಮ್ಮಿಗಳಿಂದ ನಿರ್ಮಿಸಿದ ಬೇಲಿಗಳಿಂದ ಪ್ರಾರಂಭವಾದ ಈ ರಕ್ಷಣಾವ್ಯವಸ್ಥೆ ಕ್ರಮೇಣ ಗಾತ್ರ ಮತ್ತು ಭದ್ರತೆಯ ದೃಷ್ಟಿಯಲ್ಲಿ ಸಂಕೀರ್ಣತೆಯನ್ನು ಪಡೆದುಕೊಂಡಿತು. ನಂತರದ ದಿನಗಳಲ್ಲಿ ಮಣ್ಣಿನ ಮತ್ತು ಕಲ್ಲಿನ ಕೋಟೆಗಳು ನಿರ್ಮಾಣವಾದವು. ಕ್ರಿ.ಪೂ.೬ನೇ ಶತಮಾನದ ವೇಳೆಗೆ ಬಂಡೆಗಳನ್ನು ಕಡಿದು ಮಾಡಿದ ಗುಹವಾಸ್ತುಶಿಲ್ಪವು ಪ್ರಗತಿಯ ತುದಿಯನ್ನು ತಲುಪಿ, ಗಿರಿದುರ್ಗಗಳ ಕ್ಷಿಪ್ರ ಬೆಳವಣಿಗೆಗೆ ಕಾರಣವಾಯಿತು. ಪರಿಣಾಮವಾಗಿ ಬಂಡೆಗಳನ್ನು ಕಡಿದು ಮಾಡಿದ ನೀರಿನ ತೊಟ್ಟಿ, ಧಾನ್ಯ ಸಂಗ್ರಹಿಸುವ ಕಣಜಗಳು ಮತ್ತು ನೆಲಮಾಳಿಗೆಗಳಂತಹ ಹೊಸ ಅಂಶಗಳು ಪರಿಚಿತವಾದವು. ಮಧ್ಯೆಯುಗೀನ ಕಾಲದಲ್ಲಿ ***ಸೈಕ್ಲೊಪಿಯನ್ (Cyclopean)*** ಎಂಬ ಕಲ್ಲುಕಟ್ಟಡದ(ಕಲ್ಲುಕೆಲಸ) ಹೊಸ ತಂತ್ರ ಬೆಳವಣಿಗೆಯಾಯಿತು. ಇದರಲ್ಲಿ ಬೃಹತ್ತಾದ ಕಲ್ಲುಗಳನ್ನು ಸೀಳಿ ಒಂದರ ಮೇಲೆ ಒಂದರಂತೆ ಯಾವುದೇ ರೀತಿಯ ಸುಣ್ಣ ಅಥವಾ ಗಾರೆಯ ಬಳಕೆಯಿಲ್ಲದೇ ಒಂದನ್ನೊಂದು ಭದ್ರವಾಗಿ ಜೋಡಿಸಲಾಗಿದೆ. ಈ ರೀತಿ ಮುಂದುವರೆದ ಕಲ್ಲುಕೆಲಸದ ಜ್ಞಾನವು ಕಲ್ಲಿನ ಕಟ್ಟಡಗಳನ್ನು ಕಟ್ಟುವುದರ ಜೊತೆಗೆ ಹೊಸ ತಂತ್ರಗಳನ್ನು ಪರಿಚಯಿಸಿತು. ಇಂತಹ ಕಟ್ಟಡದ ಕೆಲಸವು ಪ್ರಾರಂಭದಲ್ಲಿ ಒರಟು ಒರಟಾಗಿದ್ದು ನಂತರ ಕ್ರಮೇಣ ಕ್ರಮಬದ್ಧ ರಚನೆಯಾಗಿರುವುದನ್ನು ಕಾಣುತ್ತೇವೆ. ಈ ಹಂತದಲ್ಲಿ ಕಲ್ಲಿನ ಜೋಡಣೆಯ ಭಾಗಗಳು ಪರಿಪೂರ್ಣವಾಗಿದ್ದು ಅವುಗಳನ್ನು ಜೋಡಿಸುವುದರ ಜೊತೆಗೆ ಯಾವುದೇ ಗಾರೆ ಬಳಸಿರುವುದಿಲ್ಲ. ಈ ರಚನೆ ಒಂದೂ ಸೈನಿಕ ವಾಸ್ತುಶಿಲ್ಪದ ಪ್ರಾರಂಭದ ಬೆಳವಣಿಗೆಯಾಗಿತ್ತೆಂದು ಹೇಳಬಹುದು.”

ತರುವಾಯ ದುರ್ಗಗಳಲ್ಲಿ ಗಾರೆಯನ್ನು ವಿರಳವಾಗಿ ಬಳಸಲು ಪ್ರಾರಂಭಿಸಲಾಯಿತು. ಆದರೆ ಸಿಡಿಮದ್ದನ್ನು ಕಂಡುಹಿಡಿಯುವುದಕ್ಕೆ ಮೊದಲು ಅಸ್ತಿತ್ವದಲ್ಲಿದ್ದ ರಕ್ಷಣಾಸಾಧನಗಳು ರಕ್ಷಣಾತ್ಮಕ ಅಗತ್ಯಗಳಿಗೆ ತಕ್ಕಂತೆ ಹೊಂದಿಕೊಳ್ಳುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ. ಚಿತ್ರದುರ್ಗ, ಮುದುಗಲ್ಲು, ರಾಯಚೂರು, ದೌಲತಾಬಾದ್ ಮುಂತಾದ ಕಡೆ ಆಗಿಂದಾಗೆ ಮಾಡಲಾದ ಬದಲಾವಣೆ, ಸೇರ್ಪಡೆ ಮತ್ತೆ ಮಾರ್ಪಾಡುಗಳಿಗೆ ಹೊಂದಿಕೊಂಡಿರುವುದನ್ನು ಕಾಣಬಹುದು. ಹಳೆಯ ಬಾಣರಂಧ್ರಗಳನ್ನು ಬಂದೂಕು ರಂಧ್ರಗಳನ್ನಾಗಿ ಉಪಯೋಗಿಸಿಕೊಂಡಿರುವುದು ಕಂಡುಬಂದಿದೆ.

[illegible]

೧೫ನೇ ಶತಮಾನದ ಅಂತ್ಯದ ವೇಳೆಗೆ ಸಿಡಿಮದ್ದಿನ ಉಪಯೋಗವು ವಿಸ್ತಾರವಾಗಿ ಹಬ್ಬಿತು. ಬೆಂಕಿಯನ್ನು ಉಗುಳುವ ಯಂತ್ರಗಳು ಹೊಸದಾಗಿ ಪರಿಚಯಿಸಲ್ಪಟ್ಟವು. ಇದುವರೆಗೆ ಇದ್ದ ಸಾಮಾನ್ಯ ಯುದ್ಧ ಪದ್ಧತಿ ಹಾಗೂ ರಕ್ಷಣಾ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಯಾದವು. ೧೪೯೮ರಲ್ಲಿ ಪೋರ್ಚುಗೀಸರು ಭಾರತದ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಫಿರಂಗಿಪಡೆಯನ್ನು ಬಳಸಿರುವುದಕ್ಕೆ ಸಾಕ್ಷ್ಯಗಳು ದೊರೆತಿದ್ದರೂ ಬಾಬರ್ ೧೫೨೬ರಲ್ಲಿ ನಡೆದ ಪಾಣಿಪತ್ ಯುದ್ಧದಲ್ಲಿ ದೊಡ್ಡ ಪ್ರಮಾಣದಲ್ಲಿ ಫಿರಂಗಿ ಬಳಸಿರುವುದನ್ನು ನಾವು ಕಾಣುತ್ತೇವೆ. ಅಂದಿನಿಂದ ದುರ್ಗ ವಾಸ್ತುಶಿಲ್ಪವು ರಚನಾತ್ಮಕವಾಗಿ ಬದಲಾವಣೆಯಾಯಿತು.[೯೬] ಕೋಟೆಗಳ ಗಾತ್ರ, ವಿಸ್ತಾರ, ಕೋಟೆಯ ಬಾಗಿಲಿನ ಮೇಲೆ ಗೋಪುರಗಳು, ಬಂದೂಕುಗಳನ್ನು ತೂರಿಸಲು ಹಾಗೂ ಕೋಟೆಯ ಒಳಗಿನಿಂದ ಹೊರಗಿನ ದೃಶ್ಯಗಳನ್ನು ನೋಡಲು ಸಹಾಯಕವಾಗುವಂತೆ ಕೋಟೆಯ ಗೋಡೆಗೆ ಬಿಟ್ಟಿರುವ ಬಂದೂಕುರಂಧ್ರಗಳು ಕೋಟೆಯ ನಿರ್ಮಾಣದಲ್ಲಿ ಅವುಗಳ ಸ್ವರೂಪದಲ್ಲಿ ಗಾತ್ರವನ್ನು ಹೆಚ್ಚಿಸಿರುವುದು ಈ ಕಾಲದ ಕೋಟೆಗಳ ಪ್ರಮುಖ ಲಕ್ಷಣವಾಗಿದೆ. ಕೋಟೆಯ ಬಾಗಿಲು, ಗೋಡೆ, ಕೊತ್ತಲು, ಗೋಪುರ, ಬುರುಜುಗಳನ್ನು ಗಾತ್ರ ಮತ್ತು ವಿಸ್ತಾರದಲ್ಲಿ ಹೆಚ್ಚಿಸಿರುವುದನ್ನೂ ಕಾಣಬಹುದು. ಈ ಬೆಳವಣಿಗೆಯು ಮಧ್ಯಯುಗೀನ ಭಾರತದಲ್ಲಿ ಕೋಟೆಗಳ ತಾಂತ್ರಿಕತೆ ಮತ್ತು ಸೈನಿಕ ವಾಸ್ತುಶಿಲ್ಪ ಇತಿಹಾಸದಲ್ಲಿ ಗಮನಾರ್ಹವಾಗಿದೆ.

ನಂತರದ ಕಾಲದಲ್ಲಿ ಕೋಟೆಯ ಗೋಡೆಗಳು ತುಂಬಾ ಎತ್ತರ ಹಾಗೂ ದಪ್ಪವಾಗಿ ಕಟ್ಟಲ್ಪಟ್ಟವೆ. ಕೋಟೆ ಗೋಡೆಗೆ ಬೃಹತ್ತಾದ ಬಂದೂಕುಗಳನ್ನಿಡಲು ರಚಿಸಿದ ಬಂದೂಕು ಕಿಂಡಿಗಳು, ಫಿರಂಗಿಗಳಿಂದ ರಕ್ಷಣೆ ಪಡೆಯಲು ನಿರ್ಮಿಸಲಾಗಿರುವ ಕೈಪಿಡಿ ಗೋಡೆ, ಕೋಟೆಗೋಡೆಯ ರಂಧ್ರ, ತೆರೆಗೋಡೆ, ಕೊತ್ತಲಗಳು ವಿಪರೀತ ಗಾತ್ರ ಮತ್ತು ವಿಸ್ತಾರದಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಇವುಗಳ ವಿಸ್ತಾರದಿಂದ ಪ್ರಾಕಾರವು ಹೊಸ ಆಕಾರವನ್ನು ಪಡೆಯಿತು. ಕೋಟೆಯ ಬಾಗಿಲು ಗೋಪುರ, ಸುರಂಗಮಾರ್ಗ, ಗುಪ್ತಮಾರ್ಗ, ಹೆಬ್ಬಾಗಿಲುಗಳ ಮಾರ್ಪಾಡು ಹೀಗೆ ವಿಶೇಷವಾಗಿ ಕೋಟೆಗಳ ರಚನೆಯಲ್ಲಿ ಮಹತ್ತರ ಬದಲಾವಣೆಗಳಾದವು.[೯೭] ಒಟ್ಟಾರೆ ಶಿಲ್ಪತಂತ್ರದ ಪರಿಚಯವಾಗಿ ಯುದ್ಧತಂತ್ರಕ್ಕೆ ಅನುಗುಣವಾಗಿ ಕೋಟೆಗಳು ನಿರ್ಮಿಸಲ್ಪಟ್ಟವು.

೩.೧೪ ನಿವೇಶನದ ಆಯ್ಕೆ

ರಾಜಧಾನಿ ಮತ್ತು ಇತರೆ ಕೋಟೆಯ ನಿರ್ಮಾಣದಲ್ಲಿ ಸ್ಥಳದ ಆಯ್ಕೆಯು ಬಹುಮುಖ್ಯವಾದ ಅಂಶವಾಗಿದೆಯಲ್ಲದೆ, ಕೋಟೆಯ ನಿರ್ಮಾಣದಲ್ಲಿ ಪ್ರಮುಖ ನಿರ್ಣಾಯಕವಾದ ಅಂಶವಾಗಿದೆ. ಕೌಟಿಲ್ಯ

[illegible]

[illegible]

[illegible]

[illegible]

ಕೂಡ ದುರ್ಗ ನಿರ್ವೇಶನದ ಬಗ್ಗೆ ಒತ್ತುಕೊಟ್ಟಿದ್ದಾನೆ.[೯೮] ವಾಸ್ತು ಎಂದರೆ ದೇವಮನುಷ್ಯರು ವಾಸಿಸುವ ಸ್ಥಳ. ಆದುದರಿಂದ ವಾಸ್ತುವಿನಲ್ಲಿ ಧರೆ, ಹರ್ಮ್ಯ, ಯಾನ, ಪರ್ಯಂಕಗಳೆಂಬ ನಾಲ್ಕು ವಿಧಗಳಿವೆ. ಕೋಟೆ ಕಟ್ಟುವ ಮೊದಲು ಭೂಮಿಯ ಸನ್ನಿವೇಶ ಗುಣಗಳ ಪರೀಕ್ಷೆಯನ್ನು ಮೊದಲು ಮಾಡಬೇಕು, ಗುಂಡಿಯನ್ನು ಅಗೆದು ಮಣ್ಣನ್ನು ಚೆನ್ನಾಗಿ ಶೋಧಿಸಬೇಕು. ಅನತರ ನಿವೇಶನದ ವಿನ್ಯಾಸ ಮುಂತಾದವುಗಳನ್ನು ಸೂತ್ರಧಾರನು ನಿರ್ಧರಿಸಬೇಕೆಂದು ಹೇಳಲಾಗಿದೆ.[೯೯] ಏಕೆಂದರೆ ಅನ್ಯರ ಆಕ್ರಮಣಗಳಿಗೆ ಸುಲಭವಾಗಿ ಕಾಣಿಸದ ಹಾಗೂ ಸುಲಭವಾಗಿ ವಶಪಡಿಸಿಕೊಳ್ಳಲಾಗದ ಸ್ಥಳದ ಬಗ್ಗೆ ತುಂಬಾ ಜಾಗರೂಕತೆ ವಹಿಸಬೇಕು. ನಿವೇಶನದ ಸುಭದ್ರತೆ ಮತ್ತು ಯುದ್ಧತಂತ್ರಗಳನ್ನು ರೂಪಿಸಲು ಸಹಾಯಕವಾದ ನಿವೇಶನವು ಸೂಕ್ತವಾದ ಅಂಶವಾಗಿದೆ. ಕೋಟೆ ಕಟ್ಟಲು ಬೇಕಾಗುವ ಸಾಮಗ್ರಿಗಳು ಸುಲಭ ರೀತಿಯಲ್ಲಿ ಸಿಗುವಂತೆ, ವಿಫುಲವಾದ ನೀರಿನ ದ್ರವ್ಯತೆ ಇವು ಪ್ರಮುಖವಾಗಿ ನಿವೇಶನ ಆಯ್ಕೆಗೆ ಅಗತ್ಯವಾದ ಅಂಶವಾಗಿವೆ.

ಸ್ಥಳ ದುರ್ಗಗಳಿಗೆ ನೈಸರ್ಗಿಕ ರಕ್ಷಣೆಯ ದೃಷ್ಟಿಯಿಂದ ನದಿಯ ದಡಗಳು ಹೆಚ್ಚು ಉಪಯುಕ್ತವಾಗಿವೆ. ಅದರಲ್ಲೂ ನದಿಯು ತೀವ್ರವಾಗಿ ತಿರುವು ಪಡೆದುಕೊಂಡು ಸ್ವಲ್ಪಮಟ್ಟಿಗೆ ವೇಗವಾಗಿ ಹರಿಯುವ ಸ್ಥಳ ಕೋಟೆಯ ನಿರ್ಮಾಣಕ್ಕೆ ಸೂಕ್ತ ಪ್ರದೇಶವಾಗಿದೆ. ಸದಾ ತುಂಬಿ ಹರಿಯುವ ನದಿಕೋಟೆಗೆ ನಿಸರ್ಗದತ್ತ ಕಂದಕವಾಗಿ ಒಂದು ಪಾರ್ಶ್ವಕ್ಕೆ ರಕ್ಷಣೆ ನೀಡುವುದು. ಉಳಿದೆಡೆ ಕೋಟೆಯ ಸುತ್ತ ಕಂದಕವನ್ನು ತೋಡಿ ಅದಕ್ಕೆ ಕಾಲುವೆ ಮೂಲಕ ನೀರನ್ನು ಹರಿಸುವುದು ಸುಲಭದ ಕೆಲಸವಾಗುತ್ತದೆ. ಬೆಟ್ಟಗುಡ್ಡಗಳನ್ನು ಆಶ್ರಯಿಸಿಕೊಂಡು ಗಿರಿದುರ್ಗಗಳನ್ನು ನಿರ್ಮಿಸಲಾಗಿದೆ. ಈ ಪ್ರದೇಶವು ಪ್ರಕೃತಿದತ್ತವಾಗಿ ದುರ್ಗಮವಾಗಿರುತ್ತದೆ. ಇಲ್ಲಿ ಹೆಚ್ಚಾಗಿ ಬಂಡೆಗಲ್ಲುಗಳು ದೊರಕುತ್ತವೆ. ಅಲ್ಲದೆ, ಉತ್ತಮ ವಾತಾವರಣ, ನೀರು, ಮತ್ತಿತರ ಅಂಶಗಳಿಂದ ದುರ್ಗಮ ಪ್ರದೇಶವಾಗಿರುತ್ತದೆ.

ಅನೇಕ ಐತಿಹ್ಯ, ಕೈಫಿಯತ್ತುಗಳು, ಸ್ಥಳಪುರಾಣಗಳಿಂದ ನಿವೇಶನ ಆಯ್ಕೆ ಮಾಡಿರುವ ಸಂಗತಿಯನ್ನು ವ್ಯಕ್ತಪಡಿಸುತ್ತವೆ. ಮೊಲವು ನಾಯಿಯನ್ನು ಅಟ್ಟಿಸಿಕೊಂಡು ಹೋಗಿ ಬೇಟೆಯಾತೆಂಬುದರ ಆಧಾರದ ಮೇಲೆ ಆ ಪ್ರದೇಶವನ್ನು ಗಂಡುಭೂಮಿ ಮತ್ತು ವೀರಭೂಮಿ ಎಂದು ಕರೆದು ಕೋಟೆಗಳನ್ನು ನಿರ್ಮಿಸಲು ಸೂಕ್ತವಾದ ಸ್ಥಳವೆಂದು ತೀರ್ಮಾನಿಸುವುದರ ಮೂಲಕ ಕೋಟೆಗಳ ನಿರ್ಮಾಣಕ್ಕೆ ನಿವೇಶನದ ಆಯ್ಕೆಯನ್ನು ಮಾಡಿಕೊಂಡಿರುವುದರ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ಅಲ್ಲದೆ, ಕೋಟೆಗೋಡೆಯ ಬುನಾದಿಯನ್ನು ಅಗೆಯುವಾಗ ಪೂಜೆ-ಪುನಸ್ಕಾರಗಳನ್ನು ಮಾಡಿ ಬಲಿಕೊಟ್ಟಿರುವ ಉದಾಹರಣೆಗಳುಂಟು.

೩.೧೪.೧ ಕಟ್ಟಡ ನಿರ್ಮಾಣದ ಸಾಮಗ್ರಿಗಳ ಲಭ್ಯತೆ

ಕೋಟೆಯ ನಿರ್ಮಾಣದ ಅಂಶವನ್ನು ನಿರ್ಧರಿಸುವ ಎರಡನೆಯ ಅಳತೆಗೋಲೆಂದರೆ ಕಟ್ಟಡ ನಿರ್ಮಾಣದ ಸಾಮಗ್ರಿಗಳು ಸುಲಭ ಲಭ್ಯತೆ. ಇವು ಸ್ಥಳೀಯವಾಗಿ ಅಥವಾ ಸಮೀಪದಲ್ಲಿ ದೊರೆಯುವಂತೆ ಇರಬೇಕು. ಸುಲಭವಾಗಿ ದೊರೆಯುವ ಗ್ರಾನೈಟ್ ಹಾಗೂ ಬೆಣಚುಕಲ್ಲುಗಳಿಂದ ನಿರ್ಮಿತವಾಗಿರುವ ಅನೇಕ ಗಿರಿದುರ್ಗಗಳಿಂದ ಈ ಅಂಶವು ವ್ಯಕ್ತವಾಗುತ್ತದೆ. ಉದಾ : ಚಿತ್ರದುರ್ಗದ ಕೋಟೆ. ಈ ಕೋಟೆಗೆ ಕಟ್ಟಲು ಬೇಕಾಗುವ ಸಾಕಷ್ಟು ಕಲ್ಲು ಬೆಟ್ಟದಲ್ಲೇ ಲಭ್ಯವಿರುವುದರಿಂದ ಅಲ್ಲಿ ಅಷ್ಟೊಂದು ಸುಭದ್ರವಾದ ಕೋಟೆಯನ್ನು ಕಟ್ಟಲು ಸಾಧ್ಯವಾಗಿದೆ. ಐಮಂಗಲದ ಕೋಟೆ ಕಟ್ಟಲು ಸ್ಥಳೀಯವಾಗಿ ಕಲ್ಲುಗಳ ಕೊರತೆಯಿಂದ ಸಮೀಪದ ಕಲ್ಲಟ್ಟಿಯಿಂದ ಕರಿ ಚಕ್ಕೆ ಕಲ್ಲುಗಳನ್ನು ತಂದು ಕೋಟೆ ಕಟ್ಟಿದ್ದಾರೆ. ಆದರೆ ಕಲ್ಲುಗಳ ಗುಣಮಟ್ಟ ಕಡಿಮೆ ಇರುವುದರಿಂದ ಕೋಟೆಯ ಗೋಡೆಯ ಅಗಲವನ್ನು ಹೆಚ್ಚಿಸದೆ ಕಿರಿದಾಗಿಸಿದ್ದಾರೆ. ಆದರೆ ಬದಲಿಗೆ ಸ್ಥಳೀಯವಾಗಿ ದೊರೆಯುವ ಉತ್ತಮವಾದ ಮಣ್ಣನ್ನು ಬಳಸಿ ವಪ್ರವನ್ನು ನಿರ್ಮಿಸಿದ್ದಾರೆ. ಈ ರೀತಿ ವಪ್ರ(ಇಳಿವೋರೆ) ನಿರ್ಮಿಸಿ ಗೋಡೆಗೆ ಭದ್ರತೆ ಒದಗಿಸಿದ್ದಾರೆ. ಇದೇ ರೀತಿ ಮೊಳಕಾಲ್ಮೂರು, ನುಂಕಿಮಲೆ, ಹೊಸಗುಡ್ಡ, ಜಾನ್‌ಕಲ್ಲು ಮುಂತಾದ ಕೋಟೆಗಳಿಗೆ ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ಕೋಟೆ ಕಟ್ಟಿದ್ದಾರೆ.

೩.೧೪.೨ ಯುದ್ಧತಂತ್ರ(ವ್ಯೂಹ)

ಕೋಟೆಗಳಲ್ಲಿ ಯುದ್ಧತಂತ್ರ ಅತಿಮುಖ್ಯ ಅಂಶವಾಗಿದೆ. ಕೋಟೆಯ ನಿವೇಶನವು ರಾಜಕೀಯ ಹಾಗೂ ಸೈನಿಕ ಕ್ಷೇತ್ರಗಳೆರಡಕ್ಕೂ ಸಂಬಂಧಿಸಿದ್ದಾಗಿರಬೇಕು. ಆರ್.ಆರ್.ಸೀಲ್‌ಮನ್‌ರವರ ಪ್ರಕಾರ ಭೂ ಮತ್ತು ಜಲಮಾರ್ಗಗಳನ್ನು ಆವರಿಸುವುದು ಕೋಟೆಯ ಪ್ರಮುಖ ಕಾರ್ಯಗಳಲ್ಲಿ ಒಂದು. ಮತ್ತೊಂದು ಮಹತ್ವದ ವಿಷಯವೆಂದರೆ ವೈರಿಯಿಂದ ಅನಿರೀಕ್ಷಿತ ಆಕ್ರಮಣವಾದಾಗ ಬಹಳ ಕಾಲದವರೆಗೆ ಸೈನಿಕರಿಗೆ ಸಾಕಾಗುವಷ್ಟು ಸೈನಿಕ ಸಾಮಗ್ರಿ ಮತ್ತು ಆಹಾರ ಪದಾರ್ಥಗಳನ್ನು ರಕ್ಷಿಸಿಡುವುದು. ಸದಾ ಯುದ್ಧತಂತ್ರಗಳಿಗೆ ಹೆಚ್ಚು ಸೌಕರ್ಯವುಳ್ಳ ಮತ್ತು ಸಮರ್ಥವಾಗಿ ರಕ್ಷಣೆ ನೀಡಬಲ್ಲ ಜಲ ಅಥವಾ ಭೂಸರಹದ್ದುಗಳನ್ನು ರಾಜ್ಯವು ಹೊಂದಿರಬೇಕು. ರಾಜಕೀಯ ಹಾಗೂ ಸೈನಿಕ ಕೇಂದ್ರಗಳನ್ನು ಆಕ್ರಮಣಕಾರನು ವಶಪಡಿಸಿಕೊಳ್ಳಲು ಅಸಾಧ್ಯವಾಗಿರಬೇಕು. ಕೋಟೆಯ ರಚನೆಯ ಹಿಂದೆ ಪ್ರಾದೇಶಿಕ ಪರಿಸರದಲ್ಲಿನ ಭಿನ್ನತೆ ಹವಾಗುಣ, ರಾಜಕೀಯ ಭದ್ರತೆ, ಆರ್ಥಿಕ ಸಂಪನ್ಮೂಲ, ನೈಸರ್ಗಿಕ ರಕ್ಷಣೆಯ ಅಂಶಗಳು ಯುದ್ಧ ತಂತ್ರದಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ. ಬಹುತೇಕ ರಾಜಧಾನಿ

[illegible]

[illegible]

ನಿವೇಶನಗಳು ವಿಸ್ತಾರವಾದ ಸರಹದ್ದು ಹಾಗೂ ಜಲ ಅಥವಾ ಸರಹದ್ದು ಕೋಟೆಗಳಿಂದ ಸುತ್ತುವರೆದಿರುವುದನ್ನು ಕಾಣುತ್ತೇವೆ. ಚಾಲುಕ್ಯರ ಬಾದಾಮಿ ಕೋಟೆಯ ಗಿರಿಯ ಮೇಲೆ ಸಮತಟ್ಟಾದ ಪ್ರದೇಶವಿದ್ದು ಬೆಟ್ಟದ ಪೂರ್ವ ಉತ್ತರ ಭಾಗದಲ್ಲಿ ಎತ್ತರದ ಸ್ಥಾನಗಳನ್ನು ಹೊಂದಿದ್ದು, ಇವು ಸಹಜವಾದ ಕಾವಲು ಗೋಪುರಗಳಾಗಿವೆ. ಪಶ್ಚಿಮಕ್ಕೆ ಆಳವಾದ ಕಂದರ, ಉತ್ತರ ದಕ್ಷಿಣಕ್ಕೆ ಕಡಿದಾದ ಹಂಚನ್ನು ಹೊಂದಿದ್ದು, ರಕ್ಷಣೆಯ ದೃಷ್ಟಿಯಿಂದ ಪೂರಕವಾಗಿವೆ. ಉಚ್ಚಂಗಿದುರ್ಗದ ಬೆಟ್ಟವು ಉತ್ತರ-ದಕ್ಷಿಣವಾಗಿ ಕಡಿದಾದ ಹಂಚನ್ನು ಹೊಂದಿದ್ದು ರಕ್ಷಣೆಯ ದೃಷ್ಟಿಯಿಂದ ಪೂರಕವಾಗಿವೆ. ಉಚ್ಚಂಗಿದುರ್ಗ ಬೆಟ್ಟವು ಉತ್ತರ-ದಕ್ಷಿಣವಾಗಿ ೧ ಕಿ.ಮೀ.ಗಳಷ್ಟು ದೂರ ಹಬ್ಬಿದ್ದು, ಬೆಟ್ಟ ಕಡಿದಾಗಿರುವುದರಿಂದ ಯುದ್ಧತಂತ್ರಕ್ಕೆ ತುಂಬಾ ಅನುಕೂಲಕರವಾಗಿವೆ. ಕುಮ್ಮಟದುರ್ಗವು ಗಿರಿದುರ್ಗವಾಗಿ ವೈರಿಗಳಿಗೆ ಸಿಂಹಸ್ವಪ್ನದಂತಿದ್ದು, ಅಲ್ಲಿ ಯುದ್ಧಕ್ಕಾಗಿ ನಡೆದ ಸಿದ್ಧತೆಯನ್ನು ನಂಜುಂಡ ಕವಿಯು ವಿವರಿಸಿದ್ದಾನೆ. ಇಲ್ಲಿನ ಗುಡ್ಡಗಳು ನೈಸರ್ಗಿಕ ರಕ್ಷಣೆಯನ್ನು ಹೊಂದಿದ್ದು, ವ್ಯೂಹ ರಚಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಇದೇ ರೀತಿ ಚಿತ್ರದುರ್ಗ ಕೋಟೆಯು ಗಿರಿದುರ್ಗಗಳಿದ್ದು ಬೆಟ್ಟದ ಶಿಖರಗಳನ್ನು ಒಳಗೊಂಡಂತೆ ಕೋಟೆಯನ್ನು ಕಟ್ಟಲಾಗಿದೆಯಲ್ಲದೆ, ಅಲ್ಲಲ್ಲಿ ಬುರುಜು ಬತೇರಿಗಳು ಯುದ್ಧ ತಂತ್ರಕ್ಕನುಗುಣವಾಗಿ ನಿರ್ಮಾಣಗೊಂಡಿವೆ. ಹಾಗೆಯೇ ಮೊಳಕಾಲ್ಮೂರು, ಜಾನಕಲ್ಲು, ಬ್ರಹ್ಮಗಿರಿ, ಐಮಂಗಲ ಕೋಟೆಗಳು ಯುದ್ಧತಂತ್ರ ದೃಷ್ಟಿಯಿಂದಲೇ ನಿರ್ಮಾಣಗೊಂಡಿವೆ. ಬೆಟ್ಟಗುಡ್ಡಗಳ ಮಧ್ಯೆ ಜಿಲ್ಲೆಯಾದ್ಯಂತ ಹರಡಿರುವ ಕೋಟೆಗಳ ಮಧ್ಯೆ ಸಂಪರ್ಕ ಕಲ್ಪಿಸುವಂತೆ ಅಲ್ಲಲ್ಲಿ ಕಾವಲುಗೋಪುರ ಅಥವಾ ಬುರುಜುಗಳನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಪರ್ವತ ಪ್ರದೇಶ ಮತ್ತು ಬೆಟ್ಟಗುಡ್ಡಗಳನ್ನು ಸಹ ತಮ್ಮ ಯುದ್ಧತಂತ್ರಗಳಿಗನುಗುಣವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಭರಮಣ್ಣನಾಯಕನ ದುರ್ಗ ಮತ್ತು ಚಿತ್ರದುರ್ಗ ಕೋಟೆ ಮಧ್ಯೆ ಕಂದವಾಡಿಗುಡ್ಡ ಮತ್ತು ಈಚಲನಾಗೇನಹಳ್ಳಿ ಗುಡ್ಡಗಳನ್ನು ಇಲ್ಲಿ ರಕ್ಷಣಾಸಾಧನಗಳಾಗಿ ಬಳಸಿರುವುದು ಕಂಡುಬರುತ್ತದೆ. ಈ ಹಂತದಲ್ಲಿ ಗಿರಿದುರ್ಗಗಳು ಮಹತ್ತರ ಪಾತ್ರ ವಹಿಸುತ್ತಿದ್ದವು. ಮೇಲಿನ ಗಡಿ ರಕ್ಷಣೆಗಳಿಂದ ಕೋಟೆಗಳ ನಿರ್ಮಾಣದಲ್ಲಿ ಯುದ್ಧತಂತ್ರಗಳು ಪ್ರಮುಖವಾದ ಮಾನದಂಡವಾಗಿರುವುದನ್ನು ಕಾಣಬಹುದು.

೩.೧೪.೩ ನೈಸರ್ಗಿಕ ಸುಭದ್ರತೆ

ಸಹಜವಾಗಿ ಕೋಟೆಗಳು ಇರುವ ಜಾಗದಲ್ಲಿ ಹಳ್ಳಕೊಳ್ಳ, ನದಿಸರೋವರ, ಬೆಟ್ಟಗುಡ್ಡ, ದಟ್ಟವಾದ ಅರಣ್ಯಪ್ರದೇಶಗಳಿವೆ. ಇಂತಹ ಸ್ಥಳಗಳನ್ನೇ ಆಯ್ಕೆ ಮಾಡಿಕೊಂಡು ಈ ಪ್ರದೇಶದಲ್ಲಿ ಸ್ಥಳೀಯವಾಗಿ

[illegible]

[illegible]

[illegible]

[illegible]

ಹಾಗೂ ಉಚಿತವಾಗಿ ಸಿಗುವ ಸಂಪನ್ಮೂಲಗಳನ್ನು ಬಳಸಿರುವುದು ಕಂಡುಬರುತ್ತದೆ. ಪ್ರಕೃತಿಯಲ್ಲಿರುವ ಬೆಟ್ಟಗುಡ್ಡ, ವಿಪುಲವಾದ ನೀರಿನ ಸಂಪನ್ಮೂಲ, ದಾಟಲು ಹಾಗೂ ಹತ್ತಲಾಗದ ಪ್ರಪಾತಗಳು ಮತ್ತು ದುರ್ಗಮವಾದ ಮಾರ್ಗಗಳು ಪ್ರಕೃತಿದತ್ತವಾದ ನೈಸರ್ಗಿಕ ಭದ್ರತೆಗಳೆನ್ನಬಹುದು. ಈ ಅಂಶಗಳು ಅನೇಕ ಬರಹಗಾರರಿಂದ ಸ್ಪಷ್ಟವಾಗಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಗಿರಿದುರ್ಗಗಳನ್ನು ನಿರ್ಮಿಸಲು ವಿಫುಲವಾದ ಅವಕಾಶ ಇದ್ದುದರಿಂದಲೇ ಹೆಚ್ಚು ಕೋಟೆಗಳು ನಿರ್ಮಾಣವಾಗಿವೆ. ಅನೇಕ ರಾಜರು ತಾವು ಆಳ್ವಿಕೆ ಮಾಡಿದ ಪ್ರದೇಶದಲ್ಲಿಯೇ ಸಿಗುತ್ತಿದ್ದ ಸಂಪನ್ಮೂಲಗಳನ್ನು ಬಳಸಿಕೊಂಡು ತಮ್ಮ ಆರ್ಥಿಕ ಇತಿಮಿತಿಯಲ್ಲಿ ಕೋಟೆಗಳನ್ನು ನಿರ್ಮಿಸಿದ್ದಾರೆ. ಸಿಂಗೇನಹಳ್ಳಿ, ಸಂತೇಗುಡ್ಡ, ಚಿತ್ರದುರ್ಗ, ಬ್ರಹ್ಮಗಿರಿ, ಲುಂಕಿಮಲೆ, ಜಾನಕಲ್ಲು ಕೋಟೆಗಳಿಗೆ ನೈಸರ್ಗಿಕ ಸಂಪನ್ಮೂಲಗಳಿವೆ. ಈ ಪ್ರದೇಶವು ವಿಫುಲವಾದ ನೀರಿನ ದೋಣೆ, ಕೆರೆ, ಕಲ್ಲು-ಬಂಡೆ ಹಾಗೂ ಮರ-ಗಿಡಗಳಿಂದ ಕೂಡಿವೆ. ಚಿತ್ರದುರ್ಗ, ಮೊಳಕಾಲ್ಮೂರು ಮತ್ತು ಬ್ರಹ್ಮಗಿರಿ ಕೋಟೆಗಳ ಪರಿಸರದಲ್ಲಿ ಬೆಟ್ಟಗುಡ್ಡಗಳು ಒಂದು ರೀತಿ ನೈಸರ್ಗಿಕ ಕೋಟೆಗಳಂತಿವೆ. ಸಂತೆಗುಡ್ಡ, ನುಂಕಿಮಲೆ, ಜಟಂಗಿರಾಮೇಶ್ವರ, ಉಚ್ಚಂಗಿದುರ್ಗ, ಚಿತ್ರದುರ್ಗ, ಜಾನಕಲ್ಲು ಕೋಟೆಗಳು ಭಾರಿ ಎತ್ತರದ ಹೆಬ್ಬಂಡೆಗಳ ಮೇಲೆ ನಿರ್ಮಾಣವಾಗಿರುವುದರಿಂದ ಇಲ್ಲಿ ಕೆಲವು ಕಡೆ ಕೋಟೆ ಗೋಡೆಯ ಪಾತ್ರವನ್ನು ಕಡಿದಾದ ಬಂಡೆಗಳೇ ನಿರ್ವಹಿಸಿದೆ. ಚಿತ್ರದುರ್ಗ ಕೋಟೆಗೆ ದಕ್ಷಿಣ ಭಾಗಕ್ಕೆ ಆಳವಾದ ಪ್ರಪಾತವಿದ್ದು ರಕ್ಷಣಾತ್ಮಕವಾಗಿ ಇಲ್ಲಿ ಪ್ರಕೃತಿ ಸಹಕಾರಿಯಾಗಿದೆ. ಈ ರೀತಿಯ ಪ್ರಕೃತಿ ಸಹಾಯದಿಂದ ಕೋಟೆಗಳನ್ನು ನಿರ್ಮಿಸಿರುವುದರಿಂದ ಮಾನವನ ಶಕ್ತಿ ಮತ್ತು ಸಂಪನ್ಮೂಲಗಳು ಬಳಿಕೆಯಾಗುತ್ತವೆ. ಜೊತೆಗೆ ಪ್ರಕೃತಿನಿರ್ಮಿತ ಕೋಟೆಯು ಯಾವಾಗಲೂ ಶಾಶ್ವತ ರಚನೆಯಾಗಿರುತ್ತದೆ. ಒಟ್ಟಾರೆ ನೈಸರ್ಗಿಕ ಸುಭದ್ರತೆ ಕೋಟೆ ನಿರ್ಮಾಣಕ್ಕೆ ವರದಾನವಾಗಿದೆಯೆಂದು ಹೇಳಬಹುದು.

೩.೧೫ ಕೋಟೆಯಲ್ಲಿನ ಇತರೆ ಕಟ್ಟಡಗಳು ಮತ್ತು ವಾಸ್ತು

ಸಾಮಾನ್ಯವಾಗಿ ಪ್ರತಿಯೊಂದು ವರ್ಗದ ಕಟ್ಟಡಗಳು ಕೋಟೆಗಳ ನಿರ್ಮಾಣಗಳಿಗೆ 'ಮಾಯಮತ' ಮತ್ತು 'ಮಾನಸಾರ' ಮಾರ್ಗಸೂಚಿಯಾಗಿವೆ. ಕರಾರುವಕ್ಕಾದ ಒಂದು ಕೋಟೆಯಲ್ಲಿ ಕನಿಷ್ಠ ಪಕ್ಷ ೧೩ ಗೋಡೆಗಳಿರಬೇಕು. ಕಲ್ಲಿನಿಂದ ನಿರ್ಮಿಸಿದ ಕನಿಷ್ಠ ೧೮ ಅಡಿ ಎತ್ತರ ಮತ್ತು ಸಾಕಷ್ಟು ಭದ್ರತೆಯಿಂದ ಕೂಡಿದ ದಪ್ಪನಾದ ಹೊರಗೋಡೆಗಳಿರಬೇಕು. ಈ ಹೊರಗೋಡೆಗಳು ನಗರ ಮತ್ತು ಜನವಸತಿಯನ್ನು ಪ್ರದೇಶವನ್ನು ರಕ್ಷಿಸುವುದೇ ಆಗಿರುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಚಿತ್ರದುರ್ಗ ಮತ್ತು ಮೊಳಕಾಲ್ಮೂರು ಕೋಟೆಗಳು. ಶುಕ್ರಾಚಾರ್ಯರ ಅಭಿಪ್ರಾಯದಂತೆ ರಾಜಮನೆತನದ ಜನವಸತಿ ಪ್ರದೇಶ

[illegible]

[illegible]

ಮಧ್ಯೆದಲ್ಲಿ ಒಂದು ಸಭಾ ಅಥವಾ ಸಭಾಂಗಣವಿರುತ್ತಿತ್ತು. ಈ ಪ್ರದೇಶವು ಹಲವಾರು ರಕ್ಷಣಾತ್ಮಕವಾದ ಗೋಡೆಗಳಿಂದ ಹಾಗೂ ಕಂದಕಗಳಿಂದ ಸುತ್ತುವರೆಯಲ್ಪಟ್ಟಿರುತ್ತದೆಂದು ಹೇಳಲಾಗಿದೆ.[೧೦೦] ರಕ್ಷಣಾತ್ಮಕವಾದ ಪ್ರದೇಶದಲ್ಲಿನ ಕೋಟೆಯ ನಿವಾಸಿ ಪ್ರದೇಶಗಳನ್ನು 'ಶಿಲ್ಪಶಾಸ್ತ್ರ' ಎಂಬ ಗ್ರಂಥದಲ್ಲಿ ಕೆಳಗಿನಂತೆ ಉಲ್ಲೇಖಿಸಲಾಗಿದೆ.[೧೦೧]

೧. ಸಾಮಾನ್ಯವಾಗಿ 'ಜನಭವನಗಳು' ಎಂಬ ಜನಸಾಮಾನ್ಯ ಮನೆಗಳು

೨. ರಾಜಮನೆತನದವರಿಂದ ನಿರ್ಮಿಸಲಾದ ಭವ್ಯ ಅರಮನೆಗಳಾದ 'ರಾಜಭವನಗಳು'

೩. ದೇವ ಭವನಗಳೆಂದು ಕರೆಯಲಾಗಿರುವ ಧಾರ್ಮಿಕ ಮಂದಿರಗಳು

೪. ಸಾರ್ವಜನಿಕ ಕಟ್ಟಡಗಳು

ಸಾಮಾನ್ಯವಾಗಿ ಜನಭವನಗಳು ಹೊರಕೋಟೆಯಲ್ಲಿರುತ್ತವೆ. ಇವರಿಗಾಗಿ ಪ್ರತ್ಯೇಕವಾದ ಬಾವಿ ದೇವಾಲಯ, ರಸ್ತೆ, ಕೆರೆ, ಜಲಾಶಯಗಳಿರುತ್ತವೆ. ಜೊತೆಗೆ ಉದ್ಯಾನವನಗಳು ಇರುತ್ತವೆ.

ಕೋಟೆಯ ೧/೪ ಭಾಗ ಇಲ್ಲವೆ ೧/೩ ಭಾಗ ಅರಮನೆಯನ್ನು ಆವರಿಸುತ್ತದೆ. ಈ ಸ್ಥಳವು ಕೋಟೆಯ ಪೂರ್ವ ಅಥವಾ ಪಶ್ಚಿಮ ದಿಕ್ಕಿನಲ್ಲಿರಬಹುದು. ಅರಮನೆಯ ಪ್ರವೇಶದ್ವಾರವು ಪೂರ್ವ ಅಥವಾ ದಕ್ಷಿಣ ದಿಕ್ಕಿನಲ್ಲಿರಬೇಕು. ಅರಮನೆಯ ಪ್ರವೇಶದ್ವಾರಗಳ ಮೇಲೆ ಗೋಪುರಗಳಿರುವುದರ ಜೊತೆಗೆ ಮುಖ್ಯ ಪ್ರವೇಶದ್ವಾರದ ಮೇಲೆ ಹೆಚ್ಚು ಎತ್ತರದ ಗೋಪುರವಿರಬೇಕು.

ಅರಮನೆಯಲ್ಲಿ ಉದ್ಯಾನಗಳು, ಪುಷ್ಕರಣಿಗಳು, ಮಂತ್ರಿಗಳ ನಿವಾಸಗಳು, ರಾಜರ ದೇವ ಮಂದಿರಗಳು ಅಥವಾ ಇರಬೇಕೆಂದು ಹೇಳಲಾಗಿದೆ. ಶಸ್ತ್ರಗಳು ಪಶ್ಚಿಮಕ್ಕಿರಬೇಕು. ಸಭಾಂಗಣಗಳು ಅರಮನೆಯ ಮುಂಭಾಗವನ್ನು ಆಕ್ರಮಿಸಿರಬೇಕು.[೧೦೨] ರಾಣಿಯರ ಅಂತಃಪುರವನ್ನು ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲಿ ನಿರ್ಮಿಸಬೇಕು. ಅರಮನೆಯ ಮುಖ್ಯ ಬಲ ಅಥವಾ ಎಡಭಾಗದಲ್ಲಿ ಆನೆ ಅಥವಾ ಕುದುರೆಗಳನ್ನು ಕಟ್ಟುವ ಜಾಗವಿರಬೇಕು. ರಾಜನ ಅರಮನೆಯ ಅಂತಸ್ತುಗಳಿಂದ ಕೂಡಿರಬೇಕು ಎಂದು ಹೇಳಲಾಗಿದೆ.[೧೦೩] ಹೀಗೆ ಕೋಟೆ ಹಾಗೂ ಕೋಟೆಸಂಬಂಧಿ ಇತರೆ ಸ್ಮಾರಕಗಳನ್ನು ವಾಸ್ತುಲಕ್ಷಣಗಳಿಗೆ ಅನುಗುಣವಾಗಿ ನಿರ್ಮಿಸಿರುವುದನ್ನು ಕೋಟೆಗಳಲ್ಲಿ ಕಾಣಬಹುದು.

೩.೧೬ ಸಾಹಿತ್ಯದಲ್ಲಿ ಕೋಟೆಗಳ ವರ್ಣನೆ

ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ ತ್ಯಾಗದಷ್ಟೇ ಮುಖ್ಯವಾದದ್ದು ವೀರತ್ವ. ಈ ವೀರತ್ವವನ್ನು ಪ್ರದರ್ಶಿಸುವ ಸ್ಥಳಗಳೇ ಕೋಟೆ ಕೊತ್ತಲಗಳು. ಕರ್ನಾಟಕದಲ್ಲಿ ಇಂತಹ ಕೋಟೆಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ಇಂತಹ ಭಿನ್ನತೆಯನ್ನು ಇಲ್ಲಿಯೂ ಕಾಣಬಹುದಾಗಿದೆ. ಇದಕ್ಕೆ ಕಾರಣ

ಸ್ಥಳೀಯ ರಾಜರ ಆರ್ಥಿಕ ಸಂಪನ್ಮೂಲಗಳಿರಬೇಕು ಅಥವಾ ತಮ್ಮ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಇವುಗಳನ್ನು ನಿರ್ಮಿಸಿರಬೇಕು. ಒಟ್ಟಾರೆ ಕನ್ನಡನಾಡಿನ ಇಂತಹ ಕೋಟೆಗಳ ಬಗ್ಗೆ ಶಾಸನಾಧಾರಗಳು ವಿರಳವಾಗಿದ್ದರೂ, ಸಾಹಿತ್ಯಕ್ಕೆ ಕೊರತೆ ಇಲ್ಲ, ಅದರಲ್ಲೂ ಕನ್ನಡಿಗರ ಕೋಟೆ ಕಾಳಗದ ಹಿರಿಮೆ ಗರಿಮೆಗಳನ್ನು ಕುರಿತು ಸುಪುಷ್ಟವಾದ ಸಾಹಿತ್ಯವಿದೆ. ಅಗ್ಗಳನ(೧೧೮೯) ಚಂದ್ರಪ್ರಭ ಪುರಾಣವು ಕೋಟೆಯ ಕಾಳಗದ ಬಗ್ಗೆ ಈ ರೀತಿ ವರ್ಣಿಸುತ್ತದೆ :

ಬಿಡುವುರಿಯಣ್ಣೆ ಸೂಸುವ ಕವಲಿಡಿ ಬೀಡುವ ಪಾಕಮೊರೆಯಿಂ
ದಿಡುವರೆ ಪೊಯ್ಸು ಕತ್ತಳಿಕೆ, ಕುತ್ತುವ ಕೊಂಡಮರುಳ್ವ ವೊಡ್ಡುಗಲ್

ಹರಿಹರನು ಗಿರಿಜಾಕಲ್ಯಾಣದಲ್ಲಿ ಕೋಟೆಯ ಗೋಡೆ, ತೆನೆ, ಕೊತ್ತಳ ಮುಂತಾದವುಗಳ ಬಗ್ಗೆ,

ಪಳಕಿನ ಕೋಟೆ ಬಟ್ಟದೆನೆ ಬೇವಿನ ದಂಡೆ ನಭಕ್ಕೆ ಮೀರುವ
ಮಳೆ ನಿಮಿದೇರಿ ಪಾರುವ ಪತಾಕೆ ವಿರಾಜಿತ ಗೊಂಟು ಗೊಂಟಿನೊಳ್
ಬಳಸಿದ ಕೊತ್ತಳು ಸೊಗೆಯಿ ಪಾಳ್ವಂ ಡೆಂಕಣ ಸರಾವೂರಿಯ
ಗೂಳಿಸುವ ಗೋಪುರಂ ಪುಲಿವೊಗಂ ವೊರಗುಂ ಪುರದೊಳ್ ನಿರಂತರಂ ಎಂದು ಹೇಳಿದ್ದಾನೆ[೧೦೪]

ಅದೇ ರೀತಿ ಸೋಮದೇವನು ತನ್ನ ನೀತಿವಾಕ್ಯಾಮೃತದಲ್ಲಿ ಕೋಟೆಗಳು ಸ್ವಾಭಾವಿಕ ಹಾಗೂ ಮಾನವನಿರ್ಮಿತ ಎಂದು ಹೇಳಿದ್ದಾನೆ.[೧೦೫]

ಕನಕದಾಸರು ತನ್ನ ಮೋಹನತರಂಗಿಣಿಯಲ್ಲಿ ಕೋಟೆಯ ಅಂಗಾಂಗಗಳನ್ನು ಕಣ್ಣಿಗೆ ಕಟ್ಟುವ ಹಾಗೆ ಹೇಳಿದ್ದಾರೆ.[೧೦೬] ಇವರು ಇಂತಹ ಕೋಟೆಗಳನ್ನು ಜ್ಯೋತಿಷ್ಯಚಕ್ರಕ್ಕೆ ಹೋಲಿಸಿದ್ದಾರೆ :

ಕೊತ್ತಳ ಮುಗಿಲಟ್ಟಳಿ ಕೊಂಟಿಯ ತೆನೆ
ಹೊತ್ತ ಹೊಂಗಳ ಸಂಗಳಿಂದೆ
ಸುತ್ತ ನೊಂದಿದೆಡೆ ಜ್ಯೋತಿಷ್ಯಚಕ್ರದಂತೆ ದೇ
ವೊತ್ತಮನೂರು ರಂಜಿಸಿತು.

ಗೋವಿಂದವೈದ್ಯನು(೧೬೪೮) ತನ್ನ ಕಂಠೀರವ ನರಸರಾಜ ವಿಜಯದಲ್ಲಿ ತಾನು ಕಣ್ಣಾರೆ ಕಂಡ ವಾಸ್ತವಾಂಶಗಳನ್ನು ವಿವರಿಸಿದ್ದಾನೆ. ಈ ಗ್ರಂಥವು ಕೋಟೆಗಳ ಬಗ್ಗೆ ಅಧ್ಯಯನ ಮಾಡುವವರಿಗೆ ಅತಿ ಪ್ರಮುಖ ಆಕರವಾಗಿದೆಯಲ್ಲದೆ ಕೋಟೆಗಳ ಜೊತೆಗೆ ರಾಜ್ಯದ ಗಡಿ ದುರ್ಗಗಳ ಪಾತ್ರವನ್ನು ವಿವರಿಸುತ್ತದೆ.[೧೦೭]

ಪಟ್ಟಣ ಮೊದಲಾದ ಗಡಿಯ ದುರ್ಗಂಗಳ
ಗೊಟ್ಟಿಸಿ ಸಂವರಣೆಗಳ
ಕಟ್ಟೆಚ್ಚರೊಲಿಸೆಂದು ನಂಜೇಂದ್ರಗೆ
ಸೃಷ್ಟೀಶ್ವರ ನೇಇಸಿದ.

ಇದೇ ಗ್ರಂಥವು ಕೋಟೆಯಲ್ಲಿರುವ ಕಳ್ಳಕಿಂಡಿಗಳ ಸುರಂಗ ಮಾರ್ಗಗಳ ಬಗ್ಗೆ ನೈಜ ಚಿತ್ರಣವನ್ನು ಕೊಡುತ್ತದೆ:

ಚೋರ ಕಂಡಿಗಳಂಬು ಕಂಡಿಗಳೆಂಟು ಗುರಿ
ಯೇರಿಸಿ ಮೆರೆವ ಕೈಗೋವಿ
ನೀರ ತುಂಬುವ ದಿಡ್ಡಿಗಳ ಸುರಂಗದ್ವಾರ
ತೋರಿಸಿತು ಕಣ್ಣಕೌತುಕವ.

ವಿರೂಪಾಕ್ಷ ಪಂಡಿತನು ಚನ್ನಬಸವಪುರಾಣದಲ್ಲಿ ಕೋಟೆಯ ಸಂರಕ್ಷಣೆಯನ್ನು ಕಣ್ಣಾರೆ ಕಂಡಂತೆ ವರ್ಣಿಸಿರುವನು. ಈತನು ಕೋಟೆಯ ಕಾಳಗದಲ್ಲಿ ಬಳಸುವ ಆಯುಧಗಳ ಬಗ್ಗೆ ಈ ರೀತಿ ವಿವರಿಸಿದ್ದಾನೆ:[೧೦೮]

ಸುರಿವ ಮಳಲಿನ ಕಾಸುವಂಬಲಿಯ ಬಿಸಿ ಎಣ್ಣೆ
ವರವಿಗಳ ಪುರಿದ ಪುಲ್ಲೊಂದೆಗಳ ತರತದೊಳಿಸಿದೆ
ಬಲ್ಲೊಲೆಯ ಡೆಂಕಣಿಯ ಮರಳ ಕೈಗಳ ನೆಟುಬಲ್ಲಸೆಗಳ
ಪರಿಪರಿಯು ಗುಂಡುಗೋವಿಯ ಕುರಿವ ಸುಣ್ಣಗಳ
ಪಿರಿದಾದ ಗುಂಡುಗಳ ಕವಣೆಗಳ ಸಬಳಗಳ
ಸುರಿದ ಕಲ್ಲಳ ಪರಿದಿದಲೆಯ ವೊತ್ತಂಗಳಾಳ್ವೇರಿಯಾಳ್
ಪಸರಿಸಿದವು.

ಶಿವತತ್ವರತ್ನಾಕರದಲ್ಲಿ ಕೋಟೆಗಳಲ್ಲಿ ಎಷ್ಟು ವಿಧ? ಅವುಗಳನ್ನು ಹೇಗೆ ವಶಪಡಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಹೇಳುತ್ತದೆ. ಅಲ್ಲದೆ ಕೊಟಾಚಕ್ರ ಶಾಸ್ತ್ರದ ಬಗ್ಗೆಯೂ ಮಾಹಿತಿಯನ್ನು ನೀಡುತ್ತದೆ. ಕೋಟಾಚಕ್ರಶಾಸ್ತ್ರ ಎಂದರೆ ಕೋಟೆಗಳ ಮೇಲೆ ಯುದ್ಧ ಮಾಡುವುದಕ್ಕಿಂತ ಆಗುವ ಜಯಾಪಜಯಗಳನ್ನು ಮೊದಲೇ ಖಚಿತಪಡಿಸಿಕೊಳ್ಳಲು ಉಪಯೋಗಿಸುವ ಶಾಸ್ತ್ರ.[೧೦೯] ಹೀಗೆ ಅನೇಕ ಗ್ರಂಥಗಳು, ಕೋಟೆಗಳ ವರ್ಣನೆಯನ್ನು ಮಾಡುತ್ತವೆ.

೩.೧೨ ಕೋಟೆಯ ಪ್ರಕಾರಗಳು

ಭಾರತದಲ್ಲಿ ರಚನೆಗೊಂಡ ಕೋಟೆಗಳನ್ನು ಅನೇಕ ಶಾಸ್ತ್ರಗ್ರಂಥಗಳ ಆಧಾರದ ಮೇಲೆ ರಚಿಸಲಾಗಿದೆ(ಅನುಬಂಧ ನೋಡಿ). ಭಾರತದ ಅನೇಕ ಪ್ರಾಚೀನ ಗ್ರಂಥಗಳು ವಾಸ್ತುಶಿಲ್ಪ, ನಗರಯೋಜನೆ, ದುರ್ಗರಚನೆ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿವೆ. ಇಂತಹ ಶಾಸ್ತ್ರಗ್ರಂಥಗಳು ಕೋಟೆಯ ರಚನಾಸ್ಥಳ, ಕೋಟೆಗಳನ್ನು ನಿರ್ಮಿಸುವ ವಿಧಾನ ಮತ್ತು ಕೋಟೆಗಳ ಪ್ರಕಾರ ಮೊದಲಾದ ವಿಷಯಗಳನ್ನು ಚರ್ಚಿಸಿವೆ.

ಕ್ರಿ.ಪೂ.೩೦೦ರ ಕಾಲಕ್ಕೆ ಸೇರಿದ್ದ ಕೌಟಿಲ್ಯನು ಚಂದ್ರಗುಪ್ತನಿಗೆ ಸಹಾಯ ನೀಡಿ ಮೌರ್ಯವಂಶವನ್ನು ಸ್ಥಾಪಿಸಿ ಕೆಲಕಾಲ ಅವನ ಮಂತ್ರಿಯೇ ಆಗಿದ್ದನು. ಇವನು ಅರ್ಥಶಾಸ್ತ್ರ ಎಂಬ ಗ್ರಂಥವನ್ನು ರಚಿಸಿರುವನು. ಇವನು ತನ್ನ ಅರ್ಥಶಾಸ್ತ್ರದಲ್ಲಿ ಐದು ಪ್ರಕಾರದ ಕೋಟೆಗಳನ್ನು ಉಲ್ಲೇಖಿಸಿದ್ದಾನೆ.[೧೧೦] ಅವುಗಳೆಂದರೆ :

೧. ಔದಕ ಜಲದುರ್ಗ - ಜಲದುರ್ಗ

೨. ಪರ್ವತ ಗಿರಿದುರ್ಗ - ಗಿರಿದುರ್ಗ

೩. ದಾನವನ ಮರುಭೂಮಿ ದುರ್ಗ - ಮುರುಭೂಮಿ ದುರ್ಗ

೪. ವನದುರ್ಗ ಅರಣ್ಯ ಕೋಟೆ - ವನದುರ್ಗ

೫. ಖಾಜನ - ಮಿಶ್ರದುರ್ಗ

ಈ ಮೇಲ್ಕಾಣಿಸಿದ ಕೋಟೆ ಪ್ರಕಾರಗಳಲ್ಲಿ ಕೌಟಿಲ್ಯ ಔದಕ ಮತ್ತು ಪರ್ವತಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ಏಕೆಂದರೆ ಇವು ಅಧಿಕ ರಕ್ಷಣೆ ಕೊಡುತ್ತವೆ.

ವಿಶ್ವಕರ್ಮ ವಾಸ್ತುಶಿಲ್ಪವು ಕೋಟೆಯ ಪ್ರಾದೇಶಿಕತೆ ಸ್ವರೂಪ ಅದರ ದ್ವಾರಗಳು ಹಾಗೂ ಅದರ ತಾಂತ್ರಿಕತೆಯ ಆಧಾರದ ಮೇಲೆ ಕೋಟೆಯನ್ನು ಹನ್ನೆರಡು ವಿಧಗಳಲ್ಲಿ ವಿಂಗಡಿಸುತ್ತದೆ.[೧೧೧] ಅವುಗಳೆಂದರೆ

೧. ಪ್ರಾದೇಶಿಕತೆ
- ೧. ಗಿರಿದುರ್ಗ
- ೨. ವನದುರ್ಗ
- ೩. ಜಲದುರ್ಗ
- ೪. ಐರಿಣದುರ್ಗ
- ೫. ದೈವದುರ್ಗ
- ೬. ಪರ್ವತದುರ್ಗ
- ೭. ಕೂರ್ಮದುರ್ಗ

೨. ದ್ವಾರಗಳು
- ೧. ಏಕ ಮುಖದುರ್ಗ
- ೨. ದ್ವಿಮುಖದುರ್ಗ
- ೩. ಚತುರ್ಮುಖದುರ್ಗ

೩. ತಾಂತ್ರಿಕತೆ
- ೧. ಪ್ರಭುದುರ್ಗ
- ೨. ಯುದ್ಧದುರ್ಗ

ಶುಕ್ರನ ನೀತಿಸಾರವು ಒಂಭತ್ತು ಪ್ರಕಾರದ ಕೋಟೆಗಳನ್ನು ನಮೂದಿಸಿದೆ :

೧. ಐರಿಣ - ಹಳ್ಳಗಳು, ಮುಳ್ಳುಗಳು ಮತ್ತು ಕಲ್ಲುಗಳಿಂದ ಸುತ್ತುವರೆಯಲ್ಪಟ್ಟಿರುವುದು.

೨. **ಪರಿಖ** - ಆಳವಾದ ಕಂದಕಗಳಿಂದ ಸುತ್ತುವರಿದಿರುವುದು.

೩. **ಪರಿಘು** - ಇಟ್ಟಿಗೆ, ಕಲ್ಲು ಮತ್ತು ಮಣ್ಣುಗಳಿಂದ ತುಂಬಿದ ಹೊರ ಗೋಡೆಗಳು.

೪. ವನ - ದಟ್ಟವಾದ ಅರಣ್ಯದಲ್ಲಿದ್ದು ಮುಳ್ಳು, ಮರಗಳಿಂದ ಆವೃತವಾಗಿರುವುದು.

೫. ಧನ್ವ - ಒಣಭೂಮಿಯಲ್ಲಿದ್ದು ನೀರಿಲ್ಲದೆ ಕೇವಲ ಮಣ್ಣಿನಿಂದ ಆವರಿಸಲ್ಪಟ್ಟಿರುವುದು.

೬. ಜಲ - ಎಲ್ಲಾ ಭಾಗಗಳಲ್ಲಿಯೂ ನೀರಿನಿಂದ ಸುತ್ತುವರಿಯಲ್ಪಟ್ಟಿರುವ ಕೋಟೆಗಳು.

೭. ಗಿರಿ - ನೀರಿಲ್ಲದ ನಿರ್ಜನ ಪ್ರದೇಶದಲ್ಲಿ ಎತ್ತರವಾದ ಗೋಡೆಗಳಿಂದ ಕಟ್ಟಿರುವುದು.

೮. ಸೈನ್ಯ - ಶಸ್ತ್ರಸನ್ನದ್ಧರಾದ, ಸದೃಢವಾದ ಸೈನಿಕರಿಂದ ರಕ್ಷಿಸಲ್ಪಟ್ಟಿರುವ ಆವರಣ.

೯. **ಸಹಾಯ** - ಬಂಧುಗಳು ಮತ್ತು ಸ್ನೇಹಿತರ ಮನೆಗಳಿಂದ ಆವೃತ್ತವಾಗಿರುವುದು.

ಮೇಲೆ ಹೇಳಿದ ಪ್ರಕಾರಗಳಲ್ಲಿ ಶುಕ್ರನು ತನ್ನ ಅಭಿಪ್ರಾಯವನ್ನು ಹೀಗೆ ಹೇಳುತ್ತಾನೆ. 'ಪರಿಘು'ಕ್ಕಿಂತ ಐರಿಣ ಉತ್ತಮವಾಗಿದೆ. ಐರಿಣನಿಂತ ಉತ್ತಮವಾದ ಕೋಟೆ, ವನ, ಪರಿಘಾಗಿಂತ ಹೆಚ್ಚು ರಕ್ಷಣೆಯನ್ನು ಕೊಡುತ್ತದೆ. ಸೈನಿಕ ಕೋಟೆ ಮತ್ತು ಸಹಾಯಕ ಕೋಟೆ ಬೇರೆ ಎಲ್ಲಾ ಕೋಟೆಗಳಿಗಿಂತಲೂ ಉತ್ತಮವಾದುದು.[೧೧೨]

ಸ್ಮೃತಿಕಾರ ಮನು ಆರು ಪ್ರಕಾರದ ಕೋಟೆಗಳನ್ನು ತಿಳಿಸಿದ್ದಾನೆ. ಅವುಗಳೆಂದರೆ ಧನು, ಮಹೀ, ಜಲ, ವೃಕ್ಷ, ಗಿರಿ ಮತ್ತು ನರದುರ್ಗ. ಇವುಗಳಲ್ಲಿ ಧನುದುರ್ಗ ಒಣಮಣ್ಣಿನಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಆದ್ದರಿಂದ ಬೇಸಿಗೆಯಲ್ಲಿ ಇದರ ಆಕ್ರಮಣಗಳಿಂದ ರಕ್ಷಿತವಾಗಿರುತ್ತದೆ. ಮನು ಗಿರಿದುರ್ಗವನ್ನು ಅತ್ಯುತ್ತಮವೆಂದು ಪರಿಗಣಿಸಿದ್ದಾನೆ. ಏಕೆಂದರೆ ಅದನ್ನು ಬಹಳ ಶ್ರಮದಿಂದ ಮಾತ್ರ ವಶಪಡಿಸಿಕೊಳ್ಳಲು ಸಾಧ್ಯ.

ಪುರಾಣಗಳಲ್ಲಿಯೂ ಸಹ ಅನೇಕ ಪ್ರಕಾರದ ಕೋಟೆಗಳ ಪ್ರಸ್ತಾಪ ಮಾಡಿದ್ದಾರೆ. ವಾಯು ಪುರಾಣದಲ್ಲಿ ನಾಲ್ಕು ಪ್ರಕಾರದ ಅಗ್ನಿ ಮತ್ತು ಮತ್ಸ್ಯ ಪುರಾಣಗಳಲ್ಲಿ ಆರು ಪ್ರಕಾರದ ಕೋಟೆಗಳ ಪ್ರಸ್ತಾಪವಿದೆ. ಮಹಾಭಾರತದ ಶಾಂತಿಪರ್ವ, ವಿಷ್ಣುಧರ್ಮೋತ್ತರ ಪುರಾಣ, ವಿಷ್ಣು ಧರ್ಮಸೂತ್ರ ಮುಂತಾದವುಗಳಲ್ಲಿ ಆರು ಬಗೆಯ ಕೋಟೆಗಳ ಪ್ರಸ್ತಾಪವಿದೆ. ಭಾಗವತ ಪುರಾಣ ಶಸ್ತ್ರದುರ್ಗ (ಸೈನಿಕರಿಂದ ರಕ್ಷಿತವಾದ ದುರ್ಗ)ದೊಂದಿಗೆ ಜಲ, ಅಗ್ನಿ ಮತ್ತು ದುರ್ಗ(ನೀರು, ಅಗ್ನಿ ಮತ್ತು ಬಲವಾದ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಗಾಳಿಯಿಂದ ಆವೃತ್ತವಾದ ಕೋಟೆಗಳು)ಗಳನ್ನು ತಿಳಿಸುತ್ತದೆ. ನರದುರ್ಗವೇ ಅತ್ಯುತ್ತಮವೆಂದು ಮಹಾಭಾರತ ತಿಳಿಸುತ್ತದೆ.

ಹನ್ನೆರಡನೇ ಶತಮಾನದ ಮೂರನೇ ಚಾಲುಕ್ಯ ಸೋಮೇಶ್ವರನ ಅಭಿಲಾಷಿತಾರ್ಥ ಚಿಂತಾಮಣಿ ಮತ್ತು ಹದಿನೇಳನೇ ಶತಮಾನದ ಕೆಳದಿಯ ಬಸವರಾಜನ ಶಿವತತ್ವರತ್ನಾಕರದಲ್ಲಿ ಒಂಭತ್ತು ಪ್ರಕಾರದ ಕೋಟೆಗಳನ್ನು ನಮೂದಿಸಿದ್ದಾರೆ.[೧೯]

೧. **ಜಲದುರ್ಗ** : ಆಳವಾದ ನೀರಿನಿಂದ ಆವರಿಸಲ್ಪಟ್ಟಿರುವುದು.

೨. **ಗಿರಿದುರ್ಗ** : ದುರ್ಗಮವಾದ ಬೆಟ್ಟದ ಮೇಲೆ ಕಟ್ಟಿದ ಹಾಗೂ ಸುತ್ತಲೂ ನೀರಿನಿಂದ ಆವೃತ್ತವಾಗಿರುವುದು.

೩. **ಪಾಷಾಣದುರ್ಗ** : ಬಂಡೆಗಳಿಂದ ರಚಿಸುವುದು.

೪. **ಇಷ್ಟಕದುರ್ಗ** : ಇಟ್ಟಿಗೆಗಳಿಂದ ಕಟ್ಟಿ ಸುಣ್ಣ ಬಣ್ಣ ಬಳಿದು ಅಗಲವಾದ ಮತ್ತು ಆಳವಾದ ಕಂದಕಗಳಿಂದ ಸುತ್ತುವರಿಯಲ್ಪಟ್ಟಿರುವುದು.

೫. **ಮೃತ್ತಿಕಾಮಯನ್** : ಮಣ್ಣಿನಿಂದ ಕಟ್ಟಿರುವುದು.

೬. **ವನದುರ್ಗ** : ದಟ್ಟವಾದ ಮುಳ್ಳುಮರಗಳಿಂದ ಆವರಿಸಲ್ಪಟ್ಟಿರುವುದು.

೭. **ಮರದುರ್ಗ** : ಕೋಟೆಯೊಳಗೆ ಸಾಕಷ್ಟು ನೀರನ್ನು ಸಂಗ್ರಹಿಸಿ ಮರುಭೂಮಿಯಲ್ಲಿ ಕಟ್ಟಿರುವುದು.

೮. **ದಾರುಣಮಯ ದುರ್ಗ** : ಮರ ಮತ್ತು ಬಂಬುಗಳಿಂದ ತಯಾರಿಸುವುದು.

೯. **ನರದುರ್ಗ** : ಸುತ್ತಲೂ ಶಸ್ತ್ರಸಜ್ಜಿತರಾದ ಯೋಧರಿಂದ ರಕ್ಷಿತವಾಗಿರುವುದು.

ಆಕಾಶ ಬೈರವಕಲ್ಪ ಎಂಬ ಶೈವ ತಂತ್ರದ ಭಾಗವಾದ ಸಾಮ್ರಾಜ್ಯಲಕ್ಷ್ಮಿಪೀಠಿಕಾ ಎಂದು ಕರೆಯಲ್ಪಡುವ ಗ್ರಂಥ ಚಕ್ರವರ್ತಿಗಳ ಕೆಲಸಕಾರ್ಯಗಳು ಕೋಟೆ ಅವುಗಳ ರಕ್ಷಣಾ ಕಾರ್ಯವನ್ನು ಸಹ ವಿವರಿಸುತ್ತದೆ.[೨೦] ವಾಸ್ತವವಾಗಿ ಈ ಗ್ರಂಥ ಕೋಟೆಗಳ ವಿವಿಧ ಪ್ರಕಾರಗಳು ಮತ್ತು ಅವುಗಳ ವಿವರಣೆಯನ್ನು ಕೊಡುತ್ತದೆ. ಇದರಲ್ಲಿ ರಾಜರು ಮತ್ತು ಚಿಕ್ಕ ಸಂಸ್ಥಾನದ ಮುಖ್ಯಸ್ಥರ ಅತಿ ಹೆಚ್ಚಿನ ಬಲ ಈ ಕೋಟೆಗಳೇ ಎಂದು ತಂತ್ರಗಳು ತಿಳಿಸುತ್ತವೆ. ಕೋಟೆಯಿಂದ ರಕ್ಷಿತವಾಗಿಲ್ಲದ ಪಟ್ಟಣಗಳನ್ನು ಶತ್ರುಗಳು ಬಹು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಲ್ಲದು. ಆದ್ದರಿಂದ ಆಳುವವರು ಅವಶ್ಯಕತೆಗನುಗುಣವಾಗಿ ಕೋಟೆಗಳನ್ನು ಕಟ್ಟಬೇಕು. ಎಂಟು ಪ್ರಕಾರದ ಕೋಟೆಗಳು ನಮೂದಿಸಲ್ಪಟ್ಟಿವೆ. ಅವುಗಳೆಂದರೆ ಗಿರಿದುರ್ಗ, ವನದುರ್ಗ, ಗಹ್ವರದುರ್ಗ, ಜಲದುರ್ಗ, ಕರ್ದಮದುರ್ಗ, ಮಿಶ್ರದುರ್ಗ,

ನರದುರ್ಗ ಮತ್ತು ಕಾಷ್ಠದುರ್ಗಗಳು. ಎತ್ತರವಾದ ಬೆಟ್ಟದ ಮೇಲೆ ಅಗಲವಾದ, ಅಗಮ್ಯವಾದ, ಅವ್ಯಾಹತವಾಗಿ ನೀರಿನಿಂದ ಕೂಡಿದ ಕಡಿದಾದ ಬಂಡೆಗಳನ್ನು ಹೊಂದಿದ ಮತ್ತು ಇಳುಕಲಾದ ಮೇಲೆ ಕೆಳಗೆ ಅನೇಕ ಪ್ರಕಾರಗಳಿಂದ ಸುತ್ತುವರೆಯಲ್ಪಟ್ಟಿರುವ, ಸುಲಭವಾಗಿ ಹತ್ತಲು ಅಸಾಧ್ಯವಾಗಿರುವ ಪಟ್ಟಣವನ್ನು ಗಿರಿದುರ್ಗವೆಂದು ಗ್ರಂಥಗಳಲ್ಲಿ ವರ್ಣಿಸಲಾಗಿದೆ. ಈ ಗಿರಿದುರ್ಗದಲ್ಲಿಯೂ ಎಂಟು ಪ್ರಕಾರಗಳಿವೆ.

೧. **ಭದ್ರಮ್** : ಎತ್ತರವಾದ, ವೃತ್ತಾಕಾರದ, ಹೊರ ಮೇಲ್ಮೈಸುತ್ತಲೂ ಥಳಕಿನಿಂದ ಕೂಡಿ, ಸಾಕಷ್ಟು ಗುಹೆಗಳು ಮತ್ತು ಪಥಿಕಾಶ್ರಮಗಳನ್ನು ಹೊಂದಿರುವ ಸಂಪೂರ್ಣ ನೀರಿರುವ ಒಂದೇ ಒಂದು ಬಂಡೆಯ ಮೇಲೆ ಕಟ್ಟಲ್ಪಟ್ಟಿರುತ್ತದೆ.

೨. **ಅತಿಭದ್ರಮ್** : ನೆಲದಿಂದ ಮೇಲಿನವರೆಗೂ ವರ್ಗಾಕಾರದಲ್ಲಿದ್ದು, ಅತಿ ಎತ್ತರವಾದ ಅಗಲವಾದ ಗುಹೆಗಳು ಮತ್ತು ನೀರಿನಿಂದ ಆವರಿಸ್ಪಟ್ಟಿರುತ್ತದೆ.

೩. **ಚಂದ್ರ** : ತಳದಲ್ಲಿ ದುಂಡಾಕಾರದ, ಅತಿ ಅಗಲವಾದ, ತುದಿ ಚಂದ್ರನ ಆಕಾರದಲ್ಲಿದ್ದು ಬಹಳವಾದ ನೀರಿನಿಂದ ಕೂಡಿದ್ದು, ದೇವತೆಗಳಿಗೂ ಅಗಮ್ಯವಾಗಿರುತ್ತದೆ.

೪. **ಅರ್ಧಚಂದ್ರ** : ಅರ್ಧ ಚಂದ್ರಾಕಾರವಾಗಿದ್ದು, ಅತಿ ಹೆಚ್ಚು ಎತ್ತರವೂ ಅಲ್ಲದ, ಅತಿ ಕಡಿಮೆಯೂ ಅಲ್ಲದ ಗುಹೆಗಳು, ಪಥಿಕಾಶ್ರಮಗಳು ಮತ್ತು ನೀರಿನಿಂದ ಕೂಡಿರುತ್ತದೆ.

೫. **ನಾಭ** : ತಳದಲ್ಲಿ ಸಂಕೀರ್ಣವಾಗಿ, ತುದಿಯಲ್ಲಿ ಅಗಲವಾಗಿದ್ದು, ಕ್ರಮವಾಗಿ ಹೆಚ್ಚುತ್ತಿದ್ದು, ಕಮಲದ ಬೀಜದ ಸಿಂಬಿಯ ಆಕಾರದಲ್ಲಿರುತ್ತದೆ.

೬. **ಸುನಾಭ** : ತಳದಲ್ಲಿ ಅಗಲವಾಗಿ ಮೇಲೆ ಹೋಗುತ್ತಾ ಚಿಕ್ಕದಾಗಿ ತುದಿಯಲ್ಲಿ ಕಿರಿದಾಗಿರುತ್ತದೆ.

೭. **ರುಚಿರಮ್** ಸೋಪಾನ ಮಾರ್ಗದ ಮೆಟ್ಟಿಲುಗಳ ಉದ್ದ ಮತ್ತು ಅಗಲಗಳು ಕ್ರಮವಾಗಿ ಅಗಲವಾಗುತ್ತಿದ್ದು ಉಪ್ಪರಿಗೆಯಂತಿದ್ದು, ಹೆಚ್ಚು ನೀರಿನಿಂದ ಕೂಡಿರುತ್ತದೆ.

೮. **ವರ್ಧಮಾನಮ್** ಮೃದಂಗ ಅಥವಾ ಮದ್ದಲೆಯ ಆಕಾರದಲ್ಲಿ ಇರುತ್ತದೆ.

ವನದುರ್ಗ ಅಂದರೆ ದಟ್ಟವಾದ ಮುಳ್ಳುಮರಗಳು, ಪೊದೆಗಳು ಮತ್ತು ಬಳ್ಳಿಗಳಿಂದ ಅರಣ್ಯದಲ್ಲಿ ಕಟ್ಟಿರುವ ಕೋಟೆ. ರಹಸ್ಯಮಾರ್ಗಗಳು, ಅಗಮ್ಯ ಪ್ರದೇಶಗಳು, ಸೂರ್ಯನ ಕಿರಣಗಳೂ ಅಲ್ಲಿ ಪ್ರವೇಶಿಸಲಾರವು. ಸಿಂಹ, ಹುಲಿ ಮುಂತಾದ ವನ್ಯ ಪ್ರಾಣಿಗಳು ವಾಸಿಸುತ್ತಿದ್ದು ಭಯೋತ್ಪಾದಕವಾಗಿರುವಂತಹ

ಕೋಟೆಗಳು, ಪುಲಿಂದ, ಪುಲ್ಕಸ, ಮ್ಲೇಚ್ಛ, ಶಿಬರ ಮುಂತಾದ ಪಂಗಡಗಳವರಿಂದ ಕಟ್ಟಲ್ಪಟ್ಟಿತ್ತು. ಸುತ್ತಲೂ ಅತಿ ಆಳವಾದ ಸಂಪೂರ್ಣ ನೀರಿನ ದೊಡ್ಡ ಸರೋವರಗಳು ಇರುತ್ತಿದ್ದವು.

ಗಹ್ವರದುರ್ಗ ನಗರವನ್ನು ರಕ್ಷಿಸುತ್ತದೆ. ಇದು ಸಮತಟ್ಟಲ್ಲದ ಕೇವಲ ಕಲ್ಲುಬಂಡೆಗಳೇ ಇರುವ ಭೂಮಿಯ ಮೇಲೆ ಕಟ್ಟಿರುತ್ತವೆ. ಗವಿ ಮತ್ತು ಗುಹೆಗಳಂತಿರುತ್ತದೆ. ಸುತ್ತಲೂ ಎಲ್ಲ ಕಡೆ ದೊಡ್ಡ ಮತ್ತು ಚಿಕ್ಕ ಕಲ್ಲುಗಳಿರುತ್ತವೆ. ಹತ್ತಿರದಲ್ಲಿ ವಾಸ ಮಾಡುವವರಿಗೇ ಅದು ಅಗೋಚರವಾಗಿರುತ್ತದೆ. ಸಾಕಷ್ಟು ಮರ ಸೌದೆ, ಹುಲ್ಲು ಮತ್ತು ನೀರು ಇರುತ್ತದೆ. ನೀರಿನ ಮಧ್ಯೆ ದ್ವೀಪದಂತೆ ಜಲದುರ್ಗ ಕಟ್ಟಲ್ಪಟ್ಟಿರುತ್ತದೆ. ಸುತ್ತಲೂ ದ್ವೀಪದಂತೆ ಜಲದುರ್ಗದಂತಿರುತ್ತದೆ. ಸುತ್ತಲೂ ಕೆಸರು ತುಂಬಿದ್ದು, ಜಾರುವ ಕೆಸರಿನ ಮಧ್ಯೆ ಮುಚ್ಚಿ ಹೋಗಿರುವ ಕೋಟೆ ಪಂಕದುರ್ಗ, ಮಿಶ್ರದುರ್ಗ ಬೆಟ್ಟದ ಮೇಲೆ ಕಟ್ಟಲ್ಪಟ್ಟಿರುತ್ತದೆ. ವನದುರ್ಗದ ಸುತ್ತಲೂ ವಿವಿಧ ಪ್ರಕಾರದ ಶಸ್ತ್ರಗಳಿಂದ ಸುಸಜ್ಜಿತರಾದ ಸೈನಿಕ ಯೋಧರಿಂದ ರಕ್ಷಿಸಲ್ಪಡುತ್ತದೆ. ಕೋಷ್ಠದುರ್ಗ ಎತ್ತರವಾದ ಪ್ರಕಾರಗಳನ್ನು ಹೊಂದಿರುತ್ತದೆ. ಸುತ್ತಲೂ ಸುರಂಗಗಳು, ಅನೇಕ ರೀತಿಯ ಪದಾರ್ಥಗಳು, ಆಯುಧಗಳು, ಕಟ್ಟಿಗೆಗಳು, ನೀರು ಮುಂತಾದವು ಇರುತ್ತವೆ. ಆಕಾರ, ಪ್ರಕಾರಗಳ ಸಂಖ್ಯೆ ಮತ್ತು ಅವುಗಳ ಉದ್ದ ಅಗಲಗಳಿಗೆ ಅನುಗುಣವಾಗಿ ವೇದಸ್ರ, ವರ್ತುಲ, ದೀರ್ಘವರ್ತುಲ, ಪಂಚಕೋಣ, ಷಟ್‌ಕೋಣ, ಅಷ್ಟಾಶ್ರಮ, ಪದ್ಮಸನ್ನಿಭ ಎಂದು ಕೋಷ್ಠದುರ್ಗದ ಎಂಟು ಪ್ರಕಾರದ ವಿವರಣೆಗಳು ಇವೆ.

ಮೇಲಿನ ಎಲ್ಲಾ ಗ್ರಂಥಗಳು ಕೋಟೆಯ ಪ್ರಕಾರಗಳನ್ನಲ್ಲದೆ ಕೋಟೆಯಲ್ಲಿ ಇಡಬಹುದಾದ ಪದಾರ್ಥಗಳ ಸೂಚಿಯನ್ನು ತಿಳಿಸುತ್ತವೆ. ಶತ್ರುಗಳು ದಾಳಿ ಮಾಡಿದಾಗ ಅಂತಹ ಆಪತ್ತಿನ ಸಮಯದಲ್ಲಿ ಕೋಟೆಗಳು ತನ್ನಲ್ಲಿ ಎಲ್ಲವನ್ನು ಅಡಗಿಸಿಕೊಳ್ಳುವಂತಿರಬೇಕು. ಎಲ್ಲ ರೀತಿಯ ಶಸ್ತ್ರಗಳು, ಮರಳು, ಪಾತ್ರೆಗಳು, ಔಷಧಗಳು, ಮೇವು, ಕಟ್ಟಿಗೆಗಳು, ಬೆಲ್ಲ, ತುಪ್ಪ, ಜೇನುತಪ್ಪ ಎಲ್ಲಾ ರೀತಿಯ ಎಣ್ಣೆಗಳನ್ನು ಸಂಗ್ರಹಿಸಿಡಬೇಕು. ರಾಜನು ಎಲ್ಲಾ ಧಾನ್ಯಗಳು ಹಾಲು, ಬೆಣ್ಣೆ, ಮೊಸರು ಮುಂತಾದವುಗಳನ್ನು ಶೇಖರಿಸಿಟ್ಟಿರಬೇಕು. ಕೋಟೆಯ ಬಾಗಿಲು ಗುಪ್ತ ಸ್ಥಾನದಲ್ಲಿರಬೇಕು. ಅನೇಕ ವಿಧದ ಯಂತ್ರಗಳನ್ನು ಮತ್ತು ಆಯುಧಗಳನ್ನೂ ಸಹ ಕೋಟೆಯಲ್ಲಿ ಶೇಖರಿಸಿಟ್ಟಿರಬೇಕು. ಸಾಮ್ರಾಜ್ಯಲಕ್ಷ್ಮಿಪೀಠಿಕಾ ಗ್ರಂಥಗಳಲ್ಲಿ ಹೇಳಿರುವ ಕೋಷ್ಠದುರ್ಗ ಸಹ ಒಂದು ಸಂಗ್ರಹಕೋಟೆ. ಅದು ಪ್ರತ್ಯೇಕವಾಗಿ ದಿನಸಿಗಳು, ಆಯುಧಗಳು, ಮೇವು, ಸಿಪಾಯಿ ಮುಂತಾದವುಗಳನ್ನು ಮುಂದಾಗಿ ಶೇಖರಿಸುವುದಕ್ಕಾಗಿಯೇ ಇರುವ ಕೋಟೆ, ಕೋಟೆಯ ಗೋಡೆ, ಬುರುಜು, ಕಂದಕ, ಕಂಭ, ಸರೋವರಗಳು ಮುಂತಾದವುಗಳನ್ನು ರಚಿಸುವ ವಿಧಾನಗಳನ್ನು ಕೌಟಿಲ್ಯ ಸೂಚಿಸುತ್ತಾನೆ.[೧೧೫] ಹೀಗೆ ಅನೇಕ ಗ್ರಂಥಗಳು ಕೋಟೆಯ ವರ್ಣನೆಯ ಹಾಗೂ ಪ್ರಕಾರಗಳು ತಿಳಿಸುತ್ತವೆ.

[illegible]

ಟಿಪ್ಪಣಿಗಳು

೧. ರಾಮಶೇಷನ್ ಎ.ಕೃ., ೧೯೮೦, ಕರ್ನಾಟಕದ ಕೋಟೆಕೊತ್ತಲುಗಳು, ಪು.೯

೨. Jagadish Ayyar P.V., 1921-22, Construction of Forts, Q.J.M.S., Vol-xii, p.370

೩. Deshapande D.N., 1971, Martha Forts(Unpublished Thesis), poona University, p.1o

೪. ಬೆಟಗೇರಿ ಕೃಷ್ಣಶರ್ಮ, ೧೯೩೯, ಕರ್ನಾಟಕ ಜನಜೀವನ, ಪು.೩

೫. Joshi S.K., 1985, Defence Architecture in Early Karnatka, P.3

೬. Date G.T., 1929, Art of War in Ancient India, P.487

೭. Straith H., Treatise on Fortification and Artillary, P.42

೮. The Encyclopaedia America-international Editions, Vol-ii, P.622

೯. The Encyclopaedia Britanica, Vol-vii, P.285

೧೦. ಕನ್ನಡ ವಿಷಯ ವಿಶ್ವಕೋಶ, ಪು.೪೦೬

೧೧. American Encyclopaedia, Vol-vii, P.622

೧೨. ಕನ್ನಡ ವಿಷಯ ವಿಶ್ವಕೋಶ, ಪು.೪೦೬

೧೩. American, Encyclopaedia, Vol-vii, P.622

೧೪. ಕನ್ನಡ ವಿಶ್ವಕೋಶ, ಸಂ.೭, ಪು.೯೭೯

೧೫. The Encyclopaedia Britanica, Vol-vii, P.15

೧೬. ಕನ್ನಡ ವಿಷಯ ವಿಶ್ವಕೋಶ, ಪು.೪೦೭

೧೭. Indian Archaeology, 1960-61, P.31-32

೧೮. Wheelar Sir Mortimer, 1959, Early India and pakistan, P.15

೧೯. A.S.I.-Majumdar, 1930, P.34

೨೦. ಪುಟ್ಟಪ್ಪ ಕೆ.ವಿ.(ಸಂ), ೧೯೭೦, ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂ.೧, ಪು.೮೭

೨೧. ಶ್ರೀಧರ್ ಎಚ್.ಜೆ., ೨೦೦೨, ಪ್ರಾಚೀನ ಭಾರತದಲ್ಲಿ ಯುದ್ಧಕಲೆ, ಪು.೩೧

೨೨. ಅದೇ, ಪು.೩೧

೨೩. Joshi S.K., Ibid, P.8

೨೪. ನಾಗೇಗೌಡ ಎಚ್.ಎಲ್.(ಸಂ), ೧೯೬೬, ಪ್ರವಾಸಿ ಕಂಡ ಇಂಡಿಯಾ, ಸಂ.೧, ಪು.೩೩-೩೪

೨೫. ಅದೇ, ಪು.೩೪

೨೬. Joshi S.K., Ibid, P.125

೨೭. ಕ.ವಿ.ವಿ., ಪು.೪೦೫

೨೮. ಜೋಶಿ ಎಸ್.ಕೆ., ೨೦೦೦, ಕರ್ನಾಟಕದ ಕೋಟೆಗಳು, ಸೂರ್ಯಕೀರ್ತಿ, ಕೃಷ್ಣಮೂರ್ತಿ ಪಿ.ವಿ. ವಸಂತಲಕ್ಷ್ಮೀ ಕೆ.(ಸಂ), ಪು.೧೪೭

೨೯. ಶ್ರೀಧರ ಎಚ್.ಜೆ, ಪೂರ್ವೋಕ್ತ, ಪು.೧೪೩

೩೦. ಅದೇ, ಪು.೧೪೪

೩೧. ಶೀಲಕಾಂತ ಪತ್ತಾರ, ೨೦೦೦, ಬಾದಾಮಿ - ಸಾಂಸ್ಕೃತಿಕ ಅಧ್ಯಯನ, ಪು.೨೭೪

೩೨. ಬೆಟಗೇರಿ ಕೃಷಶರ್ಮ, ಪೂರ್ವೋಕ್ತ, ಪು.೪

೩೩. ಶ್ರೀಧರ ಎಚ್.ಜೆ, ಪೂರ್ವೋಕ್ತ, ಪು.೧೪೪

೩೪. ಅದೇ, ಪು.೧೧೪

೩೫. Indian Antiqury, 1968-69, P.69

೩೬. ಜೋಶಿ ಎಸ್.ಕೆ., ಪೂರ್ವೋಕ್ತ, ಪು.೧೪೭-೧೫೦

೩೭. ಕ.ವಿ.ವಿ. ಪು.೪೦೫

೩೮. ಅದೇ, ಪು.೪೦೬

೩೯. ಎ.ಕ., ಸಂ.೧೧, ಮೊಳಕಾಲ್ಮೂರು-೪೦,೪೧

೪೦. ಕ.ವಿ.ವಿ., ಪು.೧೨೦೪

೪೧. ಎ.ಕ., ಸಂ.೧೧, ಚಿತ್ರದುರ್ಗ-೩೨

೪೨. ಹು.ಶ್ರೀ.ಜೋ.ಐ.ಲೇ., ೧೯೯೫, ಪು.೩೫೦

೪೩. ಅದೇ, ಪು.೩೫೧

೪೪. ಎ.ಕ., ಸಂ.೧೧, ಹಿರಿಯೂರು-೩೬,೩೯

೪೫. ಶ್ರೀನಿವಾಸ ಶರ್ಮ ಎಚ್.ಪಿ., ೧೯೭೯, ಚಿತ್ರದುರ್ಗದ ಏಳುಸುತ್ತಿನ ಕೋಟೆ, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್‌ತೆಲಗಾವಿ, ವೆಂಕಣ್ಣಾಚಾರ್ ಕೆ.(ಸಂ), ಪು.೭೮

೪೬. ನರಸಿಂಹಮೂರ್ತಿ ಕೆ.ಎಲ್., ೧೯೪೯, ಶುಕ್ರನೀತಿಸಾರ, ಪು.೧೦

೪೭. ರಾಧಾಕೃಷ್ಣಮೂರ್ತಿ, ೧೯೯೦, ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಇತಿಹಾಸ ದರ್ಶನ, ಸಂ.೬, ಪು.೧೫೭

೪೮. ಕೃಷ್ಣಭಟ್ಟ ಕೆ.(ಅನು), ೧೯೭೨, ಕೌಟಲ್ಯನ ಅರ್ಥಶಾಸ್ತ್ರ, ಪು.೪೫

೪೯. ಈಶ್ವರಶಾಸ್ತ್ರಿ ಚ.(ಅನು), ೧೯೮೭, ಮನುಸ್ಮೃತಿ, ಪು.೨೭೦

೫೦. ರಾಧಾಕೃಷ್ಣಮೂರ್ತಿ, ಪೂರ್ವೋಕ್ತ, ಪು.೧೫೮

೫೧. ದೀಕ್ಷಿತ್, ರಾಮಸ್ವಾಮಿ & ರಿತ್ತಿ(ಸಂ), ೨೦೦೦, ನೀತಿವಾಕ್ಯಾಮೃತಂ, ಪು.೨೧೯

೫೨. ರಾಮಶೇಷನ್ ನೀ.ಕೃ., ಪೂರ್ವೋಕ್ತ, ಪು.೧೧

೫೩. ಮಲ್ಲೇಪುರಂ ಜಿ. ವೆಂಕಟೇಶ್(ಸಂ), ೧೯೯೮, ಶಿವತತ್ವರತ್ನಾಕರ, ಪು.೨೬೮-೬೯

೫೪. ಶೇಷಶಾಸ್ತ್ರಿ ಆರ್., ೧೯೮೨, ಕರ್ನಾಟಕ ವೀರಗಲ್ಲುಗಳು, ಪು.೧೮೮

೫೫. ಶ್ರೀಧರ ಹೆಚ್.ಜೆ., ಪೂರ್ವೋಕ್ತ, ಪು.೧೫೭

೫೬. Singh A.P., 1987, Forts and Fortification in India with Special reference to Central India, P.170

೫೭. ಅದೇ, ಪು.೧೭೧

೫೮. ಬೆಟಗೇರಿ ಕೃಷ್ಣಶರ್ಮ, ಪೂರ್ವೋಕ್ತ, ಪು.೧೩

೫೯. ಶ್ರೀಧರ ಹೆಚ್.ಜಿ., ಪೂರ್ವೋಕ್ತ, ಪು.೧೫೩

೬೦. Singh A.P., Ibid, P.172

೬೧. Jagdish Ayyar, Ibid, P.370

೬೨. ಬೆಟಗೇರಿ ಕೃಷ್ಣಶರ್ಮ, ಪೂರ್ವೋಕ್ತ, ಪು.೩

೬೩. ಶ್ರೀಧರ ಹೆಚ್.ಜಿ., ಪೂರ್ವೋಕ್ತ, ಪು.೧೫೦

೬೪. ಶೇಷಶಾಸ್ತ್ರಿ, ಪೂರ್ವೋಕ್ತ, ಪು.೧೮೯

೬೫. ಚಿದಾನಂದಮೂರ್ತಿ, ೧೯೬೬, ಪು.೨೮೭

೬೬. ಶ್ರೀಧರ ಹೆಚ್.ಜಿ., ಪೂರ್ವೋಕ್ತ, ಪು.೧೫೦

೬೭. ಶಾಮಶಾಸ್ತ್ರಿ ಆರ್.(ಸಂ), ೧೯೨೬, ಕಂಠೀರವ ನರಸರಾಜವಿಜಯ, ಪು.೧೩೧

೬೮. ಹಿರೇಮಠ ಆರ್.ಸಿ.(ಸಂ), ೧೯೭೩, ಮೋಹನ ತರಂಗಿಣಿ, ಪು.೨೭೮

೬೯. ಬೆಟಗೇರಿ ಕೃಷ್ಣಶರ್ಮ, ಪೂರ್ವೋಕ್ತ, ಪು.೫೨

೭೦. ಶ್ರೀಧರ ಹೆಚ್.ಜಿ., ಪೂರ್ವೋಕ್ತ, ಪು.೧೫೧

೭೧. ಚಿದಾನಂದಮೂರ್ತಿ, ಪೂರ್ವೋಕ್ತ, ಪು.೨೮೭

೭೨. ಶ್ಯಾಮಶಾಸ್ತ್ರಿ ಆರ್., ಪೂವೋಕ್ತ, ಪು.೬೦-೬೧

೭೩. ಬೆಟಗೇರಿ ಕೃಷ್ಣಶರ್ಮ, ಪೂರ್ವೋಕ್ತ, ಪು.೫೨

೭೪. ಜಗದೀಶ್ ಅಯ್ಯರ್, ಪೂರ್ವೋಕ್ತ, ಪು.೩೭೧

೭೫. ಗೃಹ ವಾಸ್ತುದರ್ಪಣ, ಪು.೫೩

೭೬. ಕೃಷ್ಣಭಟ್ಟ ಕೆ., ಪೂರ್ವೋಕ್ತ, ಪು.೯೪

೭೭. ಹಿರೇಮಠ ಆರ್.ಸಿ., ಪೂರ್ವೋಕ್ತ, ಸ.೨೦, ಪ.೧೩

೭೮. ಎ.ಕ., ಸಂ.೧೧, ಮೊಳಕಾಲ್ಮೂರು-೩೮

೭೯. ಹಿರೇಮಠ ಆರ್.ಸಿ., ಪೂರ್ವೋಕ್ತ, ಸ.೨೦, ಪ.೮

೮೦. ಪಂಪ ರಾಮಾಯಣ, ೧೧೬

೮೧. ಚಿದಾನಂದಮೂರ್ತಿ, ಪೂರ್ವೋಕ್ತ, ಪು.೨೮೭

೮೨. ಅದೇ, ಪು.೨೮೭

೮೩. ವಿರುಪಾಕ್ಷ ಪಂಡಿತ, ೧೯೩೪, ಚನ್ನಬಸವ ಪುರಾಣ, ಸಂ.೪೨, ಪ.೨೨

೮೪. ಹಿರೇಮಠ ಆರ್.ಸಿ., ಪೂರ್ವೋಕ್ತ, ೨೦.೯

೮೫. ಶ್ರೀಧರ ಹೆಚ್.ಜಿ., ಪೂರ್ವೋಕ್ತ, ಪು.೧೪೮

೮೬. ಕೃಷ್ಣಭಟ್ಟ ಕೆ., ಪೂರ್ವೋಕ್ತ, ಪು.೯೪

೮೭. ರಡ್ಡೆಪ್ಪ ಪಂಪಣ್ಣ, ೧೯೯೫, ರಾಯಚೂರು ಕೋಟೆ, ಪು.೯೧

೮೮. ಮಲ್ಲೇಪುರಂ ಜಿ. ವೆಂಕಟೇಶ್, ಪೂವೋಕ್ತ, ಪು.೭೮೦

೮೯. ಸೋಮಶೇಖರ್ ಎಸ್.ವೈ., ೨೦೦೦, ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಪು.೧೦೩

೯೦. ಶ್ರೀಧರ ಹೆಚ್.ಜಿ., ಪೂರ್ವೋಕ್ತ, ಪು.೧೫೯

೯೧. ಹಿರೇಮಠ ಆರ್.ಸಿ., ಪೂರ್ವೋಕ್ತ, ಪು.೪೮೧

೯೨. ದೇವೀರಪ್ಪ ಹೆಚ್.(ಸಂ), ೧೯೯೪, ರಾಮನಾಥ ಚರಿತೆ, ೧೪,೮೪

೯೩. ಅದೇ, ೩೭,೫೧

೯೪. ಶ್ರೀಧರ ಹೆಚ್.ಜಿ., ಪೂರ್ವೋಕ್ತ, ಪು.೧೫೯

೯೫. Narvane M.S., 1995, Forts of Maharshtra, P.25

೯೬. Deshpande D.N., 1971, Marata Forts(unplished Thesis), Poona University), P.22

೯೭. Ramachandra Murthy N.S., 1995, Forts of Andhrapradesh, P.190

೯೮. ಕೃಷ್ಣಭಟ್ಟ ಕೆ., ಪೂರ್ವೋಕ್ತ, ಪು.೯೪

೯೯. ಶ್ರೀಕಂಠಶಾಸ್ತ್ರಿ ಎಸ್., ೧೯೭೫, ಭಾರತೀಯ ಸಂಸ್ಕೃತಿ, ಪು.೩೨೯

೧೦೦. Narvane M.S., Ibid, P.190

೧೦೧. Ibid, P.191

೧೦೨. Jagadish Ayyar P.V., 1921-22, Construction of Forts, Q.J.M.S., Vol-xii, p.370

೧೦೩. Ibid, P.371

೧೦೪. ಚಿದನಾಂದಮೂರ್ತಿ, ಪೂರ್ವೋಕ್ತ, ಪು.೨೮೭

೧೦೫. ದೀಕ್ಷಿತ್, ರಾಮಸ್ವಾಮಿ, ರಿತ್ತಿ(ಸಂ), ಪೂರ್ವೋಕ್ತ, ಪು.೨೧೮

೧೦೬. ಹಿರೇಮಠ ಆರ್.ಸಿ.(ಸಂ), ಪೂರ್ವೋಕ್ತ, ಪು.೩೯೧

೧೦೭. ಶಾಮಶಾಸ್ತ್ರೀ ಆರ್., ಪೂರ್ವೋಕ್ತ, ಪು.೧೨೯

೧೦೮. ವಿರುಪಾಕ್ಷ ಪಂಡಿತ, ಪೂರ್ವೋಕ್ತ, ಪು.೨೮

೧೦೯. ಮಲ್ಲೇಪುರಂ ಜಿ. ವೆಂಕಟೇಶ್, ಪೂರ್ವೋಕ್ತ, ಪು.೭೮೦

೧೧೦. ಕೃಷ್ಣಭಟ್ಟ ಕೆ., ಪೂರ್ವೋಕ್ತ, ಪು.೧೦೩

೧೧೧. Prabhakara, Ancient and Medival town planning in India, P.82

೧೧೨. ರಾಧಾಕೃಷ್ಣಮೂರ್ತಿ, ಪೂರ್ವೋಕ್ತ, ಪು.೧೫೯

೧೧೩. ಅದೇ, ಪು.೧೬೦

೧೧೪. ಅದೇ, ಪು.೧೬೧

೧೧೫. ಅದೇ, ಪು.೧೬೨

❑❑

ಅಧ್ಯಾಯ ೪

ಚಿತ್ರದುರ್ಗ ಜಿಲ್ಲೆಯ ಕೋಟೆಗಳು

೪

ಚಿತ್ರದುರ್ಗ ಜಿಲ್ಲೆಯ ಕೋಟೆಗಳು

ಚಿತ್ರದುರ್ಗ ಜಿಲ್ಲೆಯಾದ್ಯಂತ ಅನೇಕ ಕೋಟೆಗಳು ಕಂಡುಬಂದಿವೆ. ಅವುಗಳಲ್ಲಿ ಸಾಕಷ್ಟು ಶಿಥಿಲಗೊಂಡಿರುವ ಕೋಟೆಗಳನ್ನು ಹೊರತುಪಡಿಸಿ ಉಳಿದ ಕೋಟೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

೪.೧ ಬ್ರಹ್ಮಗಿರಿ ಕೋಟೆ

ಬ್ರಹ್ಮಗಿರಿ ವಿಶ್ವಚಾರಿತ್ರಿಕ ಮನ್ನಣೆ ಪಡೆದ ಪ್ರಸಿದ್ಧ ನೆಲೆ. ಇದು ಮೊಳಕಾಲ್ಮೂರಿನಿಂದ ಸುಮಾರು ೨೦ ಕಿ.ಮೀ. ದೂರದಲ್ಲಿದೆ. ಮೊಳಕಾಲ್ಮೂರಿನಿಂದ ಬಳ್ಳಾರಿಗೆ ಹೋಗುವಾಗ ರಸ್ತೆಯ ಬಲಬದಿಗೆ ಅಶೋಕ ಸಿದ್ದಾಪುರ ಎಂಬ ರಸ್ತೆಯ ತಿರುವನ್ನು ಬಳಸಿಕೊಂಡು ಅಶೋಕ ಸಿದ್ದಾಪುರ ತಲುಪಬೇಕು. ಇದೇ ರಸ್ತೆಯ ಮೂಲಕ ಮುಂದೆ ಪ್ರಯಾಣಿಸಿ ಕಾಡು ಸಿದ್ದಾಪುರ ಗ್ರಾಮದ ಮೂಲಕ ಇಕ್ಕಟ್ಟಾದ ಕಾಲುದಾರಿಯಿಂದ ಬ್ರಹ್ಮಗಿರಿ ಬೆಟ್ಟವನ್ನು ತಲುಪಬಹುದು. ಈ ಬೆಟ್ಟವು ಉತ್ತರ ದಕ್ಷಿಣವಾಗಿ ೩ ಕಿ.ಮೀ. ದೂರ ಹಬ್ಬಿದ್ದು, ಸುತ್ತಲ ಪ್ರದೇಶದಿಂದ ಸು.೨೦ ಮೀ. ಎತ್ತರದಲ್ಲಿದೆ. ಪೂರ್ವಕ್ಕೆ ರೊಪ್ಪ ಗ್ರಾಮವಿದ್ದು, ಪಶ್ಚಿಮಕ್ಕೆ ಸಿದ್ದಾಪುರ ಮತ್ತು ಗುಡ್ಡಗಳಿದ್ದರೆ, ಉತ್ತರಕ್ಕೆ ಜಟಂಗಿರಾಮೇಶ್ವರ ಬೆಟ್ಟಗಳಿವೆ. ಭೂನಕ್ಷೆಯಲ್ಲಿ ಬ್ರಹ್ಮಗಿರಿಯು ಉತ್ತರ ಅಕ್ಷಾಂಶ ೧೪°೪೭ ರಿಂದ ೧೪°೪೯ ಹಾಗೂ ಪೂರ್ವ ರೇಖಾಂಶ ೭೬°೪೮ ರಿಂದ ೭೬°೪೯ರವರೆಗೆ ವ್ಯಾಪಿಸಿಕೊಂಡಿದ್ದು, ಸಮುದ್ರಮಟ್ಟದಿಂದ ೨,೩೪೭ ಅಡಿ ಎತ್ತರದಲ್ಲಿದೆ.

ಬ್ರಹ್ಮಗಿರಿಗೆ ಐತಿಹಾಸಿಕ ಮಹತ್ವ ಬಂದಿದ್ದು ಬಿ.ಎಲ್.ರೈಸ್‌ರವರಿಂದ. ಇವರು ೧೮೯೨ರಲ್ಲಿ ಬೆಟ್ಟದ ಉತ್ತರಕ್ಕಿರುವ ದೊಡ್ಡ ಬಂಡೆಯೊಂದರ ಮೇಲೆ ಅಶೋಕನ ಶಾಸನವನ್ನು ಪತ್ತೆಹಚ್ಚಿದರು. ಈ ಬಂಡೆಗೆ ಸ್ಥಳೀಯರು ಅಕ್ಷರಗುಂಡು ಎಂದು ಕರೆಯುತ್ತಾರೆ. ಇದೇ ಪರಿಸರದಲ್ಲಿ ಮತ್ತೆರಡು ಶಾಸನಗಳನ್ನು ಸಹ ರೈಸ್‌ರವರು ಪತ್ತೆಹಚ್ಚುವ ಮೂಲಕ ಮೂರು ಶಾಸನಗಳನ್ನು ಪ್ರಕಟಿಸಿದ್ದಾರೆ.[೧] ಈ ಶಾಸನಗಳಿಂದ ಚಿತ್ರದುರ್ಗ ಜಿಲ್ಲೆಯೂ ಕೂಡ ಮಗಧ ಸಾಮ್ರಾಜ್ಯದ ಒಂದು ಭಾಗವಾಗಿತ್ತೆಂದು ಹೇಳಲಾಗಿದೆ. ಬ್ರಹ್ಮಗಿರಿಯು ಮೌರ್ಯರ ದಕ್ಷಿಣದ ರಾಜಧಾನಿಯಾಗಿತ್ತಲ್ಲದೆ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಕ್ರಿ.ಶ.೧೯೪೦ರಲ್ಲಿ ಎಂ.ಹೆಚ್.ಕೃಷ್ಣರವರು, ೧೯೪೭ ಮಾರ್ಟಿಮರ್ ವೀಲ್ಹರ್‌ರವರು ಬ್ರಹ್ಮಗಿರಿಯ ಪರಿಸರದಲ್ಲಿ ಪ್ರಾಚೀನ ನೆಲೆಗಳನ್ನು ಪತ್ತೆಹಚ್ಚಿದರು. ಕರ್ನಾಟಕದ ಪ್ರಾಗಿತಿಹಾಸ ಕಾಲದಿಂದ ಇತಿಹಾಸದ ಕಾಲದವರೆಗಿವ ಮಾನವ ಸಂಸ್ಕೃತಿಯ ನಿರಂತರ ಬೆಳವಣಿಗೆಯನ್ನು ಈ ನೆಲೆಗಳಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಈ ನೆಲೆಗಳ ಉತ್ಖನನದಿಂದ ದಕ್ಷಿಣ ಭಾರತದ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಕಾಲ ಮತ್ತು ಅನುಕ್ರಮದ ಬಗ್ಗೆ ಸ್ಪಷ್ಟ ಚಿತ್ರ ಇಲ್ಲಿ ದೊರಕಿತು. ಆದ್ದರಿಂದ ಬ್ರಹ್ಮಗಿರಿ ನೆಲೆಯು ಭಾರತೀಯ ಪುರಾತತ್ವ ಇತಿಹಾಸದಲ್ಲಿ ಅತ್ಯಂತ ಪ್ರಾಮುಖ್ಯತೆ ಗಳಿಸಿದೆ.

ಬ್ರಹ್ಮಗಿರಿಗೆ ವಿವಿಧ ಹೆಸರುಗಳಿವೆ. ಇಸಿಲಾ[೨], ಹನೆಯ ಕೋಟೆ[೩], ವಿಜಯಗಿರಿ[೪], ಬ್ರಹ್ಮಗಿರಿ ಮುಂತಾದ ಉಲ್ಲೇಖಗಳಿವೆ. ಮೌರ್ಯ ಸಾಮ್ರಾಜ್ಯದ ಆಡಳಿತ ಕೇಂದ್ರವಾಗಿದ್ದ ಬ್ರಹ್ಮಗಿರಿಗೆ ಆ ಕಾಲದಲ್ಲಿದ್ದ ಹೆಸರು ಇಸಿಲಾ ಎಂದು. ಇಸಿಲಾ ಎಂಬ ಪದಕ್ಕೆ ಡಿ.ಎಲ್.ನರಸಿಂಹಾಚಾರ್ ಕೊಟ್ಟಿರುವ ಅರ್ಥ ಹೊಸ ಬೆಳಕನ್ನು ಚೆಲ್ಲಿದೆ.[೫] ಇಸಿಲಾವು ಬಹುತೇಕ ಆರ್ಯೇತರ ಪದ. ಇದು ದ್ರಾವಿಡವೇ ಆಗಿರಬೇಕು. ತಮಿಳಿನಲ್ಲಿ ಇಸಿಲಕ್ಕೆ ಸಂವಾದಿಯಾಗಿ ಎಯಿಲ್ ಪದವಿದೆ. ಎಯಿಲ್ ಎಂದರೆ ಕೋಟೆಯ ಗೋಡೆ ಎಂದರ್ಥ. ಆದ್ದರಿಂದ ಇಸಿಲಾ ಕನ್ನಡದ ಪದವಾಗಿದ್ದು, ಅದರ ಅರ್ಥ ಕೋಟೆ ಅಥವಾ ಕೋಟೆಯುಳ್ಳ ಊರು. [ಇಸು+ಇಲ್→ಇಸಿಲ್+ಅ(೦)→ಇಸಿಲ; ಇಸಿಲ>ಇಸಿಲ(ಎಯಿಲ್)] ಎಂದು ಅರ್ಥೈಸಲಾಗಿದೆ.[೬] ಹೀಗಿದ್ದಲ್ಲಿ ಕೋಟೆಗಳು ಕರ್ನಾಟಕದಲ್ಲಿ ಮೌರ್ಯರ ಕಾಲದ ಹೊತ್ತಿಗೆ ನಿರ್ಮಾಣವಾಗಿದ್ದುದು ಖಚಿತಗೊಳ್ಳುತ್ತದೆ.[೭]

ಕ್ರಿ.ಶ.ಸು.೧೨೭೮ರ ಶಾಸನವೊಂದರಲ್ಲಿ 'ಹಾನೆಯ ಕೋಟೆ' ಎಂಬ ಉಲ್ಲೇಖವಿದೆ. ಬಹುಶಃ ಈ ಹೆಸರು ಇಲ್ಲಿರುವ ಆನೆಯ ಚಿತ್ರದಿಂದ ಬಂದಿರಬೇಕು. ಬ್ರಹ್ಮಗಿರಿ ಬೆಟ್ಟದ ಪಶ್ಚಿಮಕ್ಕೆ ಅಕ್ಕತಂಗಿಯರ ಗುಡಿಯ ಪಕ್ಕದಲ್ಲಿರುವ ಒಂಟಿ ಗುಂಡು ಬಂಡೆಯ ಮೇಲೆ ಸುಂದರವಾದ ಆನೆಯ ಗೀರು ಚಿತ್ರವಿದೆ.

ಸಾಮಾನ್ಯವಾಗಿ ಇಲ್ಲಿ ಶಾಸನಕಾರ 'ಆ' ಕಾರಕ್ಕೆ ಬದಲಾಗಿ 'ಹಾ' ಕಾರವನ್ನು ಉಪಯೋಗಿಸಿರಬೇಕು. ಉದಾ:ಹರ್ತಿ ಎಂಬುದಕ್ಕೆ ಅರ್ತಿ ಎಂದೂ ಹಾಜರಿ ಎಂಬುದಕ್ಕೆ ಅಜರಿ ಎಂಬ ಶಬ್ದಗಳನ್ನು ಸಾಮಾನ್ಯವಾಗಿ ಉಚ್ಚರಿಸುವುದು ರೂಢಿ.

ಮೇಲೆ ಹೇಳಿದ ಹಾನೆಯದುರ್ಗವನ್ನು ಸಾಧಿಸಿ ಅಲ್ಲಿ ವಿಜಯಗಿರಿ ಎಂಬ ಪಟ್ಟಣವನ್ನು ಸ್ಥಾಪಿಸಿದನೆಂದು ವೀರಬಲ್ಲಾಳನ ಶಾಸನವೊಂದು ತಿಳಿಸುತ್ತದೆ.[೮] ಈ ವಿಜಯಗಿರಿಯು ಹೊಯ್ಸಳ ರಾಜ್ಯದ ಉತ್ತರದ ಮೇರೆಯಾಗಿತ್ತು.[೯] ಮೂರನೇ ಬಲ್ಲಾಳ ತನ್ನ ಮಗ ವೀರವಿಜಯ ಬಲ್ಲಾಳನ ಹೆಸರಿನಲ್ಲಿ ಈ ಕೋಟೆಯನ್ನು ಬಲಪಡಿಸಿ ವಿಸ್ತರಿಸಿದ್ದನು.[೧೦] ಅಲ್ಲದೆ ಬಲ್ಲಾಳನು ತಾನು ಗೆದ್ದ ಕೆಲವು ಸ್ಥಳಗಳಿಗೆ ವಿಜಯಸಮುದ್ರ, ವಿಜಯಪುರ, ವಿಜಯಗಿರಿ ಎಂಬುದಾಗಿ ಹೆಸರಿಸಿರುವಂತೆ ಹಾನೆಯಪಟ್ಟಣಕ್ಕೂ ಇದರಂತೆ ವಿಜಯನಗರ ಎಂದು ಕರೆದಿರಬಹುದು.[೧೧]

ಈಗ ಕರೆಯುತ್ತಿರುವ ಬ್ರಹ್ಮಗಿರಿ ಎಂಬ ಹೆಸರು ಯಾವಾಗ ಬಂತೆಂದು ನಿರ್ದಿಷ್ಟವಾಗಿ ಹೇಳಲು ಆಧಾರಗಳಿಲ್ಲ. ಸಾಮಾನ್ಯವಾಗಿ ಇಲ್ಲಿ ದೊರಕಿರುವ ಶಾಸನವು ಬ್ರಾಹ್ಮಿಲಿಪಿಯಲ್ಲಿರುವುದರಿಂದ ಈ ಹೆಸರು ಬಂದಿರಬಹುದು. ಬ್ರಹ್ಮಗಿರಿ ಹಾಗೂ ಇದರ ಪರಿಸರದಲ್ಲಿ ದೊರತಿರುವ ಅಶೋಕನ ಶಾಸನಗಳಿಂದ ಈ ಪ್ರದೇಶ ನೇರವಾಗಿ ಮೌರ್ಯ ಸಾಮ್ರಾಜ್ಯದ ಅಧೀನಕ್ಕೊಳಪಟ್ಟಿತ್ತು. ಇದಕ್ಕೂ ಮೊದಲು ಈ ಪ್ರದೇಶ ಪ್ರಾಚೀನ ಮಾನವನ ವಾಸಸ್ಥಾನವಾಗಿದ್ದಿತು. ಇಲ್ಲಿ ನಡೆದ ಭೂಸಂಶೋಧನೆಯಲ್ಲಿ ಮೌರ್ಯರ ಮತ್ತು ಶಾತವಾಹನರ ಕಾಲಕ್ಕೆ ಸೇರಿದ ವಸ್ತುಗಳನ್ನು ಬೆಳಕಿಗೆ ತರಲಾಗಿದೆ. ಸರ್ ಮಾರ್ಟಿಮರ್ ವೀಲ್ಹರ್‌ರವರು ಮೆಗಾಲಿಥಿಕ್ ನಾಗರಿಕತೆಯ ಕೆಲವು ಅವಶೇಷಗಳನ್ನು ಸಂಶೋಧನೆಯಲ್ಲಿ ಪತ್ತೆಹಚ್ಚಿ, ಅವು ಅಶೋಕನ ಕಾಲಕ್ಕೆ ಸೇರಿದವೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಮೆಗಾಲಿಥಿಕ್ ಸ್ಮಾರಕಗಳನ್ನು ಜನರು ಮೌರ್ಯರ ಅಥವಾ ಮೋರೇರ ಮನೆಗಳೆಂದು ಕರೆದಿರುವುದು ಗಮನಾರ್ಹ ಸಂಗತಿ. ಇವು ಮೌರ್ಯರೊಂದಿಗೆ ಸಂಬಂಧವನ್ನು ಸೂಚಿಸುತ್ತವೆ.[೧೨]

ಮೌರ್ಯ ಚಕ್ರವರ್ತಿಯ ಕಾಲದಲ್ಲಿ ಇಸಿಲಾ ಎಂದು ಕರೆಯಲ್ಪಟ್ಟಿದ್ದ ಈಗಿನ ಬ್ರಹ್ಮಗಿರಿ ಭಾಗವು ಅಶೋಕ ಚಕ್ರವರ್ತಿಯ ಅಧಿಕಾರಿಗಳಾದ ಮಹಾಮಾತ್ರರ ಆಡಳಿತ ಕೇಂದ್ರವಾಗಿತ್ತು.[೧೩] ಈ ಭಾಗದ ಜನರು ಕಬ್ಬಿಣದ ಅದಿರನ್ನು ಕರಗಿಸುವುದರಲ್ಲಿ ಮತ್ತು ಕಮ್ಮಾರಿಕೆಯಲ್ಲಿ ತುಂಬಾ ಹೆಸರುವಾಸಿಯಾಗಿದ್ದರೆಂದು ಕಂಡುಬರುತ್ತದೆ. ಬಹುಶಃ ಈ ಪ್ರದೇಶದ ಆರ್ಥಿಕ ಸ್ಥಿತಿ ಚಕ್ರವರ್ತಿಯ ಗಮನಸೆಳೆದು ಈ ಪ್ರದೇಶವನ್ನು ಗೆದ್ದುಕೊಂಡಂತೆ ಕಾಣುತ್ತದೆ. ತರುವಾಯ ತನ್ನ ಪರಿಚಯ ಮತ್ತು ಧೋರಣೆಗಳನ್ನು ತಿಳಿಸಲು ಈ

ಪ್ರದೇಶದಲ್ಲಿ ಬೃಹತ್‌ಬಂಡೆ ಶಾಸನಗಳನ್ನು ಹಾಕಿಸಿದಂತೆ ತೋರುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ತನ್ನ ಆಡಳಿತಾಧಿಕಾರಿಗಳನ್ನು ಇಡುವುದರ ಮೂಲಕ ಕರ್ನಾಟಕದ ರಾಜಕೀಯ, ಧಾರ್ಮಿಕ ಮತ್ತು ಆಡಳಿತ ವಿಷಯಗಳನ್ನು ನಿಯಂತ್ರಿಸುತ್ತಿದ್ದನೆಂದು ತಿಳಿಯಬಹುದು.[೧೪]

ಮೌರ್ಯರ ತರುವಾಯ ಈ ಭಾಗದಲ್ಲಿ ಅಧಿಕಾರ ನಡೆಸಿದವರೆಂದರೆ ಶಾತವಾಹನರು. ೧೯೪೭ರಲ್ಲಿ ವೀಲ್ಹರ್‌ರವರು ನಡೆಸಿದ ಸಂಶೋಧನೆಯಿಂದ ಶಾತವಾಹನರ ಕಾಲದಲ್ಲಿನ ಅನೇಕ ವಸ್ತುಗಳನ್ನು ಅವರು ಪತ್ತೆಹಚ್ಚಿ ಪ್ರಕಟಿಸಿದ್ದಾರೆ.[೧೫] ಇವರ ನಂತರ ಕದಂಬರು, ಚಾಲುಕ್ಯರು ಆಳ್ವಿಕೆ ನಡೆಸಿದ್ದಾರೆ. ಕ್ರಿ.ಶ.೯೦೦ರ ಹೊತ್ತಿಗೆ ಬ್ರಹ್ಮಗಿರಿ ಪ್ರದೇಶವು ನೊಳಂಬವಾಡಿ-೩೨೦೦೦ ಸೀಮೆಯಲ್ಲಿ ಸಮಾವೇಶಗೊಂಡಿದ್ದಿತು ಎಂಬುದನ್ನು ಇಲ್ಲಿನ ಶಾಸನವೊಂದು ಸಮರ್ಥಿಸುತ್ತದೆ.[೧೬] ಚಾಲುಕ್ಯರ ಸಾಮಂತ ಮನೆತನವಾದ ನಿಡಗಲ್ಲು ಚೋಳರು ರಾಜಧಾನಿಯನ್ನಾಗಿ ಮಾಡಿಕೊಂಡು, ಕ್ರಿ.ಶ.೮ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ್ದಾರೆ. ಈ ರಾಜಧಾನಿಯಿಂದ ಪ್ರಸಿದ್ಧವಾಗಿ ಆಳಿದ ಚೋಳ ಮಹಾರಾಜ ವಂಶಿಕರಿಗೆ ಹನೆಯ(ಬ್ರಹ್ಮಗಿರಿ) ಕೋಟೆಯು ಉಪರಾಜಧಾನಿಯಾಗಿತ್ತು. ಕ್ರಿ.ಶ.೧೨೬೨ರಲ್ಲಿ ಪರಾಂತಕ ಚೋಳ ಮಹಾರಾಜನು ಈ ಹಾನೆಯದುರ್ಗದಲ್ಲಿ ಪೃಥ್ವೀರಾಜ್ಯಂಗೈಯುತ್ತಿದ್ದನು.[೧೭] ನಿಡಗಲ್ಲು ಚೋಳ ಮಹಾರಾಜರಲ್ಲಿ ಹೆಸರಾದ ಬೊಮ್ಮ ಭೂಪಾಲನು ತನ್ನ ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದನು. ಈತನಿಗೆ ಪದೇಪದೇ ಶತ್ರುಗಳು ಕಿರುಕುಳ ನೀಡುವುದನ್ನು ಕಂಡು ತನ್ನ ದಂಡನಾಯಕ ಬೈಚಪ್ಪನನ್ನು ಕರೆದು ಇಲ್ಲಿ ಅಭೇದ್ಯ ಕೋಟೆಯನ್ನು ನಿರ್ಮಿಸಲು ಆದೇಶಿಸಿದನು. ಬೈಚಪ್ಪನು ಶತ್ರುಗಳಿಗೆ ದಿಗಿಲು ಹುಟ್ಟಿಸುವ ಕೋಟೆಯನ್ನು ನಿರ್ಮಿಸುತ್ತಾನೆ. ಈ ಕೋಟೆಯು ಕ್ರಿ.ಶ.೧೨೭೮ರಲ್ಲಿ ಪೂರ್ಣಗೊಂಡಿತೆಂದು ಹೇಳಲಾಗಿದೆ.[೧೮]

ಈ ಮಧ್ಯೆ ಒಂದು ಚಿಕ್ಕ ರಾಜ್ಯಕ್ಕೆ ಅದಿಪತಿಯಾಗಿದ್ದ ಪುವ್ವಲ ಅರಸ ಮುಮ್ಮಡಿ ಸಿಂಘನು ತನ್ನ ಶಕ್ತಿ ಸಾಮರ್ಥ್ಯಗಳಿಂದ ಮೇಲೆ ಬಂದು ಹಾನೆಯದುರ್ಗದಲ್ಲಿ ರಾಜ್ಯಭಾರ ಮಾಡುತ್ತಿದ್ದನು.[೧೯] ಮುಮ್ಮಡಿ ಸಿಂಘನ ಮಗ ವೀರಕಂಪಿಲರಾಯ ಈತನ ಮಗ ಕುಮಾರರಾಮನು ಕೂಡ ಬ್ರಹ್ಮಗಿರಿಯಲ್ಲಿ ಆಳ್ವಿಕೆ ನಡೆಸಿದ್ದನೆನ್ನಲಾಗಿದೆ. ಈತನ ಆಳ್ವಿಕೆಯನ್ನು ಸಮರ್ಥಿಸುವಂತೆ ಬ್ರಹ್ಮಗಿರಿ ಕೋಟೆಯಲ್ಲಿ ಕುಮಾರರಾಮನ ಗರಡಿಮನೆ ಇದೆ. ಇದೇ ವೇಳೆಗೆ ಕುಮಾರರಾಮನನ್ನು ಅವನ ತಂದೆ ಕಂಪಿಲರಾಯನನ್ನು ದೆಹಲಿ ಸುಲ್ತಾನ ಮೊಹಮ್ಮದ್-ಬಿನ್-ತುಘಲಕ್ ಕನ್ನಡ ನಾಡಿನ ಮಧ್ಯಭಾಗದಲ್ಲಿ ಪ್ರಾಂತಾಧಿಕಾರಿಯಾಗಿ ನೇಮಿಸಿದ್ದ. ಆಗ ಹೊಯ್ಸಳ ದೊರೆ ವೀರಬಲ್ಲಾಳನು ಸುಲ್ತಾನರನ್ನು ದಕ್ಷಿಣದ ಕಡೆ ಪ್ರಸರಿಸದಂತೆ ತನ್ನ ರಾಜ್ಯದ

[illegible]

ಉತ್ತರ ಗಡಿಯಲ್ಲಿ ಆಯಕಟ್ಟಿನ ಸ್ಥಳವನ್ನು ಆರಿಸಿ, ತನ್ನ ಸೈನ್ಯವನ್ನಡಲು ಯೋಚಿಸಿದನು. ಇದಕ್ಕೆ ನಿಡಗಲ್ಲು ಚೋಳ ಮಹಾರಾಜರ ಉಪರಾಜಧಾನಿಯಾಗಿದ್ದ ಹಾನೆಯಕೋಟೆಯು ಯೋಗ್ಯ ಸ್ಥಳವಾಗಿತ್ತು. ಆದ್ದರಿಂದ ಬಲ್ಲಾಳನು ಸೇನಾಸಮೇತನಾಗಿ ವಿಜಯಯಾತ್ರೆ ಹೊರಟು ಚೋಳ ಮಹಾರಾಜರನ್ನು ಸೋಲಿಸಿ ಈ ಹಾನೆಯಕೋಟೆಯನ್ನು ಕ್ರಿ.ಶ.ಸು.೧೨೧೫ರಲ್ಲಿ ಸಾಧಿಸಿದನು.[೨೦] ನಂತರ ತನ್ನ ಮಗ ವೀರವಿಜಯ ಬಲ್ಲಾಳನ ಹೆಸರಿನಲ್ಲಿ ವಿಜಯನಗರಿ ಎಂದು ಹೆಸರಿಟ್ಟು ಕೋಟೆಯನ್ನು ಬಲಪಡಿಸಿದನು. ತನ್ನ ನೆಚ್ಚಿನ ಬಂಟನೂ ಹಾಲಿವಾಣದ ಸಾಮಂತನೂ ಆದ ಸಿವೋದಯನಾಯಕನೆಂಬ ವೀರನನ್ನು ಆ ಕೋಟೆಯ ಕಾವಲಿಗೆ ನೇಮಕಮಾಡಿ ತಾನು ದ್ವಾರಸಮುದ್ರದಲ್ಲಿ ರಾಜ್ಯಭಾರ ಮಾಡುತ್ತಾನೆ.[೨೧]

ಹೊಯ್ಸಳರ ನಂತರ ಈ ಭಾಗದಲ್ಲಿ ಹೆಚ್ಚು ಆಳ್ವಿಕೆ ನಡೆಸಿದವರೆಂದರೆ ವಿಜಯನಗರದ ಅರಸರು ಮತ್ತು ಚಿತ್ರದುರ್ಗದ ಪಾಳೆಯಗಾರರು. ವಿಜಯನಗರದ ಅವಧಿಯಲ್ಲಿ ಬ್ರಹ್ಮಗಿರಿಯು ಒಂದು ನಾಡಾಗಿದ್ದಿತು.[೨೨] ವಿಜಯನಗರ ತರುವಾಯ ಇಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರು ಮೊದಲು ಇದ್ದ ಕೋಟೆಯನ್ನು ಬಲಪಡಿಸಿದರಲ್ಲದೆ ಇನ್ನು ಹೆಚ್ಚಾಗಿ ವಿಸ್ತರಿಸಿದರೆನ್ನಬಹುದು. ಹೀಗೆ ಬ್ರಹ್ಮಗಿರಿ ಕೋಟೆಯಲ್ಲಿ ವಿವಿಧ ಮನೆತನಗಳು ಆಳ್ವಿಕೆ ನಡೆಸಿದರಲ್ಲದೆ, ಇಲ್ಲಿ ಕೋಟೆಕೊತ್ತಲಗಳನ್ನು ವಿಸ್ತರಿಸಿರುವುದು ಕಂಡುಬರುತ್ತದೆ.

ಬ್ರಹ್ಮಗಿರಿ ಕೋಟೆಯು ಗಿರಿದುರ್ಗವಾಗಿದ್ದು ಕೋಟೆಯನ್ನು ಅನಿಯಮಿತಾಕಾರದ ಭೂಶಿಖರದ ಮೇಲೆ ಅದರ ಆಕಾರಕ್ಕನುಗುಣವಾಗಿ ಕಟ್ಟಲಾಗಿದೆ. ಬ್ರಹ್ಮಗಿರಿ ಭೂಶಿಖರವು ಉತ್ತರ ಮತ್ತು ದಕ್ಷಿಣದಲ್ಲಿ ಎತ್ತರವಾಗಿದ್ದು ಕ್ರಮೇಣ ಕಡಿಮೆಯಾಗುತ್ತಾ ಹೋಗುತ್ತದೆ. ದಕ್ಷಿಣ ಭಾಗದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹಬ್ಬಿರುವ ಬೆಟ್ಟವನ್ನು ಉತ್ತರ ದಕ್ಷಿಣವಾಗಿ ಮೂರು ಕಣಿವೆಗಳು ಭಾಗ ಮಾಡಿವೆ. ಇವುಗಳಿಗೆ ಸೊಟ್ಟಮರದ ಸಂದು, ವಾಲ್ಕೆತ್ತಿನ ಸಂದು, ಪೆದಾಲ್‌ಸಂದು ಎಂಬ ಹೆಸರುಗಳಿವೆ. ಈ ಸಂದುಗಳಲ್ಲಿ ಶತ್ರುಗಳು ಒಳಬರದಂತೆ ಅಲ್ಲಲ್ಲಿ ತಡೆಗೋಡೆಯನ್ನು ನಿರ್ಮಿಸಿದ್ದಾರೆ. ಪೂರ್ವದಲ್ಲಿ ಬೆಟ್ಟದ ಶ್ರೇಣಿಗಳಲ್ಲಿ ಕಾರಕುಟ್ರೆ ಬಂಡೆ, ಏಳೂರು ಪಡೆಗಳ ಬಂಡೆಗಳು ಕಡಿದಾಗಿದ್ದು ಪ್ರಕೃತಿನಿರ್ಮಿತ ಗೋಡೆಗಳಾಗಿವೆ. ಉತ್ತರದಲ್ಲಿ ಕಡಿದಾದ ಬಂಡೆಯಿದ್ದು ಸಿದ್ಧರ ಬಯಲಿನ ಬೆಟ್ಟ ಇದನ್ನು ಆವರಿಸಿದೆ. ಪಶ್ಚಿಮದಲ್ಲಿ ಪಗಡೆಸಾಲು ಬೆಟ್ಟ, ಮೇಲ್ದುರ್ಗದ ಬೆಟ್ಟಗಳು ಕೋಟೆಗೆ ನೈಸರ್ಗಿಕ ರಕ್ಷಣೆಗಳಾಗಿವೆ. ಈ ಎಲ್ಲಾ ಬೆಟ್ಟಗಳ ಮಧ್ಯೆ ಇರುವ ವಿಸಾಲವಾದ ಬಯಲಿನಲ್ಲಿ ಹುಲಿಕುಂಟೆಯು ಪಸರಿಸಿದೆ. ಇಡೀ ಬೆಟ್ಟವನ್ನು ಆಧರಿಸಿ ಕಟ್ಟಿರುವ ಕೋಟೆಯು ಪೂರ್ವ-ಪಶ್ಚಿಮವಾಗಿ ಸುಮಾರು ೩ ಕಿ.ಮೀ. ಇದ್ದು ಉತ್ತರ-ದಕ್ಷಿಣವಾಗಿ ೪ ಕಿ.ಮೀ. ವಿಶಾಲವಾದ ಪ್ರದೇಶದಲ್ಲಿ ವ್ಯಾಪಿಸಿದೆ.

[illegible]

[illegible]

[illegible]

ಬ್ರಹ್ಮಗಿರಿ ಕೋಟೆಗೆ ಹೋಗಲು ಮೂರು ದಾರಿಗಳಿವೆ. ಮೊದಲನೆಯದು ಪೂರ್ವದ ರೊಪ್ಪಗ್ರಾಮದಿಂದ ಕೋಟೆಯ ಆಗ್ನೇಯ ದಿಕ್ಕನ್ನು ಬಳಸಿಕೊಂಡು ಮೇಲೆ ಬರಬಹುದು. ಎರಡನೆಯದು ಕೋಟೆಯ ಪಶ್ಚಿಮದಲ್ಲಿರುವ ಜೈನ ದೇವಾಲಯವನ್ನು ಬಳಸಿಕೊಂಡು ಬಂದರೆ, ಮೂರನೇ ದಾರಿ ಬೆಟ್ಟದ ವಾಯುವ್ಯದ ಕಡೆಯಲ್ಲಿರುವ ಅಕ್ಕತಂಗಿಯರ ದೇವಾಲಯದ ಬಳಿಯ ಮೂಲಕ ಬರುವ ಕಾಲುದಾರಿಯಿಂದ ಹೋಗಬಹುದು. ಈ ದಾರಿ ಎಲ್ಲಾ ದಾರಿಗಿಂತಲೂ ಹತ್ತಿರವಾಗಿದೆ. ಹಿಂದೆ ಅಪಾಯಕಾರಿಯಾಗಿದ್ದ ಈ ದಾರಿಯನ್ನು ಬೆಟ್ಟದ ಮೇಲೆ ಈಗ ವಾಸಿಸುತ್ತಿರುವ ಮಹದೇವಪ್ಪ ತಾತನವರು ಅಪಾಯಕಾರಿ ಸ್ಥಳಕ್ಕೆ ಕಲ್ಲುಗಳನ್ನು ಹಾಕಿಸಿ, ಮೆಟ್ಟಿಲುಗಳನ್ನು ಹಾಕಿಸಿ ವ್ಯವಸ್ಥೆಗೊಳಿಸಿದ್ದಾರೆ. ಅಲ್ಲದೆ ಪ್ರವಾಸಿಗರಿಗೆ ಅನುಕೂಲವಾಗುವಂತೆ ಅಲ್ಲಲ್ಲಿ ಬಾಣದ ಗುರುತನ್ನು ಹಾಕಿ ಮೇಲಿರುವ ಮಹಲ್‌ಗೆ ದಾರಿ ಕಲ್ಪಿಸಿದ್ದಾರೆ.

ಬ್ರಹ್ಮಗಿರಿಯಲ್ಲಿ ಮೌರ್ಯರ ಕಾಲದಲ್ಲಿಯೇ ಕೋಟೆ ಇತ್ತು ಎಂಬುದನ್ನು ಇಲ್ಲಿ ನಡೆದ ಸಂಶೋಧನೆಗಳು ದೃಢಪಡಿಸಿವೆ. ಹಾಗೂ ಅಶೋಕನ ಶಾಸನದಲ್ಲಿರುವ ಇಸಿಲ ಪದವು ಕೋಟೆಯ ಅರ್ಥವನ್ನೇ ಸೂಚಿಸುತ್ತದೆ. ಹೀಗೆ ಬ್ರಹ್ಮಗಿರಿ ಕೋಟೆಯ ಪ್ರಾಚೀನತೆ ಮೌರ್ಯರ ಕಾಲಕ್ಕೆ ಹೋಗುತ್ತದೆಯಾದರೂ ನಮಗೆ ಶಾಸನೋಕ್ತವಾಗಿ ಕೋಟೆಯ ಬಗ್ಗೆ ಉಲ್ಲೇಖಿಸುವುದು ಕ್ರಿ.ಶ.೧೨೭೮ರಲ್ಲಿ. ಇಲ್ಲಿನ ಅಭೇದ್ಯ ಕೋಟೆಯನ್ನು ನಿಡುಗಲ್ಲು ಚೋಳರ ಬೊಮ್ಮಭೂಪಾಲನ ಮಂತ್ರಿ ಬೈಚಪ್ಪನು ಕ್ರಿ.ಶ.೧೨೭೮ರಲ್ಲಿ ಕಟ್ಟಿಸಿದನೆಂದು ಬೆಟ್ಟದ ಮೇಲಿರುವ ಶಾಸನದಿಂದ ತಿಳಿದುಬರುತ್ತದೆ.[೨೩] ನಂತರ ಕ್ರಿ.ಶ.ಸುಮಾರು ೧೩೩೪ರಲ್ಲಿ ಹೊಯ್ಸಳರ ಮೂರನೇ ಬಲ್ಲಾಳನು ಹಾನೆಯದುರ್ಗವನ್ನು ಸಾಧಿಸಿ ವಿಜಯಗಿರಿ ಎಂಬ ಪಟ್ಟಣವನ್ನು ಸ್ಥಾಪಿಸಿದನೆಂದು ಶಾಸನದಲ್ಲಿ ಹೇಳಲಾಗಿದೆ.[೨೪] ವೀರಬಲ್ಲಾಳನು ಮೊದಲೇ ಇದ್ದ ಕೋಟೆಯನ್ನು ಬಲಪಡಿಸಿ ವಿಸ್ತರಿಸಿದನು. ಅಕ್ಕತಂಗಿಯರ ಗುಡಿ, ಪಗಡೆಸಾಲುಗುಡಿ, ಜೈನದೇವಾಲಯ, ತ್ರಿಶಂಕೇಶ್ವರ ದೇವಾಲಯ, ವಿಸ್ತಾರವಾಗಿ ಹಬ್ಬಿರುವ ಕೋಟೆಯ ಗೋಡೆಗಳು ಹೊಯ್ಸಳರ ಕಾಲದಲ್ಲಿದ್ದವೆಂದು ಅಭಿಪ್ರಾಯಪಡಲಾಗಿದೆ.[೨೫] ಮುಂದೆ ವಿಜಯನಗರದ ಆಡಳಿತಾವಧಿಯಲ್ಲಿ ಒಂದು ನಾಡಾಗಿದ್ದು ಈ ಪ್ರದೇಶದಲ್ಲಿ ಕೋಟೆಕೊತ್ತಲಗಳು ನಿರ್ಮಾಣಗೊಂಡಂತಿವೆ. ಹೀಗೆ ನಿರ್ಮಾಣದಲ್ಲಿ ಆಗಿಂದಾಗ್ಗೆ ಆಗಿರುವ ಹಲವಾರು ಬದಲಾವಣೆಗಳನ್ನು ಈ ಕೋಟೆಯಲ್ಲಿ ಕಾಣಬಹುದು.

ನೈಸರ್ಗಿಕ ಬೆಟ್ಟ ಹಾಗೂ ಕಣಿವೆ ಪ್ರದೇಶಗಳನ್ನು ಬಳಸಿಕೊಂಡು ಈ ಕೋಟೆ ನಿರ್ಮಿಸಲಾಗಿದೆ. ಬ್ರಹ್ಮಗಿರಿಯಲ್ಲಿ ಮೂರು ಹಂತದ ಕೋಟೆಯ ರಚನೆಗಳು ಕಂಡುಬರುತ್ತವೆ. ಮೊದಲನೇ ಹಂತದಲ್ಲಿ

[illegible]

[illegible]

ಕಂಡುಬಂದಿರುವ ಪೂರ್ವ ಪಶ್ಚಿಮ ಹಾಗೂ ದಕ್ಷಿಣದ ಹೊರಸುತ್ತಿನ ಕೋಟೆಗಳು ತುಂಬಾ ಪ್ರಾಚೀನವಾಗಿದೆ. ಈ ಕೋಟೆಗೋಡೆಗಳು ತುಂಬಾ ದಪ್ಪವಾಗಿದ್ದು, ಕೆಲವು ಕಡೆ ೧೦ ಅಡಿ ಎತ್ತರ, ೧೫ ಅಡಿ ಅಗಲವಿದ್ದರೆ, ಮತ್ತೊಂದು ಕಡೆ ೩೦ ಅಡಿ ಎತ್ತರ, ೧೫ ಅಡಿ ಅಗಲವಿದೆ. ಅನಿಯಮಿತಾಕಾರದ ದೊಡ್ಡ ಗುಂಡುಗಳನ್ನು ಒಂದರಪಕ್ಕದಲ್ಲಿ ಒಂದನ್ನು ತಳ್ಳಿ ತಡೆಗೋಡೆ ನಿರ್ಮಿಸಿದ್ದಾರೆ. ಮತ್ತೆ ಕೆಲವು ಕಡೆ ಈ ಗುಂಡುಗಳ ಮೇಲೆ ಕೋಟೆಯನ್ನು ಕಿರಿದುಗೊಳಿಸುತ್ತಾ ಕಟ್ಟಿದ್ದಾರೆ. ನೈಸರ್ಗಿಕವಾಗಿ, ಸ್ಥಳೀಯವಾಗಿ ಸಿಕ್ಕ ಕಲ್ಲುಗಳನ್ನು ಹಾಗೆಯೇ ಉಪಯೋಗಿಸಿದ್ದಾರೆ. ದಪ್ಪ, ದಪ್ಪ ಕಲ್ಲುಗಳನ್ನು ಬಳಸಿರುವ ಕೋಟೆಯ ಹೊರಮೈ ನೋಡಲು ಸುಂದರವಾಗಿದ್ದರೂ ತುಂಬಾ ಅಭೇದ್ಯವಾಗಿದೆ. ಒಳಮೈಯಲ್ಲಿ ಎಲ್ಲಿಯೂ ಗಾರೆ ಬಳಸದೆ ಚಿಕ್ಕ ಚಿಕ್ಕ ಕಲ್ಲು ಹಾಗೂ ಮಣ್ಣನ್ನು ಬಳಸಿ ಇಳಿವೋರೆಯನ್ನು ರಚಿಸಿದ್ದಾರೆ. ಕೋಟೆಯನ್ನು ಬೃಹತ್ ಬಂಡೆಗಳನ್ನು ಬಳಸಿಕೊಂಡು ದೊಡ್ಡಕಲ್ಲುಗಳ ರಕ್ಷಣಾಗೋಡೆಗಳ ಜೋಡಣೆಯಿಂದ ಪೂರ್ಣಗೊಳಿಸಿದ್ದಾರೆ. ಈ ರೀತಿಯ ಗೋಡೆಯಲ್ಲಿ ಯಾವುದೇ ಬಂದೂಕು ರಂಧ್ರಗಳಿಲ್ಲ ಬಾಗಿಲುವಾಡಗಳನ್ನು ಬಳಸಿ ಎಲ್ಲಿಯೂ ಬಾಗಿಲುಗಳನ್ನು ರಚಿಸಿಲ್ಲ. ದೊಡ್ಡ ಬಂಡೆಗಳನ್ನು ಆಸರೆಯಾಗಿಟ್ಟುಕೊಂಡು ಸ್ವಾಬಾವಿಕ ಬಾಗಿಲುಗಳನ್ನು ರಚಿಸಿದ್ದಾರೆ. ಇಲ್ಲಿ ದುರ್ಗ ರಚನೆಗೆ ತಗುಲಬಹುದಾದ ಆರ್ಥಿಕ ವೆಚ್ಚವನ್ನು ಸ್ಥಪತಿಗಳು ಕಡಿಮೆಗೊಳಿಸಿದ್ದಾರೆ. ಜೊತೆಗೆ ಇಂತಹ ಕೋಟೆಗಳನ್ನು ರಚಿಸಲು ಆನೆಯಂತಹ ದೊಡ್ಡ ಪ್ರಾಣಿಗಳನ್ನು ಉಪಯೋಗಿಸಿರುವ ಸಾಧ್ಯತೆಯಿದೆ.

ಎರಡನೇ ಹಂತದ ಕೋಟೆಯು ಮುಂದುವರಿದ ಕಲ್ಲುಕೆಲಸದ ಜ್ಞಾನವು ಕಟ್ಟಡಗಳ ರಕ್ಷಣಾತ್ಮಕ ಕೆಲಸವನ್ನು(ತಂತ್ರಜ್ಞಾನ) ಪರಿಚಯಿಸಿದಂತಿದೆ. ಪ್ರಾರಂಭಿಕ ಹಂತದಲ್ಲಿ ಒರಟಾಗಿದ್ದು, ನಂತರ ಕ್ರಮಬದ್ಧವಾಗಿ ನಿರ್ಮಿಸಿರುವುದು ಕಂಡುಬರುತ್ತದೆ. ಸೈಕ್ಲೋಪಿಯನ್ ಗೋಡೆಗಳ ಹಾಗೆ ಕಲ್ಲುಗಳಲ್ಲಿ ಗಾತ್ರವಿದ್ದರೂ, ಸೈನಿಕ ವಾಸ್ತುಶಿಲ್ಪದ ರಚನೆಯನ್ನು ಇಲ್ಲಿ ನೋಡಬಹುದು. ಇದಕ್ಕೆ ಪೂರ್ವದ ಎರಡನೇ ಸುತ್ತಿನ ಕೋಟೆಗೆ ಪಶ್ಚಿಮದ ಜಾಲಕಟ್ಟೆಯ ಕೋಟೆಸಾಲು ಮತ್ತು ಪಗಡೆ ಸಾಲುಗಳು ಮಾದರಿಯಾಗಿದೆ. ಇವು ೨೫ ರಿಂದ ೩೦ ಅಡಿ ಎತ್ತರವಾಗಿದ್ದು, ೧೫ ಅಡಿ ದಪ್ಪವಾಗಿವೆ. ಈ ಕೋಟೆಗೋಡೆಯ ಕಲ್ಲಿನ ಜೋಡಣೆಯಲ್ಲಿ ಪರಿಪೂರ್ಣತೆಯನ್ನು ಕಾಣಬಹುದು.

ಮೂರನೇ ಹಂತವು ಒಂದು ವಿಶಿಷ್ಟ ಸೈನಿಕ ವಾಸ್ತುಶಿಲ್ಪದ ಬೆಳವಣಿಗೆಯಾಗಿದೆ. ಈ ವೇಳೆಗಾಗಲೇ ತುರ್ಕಿ ಅಧಿಕಾರಿಗಳ, ತಂತ್ರಜ್ಞಾನರ ಸಹಾಯದಿಂದ ಬಂದೂಕುಗಳ ಬಳಕೆಯಾಯಿತು. ಕೋಟೆಗಳ ಗಾತ್ರ ಮತ್ತು ಸ್ವರೂಪದಲ್ಲಿನ ಹೆಚ್ಚಳವನ್ನು ಇಲ್ಲಿ ಗಮನಿಸಬಹುದು. ಕಲ್ಲುಗಳನ್ನು ಸೀಳಿ ವಿವಿಧ ಅಳತೆಗಳಲ್ಲಿ

[illegible]

ನಯಗೊಳಿಸಿ ವ್ಯವಸ್ಥಿತವಾಗಿ ಕಟ್ಟಿರುವುದು, ಗೋಡೆಗಳಲ್ಲಿ ಬಂದೂಕು ರಂಧ್ರಗಳನ್ನು ಬಿಟ್ಟಿರುವುದು, ಗೋಡೆಗೆ ಭದ್ರತೆ ಒದಗಿಸುವ ದೃಷ್ಟಿಯಿಂದ ಅಲ್ಲಲ್ಲಿ ಕೊತ್ತಲಗಳನ್ನು ರಚಿಸಿರುವುದು, ಕಾವಲುಗೋಪುರ ಮತ್ತು ಬುರುಜುಗಳ ಗಾತ್ರ ಹೆಚ್ಚಿಸಿರುವುದನ್ನು ತ್ರಿಶಂಕೇಶ್ವರ ದೇವಾಲಯದ ಹಿಂದಿನ ಮತ್ತು ಸಿದ್ಧರ ಬಯಲಿನ ಕೋಟೆಯಲ್ಲಿ ಕಾಣಬಹುದು. ಈ ವ್ಯವಸ್ಥೆ ಸೈನಿಕ ವಾಸ್ತುಶಿಲ್ಪದ ಇತಿಹಾಸದಲ್ಲಿ ಅತ್ಯುನ್ನತ ಸ್ಥಾನವನ್ನು ಹೊಂದಿದೆ. ಕೆಲವು ವೃತ್ತಾಕಾರದ ಬುರುಜುಗಳನ್ನು ಕೋಟೆಗೋಡೆಯಿಂದ ಬೇರ್ಪಡಿಸಿ ಕೋಟೆಗಿಂತಲೂ ಎತ್ತರದಲ್ಲಿ ಕಟ್ಟಲಾಗಿದೆ. ಇವು ಶತ್ರುಗಳೊಡನೆ ಹೋರಾಡಲು ತುಂಬಾ ಸಹಾಯಕವಾಗುತ್ತವೆ. ಹೀಗೆ ಬ್ರಹ್ಮಗಿರಿಯಲ್ಲಿ ಮೂರು ಹಂತದ ಕೋಟೆರಚನೆ ಕಂಡುಬರುತ್ತದೆ.

ಬೆಟ್ಟದ ಮಧ್ಯದಲ್ಲಿರುವ ಹುಲಿಕುಂಟೆಯನ್ನು ಕೇಂದ್ರವಾಗಿಟ್ಟು ಕೋಟೆಯನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಹುಲಿಕುಂಟೆಯು ಪೂರ್ವದಲ್ಲಿ ಏಳೂರುಪಡೆ ಆಗ್ನೇಯದಲ್ಲಿ ಕಾರಕುಟ್ರೆ ಬಂಡೆ, ದಕ್ಷಿಣದಲ್ಲಿ ಸೊಟ್ಟಮರದಸಂದು, ನಾಲ್ಕೆತ್ತಿನಸಂದು, ಪೆದಾಲ್‌ಸಂದು ಹಾಗೆಯೇ ಪಶ್ಚಿಮದಲ್ಲಿ ಪಗಡೆಸಾಲು, ಜಾಲಿಕಟ್ಟೆ ಕೋಟೆಸಾಲು, ಉತ್ತರದಲ್ಲಿ ಮೇಲ್ದುರ್ಗ, ತ್ರಿಶಂಕೇಶ್ವರ ದೇವಸ್ಥಾನ, ಈಶಾನ್ಯಕ್ಕೆ ಸೋಪಾನ ಬಂಡೆಗಳ ಮಧ್ಯದಲ್ಲಿದೆ. ಹುಲಿಕುಂಟೆಯ ಪೂರ್ವಕ್ಕೆ ಏಳೂರಪಡೆಯ ಕಡಿದಾದ ಬಂಡೆ ೧೦೦ ಅಡಿ ಉದ್ದವಿದೆ. ಇದರ ಕೆಳಭಾಗದಲ್ಲಿ ೩ ಅಡಿ ಎತ್ತರದ ೨೦೦x೫೦ ಚ.ಅಡಿ ವಿಸ್ತೀರ್ಣವುಳ್ಳ ಒಂದು ಗುಹೆ ಇದೆ. ಈ ಗುಹೆಯನ್ನು ಏಳೂರು ಪಡೆ ಗುಹೆ ಎಂದು ಕರೆಯುತ್ತಾರೆ. ಇದರಲ್ಲಿ ಪ್ರಾಚೀನ ವರ್ಣಚಿತ್ರಗಳಿವೆ.

ಏಳೂರಪಡೆಯ ಆಗ್ನೇಯ ದಿಕ್ಕಿಗೆ ಕಾರಕುಟ್ರೆ ಬಂಡೆ ಸಿಗುತ್ತದೆ. ಇದಕ್ಕೆ ಹೊಂದಿಕೊಂಡಂತೆ ಉತ್ತರಕ್ಕೆ ಚಿಕ್ಕ ಚಿಕ್ಕ ಕಲ್ಲುಗಳಿಂದ ಕಟ್ಟಿರುವ ೨ ಸುತ್ತಿನ ಕೋಟೆಗೋಡೆ ಇದೆ. ಇದರ ಪಕ್ಕದಲ್ಲಿಯೇ ಮತ್ತೊಂದು ಸುತ್ತು ಉತ್ತರ ದಕ್ಷಿಣ ಬೆಟ್ಟಗಳಿಗೆ ಜೋಡಿಸಿರುವಂತೆ ಕಟ್ಟಲಾಗಿದೆ. ಈ ಗೋಡೆಯು ೨೫ ಅಡಿ ಎತ್ತರ, ೧೮ ಅಡಿ ಅಗಲವಿದೆ. ಎರಡು ಸ್ವಾಭಾವಿಕ ದ್ವಾರಗಳನ್ನು ಹೊಂದಿರುವ ಈ ರಕ್ಷಣಾಗೋಟೆಯು ದಕ್ಷಿಣಕ್ಕೆ ಹೋದಂತೆ ದಪ್ಪ ಹಾಗೂ ಎತ್ತರವನ್ನು ಹೆಚ್ಚಿಸಿದ್ದಾರೆ.

ಕೋಟೆಗೋಡೆಗೆ ನಯಗೊಳಿಸಿದ ಮಧ್ಯಗಾತ್ರದ ಕಲ್ಲುಗಳನ್ನು ಬಳಸಿದ್ದಾರೆ. ಗೋಡೆಯ ಒಳಭಾಗವನ್ನು ಜಲ್ಲಿ ಕಲ್ಲುಗಳಿಂದ ಕೆಸರಿನೊಂದಿಗೆ ಬೆರೆಸಿ ತುಂಬಲಾಗಿದೆ. ದ್ವಾರದ ಪಕ್ಕದಲ್ಲಿ ದಿಡ್ಡಿಬಾಗಿಲ ರೀತಿಯಲ್ಲಿ ಸುರಂಗವನ್ನು ನಿರ್ಮಿಸಿದ್ದಾರೆ. ಬಹುಶಃ ಇದು ಗೋಡೆಯ ಹಿಂದೆ ನಿಲ್ಲುತ್ತಿದ್ದ

[illegible]

ನೀರನ್ನು ಹೊರಕ್ಕೆ ಕಳುಹಿಸುವ ಕ್ರಮವಿರಬಹುದು. ರೊಪ್ಪ ಕಡೆಯ ಬೆಟ್ಟ ಇಳಿಜಾರಾಗಿದ್ದು ಶತ್ರುಗಳು ಸುಲಭವಾಗಿ ನುಗ್ಗಿಬರುವ ಸ್ಥಳ ಇದಾಗಿರುವುದರಿಂದ ಈ ರೀತಿ ವ್ಯವಸ್ಥಿತವಾಗಿರುವ ರಕ್ಷಣಾಗೋಡೆಯನ್ನು ಈ ಭಾಗದಲ್ಲಿ ನಿರ್ಮಿಸಿದ್ದಾರೆ.

ತ್ರಿಶಂಕೇಶ್ವರ ದೇವಾಲಯದ ಮುಂಭಾಗ ಪೂರ್ವಕ್ಕೆ ಆಯತಾಕಾರದ ಕೋಟೆಯನ್ನು ಕಡಿದಾದ ಬಂಡೆಯ ಮೇಲೆ ನಿರ್ಮಿಸಿದ್ದಾರೆ. ಕೋಟೆಯ ಹೊರಸುತ್ತನ್ನು ದೊಡ್ಡ ದೊಡ್ಡ ಕಲ್ಲುಗಳಿಂದ ನಿರ್ಮಿಸಿದ್ದಾರೆ. ಪೂರ್ವಕ್ಕೆ ಎರಡು ಬುರುಜುಗಳಿವೆ. ಈ ಗೋಡೆ ೧೦ ಅಡಿ ಎತ್ತರವಿದ್ದು, ೧೦ ಅಡಿ ಅಗಲವಾಗಿದೆ. ಕೋಟೆಯ ಮಧ್ಯಭಾಗದಲ್ಲಿ ಉತ್ತರ ಮತ್ತು ದಕ್ಷಿಣವಾಗಿ ವ್ಯವಸ್ಥಿತ ಬಿಳಿ ಗ್ರಾನೈಟ್ ಕಲ್ಲುಗಳಿಂದ ನಿರ್ಮಿಸಿರುವ ಕೋಟೆ ಇದೆ. ಇದಕ್ಕೆ ೧x೪, ೧x೩ ಅಡಿ ಕಲ್ಲುಗಳನ್ನು ಬಳಸಿದ್ದಾರೆ. ಮೇಲ್ಭಾಗದಲ್ಲಿ ಮಧ್ಯಮಗಾತ್ರದ ಕಲ್ಲು ಬಳಸಿರುವುದನ್ನು ನೋಡಿದರೆ, ಗೋಡೆಯು ಪುನರ್ ನವೀಕರಣಗೊಂಡಂತಿದೆ. ಈ ಗೋಡೆಯ ಎತ್ತರ ೩೦ ಅಡಿ ಇದೆ. ಗೋಡೆಗೆ ಎಲ್ಲಿಯೂ ಗಾರೆ ಬಳಸಿಲ್ಲ. ಮೇಲ್ಭಾಗದ ಕೋಟೆಗೆ ಹೋಗಲು ಬಾಗಿಲಿದ್ದು ಇದನ್ನು ದೊಡ್ಡ ಬಂಡೆ ಬಳಸಿಕೊಂಡು ನಿರ್ಮಿಸಲಾಗಿದೆ. ಈ ಬಂಡೆಯ ಸುತ್ತಲೂ ಕೋಟೆ ಗೋಡೆಯನ್ನು ಕಟ್ಟಿದ್ದಾರೆ. ಬಂಡೆಯ ಮೇಲೆ ಆಂಜನೇಯನ ಶಿಲ್ಪವಿದೆ. ಕೋಟೆ ಗೋಡೆಯ ಮೂಲೆಗಳಲ್ಲಿರುವ ಕಲ್ಲುಗಳನ್ನು ತಾಂತ್ರಿಕವಾಗಿ ಬಳಸಿದ್ದಾರೆ. ಒಂದು ಕಲ್ಲನ್ನು ತಗ್ಗಾಗಿಸಿ ಮತ್ತೊಂದು ಕಲ್ಲನ್ನು ಉಬ್ಬಾಗಿಸಿ ಎರಡನ್ನೂ ಸೇರಿಸಲಾಗಿದೆ. ಈ ತಂತ್ರ ರೂಪಿಸಿ ಗೋಡೆಗೆ ಸಿಮೆಂಟ್‌ನಂತೆ ಭದ್ರತೆ ಒದಗಿಸಿದ್ದಾರೆ.

ಈ ಕೋಟೆಯ ಪಶ್ಚಮಕ್ಕೆ ಸಿದ್ಧರಬಯಲು ಎಂದು ಕರೆಯುವ ವಿಶಾಲ ಬಯಲು ಇದೆ. ಉತ್ತರದಲ್ಲಿ ಬೆಟ್ಟವನ್ನು ಬಳಸಿಕೊಂಡು ಕೋಟೆಯಿದ್ದರೆ, ದಕ್ಷಿಣ ಭಾಗದಲ್ಲಿ ಸೋಪಾನ ಬಾಗಿಲು ಕೋಟೆ ಸೇರಿಸಿದಂತೆ ಆಯತಾಕಾರದ ಕೋಟೆ ಪ್ರದೇಶವಿದೆ. ಸೋಪಾನ ಬಾಗಿಲ ಕೋಟೆಗೋಡೆಗೆ ಮೂರು ಬುರುಜುಗಳಿವೆ. ಇಲ್ಲಿಂದ ಹುಲಿಕುಂಟೆ, ತ್ರಿಶಂಕೇಶ್ವರ, ಪೂರ್ವದ ಕೋಟೆಗೆ ಹೋಗಲು ದಾರಿಗಳಿವೆ. ಹುಲಿಕುಂಟೆಗೆ ಹೋಗಲು ಸೋಪಾನ ಬಾಗಿಲಿದೆ. ಈ ಬಾಗಿಲು ೩.೫ ಅಡಿ ಅಗಲ ೫.೫ ಅಡಿ ಎತ್ತರವಿದ್ದು, ಒಂಭಾಗದಲ್ಲಿ ೨ ಪಹರೆ ಗೃಹಗಳಿವೆ. ಮುಂಭಾಗದಲ್ಲಿ ೨೦x೧೩ ಅಡಿ ಉದ್ದದ ೨ ದೊಡ್ಡ ಬಂಡೆಗಳು ಬಾಗಿಲನ್ನು ಕಾಣದಂತೆ ರಕ್ಷಿಸಿವೆ. ಈ ಬಂಡೆಗಳ ಮೇಲೆ ೨ ಕಾವಲು ಬುರುಜುಗಳಿವೆ. ಸೋಪಾನ ಬಾಗಿಲಿನಿಂದ ಮುಂದೆ ಸ್ವಲ್ಪ ದೂರದಲ್ಲಿ ಹುಲಿಕುಂಟೆ ಪ್ರದೇಶ ಸಿಗುತ್ತದೆ. ದಾರಿಯ ಎರಡು ಕಡೆ ವಸತಿ ಪ್ರದೇಶಗಳ ಕುರುಹುಗಳಿವೆ.

[illegible]

ಸೋಪಾನ ಬಾಗಿಲಿನಿಂದ ದಕ್ಷಿಣಕ್ಕೆ ಬಂದರೆ ಜಾಲಿಕಟ್ಟೆ ಕೋಟೆಗೋಡೆ ಹಾಗೂ ಹುಲಿಕುಂಟೆ ಕೆರೆಯ ಏರಿ ಇದೆ. ಈ ಭಾಗದಲ್ಲಿ ಭಾಗ್ಯಲಕ್ಷ್ಮೀ ದೇವಾಲಯ, ವೀರಗಲ್ಲು, ವೀರಭದ್ರಗುಡಿ ಮುಂತಾದ ಸ್ಮಾರಕಗಳಿವೆ. ಭಾಗ್ಯಲಕ್ಷ್ಮೀ ದೇವಾಲಯದ ಈಶಾನ್ಯ ದಿಕ್ಕಿಗೆ ದಾರಿಯಿದ್ದು, ದಾರಿಯ ಎರಡೂ ಬದಿಯಲ್ಲಿ ಸಾಲಾದ ಗುಂಡುಗಳನ್ನು ಇಟ್ಟಿದ್ದಾರೆ. ಸಾಮಾನ್ಯವಾಗಿ ವಸತಿ ಪ್ರದೇಶಕ್ಕೆ ಸೋಪಾನಗುಡ್ಡದಿಂದ ಬಂದ ನೀರನ್ನು ನುಗ್ಗದ ಹಾಗೆ ಈ ಗುಂಡುಗಳನ್ನಿಟ್ಟಿರಬಹುದು.

ಹುಲಿಕುಂಟೆಯ ದಕ್ಷಿಣಕ್ಕೆ ಒಂದೆ ಹೇಳಿರುವಂತೆ ಕಾರುಕುಟ್ರೆಸಂದು, ಸೊಟ್ಟಮರದ ಸಂದು, ನಾಲ್ಕೆತ್ತಿನ ಸಂದು, ಪೆದಾಲ್ ಸಂದುಗಳಿವೆ. ಇವುಗಳಿಗೆ ಅಡ್ಡಲಾಗಿ ಹಾಗೂ ಪೂರ್ವಪಶ್ಚಿಮವಾಗಿ ಹುಲಿಕುಂಟೆ ಕೆರೆಯನ್ನು ಹೊಂದಿಕೊಂಡು ಕೋಟೆಯನ್ನು ನಿರ್ಮಿಸಿದ್ದಾರೆ. ಪೆದಾಲ್‌ಸಂದು ಮತ್ತು ನಾಲ್ಕೆತ್ತಿನ ಸಂದುಗಳಲ್ಲಿ ಪೂರ್ವಪಶ್ಚಿಮವಾಗಿ ೧೦x೧೦ ಅಡಿಯ ಗುಂಡುಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಸರಿಸಿ ತಡೆಗೋಡೆಯನ್ನು ಕಟ್ಟಿದ್ದಾರೆ. ನಿಜಕ್ಕೂ ಇದು ಒಂದು ದೊಡ್ಡ ಸಾಹಸವೇ ಸರಿ. ಇದೇ ರೀತಿ ಬೆಟ್ಟವನ್ನು ಬಳಸಿ ಮೂರು ಸುತ್ತನ್ನು ನಿರ್ಮಿಸಿದ್ದಾರೆ. ಈ ಸಂದುಗಳು ದಕ್ಷಿಣಕ್ಕೆ ಮೇಗಳ ಮತ್ತು ಕೆಳಗಳ ನೀರಿನ ಕುಂಟೆಗಳಿವೆ.

ಹುಲಿಕುಂಟೆಯ ಪಶ್ಚಿಮಕ್ಕೆ ಇರುವುದೇ ಜಾಲಿಕಟ್ಟೆ ಕೋಟೆ ಪ್ರದೇಶ. ಇದು ೧೫ ಅಡಿ ಎತ್ತರವಾಗಿದ್ದು ೧೦ ಅಡಿ ದಪ್ಪವಾಗಿದೆ. ಉತ್ತರ ಮತ್ತು ದಕ್ಷಿಣ ಬೆಟ್ಟಗಳ ಮಧ್ಯೆ ತಡೆಗೋಡೆಯಂತೆ ಬಾರಿ ಭದ್ರತೆಯನ್ನೊದಗಿಸಿ ಈ ರಕ್ಷಣಾಗೋಡೆ ನಿರ್ಮಿಸಲಾಗಿದೆ. ಇದಕ್ಕೆ ಮೂರು ಸ್ವಾಬಾವಿಕ ಬಾಗಿಲುಗಳಿವೆ. ಬಾಗಿಲುಗಳಿಂದ ಪಶ್ಚಿಮಕ್ಕೆ ಪಗಡೆಸಾಲು ಬೆಟ್ಟದ ಕೊನೆಯವರೆಗೂ ಗೋಡೆಯನ್ನು ಮುಂದುವರಿಸಲಾಗಿದೆ. ದಕ್ಷಿಣದ ಕೋಟೆಗೋಡೆಯು ನೇರವಾಗಿ ಮುಂದೆ ಸಾಗಿ ಮತ್ತೆ ಎರಡು ಭಾಗವಾಗುತ್ತದೆ. ಈ ಭಾಗದಲ್ಲಿ ಆಯತಾಕಾರದ ಕೋಟೆ ರಚನೆಯಾಗಿದ್ದು, ದಕ್ಷಿಣದಲ್ಲಿ ಹೆಚ್ಚುವರಿಯಾಗಿ ಕೋಟೆಯನ್ನು ವಿಸ್ತರಿಸಲಾಗಿದೆ. ವಿಸ್ತರಿಸಿರುವ ಕೋಟೆಗೆ ೨ ಬಾಗಿಲುಗಳನ್ನು ಬಿಡಲಾಗಿದೆ. ಬಾಗಿಲ ಮುಂದೆ ಸ್ವಲ್ಪ ದೂರದಲ್ಲಿ ಬುರುಜನ್ನು ನಿರ್ಮಿಸಲಾಗಿದೆ. ಇದೇ ಕೋಟೆಯು ಪಗಡೆಸಾಲು ಗುಡಿಯನ್ನು ಸುತ್ತುವರೆದಿದೆ. ಆದರೆ ಈಗ ಈ ಪ್ರದೇಶವನ್ನೆಲ್ಲಾ ವ್ಯವಸಾಯಕ್ಕೆ ಉಪಯೋಗಿಸಿಕೊಂಡಿರುವುದರಿಂದ ಪಶ್ಚಿಮದ ಕೋಟೆಗೋಡೆ ಕಾಣುವುದಿಲ್ಲ. ಪಗಡೆಸಾಲು ಕೋಟೆ ಸಾಲಿನ ಅಂಚಿನ ಭಾಗವು ಪ್ರಖ್ಯಾತವಾದ ಹೊಯ್ಸಳರ ಕಾಲದ ಪ್ರಸಿದ್ಧ ಹಾನೆಯಪಟ್ಟಣ ಮತ್ತು ವಿಜಯಗಿರಿಯನ್ನು ನೆನಪಿಗೆ ತರುತ್ತದೆ. ಈ ಭಾಗದಲ್ಲಿರುವ ಜೈನ ದೇವಾಲಯದ ಗರ್ಭಗೃಹ, ನವರಂಗ,

[illegible]

ಮುಖಮಂಟಪವನ್ನು ಒಳಗೊಂಡು ಇಂದಿಗೂ ಸುಸ್ಥಿತಿಯಲ್ಲಿದೆ. ದೇವಾಲಯ ಮುಂದೆ ಪೂರ್ವಕ್ಕೆ ಬೆಟ್ಟದ ತಪ್ಪಲಿನಲ್ಲಿ ಕರಡಿದೊಣೆಯಿದ್ದು, ಇಲ್ಲಿ ವರ್ಣಚಿತ್ರಗಳು, ಕೆಂಪುಬಣ್ಣದ ಆಂಜನೇಯ, ಆನೆ ಮುಂತಾದ ಚಿತ್ರಗಳಿವೆ. ಈ ಪ್ರದೇಶದಲ್ಲಿ ಪ್ರಾಚೀನ ಜನವಸತಿಯಿದ್ದ ಕುರುಹುಗಳು ಕಂಡುಬರುತ್ತವೆ. ಇದೇ ಪರಿಸರದಲ್ಲಿ ಬೆಟ್ಟದ ಪಶ್ಚಿಮಭಾಗಕ್ಕೆ ಅಕ್ಕತಂಗಿಯರ ಗುಡಿಗಳಿವೆ. ಸಿದ್ಧಾಪುರದ ಗ್ರಾಮದಿಂದ ಕೋಟೆ ಹತ್ತುವಾಗ ಸಿಗುವ ಈ ದೇವಾಲಯಗಳು ಬ್ರಹ್ಮಗಿರಿಯ ಸ್ಮಾರಕಗಳಲ್ಲಿಯೇ ಬಹಳ ಸುಂದರವಾಗಿವೆ. ಈ ದೇವಾಲಯದ ಪಕ್ಕದಲ್ಲಿ ದೊಡ್ಡ ಒಂಟಿ ಬಂಡೆಯೊಂದರ ಮೇಲೆ ಆನೆಯ ಗೀರು ಚಿತ್ರವನ್ನು ಕೊರೆಯಲಾಗಿದೆ. ದೇವಾಲಯದಿಂದ ನೇರವಾಗಿ ಕಲ್ಲಿನ ಮೆಟ್ಟಿಲುಗಳನ್ನು ಬಳಸಿ ಪೂರ್ವಕ್ಕೆ ಹತ್ತಿದರೆ ಮೇಲುದುರ್ಗ ಮತ್ತು ಮಹಲ್ ತಲುಪುತ್ತೇವೆ.

ಬ್ರಹ್ಮಗಿರಿ ಬೆಟ್ಟದ ಮೇಲೆ ೧೫೦ ವರ್ಷಗಳ ಹಿಂದೆ ಕಟ್ಟಿಸಿದ ಮಹಲೊಂದು ಚಿಕ್ಕ ಅರಮನೆಯಂತಿದೆ. ಇದರ ಹತ್ತಿರದಲ್ಲಿಯೇ ಚಿಕ್ಕದಾದ ಗುಡಿಯಲ್ಲಿ ಸಿದ್ದೇಶ್ವರನ ಲಿಂಗವಿದೆ. ಸಿದ್ದೇಶ್ವರನ ಗುಡಿಯ ಮುಂದೆ ಪುಷ್ಕರಣಿ ಇದೆ. ಮಹಲಿನ ಪೂರ್ವಕ್ಕೆ ಅನೇಕ ಗುಹೆಗಳಿದ್ದು ಅವುಗಳಲ್ಲಿ ತಂಪಾದ ನೀರು ಸಿಗುತ್ತದೆ. ಆಗ್ನೇಯ ದಿಕ್ಕಿಗೆ ಮಹಲಿನ ಎದುರಿಗೆ ಕಾಣುವ ಕೋಟೆಯ ಪ್ರದೇಶವನ್ನು ಮೇಲ್ದುರ್ಗ ಎಂದು ಕರೆಯುತ್ತಾರೆ. ಈ ಮೇಲ್ದುರ್ಗದ ಕೋಟೆಯು ತ್ರಿಶಂಕೇಶ್ವರ ದೇವಾಲಯವನ್ನು ಬಳಸಿಕೊಂಡು ಕಟ್ಟಲಾಗಿರುವ ಕೋಟೆಯೊಳಗೆ ಐದು ಅಂಕಣಗಳಿವೆ. ಈ ಕೋಟೆ ಪ್ರದೇಶವನ್ನು ಕುಮಾರರಾಮನ ಕೊಪ್ಪಕೋಟೆ ಎಂದು ಕರೆಯಲಾಗಿದೆ.[೨೬] ಮೊದಲನೆಯ ಅಂಕಣದ ಕೋಟೆಯು ಮೇಲ್ದುರ್ಗವೆನಿಸಿಕೊಂಡಿದ್ದು, ಇಲ್ಲಿ ಕುಮಾರರಾಮನ ಗರಡಿಮನೆ, ಪುಷ್ಕರಣಿ ಮತ್ತಿತರ ಕಟ್ಟಡದ ಅವಶೇಷಗಳಿವೆ. ಈ ಅಂಕಣದ ನಾಲ್ಕು ದಿಕ್ಕಿಗೂ ನೈಸರ್ಗಿಕ ಬಂಡೆಗಳನ್ನು ಬಳಸಿಕೊಂಡು ೨೦ ಅಡಿ ಎತ್ತರದ ಗೋಡೆ ಇದೆ. ೬ ಬುರುಜುಗಳನ್ನು ಹೊಂದಿರುವ ಈ ಅಂಕಣಕ್ಕೆ ಪೂರ್ವದಲ್ಲಿ ದ್ವಾರ ಕಲ್ಪಿಸಲಾಗಿದೆ.

ದ್ವಾರವನ್ನು ಪಕ್ಕದಲ್ಲಿರುವ ದೊಡ್ಡ ಬಂಡೆಯೊಂದು ಮರೆಮಾಡಿದ್ದು, ಈ ಗೋಡೆಯಲ್ಲಿ ಬಂದೂಕು ರಂಧ್ರಗಳಿವೆ. ದಕ್ಷಿಣ ಭಾಗದಲ್ಲಿ ಎರಡು ಬಂಡೆಗಳ ಮಧ್ಯೆ ೫ ಅಡಿ ಆಳವಿರುವ ೧೦ ಅಡಿ ವ್ಯಾಸದ ಗುಹೆಯಿದ್ದು, ಇದನ್ನು ಕುಮಾರರಾಮನ ಗರಡಿ ಮನೆ ಎಂದು ಕರೆಯಲಾಗಿದೆ. ಉತ್ತರದಲ್ಲಿ ಎತ್ತರವಾದ ಬಂಡೆಗಳ ಮೇಲೆ ಕೊರೆದಿರುವ ಎರಡು ರಂಧ್ರಗಳಿವೆ. ಸಾಮಾನ್ಯವಾಗಿ ಇದು ಧ್ವಜ ಹಾರಿಸುವ ವ್ಯವಸ್ಥೆಯನ್ನು ಇಲ್ಲಿ ನಿರ್ಮಿಸಿಕೊಂಡಿರಬೇಕು. ಈ ಬಂಡೆಯನ್ನು ಸ್ವಾಭಾವಿಕ

[illegible]

[illegible]

[illegible]

ಕಾಲವುಗೋಪುರವಾಗಿ ಮಾಡಿಕೊಂಡಿದ್ದಾರೆ. ಇಲ್ಲಿಗೆ ಹತ್ತಲು ಮೆಟ್ಟಿಲುಗಳಿವೆ. ಈ ಬಂಡೆಯ ಮೇಲಿನಿಂದ ಪಶ್ಚಿಮದ ಸುತ್ತಲಿನ ಪ್ರದೇಶವನ್ನಲ್ಲದೆ, ಬ್ರಹ್ಮಗಿರಿ ಬೆಟ್ಟದ ಬಹುಪಾಲು ಭಾಗವನ್ನು ಇಲ್ಲಿಂದ ನೋಡಬಹುದು. ಅಷ್ಟೇ ಅಲ್ಲದೆ ಜಟಂಗಿರಾಮೇಶ್ವರ, ನುಂಕೆಸಿದ್ದೇಶ್ವರ, ಉಚ್ಚಂಗಿದುರ್ಗದ ದೀಪಸ್ತಂಭಗಳ ದರ್ಶನವನ್ನು ಇಲ್ಲಿಂದ ಮಾಡಬಹುದಾಗಿದೆ.

ಎರಡನೇ ಅಂಕಣದ ಪ್ರದೇಶದಲ್ಲಿ ಕಟ್ಟಡದ ಅವಶೇಷಗಳು ಹಾಗೂ ವಸತಿ ನೆಲೆಯ ಕುರುಹುಗಳಿವೆ. ಅದರ ದಕ್ಷಿಣಕ್ಕೆ ೬೦ ಮೀ. ಅಗಲ ಪೂರ್ವ ದಿಕ್ಕಿಗೆ ೭೫ ಮೀಟರ್ ಉದ್ದದ ಹೊಂಡವಿದೆ. ಈ ಹೊಂಡದಿಂದ ಮೇಲ್ದುರ್ಗಕ್ಕೆ ಏತ ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಹೊಂಡದ ಬಂಡೆಯ ಮೇಲೆ ವಾರೀಜ ಎಂಬ ಮೂರು ಅಕ್ಷರದ ಶಾಸನ ಹಾಗೂ ದೇವಾಲಯದಂತಹ ಕೊರೆದ ಚಿತ್ರ ಬಿಡಿಸಲಾಗಿದೆ. ಇಲ್ಲಿಂದ ದಕ್ಷಿಣಕ್ಕೆ ಹುಲಿಕುಂಟೆ ಕಡೆಗೆ ಬಾರೀ ಬಂಡೆಗಳ ಸಮೂಹವಿದೆ. ಇವು ಸುಮಾರು ೪೦ ರಿಂದ ೫೦ ಅಡಿ ಎತ್ತರವಾದ ಬಂಡೆಗಳಾಗಿವೆ. ಬಂಡೆಗಳ ಕೆಳಗೆ ಗುಹೆಗಳಿದ್ದು ಇವು ಜನವಸತಿಯ ತಾಣಗಳಾಗಿವೆ. ಮೇಲ್ಭಾಗದ ಬಂಡೆಗಳನ್ನು ಬಳಸಿಕೊಂಡು ನಿರ್ಮಿಸಿರುವ ತುಂಬಾ ಪ್ರಾಚೀನವಾದ ೨ ಅಡಿ ಅಗಲ, ೪ ಅಡಿ ಎತ್ತರದ ಮಣ್ಣಿ ಕೋಟೆ ಇದೆ. ಮೂರು ಮತ್ತು ನಾಲ್ಕನೇ ಅಂಕಣದ ಪ್ರದೇಶದಲ್ಲೂ ಯಾವುದೇ ಕಟ್ಟಡಗಳಲ್ಲ. ಆದರೆ ಮಧ್ಯೆ ಮಧ್ಯೆ ಎತ್ತರವಾದ ಬುರುಜುಗಳನ್ನು ಕೋಟೆಗೋಡೆಯಿಂದ ಬೇರ್ಪಡಿಸಿ, ಗೋಡೆಗಿಂತಲೂ ಎತ್ತರವಾಗಿ ಕಟ್ಟಿದ್ದಾರೆ. ಐದನೇ ಅಂಕಣದ ಕೋಟೆಯು ಆಯತಾಕಾರದಲ್ಲಿದ್ದು ಕೋಟೆ ಪೂರ್ವಕ್ಕೆ ತ್ರಿಶಂಕೇಶ್ವರ ದೇವಾಲಯ, ಪಶ್ಚಿಮಕ್ಕೆ ಆಂಜನೇಯ ಗುಡಿಗಳಿವೆ. ೨ ದೇವಾಲಯಗಳ ಪಕ್ಕದಲ್ಲಿ ದ್ವಾರವಿದೆ. ಕೋಟೆಯೊಳಗೆ ಉತ್ತರಕ್ಕೆ ಗಂಗಮ್ಮನ ದೋಣಿ ಇದೆ. ತ್ರಿಶಂಕೇಶ್ವರ ದೇವಾಲಯದ ದಕ್ಷಿಣ ದಿಕ್ಕಿಗೆ ಎರಡು ವೃತ್ತಾಕಾರದ ಬುರುಜುಗಳಿವೆ. ತ್ರಿಶಂಕೇಶ್ವರ ದೇವಾಲಯದಿಂದ ಸ್ವಲ್ಪದೂರಕ್ಕೆ ಮುಂದೆ ಉತ್ತರದಕ್ಷಿಣವಾಗಿ ಎರಡು ರಕ್ಷಣಾಗೋಡೆಗಳು ಉತ್ತರದಲ್ಲಿ ನೀರು ಕುಂಟೆ ಬೆಟ್ಟವನ್ನು ಬಳಸಿಕೊಂಡು ದಕ್ಷಿಣದ ಸೋಪಾನ ಬೆಟ್ಟದ ಸಾಲಿಗೆ ಸೇರಿಸಲಾಗಿದೆ. ಎರಡು ಕೋಟೆ ಸಾಲಿನಲ್ಲಿ ಸ್ವಾಭಾವಿಕವಾದ ದ್ವಾರಗಳಿವೆ. ಮೊದಲ ಕೋಟೆಯ ದ್ವಾರವನ್ನು ದಾಟಿ ಮುಂದೆ ಸಾಗಿದರೆ ಬಲಬದಿಯಲ್ಲಿ ಹುಟ್ಟುಬಂಡೆಯ ಮೇಲೆ ೧೫ ಜನ ಶಸ್ತ್ರಸಜ್ಜಿತ ಸಿಪಾಯಿ ಪಡೆಯೊಂದು ಸರದಿಯೋಪಾದಿಯಲ್ಲಿ ಮೆರವಣಿಗೆ ಹೊರಟಿರುವಂತೆ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಬಂಡೆಯ ಮೇಲೆ ಶಾಸನವಿದೆ. ಈ ಶಿಲ್ಪದ ಎದುರಿಗೆ ಬಂಡೆಯ ಮೇಲೆ ಧೂತನೊಬ್ಬನು ತಮಟೆ ಬಾರಿಸುತ್ತಿರುವ ದೃಶ್ಯವನ್ನು ಕೆತ್ತಲಾಗಿದೆ. ಈದೇ ದಾರಿಯಲ್ಲಿ ಸಾಗಿದರೆ ದೊಡ್ಡ ಬಂಡೆಯ

[illegible]

ಮೇಲೆ ಹನುಮಂತನ ಚಿತ್ರವಿದೆ. ಶಿಲ್ಪದ ಮುಂಬಾಗ ಸಿದ್ಧರ ಬಯಲು ಇದೆ. ಈ ಬಯಲಿನಲ್ಲಿ ಪಶ್ಚಿಮಕ್ಕೆ ಹೊಂದಿಕೊಂಡಂತೆ ವಿಶಾಲವಾದ ಕಟ್ಟಡದ ವೇದಿಕೆ ಇದೆ. ವೇದಿಕೆಯು ಉತ್ತರ ದಕ್ಷಿಣವಾಗಿ ೫೦ ಮೀಟರ್ ಉದ್ದವಿದೆ. ೩.೬ ಅಡಿಗಳ ನಯವಾದ ಕಲ್ಲುಗಳನ್ನು ಬಳಸಿ ವೇದಿಕೆ ನಿರ್ಮಿಸಿರುವುದನ್ನು ಗಮನಿಸಿದರೆ, ಇದು ಅರಮನೆಯ ಪ್ರದೇಶವಾಗಿತ್ತೆಂದು ತೋರುತ್ತದೆ. ವೇದಿಕೆಯ ಮೇಲೆ ಹೋಗಲು ೭.೪ ಅಡಿ ನಯವಾದ ಚಪ್ಪಡಿ ಕಲ್ಲುಗಳನ್ನು ಬಳಸಿ ಮೆಟ್ಟಿಲುಗಳನ್ನು ರಚಿಸಲಾಗಿದೆ. ಆದರೆ ಕಟ್ಟಡದ ಈ ಅವಶೇಷಗಳೆಲ್ಲ ಶಿಥಿಲಗೊಂಡಿದೆ.

ವಿಶ್ವದ ಇತಿಹಾಸದಲ್ಲೇ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿರುವ ಇಲ್ಲಿನ ಪರಿಸರದ ಪ್ರತಿಯೊಂದೂ ಸ್ಮಾರಕಗಳ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ.

೪.೨ ಲುಂಕೆ ಕೋಟೆ

ಲುಂಕೆ ಕೋಟೆಯು ಜಿಲ್ಲೆಯ ಪ್ರಸಿದ್ಧ ಪುಣ್ಯ ಕ್ಷೇತ್ರಗಳಲ್ಲೊಂದು. ಮೊಳಕಾಲ್ಮೂರು ಕೋಟೆಯೊಳಗಿನ ಕೂಗುವ ಬಂಡೆಯ ವಾಯುವ್ಯ ದಿಕ್ಕಿಗೆ ೫ ಕಿ.ಮೀ. ದೂರದಲ್ಲಿದೆ. ಉತ್ತರ ಅಕ್ಷಾಂಶ ೨೬°೪೪ ರಿಂದ ಪೂರ್ವ ರೇಖಾಂಶ ೨೬°೪೭ದಲ್ಲಿದ್ದು, ಸಮುದ್ರಮಟ್ಟದಿಂದ ೩೦೨೨ ಅಡಿ ಎತ್ತರದಲ್ಲಿದೆ. ಈ ಕ್ಷೇತ್ರವನ್ನು ನುಂಕೆಮಲೆ, ಲುಂಕೆಮಲೆ, ದೇವರಗುಡ್ಡ, ನುಂಕೆ ಭೈರವನಬೆಟ್ಟ, ನುಂಕಪ್ಪನ ಗುಡ್ಡ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಲುಂಕೆ ಅಥವಾ ನುಂಕೆ ಎಂಬ ಹೆಸರು ಲುಂಕಪ್ಪ ಎಂಬ ರಾಕ್ಷಸನಿಂದ ಬಂದಿದೆ ಎನ್ನಲಾಗಿದೆ. ನುಂಕಪ್ಪ ಎಂಬ ಸ್ಥಳೀಯ ವ್ಯಕ್ತಿ ಇಲ್ಲವೆ ದೇವರ ಹೆಸರಿನಿಂದಲೂ ಬಂದಿರುವ ಸಾಧ್ಯತೆ ಇದೆ.[೨೬] ಪರಶಿವನ ಅಪ್ಪಣೆಯನ್ನು ಪಾಲಿಸಲು ಭೂಲೋಕಕ್ಕೆ ಬಂದು ಭಕ್ತರ ಕಷ್ಟಕೋಟಲೆಗಳನ್ನೆಲ್ಲ ತೀರಿಸಿದ ಶ್ರೀ ಕಾಲಭೈರವೇಶ್ವರ, ಸುಂಕವ್ವ ಮತ್ತು ಮಲಿಯವ್ವ ಎಂಬ ತನ್ನ ಇಬ್ಬರು ರಾಕ್ಷಸ ಭಕ್ತರ ಮನೋಭಿಲಾಕ್ಷೆಯಂತೆ ನುಂಕೆಮಲೆ ಸಿದ್ಧೇಶ್ವರ ಎಂಬ ಹೆಸರಿಟ್ಟುಕೊಂಡು ನೆಲೆಸಿದ ಕ್ಷೇತ್ರವೇ ಸುಂಕಪ್ಪನ ಬೆಟ್ಟ ಅಥವಾ ನುಂಕಪ್ಪನ ಬೆಟ್ಟ ಎಂದು ಪುರಾಣ ಹೇಳುತ್ತದೆ.[೨೭]

ಲುಂಕೆಮಲೆಯು ಕಡಿದಾದ ಪ್ರಪಾತಗಳಿಂದಲೂ, ಪ್ರಕೃತಿ ನಿರ್ಮಿತ ಗುಹೆಗಳಿಂದಲೂ ಸದಾ ನೀರಿರುವ ತಾಣಗಳಿಂದ ಸಹಜವಾಗಿಯೇ ಪ್ರಾಚೀನ ಮಾನವನ ವಾಸಸ್ಥಾನವಾಗಿದ್ದಿತು. ಈ ಪ್ರದೇಶ ಪ್ರಾಗಿತಿಹಾಸ ಕಾಲದಿಂದ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಮೈಗೂಡಿಸಿಕೊಂಡಿದೆ. ಇಲ್ಲಿ ಇತ್ತೀಚೆಗೆ

ನವಶಿಲಾಯುಗದ ಅವಶೇಷಗಳು ಕಂಡುಬಂದಿವೆ.[೨೯] ಈ ಬೆಟ್ಟದಲ್ಲಿರುವ ಶಾಸನಗಳು ಭೈರವನನ್ನು ನುಂಕೇಶ್ವರನೆಂದು ಕದಂಬ ವಂಶೀಯನಾದ ರಾಜನೊಬ್ಬನು ೧೦ನೆಯ ಶತಮಾನದಲ್ಲಿ ಪ್ರತಿಷ್ಠಾಪಿಸಿದನೆಂದು ಹೇಳುತ್ತವೆ.[೩೦] ಈ ಅವಧಿಯಲ್ಲಿ ಲುಂಕೆ ಹೆಸರಿನ ಕೋಟೆಯನ್ನು ಇವರು ಕಟ್ಟಿದ್ದರು. ಇದು ಕಾಲಾನಂತರ ಲುಂಕೆಕೋಟೆಯೆಂದೇ ಪ್ರಸಿದ್ಧಿಯಾಗಿದೆ.[೩೧] ಈ ಶಾಸನದಲ್ಲಿ ಉಕ್ತವಾಗಿರುವ ಅಜವರ್ಮ ಮತ್ತು ಬೆಂಚರಸದೇವರು ಕದಂಬ ಮನೆತನದವರು ಇವರು ಚಾಲುಕ್ಯ ಜಯಸಿಂಹನ ಅಧೀನವಾಗಿ ಲುಂಕೆಮಲೆ ಕೇಂದ್ರವಾಗಿಟ್ಟುಕೊಂಡು ಮೊಳಕಾಲ್ಮೂರು ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದಾರೆ.[೩೨] ನಂತರ ಲುಂಕೆ ಕೋಟೆ ಸುತ್ತಮುತ್ತಲಿನ ಪ್ರದೇಶ ನಿಡುಗಲ್ಲು ಚೋಳ ಮಹಾರಾಜರಿಗೆ ಸೇರಿತ್ತು.[೩೩] ತರುವಾಯ ಈ ಪ್ರದೇಶ ನೊಳಂಬವಾಡಿ ೨೩೦೦ ಸೀಮೆಯಲ್ಲಿ ಸಮಾವೇಶಗೊಂಡಿತು. ಕಲ್ಯಾಣ ಚಾಲುಕ್ಯ ೬ನೇ ವಿಕ್ರಮಾದಿತ್ಯನ ಸಹೋದರ ಜಯಸಿಂಹ, ನಂತರ ಹೊಯ್ಸಳರು, ವಿಜಯನಗರದ ದೊರೆಗಳ ಆಳ್ವಿಕೆಗೆ ಒಳಪಟ್ಟಿದ್ದ ಈ ಕ್ಷೇತ್ರ ೧೫ನೆಯ ಶತಮಾನದಲ್ಲಿ ರಾಯದುರ್ಗದವರ ವಶವಾಯಿತು. ಚಿತ್ರದುರ್ಗ ಪಾಳೆಯಗಾರರು ಮೊಳಕಾಲ್ಮೂರು ಪ್ರದೇಶವನ್ನು ಗೆದ್ದುಕೊಂಡ ಮೇಲೆ ಈ ಪ್ರದೇಶ ಅವರ ಆಳ್ವಿಕೆಗೆ ಒಳಪಟ್ಟಿತು.[೩೪]

ಲುಂಕೆ ಕೋಟೆಯನ್ನು ಕಂಬದಗುಡ್ಡ ಅಥವಾ ದೇವರ ಗುಡ್ಡ ಎಂದು ಕರೆಯುವ ಬೆಟ್ಟದ ಮೇಲೆ ಕಟ್ಟಲಾಗಿದೆ. ಇದು ಗಿರಿದುರ್ಗವಾಗಿದ್ದು ತುಂಬಾ ಎತ್ತರದ ಹೆಬ್ಬಂಡೆಯ ಮೇಲೆ ಇದೆ. ಬೆಟ್ಟವನ್ನು ಬಳಸಿಕೊಂಡು ಒಂದು ಸುತ್ತಿನ ಕೋಟೆಯನ್ನು ಕಟ್ಟಿದ್ದಾರೆ. ಕೋಟೆಯಲ್ಲಿ ೧೫ ಬುರುಜುಗಳನ್ನೊಳಗೊಂಡಂತೆ ಪೂರ್ವದಲ್ಲಿ ೨ ಹಾಗೂ ಉತ್ತರದಲ್ಲಿ ೨ ಬಾಗಿಲುಗಳಿವೆ. ಮಧ್ಯಮ ಗಾತ್ರದ ಬಿಳಿ ಗ್ರಾನೈಟ್ ಕಲ್ಲುಗಳನ್ನು ಸೀಳಿ ತುಂಡು ತುಂಡು ಕಲ್ಲುಗಳಿಂದ ಗೋಡೆ ಕಟ್ಟಿದ್ದಾರೆ. ಕಲ್ಲುಗಳನ್ನು ನಯಗೊಳಿಸದೆ, ಮಧ್ಯೆ ಮಧ್ಯೆ ಚಕ್ಕೆ ಕಲ್ಲುಗಳನ್ನಿಟ್ಟು ಗೋಡೆಗೆ ಭದ್ರತೆಯನ್ನು ಒದಗಿಸಿದ್ದಾರೆ. ಕೋಟೆ ಗೋಡೆಯು ೩ ಅಡಿ ಅಗಲವಾಗಿದ್ದು, ೬ ರಿಂದ ೧೦ ಅಡಿ ಎತ್ತರದವರೆಗೆ ಇದೆ. ಎಲ್ಲಿಯೂ ಕೋಟೆಗೆ ಬಂದೂಕು ರಂಧ್ರಗಳಿರುವುದಿಲ್ಲ. ಕಡಿದಾದ ಬಂಡೆಯ ಮೇಲೆ ಕೋಟೆಯನ್ನು ನಿರ್ಮಿಸಿರುವುದರಿಂದ ಕಂದಕದ ಅವಶ್ಯಕತೆ ಕಂಡುಬಂದಿಲ್ಲ. ಕಡಿದಾದ ಬಂಡೆಯೇ ಕಂದಕದ ಪಾತ್ರವನ್ನು ನಿರ್ವಹಿಸಿದೆ.

ಕೆಳದುರ್ಗದಿಂದ ಮೇಲುದುರ್ಗಕ್ಕೆ ಸುಮಾರು ೨೦೦೦ ಅಡಿ ಅಂತರವಿದೆ. ಮೇಲುದುರ್ಗದಲ್ಲಿ ಅಲ್ಲಲ್ಲಿ ವಸತಿಪ್ರದೇಶಗಳಿದ್ದ ಕುರುಹುಗಳು ಮಾತ್ರ ಉಳಿದುಕೊಂಡು ಬಂದಿವೆ. ಕೆಲವು ಬುರುಜುಗಳು ನಾಶವಾಗದೆ ಉಳಿದುಕೊಂಡು ಬಂದಿವೆ. ಪೂರ್ವದಲ್ಲಿ ಸ್ವಾಭಾವಿಕ ದ್ವಾರದ ಹಿಂಭಾಗ ನೀರಿನ ದೊಣೆಯಿದೆ. ದೊಣೆಯ ಮೂರುಕಡೆ ಕೋಟೆಯ ಸಾಲಿದೆ. ಕೋಟೆಯ ಮಧ್ಯಭಾಗದಲ್ಲಿ ನೈಸರ್ಗಿಕ

ಬಂಡೆಗಳನ್ನು ಹೊಂದಿಕೊಂಡಂತೆ ತ್ರಿಕೋನ ಸ್ಥಳದಲ್ಲಿ ಮೂರು ಬುರುಜುಗಳಿವೆ. ಈ ಬುರುಜುಗಳ ಮಧ್ಯೆ ಪೂರ್ವದಿಂದ ಪ್ರವೇಶಮಾಡುವಂತೆ ಬಾಗಿಲುಗಳಿವೆ. ಮಧ್ಯೆ ಕೋಟೆಯ ಬಾಗಿಲ ಹತ್ತಿರದ ಬೆಟ್ಟಕ್ಕೆ ಹೊಂದಿಕೊಂಡಂತೆ ೧೦ ಅಡಿ ಅಗಲದ ವೃತ್ತಾಕಾರದ ಬುರುಜು ಇದೆ. ಈ ಬುರುಜಿನ ಮುಂಭಾಗ ೧೦ ಅಡಿ ಎತ್ತರದ ದೀಪಸ್ತಂಭವಿದ್ದು, ಈ ಹಿಂದೆ ಇದ್ದ ಬಾರಿ ಎತ್ತರದ ಸ್ಥಂಬವು ಶಿಥಿಲಗೊಂಡಿದ್ದರಿಂದ ಇತ್ತೀಚಿಗೆ ಅದೇ ಸ್ಥಳದಲ್ಲಿ ಸಂಪ್ರದಾಯದಂತೆ ಈ ಚಿಕ್ಕ ದೀಪಸ್ತಂಭವನ್ನು ನಿಲ್ಲಿಸಿರುವುದು ಕಂಡುಬರುತ್ತದೆ. ಮೊಳಕಾಲ್ಮೂರು ಬೆಟ್ಟದ ಮೇಲುದುರ್ಗದಲ್ಲಿ ಹಿಂದೆ ವಾಸವಾಗಿದ್ದ ಜನರು ಹಬ್ಬಹರಿದಿನಗಳಲ್ಲಿ ಉಪವಾಸವಿದ್ದು ಈ ಸ್ತಂಭದ ಮೇಲೆ ಉರಿಯುತ್ತಿರುವ ದೀಪವನ್ನು ನೋಡಿ ಉಪವಾಸವನ್ನು ಬಿಡುತ್ತಿದ್ದರಂತೆ. ಈಗಲೂ ಈ ಸಂಪ್ರದಾಯವನ್ನು ಭಕ್ತರು ಮುಂದುವರಿಸಿದ್ದಾರೆ. ಈ ದೀಪಸ್ತಂಭದ ಬುರುಜಿನಿಂದ ಸುತ್ತಲಿನ ಪ್ರದೇಶವನ್ನು ವೀಕ್ಷಿಸಬಹುದು. ಬೆಟ್ಟದ ಉತ್ತರ ಭಾಗಕ್ಕೆ ಸುಮಾರು ಅರ್ಧ ಮೈಲು ಎತ್ತರವು ಒಂದು ಮೈಲಿ ಉದ್ದವೂ ಇರುವ ದೊಡ್ಡ ಕರಿಬಂಡೆಯಿದೆ. ಇದರ ಮಧ್ಯ ಭಾಗದಲ್ಲಿ ಕುದುರೆ ಹೆಜ್ಜೆಗಳು ಇವೆಯೆಂದು ನಂಬಲಾಗಿದೆ. ಆದರೆ ಅಲ್ಲಿಗೆ ಹೋಗುವುದು ತುಂಬಾ ಅಪಾಯಕಾರಿಯಾಗಿದೆ. ಈ ಕುದುರೆ ಹೆಜ್ಜೆಯ ಬಗ್ಗೆ ಐತಿಹ್ಯವಿದೆ. ಕುದುರೆ ಹೆಜ್ಜೆಯ ಮೇಲ್ಭಾಗದಲ್ಲಿ ಪಡ್ಡೆಹನುಮಪ್ಪ ಎಂದು ಕರೆಯುವ ಆಂಜನೇಯನ ಚಿತ್ರವೊಂದಿದೆ. ಬೆಟ್ಟದ ಪಶ್ಚಿಮ ತಪ್ಪಲಿನಲ್ಲಿ ಇರುವ ಪ್ರದೇಶವನ್ನು ಕೋತಲಗೊಂದಿ ಎಂದು ಕರೆಯುತ್ತಾರೆ. ಇದರ ಪೂರ್ವಕ್ಕೆ ಸ್ವಲ್ಪ ದೂರದಲ್ಲಿ ಒಬ್ಬ ಮನುಷ್ಯ ತೂರಿಹೋಗುವಷ್ಟು ಜಾಗದಲ್ಲಿ ಒನಕೆಕಿಂಡಿ ಇದೆ. ಎರಡು ಸ್ವಾಭಾವಿಕ ಬಂಡೆಗಳ ಮಧ್ಯೆ ಇರುವ ದಾರಿಗೆ ಒನಕೆ ಬಾಗಿಲು ಎಂದು ಹೆಸರಿದೆ. ಇಲ್ಲಿಂದ ಮುಂದೆ ಬಯಲಿನಲ್ಲಿ ವಿಶಾಲವಾದ ಕದಂಬರ ಶಾಸನಗಳು, ಮಲ್ಲಿಕಾರ್ಜುನ ದೇವಾಲಯ, ರಥಬೀದಿ, ಪುಷ್ಕರಣಿ ಮುಂತಾದ ಸ್ಮಾರಕಗಳಿವೆ. ಪುಷ್ಕರಣಿಯು ೧೦೧.೫ ಅಡಿ ಉದ್ದ, ೯೪.೫ ಅಗಲವಿದೆ. ಮೆಟ್ಟಿಲುಗಳ ಉದ್ದ ೪೧ ಅಡಿ ಅಗಲವಿದ್ದು, ೨೧ ಅಡಿ ಉದ್ದವಾಗಿದೆ. ತುಂಬಾ ವಿಸ್ತಾರವಾದ ಈ ಪುಷ್ಕರಣಿಗೆ ನಾಲ್ಕೂ ಕಡೆಗೂ ಮೆಟ್ಟಿಲುಗಳಿವೆ. ಈ ಪುಷ್ಕರಣಿಯ ಪಕ್ಕದಲ್ಲಿರುವ ಬೇವಿನಮರದ ಕಟ್ಟೆಗೆ ಮದಲಿಂಗ ಎಂದು ಕರೆಯುವರು. ಈ ಭಾಗದಲ್ಲಿ ಲುಂಕೆಭೈರವ ದೇವಾಲಯವಿದೆ. ಪ್ರದಕ್ಷಿಣಾ ಪಥವನ್ನು ಹೊಂದಿರುವ ಈ ದೇವಾಲಯದ ಮುಂದೆ ೨ ಕಲ್ಲಿನ ಧ್ವಜಸ್ತಂಭಗಳಿವೆ. ಬಲಭಾಗದ ಸ್ತಂಭ ೨೪ ಅಡಿ, ಎಡಭಾಗದ ಸ್ತಂಭ ೨೫ ಅಡಿ ಎತ್ತರವಾಗಿದೆ. ದೇವಾಲಯದಲ್ಲಿ ಉತ್ಸವಮೂರ್ತಿಯ ಬಣ್ಣದಕುದುರೆ ಇರುವುದು. ದೇವಾಲಯದ ಆಗ್ನೇಯ ಭಾಗಕ್ಕೆ ಕಾಲಭೈರವ, ಪೂರ್ವದಿಕ್ಕಿಗೆ ಕೈಲಾಸವಾಸಿಗಳಾದ ಮಹಾಂತ ಸ್ವಾಮಿಯ ಸಮಾಧಿಗಳು ಇವುಗಳ ಪೂರ್ವಕ್ಕೆ ಗೋಸಾಲೆ ಮುಂತಾದ ಸ್ಮಾರಕಗಳಿವೆ.

ದೇವಾಲಯದ ಎಡಗಡೆ ಸ್ವಲ್ಪ ದೂರದಲ್ಲಿ ಯಲ್ಲಮ್ಮ, ಬಲ ಮಗ್ಗುಲದಲ್ಲಿ ಹನುಮಪ್ಪನ ವಿಗ್ರಹಗಳಿವೆ. ಪರ್ವತದ ತಪ್ಪಲಿನಲ್ಲಿ ತುಪ್ಪದಮ್ಮ ದೇವಾಲಯ, ಮೇಲಿನ ಈರ್‍ನು, ಕೆಳಗಿನ ಈರ್‍ನು ಎಂಬ ದೇವಾಲಯಗಳಿವೆ.

೪.೩ ಚಿತ್ರದುರ್ಗದ ಕೋಟೆ

ಚಿತ್ರದುರ್ಗ ಕರ್ನಾಟಕದ ಮಧ್ಯಭಾಗದಲ್ಲಿದೆ. ರಾಷ್ಟ್ರೀಯ ಹೆದ್ದಾರಿ ನಂ.೪ ಮತ್ತು ನಂ. ೧೩ರ ರಸ್ತೆಗಳು ಚಿತ್ರದುರ್ಗದಲ್ಲಿ ಹಾದು ಹೋಗುವುದರಿಂದ, ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಿಂದ ಚಿತ್ರದುರ್ಗವು ಸಂಪರ್ಕವನ್ನು ಕಲ್ಪಿಸಿಕೊಂಡಿದೆ. ಭೂನಕ್ಷೆಯಲ್ಲಿ ಉತ್ತರ ಅಕ್ಷಾಂಶ ೧೪°೧೫ ಮತ್ತು ೭೪°೨೪ ಪೂರ್ವರೇಖಾಂಶದಲ್ಲಿದ್ದು ಸಮುದ್ರಮಟ್ಟದಿಂದ ೨೫೬೦ ಅಡಿ ಎತ್ತರದಲ್ಲಿದೆ. ಚಿತ್ರದುರ್ಗ ಬೆಟ್ಟದ ಸುತ್ತಲೂ ಹಬ್ಬಿರುವ ಗುಡ್ಡದ ಸಾಲುಗಳು ಅಲ್ಲಲ್ಲಿ ಮೇಲೆದ್ದಿರುವ ಶಿಖರಗಳು, ಚಿತ್ರದುರ್ಗ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿ ಕೋಟೆಯಂತೆ ರಕ್ಷಿಸಿವೆ. ಇಲ್ಲಿನ ಬೆಟ್ಟಗುಡ್ಡಗಳಲ್ಲಿನ ಗೋಚರ ಹಾಗೂ ಅಗೋಚರ ಗುಹೆಗಳು, ಹಳ್ಳ-ಕೊಳ್ಳಗಳು ಸಹಜವಾಗಿಯೇ ಪ್ರಾಚೀನ ಮಾನವನು ಇಲ್ಲಿ ನೆಲೆಸಲು ಸಹಕಾರಿಯಾಗಿದ್ದವೆಂದು ಹೇಳಬಹುದು. ಚಿತ್ರದುರ್ಗ ಬೆಟ್ಟದಲ್ಲಿರುವ ನೂರಾರು ಗುಹೆಗಳು, ಗುಹೆಯಲ್ಲಿನ ವರ್ಣಚಿತ್ರಗಳು, ಬೆಟ್ಟದ ಪಶ್ಚಿಮದ ತಪ್ಪಲಿನಲ್ಲಿರುವ ಚಂದ್ರವಳ್ಳಿ ಪ್ರದೇಶಗಳಲ್ಲಿನ ಪ್ರಾಕ್ಚಾರಿತ್ರಿಕ ಅವಶೇಷಗಳು ಪ್ರಾಚೀನ ಮಾನವನ ನೆಲೆಯನ್ನು ದೃಢಪಡಿಸುತ್ತವೆ. ಚಂದ್ರವಳ್ಳಿ ಭೂಶೋಧನೆಯಲ್ಲಿ ಕಂಡುಬಂದ ತುಂಡುಗೋಡೆಗಳು, ದಪ್ಪನಾದ ಇಟ್ಟಿಗೆಗಳು ಇಲ್ಲಿ ನಿರ್ಮಿತವಾಗಿದ್ದ ಕೋಟೆಗೆ ಸೇರಿದವೆಂದು ಊಹಿಸಲಾಗಿದೆ.[೬೫] ಸಾವಿರಾರು ವರ್ಷಗಳ ಹಿಂದೆ ಮಾನವನ ವಸತಿಯಾಗಿದ್ದ ಈ ಜಾಗವನ್ನು ಕ್ರಮೇಣ ದುರ್ಗಮ ಪ್ರದೇಶವನ್ನಾಗಿ ಮಾರ್ಪಡಿಸಿಕೊಂಡರೆಂದು ಹೇಳಬಹುದು. ಏಕೆಂದರೆ ಚಂದ್ರವಳ್ಳಿ ಆ ಕಾಲಕ್ಕಾಗಲೇ ಅತ್ಯಂತ ದೊಡ್ಡ ಪಟ್ಟಣವಾಗಿ ಬೆಳೆದಿತ್ತೆಂಬುದು ಇಲ್ಲಿ ದೊರಕಿರುವ ನಾಣ್ಯಗಳು ಮತ್ತಿತರ ಅವಶೇಷಗಳಿಂದ ತಿಳಿದುಬರುವ ವಿಚಾರವಾಗಿದೆ. ಸಂಪತ್ಭರಿತವಾದ ಈ ಪ್ರದೇಶಕ್ಕೆ ಸಹಜವಾಗಿಯೇ ರಕ್ಷಣೆಯ ಅವಶ್ಯಕತೆ ಇತ್ತೆನ್ನಬಹುದು. ಕಾಲಕ್ರಮೇಣ ನಾಗರೀಕತೆ ಬೆಳೆದಂತೆ ರಕ್ಷಣಾವಾಸ್ತುಶಿಲ್ಪವು ವಿಸ್ತಾರವಾಗುತ್ತಾ ಬಂದು ಐತಿಹಾಸಿಕ ಕಾಲದಲ್ಲಿ ಇಲ್ಲಿ ನಿರ್ಮಾಣಗೊಂಡಿರುವ ಅಭೇದ್ಯವಾದ ಗಿರಿದುರ್ಗಕ್ಕೆ ಕಾರಣವಾಯಿತೆನ್ನಬಹುದು.

ಚಿತ್ರದುರ್ಗದ ಬೆಟ್ಟ, ಪರಿಸರವು ಕಾಲಘಟ್ಟದಲ್ಲಿ ತನ್ನ ಹೆಸರನ್ನು ಅನೇಕ ಸಾರಿ ಬದಲಾಯಿಸಿಕೊಂಡಿರುವುದನ್ನು ಗಮನಿಸಬಹುದು. ಪುರಾಣ ಕಾಲದಲ್ಲಿ ಚಿನ್ಮೂಲಾದ್ರಿ, ಹಿಡಂಬಿ ಪಟ್ಟಣ

ಎಂದೆನಿಸಿಕೊಂಡಿದ್ದ ಈ ಸ್ಥಳವು ಕ್ರಿ.ಶ.೧೧ನೆಯ ಶತಮಾನದಲ್ಲಿ ಆಳ್ವಿಕೆ ನಡೆಸಿದ ಚಾಲುಕ್ಯರ ಕಾಲದಲ್ಲಿ ಸೂಳ್ಗಲ್ಲು ಎಂದೆನಿಸಿಕೊಂಡಿತು. ಹೊಯ್ಸಳರ ಅವಧಿಯಲ್ಲಿ ಬೆಮ್ಮತ್ತನಕಲ್ಲು, ಬೆಮ್ಮತ್ತನೂರು, ಬ್ರಹ್ಮಪುರಿಗೇರಿ, ಪೆರುಮಾಳೇಪುರ ಇತ್ಯಾದಿ ಹೆಸರುಗಳಿಂದ ಕರೆಸಿಕೊಂಡಿತು. ೧೮ನೆಯ ಶತಮಾನದಲ್ಲಿ ಚಿತ್ರಕಲ್ಲು ದುರ್ಗವಾಗಿ ೧೭೭೯ರಲ್ಲಿ ಹೈದರಾಲಿ ಈ ಕೋಟೆಯನ್ನು ಆಕ್ರಮಿಸಿಕೊಂಡ ನಂತರ ಪರೂಖ್, ಯಾಬ್ ಹಿಸ್ಸಾರ್(ಪರ್‍ರುಕಾಬಾದ್) ಎಂಬ ಹೆಸರು ಪಡೆಯಿತು.[೩೬] ಶಾಸನಗಳು ಚಿಂಚನಗಿರಿದುರ್ಗ, ಶಿಂಗನಗಿರಿದುರ್ಗ, ಚಿಂತಕಲ್‌ದುರ್ಗ ಮುಂತಾದ ಹೆಸರುಗಳಿಂದ ಉಲ್ಲೇಖಿಸಿವೆ.[೩೭] ಈಗ ಕರೆಯುತ್ತಿರುವ ಚಿತ್ರದುರ್ಗ ಎಂಬ ಹೆಸರು ಹೇಗೆ ಉಗಮಗೊಂಡಿತೆಂಬ ವಿಚಾರ ಚರ್ಚೆಯಲ್ಲಿರುವಾಗ ಡಾ. ಚಿದಾನಂದಮೂರ್ತಿಯವರು ಉತ್ತರ ದೊರಕಿಸಿ ಕೊಟ್ಟಿದ್ದಾರೆ.[೩೮] ಜನಪದರು ಸಿತ್ರಕಲ್ಲುದುರುಗ, ಚಿತ್ರಕಲ್ಲು, ಸಿಂತರಕಲ್ಲು ಮುಂತಾದ ಹೆಸರುಗಳಿಂದ ಕರೆಯುತ್ತಾರೆ.[೩೯] ಇತ್ತೀಚೆಗೆ ಚಿತ್ರದುರ್ಗ ಪಾಳೆಯಗಾರರ ಇತಿಹಾಸದ ಗತವೈಭವವನ್ನು ಸಾರುವ ಗಂಡು ಮೆಟ್ಟಿನ ನಾಡು ಚಿತ್ರದುರ್ಗ ಎಂಬ ಹೆಸರು ಬಹುತೇಕ ಭಾಷಣಕಾರರಲ್ಲಿ ನೆಲೆನಿಂತಿದೆ.

ಚಿತ್ರದುರ್ಗದಲ್ಲಿ ಕೋಟೆಯ ನಿರ್ಮಾಣ ಕ್ರಿ.ಶ.೩-೪ನೇ ಶತಮಾನದಲ್ಲಿ ಆಳ್ವಿಕೆ ಮಾಡಿದ ಶಾತವಾಹನರ ಕಾಲದಿಂದಲೇ ಪ್ರಾರಂಭವಾಯಿತೆನ್ನಬಹುದು. ಅವರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿದ್ದ ಚಂದ್ರವಳ್ಳಿಯ ಭೂಶೋಧನೆಯಲ್ಲಿ ದೊರೆತ ಪುರಾತತ್ವ ಅವಶೇಷಗಳು ಇಂತಹ ಊಹೆಗೆ ಅವಕಾಶ ಕಲ್ಪಿಸಿವೆ.[೪೦] ಶಾತವಾಹನರು ತಮ್ಮ ರಕ್ಷಣಾ ವಾಸ್ತುಶಿಲ್ಪದಲ್ಲಿ ನಿರ್ದಿಷ್ಟಪಡಿಸಿದ ಆಕಾರದ ಇಟ್ಟಿಗೆಗಳು(೫ ಸೆಂ.ಮೀ. ೩೦ ಸೆಂ.ಮೀ. ೧೦ ಸೆಂ.ಮೀ.) ಕೋಟೆ ನಿರ್ಮಾಣದ ಪರಿಕರಗಳಾದವು. ಇವರು ನಿರ್ಮಿಸಿದ ಕೋಟೆಗಳ ಸಂಪೂರ್ಣ ವಿವರಗಳು ದೊರೆಯದಿದ್ದರೂ, ಮುಂಚೂಣಿ ಪ್ರದೇಶಗಳಲ್ಲಿ ರಕ್ಷಣಾಗೋಡೆಗಳು ಇದ್ದವೆಂಬುದು ಅಲ್ಲಲ್ಲಿ ದೊರೆತ ತುಂಡು ಗೋಡೆಯ (Chunks of Fort Wall) ಸ್ತರಗಳ ಅವಶೇಷಗಳಿಂದ ನಿರ್ಣಯಿಸಬಹುದು.[೪೧] ಶಾತವಾಹನರ ತರುವಾಯ ಕದಂಬರು ಈ ಭಾಗದಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಮಯೂರಶರ್ಮನ ಚಂದ್ರವಳ್ಳಿ ಶಾಸನವು ಪ್ರಮುಖ ಆಧಾರವಾಗಿದೆ.[೪೨]

ಕದಂಬರು ನಿರ್ಮಿಸಿದ ಅನೇಕ ಕೋಟೆಗಳು ಕರ್ನಾಟಕಾದಾದ್ಯಂತ ಕಂಡುಬಂದಿವೆ. ಅರಣ್ಯದಲ್ಲಿ ದೊರೆಯುವ ಮರದದಿಮ್ಮಿಗಳು, ಮಣ್ಣಿನ ದಿಬ್ಬಗಳು, ಒಡ್ಡುಗಳು ಇವುಗಳ ಮೇಲೆ ಬೆಳೆಸಿದ ಎತ್ತರವಾದ ವೃಕ್ಷಗಳು, ಇವರ ರಕ್ಷಣಾವಸ್ತುಶಿಲ್ಪದ ಲಕ್ಷಣಗಳಾಗಿವೆ. ಕದಂಬರು ಹೆಚ್ಚಾಗಿ ಮೃದ್

ದುರ್ಗಗಳನ್ನು(ಮಣ್ಣಿನ ದುರ್ಗ) ನಿರ್ಮಿಸಿರುವುದೇ ಹೆಚ್ಚು. ಇಂತಹ ದುರ್ಗಗಳಲ್ಲಿ ಕೆಲವು ಕಾಲನ ಧಾಳಿಗೆ ಸಿಕ್ಕು ನಶಿಸಿವೆ. ಮತ್ತೆ ಕೆಲವು ಕೋಟೆಗಳಲ್ಲಿ ಕಲ್ಲನ್ನು ಬಳಸಿ ಜೀರ್ಣೋದ್ಧಾರ ಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕದಂಬರು ಚಂದ್ರವಳ್ಳಿಯಲ್ಲಿ ಇಂತಹ ಮೃದ್‌ದುರ್ಗವನ್ನು ನಿರ್ಮಿಸಿದ್ದರು ಎಂಬುದನ್ನು ತಳ್ಳಿ ಹಾಕುವಂತಿಲ್ಲ. ಕದಂಬರ ತರುವಾಯ ಕಲ್ಯಾಣಿ ಚಾಲುಕ್ಯರು ಆಳ್ವಿಕೆ ನಡೆಸಿರುವುದನ್ನು ಅವರ ಕಾಲದ ಶಾಸನಗಳು ದೃಢಪಡಿಸಿವೆ. ಚಾಲುಕ್ಯರ ಕ್ರಿ.ಶ.೧೦೭೩ರ ಶಾಸನವೊಂದು ಚಿತ್ರದುರ್ಗ ಬೆಟ್ಟದಲ್ಲಿ ಕೋಟೆ ಇದ್ದ ಬಗ್ಗೆ ಮಾಹಿತಿ ನೀಡುವ ಪ್ರಥಮ ಶಾಸನವಾಗಿದೆ.[೪೩] ಈ ಶಾಸನದಲ್ಲಿ ಉಕ್ತವಾಗಿರುವ ಕೋಟೆ ಪದದ ಹಿನ್ನೆಲೆಯಲ್ಲಿ ಕಲ್ಯಾಣಿ ಚಾಲುಕ್ಯರ ಕಾಲಕ್ಕಾಗಲೇ ವ್ಯವಸ್ಥಿತವಾದ ಕೋಟೆಯಿದ್ದು, ಈ ಹಿಂದೆಯೂ ಇಲ್ಲಿ ಕೋಟೆಯಿತ್ತೆಂದು ಊಹಿಸಲು ಅವಕಾಶವಿದೆ.

ಇವರ ನಂತರ ಹೊಯ್ಸಳರು ಚಿತ್ರದುರ್ಗ ಬೆಟ್ಟದಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಅವರ ಶಾಸನಗಳಿವೆ. ಕ್ರಿ.ಶ.೧೨೬೦ರಲ್ಲಿ ಮಹಾಪ್ರಧಾನ ಹರಿಹರದ ಸಂಧಿ ವಿಗ್ರಹಿ ಸೋಮಣ್ಣನು ಪಲ್ಗುಣೇಶ್ವರ ದೇವರ ಮುಂದಣ ಮಂಟಪವನ್ನು ಮಾಡಿಸಿದನೆಂದು ಶಾಸನವೊಂದು ತಿಳಿಸುತ್ತದೆ.[೪೪] ಮೂರನೇ ನರಸಿಂಹನ ಪ್ರಧಾನಿಯಾಗಿ ಇಲ್ಲಿ ಆಳ್ವಿಕೆ ನಡೆಸಿದ ಮಹಾಪ್ರಧಾನ ಪೆರುಮಾಳೆ ದಂಡನಾಯಕನು ಮೂರು ಶಾಸನಗಳು ಅವನ ಧಾರ್ಮಿಕ, ಸಾಮಾಜಿಕ ಕಾರ್ಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ.[೪೫] ಈತನು ಬೆಟ್ಟದ ಮೇಲೆ ತನ್ನ ಹೆಸರಿನಲ್ಲಿ ಪೆರುಮಾಳೆಪುರವನ್ನು ಸ್ಥಾಪಿಸಿದನೆಂಬ ಮುಖ್ಯ ಸಂಗತಿಯನ್ನು ಶಾಸನವೊಂದು ತಿಳಿಸುತ್ತದೆ. ಪುರ ಶಬ್ದಕ್ಕೆ ಕೋಟೆ ಎಂಬ ಅರ್ಥವಿರುವುದರಿಂದ ಬೆಟ್ಟದ ಮೇಲೆ ಹೊಯ್ಸಳರು ಕೋಟೆ-ಕೊತ್ತಲಗಳನ್ನು ತಮ್ಮ ಅವಧಿಯಲ್ಲಿ ನಿರ್ಮಾಣ ಮಾಡಿದ್ದರೆಂದು ಹೇಳಬಹುದು. ಇಲ್ಲವೆ ಈ ಮೊದಲೇ ಇದ್ದ ಕೋಟೆಯನ್ನು ಇವರು ಬಲಪಡಿಸಿ ವಿಸ್ತರಿಸಬೇಕು. ಆದರೆ ಬೆಟ್ಟದ ಮೇಲೆ ಇವರ ಅವಧಿಯಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದಾದ ರಚನೆ ಇಲ್ಲಿ ಕಂಡುಬರುವುದಿಲ್ಲ. ಸಾಮಾನ್ಯವಾಗಿ ಇವರ ತರುವಾಯ ಆಳ್ವಿಕೆ ಮಾಡಿದ ವಿಜಯನಗರದ ಅರಸರು, ಹೊಯ್ಸಳರು ನಿರ್ಮಿಸಿದ ಕೋಟೆಯ ಭಾಗವನ್ನು ಪುನರ್‌ನಿರ್ಮಾಣ ಮಾಡಿದಂತೆ ಕೆಲವು ಕಡೆ ಕಂಡುಬರುತ್ತದೆ.

ಕೋಟೆಗಳ ರಚನೆಯನ್ನು ಯುದ್ಧಕಲೆಗೆ ಅನುಗುಣವಾಗಿ ನಿರ್ಮಿಸಿರುವುದನ್ನು ವಿಜಯನಗರ ಮತ್ತು ವಿಜಯನಗರ ತರುವಾಯವೆಂದು ಹೇಳಬಹುದು. ಚಿತ್ರದುರ್ಗದಲ್ಲಿ ವಿಜಯನಗರದ ಅರಸರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿಯೂ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರು. ಇವರ ಆಡಳಿತದ ಕೇಂದ್ರಬಿಂದು ಬೆಮ್ಮತ್ತನಕಲ್ಲು ಆಗಿದ್ದಿತು.[೪೬] ಇವರು ಚಿತ್ರದುರ್ಗದ ಕೋಟೆಯನ್ನು ಮತ್ತಷ್ಟು

ಬಲಪಡಿಸಿ ವಿಸ್ತಾರಗೊಳಿಸಿದ್ದರು. ಅತ್ಯಂತ ನಯಗೊಳಿಸಿದ ಭಾರೀ ದೊಡ್ಡ ಗಾತ್ರದ ಕಲ್ಲುಗಳನ್ನು ಬಳಸಿ ಸುಂದರವಾದ ಕೋಟೆಯ ನಿರ್ಮಾಣಕ್ಕೆ ಇವರು ಸಹ ಕಾರಣರಾದರು. ಮಲ್ಲಿನಾಥ ಒಡೆಯನು ಸಂಪಿಗೆ ಸಿದ್ಧೇಶ್ವರ ದೇವರಿಗೆ ಕಲ್ಲುಪ್ಪರಿಗೆ, ಕಲ್ಲಿನ ಉಯ್ಯಾಲೆ ಮಾಡಿಸಿ ಶಿಖರ ಪ್ರತಿಷ್ಠೆ ಮಾಡಿಸಿದ ವಿವರಗಳನ್ನು ಶಾಸನವೊಂದು ತಿಳಿಸುತ್ತದೆ.[೪೭] ಈ ಶಾಸನದಲ್ಲಿ ಮಲ್ಲಿನಾಥ ಒಡೆಯನಿಗೆ ನಡುಗೋಂಟೆ ಮಲ್ಲ ಎಂಬ ಬಿರುದಿರುವುದು ಕಂಡುಬರುವುದಲ್ಲದೆ, ಚಿತ್ರದುರ್ಗದ ಬೆಟ್ಟ ಮೇಲಿನ ಕೋಟೆಯ ವರ್ಣನೆ ತಿಳಿದುಬರುತ್ತದೆ. ಅಗಳು, ಅಳುವೇರಿ, ಬತೇರಿ, ಕೊತ್ತಲ, ಒಡ್ಡಂಗಳು, ಆ ಬಾವುಟದ ದಿಣ್ಣೆಗಳು ತುಂಬಿ ತುಳುಕುತ್ತಿದ್ದವು. ಅಂತಹ ಕೋಟೆಯನ್ನು ಏನೆಂದು ವರ್ಣಿಸಲಿ, ಸ್ವಸೇನೆಗೂ, ಶತ್ರುಸೇನೆಗೂ ವಜ್ರಕೋಟೆಯಂತೆ ತೋರುವುದು ಎಂದು ಕೋಟೆಯನ್ನು ಚಿತ್ರಿಸಲಾಗಿದೆ.[೪೮] ವಿಜಯನಗರ ಅರಸರ ತರುವಾಯ ಚಿತ್ರದುರ್ಗ ಪಾಳೆಯಗಾರರು ಚಿತ್ರದುರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರ ಅವಧಿಯಲ್ಲಿ ಚಿತ್ರದುರ್ಗವು ಮೊದಲಿಗಿಂತಲೂ ಹೆಚ್ಚು ವಿಸ್ತಾರಗೊಂಡು ಏಳು ಸುತ್ತಿನ ಕೋಟೆ ಎಂಬ ಖ್ಯಾತಿಗೆ ಪಾತ್ರವಾಯಿತು. ಇವರು ನಿರ್ಮಿಸಿದ ಕೋಟೆಯು ಸಿಡಿಲಿಗೂ, ಮಳೆಗೂ ಜಗ್ಗದ ಉಕ್ಕಿನ ಕೋಟೆ ಎಂಬ ಹೆಸರು ಪಡೆಯಿತು. ಭಾರತದಲ್ಲಿ ಅಭೇದ್ಯ ಗಿರಿದುರ್ಗಗಳ ಸಾಲಿಗೆ ಈ ಕೋಟೆಯು ಸರಿಸಮಾನವಾಗಿ ನಿಲ್ಲಲು ಪಾಳೆಯಗಾರರು ಕಾರಣರಾದರು. ಪಾಳೆಯಗಾರರ ಪತನಾ ನಂತರ ಇಲ್ಲಿನ ಇತಿಹಾಸ ಮುಂದುವರೆಯಿತು. ಹೈದರಾಲಿ, ಟಿಪ್ಪು ಮತ್ತು ಬ್ರಿಟೀಷರು ಇಲ್ಲಿನ ಕೋಟೆಯನ್ನು ಮತ್ತಷ್ಟು ಬಲಪಡಿಸಿದರು. ಮೈಸೂರು ಒಡೆಯರ ನಂತರ ಕೋಟೆಯು ಯಾವುದೇ ಅಭ್ಯುದಯ ಕಾಣದೆ ಶಿಥಿಲವಾಗುತ್ತಾ ಹೋಯಿತು.

೪.೩.೧ ಕೋಟೆಯ ರಚನೆ

ಭರತಖಂಡದಲ್ಲಿ ವ್ಯವಸ್ಥಿತವಾಗಿ ನಿರ್ಮಾಣಗೊಂಡ ಕೋಟೆಗಳಲ್ಲಿ ಚಿತ್ರದುರ್ಗ ಕೋಟೆಯೂ ಒಂದು. ಶಾಸನೋಕ್ತವಾಗಿ ಇಲ್ಲಿ ೧೧ನೇ ಶತಮಾನದಲ್ಲಿ ಕೋಟೆ ಇದ್ದಿತಾದರೂ ಬೇರೆ ಬೇರೆ ಕಾಲಾವಧಿಯಲ್ಲಿ ಅಭಿವೃದ್ಧಿಹೊಂದಿ ವಿಸ್ತಾರಗೊಂಡಿದೆ. ಬೆಟ್ಟದಲ್ಲಿರುವ ಹೆಚ್ಚು ಭಾಗ ಚಿತ್ರದುರ್ಗ ಪಾಳೆಯಗಾರ ಅವಧಿಯಲ್ಲಿ ನಿರ್ಮಾಣಗೊಂಡಿದೆ. ಈ ಕೋಟೆ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿವಿಧ ರೀತಿಯ ಚಿತ್ರಣ ನಮಗೆ ದೊರೆಯುತ್ತದೆ. ಪ್ರಾರಂಭದ ಹಂತದಲ್ಲಿ ನಿರ್ಮಾಣಗೊಂಡ ಕೋಟೆಯ ಭಾಗಗಳು ಕೆಲವು ಕಡೆ ಇನ್ನೂ ಉಳಿದುಕೊಂಡು ಬಂದಿವೆ. ಇಂತಹ ಕೋಟೆಯನ್ನು ಒನಕೆ ಕಿಂಡಿ ಮುಂಭಾಗ, ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟ, ಸಂಪಿಗೆ ಸಿದ್ಧೇಶ್ವರ ದೇವಾಲಯದ ಹಿಂಭಾಗ ಹಾಗೂ

[illegible]

ಈರಣ್ಣನ ದೇವಾಲಯ ಪ್ರದೇಶದಲ್ಲಿ ಕಾಣಬಹುದು. ಅಲ್ಲದೆ, ಬೆಟ್ಟವನ್ನು ಬಿಟ್ಟು ಹೊರಗಿನ ಕಣಿವೆ ಪ್ರದೇಶಗಳಾದ ಚೋಳಗುಡ್ಡ, ಕಿರುಬನಕಲ್ಲು, ಚಂದ್ರವಳ್ಳಿಯ ಪಕ್ಕದ ಬೋಡುಮಟ್ಟಿ ಗುಡ್ಡದಲ್ಲೂ ಇದೇ ರೀತಿ ಕಂಡುಬರುತ್ತದೆ. ಇಲ್ಲಿ ಕಂಡುಬಂದಿರುವ ಕೋಟೆ ಗೋಡೆಯು ಕೆಲವು ಕಡೆ ೨ ರಿಂದ ೬ ಅಡಿಗಳಷ್ಟು ಅಗಲವಾಗಿದ್ದು, ೩ ರಿಂದ ೧೦ ಅಡಿಗಳಷ್ಟು ಎತ್ತರವಾಗಿದೆ. ಗೋಡೆಗೆ ಮಧ್ಯಮ ಗಾತ್ರದ ಕಲ್ಲುಗಳನ್ನು ನಯವಾಗಿ ಕೆತ್ತದೆ, ಹಾಗೆಯೇ ಬಿಟ್ಟಿದ್ದಾರೆ. ಕಲ್ಲುಗಳ ಅಂಚುಗಳು ಒಂದಕ್ಕೊಂದು ಸರಿಯಾಗಿ ಹೊಂದಿಕೊಳ್ಳದೇ ಉಂಟಾದ ಸಂಧಿಗಳಲ್ಲಿ ಚಕ್ಕೆ ಕಲ್ಲುಗಳನ್ನು ಉಪಯೋಗಿಸಿದ್ದಾರೆ. ಕಲ್ಲುಗಳ ಮಧ್ಯೆ ಕೆಸರು ಮಣ್ಣನ್ನು ಸೇರಿಸಿ ಗೋಡೆ ನಿರ್ಮಿಸಿರುವುದು ಕಂಡುಬರುತ್ತದೆ. ಬೋಡುಮಟ್ಟಿ ದಿನ್ನೆ ಮತ್ತು ನೆಲ್ಲಿಕಾಯಿ ಸಿದ್ದಪ್ಪನ ದೇವಾಲಯದ ಪಕ್ಕದಲ್ಲಿರುವ ಕೋಟೆಗೋಡೆಗೆ ಕೋವಿ ಕಿಂಡಿಗಳಿವೆ. ಇವು ಇಡೀ ಬೆಟ್ಟದ ಪ್ರಾಚೀನ ಕೋಟೆಗೋಡೆಗಳಾಗಿವೆ.

ನಂತರದ ಕೋಟೆಯು ಸಂರಕ್ಷಣಾತ್ಮಕ ಸ್ವರೂಪದ್ದಾಗಿದೆ. ಇವುಗಳ ಸ್ವರೂಪ ನಿರ್ಮಾಣದಲ್ಲಿಯೇ ಬದಲಾವಣೆಯಾಗಿದೆ. ಕೋಟೆಯ ಗಾತ್ರ ಮತ್ತು ಎತ್ತರದಲ್ಲಿ ವಿಸ್ತರಿಸಿರುವುದು, ಕಲ್ಲಿನ ಗಾತ್ರ ಹೆಚ್ಚಿಸಿರುವುದು, ಕಟ್ಟುವ ವಿಧಾನ, ವಿವಿಧ ರಚನಾಶೈಲಿ ಮುಂತಾದ ಲಕ್ಷಣಗಳನ್ನು ಒಳಗೊಂಡಿದೆ. ಬೃಹದಾಕಾರದ ಕಲ್ಲುಗಳನ್ನು ಸೀಳಿ, ಅವುಗಳನ್ನು ನಯಗೊಳಿಸಿ ಒಂದರ ಮೇಲೊಂದರಂತೆ ಗಾರೆಯ ಬಳಕೆಯಿಲ್ಲದೆ ಭದ್ರವಾಗಿ ಜೋಡಿಸಲಾಗಿದೆ. ಮುಂದುವರೆದ ಕಲ್ಲು ಕೆಲಸದ ತಂತ್ರಜ್ಞಾನವನ್ನು ಯಶಸ್ವಿಯಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ. ಈ ಹಂತದ ರಚನೆಯನ್ನು ಸೈನಿಕ ವಾಸ್ತುಶಿಲ್ಪದ ಬೆಳವಣಿಗೆ ಎನ್ನಬಹುದು. ಗೋಡೆಯ ಅಗಲವನ್ನು ೨೦ರಿಂದ ೪೦ ಅಡಿಯವರೆಗೆ ವಿಸ್ತರಿಸಿ, ಎತ್ತರವನ್ನು ೩೦ ರಿಂದ ೪೦ ಅಡಿಯವರೆಗೆ ಹೆಚ್ಚಿಸಲಾಗಿದೆ. ಇಂತಹ ಗೋಡೆಗಳಿಗೆ ಹೊಂದಿಕೊಂಡಂತೆ ವಿಶಾಲವಾದ ಕೆರೆಗಳ ರೀತಿಯ ಕಂದಕಗಳನ್ನು ನಿರ್ಮಿಸಿ ಶತ್ರುಗಳಿಗೆ ಭಯವನ್ನುಂಟು ಮಾಡಿರುವುದನ್ನು ಗಮನಿಸಬಹುದು. ಕೋಟೆಯ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿದ ಕೈಪಿಡಿಗೋಡೆಯು ನಾಲ್ಕರಿಂದ ಆರು ಅಡಿ ಎತ್ತರದವರೆಗೆ ಇದೆ. ಈ ಗೋಡೆಗಳ ಹಿಂಭಾಗದಲ್ಲಿ ಸೈನಿಕರು ಯುದ್ಧ ಸಾಮಗ್ರಿಗಳನ್ನು ತರುವುದಕ್ಕೆ, ಹೋರಾಡುವುದಕ್ಕೆ ಅಟ್ಟಾಲಕವನ್ನು ರಚಿಸಿದ್ದಾರೆ. ಅಟ್ಟಾಲಕದಿಂದ ಮೇಲ್ಭಾಗದಲ್ಲಿರುವ ಗೋಡೆಯಲ್ಲಿ ವಿವಿಧ ಶೈಲಿಯ ಕೋವಿಕಿಂಡಿಗಳನ್ನು ಬಿಡಲಾಗಿದೆ. ಗೋಡೆಗೆ ಹೊಂದಿಕೊಂಡಂತೆ ಮಧ್ಯೆ ಮಧ್ಯೆ ೩೦ ರಿಂದ ೪೦ ಮೀ. ಅಂತರದಲ್ಲಿ ವೃತ್ತಾಕಾರ, ಚೌಕಾಕಾರದ ಆರು, ಎಂಟು ಮೂಲೆಗಳಲ್ಲದೆ, ವಿಶಿಷ್ಟ ಶೈಲಿಗಳಲ್ಲಿ ಬುರುಜುಗಳನ್ನು ನಿರ್ಮಿಸಿದ್ದಾರೆ. ಬುರುಜುಗಳ

[illegible]

[illegible]

[illegible]

ಮೇಲೆ ಫಿರಂಗಿಗಳನ್ನು ಇಡಲು ಅವಕಾಶ ಕಲ್ಪಿಸಲಾಗಿದೆ. ಶತ್ರುಗಳಿಗೆ ಕಾಣದಂತೆ ಅವರ ದಿಕ್ಕನ್ನು ತಪ್ಪಿಸಿ ಪೇಚಿಗೆ ಸಿಲುಕಿಸುವ ಹೆಬ್ಬಾಗಿಲುಗಳಿವೆ. ಈ ಬಾಗಿಲುಗಳಿಗೆ ವಿವಿಧ ತಂತ್ರಗಳನ್ನು ಬಳಸಲಾಗಿದೆ. ಬಾಗಿಲುಗಳ ಹಿಂದೆ ಕಟ್ಟುತ್ತಿದ್ದ ಗಂಟೆ ಮತ್ತು ಜಾಗಟೆಗಳು ಶತ್ರುಗಳು ಬಾಗಿಲನ್ನು ದಬ್ಬಿದಾಗ ಇವು ಶಬ್ದ ಮಾಡುತ್ತಿದ್ದವೆಂದು ಹಾಗೂ ಈ ಶಬ್ದದ ತರಂಗಗಳು ಮೈಮರೆತು ನಿದ್ರಿಸುತ್ತಿದ್ದ ರಕ್ಷಣಾ ದಳದವರನ್ನು ಎಚ್ಚರಿಸುತ್ತಿದ್ದವೆನ್ನಲಾಗಿದೆ. ಆನೆಗಳಿಂದ ಎಳೆಸಿ ಬಾಗಿಲುಗಳನ್ನು ಕೆಡವದಂತೆ ದ್ವಾರಬ ಾಗಿಲುಗಳ ಕಲ್ಲುಗಳನ್ನು ಕಬ್ಬಿಣದ ಸರಳುಗಳಿಂದ ಬಂಧಿಸಿ ಬೆಸಿಗೆ ಹಾಕಿರುವುದು ಕಂಡುಬರುತ್ತದೆ. ಕೊನೆ ಹಂತದ ಕೋಟೆ ರಚನೆಯಲ್ಲಿ ವಿಶೇಷವಾದ ಪಹರೆ ಗೂಡುಗಳು ಗಾರೆ ಮತ್ತು ಇಟ್ಟಿಗೆಯನ್ನು ಬಳಸಿ ಕಟ್ಟಿದ ಕಟ್ಟಡಗಳು ಕೋಟೆಯ ಮೇಲೆ ಗಾರೆಗಚ್ಚು, ಬುರುಜುಗಳ ಮೇಲೆ ಕೈಪಿಡಿ ಗೋಡೆ ಮುಂತಾದವುಗಳು ಈ ಹಂತದಲ್ಲಿ ನಿರ್ಮಾಣಗೊಂಡಿವೆ.

ಈ ಎಲ್ಲಾ ತಾಂತ್ರಿಕ ರಚನೆಗಳನ್ನೊಳಗೊಂಡ ಚಿತ್ರದುರ್ಗ ಕೋಟೆಯನ್ನು "ದಿಕ್ಕು ತಪ್ಪಿಸ್ತದ ತಪ್ಪಿಹೊಕ್ಕರ", ಎನ್ನುವಂತೆ "ನೋಡಲು ಬಲು ಸುಂದರವಾಗಿದ್ದರೂ, ಕಾದಾಡಲು ಭಯಂಕರವಾಗಿದೆ" ಎನ್ನುವ ಗಾದೆಯ ಮಾತುಗಳು ಈ ಕೋಟೆಗೆ ಅರ್ಥಪೂರ್ಣವಾಗಿವೆ. ಈ ಕೋಟೆಯಲ್ಲಿ ೧೯ ಅಗಸೆ ಬಾಗಿಲುಗಳು, ೩೮ ದಿಡ್ಡಿ ಬಾಗಿಲುಗಳು, ೩೫ ಕಳ್ಳ ಕಿಂಡಿಗಳು, ೪ ಗುಪ್ತದ್ವಾರಗಳು, ೧೦೨ ಚೋರಗಂಡಿಗಳು, ೩೬ ಹೆಬ್ಬಾಗಿಲುಗಳು, ೬೮ ದಿಡ್ಡಿ ಬಾಗಿಲುಗಳು, ೫೦೦ ಬತೇರಿಗಳು, ೫೦ಕ್ಕೂ ಹೆಚ್ಚು ಕಣಜಗಳು ಇದ್ದವೆಂದು ಹೇಳಲಾಗಿದೆ.[೪೯] ಇವುಗಳಲ್ಲಿ ಬಹುಪಾಲು ನಾಶಹೊಂದಿದ್ದು, ಮತ್ತೆ ಕೆಲವು ವಿನಾಶದ ಅಂಚನ್ನು ತಲುಪಿವೆ.

೪.೩.೨ ಕೋಟೆಯ ಐತಿಹ್ಯ

ಚಿತ್ರದುರ್ಗ ಪಾಳೆಯಗಾರರಲ್ಲಿ ಮೊದಲನೆಯ ದೊರೆಯಾದ ಮತ್ತಿ ತಿಮ್ಮಣ್ಣನಾಯಕನು ಬೆಟ್ಟದ ಮೇಲೆ ಹಳೆ ಕೋಟೆಯನ್ನು ಕೆಡವಿ ಹೊಸ ಕೋಟೆಯನ್ನು ಕಟ್ಟಲು ಆರಂಭಿಸಿದನು. ಈ ಕೋಟೆಯು ಪದೇಪದೇ ಬಿದ್ದುಹೋಗುತ್ತಿತ್ತು. ಬಿದ್ದ ಕೋಟೆಯನ್ನು ಪುನಃ ಕಟ್ಟಿಸಿದನು. ಮತ್ತೆ ಕೋಟೆ ಕುಸಿಯಲಾರಂಭಿಸಿತು. ನಾಯಕನಿಗೆ ಈ ಬಗ್ಗೆ ತುಂಬಾ ಯೋಚನೆಯಾಗಿ ಬೆಟ್ಟದ ಎಲ್ಲಾ ದೇವತೆಗಳಿಗೂ ಪೂಜೆ ಏರ್ಪಡಿಸಿದನು. ದಾಸಯ್ಯನ ಮೈಮೇಲೆ ದೇವತೆಯೊಬ್ಬಳು ಆವೇಷದಿಂದ ಬಂದಳು. ಕೂಗುತ್ತಾ, ನನ್ನನ್ನು ನೀನು ದುರ್ಲಕ್ಷಿಸುತ್ತಿದ್ದೀಯಾ! ಈ ಕೋಟೆಯು ನಿಲ್ಲದು ಎಂದು ಹೇಳಿದಳು. ಅದಕ್ಕೆ

[illegible]

[illegible]

[illegible]

ನಾಯಕನು ಅಮ್ಮಾ ನೀನು ಯಾರು? ಕೋಟೆ ನಿಲ್ಲಲು ಏನು ಮಾಡಬೇಕು. ದಯವಿಟ್ಟು ಕೃಪೆಮಾಡಿ ಹೇಳು ಎಂದು ಬೇಡಿಕೊಂಡನು. ನಾನು ಈ ದುರ್ಗದ ಅಧಿದೇವತೆ ಏಕನಾಥೇಶ್ವರಿ. ಇಲ್ಲಿನ ಗುಹೆಯಲ್ಲಿ ಅಡಗಿಕೊಂಡಿದ್ದೇನೆ. ನಾನು ತುಂಬಾ ಹಸಿದಿದ್ದೇನೆ. ನನಗೆ ಕೋಣವನ್ನು ಬಲಿಕೊಡು, ಇಲ್ಲಿ ಒಂದು ಗುಡಿಕಟ್ಟಿಸು ಆಗ ನಿನ್ನ ಆಸೆಯು ಪೂರೈಸುವುದು ಎಂದು ದೇವತೆಯು ಹೇಳಿತು. ತಿಮ್ಮಣ್ಣನಾಯಕನು ಅದರಂತೆ ನಡೆದುಕೊಂಡನು. ಆಗ ಕಟ್ಟಿದ ಕೋಟೆಯು ಬಿದ್ದುಹೋಗದಂತೆ ನಿಂತಿತೆಂಬ ಐತಿಹ್ಯವಿದೆ.[೫೦]

ಚಿತ್ರದುರ್ಗ ಕೋಟೆಯು ಅಭೇದ್ಯವಾದ ಗಿರಿದುರ್ಗವಾಗಿದೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ವಿವರಿಸಿರುವ ಗಿರಿದುರ್ಗ, ಜಲದುರ್ಗ, ವನದುರ್ಗದ ಎಲ್ಲಾ ಲಕ್ಷಣಗಳನ್ನು ಈ ದುರ್ಗವು ಒಳಗೊಂಡಿದೆಯೆಂಬುದು ವಿದ್ವಾಂಸರ ಅಭಿಮತ. ಪ್ರಕೃತಿದತ್ತವಾದ ಸಪ್ತಶಿಖರಗಳನ್ನು ಒಳಗೊಂಡಂತೆ ನಿರ್ಮಿಸಿರುವ ದುರ್ಗವು ಏಳು ಸುತ್ತಿನ ಕೋಟೆಯೆಂದು ಪ್ರಸಿದ್ಧಿಯಾಗಿದೆ. ಇಲ್ಲಿನ ಸಪ್ತ ಶಿಖರಗಳ ಗಿರಿಸ್ತೋಮಕ್ಕೆ ಚಿನ್ಮೂಲಾದ್ರಿ ಎಂಬ ಹೆಸರಿದೆ. ಸಪ್ತಶಿಖರಗಳ ಮಧ್ಯೆದಲ್ಲಿ ದ್ವೀಪದಂತೆ ಇರುವ ಬೆಟ್ಟವು ತುಪ್ಪದ ಕೊಳದ ಬೆಟ್ಟವೆಂದು ಹೆಸರಾಗಿದೆ. ಇದರ ಪೂರ್ವಭಾಗದ ಈಶಾನ್ಯ ಮೂಲೆಯಲ್ಲಿ ಹಿಡಂಬೇಶ್ವರ ಬೆಟ್ಟವು ಪೂರ್ವ ಭಾಗದಲ್ಲಿ ತೋಳಿನಂತೆ ಹರಡಿರುವ ಶಿವಾಲಯ ಬೆಟ್ಟ, ಆಗ್ನೇಯ ಭಾಗದಲ್ಲಿ ಕಹಳೆ ಬತೇರಿ ಬೆಟ್ಟ, ದಕ್ಷಿಣ ಭಾಗದಲ್ಲಿ ಲಾಲ್‌ಬತೇರಿ ಮತ್ತು ನೆಲ್ಲಿಕಾಯಿ ಸಿದ್ಧಪ್ಪನ ಬೆಟ್ಟಗಳಿವೆ. ಉತ್ತರದಲ್ಲಿ ಝಂಡಾ ಬತೇರಿ ಮತ್ತು ಭೀಮನ ಬಂಡೆ ಬತೇರಿಗಳಿವೆ. ಈ ಬಳಸು ಬೆಟ್ಟಗಳಿಗೂ ಮತ್ತು ತುಪ್ಪದ ಕೊಳದ ಬೆಟ್ಟಬುಡದ ಅಂಚಿನ ಸುತ್ತಲೂ ಇರುವ ವರ್ತುಲಾಕಾರದ ಇಕ್ಕಟ್ಟಾದ ಛಾವಣಿ ಕಂದಕವು ಮೇಲ್ದುರ್ಗವೆನಿಸಿಕೊಂಡಿದೆ. ಈ ಪ್ರದೇಶವು ಚಿತ್ರದುರ್ಗ ನಗರದ ನೆಲ ಮಟ್ಟದಿಂದ ಸುಮಾರು ೩೦೦ ಮೀ. ಎತ್ತರದಲ್ಲಿದೆ. ಈ ಬೆಟ್ಟದ ಈಶಾನ್ಯಕ್ಕೆ ಬಸವನಬುರುಜು ಬೆಟ್ಟವು ಪ್ರತ್ಯೇಕವಾಗಿ ನಿಂತುಕೊಂಡಿದೆ.

ಚಿನ್ಮೂಲಾದ್ರಿ ಗಿರಿಸ್ತೋಮವು ಅನತಿ ದೂರದಲ್ಲಿ ಇಂಗಳದಾಳು, ಕುಂಚಿಗನಾಳು, ಮದಕರಿಪುರ, ಗೋನೂರು, ಗುಡ್ಡದ ರಂಗವ್ವನಹಳ್ಳಿ, ತಮಟಕಲ್ಲು, ಶಿಬಾರ, ಕಿರುಬನಕಲ್ಲು ಮುಂತಾದ ಕಣಿವೆಗಳನ್ನು ಹೊಂದಿರುವ ಗುಡ್ಡದ ಸಾಲುಗಳು ಚಿತ್ರದುರ್ಗಕ್ಕೆ ಪ್ರಕೃತಿ ನಿರ್ಮಿತ ಕೋಟೆಗಳಂತಿವೆ. ಈ ಎಲ್ಲಾ ಕಣಿವೆ ಪ್ರದೇಶಗಳ ಮಧ್ಯೆ ಮಧ್ಯೆ ಕೋಟೆ ಕಟ್ಟಿದ್ದರೆನ್ನಲಾಗಿದ್ದು, ಈಗ ಈ ಭಾಗದಲ್ಲಿ ವಿಸ್ತಾರವಾದ ಆಧುನಿಕ ರಸ್ತೆಗಳು ಚಿತ್ರದುರ್ಗಕ್ಕೆ ಪ್ರವೇಶ ಕಲ್ಪಿಸಿರುವುದರಿಂದ ಮತ್ತು ಕಣಿವೆ ಪ್ರದೇಶಗಳಲ್ಲಿ ಗ್ರಾಮಗಳು ನಿರ್ಮಾಣಗೊಂಡಿರುವುದರಿಂದ ಕೋಟೆಯು ಕೆಲವು ಕಡೆ ಸಂಪೂರ್ಣ ಗುರುತು ಸಿಗದಂತೆ ನಾಶವಾಗಿದೆ.

ಮತ್ತೆ ಕೆಲವು ಕಡೆ ಈಗಲೂ ಈ ಕೋಟೆಯ ಅವಶೇಷಗಳನ್ನು ಕಾಣಬಹುದು. ಅದರಂತೆ ಚಿತ್ರದುರ್ಗದ ವಾಯುವ್ಯ ದಿಕ್ಕಿನಲ್ಲಿರುವ ಚೋಳಗುಡ್ಡ, ಸಣ್ಣ ಕಿರುಬನಕಲ್ಲು, ದೊಡ್ಡ ಕಿರುಬನಕಲ್ಲುಗಳ ಮಧ್ಯೆ ಮಧ್ಯೆ ಒಂದೆ ಕೋಟೆ ಕಟ್ಟಿದ ಅವಶೇಷಗಳಿವೆ. ಈ ಕೋಟೆಯು ದಕ್ಷಿಣಕ್ಕೆ ಮುಂದುವರೆದಂತೆ ಸಾಗಿ ಅಲ್ಲಿಂದ ನೈರುತ್ಯದ ಕಡೆಯವರೆಗೂ ಇದೆ. ಇಲ್ಲಿ ಪುನಃ ದಕ್ಷಿಣದಲ್ಲಿರುವ ಚಂದ್ರವಳ್ಳಿಯನ್ನು ಬಳಸಿಕೊಂಡು ಅಂಕಲಿಮಠದವರೆಗೂ ಸಾಗಿದೆ. ಚಂದ್ರವಳ್ಳಿಯ ಪಶ್ಚಿಮಕ್ಕೆ ಬೋಡುಮಟ್ಟಿ ದಿನ್ನೆಯ ಮೇಲೆ ವಿಸ್ತಾರವಾದ ೮ ಅಡಿ ಎತ್ತರ ಹಾಗೂ ೪ ಅಡಿ ಅಗಲದ ಕೋಟೆಯ ಸಾಲು ಇದೆ. ಈ ಕೋಟೆಯ ಸಾಲುಗಳಲ್ಲಿ ಕೋವಿಕಿಂಡಿಗಳಿವೆ. ಲಕ್ಷ್ಮಣ್ ತೆಲಗಾವಿಯವರು ಈ ಕೋಟೆಯನ್ನು ಕೆಂಪಯ್ಯನ ಕೋಟೆ ಎಂದು ಕರೆದಿದ್ದಾರೆ.[೫೧] ಕೆಂಪಯ್ಯನ ಕೋಟೆಯಿಂದ ಸುಮಾರು ೧ ಕಿ.ಮೀ. ದೂರದವರೆಗೂ ಕೋಟೆಯ ಸಾಲು ಮುಂದುವರೆದಿದ್ದು, ಇದು ನಂತರ ಕಂಡುಬರುವುದಿಲ್ಲ. ಇದಕ್ಕೆ ಹೊಂದಿಕೊಂಡಂತೆ ಇತ್ತೀಚೆಗೆ ಅರಣ್ಯ ಇಲಾಖೆಯವರು ತಡೆಗೋಡೆಯನ್ನು ನಿರ್ಮಿಸಿದ್ದಾರೆ.

ಚಿತ್ರದುರ್ಗದ ಏಳುಸುತ್ತಿನ ಕೋಟೆಗಳಲ್ಲಿ ಮೊದಲನೇ ಸುತ್ತು ಮೇಲುದುರ್ಗವನ್ನು ಆವರಿಸಿಕೊಂಡಿದೆ. ಈ ಒಳಸುತ್ತಿನ ಕೋಟೆಗೆ ಹಿಡಿಂಬೇಶ್ವರ, ಗರುಡಾಂಜನೇಯ, ನಾಗತಿ ಮತ್ತು ನರಸಿಂಹನ ಬಾಗಿಲುಗಳಿವೆ. ಮೇಲುದುರ್ಗದ ಅಧಿದೇವತೆಯಾದ ಏಕನಾಥೇಶ್ವರಿ ದೇವಾಲಯದ ಮುಂಭಾಗ ಕೆಳಗಿನ ತಗ್ಗು ಪ್ರದೇಶದಲ್ಲಿ ಈ ಕೋಟೆಯ ಸಾಲಿಗೆ ಮಹಾದ್ವಾರವಿದೆ. ದೇವಾಲಯದ ಮುಂದೆ ಈ ಬಾಗಿಲು ಇರುವುದರಿಂದ ಇದನ್ನು ಏಕನಾಥೇಶ್ವರಿ ಬಾಗಿಲು ಅಥವಾ ಅಜ್ಜಿಯ ಬಾಗಿಲು ಎಂದು ಕರೆಯುತ್ತಾರೆ. ಪಾಳೆಯಗಾರರ ದಾಖಲೆಗಳ ಪ್ರಕಾರ ೩ನೇ ಕಸ್ತೂರಿ ರಂಗಪ್ಪ ನಾಯಕನು ಈ ಬಾಗಿಲನ್ನು ನಿರ್ಮಿಸಿದನೆಂದು ಹೇಳಲಾಗಿದೆ. ೬x೭.೬x೧೧ ಅಡಿಗಳಲ್ಲಿ ನಿರ್ಮಾಣವಾಗಿರುವ ಬಾಗಿಲಿನ ಕೋಟೆಯ ಸುತ್ತು ೨೩ ಅಡಿ ಎತ್ತರವಿದೆ. ದೇವಾಲಯದ ಮುಂದೆ ಇರುವ ವೇದಿಕೆಯಿಂದ ಹೊರಗಿನವರೆಗೆ ಈ ದ್ವಾರವು ಗೋಚರಿಸುವುದಿಲ್ಲ. ದ್ವಾರದ ಒಳಭಾಗದಲ್ಲಿ ಎರಡೂ ಕಡೆ ಪಹರೆ ದುರ್ಗಗಳಿವೆ. ಮೇಲ್ಭಾಗದಲ್ಲಿ ರಕ್ಷಣಾವೇದಿಕೆಯಿದೆ. ಈ ದ್ವಾರದಿಂದ ಬಲಭಾಗಕ್ಕೆ ಇರುವ ಕೋಟೆಯ ಸಾಲು ಹಿಡಿಂಬೇಶ್ವರ ಬೆಟ್ಟದವರೆಗೆ ಸಾಗಿದೆ. ಅನಂತರ ಹಿಡಿಂಬೇಶ್ವರ ಮತ್ತು ಶಿವಾಲಯ ಬೆಟ್ಟಗಳನ್ನು ಕೋಟೆಯ ಸುತ್ತು ಬೆಸೆದುಕೊಂಡಿದೆ. ಶಿವಾಲಯದ ಬೆಟ್ಟದ ಶ್ರೇಣಿಗಳು ಕಹಳೆಯ ಬೆಟ್ಟದವರೆಗೂ ಚಾಚಿಕೊಂಡಿದ್ದು, ಇವೆರಡು ಬೆಟ್ಟಗಳ ಮಧ್ಯೆದಲ್ಲಿ ಕೋಟೆಯನ್ನು ನಿರ್ಮಾಣ ಮಾಡಲಾಗಿದೆ. ಮುಂದೆ ಈ ಸುತ್ತು ಲಾಲ್‌ಬತೇರಿ ಮತ್ತು ನೆಲ್ಲಿಕಾಯಿಸಿದ್ಧಪ್ಪನ ಬೆಟ್ಟದವರೆಗೆ ಸಾಗಿದೆ. ಒಳಸುತ್ತು

[illegible]

[illegible]

ಗೋಪಾಲಸ್ವಾಮಿಯ ದೇವಾಲಯವನ್ನು ಬಳಸಿ ತಣ್ಣೀರುದೋಣೆ ಬೆಟ್ಟದ ಬದಿಯಲ್ಲಿ ಸಾಗುತ್ತದೆ. ಮುಂದುವರೆದ ಈ ಕೋಟೆಯ ಸಾಲು ಭೀಮನಕಲ್ಲು ಬೆಟ್ಟವನ್ನು ಬಳಸಿಕೊಂಡು ಝುಂಡಾ ಬತೇರಿ ಬೆಟ್ಟದಿಂದ ಪುನಃ ಏಕನಾಥೇಶ್ವರಿ ಮಹಾದ್ವಾರಕ್ಕೆ ಸೇರಿಕೊಂಡಿದೆ.

ಈ ಮೊದಲನೇ ಸುತ್ತಿನ ಮಧ್ಯಭಾಗದಲ್ಲಿ ಅತ್ಯಂತ ಪ್ರಮುಖವಾದ ಸ್ಮಾರಕಗಳಿದ್ದು, ಸುತ್ತಲೂ ವಿಶೇಷವಾದ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ಏಕನಾಥೇಶ್ವರಿ ದೇವಾಲಯದ ಮುಂದೆ ಬೃಹತ್ ದ್ವೀಪಸ್ತಂಭಗಳಿವೆ. ಈ ದೀಪಸ್ತಂಭಗಳು ೪೦ ಅಡಿ ಎತ್ತರವಾಗಿದ್ದು ಸ್ತಂಭದ ಬುಡದಲ್ಲಿ ಪೂರ್ವ ದಿಕ್ಕಿಗೆ ಕನಕಮ್ಮನಾಗತಿ, ಉತ್ತರ ಪಾರ್ಶ್ವದಲ್ಲಿ ಗಡ್ಡದ ಮದಕರಿನಾಯಕನ ಉಬ್ಬುಶಿಲ್ಪಗಳಿವೆ. ಈ ಸ್ತಂಭದ ಮೇಲಿನ ದೀಪವು ಏಕನಾಥೇಶ್ವರಿ ದೇವಾಲಯಕ್ಕೆ ಕಾಣುತ್ತದೆ. ಈ ಸ್ತಂಭದ ಮೇಲ್ಮೈ ೧೯ ಮುಖಗಳಿಂದ ಕೂಡಿದ್ದು, ಇದರ ಮೇಲೇರಲು ಸಾಧ್ಯವಾಗುವಂತೆ ಒಟ್ಟು ೩೧ ಕಲ್ಲು ಹಿಡಿಕೆಗಳನ್ನು ಕೆತ್ತಿದ್ದಾರೆ. ಐತಿಹ್ಯದಲ್ಲಿ ಈ ಸ್ತಂಭ ಕಂಭದಮ್ಮ ಎಂದು ಕರೆಯಲಾಗಿದೆ. ಇದರ ಪಾರ್ಶ್ವದಲ್ಲಿ ನವಿಲು ಉಯ್ಯಾಲೆ ಕಂಬಗಳಿವೆ. ಈ ಸ್ಮಾರಕಗಳನ್ನು ಎರಡನೇ ಮದಕರಿನಾಯಕನ ಕಾಲದಲ್ಲಿ ಫ್ರಾನ್ಸ್ ದೇಶದ ತಂತ್ರಜ್ಞನಾದ ಜಾನ್ ಎಂಬುವವನು ತನ್ನ ಸಾಹಸದಿಂದ ಒಂದೇ ದಿನದಲ್ಲಿ ನಿಲ್ಲಿಸಿದನೆಂದು ಹೇಳಲಾಗಿದೆ.[೫೨] ಇವುಗಳಲ್ಲದೆ ಓಕಳಿ ಹೊಂಡ, ಸಿಡಿ ಕಟ್ಟೆ, ೨೦೦x೧೪೫ ಅಡಿಯ ವಿಸ್ತಾರವಾದ ಬೋಳು ಗೋಡೆಗಳ ಟಂಕಸಾಲೆ, ನಾಣ್ಯಗಳನ್ನು ಶೇಖರಿಸಿಡಲು ೧೦x೧೦ ಅಡಿಗಳ ವಿಸ್ತಾರವಾದ ೮ ಅಡಿ ಆಳದ ಹಗೇವು, ಗೋಪೆನಾಯಕನ ಗರಡಿ ಮುಂತಾದ ಸ್ಮಾರಕಗಳಿವೆ.

ಏಕನಾಥೇಶ್ವರ ದೇವಾಲಯದ ಎದುರಿಗೆ ಸ್ವಲ್ಪ ಅಂತರದಲ್ಲಿ ಇರುವ ಮಹಾದ್ವಾರಕ್ಕೆ ಹಿಡಂಬನಾಥ ಬಾಗಿಲು ಅಥವಾ ಭೂತನಾತ ಬಾಗಿಲೆಂದು ಕರೆಯುತ್ತಾರೆ. ೬x೭.೫x೧೧ ಅಡಿಗಳಲ್ಲಿ ನಿರ್ಮಾಣವಾಗಿರುವ ಈ ಬಾಗಿಲಿನ ಬಳಿ ಹಿಡಿಂಬೇಶ್ವರ ದೇವಾಲಯವಿದೆ. ದೇವಾಲಯದ ಮುಂಭಾಗದಲ್ಲಿ ಗಾಳಿ ಮಂಟಪಗಳಿವೆ. ಇವು ಬೆಟ್ಟದ ಸ್ಮಾರಕಗಳಲ್ಲಿ ಅತ್ಯಂತ ಸುಂದರವಾಗಿದ್ದು, ಇವುಗಳನ್ನು ವಿಜಯನಗರದ ಅರಸರ ಒಂದನೆಯ ದೇವರಾಯನ ಮಗ ಮಲ್ಲಣ್ಣ ಒಡೆಯನು ಕ್ರಿ.ಶ.೧೪೧೧ರಲ್ಲಿ ನಿರ್ಮಿಸಿದನೆಂದು ಹೇಳಲಾಗಿದೆ.[೫೩] ಇವುಗಳ ಮುಂಭಾಗದಲ್ಲಿ ಉಯ್ಯಾಲೆ ಕಂಬ ಮತ್ತು ದೀಪಸ್ತಂಭಗಳಿವೆ. ಇಲ್ಲಿ ಭರಮಣ್ಣನಾಯಕನು ತನ್ನ ರಾಜಗುರುಗಳಿಗೆ ಕಟ್ಟಿಸಿಕೊಟ್ಟ ೧೦೮ ಅಂಕಣದ ಬೃಹನ್ಮಠ ಇದೆ. ಇದರ ಪಕ್ಕದಲ್ಲಿರುವ ತುಪ್ಪದ ಕೊಳ ಬತೇರಿಗೆ ಹೋಗಲು ಕುದುರೆ ಹೆಜ್ಜೆಗಳೆಂದು ಕರೆಯುವ ಕಲ್ಲಿನ ಮೆಟ್ಟಿಲುಗಳಿವೆ. ತುಪ್ಪದ ಕೊಳದ ಉತ್ತರ ಭಾಗದ ಬುಡದಲ್ಲಿ ಬೆಟ್ಟದ ಅಧಿ ದೇವತೆಯಾದ ಸಂಪಿಗೆ ಸಿದ್ದೇಶ್ವರನ ಗುಹಾಂತರ ದೇವಾಲಯವಿದೆ.

[illegible]

ಕಹಳೆ ಬತೇರಿ ಮತ್ತು ತುಪ್ಪಕೊಳದ ಬತೇರಿಗಳನ್ನು ಸೇರಿಸುವ ಅಡ್ಡಕೋಟೆಯಲ್ಲಿ ಇರುವ ದ್ವಾರವು ಶಿಥಿಲಗೊಂಡಿದೆ. ಈ ದ್ವಾರಕ್ಕೆ ನರಸಿಂಹನ ಬಾಗಿಲು ಎಂದು ಕರೆಯುತ್ತಾರೆ. ೪.೯x೬.೩ x ೧೩ ಅಡಿಗಳಲ್ಲಿ ನಿರ್ಮಿಸಿರುವ ಈ ಬಾಗಿಲಿನ ಸುತ್ತಲಿರುವ ಕೋಟೆಯು ೨೧ ಅಡಿ ಎತ್ತರವಿದ್ದು, ಇದರ ಮೇಲ್ಭಾಗದಲ್ಲಿ ೩ ಅಡಿ ಎತ್ತರದ ಮಣ್ಣಿನ ಕೋಟೆ ಇದೆ. ಈ ದ್ವಾರದಿಂದ ಅರಮನೆಯ ಆವರಣಕ್ಕೆ ಪ್ರವೇಶ ಕಲ್ಪಿಸಲಾಗಿದೆ. ಈ ಪ್ರದೇಶದಲ್ಲಿ ಅನೇಕ ಕಟ್ಟಡದ ಅವಶೇಷಗಳು, ಕಣಜಗಳು, ಮದ್ದಿನ ಮನೆಗಳು ಮುಂತಾದ ಸ್ಮಾರಕಗಳಿವೆ. ಅರಮನೆಯ ನೈರುತ್ಯ ಮೂಲೆಗೆ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಇದರ ಮುಂಭಾಗ ಶೃಂಗಾರ ತೋಟವಿತ್ತೆಂದು ಹೇಳಲಾಗಿದೆ. ಈ ಒಳಸುತ್ತಿನ ಕೋಟೆಯ ಲಾಲ್‌ಬತೇರಿ ಮತ್ತು ಕಹಳೆ ಬತೇರಿಗಳ ಮಧ್ಯೆ ಮತ್ತೊಂದು ಬಾಗಿಲಿದ್ದು, ಇದು ಈ ಭಾಗದಿಂದ ಹೊರಕೋಟೆಗೆ ಸಂಪರ್ಕ ಕಲ್ಪಿಸುತ್ತದೆ. ೬x೬x೭.೫ ಅಡಿಗಳಲ್ಲಿ ಈ ಬಾಗಿಲನ್ನು ನಿರ್ಮಿಲಾಗಿದೆ. ಬಾಗಿಲ ಮುಂದೆ ಇರುವ ವೇದಿಕೆಯು ಬಾಗಿಲನ್ನು ಮರೆಮಾಡಿದೆ. ಈ ಬಾಗಿಲಿನಿಂದಲೂ ಅರಮನೆಯ ಪ್ರದೇಶಕ್ಕೆ ಪ್ರವೇಶ ಕಲ್ಪಿಸಲಾಗಿದೆ. ಅರಮನೆಯ ಆವರಣದಲ್ಲಿ ೨೭x೯೫ ಮೀ. ವಿಸ್ತಾರವಾಗಿರುವ ಹಾಗೂ ೪ ಅಡಿ ಕಲ್ಲಿನ ಕಟ್ಟಡದ ಅಧಿಷ್ಠಾನದ ಮೇಲೆ ೧೩ ಅಡಿ ಎತ್ತರದ ಮಣ್ಣಿನ ಗೋಡೆಯನ್ನು ಕಟ್ಟಲಾಗಿದೆ. ಈ ಕಟ್ಟಡದ ಪೂರ್ವಕ್ಕೆ ೧೨ ಅಡಿ ಅಗಲದ ತಗ್ಗಾದ ಪ್ರದೇಶವನ್ನು ಕಂದಕದ ರೀತಿಯಲ್ಲಿ ನಿರ್ಮಿಸಲಾಗಿದೆ. ಇದರ ಮುಂದೆ ೬೫x೨೪ ಮೀ. ಇರುವ ಮತ್ತೊಂದು ಕಟ್ಟಡದ ಅವಶೇಷವಿದೆ. ಇವುಗಳ ಮುಂಭಾಗ ಕಲ್ಲಿನ ಹಾಗೂ ಮಣ್ಣಿನ ಅನೇಕ ಕಣಜಗಳಿವೆ. ಕಹಳೆ ಬತೇರಿ ಬುಡದಲ್ಲಿ ೪೭.೭x೧೬ ಅಡಿ ವಿಸ್ತೀರ್ಣವಿರುವ ಸ್ಥಳದಲ್ಲಿ, ೧೭ ಅಡಿ ಎತ್ತರದ ೧೨ ಸ್ತಂಭಗಳಿವೆ. ಈ ಕಲ್ಲುಗಳ ಸಹಾಯದಿಂದ ಭದ್ರವಾದ ಕಟ್ಟಡವನ್ನು ಕಟ್ಟಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ. ಈ ಅವಶೇಷಗಳ ಪಶ್ಚಿಮಕ್ಕೆ ಗೋಪಾಲಸ್ವಾಮಿ ಹೊಂಡ ಮತ್ತು ದೇವಾಲಯಗಳಿವೆ. ದೇವಾಲಯದ ಪಕ್ಕದಲ್ಲಿ ಮಲ್ಲಮ್ಮ ನಾಗತಿ ಪೂಜಾಗೃಹ ಮತ್ತು ಭೂತಪ್ಪನ ಬಂಡೆಗಳಿವೆ. ಚಿಕ್ಕಣ್ಣನಾಯಕ ಮತ್ತು ಲಿಂಗಣ್ಣ ನಾಯಕನ ಸಮಾಧಿಗಳು ಈ ಭಾಗದಲ್ಲಿವೆ.

ಗೋಪಾಲಸ್ವಾಮಿ ದೇವಾಲಯದ ಹಿಂಭಾಗ ಕೋಡುಗಲ್ಲುಗಳ ಮಧ್ಯೆ ಚೋರಕಂಡಿ ಹಾಗೂ ಸೈನಿಕರ ಮನೆ ಇದೆ. ಇದರ ಸಮೀಪದಲ್ಲಿಯೇ ಕೆಳಕೋಟೆಗೆ ಹೋಗಲು ಸುರಂಗ ಮಾರ್ಗವಿದೆ. ಸುರಂಗ ಮಾರ್ಗಕ್ಕೆ ೯ ಅಡಿ ಉದ್ದ, ೨ ಅಡಿ ದಪ್ಪದ ೧೫ ಚಪ್ಪಡಿ ಕಲ್ಲುಗಳನ್ನು ಬಳಸಿ ಸುರಂಗವನ್ನು ನಿರ್ಮಿಸಿದ್ದಾರೆ. ಈ ಸುರಂಗ ಮಾರ್ಗವು ೯ ಮೀ. ಉದ್ದವಿದ್ದು, ೬.೫ ಅಡಿ ಎತ್ತರವಾಗಿದೆ. ಈ ಸುತ್ತಿನ

ಗೋಡೆಯು ೫೦ ಅಡಿ ಎತ್ತರವಾಗಿದ್ದು, ೯ ಮೀ. ಅಗಲವಾಗಿದೆ. ಈ ಗೋಡೆಗೆ ೧೬ x ೧೦೨ ಇಂಚಿನ ದಪ್ಪ ಕಲ್ಲುಗಳನ್ನು ಬಳಸಿ ವ್ಯವಸ್ಥಿತವಾದ ಕೋಟೆಯನ್ನು ಕಟ್ಟಲಾಗಿದೆ. ಮೇಲ್ಭಾಗವನ್ನು ಮೆಟ್ಟಿಲುಗಳ ರೀತಿಯಲ್ಲಿ ಗಾರೆಗಚ್ಚಿನಿಂದ ಭದ್ರಗೊಳಿಸಿದ್ದಾರೆ. ಈ ಕೋಟೆಗೋಡೆಯು ನೆಲ್ಲಿಕಾಯಿ ಸಿದ್ಧಪ್ಪನ ಬೆಟ್ಟದಿಂದ ಸಿಹಿನೀರು ಹೊಂಡದವರೆಗೂ ಮುಂದುವರೆಯುತ್ತದೆ. ವನಕೆಕಿಂಡಿಯಿಂದ ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟದವರೆಗೂ ಇರುವ ಕೋಟೆಯ ಸಾಲನ್ನು ನಾಗರಸುತ್ತು ಎಂದು ಕರೆಯುತ್ತಾರೆ. ಈ ಕೋಟೆಗೋಡೆಯು ಹಾವಿನ ನಡಿಗೆಯಾಕಾರದಲ್ಲಿರುವುದರಿಂದ ಈ ಹೆಸರು ಬಂದಿದೆ. ಕೋಟೆ ಗೋಡೆಯ ಮೇಲಿರುವ ಗಾರೆಗಚ್ಚಿನ ರಚನೆಗಳು ಮೆಟ್ಟಿಲುಗಳಂತಿದ್ದು ಮಳೆಯ ನೀರಿನಿಂದ ಕೋಟೆಗೆ ದಕ್ಕೆಯಾಗದಂತೆ ಸಂರಕ್ಷಿಸಿವೆ. ಅಲ್ಲದೆ ಈ ರಚನೆಯು ಕೋಟೆಗೋಡೆಯ ಸೌಂದರ್ಯವನ್ನು ಹೆಚ್ಚಿಸಿವೆ.

ತುಪ್ಪದಕೊಳ ಬೆಟ್ಟ ಮತ್ತು ತಣ್ಣೀರು ದೊಣೆ ಬೆಟ್ಟಗಳ ಮಧ್ಯೆ ಇರುವ ಕೋಟೆಗೋಡೆಗೆ ದ್ವಾರವನ್ನು ಕಲ್ಪಿಸಲಾಗಿದೆ. ೫.೪x೭.೬x೧೧ ಅಡಿಗಳಲ್ಲಿ ನಿರ್ಮಿಸಿರುವ ಈ ದ್ವಾರವನ್ನು ಗರುಡಾಂಜನೇಯ ಬಾಗಿಲೆಂದು ಕರೆಯುತ್ತಾರೆ. ಈ ಬಾಗಿಲ ಕೋಟೆಗೋಡೆಯು ೨೩ ಅಡಿ ಎತ್ತರವಾಗಿದ್ದು, ಇದರ ಮೇಲ್ಭಾಗದಲ್ಲಿ ೬ ಅಡಿ ಎತ್ತರದ ಮಣ್ಣಿನ ಕೋಟೆಯನ್ನು ರಚಿಸಲಾಗಿದೆ. ಗೋಡೆಯ ಹಿಂಭಾಗ ೨.೩ ಅಡಿ ಅಗಲದ ಅಟ್ಟಾಲಕವಿದೆ. ಇದರ ಮುಂಭಾಗ ಅಕ್ಕತಂಗಿ ಹೊಂಡಗಳಿವೆ. ಅಕ್ಕನ ಹೊಂಡದ ಮಧ್ಯೆ ಭಾಗದಲ್ಲಿ ಅನ್ನಪೂರ್ಣೇಶ್ವರಿಯ ಕಲ್ಲುಗುಡಿ ಇದೆ. ಹೊಂಡದ ಮೇಲ್ಭಾಗದಲ್ಲಿ ನಾಗಲಿಂಗೇಶ್ವರ ಗುಡಿ ಮತ್ತು ದೊಣೆ ಇದೆ. ಅಕ್ಕತಂಗಿ ಹೊಂಡದ ದಿಬ್ಬದ ಬಳಿ ಮೇಲೆ ಕಂಡುಬರುವ ಶಿಥಿಲ ಕಟ್ಟಡಗಳು ಸುಬ್ರಮಣ್ಯೇಶ್ವರ ಮತ್ತು ಪರ್ಜನೇಶ್ವರ ಗುಡಿಗಳಾಗಿವೆ. ಹೊಂಡದ ಮುಂಭಾಗ ಆಂಜನೇಯ, ಕಾಶಿವಿಶ್ವನಾಥ, ತುಂಗಭದ್ರಾ ದೇವಾಲಯಗಳಿವೆ. ಇಲ್ಲಿಂದ ತಣ್ಣೀರುದೊಣೆ ಮತ್ತು ಒನಕೆ ಕಿಂಡಿಗಳಿಗೆ ಹೋಗಲು ದಾರಿಯಿದೆ. ಈ ಮಧ್ಯೆ ಇರುವ ಬಾಗಿಲಿಗೆ ನಾಗತಿ ಬಾಗಿಲು ಅಥವಾ ತಣ್ಣೀರು ದೊಣೆ ಬಾಗಿಲು ಎಂದು ಕರೆಯುತ್ತಾರೆ. ೬.೪x೭.೫x೭ ಅಡಿ ಅಳತೆಯಲ್ಲಿ ನಿರ್ಮಾಣವಾಗಿರುವ ಈ ಬಾಗಿಲ ಒಳಭಾಗದಲ್ಲಿ ಪಹರೆ ಗೃಹಗಳಿವೆ.

ಏಕನಾಥೇಶ್ವರಿ ಮಹಾದ್ವಾರದಿಂದ ಕೆಲವು ಮೆಟ್ಟಿಲುಗಳ ದೂರದಲ್ಲಿ ಎರಡನೆಯ ಸುತ್ತಿನ ಕೋಟೆಯ ಮಹಾದ್ವಾರವಿದೆ. ಈ ದ್ವಾರದಿಂದ ಬಲಭಾಗಕ್ಕೆ ಕೋಟೆಯು ಶಿವಾಲಯದ ಗುಡ್ಡವನ್ನು ಬಳಸಿಕೊಂಡು ಕಹಳೆ ಬತೇರಿಯನ್ನು ಸಂಧಿಸಿ ಮುಂದೆ ಲಾಲ್‌ಬತೇರಿಯ ಬೆಟ್ಟದ ಸ್ವಲ್ಪ ಭಾಗವನ್ನು ಆವರಿಸಿದೆ. ದ್ವಾರದ ಎಡಭಾಗದ ಕೋಟೆಯು ಝುಂಡಾ ಬತೇರಿ ಬೆಟ್ಟದವರೆಗೆ ಕಟ್ಟಲಾಗಿದೆ. ಅಲ್ಲಿಂದ

[illegible]

ಮುಂದುವರೆದ ಕೋಟೆಯು ಭೀಮನಕಲ್ಲು ಬೆಟ್ಟದ ಪಶ್ಚಿಮ ಭಾಗದವರೆಗೂ ಸಾಗಿದೆ. ಈ ಸಾಲಿನಲ್ಲಿರುವ ದ್ವಾರಕ್ಕೆ ಟೀಕಿನ ಬಾಗಿಲೆಂದೂ ಕಸ್ತೂರಿ ರಂಗಪ್ಪನಾಯಕನ ಬಾಗಿಲೆಂದು ಕರೆಯಲಾಗುತ್ತದೆ. ರಕ್ಷಣಾ ದೃಷ್ಟಿಯಿಂದ ವಿಶೇಷ ತಂತ್ರಗಳೊಂದಿಗೆ ಈ ಬಾಗಿಲನ್ನು ನಿರ್ಮಾಣ ಮಾಡಲಾಗಿದೆ. ಹೊರ ನೋಡುಗರಿಗೆ ಈ ಬಾಗಿಲು ಒಂದು ಕೋಟೆ ಗೋಡೆಯ ರೀತಿ ಕಂಡುಬರುತ್ತದೆ. ಈ ಗೋಡೆಯು ೩೦ ಅಡಿ ಎತ್ತರದ್ದು, ಗೋಡೆಯ ಹಿಂಭಾಗ ೨೨ ಮೆಟ್ಟಿಲುಗಳುಳ್ಳ ಎರಡು ಪ್ರಾಕಾರಗಳ ಮಧ್ಯೆಭಾಗದಲ್ಲಿ ದ್ವಾರಬಾಗಿಲಿದೆ. ೧೪ ಅಡಿ ಎತ್ತರ, ೮ ಅಡಿ ಅಗಲ, ೩೦.೫ ಅಡಿ ಉದ್ದವಿರುವ ಈ ಬಾಗಿಲನ್ನು ಕಮಾನಿನಾಕಾರದಲ್ಲಿ ರಚಿಸಲಾಗಿದೆ. ಬಾಗಿಲಿನ ಮೇಲೆ ತ್ರಿದಳಾಕಾರದ ತೆನೆಗಳು ಮತ್ತು ಚಿಕ್ಕ ಮಿನರೆಟ್‌ಗಳಿವೆ. ಈ ಬಾಗಿಲು ಮುಸ್ಲಿಂ ಶೈಲಿಯಲ್ಲಿದ್ದು, ಕಂಬಗಳು ಮತ್ತು ಶಿಲ್ಪಗಳು ಹಿಂದೂ ಶೈಲಿಯಲ್ಲಿವೆ. ಬಾಗಿಲ ಪಕ್ಕದಲ್ಲಿ ೫ ಅಡಿ ಎತ್ತರ ೨.೫ ಅಡಿ ಅಗಲದ ದಿಡ್ಡಿ ಬಾಗಿಲಿದೆ. ಬಾಗಿಲವಾಡಗಳ ಪಕ್ಕದಲ್ಲಿ ನಯಗೊಳಿಸಿದ ಆಯತಗಲ್ಲುಗಳನ್ನು ಕಬ್ಬಿಣದ ಸರಳುಗಳಿಂದ ಬಂಧಿಸಿ ಬೆಸೆಯಲಾಗಿದೆ. ಎಂತಹ ಆನೆಗಳಿಂದಲೂ ಈ ಬಾಗಿಲನ್ನು ನಾಶಗೊಳಿಸಲಾಗದಂತೆ ನಿರ್ಮಾಣ ಮಾಡಲಾಗಿದೆ. ಬಾಗಿಲುಗಳ ಚೌಕಟ್ಟಿನಲ್ಲಿ ಎರಡು ಗೂಡುಗಳನ್ನು ಮಾಡಲಾಗಿದೆ. ಒಳಭಾಗದಲ್ಲಿ ನಾಲ್ಕು ಅಡಿ ವೇದಿಕೆಯ ಮೇಲೆ ಎರಡೂ ಕಡೆ ಚಾವಡಿಗಳಿವೆ. ಈ ಚಾವಡಿಗಳ ಸ್ತಂಭಗಳ ಮೇಲೆ ಗಣಪತಿ, ಆಂಜನೇಯ, ಕಾಳಿಂಗ ಮರ್ಧನ, ಕುಂಭ, ಶಾರ್ದೂಲ ಮುಂತಾದ ಉಬ್ಬುಶಿಲ್ಪಗಳಿವೆ. ಬಾಗಿಲ ಮುಂಭಾಗ ೩೨ ಅಡಿ ಎತ್ತರದ ಕೋಟೆಗೆ ೪೦x೭೫, ೪೦x೨೫ ಇಂಚಿನ ದಪ್ಪ ಕಲ್ಲುಗಳನ್ನು ಬಳಸಿ ನಿರ್ಮಿಸಿದ ಕೋಟೆ ವ್ಯವಸ್ಥಿತವಾಗಿದೆ. ಗೋಡೆಯಲ್ಲಿ ಬಂದೂಕು ಕಿಂಡಿಗಳು ಫಿರಂಗಿ ಗೂಡುಗಳಿವೆ. ಈ ಸುತ್ತನ್ನು ಫಿರಂಗಿ ಸುತ್ತುಕೋಟೆಯೆಂದು ಕರೆಯಲಾಗಿದೆ. ಗೋಡೆಯ ಹಿಂಭಾಗದಲ್ಲಿ ಫಿರಂಗಿ ಗಾಡಿಗಳು ಚಲಿಸಲು ಅವಕಾಶ ಕಲ್ಪಿಸಲಾಗಿದೆ. ಬಾಗಿಲಿನ ಎರಡುಕಡೆ ವ್ಯವಸ್ಥಿತವಾದ ಕಾವಲು ಬುರುಜುಗಳಿವೆ. ಒಳಕೋಟೆ ಮತ್ತು ಎರಡನೇ ಸುತ್ತಿನ ಕೋಟೆಗಳ ಮಧ್ಯಭಾಗದಲ್ಲಿ ಗಣೇಶನ ಗುಡಿ, ಶೃಂಗೇರಿಸ್ವಾಮಿಗಳ ಮಠ, ಗರಡಿಮನೆ, ಮದ್ದಿನಮನೆ, ಕಲ್ಲಿನ ಕಣಜಗಳಿವೆ. ಗರಡಿಮನೆಯ ಮೇಲ್ಭಾಗದಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕ ಮತ್ತು ಹಿರೇ ಮದಕರಿನಾಯಕರವೆಂದು ಹೇಳಲಾದ ಸಮಾಧಿಗಳಿವೆ.

ಮೂರನೇ ಸುತ್ತಿನ ಕೋಟೆಯ ಮಹಾದ್ವಾರಕ್ಕೆ ಗಂಟೆಯ ಬಾಗಿಲು ಎಂದು ಹೆಸರಿದೆ. ಹಿಂದೆ ಈ ಬಾಗಿಲಿಗೆ ಗಂಟೆಗಳನ್ನು ಅಳವಡಿಸಿದ್ದು, ಬಾಗಿಲು ತೆರೆದಾಗ ಮತ್ತು ಮುಚ್ಚಿದಾಗ ಅವುಗಳಿಂದ ಮಂಜುಳನಾದ ಹೊರಹೊಮ್ಮುತಿತ್ತೆಂದು ಹೇಳಲಾಗಿದೆ. ಗಂಟೆಗಳನ್ನು ಅಳವಡಿಸಿದ್ದರಿಂದ ಈ ದ್ವಾರಕ್ಕೆ

ಗಂಟೆಯ ಬಾಗಿಲೆಂದೇ ಹೆಸರಾಗಿದೆ. ಈ ದ್ವಾರದ ಒಳಭಾಗದಲ್ಲಿ ಎರಡು ಚಾವಡಿಗಳಿವೆ. ಮುಂಭಾಗದಲ್ಲಿ ಎರಡು ತಿರುವುಳ್ಳ ಕೋಟೆಗೋಡೆಯಿದೆ. ದ್ವಾರದ ಎಡಭಾಗಕ್ಕೆ ಬೆಟ್ಟದ ನೀರು ಹೊರಬರಲು ತೂಬನ್ನು ಮಾಡಲಾಗಿದೆ. ಈ ಬಾಗಿಲ ಪಕ್ಕದಲ್ಲಿ ಗೊಂಬೆ ಚಾವಡಿಯಿದೆ. ಪಾಳೆಯಗಾರರು ಸಾಕಿಕೊಂಡಿದ್ದ ಕುದುರೆಗಳು, ಆನೆಗಳು, ಮೃತಪಟ್ಟಿದ್ದರ ನೆನಪಿಗಾಗಿ ಆನೆ ಮತ್ತು ಕುದುರೆಗಳ ಗೊಂಬೆಗಳನ್ನು ಈ ಚಾವಡಿಯಲ್ಲಿ ಸ್ಥಾಪಿಸುತ್ತಿದ್ದರೆನ್ನಲಾಗಿದೆ. ಈ ಕೋಟೆಯ ಗೋಡೆಯ ಸಾಲುಗಳು ಸಹ ಎರಡನೆಯ ಕೋಟೆಯ ಗೋಡೆಯ ಸಾಲಿನಂತೆ ಗಿರಿಗಳ ಮೇಲೆ ಹರಡಿಕೊಂಡಿವೆ.

ನಾಲ್ಕನೆಯ ಸುತ್ತಿನ ಕೋಟೆಯ ಬಾಗಿಲಿಗೆ ಜಾಗಟೆ ಬಾಗಿಲು ಎಂದು ಕರೆಯುತ್ತಾರೆ. ಈ ಬಾಗಿಲಿನ ಹಿಂದೆ ಜಾಗಟೆಗಳನ್ನು ಕಟ್ಟುತ್ತಿದ್ದರಿಂದ ಈ ಹೆಸರು ಬಂದಿದೆ. ೧೬ ಅಡಿ ಎತ್ತರ, ೮ ಅಡಿ ಅಗಲ, ೧೮ ಅಡಿ ಉದ್ದವಿರುವ ಈ ಬಾಗಿಲ ಕೋಟೆ ಗೋಡೆಯ ಎತ್ತರ ೨೦ ಅಡಿ ಇದೆ. ಈ ಬಾಗಿಲ ಸಮೀಪದ ಕೋಟೆಯ ಸಂದುಗಳಲ್ಲಿ ಗೂಡುಗಳನ್ನು ನಿರ್ಮಿಸಿ ವಿಷ ತುಂಬಿದ ಆಯುಧಗಳನ್ನು ಬಚ್ಚಿಡುತ್ತಿದ್ದರು. ಕೋಟೆಯ ಮೇಲೆ ಧಾಳಿ ನಡೆದ ಸಂದರ್ಭದಲ್ಲಿ ಈ ಕತ್ತಿಗಳನ್ನು ಶತ್ರು ದಳದವರ ಮೇಲೆ ಪ್ರಯೋಗಿಸಲಾಗುತ್ತಿತ್ತು ಹಾಗೂ ಆಕ್ರಮಣ ನಡೆದಾಗ ಪಹರೆಯವರು ಶತ್ರುಗಳ ವಶವಾಗುತ್ತೇವೆಂದು ತಿಳಿದಾಗ ಈ ಆಯುಧಗಳಿಂದ ತಮ್ಮನ್ನು ತಾವೇ ತಿವಿದುಕೊಂಡು ವೀರಸ್ವರ್ಗವನ್ನಪ್ಪುತ್ತಿದ್ದರು. ವಿಷದ ಕತ್ತಿಗಳು ಇಲ್ಲಿದ್ದುದರಿಂದ ಈ ಬಾಗಿಲಿಗೆ ವಿಷದಕತ್ತಿ ಬಾಗಿಲು ಎಂಬ ಹೆಸರು ಕೂಡ ಇದೆ. ಇದರ ಪಕ್ಕದಲ್ಲಿರುವ ಒಂದು ಶಾಸನ ವೀರಭದ್ರನ ಕೊತ್ತಲು ಎಂದು ತಿಳಿಸುತ್ತದೆ.[೫೪] ಕೊತ್ತಲುಗಳನ್ನು ತಮ್ಮ ಇಷ್ಟದೈವಗಳ ಹೆಸರಿನಿಂದ ಕರೆಯುತ್ತಿದ್ದರೆಂಬ ಸಂಗತಿ ಈ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನವು ವಿಜಯನಗರ ಕಾಲದಲ್ಲಿನದು ಎಂದು ಹೇಳಿರುವುದರಿಂದ ವಿಜಯನಗರ ಅರಸರ ಕಾಲದಲ್ಲಿಯೇ ಈ ಕೋಟೆಯ ಸಾಲು ಇತ್ತೆಂದು ಇದರಿಂದ ತಿಳಿದುಬರುತ್ತದೆ.

ಐದನೆಯ ಸುತ್ತಿನ ಕೋಟೆಯನ್ನು ಕಾಮನ ಬಾಗಿಲು ಸುತ್ತು ಎಂದು ಕರೆಯಲಾಗಿದೆ. ಈ ಬಾಗಿಲ ಬಲ ಭಾಗಕ್ಕೆ ಕಾಮನ ಬಾವಿ ಎಂದು ಕರೆಯುವ ಪುಷ್ಕರಣಿ ಇದೆ. ಕೆಲವು ದಾಖಲೆಗಳಲ್ಲಿ ಕಾಮಗೇತಿ ಬಾಗಿಲು ಎಂದು ಕೂಡ ಹೇಳಲಾಗಿದೆ. ಅಲ್ಲದೆ ಕಾಮದೇವನ ಶಿಲ್ಪವನ್ನು ಇಲ್ಲಿ ಅಳವಡಿಸಿರುವುದರಿಂದ ಇದಕ್ಕೆ ಕಾಮನ ಬಾಗಿಲು ಎಂಬ ಹೆಸರಿದೆ. ಚಿನ್ಮೂಲಾದ್ರಿ ಬೆಟ್ಟದ ತಪ್ಪಲಿನಲ್ಲಿ ಹರಡಿರುವ ಈ ಕೋಟೆಯು ದೂರದಿಂದ ಕಂಡುಬರುವುದಿಲ್ಲ. ಬಾಗಿಲ ಹೊರಭಾಗವನ್ನು ಕೋಟೆಗೋಡೆಯಂತೆ ಕಟ್ಟಿದ್ದಾರೆ. ೮x೮, ೧೦x೪ ಅಡಿ ದಪ್ಪದ ನಯಗೊಳಿಸಿದ ಕಲ್ಲುಗಳನ್ನು ಗಾರೆಯನ್ನಾಗಲಿ ಅಥವಾ

[illegible]

[illegible]

ಮಣ್ಣನ್ನಾಗಲೀ ಬಳಸದೆ ಒಂದರ ಮೇಲೊಂದರಂತೆ ಇಟ್ಟು ವ್ಯವಸ್ಥಿತವಾದ ಗೋಡೆಯನ್ನು ನಿರ್ಮಿಸಿದ್ದಾರೆ. ಕಾಮನಬಾಗಿಲು ೧೯.೨ ಮೀ. ಅಂತರದಲ್ಲಿರುವ, ೨೫ ಅಡಿ ಎತ್ತರದ ಎರಡು ಪ್ರಾಕಾರಗಳ ಮಧ್ಯ ನಿರ್ಮಿಸಲಾಗಿದೆ. ಹಿಂಬದಿಯಲ್ಲಿರುವ ಮಹಾದ್ವಾರಕ್ಕೆ ಹೋಗಲು ನಾಲ್ಕು ತಿರುವುಗಳನ್ನು ಬಳಸಬೇಕು. ಮೊದಲನೆಯದಾಗಿ ಪೂರ್ವದಿಂದ ಪಶ್ಚಿಮಕ್ಕೆ ೨೩ ಮೀ. ನಂತರ ಉತ್ತರಕ್ಕೆ ೨೭ ಮೀ. ಕ್ರಮಿಸಿ, ಪುನಃ ಪಶ್ಚಿಮಕ್ಕೆ ೨೦ ಮೀ. ದೂರ ಹೋಗಿ, ಮತ್ತೆ ೨೦ ಮೀ. ದಕ್ಷಿಣಕ್ಕೆ ಬಂದರೆ ಅಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಪ್ರವೇಶಿಸುವ ಹಾಗೆ ೮.೭x೨೧x೨೩ ಅಡಿಗಳಲ್ಲಿ ದ್ವಾರಬಾಗಿಲನ್ನು ರಚಿಸಲಾಗಿದೆ. ಇದರ ಪಕ್ಕದಲ್ಲಿ ೪ ಅಡಿ ಅಗಲದ, ೭ ಅಡಿ ಎತ್ತರದ ದಿಡ್ಡಿಬಾಗಿಲು ಇದೆ.

ದ್ವಾರದ ಹಿಂಭಾಗದಲ್ಲಿ ಇಟ್ಟಿಗೆಯಿಂದ ಕಟ್ಟಿದ ಅವಶೇಷಗಳಿವೆ. ಬಹುಶಃ ಆಂಗ್ಲರ ಕಾಲದಲ್ಲಿ ಕಟ್ಟಿದ ಪಹರೆ ಚಾವಡಿ ಇದಾಗಿರಬಹುದೆಂದು ಊಹಿಸಲಾಗಿದೆ. ಬಾಗಿಲು ತೋಳುಗಳನ್ನು ಶಾರ್ದೂಲ ಮತ್ತು ಹೂವಿನ ಬಳ್ಳಿಯ ಚಿತ್ರಗಳಿಂದ ಅಲಂಕರಿಸಲಾಗಿದೆ. ಪ್ರತಿ ತಿರುವುಗಳು ೨೦ರಿಂದ ೨೭ ಮೀ. ಅಂತರವನ್ನು ಕಾಯ್ದುಕೊಂಡಿವೆ. ಮುಂಭಾಗದ ಬಿತ್ತಿಯ ಮೇಲೆ ೮.೭ ಅಡಿ ಉದ್ದದ ಏಳು ಹೆಡೆಯ ಆದಿಶೇಷನ ಉಬ್ಬುಶಿಲ್ಪ ಅತ್ಯಾಕರ್ಷಕವಾಗಿದೆ. ಇಷ್ಟೇ ಅಲ್ಲದೆ ಗಣೇಶ, ಕುಂಭ, ಕಮಲ, ಬಸವ, ಶಿವಲಿಂಗ, ವೀರಭದ್ರ, ಗಂಡಬೇರುಂಡ, ಹಂಸ ಮೊದಲಾದ ಶಿಲ್ಪಗಳನ್ನು ಕಾಣಬಹುದು. ಇಲ್ಲಿನ ಕೋಟೆಗೋಡೆಗಳು ೨೫ ಅಡಿ ಎತ್ತರವಾಗಿದ್ದು, ೯೦° ನೇರದಲ್ಲಿ ನಿರ್ಮಿಸಿರುವುದರಿಂದ ಶತ್ರುಗಳು ಗೋಡೆಯನ್ನೇರಲು ಸಾಧ್ಯವಾಗುತ್ತಿರಲಿಲ್ಲ. ೫.೫ ಮೀ. ಮಧ್ಯೆ ವಿಸ್ತಾರವಾಗಿರುವ ಬಾಗಿಲ ಎರಡೂ ಕಡೆ ಪ್ರಾಕಾರಗಳಿವೆ. ಈ ಪ್ರಾಕಾರಗಳ ನಡುವೆ ಸಾಗುವ ಶತ್ರುಗಳನ್ನು ಪೇಚಿಗೆ ಸಿಲುಕಿಸಿ ನಿರ್ನಾಮ ಮಾಡುವ ತಂತ್ರಕ್ಕನುಸಾರವಾಗಿ ಈ ಬಾಗಿಲನ್ನು ನಿರ್ಮಿಸಲಾಗಿದೆ. ಒಂದು ವೇಳೆ ಶತ್ರು ಸೈನಿಕರು ನುಗ್ಗಿಬಂದರೆ ಅಥವಾ ಈ ಬಾಗಿಲಿನಲ್ಲಿ ಹೊಕ್ಕರೆ ಹುಲಿಯ ಬಾಯಲ್ಲಿ ಸಿಕ್ಕವರಂತೆ ಸಾಯಬೇಕಾದುದರಿಂದ ಈ ಬಾಗಿಲನ್ನು ಹುಲಿಮುಖದ ಬಾಗಿಲೆಂದು ಕರೆಯಲಾಗಿದೆ. ಚಿತ್ರದುರ್ಗದ ಕೋಟೆಯಲ್ಲಿ ಇಷ್ಟೊಂದು ಸುಂದರವಾದ ರಚನೆ ಮತ್ತೆಲ್ಲಿಯೂ ಕಂಡುಬರುವುದಿಲ್ಲ.

ಕಾಮನಸುತ್ತಿನ ಕೋಟೆಯು ಅತ್ಯಂತ ಬಲಾಢ್ಯವಾಗಿದ್ದು, ಅಲ್ಲಲ್ಲಿ ಬೃಹದಾಕಾರವಾದ ವೃತ್ತಾಕಾರದ ಮತ್ತು ಚೌಕಾಕಾರದ ಬುರುಜುಗಳಿಂದ ನಿರ್ಮಾಣಗೊಂಡಿದೆ. ಈ ಕೋಟೆಯ ಹೊರಬಾಗದಲ್ಲಿ ಕೆರೆಯ ರೀತಿ ೬೦ ರಿಂದ ೧೦೦ ಅಡಿ ಅಗಲದ ಭಾರೀ ಕಂದಕವಿದೆ. ಕಾಮನಬಾಗಿಲ ಎಡಭಾಗದಿಂದ

[illegible]

ಪ್ರಾರಂಭವಾದ ಕೋಟೆಯು ಒಂಟಿ ಕಲ್ಲು ಬಸವನಗುಡಿಯನ್ನು ಸುತ್ತಿ ಬಸವನಬುರುಜಿನ ತನಕ ಸಾಗುತ್ತದೆ. ಬಲಭಾಗದ ಸುತ್ತು ಕರವರ್ತಿ ದೇವಸ್ಥಾನ, ರಾಮದೇವರ ಒಡ್ಡುಗಳನ್ನು ಬಳಸಿಕೊಂಡು ಲಾಲ್‌ಬತೇರಿ ಗುಡ್ಡವನ್ನು ಸೇರುತ್ತದೆ. ಈ ನಾಲ್ಕು ಮತ್ತು ಐದನೇ ಸುತ್ತಿನ ಮಧ್ಯಭಾಗದಲ್ಲಿ ಕಲ್ಲಿನ ತೊಟ್ಟಿ, ಎಣ್ಣೆಕೊಳ, ಮದ್ದು ಬೀಸುವಕಲ್ಲು, ರುಬ್ಬುಗುಂಡು, ಶಸ್ತ್ರಾಗಾರವೆಂದು ಕರೆಯಬಹುದಾದ ಕಟ್ಟಡದ ಅವಶೇಷ, ಒಂಟಿಕಲ್ಲು ಬಸವನಗುಡಿ, ಬನಶಂಕರಿ ದೇವಾಲಯ, ಚಳ್ಳಕೆರೆ ಅಮ್ಮನಗುಡಿ, ಶಿವಾಲಯ ಇನ್ನು ಮುಂತಾದ ಸ್ಮಾರಕಗಳಿವೆ.

ಬನಶಂಕರಿ ಗುಡಿಗೆ ಹೊಂದಿಕೊಂಡಂತೆ ೭೦x೭೦ ಅಡಿಗಳ ಹಾಗೂ ಮೂರು ಮೀಟರ್ ಆಳದ ಚೌಕಾಕಾರದ ಬಾವಿಯಿದೆ. ಬಾವಿಯೊಳಗೆ ಇಳಿಯಲು ಮೆಟ್ಟಿಲುಗಳಿವೆ. ಬಾವಿಯ ತಳದಿಂದ ಎರಡು ಮೀಟರ್ ಎತ್ತರದಲ್ಲಿ ಕಲ್ಲಿನ ತೊಲೆಗಳನ್ನು ಅಡ್ಡಹಾಕಿ, ದಿಕ್ಕಿಗೆ ಒಂದರಂತೆ ನಾಲ್ಕು ಬೀಸುವ ಕಲ್ಲುಗಳನ್ನು ಜೋಡಿಸಿದ್ದಾರೆ. ಪ್ರತಿ ಕಲ್ಲಿನ ಸುತ್ತಳತೆ ೫.೬ ಮೀಟರ್ ಇದೆ. ಕೆಳಗಿನ ಕಲ್ಲಿನ ದಪ್ಪ ೧೭ ಅಂಗುಲವಿದ್ದರೆ, ಮೇಲಿನ ಕಲ್ಲು ೯.೫ ಅಂಗಲ ದಪ್ಪವಿದೆ. ಮೇಲಿನ ಕಲ್ಲುಗಳ ಸುತ್ತಲೂ ಎರಡುವರೆ ಇಂಚು ಉದ್ದ, ಮೂರು ಮುಕ್ಕಾಲು ಇಂಚು ಆಳದ ಮೂವತ್ತೆಂಟು ಚೌಕಾಕೃತಿಯ ಅಂಚುಗಂಡಿಗಳಿವೆ. ಮಧ್ಯೆ ಇವುಗಳೆಲ್ಲಾ ಒಟ್ಟಿಗೆ ಕೆಲಸ ಮಾಡುವಂತೆ ಸಂಯೋಜಿಸಲಾಗಿದೆ. ಈ ಬೃಹತ್ ವ್ಯವಸ್ಥೆಯ ಬಗ್ಗೆ ವಿದ್ವಾಂಸರು ಮದ್ದು ಬೀಸುವ ಕಲ್ಲುಗಳು, ಹಿಟ್ಟು ಬೀಸುವ ಕಲ್ಲುಗಳು, ಗಾರೆ ಅರೆಯುವ ಕಲ್ಲುಗಳಿರಬಹುದೆಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ರಚನೆ ಮತ್ತು ವಿನ್ಯಾಸವನ್ನು ಗಮನಿಸಿದರೆ ಈ ಕಲ್ಲುಗಳು ಹೈದರಾಲಿ ಇಲ್ಲವೆ ಟಿಪ್ಪುವಿನ ಅವಧಿಯಲ್ಲಿ ನಿರ್ಮಾಣವಾದಂತೆ ತೋರುತ್ತದೆ.

ಈ ಬೀಸುವ ಕಲ್ಲುಗಳನ್ನು ಉಪಯೋಗಿಸದೇ ಇರುವುದರಿಂದ, ನಿರ್ದಿಷ್ಟವಾಗಿ ಇವುಗಳನ್ನು ಏತಕ್ಕೆ ಬಳಸುತ್ತಿದ್ದರೆಂದು ಹೇಳುವುದು ಕಷ್ಟ. ಒಂದು ವೇಳೆ ಇವುಗಳನ್ನು ಬಳಸಿದ್ದರೆ ಕಲ್ಲುಗಳು ಸವೆಯುತ್ತಿದ್ದವು. ಹಾಗೂ ಬೀಸಿದ ವಸ್ತುವಿನ ಅವಶೇಷ ಬಾವಿಯಲ್ಲಿರುತ್ತಿತ್ತು. ಇದರಿಂದ ಇವುಗಳನ್ನು ಬಳಸಿದ ಉದ್ದೇಶವನ್ನು ಅರ್ಥೈಸಿಬಹುದಿತ್ತು. ಇದರ ಪಕ್ಕದಲ್ಲಿಯೇ ಮದ್ದಿನ ಕಾರ್ಖಾನೆ ಇತ್ತು ಎಂದು ಹೇಳಲು ಅನೇಕ ಅವಶೇಷಗಳು ದೊರಕಿರುವುದರಿಂದಲೂ ಚಿತ್ರದುರ್ಗ ಕೋಟೆಯಲ್ಲಿ ಈಗಾಗಲೇ ಬೃಹತ್ ಪ್ರಮಾಣದಲ್ಲಿ ಗಾರೆಯನ್ನು ಬಳಸಿರುವುದರಿಂದಲೂ, ಇವು ಮದ್ದು ಬೀಸುವ ಕಲ್ಲುಗಳೆಂದು ಹೇಳಬಹುದು.

[illegible]

[illegible]

[illegible]

ಕಾಮನಬಾಗಿಲ ಮುಂದೆ ಒಂದೇ ಕಲ್ಲನ್ನು ತುಂಬಾ ನಯವಾಗಿ ಕೊರೆದು ಮಾಡಿರುವ ತೊಟ್ಟಿಯೊಂದು ಇದೆ. ಈ ತೊಟ್ಟಿಯಲ್ಲಿ ನೀರು ಶೇಖರಿಸಿ, ಆನೆಗಳಿಗೆ ನೀರು ಕುಡಿಸುತ್ತಿದ್ದರೆಂದು ಹೇಳಲಾಗಿದೆ. ಈ ಕೋರಿಯು ೧೦ ಅಡಿ ಉದ್ದ, ೬.೨. ಅಡಿ ಅಗಲ, ೬.೧. ಅಡಿ ಎತ್ತರ ಇದೆ. ತೊಟ್ಟಿಯ ಕಲ್ಲಿನ ದಪ್ಪ ೫ ಇಂಚು ಇದೆ. ತುಂಬಾ ನೀಳವಾಗಿ ಹಾಗೂ ಸೂಕ್ಷ್ಮವಾಗಿ ಕೊರೆದಿರುವ ತೊಟ್ಟಿಯ ಒಳಭಾಗವು ೪.೪ ಅಡಿ ಆಳ ಇದೆ. ಇದೇ ರೀತಿ ನಾಲ್ಕನೇ ಹೆಬ್ಬಾಗಿಲ ಹತ್ತಿರ ಹುಟ್ಟು ಬಂಡೆಯೊಂದರಲ್ಲಿ ಕೊರೆದು ಮಾಡಿರುವ ಎರಡು ತೊಟ್ಟಿಗಳಿವೆ. ಭೂಮಟ್ಟದಿಂದ ಎತ್ತರದಲ್ಲಿರುವ ದೊಡ್ಡದಾದ ತೊಟ್ಟಿಯು ಪೂರ್ವಪಶ್ಚಿಮವಾಗಿ ೧೩ ಅಡಿ, ಉತ್ತರ ದಕ್ಷಿಣವಾಗಿ ೬.೬. ಅಡಿ ಇದ್ದು, ೮ ಅಡಿ ಆಳವಿದೆ. ಇದರಲ್ಲಿ ಮದ್ದು ತುಂಬಲು ಉಪಯೋಗಿಸುತ್ತಿದ್ದರೆಂದು ಹೇಳಲಾಗಿದೆ. ಇದರ ಪಕ್ಕದಲ್ಲಿ ಕೆಳಭಾಗದಲ್ಲಿರುವ ಚಿಕ್ಕ ತೊಟ್ಟಿಯನ್ನು ಪೂರ್ವಪಶ್ಚಿಮವಾಗಿ ೭ ಅಡಿ, ಉತ್ತರದಕ್ಷಿಣವಾಗಿ ೫ ಅಡಿ ಮತ್ತು ೩ ಅಡಿ ಆಳವಿದೆ. ಇದರಲ್ಲಿ ಎಣ್ಣೆ ತುಂಬುತ್ತಿದ್ದರು ಎಂದು ಹೇಳಲಾಗಿದೆ. ಈ ಎರಡು ತೊಟ್ಟಿಗಳಿಗೂ ಮುಚ್ಚುವ ವ್ಯವಸ್ಥೆ ಮಾಡಿದ್ದುದರ ಗುರುತುಗಳು ಇಲ್ಲಿ ಸಿಗುತ್ತವೆ.

ಬೆಟ್ಟದ ಪೂರ್ವ ದಿಕ್ಕಿನಲ್ಲಿ ಹೊರಕೋಟೆಯ ಒಳಭಾಗಕ್ಕೆ ಆರನೆಯ ಸುತ್ತಿನ ಕೋಟೆಯು ಚಿನ್ಮೂಲಾದ್ರಿಯ ಗಿರಿಸ್ತೋಮಗಳನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ಇದರ ಪೂರ್ವ ಮತ್ತು ಉತ್ತರ ಭಾಗಗಳು ಗಿರಿಯ ತಪ್ಪಲಿನಲ್ಲಿ ಸುತ್ತಿಕೊಂಡಿದ್ದು, ಉಳಿದಂತೆ ಅವಶ್ಯಕತೆ ಇರುವ ಕಡೆ ಕಲ್ಲುಬಂಡೆಗಳ ಮಧ್ಯೆ ಕೋಟೆಯನ್ನು ಕಟ್ಟಲಾಗಿದೆ. ಈ ಸುತ್ತಿನ ಮಹಾದ್ವಾರಕ್ಕೆ ಗಾರೆಬಾಗಿಲೆಂದು ಕರೆಯುವರು. ಈ ಬಾಗಿಲಿನ ಪ್ರಾಕಾರಗಳಿಗೆ ನಯವಾದ ಗಾರೆಯಿಂದ ಲೇಪನ ಮಾಡಿರುವುದರಿಂದ ಗಾರೆ ಬಾಗಿಲು ಎಂಬ ಹೆಸರು ಬಂದಿದೆ. ಈ ಬಾಗಿಲು ೧೩ ಅಡಿ ಅಗಲ, ೧೨ ಅಡಿ ಎತ್ತರವಿದೆ. ಗಾರೆ ಬಾಗಿಲು ಸುತ್ತಿನ ಕೋಟೆಯು ದಕ್ಷಿಣದಲ್ಲಿ ಲಾಲ್‌ಬತೇರಿ ಕೋಟೆಯ ಮಹಾದ್ವಾರದವರೆಗೆ ವಿಸ್ತಾರಗೊಂಡಿದೆ. ಈ ಕೋಟೆಯು ೩೦ ಅಡಿ ಎತ್ತರವಾಗಿದ್ದು, ೧೫ ಅಡಿ ಅಗಲವಾಗಿದೆ. ಗೋಡೆಯ ಹೊರಭಾಗದಲ್ಲಿ ೬೦ರಿಂದ ೭೦ ಅಡಿ ಅಗಲದ ೧೫ ಅಡಿ ಆಳದ ಕಂದಕವಿದೆ. ಈ ಕಂದಕವು ಮುಂದೆ ಕಾಮನ ಬಾಗಿಲ ಹತ್ತಿರ ೧೨೦ ಅಡಿಗಿಂತಲೂ ಹೆಚ್ಚು ಅಗಲವಾಗುತ್ತಾ ಮುಂದೆ ಸಾಗಿದೆ. ಈ ಕೋಟೆಯ ಸಾಲು ಕೆಂಚೇಶ್ವರ ದೇವಸ್ಥಾನದಿಂದ ಲಾಲ್‌ಬತೇರಿ ಬೆಟ್ಟವನ್ನು ಸೇರುತ್ತದೆ. ಮುಂದೆ ನೆಲ್ಲೆಕಾಯಿ ಸಿದ್ದಪ್ಪನ ಬೆಟ್ಟವನ್ನು ಸುತ್ತಿಕೊಂಡು ಗೋಪಾಲಕೃಷ್ಣ ದೇವಸ್ಥಾನದ ಹಿಂಭಾಗದಿಂದ ತಣ್ಣೀರು ದೋಣೆ ಬೆಟ್ಟವನ್ನು ಬಳಸಿದೆ. ಮುಂದುವರೆದು ಪಲ್ಗುಣೇಶ್ವರ ದೇವಾಲಯದ ಹಿಂಭಾಗದಲ್ಲಿ ಭೀಮನಕಲ್ಲು ಮತ್ತು ಝುಂಡಾ ಬತೇರಿ ಬೆಟ್ಟಗಳನ್ನಾವರಿಸಿ ಬಸವನಬುರುಜು ಬೆಟ್ಟದ ಬಳಿ ಹಾದು ಪುನಃ ಗಾರೆಬಾಗಿಲನ್ನು ಸೇರುತ್ತದೆ.

ಚಿತ್ರದುರ್ಗದ ಏಳುಸುತ್ತು ಕೋಟೆಯ ಅಂಗಭಾಗವಾದ ಹೊರಸುತ್ತು ಬೆಟ್ಟದ ದಕ್ಷಿಣದ ತುದಿಯಿಂದ ಪೂರ್ವಕ್ಕೆ ಪ್ರಾರಂಭವಾಗಿ, ಪೂರ್ವ ಮತ್ತು ಉತ್ತರ ಭಾಗಗಳ ಹಳೆಯ ಊರುಗಳನ್ನೊಳಗೊಂಡಂತೆ ಇಡೀ ಬೆಟ್ಟವನ್ನು ಆವರಿಸಿಕೊಂಡಿದೆ. ಇದರ ಉದ್ದ ಸುಮಾರು ೧೩ ಕಿ.ಮೀ. ಎಂದು ಅಂದಾಜು ಮಾಡಲಾಗಿದೆ. ಈ ಹೊರಸುತ್ತಿನ ಕೋಟೆಯಲ್ಲಿ ಐದು ಪ್ರಮುಖವಾದ ಮಹಾದ್ವಾರಗಳಿವೆ. ನಾಲ್ಕು ದಿಕ್ಕಿನಲ್ಲಿ ಒಂದರ ನಂತರ ಒಂದರಂತೆ ದ್ವಾರಗಳಿದ್ದು, ಐದನೆಯದು ವಾಯುವ್ಯ ದಿಕ್ಕಿನಲ್ಲಿದೆ. ಚಿತ್ರದುರ್ಗದ ಪಾಳೆಯಗಾರರು ಪ್ರತಿಯೊಂದು ಬಾಗಿಲನ್ನು ಒಬ್ಬೊಬ್ಬ ದೇವರ ಹೆಸರಿನಲ್ಲಿ ನಿರ್ಮಿಸಿರುವುದು ಗಮನಾರ್ಹ. ಪೂರ್ವದಿಕ್ಕಿನ ಮಹಾದ್ವಾರದ ರಂಗಯ್ಯನ ಬಾಗಿಲಿಗೆ ಮನೆಯ ದೇವರಾದ ನೀರ್ಥಡಿ ರಂಗನಾಥಸ್ವಾಮಿಯ ಹೆಸರಿನ್ನಡಲಾಗಿದೆ. ಈ ಬಾಗಿಲು ಸಿರಾಕ್ಕೆ ಅಭಿಮುಖವಾಗಿರುವುದರಿಂದ ಸಿರಾದರ್‍ವಾಜ ಎಂದು ಕರೆಯುವರು. ೧೦ ಅಡಿ ಅಗಲ, ೧೫ ಅಡಿ ಎತ್ತರದಲ್ಲಿ ನಿರ್ಮಿಸಿದ ಈ ಬಾಗಿಲು ಕಮಾನಿನಾಕಾರದಲ್ಲಿದೆ. ರಂಗಯ್ಯನಬಾಗಿಲ ಕೋಟೆಯ ಸುತ್ತು ೨೫ ಅಡಿ ಎತ್ತರವಾಗಿದ್ದು, ४೦ ಅಡಿ ಅಗಲವಿದೆ. ಕೋಟೆಯುದ್ದಕ್ಕೂ ಇದ್ದ ಕಂದಕ ಈಗ ಅಲ್ಲಲ್ಲಿ ಮಾತ್ರ ಸ್ವಲ್ಪ ಉಳಿದುಕೊಂಡಿದೆ. ಈ ಮಹಾದ್ವಾರದ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಬತೇರಿಗಳಿದ್ದು, ಸುತ್ತಲೂ ಕೈಪಿಡಿ ಗೋಡೆಗಳಿವೆ. ಇದರ ಎರಡು ಬದಿಯಲ್ಲಿ ಇದ್ದ ದಿಡ್ಡಿ ಬಾಗಿಲುಗಳನ್ನು ಮುಚ್ಚಿ ಸೀತಾರಾಮ ಮತ್ತು ಆಂಜನೇಯ ಗುಡಿಗಳನ್ನು ನಿರ್ಮಿಸಲಾಗಿದೆ. ಬಾಗಿಲಿನ ಒಳಭಾಗದಲ್ಲಿ ಇದ್ದ ಪಹರೆಯವರ ಎರಡು ಕೊಠಡಿಗಳನ್ನು ಇತ್ತೀಚೆಗೆ ಸರ್ಕಾರಿ ಪ್ರಾಚ್ಯವಸ್ತುಸಂಗ್ರಹಾಲಯವನ್ನಾಗಿ ಪರಿವರ್ತಿಸಲಾಗಿದೆ.

ಇದೇ ಸುತ್ತಿನ ಉತ್ತರಕ್ಕೆ ಇರುವ ಬಾಗಿಲೇ ಸಂತೆಬಾಗಿಲು. ಈ ಬಾಗಿಲಿಗೆ ಸಿದ್ದೇಶ್ವರ ಮಹಾದ್ವಾರ, ಸಿದ್ಧಯ್ಯನ ಬಾಗಿಲು, ಸಂಪಿಗೆ ಸಿದ್ದೇಶ್ವರ, ಆನೆ ಬಾಗಿಲು, ಪತೇದರ್‍ವಾಜ್(ಜಯದ ಬಾಗಿಲು) ಎಂಬ ಹೆಸರುಗಳಿವೆ. ಇದರ ಮೂಲ ಹೆಸರು ಸಂಪಿಗೆ ಸಿದ್ಧೇಶ್ವರನ ಬಾಗಿಲು ಎಂದು ಹೇಳಲಾಗಿದೆ. ಈ ಬಾಗಿಲು ಕೂಡ ೧೦ ಅಡಿ ಅಗಲ, ೧೫ ಅಡಿ ಎತ್ತರದಲ್ಲಿ ನಿರ್ಮಿಸಲಾಗಿದೆ. ಬಾಗಿಲಿನ ಉದ್ದ ೨೮ ಅಡಿ ಇದ್ದು, ಕೋಟೆಯ ಗೋಡೆಯು ೨೫ ಅಡಿ ಎತ್ತರದಲ್ಲಿದೆ. ಬಾಗಿಲ ಮೇಲ್ಭಾಗದಲ್ಲಿ ಕರಿಯಕಲ್ಲಿನ ಎರಡು ಆನೆಗಳನ್ನು ಜೋಡಿಸಿ ಅಂದವನ್ನು ಹೆಚ್ಚಿಸಲಾಗಿದೆ. ಈ ಆನೆಗಳಿಂದ ಆನೆಬಾಗಿಲು ಎಂದು ಹೆಸರಾಗಿದೆ. ಬಾಗಿಲ ಮುಂಭಾಗದಲ್ಲಿ ಚೌಕಾಕಾರದ ಅಂಕಣವಿದ್ದು ಇದರ ಪೂರ್ವಕ್ಕೊಂದು ಮಹಾದ್ವಾರವನ್ನು ರಚಿಸಲಾಗಿದೆ. ಇತ್ತೀಚೆಗೆ ಈ ಬಾಗಿಲನ್ನು ಮುಚ್ಚಿ ಲಕ್ಷ್ಮೀನಾರಾಯಣ ದೇವಸ್ಥಾನವನ್ನಾಗಿ

[illegible]

ಪರಿವರ್ತಿಸಲಾಗಿದೆ. ಚೌಕಾಕಾರದ ಅಂಕಣದಲ್ಲಿ ಹುಲಿಯ ಕಾಳಗ, ಗೂಳಿ ಕಾದಾಟ, ಟಗರು ಪಂದ್ಯಾಟ ಮುಂತಾದ ಕ್ರೀಡೆಗಳು ಹಿಂದೆ ನಡೆಯುತ್ತಿದ್ದವೆನ್ನಲಾಗಿದೆ. ಕೋಟೆಯ ಹನುಮ, ಸಂವೃಷ್ಟಿ ಆಂಜನೇಯ ಗುಡಿಗಳು ಈ ಅಂಕಣದಲ್ಲಿವೆ.

ದಕ್ಷಿಣ ಭಾಗದ ಲಾಲ್‌ಕೋಟೆ ಮಹಾದ್ವಾರವು ಎರಡು ಬತೇರಿಗಳ ಮಧ್ಯೆ ಪ್ರವೇಶದ್ವಾರವನ್ನು ಹೊಂದಿದೆ. ಈ ಬಾಗಿಲನ್ನು ಅಕ್ಕತಂಗಿ, ಜೋಡುಬತೇರಿ ಬಾಗಿಲು ಎಂದು, ಪಾಳೆಗಾರರ ಆರಾಧ್ಯದೈವ ಅಹೋಬಲ ನರಸಿಂಹನ ಹೆಸರಿನಲ್ಲಿ ನರಸಿಂಹನ ಬಾಗಿಲೆಂದೂ ಕರೆಯುವರು. ಬತೇರಿ ಮುಂಭಾಗದಲ್ಲಿ ಇರುವ ಕಂದಕವನ್ನು ದಾಟಲು ಎಳೆಯುವ ಸೇತುವೆಯನ್ನು(ತೂಗು ಸೇತುವೆ) ನಿರ್ಮಿಸಲಾಗಿದೆ. ಇಂದಿಗೂ ಅದರ ಅವಶೇಷಗಳು ಕಂಡುಬರುತ್ತವೆ. ಹಾಸುಗಲ್ಲಿನ ಮೇಲೆ ರೈಲ್ವೆ ಹಳಿಯಾಕಾರದ ಕಲ್ಲಿನ ಹಳಿಗಳಿವೆ. ಈ ಸೇತುವೆಯು ೩.೨ ಅಡಿ ಅಗಲ, ೪.೨ ಅಡಿ ಉದ್ದವಿದೆ.

ಜೋಡು ಬತೇರಿಗಳಲ್ಲಿ ವಿಶೇಷ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಎಡ. ಬತೇರಿಯಲ್ಲಿ ೨೪ ಕೋವಿ ಕಿಂಡಿಗಳು, ಬಲ ಬತೇರಿಯಲ್ಲಿ ೨೨ ಕೋವಿ ಕಿಂಡಿಗಳಿವೆ. ಒಂದೊಂದು ಕೋವಿ ಕಿಂಡಿಗಳು ೩.೫ ಅಡಿ ಅಂತರದಿಂದ ೪ ಅಡಿ ಅಂತರದವರೆಗೆ ಇವೆ. ಈ ಕೋವಿ ಕಿಂಡಿಗಳನ್ನು ೧೩°ಯಲ್ಲಿ ನಿರ್ಮಿಸಿದ್ದಾರೆ. ಕೋವಿಕಿಂಡಿಗಳನ್ನು ವಿಶೇಷ ರೀತಿಯಲ್ಲಿ ಅಳವಡಿಸಿದ್ದಾರೆ. ಬತೇರಿಯ ಮೇಲೆ ಪಹರೆ ಗೃಹಗಳನ್ನು ನಿರ್ಮಿಸಿದ್ದಾರೆ. ಶಸ್ತ್ರಾಸ್ತ್ರಗಳನ್ನಿಡಲು ಬತೇರಿಯ ದಿಂಡುಗಳಲ್ಲಿ ಗೂಡುಗಳನ್ನು ಮಾಡಿದ್ದಾರೆ. ಬತೇರಿಗಳ ನಡುವೆ ಹಾದು ಒಳಗೆ ನಡೆದರೆ ಚೌಕಾಕಾರದ ಅಂಕಣವಿದೆ. ಈ ಅಂಕಣವು ೩೩x೨೭ ಅಳತೆಯಲ್ಲಿದೆ. ಸುತ್ತಲೂ ಇರುವ ಎತ್ತರವಾದ ಗೋಡೆಯಲ್ಲಿ ೧೯ ಕೋವಿಕಿಂಡಿಗಳಿವೆ. ಹೊರಗಿನಿಂದ ನೇರವಾಗಿ ಬಂದ ಶತ್ರುಗಳನ್ನು ಸದೆಬಡೆಯಲು ವ್ಯವಸ್ಥಿತವಾಗಿ ಬತೇರಿ ಮತ್ತು ಬಾಗಿಲನ್ನು ನಿರ್ಮಿಸಲಾಗಿದೆ. ಅಂಕಣದ ಪಶ್ಚಿಮಕ್ಕೆ ಬಾಗಿಲಿದೆ. ಈ ಬಾಗಿಲನ್ನು ೭.೭x೯x೧೧ ಅಡಿಗಳಲ್ಲಿ ನಿರ್ಮಿಸಲಾಗಿದೆ. ಬಾಗಿಲ ಎರಡೂ ಭಾಗದಲ್ಲಿ ಕಾವಲುಗಾರರ ಚಾವಡಿಗಳಿವೆ.

ಇಲ್ಲಿಂದ ಪಶ್ಚಿಮಕ್ಕೆ ಅನತಿ ದೂರದಲ್ಲಿ ಚಿಕ್ಕ ಸುರಂಗ ಮಾರ್ಗವಿದೆ. ಇದಕ್ಕೆ ಕತ್ತರಿಬಾಗಿಲೆಂದು ಕರೆಯುತ್ತಾರೆ. ಈ ಬಾಗಿಲು ೬ ಅಡಿ ಅಗಲ, ೮ ಅಡಿ ಎತ್ತರ ಮತ್ತು ೨೦ ಅಡಿ ಉದ್ದವಿದೆ. ಈ ಬಾಗಿಲು ೧೫ ಮೀ. ಅಗಲವಾಗಿರುವ ಕಂದಕಕ್ಕೆ ಪ್ರವೇಶ ಕಲ್ಪಿಸುತ್ತದೆ. ಈ ಕೋಟೆ ಸಾಲಿನಲ್ಲಿ ಅನೇಕ ಬುರುಜುಗಳು ಒಂದರ ಪಕ್ಕದಲ್ಲೊಂದು ನಿರ್ಮಾಣಗೊಂಡಿವೆ. ಒಂದೊಂದು ಬುರುಜುಗಳು ವಿರುದ್ಧ ದಿಕ್ಕಿನಲ್ಲಿದ್ದು, ೭೦ ರಿಂದ ೧೨೦ ಮೀ. ವಿಸ್ತೀರ್ಣ ಹೊಂದಿದೆ. ಬುರುಜುಗಳ ಮೇಲ್ಭಾಗದಲ್ಲಿ ಪಹರೆ

[illegible]

ಗೂಡುಗಳಿವೆ. ಈ ಗೂಡುಗಳಿಂದ ಬೆಟ್ಟದ ಮೇಲಿರುವ ಮುಖ್ಯವಾದ ಕಾವಲು ಗೋಪುರುಗಳಿಗೆ ವೀಕ್ಷಣಾ ಸಂಪರ್ಕವನ್ನು ಕಲ್ಪಿಸಲಾಗಿದೆ. ಈ ಬುರುಜುಗಳ ಮೇಲೆ ಫಿರಂಗಿಗಳನ್ನಿಡಲು ಅವಕಾಶವಿದೆ. ಈ ಫಿರಂಗಿಗಳನ್ನು ಇಡುವ ಸ್ಥಳವನ್ನು ೨೦° ಕೋನದಲ್ಲಿ ರಚಿಸಲಾಗಿದೆ. ಇದೇ ರೀತಿ ಸುಮಾರು ೫೦ಕ್ಕೂ ಹೆಚ್ಚು ಫಿರಂಗಿ ಸ್ಥಳಗಳಿವೆ.

ಹೊರಸುತ್ತಿನ ಕೋಟೆಯ ವಾಯುವ್ಯ ದಿಕ್ಕಿನಲ್ಲೂ ದ್ವಾರಕ್ಕೆ ಉಚ್ಚಂಗೆಮ್ಮ ಅಥವಾ ಉತ್ಸವಾಂಬ ಬಾಗಿಲೆಂದು ಕರೆಯುತ್ತಾರೆ. ಉಚ್ಚಂಗೆಮ್ಮ ಪಾಳೆಗಾರರ ಮನೆದೇವತೆಯಾಗಿದೆ. ಹೊರಭಾಗದಲ್ಲಿ ಪಾಳೆಗಾರ ಹಿರೇ ಮದಕರಿನಾಯಕನು ಕಟ್ಟಿಸಿರುವ ಸಿಹಿನೀರು ಹೊಂಡವಿದೆ. ಸ್ಥಳೀಯರು ಸಿಹಿನೀರಿನ ಹೊಂಡದ ಬಾಗಿಲೆಂದೇ ಕರೆಯುತ್ತಾರೆ. ಇಲ್ಲಿಂದ ಬಲವಾದ ಕೋಟೆಗೋಡೆಯು ಬೆಟ್ಟದ ಪಶ್ಚಿಮ ಭಾಗವನ್ನು ಸುತ್ತಿಕೊಂಡು ದಕ್ಷಿಣಕ್ಕೆ ಹನುಮನ ಬಾಗಿಲ ಮೂಲಕ ನೆಲ್ಲಿಕಾಯಿ ಸಿದ್ಧಪ್ಪನ ಬೆಟ್ಟದವರೆಗೂ ಹೋಗಿದೆ. ಈ ಸುತ್ತಿನ ಕೋಟೆಯು ೧೫.೫ ಅಡಿ ಅಗಲವಿದ್ದು, ೨೮ ಅಡಿ ಎತ್ತರವಿದೆ. ಹೊರಮೈಗೆ ೫೩ ಇಂಚು ಉದ್ದದ, ೧೯ ಇಂಚು ದಪ್ಪನಾದ ಕಲ್ಲುಗಳನ್ನು ಬಳಸಿ ಒಂದು ಕಲ್ಲು ಮತ್ತೊಂದರ ಜೊತೆಗೆ ಸರಿಯಾಗಿ ಹೊಂದಿಕೊಳ್ಳುವಂತೆ ಸಂದುಗಳಿಲ್ಲದೆ ಕಟ್ಟಲಾಗಿದೆ. ಇಂತಹ ದೊಡ್ಡ ಕಲ್ಲುಗಳನ್ನು ಮೇಲಕ್ಕೆ ಎತ್ತುವಾಗ ಆಗುವ ಭಾರವನ್ನು ಕಡಿಮೆ ಮಾಡುವುದಕ್ಕಾಗಿ ಬೆಣೆಯಾಕಾರದ ಕಲ್ಲುಗಳನ್ನು ಬಹಳ ಜಾಣ್ಮೆಯಿಂದ ಆಯತಾಕಾರದ ಕಲ್ಲುಗಳ ಬದಲಿಗೆ ಉಪಯೋಗಿಸಲಾಗಿದೆ. ಇವುಗಳ ಹೊರಭಾಗ ಚೌಕಾಕಾರವಾಗಿದ್ದು ಒಳಭಾಗ ಚೂಪಾಗಿರುತ್ತದೆ. ಒಳಭಾಗದಲ್ಲಿ ಕಲ್ಲುಗಳ ಮಧ್ಯದ ಸಂದುಗಳನ್ನು ಸಣ್ಣಕಲ್ಲು ಮತ್ತು ಮಣ್ಣಿನಿಂದ ತುಂಬಲಾಗಿದೆ. ಕೋಟೆಗೋಡೆಯ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಅಲ್ಲಲ್ಲಿ ಚೌಕಾಕಾರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಈ ಕೊತ್ತಲಗಳು ಚೌಕಾಕಾರದಲ್ಲಿ ಮುಂದೆ ಚಾಚಿಕೊಂಡಿರುವ ಕೋಟೆಗೋಡೆಯ ಭಾಗಗಳಾಗಿವೆ. ಯುದ್ಧದ ಸಮಯದಲ್ಲಿ ಹೆಚ್ಚು ಸೈನಿಕರು ನಿಲ್ಲಲು ಕೊತ್ತಲಗಳು ಉಪಯೋಗವಾಗುತ್ತವೆ. ಈ ಗೋಡೆಯ ಮೇಲ್ಭಾಗದಲ್ಲಿ ೮ ಅಡಿ ಎತ್ತರ, ೮ ಅಡಿ ದಪ್ಪದ ಮಣ್ಣಿನ ಕೋಟೆಯಿದ್ದು, ಕೋವಿಕಿಂಡಿಗಳಿವೆ. ಒಂದೊಂದು ಕೋವಿಕಿಂಡಿಗಳನ್ನು ಮೂರು ದಿಕ್ಕುಗಳ ಗುರಿಯನ್ನಿಟ್ಟು ರಚಿಸಲಾಗಿದೆ. ಹೊರಕೋಟೆಯ ಹಿಂಭಾಗ ಇಪ್ಪತ್ತೆಂಟು ಅಗಲದ ಸೈನಿಕರು ನಡೆದಾಡುವ ವೇದಿಕೆ ಅಥವಾ ಅಟ್ಟಾಲಕವನ್ನು ರಚಿಸಲಾಗಿದೆ.

ಈ ಹೊರಸುತ್ತಿನ ಕೊನೆಯ ಬಾಗಿಲು ಹನುಮನ ಬಾಗಿಲೆಂದು ಕರೆಯುತ್ತಾರೆ. ಇದು ಇಕ್ಕಟ್ಟಾದ ಕಣಿವೆ ಭಾಗದಲ್ಲಿ ನಿರ್ಮಿತವಾಗಿದ್ದು, ವೇದಿಕೆಯ ಮೇಲೇರಲು ಅಲ್ಲಲ್ಲಿ ಮೆಟ್ಟಿಲುಗಳಿವೆ. ಹನುಮನ

[illegible]

ಬಾಗಿಲ ಬಳಿ ಇರುವ ಬುರುಜು ೩೦ ಅಡಿ ಎತ್ತರವಾಗಿದ್ದು, ಬುರುಜಿಗೆ ೫೮ x ೪೫ ಇಂಚಿನ ಕಲ್ಲುಗಳನ್ನು ಬಳಸಲಾಗಿದೆ. ಬಾಗಿಲ ಪಕ್ಕದಲ್ಲಿ ಹಾಗೂ ಬಾಗಿಲನ ಮೇಲೆ ವಿಶೇಷವಾದ ರಕ್ಷಣಾ ವ್ಯವಸ್ಥೆ ಮಾಡಲಾಗಿದೆ. ಈ ದ್ವಾರದ ಸನಿಹದಲ್ಲೇ ವೀರವನಿತೆ ಒನಕೆ ಓಬವ್ವ ಸಾಹಸ ತೋರಿದ ಒನಕೆ ಕಿಂಡಿ ಇದೆ. ಈ ಕಿಂಡಿಯ ಉತ್ತರಕ್ಕೆ ಪಲ್ಲುಗಣೇಶ್ವರ ದೇವಾಲಯದ ಸಮೀಪದಲ್ಲಿ ಹೊರಕೋಟೆಗೆ ಒಂದು ದಿಡ್ಡಿ ಬಾಗಿಲಿದೆ. ಸ್ಥಳ ಪರಿಚಯವಿಲ್ಲದವರಿಗೆ ಬಂಡೆಗಳ ಮರೆಯಲ್ಲಿ ಇರುವ ಈ ಬಾಗಿಲು ಬೇಗನೆ ಗೋಚರಿಸುವುದಿಲ್ಲ. ದಿಡ್ಡಿಬಾಗಿಲು ೫೬ ಅಂಗುಲ ಅಗಲ, ೭೦ ಅಂಗುಲ ಎತ್ತರವಿದ್ದು, ಈ ಬಾಗಿಲಿನ ಮುಂಭಾಗ ದೊಡ್ಡ ಗುಂಡು ಬಂಡೆಯೊಂದರ ಕೆಳಗೆ ವ್ಯವಸ್ಥಿತವಾದ ಗವಿಯಿದೆ.

ಆರು ಮತ್ತು ಏಳನೆ ಸುತ್ತಿನ ಕೋಟೆಯ ಮಧ್ಯಂತರದಲ್ಲಿ ಅನೇಕ ಸ್ಮಾರಕಗಳಿವೆ. ಇಂದು ಚಿಕ್ಕಪೇಟೆ, ದೊಡ್ಡಪೇಟೆಗಳ ಮುಖ್ಯ ರಸ್ತೆಗಳು ಪಾಳೆಯಗಾರರ ಅವಧಿಯಲ್ಲಿ ಸೂರ್ಯಬೀದಿ, ಚಂದ್ರಬೀದಿಗಳಾಗಿದ್ದವೆಂದು ಹೇಳಲಾಗಿದೆ. ಈ ಎರಡು ಬೀದಿಗಳು ಕೂಡುವ ಸ್ಥಳದಲ್ಲಿ ಪಾಳೆಯಗಾರರ ಮನೆದೇವತೆ ಶ್ರೀ ಉತ್ಸವಾಂಬ ದೇವಲಯವಿದೆ. ಅಲ್ಲದೆ, ಬಸವೇಶ್ವರ, ಪಾತಾಳೇಶ್ವರ, ಜುಮ್ಮಮಸೀದಿ, ಆಂಜನೇಯ, ಅಂತರಗಟ್ಟಮ್ಮ, ತಿಪ್ಪೀರಘಟ್ಟಮ್ಮ, ಕೂಡಲಿ ಶೃಂಗೇರಿಮಠ, ಉಮಾಮಹೇಶ್ವರ, ಮುಂತಾದ ದೇವಾಲಯಗಳು ಹಾಗೂ ಗರಡಿಮನೆಗಳಿವೆ.

೪.೩.೩ ಪ್ರಮುಖ ಬತೇರಿಗಳು

ಚಿತ್ರದುರ್ಗದ ಬೆಟ್ಟ ಈ ಹಿಂದೆ ಹೇಳಿದಂತೆ ಸಪ್ತಶಿಖರಗಳಿಂದ ಕೂಡಿದೆ. ಈ ಸಪ್ತ ಶಿಖರಗಳನ್ನು ಬಳಸಿಕೊಂಡು ವಿಸ್ತಾರವಾದ ಕೋಟೆಯನ್ನು ನಿರ್ಮಿಸಲಾಗಿದೆ. ಈ ಸಪ್ತ ಶಿಖರಗಳ ವಿವಿಧ ಭಾಗಗಳಲ್ಲಿ ನಿರ್ಮಿಸಿರುವ ದ್ವಾರಬಾಗಿಲು, ಅರಮನೆ, ಕಂದಕ, ಖಜಾನೆ, ಬುರುಜು ಕಣಿವೆ ಪ್ರದೇಶಗಳೊಡನೆ ಸಂಪರ್ಕ ಸಾಧಿಸಲು ಸಪ್ತಶಿಖರಗಳ ಮೇಲ್ಭಾಗದಲ್ಲಿ ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ ಬತೇರಿಗಳನ್ನು ಸ್ಥಾಪಿಸಲಾಗಿದೆ. ಇವುಗಳನ್ನು ಹೆಚ್ಚಾಗಿ ಕೋಟೆಗೋಡೆಯಿಂದ ಪ್ರತ್ಯೇಕಗೊಳಿಸಿ ಕಟ್ಟಲಾಗಿದೆ. ಕೋಟೆಗೆ ಲಗ್ಗೆಹಾಕಲು ಬರುವ ಶತ್ರುಗಳನ್ನು ದೂರದಿಂದಲೇ ವೀಕ್ಷಿಸಿ ಅಪಾಯದ ಸಂಕೇತಗಳನ್ನು ಅರಿಯಲು ಇವು ಸಹಾಯಕವಾಗಿದ್ದವು ಹಾಗೂ ಒಂದು ಬತೇರಿಯಿಂದ ಮತ್ತೊಂದು ಬತೇರಿಗೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದವು. ಸೈನಿಕರು ಬತೇರಿಗಳನ್ನು ಗುರುತಿಸುವ ಸಲುವಾಗಿ ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಇಂತಹ ಬತೇರಿಗಳು ಕೋಟೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ.

ಅವುಗಳಲ್ಲಿ ಮುಖ್ಯವಾದವುಗಳೆಂದರೆ ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ, ರಣಬತೇರಿ, ಲಾಲ್‌ಬತೇರಿ, ತುಪ್ಪದಕೊಳ ಬತೇರಿ, ಕಹಳೆ ಬತೇರಿ, ಬಸವನಬತೇರಿ ಹಾಗೂ ಝಂಡಾ ಬತೇರಿಗಳಾಗಿವೆ.

೧. ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ

ದಕ್ಷಿಣ ಭಾಗದಲ್ಲಿ ಅತ್ಯಂತ ಎತ್ತರ ಬೆಟ್ಟದ ಮೇಲೆ ನಿರ್ಮಿಸಿರುವ ಬತೇರಿಯೇ ನೆಲ್ಲಿಕಾಯಿ ಸಿದ್ದಪ್ಪನ ಬತೇರಿ. ಈ ಬತೇರಿಯ ಮುಂಭಾಗ ನೆಲ್ಲಿಕಾಯಿಯಷ್ಟು ಲಿಂಗವನ್ನು ಹುಟ್ಟು ಬಂಡೆಯ ಮೇಲೆ ಕೊರೆದು ದೇವಾಲಯವನ್ನು ನಿರ್ಮಿಸಿರುವುದರಿಂದ, ಈ ಬತೇರಿಗೆ ನೆಲ್ಲಿಕಾಯಿ ಬತೇರಿ ಎಂಬ ಹೆಸರು ಬಂದಿದೆ. ಈ ಬೆಟ್ಟ ಪರಿಸರವು ಕಲ್ಲುಬಂಡೆಗಳಿಂದ ಕೂಡಿದ ದುರ್ಗಮ ಪ್ರದೇಶ. ಗೋಪಾಲಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿರುವ ಹೊರಸುತ್ತಿನ ಕೋಟೆಯಿಂದ ಹಾಗೂ ಲಾಲ್‌ಬತೇರಿಯಿಂದಲೂ ಈ ಬತೇರಿಗೆ ಬರಲು ಮಾರ್ಗಗಳಿವೆ. ಈ ಬಂಡೆಗಳ ಮಧ್ಯೆ ನೂರಾರು ಗುಹೆಗಳಿವೆ. ಬತೇರಿಯು ಉತ್ತರದಕ್ಷಿಣವಾಗಿ ೪೧ ಅಡಿ ಪೂರ್ವ ಪಶ್ಚಿಮವಾಗಿ ೩೫ ಅಡಿ ಇದ್ದು, ೪ ಮೀ. ಎತ್ತರವಿದೆ. ಮೇಲ್ಭಾಗದಲ್ಲಿ ಒಂದು ಅಡಿ ದಪ್ಪದ ಗಾರೆ ದಿಂಡು ಇದೆ. ಇಲ್ಲಿಂದ ಚಿತ್ರದುರ್ಗ ಬೆಟ್ಟದ ಪರಿಸರವೆಲ್ಲವೂ ಗೋಚರಿಸುತ್ತಿದೆ. ಅಲ್ಲದೆ, ಹತ್ತಿರವಿರುವ ಬೆಟ್ಟಗುಡ್ಡದ ಸಾಲುಗಳು, ಕಣಿವೆ ಪ್ರದೇಶಗಳು ಕಂಡುಬರುತ್ತವೆ. ದಕ್ಷಿಣ ಭಾಗ ಮತ್ತು ನೈರುತ್ಯದ ಭಾಗಗಳನ್ನು ಬಿಟ್ಟರೆ ಉಳಿದಂತೆ ಪಶ್ಚಿಮದಲ್ಲಿ ಹೊಳಲ್ಕೆರೆ ಬೆಟ್ಟದ ಸಾಲು, ಕಂದವಾಡಿ ಗುಡ್ಡ, ವಾಯುವ್ಯಕ್ಕೆ ಸೀಬಾರದ ಕಣಿವೆ ಉತ್ತರದಲ್ಲಿ ರಂಗವ್ವನಹಳ್ಳಿ ಗುಡ್ಡಗಳು, ಈಶಾನ್ಯದಲ್ಲಿ ಜಟಂಗಿರಾಮೇಶ್ವರ, ಮೊಳಕಾಲ್ಮೂರು ಗಿರಿಶ್ರೇಣಿಗಳು, ಪೂರ್ವದಲ್ಲಿ ತಳಕಿನಗುಡ್ಡ, ನಿಡುಗಲ್ಲು ಮುಂತಾದ ಬೆಟ್ಟದ ಸಾಲುಗಳನ್ನು ಈ ಬತೇರಿಯಿಂದ ವೀಕ್ಷಿಸಬಹುದು. ಚಿತ್ರದುರ್ಗದ ಪಾಳೆಯಗಾರರು ಈ ಎಲ್ಲಾ ಗುಡ್ಡಗಳನ್ನು ಒಳಗೊಂಡಂತೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ್ದ ಸಂದರ್ಭದಲ್ಲಿ ಈ ಬತೇರಿಯ ಮೇಲಿನಿಂದ ಸಂಪರ್ಕವನ್ನು ಕಲ್ಪಿಸಿಕೊಂಡಿದ್ದರೆನ್ನಬಹುದು. ಬತೇರಿಯ ಸಮೀಪದಲ್ಲಿ ೮x೧೧ ಮೀ. ವಿಸ್ತಾರವಿರುವ ಕಲ್ಲು ಮಂಟಪವಿದ್ದು, ಈ ಮಂಟಪವನ್ನು ಬೊಪ್ಪಯ್ಯನ ಚಾವಡಿ ಎಂದು ಹೇಳುತ್ತಾರೆ. ಈ ಮಂಟಪದಲ್ಲಿ ೨೦ ಕಂಬಗಳಿವೆ.

ನೆಲ್ಲಿಕಾಯಿ ಸಿದ್ಧಪ್ಪನ ಬತೇರಿಯಿಂದ ಕಹಳೆ ಬತೇರಿಯವರೆಗೂ ಸಾಗಿರುವ ಕೋಟೆಯ ಸಾಲು ೯ ಅಡಿ ಅಗಲವಾಗಿದ್ದು, ೨೫ ಅಡಿ ಎತ್ತರವಾಗಿದೆ. ೨೪x೧೮ ಇಂಚಿನ ಕಲ್ಲುಗಳನ್ನು ಗೋಡೆಗೆ ಬಳಸಲಾಗಿದೆ. ಬತೇರಿಯ ದಕ್ಷಿಣಕ್ಕೆ ಹುಟ್ಟುಬಂಡೆಯ ಮೇಲೆ ಕತ್ತಿಯನ್ನು ಮಸಿಯುತ್ತಿದ್ದರೆನ್ನಲಾದ

ಮಸಗಲ್ಲುಗಳಿವೆ. ಕೋಟೆಗೋಡೆಯ ಮುಂದೆ ಚಿಕ್ಕ ಮಂಟಪವಿದ್ದು, ಮಂಟಪದೊಳಗೆ ಹಾಗೂ ಗೋಡೆಗೆ ಹೊಂದಿಕೊಂಡಂತೆ ಕಪ್ಪುಶಿಲೆಯ ೨೦x೨೮ ಇಂಚಿನ ಉದ್ದದ ೯ ಇಂಚು ದಪ್ಪದ ಕಲ್ಲಿನ ಮುಂಭಾಗಕ್ಕೆ ಬಸವನ ರೂಪ ಕೊಡಲಾಗಿದೆ. ಬಸವನ ಎರಡೂ ಕಡೆಯಲ್ಲಿ ಐದು ಕೋವಿ ಕಿಂಡಿಗಳನ್ನು ವಿರುದ್ಧ ದಿಕ್ಕಿನಲ್ಲಿ ರಚಿಸಿದ್ದಾರೆ. ಕೋಟೆಯೊಳಗಿನಿಂದ ನೋಡುಗರಿಗೆ ಒಂದೇ ಕಂಡಿಯಾಗಿ ಕಂಡರೂ ಒಳಭಾಗದಲ್ಲಿ ೫ ಭಾಗಗಳ ದಿಕ್ಕನ್ನು ನೋಡಬಹುದಾಗಿದೆ. ಈ ಬತೇರಿಯ ಉತ್ತರಕ್ಕೆ ಕಹಳೆ ಬತೇರಿ ದಕ್ಷಿಣಕ್ಕೆ ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ ಕೋಟೆಗಳಿಂದ ಸಂಪರ್ಕ ಕಲ್ಪಿಸಲಾಗಿದೆ. ಪೂರ್ವ ಭಾಗದಲ್ಲಿ ಎರಡು ಸುತ್ತಿನ ಕೋಟೆಯಿದ್ದು, ವಿಶೇಷ ರಕ್ಷಣಾತ್ಮಕ ಪ್ರದೇಶವಿದು.

ಗೋಪಾಲಸ್ವಾಮಿ ದೇವಸ್ಥಾನದಿಂದ ನೆಲ್ಲಿಕಾಯಿ ಸಿದ್ಧಪ್ಪನ ಬತೇರಿಗೆ ಬರುವಾಗ ಅನೇಕ ಸ್ಮಾರಕಗಳನ್ನು ಕಾಣಬಹುದು. ಭಾರೀ ದೊಡ್ಡಗಾತ್ರದ ಕಲ್ಲುಗಳಿಂದ ವ್ಯವಸ್ಥಿತವಾದ ಕೋಟೆಯ ಸಾಲುಗಳು ಈ ಭಾಗದಲ್ಲಿವೆ. ಕಡಿದಾದ ಬಂಡೆಯ ಮೇಲೆ ೪೩ ಮೆಟ್ಟಿಲುಗಳನ್ನು ಕೊರೆಯಲಾಗಿದೆ. ಮೆಟ್ಟಿಲುಗಳ ಉದ್ದ ೬೨ ಇಂಚು ಇದ್ದು, ಅಗಲ ೧೧ ಇಂಚು ಇದೆ. ಇದರ ಮುಂಭಾಗ ೧೭x೧೭ ಮೀ. ಆಳತೆಯ ಗಾರೆದೊಣೆ ಇದೆ. ಗಾರೆದೊಣೆಯ ಹಿಂಭಾಗದ ೨೮x೨೮ ಅಡಿಯಲ್ಲಿ ನಿರ್ಮಾಣಗೊಂಡ ೧೬ ಕಂಬಗಳ ಕಲ್ಲಿನ ಮಂಟಪವಿದೆ. ಮಂಟಪದ ಹಿಂಭಾಗ ಚೋರಕಿಂಡಿಯಿದೆ. ಈ ಚೋರಕಿಂಡಿಯು ಇಳಿಜಾರಾದ ಬಂಡೆಯ ಮೇಲೆ ನಿರ್ಮಿಸಲಾಗಿದೆ. ಬಂಡೆಯ ಎರಡೂ ಕಡೆ ಕಬ್ಬಿಣದ ಸಲಾಕೆಗಳನ್ನು ಬಡಿದು ಗೋಡೆ ಜಾರದಂತೆ ಕಿಂಡಿಯನ್ನು ನಿರ್ಮಿಸಿದ್ದಾರೆ. ಮೇಲ್ಭಾಗದಲ್ಲಿ ಪಾಳುಬಿದ್ದಿರುವ ಮಂಟಪದ ಬಳಿ ೧೫೦ ಮೀ. ವಿಸ್ತೀರ್ಣ ಹೊಂದಿರುವ ವಿಶಾಲವಾದ ಬತೇರಿ ಇದೆ. ಬತೇರಿಯೊಳಗೆ ಮದ್ದು ಸಂಗ್ರಹಿಸಲು ನಿರ್ಮಿಸಿದ ಚಿಕ್ಕ ಕೋಣೆಯಿದೆ. ಹೀಗೆ ನೆಲ್ಲಿಕಾಯಿ ಸಿದ್ಧಪ್ಪನ ಬೆಟ್ಟ ಪರಿಸರವು ಅನೇಕ ಸ್ಮಾರಕಗಳನ್ನು ಹೊಂದಿದೆ.

ಆ. ರಣಬತೇರಿ

ಪಶ್ಚಿಮ ದಿಕ್ಕಿನ ಕೋಟೆಯ ಕೊನೆಯ ಹಾಗೂ ವ್ಯವಸ್ಥಿತವಾದ ಬತೇರಿಗಳಲ್ಲಿ ರಣಬತೇರಿಯೂ ಒಂದು. ಈ ಬತೇರಿಯನ್ನು ರಣಮಂಡಲದ ಬತೇರಿ ಎಂತಲೂ ಕರೆಯುತ್ತಾರೆ. ಯುದ್ಧದ ಸಂದರ್ಭದಲ್ಲಿ ಈ ಬತೇರಿಯ ಮೇಲಿಂದ ರಣಕಹಳೆಯನ್ನು ಊದುತ್ತಿದ್ದರೆಂದು ಹೇಳಲಾಗಿದೆ. ಇದು ಆಯಕಟ್ಟಿನ ಸ್ಥಳದಲ್ಲಿ ನಿರ್ಮಾಣಗೊಂಡಿದೆ. ಪೂರ್ವ ಪಶ್ಚಿಮವಾಗಿ ೨೫ ಮೀ. ಹಾಗೂ ಉತ್ತರ ದಕ್ಷಿಣವಾಗಿ ೧೯ ಮೀ. ವಿಸ್ತಾರವಾಗಿರುವ ಈ ಬತೇರಿಯು ೩ ಮೀ. ಎತ್ತರವಾಗಿದೆ. ಬತೇರಿಗೆ ೨x೩ ಅಡಿಗಳ ದಪ್ಪದ

ಕಲ್ಲುಗಳನ್ನು ಬಳಸಿದ್ದಾರೆ. ಇದರ ಸುತ್ತ ಇರುವ ಕೋಟೆಗೆ ರಣಮಂಡಲದ ಕೋಟೆಯ ಸುತ್ತು ಎಂದು ಹೇಳಲಾಗಿದೆ. ಈ ಬತೇರಿಯ ಮೇಲಿನಿಂದ ಅರಮನೆ ಪಾಳು, ಗೋಪಾಲಸ್ವಾಮಿ ಹೊಂಡ, ಝುಂಡಾ ಬತೇರಿ, ಭೀಮನ ಕಲ್ಲು, ಬಸವನ ಬುರುಜು, ಚಂದ್ರವಳ್ಳಿ ಪ್ರದೇಶ, ದವಳಪ್ಪನ ಗುಡ್ಡ, ಕೆಂಪಯ್ಯನ ಕೋಟೆ, ಓತನ ಕಲ್ಲು, ಜೋಗಿಮಟ್ಟಿ, ಕಂದವಾಡಿ ಗುಡ್ಡ ಮೊದಲಾದ ಪ್ರದೇಶಗಳನ್ನು ವೀಕ್ಷಿಸಬಹುದು. ಈ ಪ್ರದೇಶದಲ್ಲಿ ಅನೇಕ ನೀರಿನ ದೊಣೆಗಳು, ರಹಸ್ಯ ಸ್ಥಾನಗಳು ದೇವಾಲಯಗಳಿವೆ.

ಇ. ಲಾಲ್‌ಬತೇರಿ

ಲಾಲ್‌ಬತೇರಿಯು ಅರಮನೆ ಪಾಳಿನ ದಕ್ಷಿಣದ ಬೆಟ್ಟದ ಮೇಲಿದೆ. ಇದಕ್ಕೆ ಕೆಂಪು ಬತೇರಿ ಬೆಟ್ಟ ಎಂಬ ಹೆಸರಿದೆ. ಕೆಂಪು ವರ್ಣದ ಶಿಲೆಗಳಿಂದ ಕಟ್ಟಿರುವ ಈ ಬತೇರಿಯು ತುಂಬಾ ಸುಂದರವಾಗಿದೆ. ಲಾಲ್ ಬತೇರಿಯು ಚಂದ್ರಾಕಾರವಾಗಿದ್ದು, ೫೦ ಮೀ. ಸುತ್ತಳತೆ ಹಾಗೂ ೧೦ ಅಡಿ ಎತ್ತರದಲ್ಲಿದೆ. ಬತೇರಿಗೆ ೨೮x೯ ಇಂಚಿನ ಕಲ್ಲುಗಳನ್ನು ಬಳಸಲಾಗಿದೆ. ಇಲ್ಲಿಂದ ಆಗ್ನೇಯ ದಿಕ್ಕಿನಲ್ಲಿರುವ ಜೋಗಿಮಟ್ಟಿ, ಕುಂಚಿಗನಹಾಳ್ ಕಣಿವೆ, ಪೂರ್ವ ದಿಕ್ಕಿಗೆ ರಾಮದೇವರ ಒಡ್ಡು, ತಿಮ್ಮಣ್ಣನಾಯಕನ ಕೆರೆ, ಹೊರಸುತ್ತಿನ ಕೋಟೆಗಳು, ಪಹರೆ ಗೃಹಗಳು ಕಂಡುಬರುತ್ತವೆ.

ಈ. ತುಪ್ಪದಕೊಳ ಬತೇರಿ

ಬೆಟ್ಟದ ಮಧ್ಯಭಾಗದಲ್ಲಿ ದ್ವೀಪದಂತಿರುವ ಅರ್ಧಗೋಳಾಕಾರದ ಸೀಳು ಬಂಡೆಯೊಂದರ ಮೇಲೆ ಇರುವ ಬತೇರಿಗೆ ತುಪ್ಪದಕೊಳ ಬತೇರಿ ಎಂದು ಕರೆಯಲಾಗಿದೆ. ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಇಲ್ಲಿ ಕೊರೆದಿರುವ ಕಲ್ಲುಬಾವಿ ಹಿರಿದೆ ಎನ್ನಲಾಗಿದೆ. ಬೃಹನ್ಮಠದ ಹಿಂಭಾಗದಿಂದ ಈ ಕಡಿದಾದ ಬಂಡೆಯನ್ನು ಹತ್ತಲು ೧೪೪ ಹೆಜ್ಜೆಗಳನ್ನು ಕೊರೆದಿದ್ದಾರೆ. ಮೊದಲನೇ ಹೆಜ್ಜೆಯ ಬಳಿ ಇಬ್ಬರು ಭಕ್ತರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಒಂದು ಹೆಜ್ಜೆಯಿಂದ ಮತ್ತೊಂದು ಹೆಜ್ಜೆಗೆ ಕನಿಷ್ಠ ಒಂದು ಅಡಿ ಅಂತರವಿದೆ. ಇವುಗಳನ್ನು ಸ್ಥಳೀಯರು ಕುದುರೆ ಹೆಜ್ಜೆಗಳೆಂದು ಕರೆಯುತ್ತಾರೆ. ಈ ಬತೇರಿಯನ್ನು ಮೇಲೆ ದುಂಡಾಕಾರದ ವಿಶಾಲವಾದ ಬತೇರಿಯಿದೆ. ಅದರ ಮೇಲೆ ಅರ್ಧ ಹೂತುಹೋದ ಕಲ್ಲು ಮಂಟಪದ ಅವಶೇಷಗಳಿವೆ. ಬತೇರಿಗೆ ಹೊಂದಿಕೊಂಡಂತೆ ೮ ಅಡಿ ಆಳದ ದೊಣೆಯಿದೆ. ಇವುಗಳ ಸಮೀಪದಲ್ಲಿ ತುಪ್ಪದ ಕೊಳವಿದೆ. ಬಾವಿಯ ಆಳ ಇಪ್ಪತ್ತೈದು ಅಡಿಗಳಷ್ಟಿದೆ. ಬಾವಿಯನ್ನು ಇಟ್ಟಿಗೆ ಮತ್ತು ಸಯುಗಾರೆಯಿಂದ ನಿರ್ಮಿಸಿದ ೯ ಅಡಿ ಎತ್ತರದ ಮಂಟಪವೂ ಅದನ್ನು ಪ್ರವೇಶಿಸಲು ೩ ಅಡಿ ಎತ್ತರದ

ಪುಟ್ಟ ಬಾಗಿಲಿದೆ. ಬಾವಿಯೊಳಗೆ ಇಳಿಯಲು ೧೪ ಮೆಟ್ಟಿಲುಗಳಿದ್ದು, ಬಾವಿಯ ಮೇಲ್ಭಾಗವನ್ನು ೮ ಕಲ್ಲು ತೊಲೆಗಳಿಂದ ಮುಚ್ಚಿದ್ದಾರೆ. ಈ ಕಲ್ಲುಹಾಸುಗಳ ಮೇಲೆ ಗಾರೆ ಹಾಕಿದ್ದಾರೆ. ಬಾವಿಯ ಒಳಬದಿ ೨೫ ಅಡಿ ಉದ್ದ, ೪ ಅಡಿ ೧೦ ಅಂಗುಲ ಅಗಲವಿದೆ. ಗಾಳಿ ಬೆಳಕಿಗೆ ಮೂರು ಕಿಂಡಿಗಳನ್ನು ಕಲ್ಲುಗಳ ಮಧ್ಯೆ ಬಿಟ್ಟಿದ್ದಾರೆ. ಇಲ್ಲಿರುವ ಎಲ್ಲಾ ವ್ಯವಸ್ಥೆಗಳನ್ನು ಗಮನಿಸಿದರೆ ಇದು ಮದ್ದಿ ಮನೆ ಅಥವಾ ಮದ್ದು ಸಂಗ್ರಹ ಕೋಣೆಯಾಗಿತ್ತೆನ್ನಬಹುದು. ಏಕೆಂದರೆ ಬತೇರಿಯ ಮೇಲೆ ಪಹರೆ ಕಾಯುವ ಸೈನಿಕರಿಗೆ ಸಾಕಾಗುವಷ್ಟು ಮದ್ದನ್ನು ಇಲ್ಲಿ ಸಂಗ್ರಹಿಸುತ್ತಿದ್ದರೆನ್ನಬಹುದು. ಈ ಬತೇರಿಯು ಕಡಿದಾದ ಬಂಡೆಯ ಮೇಲಿರುವುದರಿಂದ ತುರ್ತು ಪರಿಸ್ಥಿತಿಗಳಲ್ಲಿ ಬೇಗನೆ ಶಸ್ತ್ರಾಸ್ತ್ರಗಳನ್ನು ಪೂರೈಸಲು ಸಾಧ್ಯವಾಗದೆ ಇರುತ್ತಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಇಲ್ಲಿರುವ ಕೋಣೆಯೊಳಗೆ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಡುತ್ತಿದ್ದರು. ಕಡಿದಾದ ಬಂಡೆಯ ಮೇಲೆ ಕೋಟೆ ಹತ್ತುವ ತರಬೇತಿಯನ್ನು ಹಿಂದೆ ಸೈನಿಕರಿಗೆ ಕೊಡುತ್ತಿದ್ದರೆಂದು ಹೇಳಲಾಗಿದೆ. ಬಹುಶಃ ಈ ಸಂದರ್ಭದಲ್ಲಿ ಈ ಬಂಡೆಯ ಮೇಲೆ ತುಪ್ಪವನ್ನು ಅಥವಾ ಎಣ್ಣೆಯನ್ನು ಸವರುತ್ತಿದ್ದರಿಂದ ತುಪ್ಪದ ಕೊಳದ ಬತೇರಿ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಈ ಬತೇರಿಯಿಂದ ಅರಮನೆ ಪ್ರದೇಶ, ಒನಕೆಕಿಂಡಿ ಸಾಲು, ರಣಬತೇರಿ, ಕಹಳೆ ಬತೇರಿ, ಲಾಲ್‌ಬತೇರಿ, ಝುಂಡಾ ಬತೇರಿ ಬಸವನ ಬತೇರಿ, ಭೀಮನ ಬಂಡೆ-ಹೀಗೆ ಕೋಟೆಯ ಇಡೀ ಸುತ್ತ ಪ್ರದೇಶವು ಕಂಡುಬರುತ್ತದೆ.

ಉ. ಕಹಳೆ ಬತೇರಿ

ಬಸವನ ಬತೇರಿಯ ದಕ್ಷಿಣ ಭಾಗಕ್ಕೆ ಮತ್ತು ಅರಮನೆಯ ಪಾಳಿನ ಪೂರ್ವ ಬೆಟ್ಟದ ಮೇಲಿರುವ ಬತೇರಿಯೇ ಕಹಳೆ ಬತೇರಿ. ಕಹಳೆ ಬತೇರಿಯನ್ನು ಹತ್ತಲು ದುರ್ಗಮವಾದ ದಾರಿಯಿದೆ. ಹೆಸರೇ ಹೇಳುವಂತೆ ಈ ಬತೇರಿಯ ಮೇಲೆ ಕಹಳೆಯನ್ನೂದುವವನು ಇದ್ದುದರಿಂದ ಈ ಹೆಸರು ಬಂದಿದೆ. ಈ ಬತೇರಿಯು ಆಯಕಟ್ಟಿನ ಸ್ಥಳದಲ್ಲಿ ಇದೆಯಲ್ಲದೆ, ಬೆಟ್ಟದ ಎಲ್ಲಾ ಬುರುಜು ಬತೇರಿಗಳಿಂದ ವೀಕ್ಷಣಾ ಸಂಪರ್ಕವನ್ನು ಕಲ್ಪಿಸಿಕೊಂಡಿದೆ. ಪೂರ್ವ ದಿಕ್ಕಿನಲ್ಲಿ ಸುಮಾರು ೧೫ ಕಿ.ಮೀ. ದೂರದಲ್ಲಿರುವ ನನ್ನಿವಾಳದ ಏಕಶಿಲಾ ಬೆಟ್ಟವು ಇಲ್ಲಿಗೆ ಗೋಚರಿಸುತ್ತದೆ. ಅದೇ ರೀತಿ ಕುಂಚಿಗನಾಳ್ ಬತೇರಿ ಕಣಿವೆ, ಕಿರುಬನಕಲ್ಲು ಬತೇರಿ, ಚೋಳಗುಡ್ಡದ ಬತೇರಿ, ಗೋನೂರು ಬತೇರಿ-ಹೀಗೆ ದೂರ ಬೆಟ್ಟದ ಬುರುಜು ಬತೇರಿಗಳು ಕಹಳೆ ಬತೇರಿಗೆ ವೀಕ್ಷಣಾ ಸಂಪರ್ಕವನ್ನು ಕಲ್ಪಿಸಿಕೊಂಡಿವೆ. ಶತ್ರು ಸೈನ್ಯದ ಸುಳಿವು ತಿಳಿದಕೂಡಲೇ ನಿರ್ದಿಷ್ಟಪಡಿಸಿದ ಬಣ್ಣದ ಜ್ವಾಲೆಯನ್ನು ದೂರದ ಬುರುಜುಗಳ ಮೇಲಿದ್ದ ಪಹರೆಯವರು ಹಚ್ಚುತ್ತಿದ್ದರು. ಇದನ್ನು ಗಮನಿಸಿದ ಕಹಳೆ ಬತೇರಿಯ ಕಾವಲುಗಾರನು ತಕ್ಷಣವೇ

[illegible]

[illegible]

ತನ್ನ ಕಹಳೆಯನ್ನು ಊದಿ ಪಶ್ಚಿಮದ ತಗ್ಗಿನಲ್ಲಿರುವ ಅರಮನೆಗೆ ಸೂಚನೆ ಕೊಡುತ್ತಿದ್ದನು. ಇದರಿಂದ ರಾಜನು ಮಿಂಚಿನಂತೆ ಆಕ್ರಮಣವನ್ನು ಎದುರಿಸಲು ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿತ್ತು. ಬೆಟ್ಟ ಪರಿಸರದ ಯಾವ ಭಾಗದಿಂದಾದರೂ ಅಪಾಯ ಸಂಭವಿಸಿದರೆ ಆ ಭಾಗದಲ್ಲಿ ಸ್ಥಾಪಿಸಲಾಗಿದ್ದ ಬುರುಜುಗಳ ಮೇಲಿನ ಸೈನಿಕರು ಸಂಕೇತಗಳ ಮೂಲಕ ಕಹಳೆಯನ್ನು ತಿಳಿಸುತ್ತಿದ್ದರು. ಆಗ ತಕ್ಷಣವೇ ಕಹಳೆಯವನು ಸಿಡಿಲೆರಗಿದಂತೆ ಕಹಳೆಯನ್ನು ಊದುತ್ತಿದ್ದನು. ಈ ಸಂಕೇತದ ಕಹಳೆಯು ಚಿತ್ರದುರ್ಗ ಬೆಟ್ಟದಲೆಲ್ಲಾ ಪ್ರತಿಧ್ವನಿಸುತ್ತಿತ್ತು. ಮೊದಲೇ ಜಾಗೃತಗೊಂಡು ಶತ್ರುಗಳ ಆಗಮನವನ್ನು ನಿರೀಕ್ಷಿಸುತ್ತಿದ್ದ ಸೈನಿಕರಿಗೆ ಮುನ್ನೆಚ್ಚರಿಕೆಯಾಗೆ ಶತ್ರುಗಳನ್ನು ಸುಲಭವಾಗಿ ಹಿಮ್ಮೆಟ್ಟಿಸಲು ಸಹಾಯಕವಾಗುತ್ತಿದ್ದುದು ಕಹಳೆ ಬತೇರಿಯ ವೈಶಿಷ್ಟ್ಯವಾಗಿದೆ. ಈ ಬತೇರಿಯ ಪರಿಸರದಲ್ಲಿ ಅನೇಕ ಗುಹೆಗಳು, ಕಟ್ಟಡದ ಅವಶೇಷಗಳು, ನೇರಳದೊಣೆ ಮುಂತಾದ ಸ್ಮಾರಕಗಳಿವೆ.

ಊ. ಝುಂಡಾ ಬತೇರಿ

ಭೀಮನಕಲ್ಲುಬೆಟ್ಟದ ಪೂರ್ವಭಾಗದಲ್ಲಿ ಝುಂಡಾ ಬತೇರಿಯಿದೆ. ಏಕನಾಥೇಶ್ವರಿ ಮಂದಿರದ ಹಿಂಭಾಗದಲ್ಲಿರುವ ಕಾಲು ಹಾದಿಯ ಮೂಲಕ ಇಲ್ಲಿಗೆ ತಲುಪಬಹುದು. ಚಿತ್ರದುರ್ಗ ಪಾಳೆಯಗಾರರ ಸಂಸ್ಥಾನದ ಚಂದ್ರಗಾವಿ ಬಣ್ಣದ ಹನುಮದ್ಗರುಡ ಚಿಹ್ನೆಯ ಧ್ವಜವನ್ನು ಪಾಳೆಯಗಾರರು ಇಲ್ಲಿ ಹಾರಿಸುತ್ತಿದ್ದರಂತೆ. ಧ್ವಜ ಹಾರಿಸುವ ಸ್ಥಳದಲ್ಲಿರುವ ಈ ಬತೇರಿಗೆ ಝುಂಡಾ ಬತೇರಿ ಎಂದು ಹೆಸರಿಡಲಾಗಿದೆ. ಶತ್ರುಸೈನಿಕರು ಎಷ್ಟೇ ಹೋರಾಟ ಮಾಡಿದರೂ ತಾವು ಗೆದ್ದಂತೆ ಆಗುತ್ತಿರಲಿಲ್ಲ. ಈ ರೀತಿಯ ಧ್ವಜಗಳನ್ನು ಕೆಳಗಿಳಿಸಿ ಅವರ ಧ್ವಜವನ್ನು ಹಾರಿಸಿದಾಗಲೇ ಅವರು ಕೋಟೆಯನ್ನು ವಶಪಡಿಸಿಕೊಂಡಂತಾಗುತ್ತಿತ್ತು. ಆದ್ದರಿಂದ ಇಂತಹ ಧ್ವಜ ವೇದಿಕೆ ಅಥವಾ ಬತೇರಿಗಳನ್ನು ವಿಶೇಷವಾಗಿ ಶತ್ರು ಸೈನಿಕರು ಇಲ್ಲಿಗೆ ನುಸುಳದಂತೆ ಅಪಾಯಕಾರಿ ದುರ್ಗಮ ಪ್ರದೇಶಗಳಲ್ಲಿ ನಿರ್ಮಿಸುತ್ತಿದ್ದರು. ಧ್ವಜಸ್ತಂಭಕ್ಕೆ ಹಗ್ಗಗಳನ್ನು ಕಟ್ಟಲು ನೆಲದ ಆಳಕ್ಕೆ ಬಡಿದಿರುವ ಕಬ್ಬಿಣದ ಬಳೆಗಳನ್ನು ಈಗಲೂ ಕಾಣಬಹುದು. ಧ್ವಜ ವೇದಿಕೆಯು ಹಡಗಿನಂತೆ ಕಾಣುವ ಬಂಡೆಯ ಮೇಲಿದೆ. ಇದರ ಪೂರ್ವ ಭಾಗಕ್ಕೆ ತಗ್ಗಿನಲ್ಲಿ ಲಾಳಾಕಾರದ ಇಟ್ಟಿಗೆಗಳನ್ನು ನಿರ್ಮಿಸಿದ ಬತೇರಿ ಇದೆ. ಈ ಬತೇರಿಯಿಂದ ಝುಂಡಾ ಬತೇರಿಯನ್ನು ಹತ್ತಲು ಮೆಟ್ಟಿಲುಗಳ ಸಂಪರ್ಕ ಕಲ್ಪಿಸಲಾಗಿದೆ. ಝುಂಡಾ ಬತೇರಿ ಇರುವ ಬಂಡೆಯು ಧ್ವಜಕಟ್ಟೆ ಇರುವ ಮತ್ತೊಂದು ಬಂಡೆಯನ್ನು ಸುಮಾರು ೪-೫ ಅಡಿ ಅಂತರದಲ್ಲಿ ಬೇರ್ಪಡಿಸಿದೆ. ಎರಡೂ ಬಂಡೆಗಳು ಸುಮಾರು ೪೦ ಅಡಿ ಎತ್ತರದಲ್ಲಿವೆ. ಧ್ವಜಕಟ್ಟೆಗೆ ಹೋಗಲು ಬೇರ್ಪಟ್ಟಿರುವ

ಜಾಗದಲ್ಲಿ ಆಳವಾಗಿರುವ ತಗ್ಗಿಗೆ ಚಪ್ಪಡಿ ಕಲ್ಲುಗಳನ್ನು ಹಾಕಿ ಸೇತುವೆಯನ್ನು ನಿರ್ಮಿಸಿದ್ದಾರೆ. ಇದೊಂದು ವಿಶಿಷ್ಟ ತಂತ್ರವಾಗಿದೆ. ಶತ್ರು ಸೈನ್ಯದವರು ಧ್ವಜವನ್ನಾಕ್ರಮಿಸಲು ಬಂದಾಗ ಈ ಕಲ್ಲುಗಳನ್ನು ಕೆಳಕ್ಕೆ ತಳ್ಳಿದರೆ ಸಾಕು ಯಾವುದೇ ಕಾರಣಕ್ಕೂ ಶತ್ರುಗಳು ಧ್ವಜ ಕಟ್ಟೆಗೆ ಹತ್ತಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ದುರ್ಗಮ ಪ್ರದೇಶದಲ್ಲಿ ಈ ಧ್ವಜ ಕಟ್ಟೆ ಇದೆ. ಧ್ವಜದ ವೇದಿಕೆಯ ಸುತ್ತಲೂ ಬಲವಾದ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆಯ ಉತ್ತರದ ಭಾಗದಲ್ಲಿ ಎರಡು ಹಂತದಲ್ಲಿ ಸುತ್ತುವರೆದಿದೆ. ಝುಂಡಾ ಬತೇರಿಯಿಂದ ಪೂರ್ವ ಭಾಗ ಮತ್ತು ಉತ್ತರ ಭಾಗವನ್ನು ವೀಕ್ಷಿಸಬಹುದಾಗಿದೆ. ಕಹಳೆ ಬತೇರಿಯಿಂದ ಇಲ್ಲಿಗೆ ನೇರವಾದ ವೀಕ್ಷಣಾ ಸಂಪರ್ಕವನ್ನು ಕಲ್ಪಿಸಲಾಗಿದೆ.

ಝುಂಡಾ ಬತೇರಿಯ ಹಿಂಭಾಗದಲ್ಲಿ ಎರಡು ಸುತ್ತಿನ ಕೋಟೆಯಿದೆ. ಈ ಕೋಟೆ ೨೦ ಅಡಿ ಎತ್ತರವಾಗಿದ್ದು, ರಕ್ಷಣಾ ದೃಷ್ಟಿಯಿಂದ ವಿಶೇಷವಾದ ತಾಂತ್ರಿಕತೆಯನ್ನು ಅಳವಡಿಸಲಾಗಿದೆ. ಸಿಹಿನೀರು ಹೊಂಡದ ಬತೇರಿಗೆ ವಿರುದ್ಧ ದಿಕ್ಕಿನಲ್ಲಿ ಅನೇಕ ಬುರುಜುಬತೇರಿಗಳಿವೆ. ಈ ಕೋಟೆಯ ಸಾಲು ಮತ್ತು ಸಿಹಿನೀರಿನ ಹೊಂಡದ ಬತೇರಿಗಳು ಭೀಮನಕಲ್ಲು ಬೆಟ್ಟದ ಹಿಂಭಾಗದಲ್ಲಿರುವುದರಿಂದ ಮುಖ್ಯವಾಗಿ ಅರಮನೆಯ ಪ್ರದೇಶ, ಕಹಳೆ ಬತೇರಿ, ರಣಬತೇರಿ, ಝುಂಡಾ ಬತೇರಿಗಳಾವುವೂ ಕಾಣದಂತೆ ಭೀಮನ ಗುಡ್ಡದ ಸಾಲು ಅಡ್ಡವಿದೆ. ಈ ಕೋಟೆ ಸಾಲುಗಳ ಮಧ್ಯೆ ಚಿಕ್ಕ ದಿಡ್ಡಿಬಾಗಿಲನ್ನು ನಿರ್ಮಿಸಿ ದಿಡ್ಡಿಬಾಗಿಲನ ಮುಂಭಾಗದಲ್ಲಿ ೧೦ಮೀ. ಎತ್ತರವಿರುವ ೭೦ಮೀ. ಸುತ್ತಳತೆ ಹೊಂದಿರುವ ವಿಶೇಷವಾದ ಬುರುಜನ್ನು ನಿರ್ಮಿಸಲಾಗಿದೆ. ಇದರ ಹಿಂಭಾಗದ ಬೆಟ್ಟದ ಕಲ್ಲನ್ನು ಸೀಳಿ ಕಹಳೆ ಬತೇರಿಗೆ ಸಂಪರ್ಕ ಕಲ್ಪಿಸಿಕೊಂಡಿರುವುದು ವಿಸ್ಮಯವೇ ಸರಿ. ಕೋಟೆಯ ಉತ್ತರ ಹಾಗೂ ವಾಯುವ್ಯ ಭಾಗವನ್ನು ಈ ಭಾಗದಿಂದಲೇ ವೀಕ್ಷಿಸಿ ಸಂಕೇತಗಳನ್ನು ಕಹಳೆ ಬತೇರಿಗೆ ಕೊಡುತ್ತಿದ್ದರು.

೩೬. ಬಸವನ ಬುರುಜು

ಚಿತ್ರದುರ್ಗದ ಕೋಟೆಯ ಸಪ್ತಶಿಖರಗಳಲ್ಲೊಂದಾದ ಬೆಟ್ಟದ ಮೇಲೆ ವಿಶಾಲವಾಗಿ ನಿರ್ಮಿಸಿರುವ ಬುರುಜಿಗೆ ಬಸವನ ಬುರುಜೆಂದು ಕರೆಯಲಾಗಿದೆ. ಈ ಬುರುಜಿನ ಪೂರ್ವಭಾಗದ ತಪ್ಪಲಿನಲ್ಲಿ ಬಸವೇಶ್ವರ ದೇವಸ್ಥಾನವಿದೆ. ಈ ದೇವರ ಹೆಸರಿನಿಂದ ಈ ಹೆಸರು ಬಂದಿದೆ. ಶ್ರೀರಂಗಪಟ್ಟಣದ ನವಾಬರ ಆಳ್ವಿಕೆಯಲ್ಲಿ ಈ ಬತೇರಿಗೆ ಸುಲ್ತಾನ್ ಬತೇರಿ ಎಂದು ಕರೆಯಲಾಗಿದೆ. ಉತ್ಸವಾಂಬ ದೇವಾಲಯದ ಹಿಂಭಾಗ ಬೆಟ್ಟದ ನೆತ್ತಿಯ ಮೇಲೆ ಈ ಬುರುಜನ್ನು ನಿರ್ಮಿಸಲಾಗಿದೆ. ಬಸವನ ಬುರುಜಿನ ಬೆಟ್ಟವು ಝುಂಡಾ ಬತೇರಿಯೊಂದಿಗೆ ಬೆಸೆದುಕೊಂಡಿದೆ. ಹಿಂದೆ ಸಿಹಿನೀರು ಹೊಂಡದ ಬಾಗಿಲು ಸಂತೆಯ

ಬಾಗಿಲಿನವರೆಗೆ ನಿರ್ಮಿತವಾದ ಹೊರಕೋಟೆಯ ಮಧ್ಯಭಾಗದಲ್ಲಿ ಇದೆ. ರಕ್ಷಣಾ ದೃಷ್ಟಿಯಿಂದ ನಿರ್ಮಿಸಿದ ಈ ಬುರುಜಿನ ರಚನೆಯಂತೆ ಯಾವ ಬುರುಜುಗಳೂ ಇಲ್ಲ. ಈ ಬುರುಜಿನಿಂದ ಬೆಟ್ಟದ ಇಡೀ ಉತ್ತರಭಾಗ ಮತ್ತು ಪೂರ್ವಭಾಗದ ರಕ್ಷಣೆ ಮಾಡುವ ದೃಷ್ಟಿಯಿಂದ ನಿರ್ಮಿಸಲಾಗಿದೆ ಎಂದು ಹೇಳಬಹುದು. ಇಲ್ಲಿಂದ ಸೀಬಾರ ಕಣಿವೆ, ಕಿರುಬನಕಲ್ಲು ಕಣಿವೆ, ಮೆದಕೆಪುರ ಕಣಿವೆ, ಕುಂಚಿಗನಾಳ ಕಣಿವೆ ಮುಂತಾದ ಪ್ರದೇಶಗಳನ್ನು ವೀಕ್ಷಿಸಬಹುದು. ಅಲ್ಲದೆ, ಬೆಟ್ಟದ ಮೇಲಿರುವ ಎಲ್ಲಾ ಬತೇರಿಗಳನ್ನು ಇಲ್ಲಿಂದ ವೀಕ್ಷಿಸಬಹುದು. ಬಸವನಬತೇರಿ ೧೦ ಕೋನಗಳನ್ನು ಒಳಗೊಂಡ ವೇದಿಕೆಯ ಮೇಲೆ ಕಟ್ಟಲಾಗಿದೆ. ಬುರುಜಿನ ಮಧ್ಯೆದ ದ್ವಾರವು ದಕ್ಷಿಣ ಭಾಗದಲ್ಲಿದೆ. ಇದನ್ನು ೮.೬x೯.೬x೧೧ ಅಡಿಗಳ ಅಳತೆಯಲ್ಲಿ ನಿರ್ಮಿಸಲಾಗಿದೆ. ಬಾಗಿಲುವಾಡಗಳ ಮೇಲೆ ಶಸ್ತ್ರಸಜ್ಜಿತ ಶಿಲ್ಪಗಳಿವೆ. ಬುರುಜು ಪೂರ್ವಪಶ್ಚಿಮವಾಗಿ ೪೪ಮೀ. ಉತ್ತರ ದಕ್ಷಿಣವಾಗಿ ೩೯ಮೀ. ಇದ್ದು, ಒಟ್ಟು ೧೪೨ಮೀ. ಸುತ್ತಳತೆಯನ್ನು ಹೊಂದಿದೆ. ಬುರುಜಿನ ಸುತ್ತಲೂ ಭದ್ರವಾದ ಕೈಪಿಡಿ ಗೋಡೆಯಿದೆ. ಕೈಪಿಡಿ ಗೋಡೆಯಲ್ಲಿ ೪೩ ಕೋವಿಕಿಂಡಿಗಳು. ಹಾಗೂ ೭ ಅಡಿ ಎತ್ತರದ ಎರಡು ಪಹರೆ ಗೋಪುರಗಳಿವೆ. ಈ ಪಹರೆ ಗೋಪುರದೊಳಗೆ ಚಿಕ್ಕದಾಗಿ ಶತ್ರುಗಳನ್ನು ವೀಕ್ಷಿಸಲು ೭ ಕಂಡಿಗಳನ್ನು ರಚಿಸಲಾಗಿದೆ. ಕೈಪಿಡಿ ಗೋಡೆಯ ಪಕ್ಕದಲ್ಲಿ ಶತ್ರುಗಳನ್ನು ಹೊಡೆಯಲು ಫಿರಂಗಿಗೂಡುಗಳನ್ನು ನಿರ್ಮಿಸಲಾಗಿದೆ. ಇವುಗಳು ೭೪ ಇಂಚು ಅಗಲವಾಗಿದ್ದು, ಮುಂದೆ ಅಗಲವಾಗುತ್ತಾ ೧೨೦ ಇಂಚು ವಿಸ್ತಾರವನ್ನು ಪಡೆದುಕೊಂಡಿವೆ. ಒಟ್ಟು ೧೭ ಫಿರಂಗಿ ಗೂಡುಗಳಿವೆ.

ಬುರುಜಿನ ಹಿಂಭಾಗದಲ್ಲಿ ಈಗಲೂ ಎರಡು ಫಿರಂಗಿಗಳು ಇರುವುದನ್ನು ಕಾಣಬಹುದು. ಈ ಫಿರಂಗಿಗಳು ೯ ಅಡಿ ಉದ್ದ, ೪.೮ ಅಡಿ ಸುತ್ತಳತೆಯನ್ನು ಹೊಂದಿದ್ದು, ಒಂದು ಫಿರಂಗಿಯ ಮೇಲೆ cannon 1799 No.48693 ಎಂಬ ಬರಹವಿದೆ. ಬುರುಜಿನ ಒಳಭಾಗದಲ್ಲಿ ಪಹರೆಯರು ನಿಲ್ಲುವ ಉದ್ದನೆಯ ಅಂಕಣವಿದೆ. ಇದರ ಮುಂಭಾಗ ೧೦ ಅಂಕಣವುಳ್ಳ, ೪೨x೩೪ ಅಳತೆಯ ಬಂಧೀಖಾನೆಯಿದೆ. ೫ ಕಮಾನುಗಳುಳ್ಳ, ಎರಡು ವಿಭಾಗಗಳು ಈ ಬಂಧೀಖಾನೆಯಲ್ಲಿವೆ. ಒಳಭಾಗಕ್ಕೆ ಗಾರೆಯ ಲೇಪನ ಮಾಡಲಾಗಿದ್ದು, ಗಾಳಿಯಾಡಲು ಅವಕಾಶ ಕಲ್ಪಿಸಲಾಗಿದೆ. ಬಂಧೀಖಾನೆಯ ಹೊರಬಾಗಿಲಿನಿಂದ ಬುರುಜಿಗೆ ಏರಲು ೨೦ ಅಗಲವಾದ ಮೆಟ್ಟಿಲುಗಳು ಕಟ್ಟಲಾಗಿದೆ. ಬುರುಜಿನ ಹೊರಭಾಗದ ಭಿತ್ತಿಯಲ್ಲಿ ಓಡುತ್ತಿರುವ ಕೋಣ, ಕಾದಾಡುತ್ತಿರುವ ವೀರ, ಹುಲಿ, ಆನೆ ಕಾಳಗ, ಜಿಂಕೆಗಳು, ಮಿಥುನ ಶಿಲ್ಪಗಳಿವೆ. ಬುರುಜಿನ ಎರಡೂ ಪಕ್ಕದಲ್ಲಿ ಕೋಟೆಯ ಸಾಲುಗಳಿವೆ. ಈ ಕೋಟೆಯು ೨೪ ಅಡಿ ಎತ್ತರವಾಗಿದ್ದು,

[illegible]

೯.೬ ಅಡಿ ಅಗಲವಾಗಿದೆ. ಈ ಕೋಟೆಯ ಸಾಲುಗಳು ನಗರದ ಪೂರ್ವ ಭಾಗಕ್ಕೆ ಬುರುಜಿನ ಹಟ್ಟಿಗೂ ಮತ್ತು ಬೆಟ್ಟದ ಮೇಲಕ್ಕೂ ಸಾಗುತ್ತವೆ. ಇವುಗಳ ಮಧ್ಯ ಎರಡು ದಿಡ್ಡಿ ಬಾಗಿಲುಗಳಿವೆ. ಈ ಭಾಗದಲ್ಲಿ ಅನೇಕ ವಸತಿ ಕಟ್ಟಡದ ಅವಶೇಷಗಳಿವೆ.

೪.೩.೪ ಜನಪದ ಸಾಹಿತ್ಯದಲ್ಲಿ ಕೋಟೆಯ ವರ್ಣನೆ

ಚಿತ್ರದುರ್ಗದ ಏಳುಸುತ್ತಿನ ಕೋಟೆ ಜನಪದರಲ್ಲಿ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ. ಜನಪದರು ಚಿತ್ರದುರ್ಗದ ಕೋಟೆಯನ್ನು ದುರ್ಗದ ಕ್ಯಾಟೆಯೆಂದೇ ಸಂಬೋದಿಸುತ್ತಾರೆ. ಈ ಪರಿಸರದ ಜನರು ಇದನ್ನು ಚಿತ್ರದುರ್ಗವೆಂದು ಹೇಳುವುದು ತುಂಬಾ ಕಡಿಮೆ. ದುರುಗವೆಂದು ಸಂಬೋಧಿಸುವುದೇ ಹೆಚ್ಚು. ಚಿತ್ರದುರ್ಗ ಎಂಬ ಈ ಅಭಿದಾನದಲ್ಲಿ ದುರ್ಗ ಎಂಬ ಪದವೂ ಸೇರಿಕೊಂಡಿದೆ. ಈ ದುರ್ಗ ಪದ ಗ್ರಾಮೀಣರ ಮನಸ್ಸನ್ನು ಬಹಳವಾಗಿ ಸೆಳೆದಿದೆ. ಇದರ ರಚನೆಯನ್ನು ಭವ್ಯತೆಯನ್ನು ಕಣ್ಣಾರೆ ಕಂಡಿದ್ದಿರಬಹುದಾದಂಥ ಜನಪದರು ಈ ಬಗ್ಗೆ ಪದಕಟ್ಟಿ ಹಾಡಿದ್ದಾರೆ. ಚಿತ್ರದುರ್ಗ ಜಿಲ್ಲೆಯಾದ್ಯಂತ ಇರುವ ಹಳ್ಳಿಗಳಲ್ಲಿ ಜನಪದರು ಈ ಕೋಟೆಯ ಬಗ್ಗೆ ಅನೇಕ ಪದಗಳನ್ನು ಕಟ್ಟಿಹಾಡಿದ್ದಾರೆ. ಈ ಗೀತೆಗಳು ಮದಕರಿನಾಯಕ, ಕೋಟೆಯ ಬಾಗಿಲು, ಕೋಟೆಯ ದೇವರು, ಕೋಟೆಯ ಮೇಲಿದ್ದ ಫಿರಂಗಿ, ಕಂದಕ ಮುಂತಾದವುಗಳಿಗೆ ಸಂಬಂಧಪಟ್ಟಿವೆ. ಅನೇಕ ವಿದ್ವಾಂಸರು ಇವುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೇಳಲಾಗಿದೆ :

ಈಟೀಟು ಹುಡುಗರು ಚೀಟಿ ಚೆಲ್ಲಣದೋರು
ಕೋಟೆ ಕೊಡರಿಣ್ಣ ಕೂಲಿಗೆ | ಅಂದಾರೆ
ತಲೆಹೋದ್ರು ದುರ್ಗ ಕೊಡನೆಂದ್ರು...[ಗೀ.೧] ಎಂಬ ಈ ಹಾಡು ಮಕ್ಕಳಲ್ಲಿ ದುರ್ಗದ ಬಗ್ಗೆ ಎಂತಹ ಅಭಿಮಾನವಿತ್ತೆಂಬುದು ತಿಳಿದುಬರುತ್ತದೆ.

ಚಿತ್ರದುರ್ಗದ ನಾಡ ವತ್ತಿ ಆಳೇನಯ್ಯ
ಹೇಳಿ ಕಟ್ಟಿಸಿದ ಮದಕೇರಪ್ಪ | ಅವನು
ಏಳುಸುತ್ತಿನ ಕ್ಯಾಟೆವಳಗವನೆ [ಗೀ.೨] ||

ಏಳುಸುತ್ತಿನ ಕ್ಯಾಟೆ ಹೇಳಿ ಕಟ್ಟಿಸಿದನಯ್ಯ
ಚಿತ್ರದುರ್ಗದ ನಾಡ ಮದಕೇರಪ್ಪ
ಅವನು ಏಳುಸುತ್ತಿನ ಕ್ಯಾಟೆವಳಗವನೆ[ಗೀ.೩] ||

ಈ ಮೇಲಿನ ಎರಡೂ ಗೀತೆಗಳು ಮದಕರಿನಾಯಕ ಚಿತ್ರದುರ್ಗವನ್ನು ಆಳುತ್ತಿದ್ದ ಬಗ್ಗೆ ಹಾಗೂ ಏಳುಸುತ್ತಿನ ಕೋಟೆಯನ್ನು ಕಟ್ಟಿಸಿದ್ದರ ಬಗ್ಗೆ ತಿಳಿಸುತ್ತವೆ.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ನಿಂತು ನಿಡಗಲ್ಲು ಕಟ್ಟಿಸಿದ ಕುಂತು ಕುಂದುರ್ಪೆ ಕಟ್ಟಿಸಿದ

ವತ್ತಿ ಆಳೇನು ಮದಕೇರಿ | ದುರಗದ

ಮೇಲೆ ಏಳು ಕೋಟೆಗಳ ಕಟ್ಟಿಸಿದ[ಜಾ.೪] || ಈ ಹಾಡಿನಲ್ಲಿ ಚಿತ್ರದುರ್ಗದ ಪಾಳೆಯಗಾರರು ಕೋಟೆಗಳನ್ನು ಕಟ್ಟಿಸಿ ಆಳ್ವಿಕೆ ನಡೆಸಿರುವುದನ್ನು ಕಾಣಬಹುದು. ಅಲ್ಲದೆ ಚಿತ್ರದುರ್ಗ ಪಾಳೆಯಪಟ್ಟು ಪೂರ್ವದಲ್ಲಿ ನಿಡಗಲ್ಲು ಮತ್ತು ಕುಂದುರ್ಪೆವರೆಗೆ ವಿಸ್ತರಿಸಿದ್ದುದು ಇದರಿಂದ ತಿಳಿದುಬರುತ್ತದೆ.

(ಟಾಕಿನಾ ಬಾಗಿಲಬಿಟ್ಟು ಹೊರಡುವಾಗ ಸಂಪಿಗೆಸಿದ್ದ

ಹಾವಾಗ ಅಡ್ಡ ಸುಳಿದ | ಕೋಲು...

ಗಾರೆ ಬಾಗಿಲ ಬಿಟ್ಟು ಹೊರಡುವಾಗ ಉಚ್ಚಂಗಮ್ಮ

ಕಾಗೆಯಾಗಿ ಅಡ್ಡ ಸುಳಿದಾಳೊ | ಕೋಲು[ಜಾ.೫] ||)

ಚಿತ್ರದುರ್ಗದ ಪಾಳೆಯಗಾರರು ದೈವದ ಮೇಲೆ ಅಪಾರ ನಂಬಿಕೆಯಿಟ್ಟವರು. ಇವರು ಯಾವುದೇ ಯುದ್ಧ ಮಾಡಲು ಹೊರಟರೆ ಅವರು ದೇವತೆಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಿದ್ದರು. ಈ ದೇವತೆಗಳ ಅಪ್ಪಣೆಯನ್ನು ಪಡೆದು ಹೊರಡುತ್ತಿದ್ದರು. ಮುಂದೆ ನಡೆಯುವ ಯುದ್ಧದಲ್ಲಿ ರಾಜರು ಅಪಜಯವನ್ನು, ಸಾವನ್ನು ಪಡೆಯುತ್ತಿದ್ದ ಮುನ್ಸೂಚನೆಗಳನ್ನು ಕೊಡಲು ದೇವತೆಗಳು ಹಾವಾಗಿ, ಕಾಗೆಯಾಗಿ ಅಡ್ಡಬಂದು ರಾಜನಿಗೆ ಅಪಶಕುನವನ್ನುಂಟು ಮಾಡುತ್ತಿದ್ದವೆಂಬ ಅಭಿಪ್ರಾಯ ಮೇಲಿನ ಗೀತೆಗಳಿಂದ ವ್ಯಕ್ತವಾಗುತ್ತದೆ. ಅಲ್ಲದೆ, ಚಿತ್ರದುರ್ಗದ ಕೋಟೆಯೊಳಗಿರುವ ಬಾಗಿಲುಗಳ ಪ್ರಸ್ತಾಪವೂ ಕೂಡ ಈ ಗೀತೆಗಳಲ್ಲಿ ಕಂಡುಬರುತ್ತದೆ.

ಮಾರನುಮನೆಂಬೋದು ಮಿರೀದ ಪಿರಂಗಿ

ಹುಚ್ಚನುಮನೆಂಬುದು ಹೆಚ್ಚೇನ ಪಿರಂಗಿ

ಎತ್ತೀರಿ ಮೇಲೆ ಬಂಡ್ಯಾಕೆಂದ[ಜಾ.೬] ||

ಕೋಟೆಯಲ್ಲಿದ್ದ ಫಿರಂಗಿಗಳಿಗೆ ಮಾನವನ ಹೆಸರಿನಿಂದ ಕರೆದು ಅವುಗಳಿಗೆ ಜೀವ ತುಂಬಿರುವ ಪರಿ ಮೇಲಿನ ಗೀತೆಗಳಿಂದ ವ್ಯಕ್ತವಾಗುತ್ತದೆ.

ಚಿತ್ರದುರುಗವ ವತ್ತಿ ಆಳುವಾಗ

ನೀನು ಒಪ್ಪೆ ಕಟ್ಟಿಸಯ್ಯ ಕೋಟೆಗಳ | ಮದಕೇರಪ್ಪ

ನೀನು ಒಪ್ಪೆ ಕಟ್ಟಿಸಯ್ಯ ಕೋಟೆಗಳು[ಜಾ.೭] ||

ಒಡ್ಡರನು ಕರೆಸಿದ ದಿಬ್ಬವ ತೆಗೆಸಿದ

ದೊಡ್ಡ ಪಿರಂಗಿ ನಿಲ್ಲಿಸಿದ...

ಕೋಮಟಿಗರ ಕರೆಸಿದ ಕಾಲುವೆ ತೆಗೆಸಿದ

ಜೋಡಿ ಫಿರಂಗಿ ನಿಲ್ಲಿಸಿದ

ಹತ್ತಿ ಹತ್ತಿತು ಈ ಕೋಟೆ ಚಕ್ರದಿಮ್ಮನ ಕೋಟೆ

ಹತ್ತಿತು ಕೋಟೆ ಗಗನಾಕೆ[ಜಾ.೮]

ಈ ಗೀತೆಗಳು ಪಾಳೆಯಗಾರರು ಚಿತ್ರದುರ್ಗದ ಕೋಟೆಯನ್ನು ಕಟ್ಟಿ ಆಳುತ್ತಿದ್ದ ವಿವರವಲ್ಲದೆ, ಕೋಟೆಯ ಕಂದಕ, ಕಾಲುವೆಗಳನ್ನು ನಿರ್ಮಿಸಿದವರ ವಿವರಗಳನ್ನೂ ಒಳಗೊಂಡಿವೆ.

೪.೩.೫ ವಿದೇಶಿಯರು ಕಂಡ ಚಿತ್ರದುರ್ಗ

ದಕ್ಷಿಣ ಭಾಗದಲ್ಲಿ ಅಭೇದ್ಯ ಕೋಟೆಯಾಗಿದ್ದ ಚಿತ್ರದುರ್ಗದ ಕೋಟೆಗೆ ಅನೇಕ ವಿದೇಶೀಯರು ಭೇಟಿ ಕೊಟ್ಟಿದ್ದಾರೆ ಹಾಗೂ ಅಲ್ಲದೆ ಕೋಟೆಯ ಪಕ್ಕದಲ್ಲಿದ್ದ ಜಗತ್‌ಪ್ರಸಿದ್ಧವಾದ ಚಂದ್ರವಳ್ಳಿಯನ್ನು ಕುರಿತು ತಮ್ಮದೇ ಆದ ಅಭಿಪ್ರಾಯವನ್ನು ನೀಡಿದ್ದಾರೆ.[೫೬] ಜಪಾನಿನ ಟೋಕಿಯೋ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮಾಡುತ್ತಿದ್ದ ಶ್ರೀ ನೊಬೊರೊ ಕರಾಷಿಮಾ ಚಂದ್ರವಳ್ಳಿಯನ್ನು ಕುರಿತು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಚಂದ್ರವಳ್ಳಿ ಕಣಿವೆ ಪ್ರದೇಶವನ್ನು ನೋಡಿ ಜಪಾನಿನಲ್ಲಿ ಇದರ ಬಗ್ಗೆ ಪತ್ರಿಕೆಗಳಲ್ಲಿ ಬರೆಯುತ್ತೇನೆಂದು ಹೇಳಿದ್ದಾರೆ. ಅಮೇರಿಕಾದ ಮಿಸ್ಸೌರಿ ವಿಶ್ವವಿದ್ಯಾಲಯದ ಡಾ. ಹೂರ್ವಾಡ್ ಎಫ್.ಹಿರ್ಟ್ ಅವರು "ಚಿತ್ರದುರ್ಗದಲ್ಲಿರುವಂತಹ ಕೋಟೆ ಮತ್ತು ಸ್ಮಾರಕಗಳು ಅಮೆರಿಕಾದಲ್ಲಿದ್ದಿದ್ದರೆ ಅದನ್ನು ಒಂದು ದೊಡ್ಡ ಮ್ಯೂಸಿಯಂ ಆಗಿ ಪರಿವರ್ತಿಸಿ, ವೀಕ್ಷಿಸಲು ಒಂದು ಡಾಲರ್ ಶುಲ್ಕ ವಿಧಿಸುತ್ತಿದ್ದೆವು" ಎಂದು ಹೇಳಿದ್ದುದಲ್ಲದೆ, "ಈ ಭವ್ಯ ಕೋಟೆಯ ಪ್ರದೇಶದಲ್ಲಿ ಒಂದು ಡೇರೆಯನ್ನು ಹಾಕಿಕೊಂಡು ಕೆಲವು ತಿಂಗಳುಗಳ ಕಾಲ ಇಲ್ಲಿ ನೆಲೆಸಬೇಕೆಂದು ನನ್ನಲ್ಲಿ ಆಸೆಯುಂಟಾಗಿದೆ. ಭಾರತ ಸರ್ಕಾರ ಅನುಮತಿಕೊಟ್ಟರೆ ನಾನು ಹಾಗೆಯೇ ಮಾಡುತ್ತೇನೆ" ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಜರ್ಮನಿಯ ಇಂಜಿನಿಯರ್ ಡಾ.ಪಿ.ಎಚ್.ಕೆ.ಪ್ಲೋರ್ಕೆ ಅಭಿಪ್ರಾಯದಂತೆ ಚಂದ್ರವಳ್ಳಿಯ ವೀಕ್ಷಣೆ, ಹುಟ್ಟುಬಂಡೆಯ ಗೀರುಚಿತ್ರಗಳು ಹಾಗೂ ಈ ಪ್ರದೇಶವನ್ನು ವೀಕ್ಷಣೆ ಮಾಡಿ ನನ್ನ ಜೀವಿತದಲ್ಲೇ ಮರೆಯಲಾಗದ ಪ್ರದೇಶವೆಂದು ಹೇಳುತ್ತಾ, "ಚಿತ್ರದುರ್ಗದ ಪ್ರಾಚೀನ ಸ್ಮಾರಕಗಳಿಗೂ ದಕ್ಷಿಣ ಅಮೆರಿಕಾ ಮತ್ತು ಈಜಿಪ್ಟ್‌ನ ಪ್ರಾಚೀನ ಸ್ಮಾರಕಗಳಿಗೂ ಸಂಬಂಧವಿದೆಯೇನೋ ಎಂಬ ಕುತುಹೂಲ ಉಂಟಾಗುತ್ತದೆ" ಎಂದು ಹೇಳಿದ್ದಾರೆ. ಅಮೇರಿಕದ ಏಲ್ ವಿಶ್ವವಿದ್ಯಾಲಯದ ಜೆಡ್.ಆರ್.ವಾರನ್ ಬೋಲ್ಸ್ ಹೇಳಿರುವಂತೆ "ಭವ್ಯ ಭಾರತದ ಪ್ರಾಚೀನ ನಾಗರಿಕತೆಯು ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಚಿತ್ರದುರ್ಗದ ಪ್ರಾಚ್ಯಸಂಸ್ಕೃತಿಯ ಮಹತ್ವವನ್ನು ಇಲ್ಲಿನವರು ಅರಿಯುತ್ತಾರೆಂದು ಆಶಿಸುತ್ತೇನೆ." ಫ್ರೆಂಚ್ ದಳಪತಿ ಲಾಲಿ ಅಭಿಪ್ರಾಯಪಟ್ಟಂತೆ "ನಾವು ಇಷ್ಟು ದಿವಸ ಬಹಳ ಬಹಳ

ಖಿಲ್ಲೆ ನೋಡಿದೆವು. ನಾವು ಶಿಸ್ತು ಕಟ್ಟಿ ಹೊಡೆದದ್ದೆಲ್ಲಾ ವ್ಯರ್ಥವಾಯಿತು. ಖಿಲ್ಲೆ ತಾರೀಫು ಬಹಳ ಇದೆ. ತಗ್ಗಿಸಿ ಹೊಡೆದರೆ ಖಂದಕಕ್ಕೆ ತಗಲತ್ತೆ. ಸ್ವಲ್ಪ ಎತ್ತಿಸಿ ಹೊಡೆದರೆ ಗುಡ್ಡಕ್ಕೆ ತಗಲತ್ತೇ ಹೊರತು ಖಿಲ್ಲೇಕ್ಕೇ ತಗಲಿಲ್ಲಾ. ಖಿಲ್ಲೆ ಕಸ್ತು ಆಗಲಿಲ್ಲ" ಎಂದು ಕೋಟೆಯನ್ನು ನಿರ್ಮಿಸಿರುವ ತಂತ್ರಜ್ಞಾನದ ಬಗ್ಗೆ ವಿವರಿಸಿದ್ದಾನೆ. ಇತ್ತೀಚೆಗೆ ಬ್ರಿಟೀಷ್ ಹೈಕಮಿಷನರ್ ರಾನ್ ಯಂಗ್‌ಕಿ ಹಾಗೂ ಅವರ ಪತ್ನಿ ಲೇಡಿ ಕ್ಯಾತರಿಕ್ ಯಂಗ್ ಇವರು ಚಿತ್ರದುರ್ಗಕ್ಕೆ ಭೇಟಿಯಿತ್ತು, "ಪ್ರವಾಸಿಗರಿಗೆ ಉಪಯುಕ್ತ ಹಾಗೂ ಯೋಗ್ಯವಾದ ಸ್ಥಳ ಇದಾಗಿದ್ದು, ಪ್ರವಾಸಿಗರು ಇದರಿಂದ ಅನೇಕ ಪ್ರಯೋಜನವನ್ನು ಪಡೆದುಕೊಳ್ಳಬಹುದು" ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೫೭]

೪.೪ ಮೊಳಕಾಲ್ಮೂರು ಕೋಟೆ

ಮೊಳಕಾಲ್ಮೂರು ಚಿತ್ರದುರ್ಗ ಜಿಲ್ಲೆಯ ತಾಲೂಕು ಕೇಂದ್ರಗಳಲ್ಲೊಂದು. ಇದು ಚಿತ್ರದುರ್ಗದಿಂದ ಬಳ್ಳಾರಿಗೆ ಹೋಗುವ ಮುಖ್ಯರಸ್ತೆಯಲ್ಲಿ ೮೪ ಕಿ.ಮೀ. ದೂರದಲ್ಲಿದೆ ಸುತ್ತಲೂ ಬೆಟ್ಟಗುಡ್ಡಗಳಿಂದ ಕೂಡಿದ ಈ ಪ್ರದೇಶ ಭೂನಕ್ಷೆಯಲ್ಲಿ ಅಕ್ಷಾಂಶ ೧೪°೪೩ ಉತ್ತರ, ಮತ್ತು ಪೂರ್ವ ರೇಖಾಂಶ ೭೬°೪೫ ಇದ್ದು, ಸಮುದ್ರ ಮಟ್ಟದಿಂದ ೨,೭೬೩ ಅಡಿ ಎತ್ತರದಲ್ಲಿದೆ. ಸುತ್ತಲೂ ಇರುವ ಬೆಟ್ಟದ ಪರಿಸರವನ್ನು ಬಳಸಿಕೊಂಡು ವಿಸ್ತಾರವಾದ ಗಿರಿದುರ್ಗವನ್ನು ಕಟ್ಟಲಾಗಿದೆ.

ಮೊಳಕಾಲ್ಮೂರು ಹೆಸರು ಬರಲು ಅನೇಕ ಐತಿಹ್ಯಗಳಿವೆ. ಬೆಟ್ಟದ ಮೇಲೆ ಕೂಗುವ ಬಂಡೆಯಿದ್ದು ಇದಕ್ಕೆ ಮೊಳಗುವ ಕಲ್ಲು ಎಂದು ಕರೆಯುತ್ತಾರೆ. ಮೊಳಗುವ ಕಲ್ಲಿನ ಊರು ಮೊಳಕಾಲ್ಮೂರು ಹೆಸರಿಗೆ ಕಾರಣವಾಗಿರಬಹುದುದೆಂದು ಹೇಳಲಾಗಿದೆ.[೫೮] ದಂತಕಥೆಯೊಂದರ ಪ್ರಕಾರ ರಾಜಮಹಾರಾಜರ ಕಾಲದಲ್ಲಿ ಶತ್ರು ರಾಜರು ಬೆಟ್ಟಗಳನ್ನು ಆಕ್ರಮಿಸದಂತೆ ಕೋಟೆಯ ಇಳಿಜಾರು ಬಂಡೆಗೆ ಎಣ್ಣೆ ಸವರಿ ರಾಗಿ ಅಂಟಿಸುತ್ತಿದ್ದರಂತೆ. ಶತ್ರುಗಳು ಕೋಟೆ ಹತ್ತುವಾಗ ಕಾಲುಜಾರಿ ಮೊಳಕಾಲನ್ನು ಮುರಿದುಕೊಂಡು ಹತಾಶರಾಗುತ್ತಿದ್ದರಂತೆ. ಹೀಗಾಗಿ ಈ ಊರಿಗೆ ಮೊಳಕಾಲ್ಮೂರಿ ಎಂದು ಹೆಸರಾಯಿತೆಂದು, ಇದು ಕಾಲಾನಂತರ ಮೊಳಕಾಲ್ಮೂರು ಆಯಿತೆಂಬ ಅಭಿಪ್ರಾಯವಿದೆ.[೫೯]

ಮೊಳಕಾಲ್ಮೂರು ಇತಿಹಾಸಪೂರ್ವ ಕಾಲದಿಂದಲೂ ಜನವಸತಿಯಿದ್ದ ಪ್ರಾಚೀನ ಸ್ಥಳ. ಇಲ್ಲಿನ ಬೃಹತ್ ಶಿಲಾಸಮಾಧಿಗಳು ಪ್ರಾಚೀನ ಮಾನವನ ನೆಲೆಯಾಗಿದ್ದಿತು ಎಂಬುದನ್ನು ದೃಢಪಡಿಸುತ್ತವೆ.[೬೦] ಮೊಳಕಾಲ್ಮೂರು ಬೆಟ್ಟದ ಪರಿಸರದಲ್ಲಿ ಬರುವ ಲುಂಕೆಮಲೆಯನ್ನು ಕದಂಬರು ಕೇಂದ್ರವನ್ನಾಗಿಸಿಕೊಂಡು

[illegible]

[illegible]

[illegible]

[illegible]

[illegible]

ಮೊಳಕಾಲ್ಮೂರು ಪ್ರದೇಶವನ್ನಾಳಿದರೆಂಬುದು ಶಾಸನಗಳಿಂದ ದೃಢಪಡುತ್ತದೆ.[೬೦] ತರುವಾಯ ಈ ಪ್ರದೇಶವು ನೊಳಂಬವಾಡಿ ೩೨೦೦೦ ಸೀಮೆಯಲ್ಲಿ ಸಮಾವೇಶಗೊಂಡಿತು. ಕಲ್ಯಾಣ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ತಮ್ಮ ಜಯಸಿಂಹ ಅನಂತರ ಹೊಯ್ಸಳ ಮತ್ತು ವಿಜಯನಗರ ಅರಸರ ಅಧಿಕಾರಕ್ಕೆ ಒಳಪಟ್ಟಿದ್ದ ಈ ಊರು ೧೫ನೇ ಶತಮಾನದಲ್ಲಿ ರಾಯದುರ್ಗದ ನಾಯಕರ ವಶವಾಯಿತು.[೬೧] ರಾಯದುರ್ಗದ ಅಧಿಕಾರಿಯಾಗಿ ವಿಜಯನಗರದ ಅರಸರಿಂದ ನೇಮಿಸಲ್ಪಟ್ಟ ಬೊಮ್ಮನಾಯಕನ ಅಧೀನಕ್ಕೊಳಪಟ್ಟಿತು. ವಿಜಯನಗರ ಸಂಸ್ಥಾನವು ೧೫೬೫ರಲ್ಲಿ ಪತನಗೊಂಡ ನಂತರ ಬೊಮ್ಮನಾಯಕನು ನಾಯಕನಹಟ್ಟಿ ಪಾಳೆಯಗಾರ ಬೂದಿಮಲ್ಲಪ್ಪನಾಯಕನಿಗೆ ಮೊಳಕಾಲ್ಮೂರನ್ನು ಕೊಟ್ಟು ಆತನಿಂದ ೨೦೦ ಕೆಂದ, ೧,೦೦೦ ಬಿಳಿ ಹಸುಗಳನ್ನು ತೆಗೆದುಕೊಂಡಿದ್ದರಿಂದ ಬೊಮ್ಮನಾಯಕನಿಗೆ ಹುಚ್ಚುದೊರೆ ಎಂಬ ವಾಡಿಕೆಯಾಯಿತು. ಬೂದಿ ಮಲ್ಲಪ್ಪನಾಯಕನು ತನ್ನ ರಾಸುಗಳಿಗೆ ನೀರು ವಗೈರಿಗೆ ಅನುಕೂಲವಾಗಿರುವುದನ್ನು ಕಂಡು ಗುಡ್ಡದ ಮೇಲೆ ಕೋಟೆಕೊತ್ತಲಗಳನ್ನು ಕಟ್ಟಿಸಿಕೊಂಡು ನೆಲೆಸಿದ್ದನು.[೬೨] ಕೋಟೆಯ ಒಳಗಿರುವ ಈ ವಿಶಾಲವಾದ ಕೆರೆಯನ್ನು ತನ್ನ ತಾಯಿ ಲಕ್ಷ್ಮಮ್ಮನ ಹೆಸರಿನಲ್ಲಿ ಕ್ರಿ.ಶ. ಸುಮಾರು ೧೬೨೦ರಲ್ಲಿ ಕಟ್ಟಿಸಿದನೆಂದು ಕೆರೆ ಬಳಿ ಇರುವ ಶಾಸನದಿಂದ ವ್ಯಕ್ತವಾಗುತ್ತದೆ.[೬೩] ಈ ಕೆರೆಯ ಮಧ್ಯದಲ್ಲಿರುವ ಶಾಸನವೊಂದರಲ್ಲಿ ಮಹಾಕವಿ ಕಾಳಿದಾಸನನ್ನು ಹೊಗಳುವ ಒಂದು ಯಮಕ ಶ್ಲೋಕವನ್ನು ಕೆತ್ತಲಾಗಿದೆ. ಈ ಶಾಸನದ ವಿಶೇಷತೆಯೆಂದರೆ ಎಡದಿಂದ ಶಾಸನ ಓದಿದರೆ ಏನು ಅರ್ಥ ಬರುವುದೋ ಅದೇ ಅರ್ಥ ಬಲದಿಂದ ಎಡಕ್ಕೆ ಓದಿದರೂ ಬರುತ್ತದೆ.

ಕಂಜರಂ ಪುರತೇಂದ್ರುಚಂ ಮಹೇಂದಾಳಿ ಸದಾಳಿಕಾ

ಕಾಳಿದಾಸಳಿದಾಂ ಹೇಮಚಂದ್ರುಂತೇರ ಪುರಂಜಕಂ ಈ ಸಂಸ್ಕೃತ ಶ್ಲೋಕದಲ್ಲಿ ಕಾಳಿದಾಸನನ್ನು ಕವಿಶ್ರೇಷ್ಠನೆಂದು ಕರೆಯಲಾಗಿದೆ.[೬೪] ಶತ್ರುಗಳು ಕೂಡ ನೀನು ಹೃದಯಸ್ಪರ್ಶಿ ಕಾವ್ಯದಿಂದ ಸುಖಸಂಪತ್ತನ್ನು ಕೊಡುತ್ತಿರುವೆ ಎಂದು ಹೇಳಲಾಗಿದೆ.[೬೫] ಚಿತ್ರದುರ್ಗದ ಬಿಚ್ಚುಗತ್ತಿ ಭರಮಣ್ಣನಾಯಕನು ಮೊಳಕಾಲ್ಮೂರನ್ನು ಆಕ್ರಮಿಸಿಕೊಂಡು ತಮ್ಮನ್ನು ಸಾಮ್ರಾಜ್ಯವನ್ನು ವಿಸ್ತರಿಸಿದನು. ನಂತರ ಒರೇಮದಕರಿನಾಯಕನ ಕಾಲದವರೆಗೂ ಮೊಳಕಾಲ್ಮೂರು ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆಗೊಳಪಟ್ಟಿತ್ತು. ಇವರ ಕಾಲದಲ್ಲಿ ಈಗಾಗಲೇ ಇದ್ದ ಕೋಟೆಯನ್ನು ಬಲಪಡಿಸಿ ವಿಸ್ತರಿಸಿದರೆಂದು ಹೇಳಬಹುದು.[೬೬]

ಚಿತ್ರದುರ್ಗದ ಪತನಾನಂತರ ಈ ಪ್ರದೇಶವು ಹೈದರಾಲಿ ಮತ್ತು ಟಿಪ್ಪು ಅವರ ವಶವಾಯಿತು. ಟಿಪ್ಪುಸುಲ್ತಾನ್ ಬಂಧಿಸಿದ್ದ ನಾಲ್ಕುಜನ ಚೇಲಾ ಪಡೆಯುವರು ತಪ್ಪಿಸಿಕೊಂಡ ಪರಿಣಾಮವಾಗಿ, ಆ

ಪಡೆಯಲ್ಲಿದ್ದ ಉಳಿದ ೮ ಜನ ಯುರೋಪಿಯರನ್ನು ಕ್ರೂರ ಶಿಕ್ಷೆಗೆ ಒಳಪಡಿಸಿ ಮೊಳಕಾಲ್ಮೂರು ಕೋಟೆಯ ಒಳಗಡೆ ಬಂಧಿಸಿಡಲಾಯಿತು. ಈ ಕೋಟೆಯೊಳಗಡೆ ೬ ತಿಂಗಳುಗಳ ಕಾಲ ಇದ್ದ ಕೈದಿಗಳಿಗೆ ದಿನಕ್ಕೊಂದು ಸೇರು ರಾಗಿ ಕೊಡುತ್ತಿದ್ದರಂತೆ. ತರುವಾಯ ಅವರನ್ನು ಶ್ರೀರಂಗಪಟ್ಟಣದ ಕೋಟೆಗೆ ರವಾನಿಸಲಾಯಿತೆಂದು ಜೇಮ್ಸ್ ಬ್ರಿಸ್ಟೊವ್ ತನ್ನ ಆತ್ಮಚರಿತ್ರೆಯಲ್ಲಿ ಹೇಳಿದ್ದಾನೆ.[೬೬] ಇವರ ತರುವಾಯ ಮೊಳಕಾಲ್ಮೂರು ಆಂಗ್ಲರ ಕೈಸೇರಿ ಅವರಿಂದ ಮೈಸೂರು ಅರಸರ ಆಡಳಿತದ ವ್ಯಾಪ್ತಿಗೆ ಸೇರಿತ್ತು.[೬೮] ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪಿಸಿದ ಪೌಜುದಾರಿಯಲ್ಲಿ ಮೊಳಕಾಲ್ಮೂರು ಒಂದಾಗಿತ್ತು. ಕ್ರಿ.ಶ.೧೮೮೬ರಲ್ಲಿ ಚಿತ್ರದುರ್ಗ ಜಿಲ್ಲೆಯ ಅಸ್ತಿತ್ವದಲ್ಲಿ ಮೊಳಕಾಲ್ಮೂರು ಪ್ರದೇಶವು ಸೇರಿತು. ಕ್ರಿ.ಶ.೧೩೬೪ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಇಲ್ಲಿಗೆ ಬಂದಾಗ ಮೊದಲೇ ಇದ್ದ ಕೆರೆಯಿಂದ ಊರಿಗೆ ಕುಡಿಯುವ ನೀರಿಗೆ ನಲ್ಲಿ ಹಾಕಿಸಿದ್ದರಿಂದ ಅಂದಿನಿಂದ ಈ ಕೆರೆಗೆ ನಲ್ಲಿ ಕೆರೆ ಎಂದು ಹೆಸರಾಗಿದೆ.

ಮೊಳಕಾಲ್ಮೂರಿನ ಉತ್ತರ ಬೆಟ್ಟವನ್ನು ಬಳಸಿಕೊಂಡು ದಕ್ಷಿಣದಲ್ಲಿ ೩ ಸುತ್ತಿನ ಕೋಟೆ, ಪೂರ್ವದಲ್ಲಿ ೨ ಸುತ್ತು, ಪಶ್ಚಿಮದಲ್ಲಿ ಅವಶ್ಯಕತೆ ಇರುವಕಡೆ ೧ ಸುತ್ತಿನ ಕೋಟೆಯನ್ನು ಕಟ್ಟಲಾಗಿದೆ. ಭಾರೀ ಕಡಿದಾದ ಬಂಡೆಗಳ ಸಮೂಹವಿರುವ ನೈರುತ್ಯ ದಿಕ್ಕಿನಲ್ಲಿ ಯಾವುದೇ ಕೋಟೆಸಾಲುಗಳಿಲ್ಲ. ದಕ್ಷಿಣದ ಕೋಟೆಗಿಂತ ಉತ್ತರದ ಕೋಟೆ ಇಂದಿಗೂ ಸುಭದ್ರವಾಗಿ ಉಳಿದುಕೊಂಡು ಬಂದಿದೆ. ಗ್ರಾಮದಲ್ಲಿದ್ದ ಎರಡು ಸುತ್ತಿನ ನೆಲಮಟ್ಟದ ಕೊಟೆಯು ಈಗ ನಾಶವಾಗಿದೆ. ಆದರೆ ಅಲ್ಲಲ್ಲಿ ದ್ವಾರಬಾಗಿಲುಗಳು ಮಾತ್ರ ಉಳಿದುಕೊಂಡಿವೆ. ಇಡೀ ಕೋಟೆಯಲ್ಲಿ ೯ ದ್ವಾರಬಾಗಿಲು ಹಾಗೂ ೧೦ ದಿಡ್ಡಿ ಬಾಗಿಲುಗಳು ಈಗ ಉಳಿದಿವೆ.

ದಕ್ಷಿಣದಿಂದ ಪ್ರವೇಶ ಮಾಡುವಾಗ ನೆಲಮಟ್ಟದಲ್ಲಿ ಸಿಗುವ ಎರಡು ಊರಬಾಗಿಲುಗಳನ್ನು ಗ್ರಾಮ ಆವರಿಸಿಕೊಂಡಿದೆ. ಆದರೆ ಮೊದಲ ಬಾಗಿಲಿನ ಯಾವುದೇ ಅವಶೇಷಗಳು ಈಗ ಉಳಿದಿಲ್ಲ. ಊರು ಬಾಗಿಲು ಎಂದು ಕರೆಯುವ ಎರಡನೇ ಬಾಗಿಲು ತನ್ನ ಅವಶೇಷಗಳನ್ನು ಈಗಲೂ ಉಳಿಸಿಕೊಂಡಿದೆ. ಬಾಗಿಲುವಾಡಗಳ ಮೇಲೆ ಈಶ್ವರ ಮತ್ತು ನಂದಿ ಚಿತ್ರಗಳಿರುವುದರಿಂದ ಈ ಬಾಗಿಲನ್ನು ಈಶ್ವರನ ಬಾಗಿಲು ಎಂದು ಕರೆದಿದ್ದಾರೆ. ಈ ಬಾಗಿಲಿಗೆ ನಾಲ್ಕು ಬಾಗಿಲುವಾಡಗಳಿದ್ದು, ಎರಡು ಅಡ್ಡ ತೊಲೆಗಳ ಮೇಲೆ ಚಪ್ಪಡಿ ಬಂಡೆಗಳನ್ನು ಮುಚ್ಚಿರುತ್ತಾರೆ. ಈ ಬಾಗಿಲು ೧೩ ಅಡಿ ಎತ್ತರವಾಗಿದ್ದು, ೮ ಅಡಿ ಅಗಲವಿದೆ. ಉತ್ತರ ದಕ್ಷಿಣವಾಗಿ ೮ ಅಡಿ ಅಗಲ, ಪೂರ್ವಪಶ್ಚಿಮವಾಗಿ ೧೧ ಅಡಿ ಉದ್ದವಿದೆ. ಬಾಗಿಲಿನ

[illegible]

[illegible]

[illegible]

[illegible]

ವಿಶೇಷತೆಯೆಂದರೆ ನಾಲ್ಕು ಬಾಗಿಲುವಾಡಗಳ ಮಧ್ಯೆ ೬ ಅಡಿ ಆಳದ ತಗ್ಗನ್ನು ತೋಡಲಾಗಿದೆ. ಈ ತಗ್ಗು ಪ್ರದೇಶಕ್ಕೆ ಕಟ್ಟಡದ ರಚನೆಯಿದೆ. ಈ ರೀತಿಯ ವ್ಯವಸ್ಥೆ ಜಿಲ್ಲೆಯ ಯಾವುದೇ ಕೋಟೆಗಳಿಗಿಲ್ಲ. ಬಹುಶಃ ಇದರ ತುಂಬ ನೀರನ್ನು ತುಂಬಿ ಶತ್ರುಗಳಿಗೆ ಭಯ ಹುಟ್ಟಿಸುತ್ತಿರಬಹುದು. ಇದರ ಆಳ ಒಳಗಿರುವ ಕೋಟೆಯ ಸೈನಿಕರಿಗೆ ಮಾತ್ರ ತಿಳಿಯುತ್ತಿತ್ತೇ ವಿನಃ ಮತ್ತಾರಿಗೂ ಇದು ತಿಳಿಯುತ್ತಿರಲಿಲ್ಲ.

ಈ ಬಾಗಿಲಿನಿಂದ ಎಡಕ್ಕೆ ಉಲುಮೆ ತಿಪ್ಪೆಯ ಬುರುಜಿನವರೆಗಿದ್ದ ಕೋಟೆ ಶಿಥಿಲಗೊಂಡಿದ್ದು ಇದರ ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಮುಂದುವರೆದ ಈ ಕೋಟೆಯ ಭಾಗ ಊರು ಗುಡ್ಡದ ಬುರುಜುಗಳ ತನಕ ಸಾಗಿದೆ. ಉಲುಮೆ ತಿಪ್ಪೆ ಬುರುಜುಗಳು ಹಾಗೂ ಊರುಗುಡ್ಡದ ಬುರುಜುಗಳು ಈಗಲೂ ಉಳಿದುಕೊಂಡು ಬಂದಿವೆ. ನೆಲಮಟ್ಟದಲ್ಲಿರುವ ಎರಡೂ ಕೋಟೆ ಸಾಲುಗಳ ಪಕ್ಕ ಹಿಂದ ಆಳವಾದ ಕಂದಕವಿತ್ತೆಂದು ಸ್ಥಳೀಯರು ಹೇಳುತ್ತಾರೆ. ಈ ಪ್ರದೇಶದಲ್ಲಿರುವ ಕೋಟೆ ಆಂಜನೇಯ ಊರುಬಾಗಿಲ ರಕ್ಷಕನಾಗಿ ನಿಂತಿದ್ದಾನೆ. ಉಳಿದಂತೆ ಇಲ್ಲಿ ಪಾಳೆಯಗಾರರ ಹಿರೇಮಠ, ವೀರಗಲ್ಲುಗಳು ಅನೇಕ ಪುಷ್ಕರಣಿಗಳಿವೆ. ಕೋಟೆಯ ಒಳಭಾಗದಲ್ಲಿ ಮತ್ತೊಂದು ಆಂಜನೇಯ, ವೆಂಕಟರಮಣ, ಈಶ್ವರ ದೇವಾಲಯಗಳಿವೆ.

ಬೆಟ್ಟವನ್ನು ಹತ್ತಿ ಮುಂದೆ ನಡೆದಾಗ ವಿಶಾಲವಾದ ವೇದಿಕೆಯ ಮೇಲೆ ಕಟ್ಟಡದ ಅವಶೇಷಗಳನ್ನು ಕಾಣಬಹುದು. ಇದರ ಪಕ್ಕದಲ್ಲಿಯೇ ೧೨ ಅಡಿ ಎತ್ತರದ ಕೋಟೆ ಗೋಡೆಯಿದೆ. ಗೋಡೆಗೆ ಹೊಂದಿಕೊಂಡಂತೆ ಪೂರ್ವಪಶ್ಚಿಮವಾಗಿ ೬೨ ಮೀಟರ್ ಮತ್ತು ಉತ್ತರ-ದಕ್ಷಿಣವಾಗಿ ೧೧ ಮೀಟರ್ ಉದ್ದದ ವಿಸ್ತಾರವಾದ ಈ ಕಟ್ಟಡಕ್ಕೆ ४ ಅಡಿ ಅಧಿಷ್ಠಾನವಿದೆ. ಇದನ್ನು ರಕ್ಷಿಸುವ ಸಲುವಾಗಿಯೇ ಪೂರ್ವ ಭಾಗದಲ್ಲಿ ಪ್ರತ್ಯೇಕವಾದ ಎರಡು ಕಾವಲು ಬುರುಜುಗಳಿವೆ. ಈ ಕಟ್ಟಡದ ರಚನೆಯನ್ನು ನೋಡಿದರೆ ಇದು ಬಹು ಉಪಯೋಗಿ ಕಟ್ಟಡವೆನಿಸುತ್ತದೆ. ಈ ಕಟ್ಟಡದ ಉತ್ತರ ಭಾಗಕ್ಕೆ ಗೋಡೆ ೧೨ ಅಡಿ ಎತ್ತರವಿದ್ದು, ಪೂರ್ವ-ಪಶ್ಚಿಮದಲ್ಲಿ ೬೨ ಅಡಿ ಹಾಗೂ ಉತ್ತರದಕ್ಷಿಣವಾಗಿ ೧೧ ಅಡಿ, ಒಳವಿಸ್ತಾರ ೫ ಅಡಿ ಇರುವ ವಿಸ್ತಾರವಾದ ಕಣಜವೊಂದನ್ನು ನಿರ್ಮಿಸಲಾಗಿದೆ.(ಈ ಕಣಜದ ಬಗ್ಗೆ ಅಧ್ಯಾಯ ४ರಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ.) ಕಣಜದ ಉತ್ತರಕ್ಕೆ ಭಾರೀ ಬಂಡೆಗಳ ಸಮೂಹವಿದ್ದು, ಬಂಡೆಗಳಿಗೆ ಹೊಂದಿಕೊಂಡಂತೆ ಕೋಟೆಗೋಡೆ ಮುಂದುವರೆದಿದೆ. ೨೦ ಅಡಿ ಎತ್ತರ, ೧೦ ಅಡಿ ಅಗಲವಿರುವ ಈ ಕೋಟೆಯು ಪೂರ್ವದ ಊರುಗುಡ್ಡದ ಬುರುಜಿನ ತನಕ ಸಾಗಿದೆ. ಮಧ್ಯಮ ಗಾತ್ರದ ಬಿಳಿ ಕಣಶಿಲೆಯನ್ನು ಬಳಸಿ ಗೋಡೆ ನಿರ್ಮಿಸಲಾಗಿದೆ. ಈ ಕೋಟೆಯ ಗೋಡೆಯನ್ನು ದಾಟಿ

ಬಂಡೆಗಳ ಮಧ್ಯೆ ಮೇಲುದುರ್ಗಕ್ಕೆ ಸಾಗುವಾಗ ಬಂಡೆಯ ಮೇಲೊಂದರಲ್ಲಿ ಹನುಮಂತ, ಈಶ್ವರ, ನಂದಿಯ ಉಬ್ಬುಶಿಲ್ಪಗಳಿವೆ. ಈ ಎರಡೂ ಚಿತ್ರಗಳ ಮಧ್ಯೆ ಬಂಡೆಯನ್ನು ಕೊರೆದು, ಖಾಲಿ ಗೂಡೊಂದನ್ನು ಬಿಡಲಾಗಿದೆ.

ಈ ಶಿಲ್ಪಗಳ ಎದುರುಭಾಗದ ದುರ್ಗಮ ಸ್ಥಳದಲ್ಲಿ ಕಾವಲುಗಾರನ ಮನೆಯ ಅವಶೇಷಗಳಿವೆ. ಈ ದೇವತೆಗಳಿಗೆ ಬೆಳಕು ಕೊಡುವ ದೀಪದ ಗೂಡು ಇದಾಗಿರಬಹುದು. ಇಲ್ಲಿಂದ ಕಡಿದಾದ ಬಂಡೆಯ ನಡುವೆ ಮುಂದೆ ಸಾಗಿದರೆ ಪೂರ್ವ ಮತ್ತು ಪಶ್ಚಿಮಕ್ಕಿರುವ ಎರಡು ಬೆಟ್ಟಗಳ ಮಧ್ಯೆದಲ್ಲಿರುವ ಕೋಟೆಗೋಡೆ ಎದುರಾಗುತ್ತದೆ. ಕೋಟೆಯ ಪಶ್ಚಿಮಕ್ಕಿರುವ ಬೆಟ್ಟವನ್ನು ಸಂಧಿಸುವ ಸ್ಥಳದಲ್ಲಿ ಪಶ್ಚಿಮಾಭಿಮುಖವಾಗಿ ಇರುವ ದ್ವಾರಬಾಗಿಲಿದೆ. ಈ ದ್ವಾರಬಾಗಿಲ ಮುಂಭಾಗ ಬಸವಣ್ಣನ ದೇವಾಲಯ ಇರುವುದರಿಂದ ಈ ಬಾಗಿಲನ್ನು ಬಸವನ ಬಾಗಿಲೆಂದು ಕರೆಯುತ್ತಾರೆ. ಬಾಗಿಲ ಎದುರಿಗೆ ಮುಂದೆ ಚಾಚಿದ ಚೌಕಾಕಾರದ ಕೊತ್ತಲವಿದೆ. ಕೊತ್ತಲದ ಕೈಪಿಡಿ ಗೋಡೆಯಲ್ಲಿ ಬಂದೂಕು ಕಿಂಡಿಗಳಿವೆ. ಬಸವನಬಾಗಿಲು ಪೂರ್ವಪಶ್ಚಿಮವಾಗಿ ೫.೯ ಅಡಿ, ಉತ್ತರದಕ್ಷಿಣವಾಗಿ ೬.೩ ಅಡಿ ಇದ್ದು ೧೦ ಅಡಿ ಎತ್ತರದಲ್ಲಿದೆ. ಬಾಗಿಲಿಗೆ ಜೋಡಿಸಿರುವ ತೊಲೆಗಳಿಗೆ ಪ್ರತ್ಯೇಕವಾದ ಚೌಕಟ್ಟು ಇಲ್ಲ. ನಾಲ್ಕು ಕಂಬಗಳ ಪಕ್ಕದಲ್ಲಿ ಎತ್ತರವಾದ ಗೋಡೆ ಕಟ್ಟಿ ಬಾಗಿಲಿಗೆ ಭದ್ರತೆ ಒದಗಿಸಿದ್ದಾರೆ. ಈ ಬಾಗಿಲ ಪಕ್ಕದಲ್ಲಿ ४.४ ಅಡಿ ಎತ್ತರ, ೨.೨ ಅಡಿ ಅಗಲದ ದಿಡ್ಡಿ ಬಾಗಿಲು ಇದೆ. ಇದರ ಪೂರ್ವಕ್ಕೆ ಹೆಬ್ಬೆಟ್ಟು ಗುಂಡಗಳ ಬೆಟ್ಟವಿದೆ. ಸಮೀಪದಲ್ಲಿಯೇ ಬತೇರರ ಬುರುಜು ಇದೆ. ಇವುಗಳ ಮಧ್ಯೆ ದೊಡ್ಡ ದೊಡ್ಡ ಗುಂಡುಗಳಿದ್ದು, ಗುಂಡುಗಳ ಮೇಲೆ ವಿನಾಯಕ ಚಿತ್ರ ಹೆಬ್ಬಂಡೆಗಳ ಮಧ್ಯೆ ಪ್ರಾಚೀನ ಕಾಲದ ವರ್ಣಚಿತ್ರಗಳಿವೆ. ಪಶ್ಚಿಮಕ್ಕೆ ಝಂಡಾ ಗುಂಡು ಎಂದು ಕರೆಯುವ ಈ ಗುಂಡಿನ ಮೇಲೆ ಬಹುಶಃ ಹಿಂದೆ ಧ್ವಜ ಹಾರಿಸುತ್ತಿದ್ದಿರ ಬಹುದು.

ಬಸವನಬಾಗಿಲನ್ನು ದಾಟಿ ಮುಂದೆ ಹೋಗುವಾಗ ೨೦x೨೦ಚ.ಅಡಿಯ ಕಟ್ಟಡದ ಅವಶೇಷಗಳಿವೆ. ಇಲ್ಲಿರುವ ಅವಶೇಷಗಳನ್ನು ಗಮನಿಸಿದರೆ ಬಹುಶಃ ಇದು ಒಂದು ಶೈವ ದೇವಾಲಯ ಇತ್ತೆಂದು ಕಂಡುಬರುತ್ತದೆ. ಈ ದೇವಾಲಯದ ಮುಂಭಾಗ ವಿಶಾಲವಾದ ನಾಗತಿಕೆರೆ ಇದೆ. ಕೆರೆಯ ಹಿಂಭಾಗ ಬಾವಿ ಇದ್ದು, ಈ ಪ್ರದೇಶದಲ್ಲಿದ್ದ ಶೃಂಗಾರ ತೋಟಕ್ಕೆ ಈ ಬಾವಿಯ ನೀರನ್ನು ಬಳಸುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ. ಪಶ್ಚಿಮ ಭಾಗದಲ್ಲಿರುವ ಭಾರೀ ಕಡಿದಾದ ಬಂಡೆಯನ್ನು ಕೂಗುವ ಬಂಡೆ ಅಥವಾ ಮೊಳಗುವ ಕಲ್ಲು ಎಂದು ಕರೆಯುತ್ತಾರೆ. ಈಗಲೂ ಈ ಬಂಡೆಯಿಂದ ಪ್ರತಿಧ್ವನಿ ಬರುತ್ತದೆ.

[illegible]

[illegible]

[illegible]

ಇಲ್ಲಿಂದ ಮುಂದೆ ಸಾಗಿದರೆ, ೧೫ಮೀ. ಆಳ ಹಾಗೂ ೩೦ಮೀ. ಉದ್ದವಿರುವ ನೀಲಮ್ಮನ ಕುಂಟೆ ಸಿಗುತ್ತದೆ.

ಈ ಕುಂಟೆಯಿಂದ ಪಶ್ಚಿಮಕ್ಕಿರುವುದೇ ಮೇಲುದುರ್ಗದ ಕೋಟೆ. ಈ ಕೋಟೆಯನ್ನು ಮಧ್ಯಮ ಗಾತ್ರದ ಕಲ್ಲು ಹಾಗೂ ಗಾರೆಯನ್ನು ಬಳಸಿ ಕಟ್ಟಲಾಗಿದೆ. ೧೦ ಅಡಿ ಅಗಲ, ೧೫ ಅಡಿ ಎತ್ತರವಿರುವ ಈ ಕೋಟೆಯಗೋಡೆಗೆ ಬಂದೂಕು ಕಿಂಡಿಗಳಿವೆ. ಪೂರ್ವ ಮತ್ತು ಪಶ್ಚಿಮದ ಗೋಡೆಯಲ್ಲಿ ಚೌಕಾಕಾರದ ಮತ್ತು ಅರ್ಧ ವೃತ್ತಾಕಾರದ ಕೊತ್ತಲಗಳಿವೆ. ಉತ್ತರ ದಕ್ಷಿಣವಾಗಿ ಇರುವ ಈ ಕೋಟೆಯ ಸಾಲಿನ ಮಧ್ಯೆ ಏಣಿಮಾರಮ್ಮನ ದ್ವಾರಬಾಗಿಲಿದೆ. ಬಾಗಿಲುವಾಡಗಳ ಮೇಲಿರುವ ಖಡ್ಗ ಹಿಡಿದ ಸ್ತ್ರೀ ದೇವತೆಯ ಶಿಲ್ಪದಿಂದ ಈ ಹೆಸರು ಬಂದಿರಬಹುದು. ಇತ್ತೀಚೆಗೆ ಈ ದೇವತೆಯನ್ನು ಪೂಜೆ ಮಾಡಲು ಕೃತಕ ಏಣಿ ಹಾಕಿರುವುದರಿಂದ ಏಣಿಮಾರಮ್ಮ ಎಂದೇ ಕರೆಯುತ್ತಾರೆ. ಬಾಗಿಲ ಬೋದಿಗೆಗಳ ಮೇಲೆ ಸುರುಳಿಯಾಕಾರದ ಕೆತ್ತನೆಯಿದೆ. ಬಾಗಿಲ ಪ್ರವೇಶದ ಎರಡೂ ಪಾರ್ಶ್ವಗಳಲ್ಲಿ ಪಹರೆ ಗೃಹದ ಅವಶೇಷಗಳಿವೆ. ಪಕ್ಕದಲ್ಲಿಯೇ ದಿಡ್ಡಿ ಬಾಗಿಲು ಇದೆ. ಬಾಗಿಲಿನ ಪೂರ್ವ ಭಾಗಕ್ಕೆ ಹನುಮಂತನ ದೇವಾಲಯವಿದೆ. ಈ ದೇವಾಲಯಕ್ಕೆ ಪೂರ್ವಪಶ್ಚಿಮವಾಗಿ ೧೦ ಮೀ. ದಕ್ಷಿಣೋತ್ತರವಾಗಿ ೧೪ ಮೀ. ಪ್ರಾಕಾರವನ್ನು ನಿರ್ಮಿಸಲಾಗಿದೆ. ದೇವಾಲಯದ ಅದಿಷ್ಠಾನದಲ್ಲಿ ಹನುಮಂತ, ಲಜ್ಜಾಗೌರಿ, ಗಿಳಿ ಮುಂತಾದ ಉಬ್ಬುಶಿಲ್ಪಗಳಿವೆ. ಏಣಿ ಮಾರಮ್ಮನ ಕೋಟೆಯ ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲೂ ವ್ಯವಸ್ಥಿತವಾಗಿರುವ ಎತ್ತರವಾದ ಎರಡು ಬುರುಜುಗಳಿವೆ.

ಏಣಿ ಮಾರಮ್ಮನ ಬಾಗಿಲಿನ ಪಶ್ಚಿಮಕ್ಕೆ ವಿಸ್ತಾರವಾದ ಪ್ರದೇಶವನ್ನೊಳಗೊಂಡಂತೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಎತ್ತರವಾದ ಕೋಟೆಯನ್ನು ಕಟ್ಟಲಾಗಿದೆ. ಈ ಪ್ರದೇಶದಲ್ಲಿ ಅನೇಕ ಪುಷ್ಕರಣಿಗಳು, ನೀರಿನ ಆಶ್ರಯತಾಣಗಳು ಹಾಗೂ ಒಂದು ದಿಡ್ಡಿಬಾಗಿಲು ಇದೆ. ಈ ದಿಡ್ಡಿಬಾಗಿಲು ೫.೨x೨.೫x೫.೪ ಅಡಿಗಳ ವಿಸ್ತಾರ ಹೊಂದಿದೆ. ಈ ದಿಡ್ಡಿ ಬಾಗಿಲು ಏಣಿ ಮಾರಮ್ಮನ ಬುರುಜು ಹಾಗೂ ಕೆಳಕೋಟೆಗೆ ಸಂಪರ್ಕ ಕಲ್ಪಿಸುತ್ತದೆ. ಇವುಗಳ ಮಧ್ಯೆ ಪೂರ್ವಪಶ್ಚಿಮವಾಗಿ ೫೫ ಮತ್ತು ಉತ್ತರ ದಕ್ಷಿಣವಾಗಿ ೪೫ ಚ.ಮೀ. ವ್ಯಾಪ್ತಿ ಹೊಂದಿರುವ ಕಟ್ಟಡದ ಅವಶೇಷಗಳಿವೆ. ಉತ್ತರ ದಕ್ಷಿಣಕ್ಕೆ ೧೫ ಅಡಿ ಎತ್ತರದ ಕಲ್ಲಿನ ಕೋಟೆಯನ್ನು ನಿರ್ಮಿಸಲಾಗಿದೆ. ಇದರ ಮೇಲೆ ೫ ಅಡಿ ಎತ್ತರದ ಮಣ್ಣಿನ ಕೋಟೆಯಿದೆ. ಮಣ್ಣಿನ ಕೋಟೆಯ ಗೋಡೆಯಲ್ಲಿ ಬಂದೂಕು ಕಿಂಡಿಗಳಿವೆ. ಈ ಎರಡೂ ಕೋಟೆ ಗೋಡೆಗಳ ಮಧ್ಯೆ ೮ ಅಡಿಗಳ ಅಂತರದಲ್ಲಿ ಅನೇಕ ಕೊಠಡಿಗಳ ಅವಶೇಷಗಳಿವೆ. ಒಂದು ಕೊಠಡಿಯಿಂದ ಮತ್ತೊಂದು

[illegible]

ಕೊಠಡಿಗೆ ಗೊತ್ತಾಗದ ರೀತಿಯಲ್ಲಿ ಬಾಗಿಲುಗಳ ಸಂಪರ್ಕ ಕಲ್ಪಿಸಲಾಗಿದೆ. ಬಹುಶಃ ಈ ಕಟ್ಟಡದ ರಚನೆ ಮತ್ತು ವಿನ್ಯಾಸವನ್ನು ಗಮನಿಸಿದರೆ ಇದೊಂದು ಆಡಳಿತ ಕೇಂದ್ರ ಅಥವಾ ಅರಮನೆಯ ಕಟ್ಟಡವಾಗಿರಬಹುದೆಂದು ಹೇಳಬಹುದು. ಈ ಕಟ್ಟಡದ ಮುಂಭಾಗದಲ್ಲಿ ಪುಷ್ಕರಣಿಗಳು, ಅನೇಕ ಕಲ್ಲಿನ ಕಣಜಗಳು ಇವೆ. ಇಲ್ಲಿರುವ ದೊಡ್ಡ ಬಂಡೆಗಳ ಮಧ್ಯಭಾಗದಲ್ಲಿ ಗರಡಿ ಸಾಧನೆ ಮಾಡುತ್ತಿರುವ ಚಿತ್ರಗಳಿವೆ. ಈ ಚಿತ್ರಗಳಿಂದ ಇಲ್ಲಿ ಗರಡಿಯೊಂದಿತ್ತೆಂದು ಹೇಳಬಹುದು.

ಏಣಿ ಮಾರಮ್ಮನ ಕೋಟೆಯ ಬಾಗಿಲಿನ ಸುತ್ತ ಹೊಂದಿಕೊಂಡಂತೆ ಪೂರ್ವ ಮತ್ತು ಪಶ್ಚಿಮವಾಗಿ ಭಾರೀ ಎತ್ತರದ ಕೋಟೆಯ ಸಾಲು ಇದೆ. ಈ ಕೋಟೆಯ ಸಾಲು ಮೇಲೆ ಹೇಳಿದ ಕಟ್ಟಡದ ಸಾಲುಗಳಿಗೆ ಹೊಂದಿಕೊಂಡಂತೆ ಉತ್ತರದಲ್ಲಿ ಏಣಿ ಮಾರಮ್ಮನ ಬುರುಜಿನವರೆಗೂ ಮುಂದುವರೆದಿದೆ. ಈ ಕೋಟೆಯ ಸಾಲಿನಲ್ಲಿ ೫.೨x೨.೫x೫.೪ ಅಡಿಗಳಲ್ಲಿ ನಿರ್ಮಿಸಲಾದ ದಿಡ್ಡಿ ಬಾಗಿಲಿದೆ. ಈ ದಿಡ್ಡಿ ಬಾಗಿಲಿನಿಂದ ಪಶ್ಚಿಮದ ಕೋಟೆಯ ಸಾಲುಗಳಿಗೆ ಪ್ರವೇಶವಿದೆ. ದಿಡ್ಡಿ ಬಾಗಿಲಿನ ಮೇಲ್ಭಾಗ ೨೦ ಅಡಿ ಎತ್ತರದ ಕಲ್ಲಿನ ಕೋಟೆ ಅದರ ಮೇಲ್ಭಾಗದಲ್ಲಿ ೫ ಅಡಿ ಎತ್ತರದ ಮಣ್ಣಿನ ಕೋಟೆಯಿದೆ. ಈ ಕೋಟೆಗೆ ಬಂದೂಕುರಂಧ್ರಗಳಿದ್ದು, ವಿಶಾಲವಾದ ಅಟ್ಟಾಲಕ ಇದೆ. ಈ ಬಂದೂಕು ರಂಧ್ರಗಳಿಂದ ದೂರದ ಕಾಟಿಹಳ್ಳಿಗುಡ್ಡ, ಬಿಳಿ ತಿಪ್ಪೇಗುಡ್ಡ, ಕೆರೆ, ಕುಂಟೆಗಳ ದೃಶ್ಯ ಕಾಣುತ್ತದೆ. ಇದೇ ಕೋಟೆಯ ಸಾಲು ಏಣಿಮಾರಮ್ಮನ ಕೋಟೆಯ ಸಾಲನ್ನು ದಾಟಿ ಪೂರ್ವಕ್ಕೆ ನಾಗತಿಕೆರೆಯವರೆಗೂ ಮುಂದುವರೆಯುತ್ತದೆ. ಈ ಮಧ್ಯೆ ವಿಶೇಷ ರಚನೆಯ ದ್ವಾರಬಾಗಿಲಿದೆ. ೨೫ ಅಡಿ ಎತ್ತರದ ಕೋಟೆಯ ಕೆಳಭಾಗದಲ್ಲಿ ಈ ಬಾಗಿಲ ರಚನೆಯಿದ್ದು, ೧೫ ಅಡಿ ಎತ್ತರ, ೮ ಅಡಿ ಅಗಲದ ಇದರ ಪಕ್ಕದಲ್ಲಿ ದಿಡ್ಡಿ ಬಾಗಿಲಿದೆ. ಬಾಗಿಲುವಾಡಗಳ ಮೇಲೆ ಸುಂದರವಾದ ಪದ್ಮದ ಚಿತ್ರ ಬಿಡಿಸಲಾಗಿದೆ. ಸಾಮಾನ್ಯವಾಗಿ ದಿಡ್ಡಿಬಾಗಿಲುಗಳ ದ್ವಾರದ ಪಕ್ಕದಲ್ಲಿಯೇ ಇರುತ್ತವೆ. ಆದರೆ ಈ ಬಾಗಿಲಿಗೆ ದ್ವಾರಬಾಗಿಲ ಮಧ್ಯದಲ್ಲಿ ದಿಡ್ಡಿ ಬಾಗಿಲನ್ನು ನಿರ್ಮಿಸಲಾಗಿದೆ.

ಈ ಬಾಗಿಲನ್ನು ದಾಟಿ ಮುಂದೆ ಹೋದರೆ ಭಾರೀ ದೊಡ್ಡ ಹೊಂಡವೊಂದನ್ನು ನಿರ್ಮಿಸಲಾಗಿದೆ. ಇಲ್ಲಿಂದ ನುಂಕೆಮಲೆ ಕೋಟೆಗೆ ಪ್ರವೇಶ ಕಲ್ಪಿಸಲಾಗಿದೆ. ಆದರೆ ಇತ್ತೀಚೆಗೆ ಈ ದಾರಿಯಲ್ಲಿ ಗಿಡಮರಗಳು ಬೆಳೆದಿರುವುದರಿಂದ ದಾರಿಯು ಕಂಡುಬರುತ್ತಿಲ್ಲ. ಬೆಟ್ಟದ ಉತ್ತರ ಭಾಗದಲ್ಲಿ ಇರುವ ಕೋಟೆಗೋಡೆ, ಭದ್ರವಾದ ಬಾಗಿಲುಗಳು, ದಿಡ್ಡಿಗಳು, ರಸ್ತೆಗಳು ಇವೆಲ್ಲವುಗಳನ್ನು ಗಮನಿಸಿದರೆ ಸಾಮಾನ್ಯವಾಗಿ ಹಿಂದೆ ದಕ್ಷಿಣ ಭಾಗಕ್ಕಿಂತ ಹೆಚ್ಚಾಗಿ ಉತ್ತರ ಭಾಗವನ್ನು ಬಳಸಿಕೊಂಡು ಲುಂಕೇಕೋಟೆಗೆ ಸಂಪರ್ಕ

[illegible]

[illegible]

[illegible]

ಕಲ್ಪಿಸಿಕೊಂಡಂತಿದೆ. ಬಹುಶಃ ಇಲ್ಲಿನ ಕೋಟೆಯ ರಚನೆ, ಬಾಗಿಲುಗಳ ವಿನ್ಯಾಸ ನೋಡಿದರೆ ಇವು ಚಿತ್ರದುರ್ಗದ ಪಾಳೆಯಗಾರರ ಅವಧಿಯಲ್ಲಿ ನಿರ್ಮಾಣವಾದಂತೆ ಕಂಡುಬರುತ್ತವೆ.

ಏಣಿಮಾರಮ್ಮನ ಬಾಗಿಲಿನಿಂದ ಪಶ್ಚಿಮದಲ್ಲಿ ಮೇಲುದುರ್ಗಕ್ಕೆ ಹೋಗುವಾಗ ಬಲಭಾಗದಲ್ಲಿ ಭದ್ರವಾದ ಕೋಟೆಗೋಡೆ ಇದೆ. ಈ ಕೋಟೆಗೋಡೆಯ ಮಧ್ಯಭಾಗದಲ್ಲಿ ದಕ್ಷಿಣೋತ್ತರಕ್ಕೆ ಹನುಮನ ಬಾಗಿಲಿದೆ. ಬಾಗಿಲುವಾಡಗಳ ಮೇಲೆ ಸುಂದರವಾದ ಹನುಮಂತನ ಉಬ್ಬುಶಿಲ್ಪವಿರುವುದರಿಂದ ಈ ಬಾಗಿಲಿಗೆ ಹನುಮನ ಬಾಗಿಲು ಎಂದು ಕರೆಯಲಾಗಿದೆ. ೭x೮x೧೫ ಅಡಿಗಳಲ್ಲಿ ನಿರ್ಮಿಸಲಾಗಿರುವ ಈ ಬಾಗಿಲ ತೋಳುಗಳನ್ನು ಮಕರ ಹಾಗೂ ಬಳ್ಳಿ ಸುರುಳಿಗಳಿಂದ ಅಲಂಕರಿಸಲಾಗಿದೆ. ಬಳ್ಳಿ ಸುರುಳಿಗಳ ಮಧ್ಯೆ ಕಮಲದ ಹೂವಿನ ಚಿತ್ರಗಳಿವೆ. ಬಾಗಿಲ ಬೋದಿಗೆಗಳು ಸುರುಳಿಯಾಕಾರದ ವಿಶೇಷ ರಚನೆಯನ್ನು ಹೊಂದಿವೆ. ಬಾಗಿಲ ಮುಂಭಾಗದ ಹುಟ್ಟುಬಂಡೆಯ ಮೇಲೆ ವೀರನೊಬ್ಬ ಖಡ್ಗಧಾರಿಯಾಗಿ ಕುದುರೆಯ ಮೇಲೆ ಕುಳಿತಿರುವ ಶಿಲ್ಪ ಹಾಗೂ ಹಿಂದೆ ಸೇವಕನೊಬ್ಬ ವೃತ್ತಾಕಾರದ ಲಾಂಛನವನ್ನು ಎತ್ತಿ ಹಿಡಿದಿರುವ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪದ ಪಕ್ಕದಲ್ಲಿಯೇ ೮ ಅಡಿಯ ಸರ್ಪದ ಮುಂದೆ ಭಕ್ತನೊಬ್ಬನು ಕೈಮುಗಿದು ನಿಂತಿರುವ ಹಾಗೂ ಈತನ ಹಿಂದೆ ಸೇವಕನಿರುವ ಚಿತ್ರಗಳಿಗೆ ಕಮಾನುಗಳನ್ನು ಬಿಡಿಸಿ ಸುಂದರಗೊಳಿಸಲಾಗಿದೆ. ಈ ಪ್ರದೇಶದಲ್ಲಿ ನೀರಿನ ಕಟ್ಟೆಗಳು, ಕಲ್ಲಿನ ಕಣಜಗಳು ಇತರೆ ಕಟ್ಟಡಗಳ ಅವಶೇಷಗಳಿವೆ. ಅಲ್ಲಲ್ಲಿ ಬಂಡೆಗಳ ಮೇಲೆ ವೃತ್ತಾಕಾರದ ಬುರುಜುಗಳಿವೆ.

ಹನುಮನ ಬಾಗಿಲಿಗೆ ಹೊಂದಿಕೊಂಡಂತಿರುವ ಬೆಟ್ಟವನ್ನು ಬಳಸಿಕೊಂಡು ಮತ್ತೆ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆ ಗೋಡೆಯು ಉತ್ತರದಿಂದ ದಕ್ಷಿಣಕ್ಕೆ ಕೂಗುವ ಗುಡ್ಡಕ್ಕೆ ಸೇರುತ್ತದೆ. ಇಲ್ಲಿಂದ ಮೇಲುದುರ್ಗಕ್ಕೆ ಹೋಗಲು ದುರ್ಗಮವಾದ ಪ್ರದೇಶದಲ್ಲಿ ದಾರಿಯಿದೆ. ದಾರಿಯ ಎಡ ಮತ್ತು ಬಲಭಾಗಗಳಲ್ಲಿ ಅವಶ್ಯಕತೆ ಇರುವ ಕಡೆ ಅಲ್ಲಲ್ಲಿ ಕೋಟೆಯ ಗೋಡೆ ಮತ್ತು ಬುರುಜುಗಳಿವೆ. ಇಂತಹ ಬುರುಜುಗಳನ್ನು ಸ್ವಾಭಾವಿಕ ಬಂಡೆಗಳ ಮೇಲೆ ಕಟ್ಟಲಾಗಿದೆ. ಇಲ್ಲಿ ಪಾದಗಟ್ಟೆ ಎಂಬುವ ಸ್ಥಳವನ್ನು ಸ್ಥಳೀಯರು ದೇವರ ತಗ್ಗು ಎಂದು ಕರೆಯುತ್ತಾರೆ. ನುಂಕೆಮಲೆ ಸಿದ್ದೇಶ್ವರ ಉತ್ಸವದಲ್ಲಿ ಈ ಸ್ಥಳಕ್ಕೆ ಬಂದಾಗ ದೇವರನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸುತ್ತಾರಂತೆ. ಮುಂದೆ ಎಡಭಾಗದಲ್ಲಿ ಸಮತಟ್ಟಾದ ದೊಡ್ಡ ಬಂಡೆಯೊಂದರ ಮೇಲೆ ಕಟ್ಟಡದ ಅವಶೇಷವಿದೆ. ಚಿಕ್ಕ ಎರಡು ಕಲ್ಲಿನ ಕೊಠಡಿಗಳನ್ನು ನಿರ್ಮಿಸಿರುವ ಈ ಕಟ್ಟಡವು ಅಪೂರ್ಣವಾಗಿಯೇ ಉಳಿದಿದೆ. ಇದರ ಪಕ್ಕದಲ್ಲಿರುವ ಬುರುಜಿನ ಮೇಲೆ ನಿಂತರೆ ನಾಗತಿಕೆರೆ, ಕೂಗುಬಂಡೆ, ಊರುಬಾಗಿಲುಗಳೆಲ್ಲವೂ ಕಂಡುಬರುತ್ತವೆ. ಈ ಭಾಗದಲ್ಲಿರುವ ಕೋಟೆ ಗೋಡೆಯು ವ್ಯವಸ್ಥಿತವಾಗಿ ನಿರ್ಮಾಣಗೊಂಡಿದ್ದು ಅಲ್ಲಲ್ಲಿ ಬಂದೂಕು ಕಿಂಡಿಗಳಿವೆ.

[illegible]

[illegible]

[illegible]

ಇಲ್ಲಿಂದ ಎತ್ತರವಾದ ಕೋಡುಗಲ್ಲುಗಳ ಮಧ್ಯೆ ಕಾಳಿಂಗನ ಗವಿ ಎಂಬ ಪ್ರದೇಶವನ್ನು ಬಳಸಿಕೊಂಡು ಮೇಲುದುರ್ಗಕ್ಕೆ ಹೋಗಬಹುದು. ಮೇಲುದುರ್ಗದ ಪ್ರದೇಶದಲ್ಲಿ ವಿಶಾಲವಾದ ಮೆಟ್ಟಿಲುಗಳುಳ್ಳ, ಬಂಡೆಯ ಮೇಲೆ ವೃತ್ತಾಕಾರದ ದೊಡ್ಡ ಬುರುಜಿದೆ. ಇದನ್ನು ಕಾಳಿಂಗನ ಬುರುಜು ಎಂದು ಕರೆಯುತ್ತಾರೆ. ಮಧ್ಯಮಗಾತ್ರದ ಕಲ್ಲುಗಳಿಂದ ಕಟ್ಟಿರುವ ಈ ಬುರುಜಿನ ಎತ್ತರ ೬ ಅಡಿ ಇದೆ. ಈ ಭಾಗದಲ್ಲಿ ಅತ್ಯಂತ ಎತ್ತರದ ಬುರುಜು ಇದಾಗಿದ್ದು, ಇಲ್ಲಿಂದ ವಾಯುವ್ಯ ದಿಕ್ಕಿಗಿರುವ ನುಂಕೆಮಲೆ ಕೋಟೆ, ಉತ್ತರ ದಿಕ್ಕಿನಲ್ಲಿರುವ ಜಟಂಗರಾಮೇಶ್ವರ, ಈಶಾನ್ಯ ದಿಕ್ಕಿನಲ್ಲಿರುವ ಬ್ರಹ್ಮಗಿರಿ ಮತ್ತು ಉಚ್ಚಂಗಿದುರ್ಗದ ಕೋಟೆಗಳು ಕಾಣುತ್ತವೆ. ಸಾಮಾನ್ಯವಾಗಿ ಈ ಎಲ್ಲಾ ಕೋಟೆಗಳಿಗೆ ಸಂಪರ್ಕ ಸಾಧಿಸಲು ಈ ಬುರುಜು ನಿರ್ಮಾಣಗೊಂಡಂತಿದೆ. ಗವಿ ಬುರುಜಿನಿಂದ ನೈರುತ್ಯಕ್ಕೆ ಅನತಿ ದೂರದಲ್ಲಿ ಕೊನೆಯ ಕೋಟೆ ಭಾಗ ಮೇಲುದುರ್ಗವಿದೆ. ಚೌಕಾಕಾರವಾಗಿರುವ ಕೋಟೆಗೋಡೆಯು ಮೇಲುದುರ್ಗವನ್ನು ಆವರಿಸಿಕೊಂಡಿದೆ. ಇಡೀ ಬೆಟ್ಟದ ಅತ್ಯಂತ ಎತ್ತರದ ಭಾಗ ಇದಾಗಿದೆ. ಈ ಮೇಲುದುರ್ಗದ ಕೋಟೆಗೆ ಪ್ರವೇಶಿಸಲು ಪೂರ್ವಭಾಗದಲ್ಲಿ ವಿನಾಯಕನ ಬಾಗಿಲಿದೆ. ಬಾಗಿಲುವಾಡದ ಮೇಲೆ ಸುಂದರವಾದ ವಿನಾಯಕನ ಚಿತ್ರ ಇರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ೫x೪x೭ ಅಡಿಗಳಲ್ಲಿ ನಿರ್ಮಾಣವಾಗಿರುವ ಈ ಬಾಗಿಲಿನಲ್ಲಿ ೧೨x೧೨ ಇಂಚಿನ ಬಾಗಿಲುವಾಡಗಳಿವೆ. ಈ ಬಾಗಿಲನ್ನು ಪ್ರವೇಶಿಸಿ ಒಳಹೋದರೆ, ಬಲ ಭಾಗದಲ್ಲಿ ಎರಡು ದೊಡ್ಡ ಬಂಡೆಗಲ್ಲುಗಳಿವೆ. ಸುಮಾರು ೩೦ ಅಡಿ ಎತ್ತರವಾಗಿರುವ ಈ ಬಂಡೆಗಳನ್ನು ಬಳಸಿ ಕೋಟೆ ಹಾಗೂ ಮಧ್ಯಭಾಗದಲ್ಲಿ ವೃತ್ತಾಕಾರದ ಬುರುಜುಗಳಿವೆ. ಈ ಕಟ್ಟಡದ ಅವಶೇಷಗಳ ಕೆಳಭಾಗದಲ್ಲಿ ಬಂಡೆಯ ಮೇಲೆ ಕಮಾನಿನ ಆಕಾರದಲ್ಲಿ ಎರಡು ಚಿತ್ರ ಪಟ್ಟಿಕೆಗಳನ್ನು ಬಿಡಿಸಿದ್ದಾರೆ. ಮುಂಭಾಗದಲ್ಲಿ ಬೋಸೆದೇವರ ಹೊಂಡ ಮತ್ತು ಕಂಪಳದೇವರ ಹೊಂಡ ಎಂಬ ಎರಡು ಹೊಂಡಗಳಿವೆ. ಹೊಂಡಗಳ ಮಧ್ಯೆ ತೆರೆದ ಮಂಟಪದಲ್ಲಿ ಈಶ್ವರ ದೇವಾಲಯವಿದೆ. ದೇವಾಲಯದ ಹಿಂಭಾಗ ಕೋಟೆಯ ಕೊನೆಯ ಸಾಲು ಇದೆ. ಕೋಟೆಯ ಹಿಂಭಾಗದಲ್ಲಿ ಅಗಸರ ಹೊಂಡ ಎಂದು ಕರೆಯುವ ನೀರಿನ ಆಶ್ರಯವಿದೆ.

ಈ ಭಾಗದಿಂದ ಮೊಳಕಾಲ್ಮೂರು ಕೋಟೆಯ ಪಶ್ಚಿಮ ಭಾಗ ಹಾಗೂ ಸುಮಾರು ೧ ಕಿ.ಮೀ. ದೂರದಲ್ಲಿರುವ ದೇವರಗುಡ್ಡ(ನುಂಕೆಮಲೆ)ದ ಮೇಲಿನ ಬುರುಜು ಕಾಣುತ್ತದೆ. ಈ ಎರಡೂ ಗುಡ್ಡಗಳ ಮಧ್ಯವಿರುವ ಆಳವಾದ ಕಣಿವೆ ಪ್ರದೇಶ ಗುಡ್ಡಗಳನ್ನು ಬೇರ್ಪಡಿಸಿದೆ. ಈ ಭಾಗವನ್ನು ಹಿರೇಗೊಂದಿಸರ ಎಂದು ಸ್ಥಳೀಯರು ಕರೆಯುತ್ತಾರೆ. ಮೊಳಕಾಲ್ಮೂರು ಕೋಟೆಯ ಪಶ್ಚಿಮಕ್ಕೆ ದೇವರಹಳ್ಳಿ ಗುಡ್ಡ,

ಹಾಸಗಲ್ಲು ಗುಡ್ಡಗಳಿವೆ. ಉತ್ತರಕ್ಕೆ ಬೂದುಗುಂದು, ಕಾಟೆಹಳ್ಳಿ, ಜಟಂಗರಾಮೇಶ್ವರ ಗುಡ್ಡಗಳಿವೆ. ಈಶಾನ್ಯಕ್ಕೆ ಬ್ರಹ್ಮಗಿರಿ, ಉಚ್ಚಂಗಿದುರ್ಗ ಕೋಟೆಗಳು, ದಕ್ಷಿಣಕ್ಕೆ ಮರ್ಲಹಳ್ಳಿ, ಕೋನಸಾಗರ, ತಳುಕಿನ ಗುಡ್ಡಗಳು, ಪೂರ್ವಕ್ಕೆ ನರಸಿಂಹ, ಸಿದ್ಧರ ನಡುವಲ ಗುಡ್ಡಗಳಿವೆ. ಆಗ್ನೇಯಕ್ಕೆ ಕೈಲಾಸ ಕೊಂಡಗಳಿವೆ. ಈ ಎಲ್ಲಾ ಪ್ರದೇಶಗಳನ್ನು ಇಲ್ಲಿಂದ ವೀಕ್ಷಿಸಬಹುದು.

ಮೊಳಕಾಲ್ಮೂರು ಕೋಟೆಯು ಒಂದು ಅಭೇದ್ಯ ಕೋಟೆಯಾಗಿದೆ. ಪ್ರಾಚೀನ ಕಾಲದಿಂದಲೂ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಗುರುತಿಸಿಕೊಂಡಿರುವ ಮೊಳಕಾಲ್ಮೂರು ತಾಲೂಕಿನಲ್ಲಿ ಅತಿ ದೊಡ್ಡ ಕೋಟೆ ಇದಾಗಿದೆ. ಹಾಗೂ ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ಎರಡನೆಯ ಅತಿ ದೊಡ್ಡ ಕೋಟೆ ಇದು. ಈ ಕೋಟೆಯಲ್ಲಿ ಕಂಡುಬಂದಿರುವ ಶಿಲಾಶಾಸನಗಳು, ಬಂಡೆಯ ಚಿತ್ರಗಳು, ಗುಹಾಚಿತ್ರಗಳು ಮುಂತಾದ ಸ್ಮಾರಕಗಳ ಬಗ್ಗೆ ಪ್ರತ್ಯೇಕ ಅಧ್ಯಯನದ ಅವಶ್ಯಕತೆ ಇದೆ.

೪.೫ ಜಟಂಗಿರಾಮೇಶ್ವರ ಕೋಟೆ

ಜಟಂಗಿರಾಮೇಶ್ವರವು ಬ್ರಹ್ಮಗಿರಿಯಿಂದ ೩ ಕಿ.ಮೀ. ಅಂತರದಲ್ಲಿದ್ದು, ಅಕ್ಷಾಂಶ ೧೪°೫೦ ಉತ್ತರ ಮತ್ತು ೭೬°೫೧ ಪೂರ್ವ ರೇಖಾಂಶದಲ್ಲಿ ನೆಲೆಗೊಂಡಿದೆ. ಇದು ಚಿತ್ರದುರ್ಗ ಜಿಲ್ಲೆಯಲ್ಲಿ ಎರಡನೆಯ ಅತಿ ಎತ್ತರದ ಪ್ರದೇಶವಾಗಿದ್ದು, ಸಮುದ್ರ ಮಟ್ಟದಿಂದ ೩,೪೬೯ ಅಡಿ ಇದೆ.[೬೯] ರಾಮಸಾಗರದ ಬಳಿ ಇರುವ ಉನ್ನತವಾದ ಈ ಬೆಟ್ಟಕ್ಕೆ ದೇವಸಮುದ್ರದ ಕಡೆಯಿಂದಲೂ ದಾರಿಯಿದೆ. ಜಟಂಗಿರಾಮೇಶ್ವರ ಬೆಟ್ಟವು ಬ್ರಹ್ಮಗಿರಿಯಷ್ಟೇ ಐತಿಹಾಸಿಕ ಮಹತ್ವ ಪಡೆದಿದೆಯಾದರೂ ಈ ಪ್ರದೇಶ ಹೆಚ್ಚಾಗಿ ಗಮನಸೆಳೆದಿರುವುದು ಪೌರಾಣಿಕ ಮಹತ್ವದಿಂದಾಗಿ. ವನವಾಸದಲ್ಲಿದ್ದ ಸೀತೆಯನ್ನು ರಾವಣ ಮಾರುವೇಷದಲ್ಲಿ ಅಪಹರಿಸಿಕೊಂಡು ಈ ಮಾರ್ಗದಲ್ಲಿ ಬರುತ್ತಿದ್ದಾಗ ಇದೇ ಬೆಟ್ಟದ ಮೇಲೆ ವಾಸವಾಗಿದ್ದ ಜಟಾಯು ರಾವಣನ ಮೇಲೆ ಹೋರಾಟ ಮಾಡಿತೆಂದು ಹಾಗೂ ಸೀತೆಯನ್ನರಸುತ್ತ ಬಂದ ರಾಮನಿಗೆ ವಿಷಯ ತಲುಪಿಸಿ ಇಲ್ಲೇ ಹಸು ನೀಗಿತೆಂದು, ನಂತರ ರಾಮನು ಜಟಾಯುವಿನ ಸಮಾಧಿಯನ್ನು ಇಲ್ಲೇ ನೆರವೇರಿಸಿ ಜ್ಞಾಪಕಾರ್ಥವಾಗಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿದನೆಂಬ ಐತಿಹ್ಯವಿದೆ.[೭೦] ಇದೇ ಬೆಟ್ಟದ ಮೇಲಿರುವ ಕ್ರಿ.ಶ.೯೬೧ರ ಶಾಸನವೊಂದು ಇದೇ ವಿಷಯವನ್ನು ಪ್ರಸ್ತಾಪಿಸುತ್ತದೆ.[೭೧] ಈ ಬೆಟ್ಟದ ಮೇಲೆ ಅಶೋಕನ ಬಂಡೆಗಲ್ಲು ಶಾಸನವಿದೆ.[೭೨]

ಜಟಂಗಿರಾಮೇಶ್ವರ ಬೆಟ್ಟದ ಮೇಲೆ ಹಿರಿಯ ಮತ್ತು ಸಣ್ಣ ಜಟಂಗಿರಾಮೇಶ್ವರಗಳೆಂಬ ಎರಡು ಬೆಟ್ಟಗಳಿವೆ. ಸಣ್ಣಜಟಂಗಿರಾಮೇಶ್ವರ ಬೆಟ್ಟದಲ್ಲಿ ಅನೇಕ ಶಾಸನಗಳು, ಪ್ರಾಚೀನ ದೇವಾಲಯ

ಗಳನ್ನೊಳಗೊಂಡಂತೆ ಒಂದು ಕೋಟೆಯಿದೆ. ಅಶೋಕನ ಕಾಲಕ್ಕಿಂತಲೂ ಮೊದಲೇ ಇಲ್ಲಿ ಜನವಸತಿಯಿತ್ತು. ಅಲ್ಲದೆ, ಅಶೋಕನ ಕಾಲದ ಇಸಿಲ ನಗರ ಜಟಂಗಿರಾಮೇಶ್ವರ ಮತ್ತು ಬ್ರಹ್ಮಗಿರಿಗಳ ಮಧ್ಯೆ ಹರಡಿತ್ತೆಂದು ಹೇಳಲಾಗಿದೆ.[೬೩] ಇಲ್ಲಿರುವ ಸ್ವಾಭಾವಿಕ ಗವಿಗಳು, ಏಕಾಂತತೀರ್ಥ, ಸೀತಾದೊಣೆಗಳು ಜನವಸತಿ ಅನುಕೂಲವಾಗಿದ್ದವು. ನೊಳಂಬರು ಮತ್ತು ಚಾಲುಕ್ಯರ ಕಾಲದಲ್ಲಿ ಇಲ್ಲಿ ಕೆಲವು ಸಣ್ಣಸಣ್ಣ ದೇವಾಲಯಗಳು ನಿರ್ಮಿತವಾದ ಬಗ್ಗೆ ಶಾಸನಗಳ ಉಲ್ಲೇಖವಿದೆ. ಆ ಕಾಲದಲ್ಲಿ ಈ ಬೆಟ್ಟಕ್ಕೆ ಬಲ್ಗೊಡಿತೀರ್ಥ ಎಂಬ ಹೆಸರಿರುವುದು ಕಂಡುಬರುತ್ತದೆ.[೬೪] ಕುಮಾರರಾಮನ ವಾಸಸ್ಥಾನವಾಗಿ ವಿಜಯನಗರ ಹಾಗೂ ಪಾಳೆಯಗಾರರ ಕಾಲದಲ್ಲಿ ಗುಡಿಗೋಪುರಗಳು ನಿರ್ಮಾಣ ಗೊಂಡವಲ್ಲದೆ, ಈ ಹಿಂದೆ ಇದ್ದ ದೇವಾಲಯಗಳು, ಕಟ್ಟಗಳು, ಜೀರ್ಣೋದ್ಧಾರಗೊಂಡಿವೆ. ವಿಜಯನಗರದ ಅರಸು ದೇವರಾಯನ ಕಾಲದಲ್ಲಿ ಕಟ್ಟಿದ ಮಹಾದ್ವಾರ ಈಗ ಶಿಥಿಲವಾಗಿದೆ. ಪಾಳೆಯಗಾರರ ಕಾಲದಲ್ಲಿ ಇಲ್ಲಿರುವ ಎತ್ತರವಾದ ದೀಪಸ್ತಂಭವು ಸೇರಿದಂತೆ ಕೋಟೆಯ ಅವಶೇಷಗಳು ನಿರ್ಮಾಣಗೊಂಡವೆಂದು ಹೇಳಬಹುದು.

ಜಟಂಗಿರಾಮೇಶ್ವರದ ರಚನೆ ಮತ್ತು ವಿನ್ಯಾಸವನ್ನು ನೋಡಿದರೆ ಸಾಮಾನ್ಯವಾಗಿ ಈ ಕೋಟೆಯು ಯಾವುದೇ ಶತ್ರುಗಳನ್ನು ಗುರಿಯಾಗಿಟ್ಟುಕೊಂಡು ರಚನೆಯಾಗದಿದ್ದರೂ, ಮುಖ್ಯವಾಗಿ ಮೇಲಿರುವ ಈ ಐತಿಹಾಸಿಕ ದೇವಾಲಯಗಳಿಗೆ ರಕ್ಷಣಾಗೋಟೆಯಂತಿದೆ. ಇಲ್ಲವೆ, ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಇಲ್ಲಿ ಕೋಟೆಯೊಂದನ್ನು ಕಟ್ಟಿ ಸೈನಿಕ ಪಡೆಯೊಂದನ್ನು ಇಟ್ಟಿರಬಹುದೆಂದು ಹೇಳಬಹುದು. ಅನಿಯಮಿತಾಕಾರದಲ್ಲಿರುವ ಈ ಗಿರಿದುರ್ಗವು ಉತ್ತರದಲ್ಲಿ ಎರಡು ಸುತ್ತು ಉಳಿದಂತೆ ಒಂದು ಸುತ್ತು ಮಾತ್ರ ಇದೆ. ಈ ಕೋಟೆಯು ತುಂಬಾ ಶಿಥಿಲಗೊಂಡಿದೆ. ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಿರುವ ಗೋಡೆಯು ಆರರಿಂದ ಎಂಟು ಅಡಿ ಅಗಲ ಹಾಗೂ ಎಂಟರಿಂದ ಹತ್ತು ಅಡಿ ಎತ್ತರದವರೆಗೆ ಇದೆ. ಹೊರಕೋಟೆಗೆ ೧೦ ಬುರಜುಗಳಿದ್ದು, ಉತ್ತರ ಹಾಗೂ ಪೂರ್ವಕ್ಕೆ ೨ ಸ್ವಾಭಾವಿಕ ದ್ವಾರಗಳಿವೆ. ಪೂರ್ವದ ಬಾಗಿಲು ಹಿರೇ ಜಟಂಗಿರಾಮೇಶ್ವರ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುತ್ತದೆ. ದೇವಸಮುದ್ರದಿಂದ ಬೆಟ್ಟವನ್ನು ಹತ್ತುವವರೆಗೆ ಉತ್ತರದ ಬಾಗಿಲನ್ನು ಕಲ್ಪಿಸಲಾಗಿದೆ. ಕೋಟೆಯ ಗೋಡೆಯನ್ನಲ್ಲದೆ, ಅಲ್ಲಲ್ಲಿ ಸ್ವಾಭಾವಿಕ ಬಂಡೆಗಳ ಮೇಲೆ ವೃತ್ತಾಕಾರದ ಬತೇರಿಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಕೋಟೆಯ ಒಳಭಾಗದ ವೀರಭದ್ರ ದೇವಾಲಯದ ಹಿಂಬದಿಯಲ್ಲಿರುವ ಗುಹೆಯನ್ನು ಕುಮಾರರಾಮನ ಗರಡಿಮನೆಯೆಂದು ಕರೆಯುತ್ತಾರೆ. ರಾಮೇಶ್ವರದ ದೇವಾಲಯದ ಹಿಂಭಾಗದಲ್ಲಿ

[illegible]

[illegible]

[illegible]

[illegible]

ನಾಗರಪಡೆ ಗುಂಡಿನಲ್ಲಿ ಪ್ರಾಚೀನ ಕಾಲದ ಶಿಲಾಶಾಸನಗಳು ಮತ್ತು ರೇಖಾಚಿತ್ರಗಳು ಇವೆ. ಇಲ್ಲಿ ದೊರಕಿರುವ ಅನೇಕ ಶಾಸನಗಳು ವಿವಿಧ ಅರಸರು, ಸಾಮಂತರು ದಾನದತ್ತಿ ನೀಡಿದ ಬಗ್ಗೆ ದೇವಾಲಯಗಳ ಜೀರ್ಣೋದ್ಧಾರಗೊಳಿಸಿದ ಬಗ್ಗೆ ಹೇಳುತ್ತವೆ. ಕೋಟೆಯ ಒಳಭಾಗದಲ್ಲಿ ಬರುವ ಇನ್ನಿತರೆ ದೇವಾಲಯಗಳೆಂದರೆ ಗಣೇಶ, ಮಹಿಷಮರ್ಧಿನಿ, ಸೂರ್ಯ, ವೀರಭದ್ರ, ಅರ್ಕೇಶ್ವರ, ಓಂಕಾರೇಶ್ವರ, ಪರಶುರಾಮ, ಸಪ್ತಮಾತೃಕೆ, ತ್ರಯಂಬಕೇಶ್ವರ, ಜನಾರ್ಧನ, ಭೀಮಲಿಂಗೇಶ್ವರ, ಜಂಬುಕೇಶ್ವರ, ಈಶ್ವರ, ವಿರೂಪಾಕ್ಷ, ಕಾಲಭೈರವ ಮುಂತಾದ ದೇವಾಲಯಗಳಿವೆ.

೪.೬ ಉಚ್ಚಂಗಿದುರ್ಗದ ಕೋಟೆ

ಉಚ್ಚಂಗಿದುರ್ಗ ಮೊಳಕಾಲ್ಮೂರಿನಿಂದ ೧೫ ಕಿ.ಮೀ.ದೂರದಲ್ಲಿದೆ. ಮೊಳಕಾಲ್ಮೂರಿನಿಂದ ಹಾನಗಲ್ಲು, ನಾಗಸಮುದ್ರ, ಬೈರಾಪುರ ಗ್ರಾಮಗಳ ಮೂಲಕ ತಲುಪಬಹುದು. ಉಚ್ಚಂಗಿದುರ್ಗದ ಕೋಟೆಯು ಹೀಗೆ ನೆಲೆಗೊಂಡಿರುವ ಗ್ರಾಮದಿಂದ ಪಶ್ಚಿಮಕ್ಕೆ ೩ ಕಿ.ಮೀ. ದೂರದಲ್ಲಿರುವ ಊರುಗುಡ್ಡದ ಮೇಲೆ ಇದೆ. ಈ ಗುಡ್ಡಕ್ಕೆ ಹಿರೇ ಆರ್ಯಾರದುರ್ಗ, ಹಿರಾರನಗುಡ್ಡವೆಂತಲೂ ಕರೆಯುತ್ತಾರೆ.[೭೫] ಈ ಗುಡ್ಡದ ಸುತ್ತಲೂ ಹಿರೇಅಡವಿ ಅರಣ್ಯ ಪ್ರದೇಶವಿದೆ. ಉಚ್ಚಂಗಿದುರ್ಗವು ಕನ್ನಡ ಪ್ರಸಿದ್ಧ ಅನುಭವಾಮೃತ ಗ್ರಂಥದ ಕತೃ ಮಹಾಲಿಂಗನವರ ಜನ್ಮಸ್ಥಳವಿದ್ದಿತೆಂದು ಹೇಳಲಾಗಿದೆ.[೭೬] ಉಚ್ಚಂಗಿದುರ್ಗವು ಭೂನಕ್ಷೆಯಲ್ಲಿ ಉತ್ತರ ಅಕ್ಷಾಂಶ ೧೪°೪೦ ಪೂರ್ವರೇಖಾಂಶ ೭೪°೪೭ರಲ್ಲಿದ್ದು ಸಮುದ್ರ ಮಟ್ಟದಿಂದ ೩,೦೨೨ ಅಡಿ ಎತ್ತರದಲ್ಲಿದೆ.

ಕದಂಬರ ಶಾಸನಗಳಲ್ಲಿ ಉಕ್ತವಾಗಿರುವ ಉಚ್ಚಂಗಿಶೃಂಗ ಇದೇ ಎಂದು, ಇದು ಕದಂಬರ ರಾಜಧಾನಿಯಲ್ಲಿ ಒಂದಾಗಿತ್ತೆಂದು ಹೇಳಲಾಗಿದೆ.[೭೭] ಆದರೆ ಇದೇ ಹೆಸರಿನ ಮತ್ತೊಂದು ಊರು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನಲ್ಲಿದೆ. ಈ ಎರಡೂ ಕೋಟೆಗಳ ಬಗ್ಗೆ ಕದಂಬರು ಉಪರಾಜಧಾನಿ ಯಾವುದು ಎಂಬುದರ ಬಗ್ಗೆ ಇತಿಹಾಸಕಾರರಲ್ಲಿ ಗೊಂದಲವಿದೆ. ಬಿ.ಎಲ್.ರೈಸ್‌ರವರು ನುಂಕೆಮಲೆಯ ಕದಂಬರ ಶಾಸನವನ್ನು ಆಧರಿಸಿ ಕದಂಬರ ಶಾಸನಗಳಲ್ಲಿ ಉಕ್ತವಾಗಿರುವ ಉಚ್ಚಶೃಂಗಿ ಇದೇ ಎಂದು ಅಭಿಪ್ರಾಯಪಟ್ಟಿದ್ದಾರೆ.[೭೮] ಹುಲ್ಲೂರು ಶ್ರೀನಿವಾಸ ಜೋಯಿಸರು ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗವನ್ನು ಸಮರ್ಥಿಸಿಕೊಂಡಿದ್ದಾರೆ.[೭೯] ಆದರೆ ಜೋಯಿಸರು ಈ ಉಚ್ಚಂಗಿದುರ್ಗದಲ್ಲಿ ಯಾವುದೇ ಕೋಟೆ-ಕೊತ್ತಲಗಳು ಇಲ್ಲ ಎಂದು ಹೇಳಿರುವುದು ಸರಿಯಲ್ಲ.[೮೦] ಈಗಲೂ

ಕೋಟೆಕೊತ್ತಲಗಳ ಅವಶೇಷಗಳನ್ನು ಇಲ್ಲಿ ಕಾಣಬಹುದು. ಭಿನ್ನಾಬಿಪ್ರಾಯಗಳು ಏನೇ ಇದ್ದರೂ, ಈ ಕೋಟೆಗೆ ೩ಕಿ.ಮೀ. ದೂರದಲ್ಲಿರುವ ಸುಂಕಮಲೆಯಲ್ಲಿ ಸಿಕ್ಕಿರುವ ಕದಂಬರ ಶಾಸನಗಳಿಂದ ಈ ಪ್ರದೇಶವು ಕದಂಬರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದು. ಇವರ ತರುವಾಯ ಉಚ್ಚಂಗಿದುರ್ಗವು ನೊಳಂಬವಾಡಿ-೩೨೦೦೦ದಲ್ಲಿ ಅಂತರ್ಗತವಾಯಿತು. ನಂತರ ಹೊಯ್ಸಳರು, ವಿಜಯನಗರದ ಅರಸರು, ಚಿತ್ರದುರ್ಗದ ಪಾಳೆಯಗಾರರು ಈ ಭಾಗದಲ್ಲಿ ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ.

ಗುಡ್ಡದ ಮೇಲಿರುವ ಉಚ್ಚಂಗಿ ಯಲ್ಲಮ್ಮನಿಂದಲೇ ಉಚ್ಚಂಗಿದುರ್ಗ ಎಂಬ ಹೆಸರುಬಂದಿವೆ. ಒಂದು ಕಾಲದಲ್ಲಿ ಎಲ್ಲರ ಅಮ್ಮ ಎಲ್ಲಮ್ಮಳಿಗೆ ಗುಡ್ಡದ ದೇವಿ, ಉಚ್ಚಶೃಂಗಿ, ಗಿರಿಯಮ್ಮ, ಪರ್ವತಾದೇವಿ ಮುಂತಾದ ಹೆಸರುಗಳಿದ್ದವು.[೮೧] ಉಚ್ಚಂಗಿದುರ್ಗದ ಕೋಟೆಯು ಗಿರಿದುರ್ಗವಾಗಿದ್ದು, ಸುತ್ತಲೂ ವಿಶಾಲವಾದ ಹಿರೇ ಅಡವಿ ಅರಣ್ಯಪ್ರದೇಶದಿಂದ ಸುತ್ತುವರೆದಿದೆ. ಕೋಟೆಯನ್ನು ಬೆಟ್ಟದ ಮೇಲಿರುವ ಎರಡು ಜೋಡಿ ಬಂಡೆ ಗುಡ್ಡಗಳನ್ನು ಬಳಸಿ ಕಟ್ಟಲಾಗಿದೆ. ಈ ಬಂಡೆಗಳು ಪೂರ್ವ ಮತ್ತು ಪಶ್ಚಿಮದಲ್ಲಿ ಇಳಿಜಾರಾಗಿದ್ದು, ಮಧ್ಯದಲ್ಲಿ ಎತ್ತರವಾಗಿವೆ. ಉತ್ತರ ಮತ್ತು ದಕ್ಷಿಣದಲ್ಲಿ ಬಂಡೆಯು ಭಾರೀ ಕಡಿದಾಗಿದ್ದು, ಈ ಭಾಗದಲ್ಲಿ ಯಾವುದೇ ಕೋಟೆಗೋಡೆಗಳಿಲ್ಲ. ಇಲ್ಲಿ ಬಂಡೆಯೇ ಪ್ರಕೃತಿ ನಿರ್ಮಿತ ಕೋಟೆಯಂತಿದೆ. ಗುಡ್ಡದ ಪಶ್ಚಿಮ ಭಾಗದಲ್ಲಿ ವಾಯುವ್ಯ ಮತ್ತು ದಕ್ಷಿಣಕ್ಕೆ ಮತ್ತೆರಡು ಚಿಕ್ಕ ಗುಡ್ಡಗಳಿದ್ದು, ಇವು ಕೋಟೆ ಇರುವ ಗುಡ್ಡಗಳೊಂದಿಗೆ ಬೆಸೆದುಕೊಂಡಿವೆ. ರಕ್ಷಣಾದೃಷ್ಟಿಯಿಂದ ಎರಡು ಗುಡ್ಡಗಳನ್ನು ಬಳಸಿಕೊಂಡು ಕೋಟೆ ಹಾಗೂ ಬುರುಜುಗಳನ್ನು ನಿರ್ಮಿಸಿದ್ದಾರೆ. ಕೋಟೆಯನ್ನು ಅನಿಯಮಿತಾಕಾರದಲ್ಲಿ ಶತ್ರುಗಳು ಸುಲಭವಾಗಿ ಪ್ರವೇಶಿಸಬಹುದಾದ ಸ್ಥಳಗಳಲ್ಲಿ ಮಾತ್ರ ಕೋಟೆಯನ್ನು ಕಟ್ಟಲಾಗಿದೆ. ಗೋಡೆಯನ್ನು ಹೊರತುಪಡಿಸಿ ಬಂಡೆಗಲ್ಲುಗಳ ಮೇಲೆ ಅನೇಕ ವೃತ್ತಾಕಾರದ ಬುರುಜು ಗಳನ್ನು ನಿರ್ಮಿಸಲಾಗಿದೆ. ಕೋಟೆ ಗೋಡೆಯು ತುಂಬಾ ಶಿಥಿಲಗೊಂಡಿದ್ದು, ಕೆಲವು ಕಡೆ ೪ ಅಡಿ ಅಗಲ, ೮ ರಿಂದ ೧೫ ಅಡಿ ಎತ್ತರವಿದೆ. ಕೋಟೆ ಗೋಡೆಗೆ ಚಿಕ್ಕ ಚಿಕ್ಕ ನಯಗೊಳಿಸದ ಬಿಳಿ ಕಣಶಿಲೆಯ ಆಯತಕಲ್ಲುಗಳನ್ನು ಬಳಸಲಾಗಿದೆ. ಗೋಡೆಯ ಮಧ್ಯಭಾಗದಲ್ಲಿ ಕೆಸರು ಮಣ್ಣನ್ನು ಬಳಸಲಾಗಿದೆ. ಕೋಟೆಯಲ್ಲಿ ಎಲ್ಲೂ ಬಂದೂಕು ರಂಧ್ರಗಳಿರುವುದು ಕಂಡುಬರುವುದಿಲ್ಲ. ಬಹುಶಃ ಬಂದೂಕು ರಂಧ್ರಗಳಿರುವ ಕೋಟೆಗೋಡೆ ಭಾಗವು ಬಿದ್ದು ಹೋಗಿರಬಹುದು. ಕೋಟೆ ಗೋಡೆಯ ರಚನೆ ಮತ್ತು ಅದರ ವಿನ್ಯಾಸವನ್ನು ಗಮನಿಸಿದರೆ ಕ್ರಿ.ಶ.ಸು.೧೬-೧೭ ಶತಮಾನದಲ್ಲಿ ನಿರ್ಮಿಸಲಾಗಿದೆಯೆಂದು ಹೇಳಬಹುದು.

ಕೋಟೆಯ ಪಶ್ಚಿಮ ಭಾಗದಲ್ಲಿ ವಾಯುವ್ಯ ದಿಕ್ಕಿನ ಗುಡ್ಡದ ಮೇಲೆ ಎರಡು ವೃತ್ತಾಕಾರದ ಬುರುಜುಗಳಿವೆ. ಈ ಗುಡ್ಡದ ಹಿಂಭಾಗ ನೀರಿನ ಹೊಂಡವಿದೆ. ಹೊಂಡವನ್ನು ಹೊಂದಿಕೊಂಡಂತೆ ೩ ಅಡಿ ಎತ್ತರ ೫೦ಮೀ. ಉದ್ದದ ಕೋಟೆ ಗೋಡೆ ಇದೆ. ಪಶ್ಚಿಮ ಭಾಗದ ಗುಡ್ಡದ ಮೇಲೆ ಪ್ರಕೃತಿ ನಿರ್ಮಿತ ಬುರುಜಿದೆ. ಸ್ಥಳೀಯರು ಈ ಬುರುಜಿಗೆ ಕೋಲಾಟದ ಬುರುಜು ಎಂದು ಕರೆಯುತ್ತಾರೆ. ಹಿಂದೆ ಇಲ್ಲಿದ್ದ ಪಾಳೆಯಗಾರರು ಬೆಳದಿಂಗಳ ಬೆಳಕಿನಲ್ಲಿ ಈ ಬುರುಜಿನ ಮೇಲೆ ಕೋಲಾಟವನ್ನು ಆಡುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ. ಈ ಬುರುಜಿನ ಮೇಲೆ ನಿಂತರೆ ಮೊಳಕಾಲ್ಮೂರು, ನುಂಕೆಮಲೆ ಕೋಟೆಗಳು ಕಾಣುತ್ತವೆ.

ಕೋಲುಬುರುಜಿನ ಗುಡ್ಡದ ಬದಿಯಿಂದ ಬೆಟ್ಟದ ಮೇಲೆ ಹೋಗುವಾಗ ಬಸವಣ್ಣನ ಗುಡಿ ಇದೆ. ಈ ದೇವಾಲಯದ ಮುಂದೆ ಇರುವ ಸ್ವಾಬಾವಿಕ ಬಾಗಿಲನ್ನು ಬಸವನ ಬಾಗಿಲು ಎಂದು ಕರೆಯುತ್ತಾರೆ. ಈ ಭಾಗದಲ್ಲಿ ದೊಡ್ಡ ದೊಡ್ಡ ಕಟ್ಟಡಗಳ ಅವಶೇಷಗಳಿವೆ. ಈ ಅವಶೇಷಗಳ ಮುಂಭಾಗದಲ್ಲಿ ಬಂಡೆಯ ಮೇಲೆ ೯x೧೦ ಅಡಿಯ ಚಿಕ್ಕ ಆಂಜನೇಯ ದೇವಾಲಯವಿದೆ. ದೇವಾಲಯದ ಪೂರ್ವಕ್ಕೆ ಎರಡು ಬಂಡೆಗಳ ಮಧ್ಯೆ ಸ್ವಾಭಾವಿಕವಾದ ತಗ್ಗುಪ್ರದೇಶವನ್ನು ಗಾರೆದೊಣ್ಣೆಯನ್ನಾಗಿ ಮಾಡಿಕೊಳ್ಳಲಾಗಿದೆ. ೧೫ ಅಡಿ ಆಳವಿರುವ ಈ ದೊಣ್ಣೆಯು ೩ಮೀ. ಅಗಲ ೧೫ಮೀ. ಉದ್ದವಿದೆ. ಈ ಹೊಂಡದ ಮುಂಭಾಗದಲ್ಲಿ ಗುಡ್ಡದ ದೇವತೆ ಎಲ್ಲಮ್ಮ ಇರುವುದರಿಂದ ಇದನ್ನು ಎಲ್ಲಮ್ಮನ ಹೊಂಡ ಎಂದು ಕರೆಯುತ್ತಾರೆ. ಎಲ್ಲಮ್ಮ ದೇವಾಲಯದ ಉತ್ತರಕ್ಕೆ ತಗ್ಗಾದ ಇಳಿಜಾರು ಪ್ರದೇಶದಲ್ಲಿ ಕೋಟೆಯ ಬುರುಜುಗಳು, ಗೋಡೆಯ ಅವಶೇಷಗಳು ಹಾಗೂ ನೀರಿನ ಆಶ್ರಯಗಳಿವೆ. ಇದರ ಹಿಂಬದಿಯಲ್ಲಿ ಮುಸುರೆದೊಣೆಯಿದೆ. ಹಿಂದೆ ಬೆಟ್ಟದಲ್ಲಿ ವಾಸವಾಗಿದ್ದ ದನಕರುಗಳಿಗೆ ಇದನ್ನು ಬಳಸುತ್ತಿದ್ದರೆಂದು ಹೇಳಲಾಗಿದೆ. ಮುಂದುವರೆದಂತೆ ಈ ಕಣಿವೆಗೆ ಉತ್ತರ ದಕ್ಷಿಣವಾಗಿ ೬ ಅಡಿ ಅಗಲ, ೨೦ ಅಡಿ ಎತ್ತರದ ಗೋಡೆಯನ್ನು ಕಟ್ಟಲಾಗಿದೆ. ಈ ಗೋಡೆಗೆ ಚಕ್ಕೆಕಲ್ಲು ಹಾಗೂ ಮಧ್ಯಮ ಗಾತ್ರದ ಕಲ್ಲುಗಳನ್ನು ಬಳಸಲಾಗಿದೆ. ಈ ಗೋಡೆಯ ದಕ್ಷಿಣ ಭಾಗದ ಶಿಥಿಲಗೊಂಡಿರುವ ಸ್ಥಳದಲ್ಲಿ ಹಿಂದೆ ಇಲ್ಲಿ ದ್ವಾರವಿತ್ತೆಂದು ಹೇಳಲಾಗಿದೆ. ಆದರೆ ದ್ವಾರದ ಯಾವುದೇ ಅವಶೇಷಗಳು ಕಂಡುಬರುವುದಿಲ್ಲ. ಇಲ್ಲಿಂದ ಮುಂದೆ ಮೇಗಳಕೆರೆ, ಕೆಳಗಳಕೆರೆ, ತಂಗ್ಬೆಕುಂಟೆಗಳನ್ನು ಬಳಸಿಕೊಂಡು ಈಗಿನ ಗ್ರಾಮಕ್ಕೆ ತಲುಪಬಹುದು.

[illegible]

[illegible]

೪.೭ ವೇಣುಕಲ್ಲು ಗುಡ್ಡದಕೋಟೆ

ವೇಣುಕಲ್ಲು ಗುಡ್ಡವು ಹಿರಿಯೂರು ಧರ್ಮಪುರ ರಸ್ತೆಯಲ್ಲಿ ೨೫ ಕಿ.ಮೀ. ದೂರದಲ್ಲಿರುವ ಚಿಲ್ಲಹಳ್ಳಿಯಿಂದ ದಕ್ಷಿಣಕ್ಕೆ ೫ ಕಿ.ಮೀ. ದೂರದಲ್ಲಿದೆ. ಇದೊಂದು ಗಿರಿದುರ್ಗವಾಗಿದ್ದು, ಊರ ಮಧ್ಯದಲ್ಲಿರುವ ಶಾಸನಗಳು, ಬೆಟ್ಟದ ಮೇಲಿರುವ ಕೋಟೆಗಳು, ಮಠ ದೇವಾಲಯಗಳು ಗುಡ್ಡದ ಇತಿಹಾಸಕ್ಕೆ ಸಾಕ್ಷಿಗಳಾಗಿವೆ. ಈ ಕೋಟೆಗೆ ಸಂಬಂಧಪಟ್ಟ ದಾಖಲೆಗಳು ಈಗಲೂ ಲಭ್ಯವೆಂದು ಹೇಳಲಾಗುತ್ತಿದೆಯಾದರೂ ಇವುಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿಲ್ಲ. ಈ ಊರಿನ ಇತಿಹಾಸವು ರತ್ನಗಿರಿ, ಹರತಿ, ನಿಡಗಲ್ಲು ಮತ್ತು ಚಿತ್ರದುರ್ಗ ಪಾಳೆಯಗಾರರ ಚರಿತ್ರೆಯಲ್ಲಿ ಬೆಸೆದುಕೊಂಡಿದೆ. ವೇಣುಕಲ್ಲು ಗುಡ್ಡವು ಉತ್ತರ ಅಕ್ಷಾಂಶ ೧೪°೧೦ ಮತ್ತು ಪೂರ್ವ ರೇಖಾಂಶ ೭೬°೪೮ ಇದ್ದು, ಸಮುದ್ರಮಟ್ಟದಿಂದ ೨,೧೯೪ ಅಡಿ ಮೇಲಿದೆ.

ಹಿಂದೆ ಈ ಗುಡ್ಡಕ್ಕೆ ರೇಣಿಕಲ್ಲುಗುಡ್ಡ ಎಂಬ ಹೆಸರಿದ್ದುದು ಕಂಡುಬರುತ್ತದೆ.[೮೨] ಸ್ಥಳೀಯ ಐತಿಹ್ಯವೊಂದರ ಪ್ರಕಾರ ಪುರಾಣ ಪ್ರಸಿದ್ಧಿಯಾದ ರೇಣಿಕೆಯು ಎಲ್ಲಮ್ಮ ಸವದತ್ತಿಯಿಂದ ಗುಂಟನೂರು ಮೂಲಕ ಈ ಬೆಟ್ಟದ ಮೇಲೆ ನೆಲಸಿ ಪರಶುರಾಮನಿಗೆ ಜನ್ಮ ನೀಡಿದಳೆಂಬ ಐತಿಹ್ಯವಿದೆ. ಈಗಲೂ ಕೋಟೆಯ ಉತ್ತರಕ್ಕಿರುವ ಒಂದು ಬಂಡೆಯನ್ನು ಕೋಡಳಮ್ಮನ ಬಂಡೆ ಎಂದು ಕರೆಯುತ್ತಾರೆ. ಇಲ್ಲಿ ನೆಲಸಿದ ರೇಣುಕೆಯು ತರುವಾಯ ದಕ್ಷಿಣಕ್ಕೆ ೩ ಕಿ.ಮೀ. ದೂರದಲ್ಲಿರುವ ಕೋಡಿಹಳ್ಳಿಗೆ ಹೋಗಿ ನೆಲಸಿದ್ದರಿಂದ ಮೇಲಿನ ಹೆಸರು ಬಂದಿದೆ. ಐತಿಹಾಸಿಕ ಸ್ವರೂಪದ ರೇಣುಕೆಗೆ ಎಲ್ಲಮ್ಮ, ಗುಡ್ಡದಮ್ಮ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.[೮೩] ರೇಣಿಕೆಯು ಗುಡ್ಡದ ದೇವತೆಯಾಗಿರುವುದರಿಂದ ಈ ಬೆಟ್ಟಕ್ಕೆ ರೇಣುಕಲ್ಲು ಗುಡ್ಡ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಪಾಳೆಯಗಾರರ ಕಾಲದಲ್ಲಿ ಬೆಟ್ಟದ ಮೇಲೆ ಸ್ಥಾಪಿಸಿರುವ ವೇಣುಗೋಪಾಲ ಅಥವಾ ರಂಗಪ್ಪ ದೇವರಿಂದ ವೇಣುಕಲ್ಲು ಗುಡ್ಡ ಎಂಬ ಹೆಸರು ಬಂದಿದೆ. ಇಂದಿಗೂ ಈ ಹೆಸರೇ ಪ್ರಚಲಿತದಲ್ಲಿದೆ.

ಬೆಟ್ಟದ ಮೇಲಿರುವ ಕೋಟೆಯನ್ನು ಯಾರು ಯಾವಾಗ ಕಟ್ಟಿಸಿದರೆಂಬುದಕ್ಕೆ ಸ್ಪಷ್ಟವಾದ ದಾಖಲೆಗಳು ಇಲ್ಲವಾದರೂ ಇದು ವಿಜಯನಗರ ಕಾಲದ ಒಂದು ಆಡಳಿತ ಸೀಮೆಯಾಗಿತ್ತು.[೮೪] ಈ ಸೀಮೆಯಲ್ಲಿ ಬರುವ ಹಾಗೂ ಗುಡ್ಡಕ್ಕೆ ೧೦ ಕಿ.ಮೀ. ದೂರವಿರುವ ಸೂಗೂರು[೮೫] ಮತ್ತು ಕಂಡೇನಹಳ್ಳಿ[೮೬]ಗಳಲ್ಲಿ ವಿಜಯನಗರದ ಅರಸರು ಕೋಟೆಗಳನ್ನು ನಿರ್ಮಿಸಿರುವುದಕ್ಕೆ ಶಾಸನಾಧಾರಗಳಿವೆ. ಅಲ್ಲದೆ, ವಿಜಯನಗರದ ಅರಸರು ತಮ್ಮ ಆಡಳಿತ ಕೇಂದ್ರದ ಸುತ್ತಲೂ ರಕ್ಷಣಾಗೋಡೆಗಳನ್ನು

ನಿರ್ಮಿಸುತ್ತಿದ್ದರು.[೮೭] ಈ ದೃಷ್ಟಿಯಿಂದ ಇಲ್ಲಿರುವ ಕೋಟೆಯು ವಿಜಯನಗರದ ಅರಸರ ಕಾಲದಲ್ಲಿ ನಿರ್ಮಾಣಗೊಂಡು ಮುಂದೆ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ವಿಸ್ತಾರಗೊಂಡಿತಲ್ಲದೆ, ಬಲಿಷ್ಠವಾಯಿತು. ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರದೇಶವನ್ನು ಹರತಿ ಐಮಂಗಲದ ತಿಪ್ಪಳನಾಯಕಾಚಾರ್ಯನು ಆಳುತ್ತಿದ್ದನು.[೮೮] ತರುವಾಯ ರತ್ನಗಿರಿ ಸೀಮೆಗೆ ಸೇರಿದ್ದ ಈ ಕೋಟೆಯನ್ನು ಹಿರೇ ಮದಕರಿನಾಯಕನು ಜಯಿಸಿದ ಘಟನೆಯನ್ನು ಪಾಳೆಯಗಾರರ ದಾಖಲೆಗಳಲ್ಲಿ ಕಾಣಬಹುದು.[೮೯] ನಂತರ ಕಸ್ತೂರಿ ರಂಗಪ್ಪನಾಯಕನ ಅವಧಿಯಲ್ಲಿ ಈತನ ದಳಪತಿ ಬೊಮ್ಮಲಿಂಗಯ್ಯನು ಈ ಕೋಟೆಯನ್ನು ಆಳಿದನೆಂದು ಸ್ಥಳೀಯ ದಾಖಲೆಗಳು ನಿರೂಪಿಸುತ್ತವೆ. ಈತನ ಕಾಲದಲ್ಲಿ ಗುಡ್ಡವು ೧೬ ಹಳ್ಳಿ ಸೀಮೆಯಾಗಿತ್ತು.[೯೦] ಅವುಗಳೆಂದರೆ ಚಿಲ್ಲಳ್ಳಿ, ಹರಿಯಬ್ಬೆ, ಅಬ್ಬಿನಹೊಳೆ, ರಂಗಾಪುರ, ಕೋಡಿಹಳ್ಳಿ, ಸುಣ್ಣದ ದಿಮ್ಮನಹಳ್ಳಿ, ಕಂಬತ್ತನಹಳ್ಳಿ, ಸೂಗೂರು, ಗೂಳ್ಯ, ಕಣಜನಹಳ್ಳಿ, ಧರ್ಮಪುರ, ಮಂಗಸವಳ್ಳಿ, ಈಚಲಗೆರೆ, ದೇವರಕೊಟ್ಟ, ಸಕ್ಕರ, ಹೂವಿನಹೊಳೆಗಳಿದ್ದವು. ಈ ಎಲ್ಲಾ ಸೀಮೆಗಳನ್ನೊಳಗೊಂಡ ರೇಣುಕಲ್ಲು ಗುಡ್ಡವು ಚಿತ್ರದುರ್ಗ ಪಾಳೆಯಗಾರರ ಗಡಿಸೀಮೆಗಳಲ್ಲೊಂದಾಗಿತ್ತು.[೯೧]

ಕಸ್ತೂರಿ ರಂಗಪ್ಪನಾಯಕನ ಕಾಲದಲ್ಲಿ ವೇಣುಕಲ್ಲು ಗುಡ್ಡವು ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ಪ್ರಸಿದ್ಧಿಯನ್ನು ಪಡೆಯಿತಲ್ಲದೆ, ಇಲ್ಲಿ ಕೋಟೆಕೊತ್ತಲಗಳು ಕಟ್ಟಲ್ಪಟ್ಟು ವಿಸ್ತಾರವಾಗಿ ಬೆಳೆದು ನಿಂತ ರಾಜ್ಯವಾಯಿತು. ಸಾಮ್ರಾಜ್ಯವು ಉತ್ತರಕ್ಕೆ ಮೊಳಕಾಲ್ಮೂರು, ದಕ್ಷಿಣಕ್ಕೆ ರತ್ನಗಿರಿ ಪೂರ್ವಕ್ಕೆ ನಿಡಗಲ್ಲು ಹಾಗೂ ಪಶ್ಚಿಮಕ್ಕೆ ಮತ್ತೋಡಿನಿಂದ ಹೋಸದುರ್ಗದವರೆಗೂ ವಿಸ್ತರಿಸಿತ್ತು.[೯೨] ಬೆಟ್ಟದ ಮೇಲೆ ಏಳು ಸುತ್ತಿನ ಕೋಟೆ, ಕೋಟೆಯಲ್ಲಿ ನಿಪುಣರಾದ ಸೈನಿಕರನ್ನೊಳಗೊಂಡ ಕರಿ, ತುರಗ, ರಥ, ಬಿಲ್ಲುಬಾಣ ಮೊದಲಾದ ಸೈನ್ಯ ವ್ಯವಸ್ಥೆ ಇತ್ತು. ನಗರವು ಬಹುಮಹಡಿ ಮಹಲುಗಳಿಂದ ಕೂಡಿದ್ದು, ದೇವಾಲಯ, ಕೆರೆ, ಕೈತೋಟಗಳಿಂದ ಸುಂದರವಾಗಿ ನಿರ್ಮಿತವಾಗಿತ್ತು. ದೀಪಾವಳಿ, ನವರಾತ್ರಿ ಉತ್ಸವಗಳು ನಡೆದುಕೊಂಡು ಬಂದಿದ್ದವು. ಇಂತಹ ಸಂಪದ್ಭರಿತ ನಾಡಿನ ಮೇಲೆ ಮೊಘಲರು, ಪಠಾಣರು, ಸುಲ್ತಾನರು ಕಣ್ಣಿಟ್ಟರು. ಆಗ ಇಲ್ಲಿದ್ದ ದಳಪತಿ ಬೊಮ್ಮಲಿಂಗಯ್ಯನು ಹೋರಾಡಿದ ಸಾಹಸವನ್ನು ಸ್ಥಳೀಯ ದಾಖಲೆಗಳು ವಿವರಿಸುತ್ತವೆ.[೯೩]

ವಿಸ್ತಾರವಾದ ಬಯಲುಪ್ರದೇಶದಲ್ಲಿ ದ್ವೀಪದಂತೆ ಇರುವ ಒಂಟಿ ಗುಡ್ಡವನ್ನು ಬಳಸಿಕೊಂಡು ಕೋಟೆಯನ್ನು ನಿರ್ಮಿಸಲಾಗಿದೆ. ಈ ಕೋಟೆಯು ಪೂರ್ವ ಭಾಗದಲ್ಲಿ ಏಳು ಸುತ್ತುಗಳಿದ್ದು, ಗ್ರಾಮರಕ್ಷಣೆಗಿದ್ದ ಎರಡು ನೆಲಸುತ್ತಿನ ಕೋಟೆಗಳು ಹಾಗೂ ದ್ವಾರಗಳು ಸಂಪೂರ್ಣವಾಗಿ

ಶಿಥಿಲಗೊಂಡಿವೆ. ಬೆಟ್ಟದ ಮೇಲೆ ಐದು ಸುತ್ತಿನ ಕೋಟೆಯ ಅವಶೇಷಗಳು ಈಗಲೂ ಉಳಿದುಕೊಂಡು ಬಂದಿವೆ. ಬೆಟ್ಟದ ಮೇಲಿರುವ ಕೋಟೆಯಲ್ಲಿ ಮೂರು ಬಾಗಿಲುಗಳು ಮಾತ್ರ ಉಳಿದುಕೊಂಡಿವೆ. ಮೊದಲನೆಯದು ಊರುಬಾಗಿಲು, ಎರಡನೆಯದು ಕಲ್ಲುಬಾಗಿಲು, ಮೂರನೆಯದು ರಂಗಯ್ಯನ ಬಾಗಿಲುಗಳಿವೆ. ಬೆಟ್ಟದ ಮೇಲೆ ನಿರ್ಮಿತವಾಗಿರುವ ಈ ದ್ವಾರಗಳು ದೂರದಿಂದ ನೋಡಿದಾಗ ಒಂದೇ ನೇರದಲ್ಲಿ ಕಂಡುಬಂದರೂ ಹತ್ತಿರದಿಂದ ನೋಡಿದಾಗ ಬಾಗಿಲುಗಳು ಬೇರೆ ಬೇರೆ ಸ್ಥಳಗಳಲ್ಲಿ ರಚನೆಗೊಂಡಿದೆ. ದ್ವಾರಬಾಗಿಲುಗಳ ದಾರಿಯು ಹಾವಿನೋಪಾದಿಯಲ್ಲಿ ಬೆಳೆಯುತ್ತಾ ಹೋಗಿದೆ. ಸಾಮಾನ್ಯವಾಗಿ ಶತ್ರುಗಳನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುವ ತಂತ್ರ ಇದಾಗಿದೆ. ಗ್ರಾಮದಲ್ಲಿ ಶಿಥಲವಾಗಿರುವ ದ್ವಾರಬಾಗಿಲ ಮುಂದೆ ಬಸವಣ್ಣನ ದೇವಸ್ಥಾನವಿದ್ದು, ಈ ದೇವಾಲಯವನ್ನು ತುಗ್ಗಲಿ ಬಸಪ್ಪ ದೇವಾಲಯ ಎಂದೇ ಕರೆಯುತ್ತಾರೆ. ಒಂದೆ ಉದ್ದೇಶವಾಗಿಯೇ ಬೆಟ್ಟವೂ ಸೇರಿದಂತೆ ಬೆಟ್ಟದ ಪರಿಸರದಲ್ಲಿ ದುಗ್ಗಲಿ ಮರಗಳನ್ನು ವಿಶೇಷವಾಗಿ ಬೆಳೆಸಿದ್ದು ಕಂಡುಬರುತ್ತದೆ. ಈ ಮರವು ಎಲೆಗಳಿಂದ ತುಂಬಿಕೊಂಡಿದ್ದು ನೋಡಲಿಕ್ಕೆ ಮುಳ್ಳಿನಂತೆ ಕಂಡುಬಂದರೂ ಇದರಲ್ಲಿ ಮುಳ್ಳು ಇರುವುದಿಲ್ಲ. ಈಗಲೂ ಬೆಟ್ಟದ ತುಂಬ ಈ ಮರಗಳು ತುಂಬಿಕೊಂಡಿವೆ. ಹಾಗಾಗಿ ಇದೊಂದು ವನದುರ್ಗದ ರೀತಿಯಲ್ಲಿ ನಿರ್ಮಾಣಗೊಂಡಂತಿದೆ. ಹೊರಗಿನ ಶತ್ರುಗಳಿಗೆ ಈ ಮರಗಳು ಭಯವನ್ನು ಹುಟ್ಟಿಸುತ್ತವೆಯಲ್ಲದೆ, ಇವುಗಳಿಂದ ಕೋಟೆಯ ಗೋಡೆ, ಬಾಗಿಲು, ಬುರುಜುಬತೇರಿಗಳು, ಸೈನಿಕರು ಕಾಣುತ್ತಿರಲಿಲ್ಲ. ಹಾಗಾಗಿ ಇದೊಂದು ವಿಶಿಷ್ಟ ಕೋಟೆಯಯಾಗಿದೆ. ಊರ ಮಧ್ಯೆ ೩೦x೫೦ ಚ.ಮೀ. ಉದ್ದದ ಕಲ್ಲುಬಾವಿಯ ಸುತ್ತ ಒಂದೆ ಶೃಂಗಾರ ತೋಟ ಇತ್ತೆಂದು ಹೇಳಲಾಗಿದೆ. ಈ ಭಾಗದಲ್ಲಿ ಪುಷ್ಕರಣಿಗಳು, ಮಠಗಳು, ವೀರಗಲ್ಲುಗಳು ಮುಂತಾದ ಸ್ಮಾರಕಗಳಿವೆ.

ಬೆಟ್ಟದ ಮೇಲಿರುವ ಎರಡು ಗುಂಡಗಳ ಮಧ್ಯೆ ಸ್ವಾಭಾವಿಕ ಸಂಧಿಯಲ್ಲಿ ನಿರ್ಮಿಸಿರುವ ಬಾಗಿಲನ್ನು ಕಲ್ಲು ಬಾಗಿಲೆಂದು ಕರೆಯುತ್ತಾರೆ. ಈ ಕಲ್ಲು ಬಾಗಿಲಿನ ಕೋಟೆಯ ಸುತ್ತು ಉತ್ತರದಲ್ಲಿ ಹೊಟ್ಟೆಯ ಬುರುಜಿನವರೆಗೂ ಮುಂದುವರೆದಿದೆ. ಇದರ ನಂತರ ಸಿಗುವುದೇ ತಗ್ಗಿನ ಬಾಗಿಲು. ಇದರ ವಿನ್ಯಾಸವನ್ನು ಯುದ್ಧ ತಂತ್ರಕ್ಕನುಗುಣವಾಗಿ ನಿರ್ಮಿಸಲಾಗಿದೆ. ಆದರೆ, ಈ ಬಾಗಿಲು ಇಂದು ಶಿಥಿಲಗೊಂಡಿದೆ. ಸ್ಥಳೀಯರು ಹೇಳುವ ಹಾಗೆ ಈ ಬಾಗಿಲು ಚೋರಕಂಡಿಯ ಹಾಗೆ ಇತ್ತೆಂದು ಹೇಳುತ್ತಾರೆ. ಈ ಬಾಗಿಲನ್ನು ದಾಟುವಾಗ ತಗ್ಗಿ ನಡೆಯಬೇಕಾಗಿತ್ತೆಂದು ಹಾಗಾಗಿ ಇದಕ್ಕೆ ತಗ್ಗಿನ ಬಾಗಿಲು ಎಂದು ಹೆಸರು ಬಂದಿದೆಯೆಂದು ಗ್ರಾಮಸ್ಥರು ತಿಳಿಸುತ್ತಾರೆ. ಇದರ ಪಕ್ಕದಲ್ಲಿ ಒಲೇರಸುತ್ತು ಮತ್ತು ಪುಷ್ಕರಣಿಗಳಿವೆ.

ಮೇಲುದುರ್ಗದ ಉತ್ತರ ಮತ್ತು ದಕ್ಷಿಣ ಕೋಟೆಯ ಸಾಲಿನ ಮಧ್ಯ ನಿರ್ಮಿಸಿರುವ ರಂಗಪ್ಪ ದೇವಾಲಯವಿದೆ. ಈ ದೇವಾಲಯವನ್ನು ಶಕುನಿ ರಂಗಪ್ಪ ದೇವಾಲಯವೆಂದು ಕರೆಯುತ್ತಾರೆ. ಇಲ್ಲಿದ್ದ ಪಾಳೆಯಗಾರರ ಮನೆದೇವರಾದ ರಂಗಪ್ಪನನ್ನು ಯುದ್ಧ ಮತ್ತು ಇತರೆ ಶುಭಕಾರ್ಯಗಳನ್ನು ಮಾಡುವಾಗ ದೇವರ ಅನುಮತಿಯನ್ನು ಕೇಳಿಯೇ ಪಾಳಯಗಾರರು ಮುಂದುವರೆಯುತ್ತಿದ್ದರಂತೆ. ಈ ದೇವರಿಗೆ ಶಕುನಿ ರಂಗಪ್ಪ ಎಂದು ಹೆಸರುಬಂದಿದೆ. ಈ ದೇವಾಲಯದ ಉತ್ತರಕ್ಕೆ ೬ ಅಡಿ ಎತ್ತರ, ೬ ಅಡಿ ಉದ್ದ ೨.೫ ಅಗಲದ ದ್ವಾರಬಾಗಿಲು ಇದೆ. ಈ ದ್ವಾರಬಾಗಿಲಿಗೆ ರಂಗಯ್ಯನ ಬಾಗಿಲು ಎಂಬ ಹೆಸರಿದೆ. ಕೋಟೆಯಲ್ಲಿ ಉಳಿದುಕೊಂಡಿರುವ ಏಕೈಕ ದ್ವಾರಬಾಗಿಲು ಇದಾಗಿದೆ. ರಂಗಯ್ಯನ ಬಾಗಿಲು ಸುತ್ತಿನ ಕೋಟೆಯು ಮೇಲುದುರುಗ ಎಂದೆನಿಸಿಕೊಂಡಿದೆ. ಈ ಕೋಟೆಗೆ ಪೂರ್ವಭಾಗದಲ್ಲಿ ದಿಡ್ಡಿಬಾಗಿಲಿದೆ. ಈ ದಿಡ್ಡಿಬಾಗಿಲು ೯x೨x೪.೫ ಅಡಿಗಳಲ್ಲಿ ನಿರ್ಮಿಸಲಾಗಿದೆ. ಈ ಬಾಗಿಲು ಕೆಳಕೋಟೆಗೆ ಸಂಪರ್ಕ ಕಲ್ಪಿಸುತ್ತದೆ.

ರಂಗಯ್ಯನ ಬಾಗಿಲ ಬಳಿ ವಿಶಾಲವಾದ ಬಯಲುಪ್ರದೇಶವಿದ್ದು, ಸುತ್ತಲೂ ವ್ಯವಸ್ಥಿತವಾದ ಕೋಟೆಯ ರಚನೆಯನ್ನು ನಿರ್ಮಿಸಲಾಗಿದೆ. ಈ ಭಾಗದಲ್ಲಿ ಅರಮನೆಯ ಪಾಳು, ಎತ್ತರದ ಗಾರೆಬುರುಜು, ತುಪ್ಪದ ಹೊಂಡ, ಚೌಡಮ್ಮ, ಆಂಜನೇಯ ಮುಂತಾದ ಸ್ಮಾರಕಗಳಿವೆ. ಈ ಕೋಟೆಯು ಹೆಚ್ಚು ಕಡಿಮೆ ಆಯತಾಕಾರದಲ್ಲಿದ್ದು, ಬಲಿಷ್ಠವಾಗಿ ಕಟ್ಟಲ್ಪಟ್ಟಿದೆ. ಹೊರಕೋಟೆಗೆ ೫೦x೬೦ ಸೆಂ.ಮೀ. ಮತ್ತು ೬೦x೭೦ ಸೆಂ.ಮೀ. ದಪ್ಪವಿರುವ ಕಲ್ಲುಗಳನ್ನು ಬಳಸಿ ೫ ಅಡಿ ಎತ್ತರದವರೆಗೆ ಗೋಡೆ ನಿರ್ಮಿಸಿ, ನಂತರ ೩ ಅಡಿ ಎತ್ತರದವರೆಗೆ ೨೫x೪೦ ಸೆಂ. ದಪ್ಪವಿರುವ ಕಲ್ಲುಗಳಿಂದ ಕಟ್ಟಲಾಗಿದೆ. ಕಲ್ಲುಗಳನ್ನು ಹೆಚ್ಚು ವಿನ್ಯಾಸಗೊಳಿಸದೆ, ಕತ್ತರಿಸಿದ ಕಲ್ಲುಗಳನ್ನು ಹಾಗೆ ಒಂದರ ಮೇಲೊಂದರಂತೆ ಜೋಡಿಸಿದ್ದಾರೆ. ಕಲ್ಲುಗಳ ಸಂದಿಗೆ ಚಕ್ಕೆಕಲ್ಲುಗಳನ್ನು ಜೋಡಿಸಿ ಗೋಡೆಗೆ ಭದ್ರತೆಯನ್ನೊದಗಿಸಿದ್ದಾರೆ. ಈ ಚಕ್ಕೆ ಕಲ್ಲುಗಳು ೩x೫ ಸೆಂ.ಮೀ. ದಪ್ಪವಾಗಿವೆ. ಉತ್ತಮ ಗುಣಮಟ್ಟದ ಕಲ್ಲುಗಳು ಇಲ್ಲಿ ದೊರೆಯದೇ ಇರುವುದರಿಂದ ಕಲ್ಲುಗಳನ್ನು ನಯಗೊಳಿಸಿಲ್ಲ. ಆದ್ದರಿಂದ ಕಲ್ಲುಗಳನ್ನು ಅವು ಇರುವ ಸ್ಥಿತಿಯಲ್ಲಿ ಹಾಗೆ ಜೋಡಿಸಿ ಅಲ್ಲದೆ, ಈ ಬೆಟ್ಟದಲ್ಲಿ ಚಿಕ್ಕ ಬಂಡೆಗಳು, ಕಲ್ಲುಗುಂಡುಗಳು ಹೆಚ್ಚಾಗಿ ದೊರೆಯುವುದರಿಂದ ಇವುಗಳನ್ನೇ ಬಳಸಿ ಬಲಿಷ್ಠಗೋಡೆಯನ್ನು ನಿರ್ಮಿಸಿರುವರು. ಈ ಗೋಡೆಯು ಕೆಲವು ಕಡೆ ೫ ಮೀ.ನಿಂದ ೮ ಮೀ. ಎತ್ತರದವರೆಗೂ ಇದೆ. ಕೋಟೆಗೋಡೆಯ ಮೇಲ್ಭಾಗದಲ್ಲಿ ೩ ಅಡಿ ಎತ್ತರದ ಮಣ್ಣಿನ ಗೋಡೆ ಇದೆ. ಗಚ್ಚುಮಣ್ಣಿನಿಂದ ನಿರ್ಮಿಸಿರುವ ಮಣ್ಣಿನ ಕೋಟೆಯಲ್ಲಿ ಕೋವಿ

ಕಿಂಡಿಗಳಿವೆ. ಗೋಡೆಯ ತಳಭಾಗ ೧೨ ಅಡಿ ಅಗಲ ಇದ್ದು, ಪಿರಾಮಿಡ್ಡಿನ ಆಕೃತಿಯಲ್ಲಿ ನಿರ್ಮಾಣ ಗೊಂಡಂತಿದೆ. ಗೋಡೆಯ ಮಧ್ಯಭಾಗದಲ್ಲಿ ಮಧ್ಯಮಗಾತ್ರದ ಕಲ್ಲುಗುಂಡು, ಕೆಸರುಮಣ್ಣನ್ನು ತುಂಬಿರುವರು. ಕಡಿದಾದ ಬಂಡೆಯ ಮೇಲೆ ಗೋಡೆ ಕಟ್ಟುವಾಗ ಬಂಡೆಗೆ ರಂಧ್ರಗಳನ್ನು ಕೊರೆದು ರಂಧ್ರಗಳಿಗೆ ಬಡಿಗಲ್ಲುಗಳನ್ನು ಇಟ್ಟು ಗೋಡೆ ಜಾರದಹಾಗೆ ತಡೆಯನ್ನು ನಿರ್ಮಿಸಿದ್ದಾರೆ. ಈ ಕೋಟೆಯ ದಕ್ಷಿಣ ಹಾಗೂ ಪೂರ್ವ ಭಾಗದಲ್ಲಿ ಫಿರಂಗಿ ಹಾಗೂ ವೀಕ್ಷಣಾಕಿಂಡಿಗಳಿವೆ. ಈ ವೀಕ್ಷಣಾ ಕಿಂಡಿಗಳ ಮಧ್ಯೆ ಕೋವಿಕಿಂಡಿಗಳಿವೆ.

ಆ ಕೋಟೆಯೊಳಗಡೆ ಇರುವ ಗಾರೆಬುರುಜು ಎತ್ತರವಾಗಿ ಕಟ್ಟಲ್ಪಟ್ಟಿದೆ. ಇಡೀ ಕೋಟೆಯಲ್ಲಿ ಅತೀ ಎತ್ತರವಾಗಿ ಹಾಗೂ ವ್ಯವಸ್ತಿತವಾಗಿ ಉಳಿದಿರುವ ಏಕೈಕ ಬುರುಜಿದು. ಈ ಬುರುಜು ೧೫ ಮೀ. ಎತ್ತರವಿದ್ದು, ೨೫ ಮೀ. ಸುತ್ತಳತೆಯನ್ನು ಹೊಂದಿದೆ. ಬುರುಜಿನ ಕೆಳಭಾಗದಲ್ಲಿ ಮೂರು ಅಡಿ ಅಗಲದ ರಕ್ಷಣಾ ಗೋಡೆಯನ್ನು ಕಟ್ಟಿ ತಳಭಾಗವನ್ನು ಭದ್ರಪಡಿಸಲಾಗಿದೆ. ಈ ಬುರುಜಿನ ಮೇಲ್ಭಾಗದಲ್ಲಿ ಕೋವಿ ಕಿಂಡಿಗಳಿವೆ. ಸುತ್ತಲೂ ಗಾರೆಯನ್ನು ಬಳಸಿರುವುದರಿಂದ ಬುರುಜಿಗೆ ಗಾರೆಬುರುಜು ಎಂದು ಕರೆಯಲಾಗಿದೆ. ಈ ಬುರುಜಿಗೆ ಹತ್ತಲು ಮೆಟ್ಟಿಲುಗಳಿದ್ದು, ಮೇಲ್ಭಾಗದಿಂದ ಸುತ್ತಲಿನ ಪರಿಸರವನ್ನು ವೀಕ್ಷಿಸಬಹುದು. ಗಾರೆಬುರುಜಿನಿಂದ ಸ್ವಲ್ಪ ದೂರದಲ್ಲಿ ಭಾರೀ ಎತ್ತರವಿರುವ ಬಂಡೆಯ ಮೇಲೆ ಹಿಂದೆ ಧ್ವಜಸ್ತಂಭವಿತ್ತೆಂಬುದು ಸ್ಥಳೀಯರಿಂದ ತಿಳಿದುಬರುತ್ತದೆ. ಗಾರೆಬುರುಜಿನ ಮುಂಭಾಗದಲ್ಲಿ ತುಪ್ಪದ ಕೊಳ ಹಾಗೂ ನೀರಿನ ಆಶ್ರಯತಾಣಗಳಿವೆ.

ಇಲ್ಲಿಂದ ಮುಂದೆ ದಿಡ್ಡಿಬಾಗಿಲನ್ನು ಪ್ರವೇಶಿಸಿದರೆ ದೊಡ್ಡ ಬಂಡೆಯ ಮೇಲೆ ಎರಡು ಅಂತಸ್ತಿನ ಕಾವಲು ಗೋಪುರವನ್ನು ನಿರ್ಮಿಸಿದ್ದಾರೆ. ಈ ಗೋಪುರಕ್ಕೆ ಎರಡು ದ್ವಾರಗಳನ್ನು ಕಲ್ಪಿಸಲಾಗಿದ್ದು, ಅಲ್ಲಲ್ಲಿ ಬಂದೂಕುಕಿಂಡಿಗಳಿವೆ. ಈ ಬುರುಜಿನಿಂದ ಪ್ರಾರಂಭವಾಗಿರುವ ಕೋಟೆಗೋಡೆಯು ಉತ್ತರ ಭಾಗದಿಂದ ಪೂರ್ವಕ್ಕೆ ಮುಂದುವರೆದಿದ್ದು ಊರನ್ನು ರಕ್ಷಿಸಿದೆ. ಇದರ ಬಲಭಾಗದಲ್ಲಿ ೪೦ ಅಡಿ ಎತ್ತರದ ಕಲ್ಲಿನ ಮೇಲೆ ಬುರುಜನ್ನು ನಿರ್ಮಿಸಿದ್ದಾರೆ. ಈ ಬುರುಜಿಗೆ ಹೊಟ್ಟೆ ಬುರುಜು ಎಂದು ಹೆಸರಿದೆ. ಪ್ರಾಕೃತಿಕವಾಗಿ ಹೊಟ್ಟೆಯಂತಿರುವ ಕಲ್ಲಿನಿಂದ ಈ ಹೆಸರನ್ನು ಕರೆಯಲಾಗಿದೆ. ಈ ಬುರುಜಿನಿಂದ ಪ್ರಾರಂಭವಾದ ಕೋಟೆಯ ಸಾಲು ಕೆಳಭಾಗದಲ್ಲಿ ಗ್ರಾಮವನ್ನು ಸುತ್ತುವರೆದು ಪುನಃ ದಕ್ಷಿಣದಲ್ಲಿ ಬೆಟ್ಟವನ್ನು ಸೇರಿಕೊಳ್ಳುತ್ತದೆ. ಈ ಕೋಟೆಯ ಸಾಲಿಗೆ ಉತ್ತರ-ದಕ್ಷಿಣವಾಗಿ ಕಟ್ಟಲಾಗಿದ್ದ ಎರಡು ಸುತ್ತಿನ ಕೋಟೆ ಹಾಗೂ ದ್ವಾರಬಾಗಿಲುಗಳು ಶಿಥಿಲಗೊಂಡಿವೆ. ಶಿಥಿಲಗೊಂಡ ಊರ ಬಾಗಿಲಿನಿಂದ

ಮೇಲುದುರ್ಗದ ರಂಗಯ್ಯನ ಬಾಗಿಲಿನವರೆಗೆ ಅಲ್ಲಲ್ಲಿ ಕಲ್ಲಿನ ಲಾಂದ್ರಗಳಿವೆ. ಇವುಗಳ ಮೇಲೆ ರಾತ್ರಿ ವೇಳೆ ದೀಪಗಳನ್ನು ಉರಿಸಿ ಬೆಳಕಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೆಂದು ಹೇಳಲಾಗಿದೆ. ಇಂತಹ ಕಲ್ಲುಗಳು ಈಗಲೂ ಇಲ್ಲಿ ಕಂಡುಬರುತ್ತದೆ.

ಕೋಟೆಯ ನೈರುತ್ಯಕ್ಕೆ ಎರಡು ಸುತ್ತಿನ ಕೋಟೆಯ ಸಾಲು ಇದೆ. ಈ ಕೋಟೆಗೆ ಹೊಂದಿಕೊಂಡಂತೆ ಎರಡು ಸುತ್ತುಗಳನ್ನು ಮತ್ತೆ ಉತ್ತರದವರೆಗೆ ವಿಸ್ತರಿಸಲಾಗಿದೆ. ಅಲ್ಲಲ್ಲಿ ಕಲ್ಲುಗುಂಡುಗಳ ಮೇಲೆ ಬುರುಜುಗಳನ್ನು ನಿರ್ಮಿಸಲಾಗಿದೆ. ಇಲ್ಲಿರುವ ಬುರುಜಿನಿಂದ ಹೊಟ್ಟೆಯ ಬುರುಜಿಗೂ ಅಲ್ಲಿಂದ ಗಾರೆ ಬುರುಜಿಗೂ ಸಂಪರ್ಕ ಕಲ್ಪಿಸಲಾಗಿದೆ. ಇಲ್ಲಿರುವ ಕೋಟೆಯು ಪೂರ್ವಕ್ಕೆ ಮುಂದುವರೆದಿದ್ದು, ಗ್ರಾಮವನ್ನು ರಕ್ಷಿಸಿದೆ. ಈ ಭಾಗದಲ್ಲಿ ಮಾಟನಾಯಕನ ಗುಹೆ, ಸಿದ್ಧರಗೊಂದಿ ಮತ್ತಿತರೆ ಸ್ಮಾರಕಗಳು ಕಂಡುಬರುತ್ತವೆ. ಒಟ್ಟಾರೆ ವೇಣುಕಲ್ಲು ಗುಡ್ಡದ ಕೋಟೆಯು ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ಕೋಟೆಗಳಲ್ಲಿ ವಿಶಿಷ್ಟವಾದ ಕೋಟೆಯಾಗಿದೆ.

೪.೮ ಹೊಸದುರ್ಗದ ಕೋಟೆ

ಹೊಸದುರ್ಗವು ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಇದು ಚಿತ್ರದುರ್ಗದಿಂದ ನೈರುತ್ಯಕ್ಕೆ ೬೪ ಕಿ.ಮೀ. ದೂರದಲ್ಲಿದೆ. ಹೊಸದುರ್ಗವು ಭೂನಕ್ಷೆಯಲ್ಲಿ ಅಕ್ಷಾಂಶ ೧೩.೪೮ ಉತ್ತರ ಮತ್ತು ೭೬.೧೭ ಪೂರ್ವ ರೇಖಾಂಶದಲ್ಲಿದ್ದು ಸಮುದ್ರಮಟ್ಟದಿಂದ ೨೯೪೮ ಅಡಿ ಎತ್ತರದಲ್ಲಿದೆ. ಈ ತಾಲ್ಲೂಕು ಪೂರ್ವಭಾಗದಲ್ಲಿ ಹಿರಿಯೂರು, ಪಶ್ಚಿಮದಲ್ಲಿ ತರೀಕೆರೆ ಮತ್ತು ಕಡೂರು, ದಕ್ಷಿಣದಲ್ಲಿ ತುಮಕೂರು ಜಿಲ್ಲೆಯ ಚಿಕ್ಕ ನಾಯಕನಹಳ್ಳಿ ತಾಲ್ಲೂಕುಗಳಿಂದ ಸುತ್ತುವರೆದಿದೆ. ಹೊಸದುರ್ಗವು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿದೆ. ಪೂರ್ವಘಟ್ಟ ಶ್ರೇಣಿಗೆ ಸೇರಿದ ಪಶ್ಚಿಮ ಶ್ರೇಣಿ ಹೊಸದುರ್ಗದಿಂದ ದಾವಣಗೆರೆ ಜಿಲ್ಲೆಯ ಮಾಯಕೊಂಡ ಹಾಗೂ ಅಣಜಿಯವರೆಗೂ ಮುಂದುವರೆದಿದೆ. ಅಲ್ಲದೆ ಕೋಟಕಲ್ಲುಗುಡ್ಡ, ದೊಡ್ಡರಸಿಗುಡ್ಡ, ತಿರುಮಲ, ದೇವರಗುಡ್ಡ, ಹಾಲುರಾಮೇಶ್ವರ ಗುಡ್ಡಗಳಿಂದ ಕೂಡಿದ ಪ್ರದೇಶ ಇದಾಗಿದೆ. ಇಂತಹ ಬೆಟ್ಟಗುಡ್ಡಗಳ ಶ್ರೇಣಿಗೆ ಸೇರಿದ ಹೊಸದುರ್ಗದ ಗುಡ್ಡವು ಸಹಜವಾಗಿಯೇ ಕೋಟೆ, ಕೊತ್ತಲ ಕಟ್ಟಲು ಸಹಕಾರಿಯಾಗಿತ್ತೆಂದು ಹೇಳಬಹುದು. ಇಂತಹ ಪ್ರದೇಶವನ್ನು ಯಶಸ್ವಿಯಾಗಿ ಬಳಸಿಕೊಂಡವರಲ್ಲಿ ಚಿತ್ರದುರ್ಗದ ಪಾಳೆಯಗಾರರು ಮುಖ್ಯರು.

ಚಿತ್ರದುರ್ಗದ ಪಾಳೆಯಗಾರನಾದ ಕಣಕುಪ್ಪೆಯ ಸರ್ಜೇರಾಯನ ಮಗ ಚಿಕ್ಕಣ್ಣ ನಾಯಕನು, ಶಿರಾ ಪ್ರಾಂತ್ಯದ ಮಹಮದೀಯರ ಅಧೀನದಲ್ಲಿದ್ದ ಬಾಗೂರು ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು

[illegible]

[illegible]

[illegible]

[illegible]

ಹೋರಾಟ ನಡೆಸುವ ಸಲುವಾಗಿ, ಈಗಿನ ಹೊಸದುರ್ಗದ ಪೂರ್ವದಿಕ್ಕಿನ ಬೆಟ್ಟದ ಮೇಲೆ ಕ್ರಿ.ಶ. ೧೬೭೫ರಲ್ಲಿ ಕೋಟೆ ನಿರ್ಮಿಸಿಕೊಂಡು ಸೇನಾ ಸಮೇತವಾಗಿ ಅಲ್ಲಿ ತಂಗಿದ್ದನು. ಅದೇ ಕಾಲಕ್ಕೆ ಬಾಗೂರಿನಿಂದ ಹೊರದೂಡಲ್ಪಟ್ಟು ಜಂಗಮ ಪುರೋಹಿತನು ಸದರಿ ಚಿಕ್ಕಣ್ಣನಾಯಕನ ಮೊರೆಹೊಕ್ಕನು. ಆಗ ನಾಯಕರು ಬೆಟ್ಟದ ಕೆಳಗೆ ಹೊರಪೇಟೆಯೊಂದನ್ನು ನಿರ್ಮಿಸಿಕೊಂಡಿರುವಂತೆ ಜಂಗಮನಿಗೆ ತಿಳಿಸಿದ್ದರಿಂದ ೧೬೭೮ರ ವೇಳೆಗೆ ಬೆಟ್ಟದ ತಪ್ಪಲಿನಲ್ಲಿ ಚಿಕ್ಕ ಪೇಟೆಯೊಂದು ರೂಪುಗೊಂಡಿತು. ಇದಕ್ಕೆ ನಾಯಕನು ಹೊಸದುರ್ಗ ಎಂದು ನಾಮಕರಣ ಮಾಡಿದನು. ಹೊಸದುರ್ಗಕ್ಕೆ ಆರಂಭದಲ್ಲಿ ನವದುರ್ಗ ಎಂಬ ಹೆಸರು ಇತ್ತೆಂದು ಹೇಳಲಾಗಿದೆ.[೧೪]

ಚಿಕ್ಕಣ್ಣನಾಯಕನು ಧಾರ್ಮಿಕ ಭಕ್ತಿಯುಳ್ಳವನಾಗಿದ್ದು, ತನ್ನ ಮೂಲಗುರುಗಳಾದ ಶೃಂಗೇರಿ ಜಗದ್ಗುರು ಶಂಕರಭಾರತಿಸ್ವಾಮಿಗಳಿಗೆ ಬಾಗೂರು ಸೀಮೆಯೊಳಗಿನ ಮಾರಬಗಟ್ಟ ಗ್ರಾಮವನ್ನು ದತ್ತಿಯಾಗಿ ಬಿಟ್ಟ ವಿಷಯ ಶಾಸನದಿಂದ ತಿಳಿದುಬರುತ್ತದೆ.[೧೫] ಈ ಗುರುಭಕ್ತಿಯ ಫಲವಾಗಿಯೇ ಹೊಸದುರ್ಗ ನಿರ್ಮಾಣವಾಯಿತೆಂದೂ ಹೇಳಲಾಗಿದೆ.[೧೬]

ಹೀಗೆ ಚಿತ್ರದುರ್ಗದ ಪಾಳೆಯಗಾರರಿಗೆ ನೇರವಾಗಿ ಒಳಪಟ್ಟಿದ್ದ ಹೊಸದುರ್ಗದ ಕೋಟೆಗೆ ಚಿತ್ರದುರ್ಗದ ರಕ್ತಸಂಬಂಧಿಗಳನ್ನು ದಳಪತಿಗಳನ್ನಾಗಿ ನೇಮಿಸುತ್ತಿದ್ದರು. ಚಿಕ್ಕಣ್ಣನಾಯಕನ ತರುವಾಯ ದೊಡ್ಡ ಮದಕರಿನಾಯಕ, ದಂಡಿನ ಜಂಪಣ್ಣನಾಯಕ, ಭರಮಣ್ಣನಾಯಕರನ್ನು ಹಿರೇ ಮದಕರಿನಾಯಕನು ಹೊಸದುರ್ಗದ ಕೋಟೆಗೆ ನೇಮಿಸಿರುವುದನ್ನು ನಾವು ನೋಡಬಹುದಾಗಿದೆ.[೧೬] ರಾಜವೀರ ಮದಕರಿನಾಯಕನ ಅವಧಿಯಲ್ಲಿ ಹೈದರಾಲಿಯು ಹೊಸದುರ್ಗ ಪ್ರದೇಶವನ್ನು ವಶಪಡಿಸಿಕೊಂಡನು. ನಂತರ ಟಿಪ್ಪು, ಬ್ರಿಟೀಷರು, ಮೈಸೂರು ಒಡೆಯರು ಈ ಭಾಗದಲ್ಲಿ ಆಳ್ವಿಕೆ ಮಾಡಿದಂತೆ ಕಂಡುಬರುತ್ತದೆ.

ಹೊಸದುರ್ಗದ ಕೋಟೆಯನ್ನು ಈಗ ಪಟ್ಟಣ ನೆಲೆಗೊಂಡಿರುವ ದಕ್ಷಿಣ ದಿಕ್ಕಿನ ಬೆಟ್ಟಗಳ ಶ್ರೇಣಿಗಳನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ಈ ಬೆಟ್ಟಗಳು ಎತ್ತರವಾಗಿ ಉತ್ತರದಿಂದ ದಕ್ಷಿಣಕ್ಕೆ ಹಬ್ಬಿವೆ. ಈಗ ಹಬ್ಬಿರುವ ಭೈರವನಕೊಂಬೆ ಮತ್ತು ಹನುಮನಕೊಂಬೆ ಎಂದು ಕರೆಯುವ ಎರಡು ಬೆಟ್ಟಗಳಿವೆ. ಈ ಎರಡು ಬೆಟ್ಟಗಳಿಗೆ ದಕ್ಷಿಣ ಭಾಗದಲ್ಲಿ ಸೇತುವೆಯಂತೆ ಪೂರ್ವಪಶ್ಚಿಮವಾಗಿ ಬೆಸೆದುಕೊಂಡಿರುವ ಬೆಟ್ಟ ಪ್ರದೇಶವನ್ನು ಬಳಸಿಕೊಂಡು ವಿವಿಧ ವಿನ್ಯಾಸ ಹಾಗೂ ಅನಿಯಮಿತಾಕಾರದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಕೋಟೆಯಲ್ಲಿ ಅಸಂಖ್ಯಾತ ಬುರುಜುಗಳು ಬತೇರಿಗಳಲ್ಲದೆ ಇತರೆ ಸ್ಮಾರಕಗಳು ಇವೆ. ಕಾಲಭೈರವನ ದೇವಾಲಯವಿರುವ ಬೆಟ್ಟದ ಪ್ರದೇಶವನ್ನು ಭೈರವನಕೊಂಬೆ ಎಂದೂ,

ಹನುಮಂತನ ದೇವಾಲಯವಿರುವ ಬೆಟ್ಟದ ಪ್ರದೇಶವನ್ನು ಹನುಮನಕೊಂಬೆ ಎಂದು ಕರೆಯಲಾಗಿದೆ. ಈ ಎರಡು ಬೆಟ್ಟಗಳ ಮಧ್ಯ ಕೋಟೆ ಇರುವ ವಿಶಾಲ ಪ್ರದೇಶವನ್ನು ನಾಗರಪಡೆ ಎಂದು ಹೇಳಲಾಗಿದೆ. ಭೈರವನಕೊಂಬೆಗೆ ಉತ್ತರದಲ್ಲಿ ಬೆಟ್ಟಗಳ ಮಧ್ಯೆ ಮೂರು ಸುತ್ತು ಹಾಗೂ ದಕ್ಷಿಣ ಭಾಗಕ್ಕೆ ೨ ಸುತ್ತಿ ಕೋಟೆ ಇದೆ. ಪಶ್ಚಿಮಕ್ಕೆ ಅವಶ್ಯಕತೆಗನುಗುಣವಾಗಿ ಕೋಟೆ ಸಾಲು ಇದೆ. ಮುಂದೆ ಹನುಮನಕೊಂಬೆ ಪ್ರದೇಶಕ್ಕೆ ಈ ಬೆಟ್ಟದಿಂದ ಎರಡು ಸುತ್ತಿನ ಬೆಟ್ಟಗಳ ಮಧ್ಯೆ ಪೂರ್ವಪಶ್ಚಿಮವಾಗಿ ಎರಡು ಸುತ್ತು ಹಾಗೂ ಉತ್ತರ ದಕ್ಷಿಣವಾಗಿ ಐದು ದ್ವಾರಗಳನ್ನು ಒಳಗೊಂಡ ನಾಲ್ಕು ಸುತ್ತಿನ ಕೋಟೆ ಇದೆ. ಉಳಿದಂತೆ ಹನುಮನಕೊಂಬೆಯಲ್ಲಿ ಪಶ್ಚಿಮಕ್ಕೆ ಮೂರು, ಉತ್ತರಕ್ಕೆ ಐದು ಸುತ್ತು ಹಾಗೂ ಪೂರ್ವಕ್ಕೆ ಒಂದು ಸುತ್ತಿನ ಕೋಟೆಗೋಡೆಗಳಿವೆ. ಈ ಬೆಟ್ಟದ ಕೋಟೆ ಸಾಲುಗಳಲ್ಲಿ ಒಟ್ಟು ೮ ದ್ವಾರಬಾಗಿಲುಗಳಿವೆ.

ಭೈರವನಕೊಂಬೆಗೆ ಪಟ್ಟಣದಿಂದ ಬಸವಣ್ಣನ ದೇವಾಲಯ ಮತ್ತು ಕೂಗುವ ಬಂಡೆಗಳನ್ನು ಬಳಸಿಕೊಂಡು ಬರುವ ದಾರಿ ಊರು ಬಾಗಿಲಿಗೆ ಪ್ರವೇಶ ಕಲ್ಪಿಸುತ್ತದೆ. ಉತ್ತರದಿಂದ ಪ್ರವೇಶ ಕಲ್ಪಿಸುವ ಈ ಊರುಬಾಗಿಲು ೪x೩.೧೦x೬.೨ ಅಡಿಗಳಲ್ಲಿ ರಚನೆಗೊಂಡಿದೆ. ಬಾಗಿಲಮುಂದೆ ಉತ್ತರದಕ್ಷಿಣವಾಗಿ ೧೮ ಅಡಿ ಉದ್ದದ ಪಹರೆಗೃಹಗಳಿವೆ. ಊರಬಾಗಿಲಿನ ಮುಂದೆ ದಕ್ಷಿಣಕ್ಕೆ ಎರಡು ಸುತ್ತು ವ್ಯವಸ್ಥಿತವಾದ ಕೋಟೆಯಿದೆ. ಎರಡು ಬೆಟ್ಟಗಳ ಮಧ್ಯೆ ಇಳಿಜಾರು ಪ್ರದೇಶಕ್ಕೆ ಅಡ್ಡಲಾಗಿ ಕಟ್ಟಿರುವ ಗೋಡೆಯು ೩ ಮೀ. ಅಗಲ ೪ಮೀ. ಎತ್ತರವಿದೆ. ಪೂರ್ವದ ಬೆಟ್ಟದ ಬಂಡೆಯು ತುಂಬಾ ಕಡಿದಾಗಿರುವುದರಿಂದ, ಬಂಡೆಯೇ ಕೋಟೆಯ ಪಾತ್ರವಹಿಸಿದೆ. ಊರುಬಾಗಿಲ ನೈರುತ್ಯ ದಿಕ್ಕಿನಲ್ಲಿ ಎತ್ತರವಾದ ಪ್ರದೇಶದಲ್ಲಿ ಭೈರವನ ದೇವಾಲಯವಿದೆ. ಈ ದೇವಾಲಯದಲ್ಲಿ ವಿನಾಯಕ, ನಂದಿ, ಈಶ್ವರ, ಭೈರವಮೂರ್ತಿಯ ಶಿಲ್ಪಗಳಿವೆ. ದೇವಾಲಯದ ಹಿಂಭಾಗದಲ್ಲಿರುವ ೪೪ ಕಂಬಗಳ ಮನೆಯನ್ನು ಮದ್ದಿನ ಮನೆಯೆಂದು ಕರೆಯುತ್ತಾರೆ. ಈ ಮದ್ದಿನ ಮನೆಯ ಒಂದೊಂದು ಕಂಬವು ೬೭ ಇಂಚು ದಪ್ಪ ಇದೆ. ಸುತ್ತಲು ೫೭x೧೩ ಇಂಚಿನ ನಯಗೊಳಿಸಿದ ಕಲ್ಲುಗಳಿಂದ ಕಟ್ಟಿದ ಕಟ್ಟಡವಿದೆ. ಪೂರ್ವ ಮತ್ತು ಪಶ್ಚಿಮಕ್ಕೆ ಎರಡು ಚಿಕ್ಕ ದ್ವಾರಗಳಿವೆ. ಪಶ್ಚಿಮದ ಬಾಗಿಲನ್ನು ೯x೩೪x೪೦ ಇಂಚು ಅಳತೆಯಲ್ಲಿ ನಿರ್ಮಿಸಲಾಗಿದೆ. ಕಟ್ಟಡದ ಮೇಲ್ಭಾಗವನ್ನು ಗಾರೆಗಟ್ಟಿನಿಂದ ಮುಚ್ಚಲಾಗಿದೆ. ಭೈರವನ ದೇವಾಲಯದ ಮುಂದೆ ಎಮ್ಮೆದೊಣೆ, ಅಕ್ಕತಂಗಿಯರ ಹೊಂಡಗಳಿವೆ. ದೊಣೆಗಳ ಮಧ್ಯೆಭಾಗದಲ್ಲಿ ೯೦ ಅಡಿ ವಿಸ್ತೀರ್ಣವುಳ್ಳ ಹಾಗೂ ೧೫ ಅಡಿ ಎತ್ತರವಿರುವ ಭೈರವನ ಬುರುಜಿದೆ. ಬುರುಜಿನ ಮೇಲಿಂದ ದಕ್ಷಿಣ ಮತ್ತು ಪಶ್ಚಿಮದ ಹನುಮನ ಕೋಟೆ ಪ್ರದೇಶವನ್ನು ವೀಕ್ಷಿಸಬಹುದು.

[illegible]

ಭೈರವನಕೊಂಬೆ ಬೆಟ್ಟದ ಪಶ್ಚಿಮ ಭಾಗದಲ್ಲಿ ೩ ಅಡಿ ಅಗಲ ೧೦ ಅಡಿ ಎತ್ತರದ ಕೋಟೆಗೋಡೆ ಇದೆ. ಈ ಗೋಡೆಯ ಹಿಂಭಾಗದಲ್ಲಿ ೪ ಅಡಿ ಅಟ್ಟಾಲಕವಿದೆ. ಗೋಡೆಗೆ ೧೬x೮ ಇಂಚಿನ ಅಳತೆಯ ಕಲ್ಲುಗಳ ಮಧ್ಯೆ ಮರಳು ತುಂಬಿದ್ದಾರೆ. ಭೈರವನ ದೇವಾಲಯದ ಇಳಿಜಾರು ಪ್ರದೇಶದಿಂದ ಬಂದ ನೀರು ಗೋಡೆಯಿಂದ ಬಸಿದುಹೋಗುವಂತೆ ಗೋಡೆಯನ್ನು ರಚಿಸಲಾಗಿದೆ. ದಕ್ಷಿಣಕ್ಕೆ ಹಿಂದು, ಮುಂದಾಗಿ, ಮುಂದುವರೆದಿರುವ ಗೋಡೆಗೆ ದ್ವಾರಬಾಗಿಲು ಇದೆ. ಈ ಬಾಗಿಲು ನಾಗರಪಡೆ ಕೋಟೆ ಸಾಲಿಗೆ ಪ್ರವೇಶ ಕಲ್ಪಿಸುತ್ತದೆ. ಈ ಬಾಗಿಲು ತುಂಬಾ ತಗ್ಗಿನಲ್ಲಿರುವುದರಿಂದ ತಗ್ಗಿನಬಾಗಿಲು ಎಂದೇ ಕರೆಯುತ್ತಾರೆ. ಬಾಗಿಲಿನ ಪಶ್ಚಿಮಕ್ಕೆ ಇರುವ ನೈಸರ್ಗಿಕ ಬಂಡೆಗಳು ಹಾಗೂ ೨೦ ಅಡಿ ಎತ್ತರದ ಕೋಟೆಗೋಡೆ ಮರೆಮಾಡಿವೆ. ಬಾಗಿಲ ಎತ್ತರ ೭ ಅಡಿ ಇದ್ದು ಅಗಲ ೫ ಅಡಿ ಇದೆ. ಬಾಗಿಲ ಹಿಂಭಾಗದಲ್ಲಿ ಎರಡುಕಡೆ ಪಹರೆಗೃಹಗಳಿವೆ. ಇಲ್ಲಿಂದ ಮುಂದೆ ನಾಗರಪಡೆಯ ೨ ಕೋಟೆಸಾಲುಗಳು ಪೂರ್ವದಿಂದ ಮುಂದುವರಿದು ಪಶ್ಚಿಮದ ಹನುಮನಕೊಂಬೆ ಬೆಟ್ಟದ ಸಾಲುಗಳಿಗೆ ಸಂಪರ್ಕ ಕಲ್ಪಿಸಿವೆ. ಈ ಕೋಟೆ ಸಾಲುಗಳಲ್ಲಿ ಅಲ್ಲಲ್ಲಿ ಬೃಹದಾಕಾರದ ಬಂಡೆಗಳನ್ನು ಬಳಸಿ ಕೋಟೆಗೋಡೆಯನ್ನು ನಿರ್ಮಿಸಿ ಭದ್ರಗೊಳಿಸಿದ್ದಾರೆ. ಈ ಕೋಟೆ ಸಾಲುಗಳ ಮಧ್ಯೆ ಉತ್ತರ ದಕ್ಷಿಣವಾಗಿ ಮೂರು ಸುತ್ತಿನ ಕೋಟೆಯನ್ನು ಕಟ್ಟಲಾಗಿದೆ.

ನಾಗರಪಡೆಯ ಕೋಟೆ ಪ್ರದೇಶದಲ್ಲಿ ಬರುವ ಮೊದಲ ಬಾಗಿಲನ್ನು ೪x೬x೯ ಅಡಿ ಅಳತೆಯಲ್ಲಿ ನಿರ್ಮಿಸಲಾಗಿದೆ. ಈ ಬಾಗಿಲಕೋಟೆ ಗೋಡೆಯ ಎತ್ತರ ೧೫ ಅಡಿ, ಅಗಲ ೪ ಅಡಿ ಇದೆ, ಗೋಡೆ ಹಿಂಭಾಗದಲ್ಲಿ ೬ ಅಡಿ ಅಗಲದ ವೇದಿಕೆ ಇದೆ. ಈ ಕೋಟೆ ಸಾಲಿನ ದಕ್ಷಿಣಕ್ಕೆ ಇರುವ ಬೂರುಜು ೪೦ ಮೀಟರ್ ಸುತ್ತಳತೆಯನ್ನು ಹೊಂದಿದೆ. ಇಂತಹ ಬುರುಜುಗಳು ನಾಗರಪಡೆಯ ಎರಡುಸಾಲುಗಳ ಉದ್ದಕ್ಕೂ ಕಂಡುಬರುತ್ತವೆ. ಬಾಗಿಲ ಮುಂಭಾಗದ ವಿಶಾಲವಾದ ವೇದಿಕೆಯಲ್ಲಿ ೬ ಅಡಿ ಎತ್ತರದ ನಾಗರಕಲ್ಲುಗಳಿವೆ. ಇವುಗಳಿರುವ ಪ್ರದೇಶಕ್ಕೆ ನಾಗರಪಡೆ ಎಂದು ಕರೆಯುತ್ತಾರೆ.

ನಾಗರಪಡೆಯ ಮುಂಭಾಗ ೪.೧೦x೬.೬x೯ ಅಡಿಯ ಎರಡನೆಯ ದ್ವಾರಬಾಗಿಲು ಇದೆ. ದ್ವಾರಬಾಗಿಲ ಉತ್ತರಕ್ಕಿರುವ ಗೋಡೆಯು ೧೨ ಅಡಿ ಅಗಲ ೨೦ ಅಡಿ ಎತ್ತರವಿದೆ. ಮೂರನೇ ದ್ವಾರಬಾಗಿಲು ಇಲ್ಲಿಂದ ೩೦ ಮೀ. ದೂರದಲ್ಲಿ ನಿರ್ಮಾಣಗೊಂಡಿದೆ. ಈ ದ್ವಾರದಿಂದ ದಕ್ಷಿಣಕ್ಕೆ ಹಾಗೂ ಪಶ್ಚಿಮಕ್ಕೆ ಹನುಮನಕೊಂಬೆಯವರೆಗೂ ವಿಶಾಲವಾದ ಪ್ರದೇಶವಿದ್ದು ಅನೇಕ ಕಟ್ಟಡದ ಅವಶೇಷಗಳಿವೆ. ಇದರ ಪಕ್ಕದಲ್ಲಿಯೇ ಹೊರಕೋಟೆಯಿದ್ದು ಇದನ್ನು ದಕ್ಷಿಣಕ್ಕೆ ವಿಸ್ತರಿಸಲಾಗಿದ್ದು,

[illegible]

[illegible]

[illegible]

ಇಲ್ಲಿಯೂ ಕೂಡ ಒಂದು ದ್ವಾರವನ್ನು ನಿರ್ಮಿಸಿದ್ದಾರೆ. ಈ ಬಾಗಿಲು ದಕ್ಷಿಣದಲ್ಲಿ ಕೋಟೆಯ ಹೊರಪ್ರದೇಶಕ್ಕೆ ಪ್ರವೇಶವಾಗಿದೆ. ೪x೫x೭ ದ್ವಾರದಬಾಗಿಲಿನ ಪಕ್ಕದಲ್ಲಿಯೇ ೪x೩x೫ ಅಳತೆಯ ದಿಡ್ಡಿಬಾಗಿಲು ಇದೆ. ದಿಡ್ಡಿಬಾಗಿಲ ಪ್ರವೇಶವನ್ನು ಮತ್ತೆ ಮುಖ್ಯ ದ್ವಾರಕ್ಕೆ ಕಲ್ಪಿಸಲಾಗಿದ್ದು, ಎರಡು ಕಡೆ ಪಹರೆ ಗೃಹಗಳಿವೆ. ಈ ಬಾಗಿಲಿನ ಮುಂಭಾಗ ಇರುವ ಕಟ್ಟಡದ ಅವಶೇಷಗಳು ಮತ್ತು ಮಂಟಪಗಳನ್ನು ಗಮನಿಸಿದರೆ ಸಾಮಾನ್ಯವಾಗಿ ಹಿಂದೆ ಹೇಳಲಾದಂತೆ ಪೇಟೆ ಪ್ರದೇಶ ಇದಾಗಿರಬಹುದು.

ನಾಗರಪಡೆ ಪ್ರದೇಶದಿಂದ ಹನುಮನಕೊಂಬೆ ಪ್ರದೇಶಕ್ಕೆ ಪ್ರವೇಶ ಮಾಡಲು ಪೂರ್ವ ಮತ್ತು ಪಶ್ಚಿಮವಾಗಿ ಕೋಟೆಗೆ ದ್ವಾರಬಾಗಿಲನ್ನು ನಿರ್ಮಿಸಲಾಗಿದೆ. ನಯಗೊಳಿಸಿದ ಕಲ್ಲುಗಳಿಂದ ನಿರ್ಮಿಸಿರುವ ದ್ವಾರಬಾಗಿಲು ಇತರೆ ದ್ವಾರಗಳಿಗಿಂತ ಭಿನ್ನವಾಗಿದೆ. ಈ ದ್ವಾರಬಾಗಿಲನ್ನು ೪.೫x೬x೭.೬ ಅಳತೆಯಲ್ಲಿ ನಿರ್ಮಿಸಿದ್ದು ದ್ವಾರವು ಅತಿ ಎತ್ತರ ಪ್ರದೇಶವಾದ ಹನುಮನ ಕೊಂಬೆಗೆ ಪ್ರವೇಶ ಕಲ್ಪಿಸುತ್ತದೆ. ನಂತರ ಮುಂದೆ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿ ನೈಸರ್ಗಿಕವಾದ ಎರಡು ಬಂಡೆ ಗುಂಡುಗಳ ಮಧ್ಯೆದಲ್ಲಿ ಸ್ವಾಭಾವಿಕ ದ್ವಾರವನ್ನು ತೆರೆಯಲಾಗಿದೆ. ಬಾಗಿಲಿಗೆ ಹೊಂದಿಕೊಂಡ ಪಕ್ಕದಲ್ಲಿಯೇ ತುಂಬ ಹಳೆಯ ಕೋಟೆ ಇದ್ದು, ಪೂರ್ವಕ್ಕೆ ೪x೪x೫ ಅಡಿಗಳ ದ್ವಾರವಿದೆ. ಈ ದ್ವಾರದಿಂದ ಮೇಲ್ವರ್ಗವೆಂಬ ಹನುಮನ ಕೊಂಬೆಗೆ ಹೋಗಬಹುದು. ಈ ಪ್ರದೇಶದಲ್ಲಿ ಹನುಮಂತನ ದೇವಾಲಯವಿದೆ. ದೇವಾಲಯದ ಹಿಂಭಾಗದಲ್ಲಿ ಕಲ್ಲಿನ ಕಣಜವು, ೫ ಅಡಿ ಅದಿಷ್ಠಾನದ ಮೇಲೆ ನಿರ್ಮಾಣಗೊಂಡಿವೆ. ಕಣಜದ ಮುಂದೆ ೧೫ ಅಡಿ ಎತ್ತರದ ಕಾವಲು ಬರುಜಿದೆ. ಬುರುಜಿನಿಂದ ಮುಂದೆ ಅಣ್ಣಯ್ಯನ ಹೊಂಡ, ತಣ್ಣೀರು ದೋಣೆಗಳಿವೆ. ದೋಣೆಯ ಮುಂಭಾಗ ಮತ್ತೊಂದು ಕಾವಲು ಬುರುಜಿದೆ. ಈ ಬುರುಜಿನಿಂದ ಕೋಟೆಯ ಸಮಗ್ರ ಪ್ರದೇಶವನ್ನು ವೀಕ್ಷಿಸಬಹುದು. ಹನುಮನಕೊಂಬೆಯ ಪಶ್ಚಿಮಕ್ಕೆ ಬೆಟ್ಟದ ಕೆಳಭಾಗದಲ್ಲಿ ಎರಡು ಸುತ್ತಿನ ಕೋಟೆಯಿದೆ.

ಹನುಮನಕೊಂಬೆ ಪ್ರದೇಶದ ಉತ್ತರಕ್ಕೆ ಕೋಟೆಯು ಸುಮಾರು ೧ ಕಿ.ಮೀ. ವಿಸ್ತಾರಗೊಂಡಿದೆ. ಈ ಕೋಟೆಯ ದಕ್ಷಿಣದಿಂದ ಪ್ರಾರಂಭವಾಗಿರುವ ಎರಡು ಸುತ್ತುಗಳು ಉತ್ತರದಲ್ಲಿರುವ ದೊಡ್ಡ ಬಾಗಿಲಿಗೆ ಕೊನೆಗೊಳ್ಳುತ್ತವೆ. ಕೋಟೆಯ ಸಾಲುಗಳ ಮಧ್ಯೆ ಪೂರ್ವಪಶ್ಚಿಮವಾಗಿ ಎರಡು ದ್ವಾರಗಳಿರುವ ಕೋಟೆಯ ಸುತ್ತು ಇದೆ. ಉತ್ತರ ದಕ್ಷಿಣವಾಗಿ ದ್ವಾರಗಳನ್ನೊಳಗೊಂಡ ಮತ್ತೊಂದು ಕೋಟೆಯ ಸಾಲೂ ಸೇರಿದಂತೆ ಒಟ್ಟು ೬ ದ್ವಾರಬಾಗಿಲುಗಳು ಈ ಪ್ರದೇಶದಲ್ಲಿವೆ. ಈ ದ್ವಾರಗಳಿಂದ ಈ ಪ್ರದೇಶದಲ್ಲಿ ನಾಲ್ಕು ಅಂಕಣದ ಕೋಟೆ ನಿರ್ಮಾಣಗೊಂಡಿದೆ. ಈ ಎಲ್ಲಾ ದ್ವಾರಬಾಗಿಲುಗಳು ಪ್ರತೀ ಅಂಕಣಕ್ಕೆ

[illegible]

[illegible]

ಸಂಪರ್ಕ ಕಲ್ಪಿಸುತ್ತವೆ. ಕೊನೆಯ ದೊಡ್ಡ ಬಾಗಿಲು ಇಡೀ ಕೋಟೆಯಲ್ಲಿ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ದ್ವಾರಬಾಗಿಲಾಗಿದೆ. ಇಲ್ಲಿನ ಕೋಟೆ ಗೋಡೆಗಳು ೨೫ ಅಡಿ ಎತ್ತರವಾಗಿದ್ದು, ೧೦ ಅಡಿ ಅಗಲವಾಗಿವೆ. ಬಾಗಿಲಿನ ಪೂರ್ವ ಮತ್ತು ಪಶ್ಚಿಮದ ಕಡೆಗಳಲ್ಲಿ ಪ್ರತ್ಯೇಕವಾದ ಕೈಪಿಡಿ ಗೋಡೆಗಳನ್ನು ನಿರ್ಮಿಸಿ ಕೋವಿ ಕಿಂಡಿಗಳನ್ನು ರಚಿಸಲಾಗಿದೆ. ಈ ಕೈಪಿಡಿ ಗೋಡೆಗಳ ಮಧ್ಯೆ ೮ ಅಡಿಗಳ ಅಂತರವಿದೆ. ಬಾಗಿಲ ಹೊರಭಾಗ ಮತ್ತು ಒಳ ಭಾಗದಲ್ಲಿ ಪಹರೆ ಗೃಹಗಳನ್ನು ರಚಿಸಿದ್ದಾರೆ. ೨೫ ಅಡಿ ಎತ್ತರದ ಕಲ್ಲಿನ ಗೋಡೆಗೆ ೨೨x೧೬ ಇಂಚಿನ ನಯಗೊಳಿಸಿದ ಕಲ್ಲುಗಳನ್ನು ಬಳಸಲಾಗಿದೆ. ಈ ಬಾಗಿಲಿನ ಮೇಲೆ ಇರುವ ಕಲ್ಲಿನ ಗೋಡೆಗೆ ೫ ಅಡಿ ಎತ್ತರದ ಮಣ್ಣಿನ ಗೋಡೆ ಕಟ್ಟಲಾಗಿದೆ. ಗೋಡೆಯು ನಾಲ್ಕು ಅಡಿ ಅಗಲವಾಗಿದ್ದು, ಅಲ್ಲಲ್ಲಿ ಕೋವಿ ಕಿಂಡಿಗಳಿವೆ. ದ್ವಾರಬಾಗಿಲು ೯ ಅಡಿ ಎತ್ತರ ೮ ಅಡಿ ಅಗಲ ೫.೬ ಅಡಿ ನಿರ್ಮಿಸಲಾಗಿದೆ. ಈ ಬಾಗಿಲಿನ ಪಕ್ಕದಲ್ಲಿ ದಿಡ್ಡಿ ಬಾಗಿಲಿದೆ. ದಿಡ್ಡಿ ಬಾಗಿಲನ್ನು ೫.೩x೫.೬ ಅಳತೆಯಲ್ಲಿ ನಿರ್ಮಿಸಲಾಗಿದೆ. ಬಾಗಿಲಿನ ಒಳಭಾಗದಲ್ಲಿರುವ ಮಂಟಪದಲ್ಲಿ ೧೦ ಸ್ತಂಭಗಳಿವೆ. ಸ್ತಂಭಗಳ ಮೇಲೆ ಹಂಸ, ಪದ್ಮ, ಲಜ್ಜಾಗೌರಿ, ಯೋಧನೊಬ್ಬ ಬಾಗಿಲ ಕಡೆ ನಿರ್ದೇಶನ ತೋರಿಸುವ ಚಿತ್ರಗಳಿವೆ. ಬಾಗಿಲ ಮುಂಭಾಗದ ಬಂಡೆಯ ಮೇಲೆ ಹನುಮನ ಚಿತ್ರವಿದೆ. ಈ ಪ್ರದೇಶದಲ್ಲಿ ವೀರಗಲ್ಲು ಇರುವ ಸುಂದರವಾದ ದೇವಾಲಯ, ಹೊಂಡ ಮುಂತಾದ ಸ್ಮಾರಕಗಳಿವೆ. ಇಲ್ಲಿಂದ ಕೋಟೆಯು ಉತ್ತರಕ್ಕೆ ಸಾಗಿ ಊರುಗುಡ್ಡದ ಮೇಲೆ ಕೊನೆಗೊಳ್ಳುತ್ತದೆ. ಊರುಗುಡ್ಡದ ಮೇಲೆ ಅಲ್ಲಲ್ಲಿ ಶಿಥಿಲಾಕಾರದ ಬುರುಜುಗಳಿವೆ.

ಹೊಸದುರ್ಗ ಕೋಟೆಯು ಚಿತ್ರದುರ್ಗ ಪಾಳೆಗಾರರು ನಿರ್ಮಿಸಿದ ಕೋಟೆಗಳಲ್ಲಿ ಎರಡನೆಯ ಅತಿ ದೊಡ್ಡ ಕೋಟೆಯಾಗಿದೆ. ಈ ಕೋಟೆಯು ಸಾಮಾನ್ಯವಾಗಿ ಚಿತ್ರದುರ್ಗ ಕೋಟೆಯ ಎಲ್ಲಾ ಲಕ್ಷಣಗಳನ್ನು ಒಳಗೊಂಡಿದೆ. ಆದರೆ ಹೈದರಾಲಿ, ಟಿಪ್ಪು ಹಾಗೂ ಬ್ರಿಟಿಷರ ಪ್ರಭಾವ ಈ ಕೋಟೆಗಳಲ್ಲಿ ಕಂಡುಬರುವುದಿಲ್ಲ. ಇಲ್ಲಿನ ಸ್ಮಾರಕಗಳ ಇನ್ನು ಹೆಚ್ಚಿನ ಆಳವಾದ ಅಧ್ಯಯನ ನಡೆದರೆ, ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಹೊಸಬೆಳಕನ್ನು ಚೆಲ್ಲಬಹುದು.

೪.೯ ಭರಮಣ್ಣನಾಯಕನ ದುರ್ಗ(ಬಿ.ದುರ್ಗ)

ಭರಮಣ್ಣನಾಯಕನ ದುರ್ಗವು ಚಿತ್ರದುರ್ಗದಿಂದ ಪಶ್ಚಿಮಕ್ಕೆ ೩೦ ಕಿ.ಮೀ.ದೂರದಲ್ಲಿದೆ. ಈ ಊರಿಗೆ ದಾವಣಗೆರೆ ಮತ್ತು ಹೊಳಲ್ಕೆರೆಯಿಂದಲೂ ಮುಖ್ಯರಸ್ತೆಗಳಿವೆ. ಚಿತ್ರದುರ್ಗದ ಪಾಳೆಯಗಾರರಲ್ಲಿ

ಪ್ರಖ್ಯಾತನಾಗಿದ್ದ ಬಿಚ್ಚುಗತ್ತಿ ಭರಮಣ್ಣ ನಾಯಕನು ತನ್ನ ಹೆಸರಿನಲ್ಲಿ ಈ ಊರಿನ ಬೆಟ್ಟದ ಮೇಲೆ ಗಿರಿದುರ್ಗವನ್ನು ನಿರ್ಮಿಸಿದ್ದುದರಿಂದ ಭರಮಣ್ಣ ನಾಯಕನ ದುರ್ಗ ಎಂದೇ ಪ್ರಸಿದ್ಧಿಯಾಗಿದೆ. ಜನರು ಆಡುಭಾಷೆಯಲ್ಲಿ ಬಿ.ದುರ್ಗವೆಂದೇ ಕರೆಯುತ್ತಾರೆ. ಚಿತ್ರದುರ್ಗ ಪಾಳೆಯಗಾರರ ಕಾಲಕ್ಕಿಂತಲೂ ಹಿಂದೆ ಈ ಗ್ರಾಮ ಇದ್ದು, ಆಗ ಇದಕ್ಕೆ ನವಿಲುಕಲ್ಲು ಎಂದು ಕರೆಯುತ್ತಿದ್ದುದು ರೂಢಿ. ನವಿಲುಕಲ್ಲು ಊರಿನ ದೊಡ್ಡ ಕೆರೆಯ ಹಿಂಭಾಗದಲ್ಲಿರುವ ಕಲ್ಲೇಶ್ವರ ದೇವಾಲಯದ ಪಕ್ಕದಲ್ಲಿತ್ತು. ಈಲ್ಲಿ ಕರಿಕಲ್ಲು ಗುಡ್ಡ ಇದ್ದು, ಅಧಿಕ ಸಂಖ್ಯೆಯ ನವಿಲುಗಳು ಬಂದು ಇಲ್ಲಿ ಸೇರುತ್ತಿದ್ದುದರಿಂದ ನವಿಲುಕಲ್ಲು ಎಂಬ ಹೆಸರು ಬಂದಿತೆಂಬುದು ಸ್ಥಳೀಯರ ಅಭಿಮತ. ಹಿಂದೆ ಇದ್ದ ನವಿಲುಕಲ್ಲು ಗ್ರಾಮ ಬೆಟ್ಟದ ಮುಂಭಾಗಕ್ಕೆ ಸ್ಥಳಾಂತರಗೊಂಡು ಬಿ.ದುರ್ಗವೆನಿಸಿಕೊಂಡಿದೆ. ಭೂನಕ್ಷೆಯಲ್ಲಿ ಬಿ.ದುರ್ಗವು ಅಕ್ಷಾಂಶ ೧೪°೧೧ ಉತ್ತರ, ಪೂರ್ವ ರೇಖಾಂಶ ೭೬°೦೮ ರಲ್ಲಿದ್ದು, ಸಮುದ್ರಮಟ್ಟದಿಂದ ೨,೨೯೨ ಅಡಿ ಎತ್ತರದಲ್ಲಿದೆ.

ಜಿಲ್ಲೆಯಲ್ಲಿ ಐತಿಹಾಸಿಕ ವ್ಯಕ್ತಿಗಳ ಹೆಸರಿನಲ್ಲಿರಬಹುದಾದ ದುರ್ಗಗಳಲ್ಲಿ ಇದೂ ಒಂದು.[೯೮] ಕ್ರಿ.ಶ.೧೬೮೯-೧೭೨೧ರವರೆಗೆ ಯಶಸ್ವಿ ಆಳ್ವಿಕೆ ನಡೆಸಿದ ಭರಮಣ್ಣ ನಾಯಕನು ತಮ್ಮ ಆಡಳಿತಾವಧಿಯಲ್ಲಿ ೫ ಬಲಿಷ್ಠ ಗಡಿ ಕೋಟೆಗಳನ್ನು ನಿರ್ಮಿಸಿದನು.[೯೯] ಅಂತಹ ಗಡಿಕೋಟೆಗಳಲ್ಲಿ ಇದೂ ಒಂದು. ಭರಮಣ್ಣ ನಾಯಕನು ಪಶ್ಚಿಮದ ಮುಖ್ಯ ಧಾಳಿಗಳನ್ನು ತಡೆಯಲು ಈ ಕೋಟೆಯನ್ನು ನಿರ್ಮಿಸಿದನೆನ್ನಬಹುದು. ದುರ್ಗದ ಹಳೆಯ ವೈರಿಗಳಾದ ಹರಪನಹಳ್ಳಿ, ಬಿದನೂರು, ಸಂತೆಬೆನ್ನೂರು ಮತ್ತಿತರ ಪಾಳೆಯಗಾರರನ್ನು ಹತ್ತಿಕ್ಕಲು ಇದೊಂದು ಆಯಕಟ್ಟಿನ ಸ್ಥಳವಾಗಿತ್ತು. ಈ ಗ್ರಾಮದ ಪೂರ್ವಕ್ಕೆ ಕಂದವಾಡಿ ಗುಡ್ಡದ ಸಾಲುಗಳು ಚಿತ್ರದುರ್ಗಕ್ಕೆ ಪ್ರಕೃತಿನಿರ್ಮಿತ ಕೋಟೆಯ ಸಾಲಾಗಿದ್ದವು. ಅದರಾಚೆ ಈ ಬೆಟ್ಟ ಬಳಸಿಕೊಂಡು ಇಲ್ಲಿ ಕೋಟೆಯನ್ನು ಕಟ್ಟಿ ಸೈನಿಕ ತುಕಡಿಯನ್ನು ಇಟ್ಟಿದ್ದರೆಂದು ಹೇಳಬಹುದು. ಅಲ್ಲದೆ, ಕಂದವಾಡಿಯಲ್ಲಿ ೪೦ ಅಡಿ ಭಾರಿ ಎತ್ತರದ ಕಾಲವು ಗೋಪುರವನ್ನು ನಿರ್ಮಿಸುವ ಮೂಲಕ ರಾಜಧಾನಿಯೊಂದಿಗೆ ನೇರ ಸಂಪರ್ಕವನ್ನು ಕಲ್ಪಿಸಿಕೊಳ್ಳಲಾಗಿತ್ತು.

ಬೆಟ್ಟವನ್ನು ಬಳಸಿಕೊಂಡು ಕಟ್ಟಿರುವ ಈ ಕೋಟೆಯು ತುಂಬಾ ಶಿಥಿಲಗೊಂಡಿದೆ. ಪೂರ್ವದಲ್ಲಿ ೩ ಸುತ್ತು, ಪಶ್ಚಿಮದಲ್ಲಿ ೨ ಸುತ್ತು ಕೋಟೆಯಿದೆ. ಹೊರ ಕೋಟೆಯಿದೆ. ಹೊರ ಕೋಟೆಯ ವಿಸ್ತೀರ್ಣ ೧,೮೨೦ ಮೀ. ಇದೆ. ಈ ಕೋಟೆಯಲ್ಲಿ ೭ ವೃತ್ತಾಕಾರದ ಬುರುಜುಗಳು, ೫ ಚೌಕಾಕಾರದ ಬುರುಜುಗಳೂ ಸೇರಿದಂತೆ ಒಂದು ದ್ವಾರವಿದೆ. ಗೋಡೆಗೆ ೨೦-೨೫ ಸೆಂ.ಮೀ. ದಪ್ಪದ ಕಲ್ಲುಗಳನ್ನು ಬಳಸಿದ್ದಾರೆ. ಕೆಲವು ಕಡೆ ಅನಿಯಮಿತಾಕಾರದ ಕಲ್ಲುಗಳನ್ನು ಸಹ ಬಳಸಿದ್ದಾರೆ. ಗೋಡೆಯು ೩ ಮೀ. ಅಗಲವಿದ್ದು,

[illegible]

೨ ಮೀ. ಎತ್ತರವಿದೆ. ಗೋಡೆಯ ಪಕ್ಕದಲ್ಲಿ ೨ ಮೀ. ಅಗಲದ ವೇದಿಕೆಯಿದೆ. ಸ್ಥಳೀಯವಾಗಿ ಸಿಗುವ ಸಂಪನ್ಮೂಲವನ್ನು ಬಳಸಿ ಈ ದುರ್ಗವನ್ನು ಕಟ್ಟಿದ್ದಾರೆ.

ಕೋಟೆಗೆ ಈಗಿನ ಮುಖ್ಯ ರಸ್ತೆಯಿಂದ ಪಶ್ಚಿಮದ ಕಡೆ ಪ್ರವೇಶವಿದೆ. ದಾರಿಯಲ್ಲಿ ಹಾಸಿಗೆಯಾಕಾರದ ಬಂಡೆಯಿದ್ದು, ಸ್ಥಳೀಯರು ಇದನ್ನು ಏಕನಾಥೇಶ್ವರ ಹಾಸಿಗೆ ಎಂದು ಕರೆಯುತ್ತಾರೆ. ಉತ್ಸವ ಮೂರ್ತಿ ಏಕನಾಥೇಶ್ವರಿ, ಉತ್ಸವಗಳ ಸಂದರ್ಭದಲ್ಲಿ ಸ್ವಲ್ಪಕಾಲ ಇಲ್ಲಿ ತಂಗುವುದರಿಂದ ಈ ಹೆಸರು ಬಂದಿದೆ ಎಂದು ಹೇಳಲಾಗಿದೆ. ನಂತರ ಎರಡನೆ ಸುತ್ತಿನ ಕೋಟೆಯ ದ್ವಾರಬಾಗಿಲಿದೆ. ಸ್ವಾಭಾವಿಕವಾದ ಈ ದ್ವಾರಬಾಗಿಲಿನ ಪಕ್ಕದಲ್ಲಿ ಪಹರೆ ಗೃಹಗಳ ಗುರುತುಗಳಿವೆ. ಇಲ್ಲಿಂದ ಮೇಲುದುರ್ಗಕ್ಕೆ ಹಾಗೂ ಏಕನಾಥೇಶ್ವರಿ ದೇವಾಲಯಕ್ಕೆ ಹೋಗಲು ದಾರಿಗಳಿವೆ. ಮೇಲುದುರ್ಗದ ದಾರಿಯಲ್ಲಿ ದಿಡ್ಡಿ ಬಾಗಿಲಿದ್ದು, ನಾಲ್ಕು ಕಲ್ಲಿನ ಕಂಬಗಳನ್ನು ಚೌಕಾಕಾರದಲ್ಲಿ ನಿಲ್ಲಿಸಿ ಮೇಲೆ ಚಪ್ಪಡಿ ಬಂಡೆಗಳನ್ನು ಮುಚ್ಚಿರುತ್ತಾರೆ. ಈ ಬಾಗಿಲಿನ ಮೇಲೆ ಕೋಟೆಗೋಡೆ ಇದೆ. ಈ ಬಾಗಿಲಿಗೆ ಒಳಗೆ ಮತ್ತು ಹೊರಗೆ ಎರಡೂ ಕಡೆ ಬಾಗಿಲು ಹಾಕುವ ವ್ಯವಸ್ಥೆ ಇದೆ. ಸಾಮಾನ್ಯವಾಗಿ ಮೇಲುದುರ್ಗಕ್ಕೆ ಹೋಗುವವರಿಗೆ ಇದೊಂದು ಚೆಕ್‌ಪೋಸ್ಟ್ ರೀತಿ ಆಗಿದ್ದಿರಬಹುದು. ಮೇಲುದುರ್ಗಕ್ಕೆ ಹೋಗುವವರನ್ನು ಇಲ್ಲಿ ವಿಚಾರಣೆಗೆ ಒಳಪಡಿಸಿ ನಂತರ ಬಾಗಿಲಿನಿಂದ ೧೦೦ ಮೀ. ದೂರದಲ್ಲಿರುವ ಕಾವಲು ಗೋಪುರದಿಂದ ಸೂಚನೆ ಬಂದನಂತರವೇ ಒಳ ಬಾಗಿಲನ್ನು ತೆಗೆದು ಮೇಲೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿಕೊಂಡಿರಬಹುದು.

ದಿಡ್ಡಿಬಾಗಿಲು ಪಶ್ಚಿಮಕ್ಕೆ ೪ ಅಡಿ ಎತ್ತರದ ವೇದಿಕೆಯ ಮೇಲೆ ಪಾಳೆಯಗಾರರ ಆರಾಧ್ಯದೇವತೆ ಏಕನಾಥೇಶ್ವರಿಯ ದೇವಾಲಯವಿದೆ. ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಉತ್ತರ ದಿಕ್ಕಿಗೆ ದೇವರಹೊಂಡ ಮತ್ತು ಕಪ್ಪೆ ಹೊಂಡಗಳಿವೆ. ಹೊಂಡದ ಪೂರ್ವಕ್ಕೆ ಒಳ ಸುತ್ತಿನ ಕೋಟೆಯ ಗೋಡೆ ಎತ್ತರವಾಗಿದ್ದು, ಉತ್ತರ ದಿಕ್ಕಿನ ಎರಡು ಬುರುಜುಗಳನ್ನು ಬಳಸಿಕೊಂಡು ಕಟ್ಟಲಾಗಿದೆ. ಈ ಬುರುಜುಗಳು ವ್ಯವಸ್ಥಿತವಾಗಿ ನಿರ್ಮಾಣಗೊಂಡಿವೆ. ಪಶ್ಚಿಮದ ಕೋಟೆಯ ಹಿಂಭಾಗ ಗೋಕಟ್ಟೆ, ಸಣ್ಣಕೆರೆ ಏರಿಗಳಿದ್ದು ಜನವಸತಿಯ ಕುರುಹುಗಳಿವೆ. ಈ ಎಲ್ಲ ಪ್ರದೇಶಗಳನ್ನು ಒಳಗೊಂಡಂತೆ ಇದ್ದ ಕೋಟೆಗೋಡೆಯಲ್ಲಿ ಈಗ ತಳಪಾಯದ ಅವಶೇಷಗಳು ಮಾತ್ರ ಉಳಿದಿವೆ. ಸಾಮಾನ್ಯವಾಗಿ ಬೆಟ್ಟದ ಮೇಲೆ ವಿಸ್ತಾರವಾದ ಜಾಗವಿಲ್ಲದೇ ಇರುವುದರಿಂದ ಕೋಟೆಯನ್ನು ವಿಸ್ತರಿಸಿ ಇಲ್ಲಿ ದನಕರುಗಳಿಗೆ, ಆನೆಕುದುರೆಗಳಿಗೆ, ಸೈನಿಕರಿಗೆ ಸ್ಥಳಾವಕಾಶ ಕಲ್ಪಿಸಿರುವ ಸಾಧ್ಯತೆಗಳಿವೆ.

ಪಶ್ಚಿಮದ ಕೋಟೆ ಮುಂದುವರೆದು ನೈರುತ್ಯ ಭಾಗದ ಕರೆಮಟ್ಟಿಯನ್ನು ಬಳಸಿಕೊಂಡು ಕೋಟೆಯ ಪೂರ್ವಭಾಗವನ್ನು ಸೇರಿಕೊಂಡಿದೆ. ದಕ್ಷಿಣ ಭಾಗದಲ್ಲಿ ಬಲಿಷ್ಠವಾದ ಕೋಟೆಗೋಡೆ ಇದ್ದು ಈ

[illegible]

ಪ್ರದೇಶದಲ್ಲಿ ಗುಂಡಿನ ವೀರಭದ್ರ ದೇವಾಲಯ, ಮೂಗುಬಸಪ್ಪ, ಪೇಟೆಬಸವಣ್ಣ, ಶೀವಾಲಯ ಮುಂತಾದ ದೇವಾಲಯಗಳಿವೆ. ಹಿಂದೆ ಈ ಪ್ರದೇಶದಲ್ಲಿ ಸಂತೆ ನಡೆಯುತ್ತಿದ್ದು, ಒಂದು ಪೇಟೆ ಬಜಾರು ಇತ್ತೆಂದು ಸ್ಥಳೀಯರು ಹೇಳುತ್ತಾರೆ. ದೊಡ್ಡ ಗುಂಡಿನ ಕೆಳಭಾಗದಲ್ಲಿ ವೀರಭದ್ರ ದೇವಾಲಯವಿರುವುದರಿಂದ ಗುಂಡಿನ ವೀರಭದ್ರ ಎಂದು ಹೆಸರಾಗಿದೆ. ದೇವಾಲಯದ ಒಳಗಡೆ ಕಪ್ಪುಶಿಲೆಯ ವೀರಭದ್ರ ಶಿಲ್ಪವಿದೆ. ಈ ಶಿಲ್ಪದ ಎಡಭಾಗದಲ್ಲಿ ಗುಂಡ ಬ್ರಹ್ಮಯ್ಯರ ಅಥವಾ ಶೂಲಬ್ರಹ್ಮ ಶಿಲ್ಪಗಳಿವೆ. ಜಿಲ್ಲೆಯಲ್ಲಿ ದೊರಕಿರುವ ಶೂಲಬ್ರಹ್ಮ ಶಿಲ್ಪಗಳ ಸಾಲಿಗೆ ಈ ಶಿಲ್ಪವು ಸೇರುತ್ತದೆ.[೧೦೦]

ಇಂತಹ ಶಿಲ್ಪಗಳು ಜಿಲ್ಲೆಯಲ್ಲಿ ೬ ದೊರಕಿದ್ದು, ಇದು ೭ನೆಯ ಶಿಲ್ಪವಾಗಿದೆ.[೧೦೧] ದೇವಾಲಯದ ವಾಯುವ್ಯ ದಿಕ್ಕಿಗೆ ಮೇಲುದುರ್ಗದ ಬುರುಜುಗಳಿವೆ. ಸುತ್ತಲೂ ಕೋಟೆಯ ಅವಶೇಷವುಳ್ಳ ಮಧ್ಯ ಭಾಗದಲ್ಲಿ ಎತ್ತರವಾದ ಬುರುಜನ್ನು ನಿರ್ಮಿಸಲಾಗಿದೆ. ಇಲ್ಲಿಂದ ೪ ದಿಕ್ಕಿಗೂ ವಿಶಾಲವಾದ ಸುಮಾರು ೧೦ ಕಿ.ಮೀ. ಪ್ರದೇಶವನ್ನು ವೀಕ್ಷಿಸಬಹುದಾಗಿದೆ. ಪೂರ್ವಕ್ಕೆ ಸಿಹಿಕಲ್ಲು ಗುಡ್ಡ, ಉತ್ತರಾಣಿ ಗುಡ್ಡ, ಗಾದ್ರಿ ಗುಡ್ಡ, ಪಶ್ಚಿಮಕ್ಕೆ ವಿಶಾಲವಾದ ರಣಭೂಮಿ, ಉತ್ತರಕ್ಕೆ ಗುಲಗಂಜಿ ಬೆಟ್ಟ, ಸಾಸಲುಬೆಟ್ಟ, ದಕ್ಷಿಣಕ್ಕೆ ಕಡೂರು ಬೆಟ್ಟದ ಶ್ರೇಣಿಗಳು ಕಂಡುಬರುತ್ತವೆ.

ಕೋಟೆಯ ಆಗ್ನೇಯ ದಿಕ್ಕಿಗೆ ಪಾಳು ಬಿದ್ದಿರುವ ಕಲ್ಲುಮಂಟಪವಿದೆ. ಇದರಲ್ಲಿ ೧೬ ಕಂಬಗಳಿದ್ದು ಸಂಪೂರ್ಣವಾಗಿ ಬಂಡೆಗಳಿಂದ ಆವೃತಗೊಂಡಿದೆ. ಒಳಭಾಗದಲ್ಲಿ ೨ ಅಂಕಣಗಳಿದ್ದು, ಮಧ್ಯ ಭಾಗ ದುಂಡಾದಗಿರುವ ಕಲ್ಲಿನಲ್ಲಿ ಭೂವನೇಶ್ವರಿ ಇದೆ. ಮಂಟಪದ ಸುತ್ತಲೂ ಮಧ್ಯಮ ಗಾತ್ರದ ಕಲ್ಲುಗಳಿಂದ ಗೋಡೆಗಳನ್ನು ಕಟ್ಟಿ, ಮಂಟಪವನ್ನು ಮಣ್ಣಿನ ದಿಬ್ಬದ ರೀತಿಯಲ್ಲಿ ಮುಚ್ಚಿದ್ದಾರೆ. ಇದೇ ರೀತಿ ಉತ್ತರಕ್ಕೆ ರಸ್ತೆಯ ಪಕ್ಕದಲ್ಲಿ ಸತ್ಯಮ್ಮನ ಮಠವಿದೆ. ಹಳೆ ಊರಿನಲ್ಲಿ ಕಲ್ಲೇಶ್ವರ ದೇವಾಲಯ, ಭರಮಣ್ಣನಾಯಕ ಕಟ್ಟಿಸಿದ ದೊಡ್ಡಕೆರೆ, ಚಿಕ್ಕಕೆರೆಗಳಿವೆ. ಇಷ್ಟೇ ಅಲ್ಲದೆ ಕರಿಯಮ್ಮ ದೇವಾಲಯ, ವೀರಾಂಜನೇಯ ಈಶ್ವರ, ಮಸೀದಿ, ವಿರಕ್ತಮಠ, ವಿನಾಯಕ, ಹೊಸೂರಮ್ಮ ದೇವಾಲಯಗಳಿವೆ.

೪.೧೦ ಜಾನಕಲ್ಲು ಕೋಟೆ

ಚಿತ್ರದುರ್ಗದ ಪಶ್ಚಿಮ ಭಾಗಕ್ಕೆ ಸಪ್ತಶಿಖರಗಳ ಬೆಟ್ಟಸಾಲಿಗೆ ಸೇರುವ ಗಾದ್ರಿಮಲೆ ಗಿರಿಸಾಲು, ಅದರ ಬೆನ್ನಬದಿಗೆ ಗಾದ್ರಿಮಲೆ ಸಾಲಿನ ಮತ್ತೊಂದು ಸೀಳಾದ ಹೊಸದುರ್ಗದ ಬೆಟ್ಟಗಳ ಪಂಕ್ತಿ, ಆ ಎರಡು ಬೆಟ್ಟಗಳ ಸಾಲಿನ ನಡುವೆ ಸದಾ ಹಸಿರಿನಿಂದ ಕೂಡಿರುವ ಪಚ್ಚೆ ಕಣಿವೆ ಸಾಲಿನಲ್ಲಿರುವ ಗುಡ್ಡವೇ

[illegible]

‘ಜಾನಕಲ್ಲು’. ಚಿತ್ರದುರ್ಗದಿಂದ ಹಾಲುರಾಮೇಶ್ವರದ ಮೂಲಕ ಹೊಸದುರ್ಗಕ್ಕೆ ಹೋಗುವ ಮಾರ್ಗದಲ್ಲಿದ್ದು ೪೦ ಕಿ.ಮೀ. ಅಂತರದಲ್ಲಿದೆ. ಜಾನಕಲ್ಲು ಸಮುದ್ರ ಮಟ್ಟದಿಂದ ೨೪೫೪ ಅಡಿ ಎತ್ತರವಿದ್ದು, ಉತ್ತರ ಅಕ್ಷಾಂಶ ೧೩°೫೪ ಮತ್ತು ೭೭°೧೯ ಪೂರ್ವ ರೇಖಾಂಶದಲ್ಲಿದೆ.

ಚಿತ್ರದುರ್ಗ ಮತ್ತು ಹೊಸದುರ್ಗ ಕೋಟೆಗಳ ಮಾರ್ಗ ಮಧ್ಯದಲ್ಲಿರುವ ಜಾನಕಲ್ಲು ಪ್ರಾಗೈತಿಹಾಸಿಕ ಕಾಲದಿಂದ ಇಲ್ಲಿಯವರೆಗೂ ಸತತವಾಗಿ ಮಾನವನ ವಾಸಸ್ಥಾನವಾಗಿ ಅನೇಕ ವೈಶಿಷ್ಟ್ಯಗಳನ್ನು ಹೊಂದಿದೆ. ಮೊದಲನೆಯದಾಗಿ ಇದೊಂದು ಜೈನಧರ್ಮದ ನೆಲೆಯಾಗಿದ್ದು ಒಂದು ಸಾವಿರ ವರ್ಷಗಳಿಗೂ ಹಿಂದಿನ ಜೈನಬಸದಿ ಇತ್ತೆಂದು ಹೇಳಲಾಗಿದೆ(ಈಗ ಜೀರ್ಣೋದ್ಧಾರಗೊಂಡಿದೆ). ಆಗಿನ ಕಾಲದಲ್ಲಿ ಒಂದು ಸಾವಿರ ಜೈನರ ವಸತಿಗೃಹಗಳು ಇದ್ದವೆನ್ನಲಾಗಿದೆ.[೧೦೨] ಎರಡನೆಯದಾಗಿ ಚಿತ್ರದುರ್ಗದ ನಾಯಕ ಅರಸರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದ ಗಟ್ಟಿಹೊಸಳ್ಳಿಗೆ ಕಬ್ಬಿಣದ ಕಿಟ್ಟವನ್ನು ಕಿಟ್ಟದಾಳ್‌ನಿಂದ ಜಾನಕಲ್ ಮಾರ್ಗವಾಗಿಯೇ ಸಾಗಿಸುತ್ತಿದ್ದರೆನ್ನಲಾಗಿದೆ. ಹಾಗಾಗಿ ಇದೊಂದು ಆಯಕಟ್ಟಿನ ಸ್ಥಳವಾಗಿತ್ತೆನ್ನಬಹುದು. ಮೂರನೆಯದಾಗಿ ಚಿತ್ರದುರ್ಗ ಪ್ರಖ್ಯಾತ ಪಾಳೆಯಗಾರ ಮದಕರಿನಾಯಕನ ಹುಟ್ಟೂರು ಇದೇ ಆಗಿರುವುದರಿಂದ ‘ಜಾನಕಲ್ಲು’ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಈ ಊರಿಗೆ ಜಾನಕಲ್ಲು ಎಂಬ ಹೆಸರು ಹೇಗೆ ಬಂತೆಂಬುದಕ್ಕೆ ವಿವಿಧ ಅಬಿಪ್ರಾಯಗಳಿವೆ. ಈ ಗುಡ್ಡದ ಪೂರ್ವಭಾಗದಲ್ಲಿ ಜೇನುಗೊಂದಿ ಎಂಬ ಪ್ರದೇಶವಿದೆ. ಜೇನು ಇರುವ ಸ್ಥಳಕ್ಕೆ ‘ಜೇನುಕಲ್ಲು’ ಎಂದು ತರುವಾಯ ‘ಜಾನಕಲ್ಲು’ ಆಯಿತೆಂದು ಅಭಿಪ್ರಾಯವಿದೆ.[೧೦೩] ಜೈನರ ಪ್ರಕಾರ ಇಲ್ಲಿನ ಗುಡ್ಡದ ಒಂದು ಭಾಗವಾದ ದೇವರ ಮರಡಿಯಲ್ಲಿ ಧ್ಯಾನಕ್ಕೆ ಕೂರುತ್ತಿದ್ದರಿಂದ ‘ಜಾನಕಲ್ಲು’ ಎಂದು ಇವರು ವಾಸಿಸುವ ಸ್ಥಳಕ್ಕೆ ಜೈನಕಲ್ಲು ಎಂದು ಹೆಸರುಬಂದಿದೆ ಎಂಬ ಅಭಿಪ್ರಾಯವಿದೆ. ತರುವಾಯ ಈ ಜೈನಕಲ್ಲು ಜಾನಕಲ್ಲು ಆಗಿರಬಹುದು. ಚಿತ್ರದುರ್ಗ ಪಾಳೆಗಾರರ ಮದಕರಿನಾಯಕನ ಬಳಿಯಲ್ಲಿದ್ದ ಫ್ರೆಂಚ್ ತಂತ್ರಜ್ಞ ಜಾನ್ ಎಂಬ ನಿಪುಣನ ನೆನಪಿಗಾಗಿ ‘ಜಾನ್‌ಕಲ್ಲು’ ಎಂದು ಹೆಸರಾಯಿತೆಂದು ಹೇಳಲಾಗಿದೆ. ಈ ಎಲ್ಲಾ ಅಭಿಪ್ರಾಯಗಳಿಂದ ಹೇಳುವುದಾದರೆ ಜೈನಕಲ್ಲು ಅಥವಾ ಜೇನುಕಲ್ಲು, ಜಾನಕಲ್ಲು ಆಗಿರುವ ಸಾಧ್ಯತೆಯಿದೆ.

ಜಾನಕಲ್ಲಿನ ಬೆಟ್ಟಗುಡ್ಡಗಳು ಹಳ್ಳಕೊಳ್ಳಗಳು, ಕೆರೆಕುಂಟೆಗಳು ಸಹಜವಾಗಿಯೇ ಈ ಸ್ಥಳವನ್ನು ಪ್ರಾಚೀನ ಮಾನವನು ತನ್ನ ವಾಸಸ್ಥಾನ ಮಾಡಿಕೊಂಡಿದ್ದನೆನ್ನಬಹುದು. ಜಾನಕಲ್ಲು ಮತ್ತು ಪಕ್ಕದ ತಾಳ್ಯ ಗ್ರಾಮಗಳು ಪ್ರಾಚೀನ ಮಾನವನ ನೆಲೆಗಳಾಗಿವೆ.[೧೦೪] ಈ ನೆಲೆಯ ಮಹತ್ವದ ಬಗ್ಗೆ ಡಾ.ಎಂ.ಶೇಷಾದ್ರಿಯವರು

[illegible]

ಬೆಳಕು ಚೆಲ್ಲಿದ್ದಾರೆ.[೧೦೫] ಶಂಕರಲಿಂಗದೇವಸ್ಥಾನದ ಹತ್ತಿರ ೨ ವೀರಗಲ್ಲುಗಳಿಂದ ಈ ಪ್ರದೇಶವು ಹೊಯ್ಸಳರ ಆಳ್ವಿಕೆ ಒಳಪಟ್ಟಿದ್ದಿತೆಂದು ತಿಳಿದುಬರುತ್ತದೆ. ಹೊಯ್ಸಳ ಸಾಮ್ರಾಟ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಸೇವುಣ ದೊರೆ ಶಂಕರದೇವನ ಸೈನ್ಯವು ಹೊಯ್ಸಳ ನಾಡನ್ನು ಮುತ್ತಿತ್ತು. ಆಗ ಬೆಮ್ಮತ್ತೂರಿನಲ್ಲಿ ಆಳುತ್ತಿದ್ದ ಬಲ್ಲಾಳ ಭಾವ ಸೋಮದಂಡನಾಯಕನು ಹೋಳಲ್ಕೆರೆಗೆ ನಡೆದುಬಂದು ಕಂಪಿಲನೊಂದಿಗೆ ಹೋರಾಡಿ ಮಡಿದನೆಂದು ಒಂದು ವೀರಗಲ್ಲು ತಿಳಿಸುತ್ತದೆ.[೧೦೬] ಮತ್ತೊಂದು ವೀರಗಲ್ಲು ನಾಗನಾಯಕನೆಂಬುವನು ದೊಡ್ಡಾಲಘಟ್ಟದ ಮಲ್ಲಯ್ಯನೊಂದಿಗೆ ಹೋರಾಡುತ್ತ ಮಡಿದನೆಂದು ವಿವರಿಸುತ್ತದೆ.[೧೦೭] ನಂತರ ಜಾನಕಲ್ಲು ಅತ್ಯಂತ ಪ್ರಸಿದ್ಧಿ ಪಡೆದದ್ದು ಚಿತ್ರದುರ್ಗದ ಪಾಳೆಗಾರರ ಕಾಲದಲ್ಲಿ. ಜಾನಕಲ್ಲಿನ ಇತಿಹಾಸ ಚಿತ್ರದುರ್ಗದ ಇತಿಹಾಸದೊಡನೆ ಹಾಸುಹೊಕ್ಕಾಗಿ ಬೆರೆತುಹೋಗಿದೆ. ಚಿತ್ರದುರ್ಗ ಪ್ರಸಿದ್ಧ ದೊರೆ ಕಡೇ ಮದಕರಿನಾಯಕನು ತನ್ನ ಬಾಲ್ಯಜೀವನವನ್ನು ಇಲ್ಲಿಂದಲೇ ಪ್ರಾರಂಭಿಸಿದನು. ಈತನ ಚಿತ್ರದುರ್ಗದ ದೊರೆಯಾದ ಮೇಲೆ ಇಲ್ಲಿನ ಬೆಟ್ಟದ ಮೇಲೆ ಒಂದು ಕೋಟೆಯನ್ನು ಹಾಗೂ ಒಂದು ಅರಮನೆಯನ್ನು ಮದಕರಿನಾಯಕನೇ ಕಟ್ಟಿಸಿದನೆಂದು ಹೇಳಲಾಗುತ್ತಿದೆ. ಒಟ್ಟಾರೆ ಚಿತ್ರದುರ್ಗದವರಿಗೆ ಇದೊಂದು ಆಯಕಟ್ಟಿನ ಸ್ಥಳವಾಗಿದ್ದರಿಂದ ಚಿತ್ರದುರ್ಗ ನಾಯಕರು ಇದನ್ನು ಗಡಿದುರ್ಗವನ್ನಾಗಿ ಮಾಡಿಕೊಂಡಿದ್ದರು. ಅಲ್ಲದೆ ದುರ್ಗದ ರಕ್ತಸಂಬಂಧಿಗಳನ್ನು ಈ ಕೋಟೆಗೆ ದಳಪತಿಗಳನ್ನಾಗಿ ನೇಮಕ ಮಾಡಿಕೊಂಡರೆಂದು ತಿಳಿದುಬರುತ್ತದೆ.[೧೦೮]

'ಊರುಗುಡ್ಡ' ಎಂದು ಕರೆಯುವ ಬೆಟ್ಟವನ್ನು ಬಳಸಿಕೊಂಡು ಕಟ್ಟಿರುವ ಕೋಟೆಯು ಗಿರಿದುರ್ಗವಾಗಿದೆ. ಬೆಟ್ಟದ ಸುತ್ತಲೂ ಪೂರ್ವಕ್ಕೆ ಕಾಮನಕೆರೆ, ಪಶ್ಚಿಮದಲ್ಲಿ ಹಿರೇಕೆರೆ, ಉತ್ತರದಲ್ಲಿ ಬರೆಗೆರೆ ಹಾಗೂ ದಕ್ಷಿಣದಲ್ಲಿ ದೇವಪುರದ ಕೆರೆಗಳು ಸುತ್ತುವರೆದಿವೆ. ಇದರಿಂದ ಜಾನಕಲ್ಲು ಒಂದು ರೀತಿ ಜಲದುರ್ಗವಾಗಿದೆ. ಬೆಟ್ಟದ ಮೇಲಿರುವ ಕೋಟೆಯನ್ನು ಅನಿಮಿಯಾಕಾರದಲ್ಲಿ ಕಟ್ಟಲಾಗಿದೆ. ಬೆಟ್ಟದ ಪಶ್ಚಿಮಕ್ಕೆ ಒಟ್ಟು ಮೂರು ಸುತ್ತಿನ ಕೋಟೆಗಳಿದ್ದು ನೆಲಮಟ್ಟದಲ್ಲಿ ಗ್ರಾಮರಕ್ಷಣೆಗಿದ್ದ ಕೋಟೆಗೋಡೆಯು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಬೆಟ್ಟದ ಮೇಲಿರುವ ಎರಡು ಸುತ್ತುಗಳು ಮಾತ್ರ ಈಗ ಉಳಿದುಕೊಂಡು ಬಂದಿವೆ. ಇದೇ ರೀತಿ ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಸುತ್ತಿನ ಕೋಟೆಸಾಲುಗಳಿವೆ. ಪೂರ್ವಭಾಗದಲ್ಲಿ ಕಡಿದಾದ ಹಾಗೂ ಎತ್ತರವಾದ ಬಂಡೆಯಿದ್ದು ಯಾವುದೇ ಕೋಟೆಗೋಡೆಯಿಲ್ಲ. ಇಲ್ಲಿ ಪ್ರಾಕೃತಿಕ ಬಂಡೆಯೇ ಗೋಡೆಯ ಪಾತ್ರವನ್ನು ನಿರ್ವಹಿಸಿದೆ. ಕೋಟೆಯಲ್ಲಿ ೧೬ ವೃತ್ತಾಕಾರದ ಬುರುಜುಗಳು, ೮ ಚೌಕಾಕಾರದ ಬುರುಜುಗಳು ಸೇರಿದಂತೆ ೬ ದ್ವಾರಬಾಗಿಲುಗಳಿವೆ. ೩ ದ್ವಾರ

[illegible]

ಬಾಗಿಲುಗಳು ಈಗಲೂ ಉಳಿದುಕೊಂಡುಬಂದಿವೆ. ಕೋಟೆಗೋಡೆ ಸ್ಥಳೀಯವಾಗಿ ಸಿಗುವ ಮಧ್ಯಮ ಗಾತ್ರದ ಕಲ್ಲುಗಳನ್ನು ಬಳಸಲಾಗಿದೆ. ಗೋಡೆಯ ಮೇಲ್ಭಾಗದಲ್ಲಿ ಹೆಚ್ಚಾಗಿ ಮಣ್ಣಿನ ಕೋಟೆಯಿರುವುದನ್ನು ಕಾಣಬಹುದು.

ಹೊರಗಿನಿಂದ ಜಾನಕಲ್ಲನ್ನು ಪ್ರವೇಶ ಮಾಡಿದಾಗ ಸಿಗುವುದೇ ಹೊರಕೋಟೆ ಅಥವಾ ಮೊದಲಸುತ್ತಿನ ಕೋಟೆ. ಈ ಕೋಟೆಗೋಡೆಯ ಬೆಟ್ಟಕ್ಕೆ ಪಶ್ಚಿಮದಲ್ಲಿ U ಆಕಾರದಲ್ಲಿದ್ದು, ಹೆಚ್ಚು ಕಡಿಮೆ ಈಗಿನ ಇಡೀ ಊರನ್ನು ಆವರಿಸಿಕೊಂಡಿದೆ. ಕೋಟೆಗೋಡೆಯು ದಕ್ಷಿಣದಲ್ಲಿ ಚೌಡಿಕೊತ್ತಲಿನಿಂದ ತೇರು ಮನೆಯವರೆಗೆ ೬೫೦ ಮೀ.ವರೆಗೆ ವ್ಯಾಪಿಸಿದೆ. ಈ ಕೋಟೆಗೋಡೆಯು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಶಿಥಿಲಗೊಂಡ ಕೋಟೆಯನ್ನು ಪೂರ್ವಕ್ಕೆ ಬೆಟ್ಟದಲ್ಲಿರುವ ೨ನೆಯ ಸುತ್ತಿನ ಕೋಟೆಗೆ ಸಂಪರ್ಕಿಸಲಾಗಿದೆ. ಈಗ ತೇರಿನ ಮನೆ ಎಂದು ಕರೆಯುತ್ತಿರುವ ಜಾಗದಲ್ಲಿ ಉತ್ತರಕ್ಕೆ ದ್ವಾರಬಾಗಿಲು ಮತ್ತು ಅನತಿ ದೂರದಲ್ಲಿ ಪಶ್ಚಿಮಕ್ಕೆ ಒಂದು ದಿಡ್ಡಿ ಬಾಗಿಲು ಇದ್ದಿತೆಂದು ಸ್ಥಳೀಯರು ಹೇಳುತ್ತಾರೆ. ಗೋಡೆಯು ಈಗ ಪೂರ್ಣವಾಗಿ ನಾಶವಾಗಿದ್ದು, ಕೇವಲ ಅಳಿದುಳಿದಿರುವ ಅವಶೇಷಗಳಿಂದ ಸಹಾಯ ದಿಂದ ಗುರುತಿಸಬಹುದಾಗಿದೆ. ಊರು ವಿಸ್ತಾರವಾಗಿರುವುದೇ ಕೋಟೆಗೋಡೆಯು ಹಾಳಾಗಿರುವುದಕ್ಕೆ ಮುಖ್ಯ ಕಾರಣ.

ಈ ಹೊರಸುತ್ತಿನ ಕೋಟೆಯ ದಕ್ಷಿಣಕ್ಕೆ ಊರುಬಾಗಿಲು ಎಂದು ಕರೆಯುವ ದ್ವಾರಬಾಗಿಲು ಇದೆ. ದಕ್ಷಿಣದಿಂದ ಪ್ರವೇಶಮಾಡಿ ಪಶ್ಚಿಮಕ್ಕೆ ತಿರುಗಿ ಕೋಟೆಯೊಳಗೆ ಪ್ರವೇಶ ಮಾಡುವಂತೆ L ಆಕಾರದಲ್ಲಿ ದ್ವಾರವನ್ನು ರಚಿಸಲಾಗಿದೆ. ಬಾಗಿಲಿನ ಎರಡೂ ಬದಿಯಲ್ಲಿ ಎತ್ತರವಾದ ತೆರೆದ ಕೈಪಿಡಿ ಗೋಡೆಗಳಿವೆ. ಇದರ ಕೆಳಭಾಗದ ಗೋಡೆಯು ಮೇಲೆ ಹೋದಂತೆ ಕಿರುದಾಗುತ್ತದೆ. ಗೋಡೆಗೆ ೩x೨ ಅಡಿಕಲ್ಲುಗಳನ್ನು ಬಳಸಿ ೧೦ ಅಡಿಯವರೆಗೆ ಕಟ್ಟಿದ್ದಾರೆ. ಈ ಎತ್ತರದ ಕಲ್ಲಿನ ಗೋಡೆಯ ಮೇಲೆ ೧೦ ಅಡಿ ಎತ್ತರದವರೆಗೆ ಗಚ್ಚುಮಣ್ಣಿನಿಂದ ಕೂಡಿದ ಮಣ್ಣಿನ ಕೋಟೆಯನ್ನು ನಿರ್ಮಿಸಿದ್ದಾರೆ. ಈ ಮಣ್ಣಿನ ಕೋಟೆಯಲ್ಲಿ ಅಲ್ಲಲ್ಲಿ ಬಂದೂಕು ರಂಧ್ರಗಳನ್ನು ಬಿಟ್ಟಿದ್ದಾರೆ. ಬಂದೂಕುರಂಧ್ರಗಳಿಗೆ ಅಡ್ಡಕಲ್ಲುಗಳನ್ನಿಟ್ಟು, ಮಣ್ಣು ಬೀಳದಂತೆ ರಕ್ಷಿಸಿದ್ದಾರೆ. ಇದರ ಪಕ್ಕದಲ್ಲಿಯೇ ಚಿಕ್ಕ ರಂಧ್ರಗಳನ್ನು ಬಿಟ್ಟು ವೀಕ್ಷಣೆಗಾಗಿ ಅವಕಾಶ ಕಲ್ಪಿಸಿ ಕೊಳ್ಳಲಾಗಿದೆ. ಈ ಗೋಡೆಯ ಹಿಂದೆ ಶತ್ರುಗಳ ಚಲನವಲನಗಳ ವೀಕ್ಷಿಸಲು ಅಟ್ಟಾಲಕಗಳನ್ನು ರಚಿಸಿರುವರು. ತಿರುವಿನ ಕೊನೆಯಲ್ಲಿ ಮಹಾದ್ವಾರದ ಶಿಲಾ ಚೌಕಟ್ಟು ರೂಪಿಸಲಾಗಿದೆ. ಪಕ್ಕದಲ್ಲಿ ದಿಡ್ಡಿ

[illegible]

ಬಾಗಿಲು ಇದೆ. ಚೌಕಟ್ಟಿನ ಬಾಗಿಲುವಾಡಗಳು ನಯವಾದ ಕೆತ್ತನೆಯಿಂದ ಕೂಡಿವೆ. ದ್ವಾರಬಾಗಿಲು ೨.೫೦ ಮೀಟರ್ ಎತ್ತರವಿದ್ದು, ೩ ಮೀಟರ್ ಅಗಲವಿದೆ. ಪಕ್ಕದ ದಿಡ್ಡಿ ಬಾಗಿಲು ೧.೫ ಮೀಟರ್ ಎತ್ತರವಿದ್ದು, ೨ ಮೀಟರ್ ಅಗಲವಿದೆ. ಈ ಊರುಬಾಗಿಲಿಗೆ ಇರುವ ತಿರುಗಣೆಗಳನ್ನು ನೋಡಿದರೆ ಬಾರಿ ದಪ್ಪವಾದ ಬಾಗಿಲುಗಳು ಇದ್ದವೆಂದು ತೋರುತ್ತದೆ.

ಈ ದ್ವಾರದಿಂದ ಮುಂದುವರೆದರೆ ಸುಮಾರು ೧೦೦ ಮೀಟರ್ ಅಂತರದಲ್ಲಿ ಎತ್ತರವಾದ ಬಂಡೆಯಿದೆ. ಇಲ್ಲಿ ಚೌಕಾಕಾರದ ಕಾವಲು ಗೋಪುರವಿದೆ. ಈ ಕಾವಲು ಗೋಪುರವನ್ನು ಸ್ಥಳೀಯರು ಚೌಡಿಕೊತ್ತಲು ಎಂದು ಕರೆಯುತ್ತಾರೆ. ಈ ಚೌಡಿಕೊತ್ತಲಿಗೆ ಕೋಟೆಗೋಡೆಯ ಒಲಭಾಗದಲ್ಲಿ ಹತ್ತಲು ಮೆಟ್ಟಿಲುಗಳಿವೆ. ಈ ಕೊತ್ತಲು ೭ ಮೀಟರ್ ಉತ್ತರ-ದಕ್ಷಿಣವಾಗಿ, ಪೂರ್ವ-ಪಶ್ಚಿಮವಾಗಿವಾಗಿ ೭ ಮೀಟರ್ ವಿಸ್ತಾರವಾಗಿದೆ. ೩x೪ ಅಡಿ ಕಲ್ಲುಗಳನ್ನು ಬಳಸಿ, ೧೫ ಅಡಿ ಎತ್ತರದವರೆಗೆ ಈ ಕಟ್ಟಡವನ್ನು ನಿರ್ಮಿಸಿದ್ದಾರೆ. ಕಲ್ಲಿನ ಗೋಡೆ ಕೊನೆಗೊಂಡ ಮೇಲೆ ೧೦ ಅಡಿ ಎತ್ತರದ ಮಣ್ಣಿನ ಗೋಡೆಯಿದೆ. ಈ ಗೋಡೆಯಲ್ಲಿ ಬಂದೂಕುರಂಧ್ರ ಹಾಗೂ ವೀಕ್ಷಣಾತೂಬುಗಳನ್ನು ರಚಿಸಿದ್ದಾರೆ. ಈ ಕೊತ್ತಲದ ಉತ್ತರಕ್ಕೆ ಮೇಲ್ಬಾಗದಲ್ಲಿ ೩ ಅಡಿ ಅಗಲ ಹಾಗೂ ೪ ಅಡಿ ಎತ್ತರದ ಬಾಗಿಲು ಇದೆ. ಇದನ್ನು ಪಶ್ಚಿಮಾಭಿಮುಖವಾಗಿ ಹತ್ತಿ ದಕ್ಷಿಣಕ್ಕೆ ತಿರುಗಿ ಬಾಗಿಲಿಗೆ ಪ್ರವೇಶಿಸುವಂತೆ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಈ ಬುರುಜನ್ನು ಎತ್ತರವಾದ ಬಂಡೆಯ ಮೇಲೆ ನಿರ್ಮಿಸಿರುವುದರಿಂದ ಹಾಗೂ ಎತ್ತರವಾಗಿ ಕಟ್ಟಲ್ಪಟ್ಟಿರುವುದರಿಂದ ಇಲ್ಲಿಂದ ಬೆಟ್ಟದ ಮೇಲೆ ಇರುವ ಕಾವಲುಗೋಪುರ ವೀಕ್ಷಿಸ ಬಹುದು. ಜೊತೆಗೆ ಉತ್ತರ, ಪಶ್ಚಿಮ, ದಕ್ಷಿಣದ ಭಾಗಗಳಲ್ಲಿ ದೂರದಿಂದ ಬರುವ ಶತ್ರುಗಳನ್ನು ವೀಕ್ಷಿಸಿ ಕೋಟೆಯ ಮೇಲಿರುವವರಿಗೆ ಮನ್ಸೂಚನೆ ಕೊಡಲಿಕ್ಕೆ ಸಹಾಯಕವಾಗುವಂತೆ ಈ ಕಾವಲು ಗೋಪುರವನ್ನು ನಿರ್ಮಿಸಲಾಗಿದೆ.

ಹೊರಕೋಟೆಯು ಚೌಡಿ ಕೊತ್ತಲಿನಿಂದ ತೇರಿನ ಮನೆಯವರೆಗೆ ಮುಂದುವರೆದಿದೆ. ಆದರೆ ಈ ಭಾಗದಲ್ಲಿ ಕೋಟೆಗೋಡೆಯು ಈಗ ನಾಶವಾಗಿದೆ. ತೇರಿನಮನೆಯ ವಾಯುವ್ಯಕ್ಕೆ ಕರೇಕಲ್ಲಗುಡ್ಡದ ಮೇಲೆ ಈಗಿನ ನೀರಿನ ಟ್ಯಾಂಕ್ ನಿರ್ಮಿಸಿರುವ ಜಾಗದಲ್ಲಿ ಒಂದು ವೃತ್ತಾಕಾರದ ಬುರುಜು ಇದೆ. ಇದು ಕೂಡ ಚೌಡಿ ಕೊತ್ತಲಿನಂತೆ ಕಾರ್ಯ ನಿರ್ವಹಿಸುತ್ತಿದ್ದಿತೆಂದು ಹೇಳಬಹುದು. ಈ ಎರಡು ಬುರುಜುಗಳು ಒಂದೇ ನೇರದಲ್ಲಿದ್ದು ಜಾನಕಲ್ಲು ಕೋಟೆಗೆ ಅಂದವನ್ನು ತಂದುಕೊಟ್ಟಿವೆ. ಹೊರಕೋಟೆಯ ಗೋಡೆಗೆ ಇದ್ದ ಕಂದಕ ಶಿಥಿಲವಾಗಿದೆ.

[illegible]

[illegible]

[illegible]

[illegible]

ಬೆಟ್ಟದ ಉತ್ತರಕ್ಕೆ ಎರಡು ಸುತ್ತಿನ ಕೋಟೆಯಿದೆ. ಹೊರಸುತ್ತಿನ ಕೋಟೆಗೆ ನಾಲ್ಕು ವೃತ್ತಾಕಾರದ ಬುರುಜುಗಳಿದ್ದು, ಮೂರು ಚೌಕಾಕಾರದ ಬುರುಜುಗಳಿವೆ. ಈ ಕೋಟೆಯು ಪೂರ್ವ-ಪಶ್ಚಿಮವಾಗಿ ೧೫೦ ಮೀಟರ್ ವ್ಯಾಪಿಸಿಕೊಂಡಿದೆ. ವೃತ್ತಾಕಾರದ ಬುರುಜುಗಳನ್ನು ಚಿಕ್ಕ ಹಾಗೂ ದೊಡ್ಡ ಕಲ್ಲುಗಳಿಂದ ಕಟ್ಟಿದ್ದಾರೆ. ಈ ಬುರುಜುಗಳು ೧೦ ರಿಂದ ೧೫ ಅಡಿ ಎತ್ತರವಾಗಿದ್ದು, ಅಲ್ಲಲ್ಲಿ ಬಂದೂಕು ಕಿಂಡಿಗಳನ್ನು ರಚಿಸಲಾಗಿದೆ. ಈಶಾನ್ಯ ಭಾಗದಲ್ಲಿ ಶತ್ರುಗಳು ಸುಲಭವಾಗಿ ಬರುವಂತ ಸ್ಥಳವಾಗಿದ್ದು, ಈ ಭಾಗದಲ್ಲಿ ವ್ಯವಸ್ಥಿತವಾಗಿರುವ ೨ ಬುರುಜುಗಳನ್ನು ನಿರ್ಮಿಸಿದ್ದಾರೆ. ಈ ಬುರುಜುಗಳಿಗೂ ೨ನೇ ಕೋಟೆಯ ಸಾಲಿಗೂ ನಡುವೆ ಹೆಚ್ಚು ಅಂತರವಿಲ್ಲ. ೨ನೇ ಸುತ್ತಿನ ಕೋಟೆಯನ್ನು ವ್ಯೂಹ ರೀತಿಯಲ್ಲಿ ರಚಿಸಿದ್ದಾರೆ. ನಯಗೊಳಿಸಿದ ಕಲ್ಲುಗಳಿಂದ ಕೋಟೆಗೋಡೆ ಹಾಗೂ ಬುರುಜುಗಳನ್ನು ನಿರ್ಮಿಸಿದ್ದಾರೆ. ೧೫ ಅಡಿ ಎತ್ತರವಿರುವ ಈ ಗೋಡೆಗೆ ಬಂದೂಕುರಂಧ್ರಗಳಿವೆ. ಗೋಡೆಯ ಹಿಂಭಾಗ ಶತ್ರುಗಳನ್ನು ನಿಂತು ವೀಕ್ಷಿಸಲು ಅಟ್ಟಣಿಕೆಯನ್ನು ರಚಿಸಲಾಗಿದೆ. ಭದ್ರತೆಯ ದೃಷ್ಟಿಯಿಂದ ಸಮಾನ ಅಂತರದಲ್ಲಿ ಕೊತ್ತಲಗಳನ್ನು ಇಳಿಜಾರು ಬಂಡೆಗೆ ಹೊಂದಿಕೊಂಡಂತೆ ರಚಿಸಿದ್ದಾರೆ. ಈ ಭಾಗದಲ್ಲಿ ರಕ್ಷಣೆಗೆ ಹೆಚ್ಚು ಒತ್ತು ಕೊಟ್ಟಿರುವುದರ ಜೊತೆಗೆ ಕೋಟೆಯನ್ನು ಸುಂದರಗೊಳಿಸಿದ್ದಾರೆ. ಬುರುಜಿನ ಪಕ್ಕದಲ್ಲಿರುವ ಬಾಗಿಲು ಹೊರಕೋಟೆಗೆ ಸಂಪರ್ಕ ಕಲ್ಪಿಸುತ್ತದೆ. ದಿಡ್ಡಿ ಬಾಗಿಲಿನ ಮೇಲೆ ಚಪ್ಪಡಿ ಕಲ್ಲನ್ನು ಹಾಕಿ ಶತ್ರುಗಳನ್ನು ವೀಕ್ಷಿಸಲು ಅನುವು ಮಾಡಿಕೊಡಲಾಗಿದೆ.

ಎರಡನೆ ಸುತ್ತಿನ ಹಿಂಭಾಗದಲ್ಲಿ ಸೈನಿಕರ ವಸತಿಯ ಕುರುಹುಗಳು ಕಂಡುಬರುತ್ತವೆ. ಕೋಟೆಯ ಪಶ್ಚಿಮದ ಭಾಗದಲ್ಲಿ ಇರುವ ೨ನೇ ಸುತ್ತಿನ ಕೋಟೆಯನ್ನು ಬ್ರಹ್ಮದೇವರ ಸುತ್ತು ಎಂದು ಕರೆಯುತ್ತಾರೆ. ಈ ಸುತ್ತಿನ ಕೋಟೆಗೋಡೆಯು ಪಶ್ಚಿಮದಲ್ಲಿ ನೇರವಾಗಿ ಮುಂದುವರಿದು, ದಕ್ಷಿಣ ದಿಕ್ಕಿನ ದ್ವಾರಬಾಗಿಲನ್ನು ಸೇರುತ್ತದೆ. ಇಡೀ ಕೋಟೆಯಲ್ಲಿ ವ್ಯವಸ್ಥಿತವಾಗಿ ನಿರ್ಮಾಣವಾಗಿರುವ ಕೋಟೆಗೋಡೆ ಇದಾಗಿದೆ. ಗೋಡೆಯನ್ನು ೧೦ ಅಡಿ ಎತ್ತರದವರೆಗೆ ನಯಗೊಳಿಸಿದ ಕಲ್ಲುಗಳಿಂದ ನಿರ್ಮಿಸಿ, ಗೋಡೆಯ ಮೇಲ್ಭಾಗದಲ್ಲಿ ೫ ಅಡಿ ಎತ್ತರದವರೆಗೆ ಮಣ್ಣಿನಿಂದ ಗೋಡೆಯನ್ನು ಕಟ್ಟಲಾಗಿದೆ. ಈ ಸಾಲಿನಲ್ಲಿ ಎರಡು ದಿಡ್ಡಿ ಬಾಗಿಲುಗಳಿದ್ದು, ಒಂದು ಮುಖ್ಯದ್ವಾರ ಮೂರು ಚೌಕಾಕಾರದ ಬುರುಜುಗಳು, ೨ ವೃತ್ತಾಕಾರದ ಬುರುಜುಗಳಿವೆ. ದ್ವಾರಬಾಗಿಲ ಪಕ್ಕದಲ್ಲಿರುವ ಚೌಕಾಕಾರದ ಬುರುಜು ಕೋಟೆಯ ಪಶ್ಚಿಮ ಭಾಗಕ್ಕೆ ಕಳಸಪ್ರಾಯವಾಗಿದೆ. ಈ ಬುರುಜು ೧೮ ಮೀ. ಸುತ್ತಳತೆ ಹೊಂದಿದ್ದು, ೭ ಮೀ. ಎತ್ತರವಿದೆ. ಈ ಬುರುಜಿನ ಪಶ್ಚಿಮದಲ್ಲಿ ೨ ಕೋವಿಕಿಂಡಿಗಳಿವೆ. ಈ ಕಿಂಡಿಗಳಿಂದ ಕೋಟೆಯ ಪಶ್ಚಿಮ ಭಾಗವನ್ನು ವೀಕ್ಷಿಸಬಹುದಾಗಿದೆ.

ಈ ಬುರುಜಿಗೆ ೫೦ ಮೀಟರ್ ದೂರದಲ್ಲಿ ಮತ್ತೊಂದು ದ್ವಾರಬಾಗಿಲಿದೆ. ಪೂರ್ವಕ್ಕೆ ತಿರುಗಿ, ದಕ್ಷಿಣದಿಂದ ಪ್ರವೇಶ ಕಲ್ಪಿಸುವ ಹಾಗೆ ದ್ವಾರಬಾಗಿಲನ್ನು ನಿರ್ಮಿಸಲಾಗಿದೆ. ದ್ವಾರಬಾಗಿಲಿಗೆ ನಾಲ್ಕು ಕಂಬಗಳಿರುವ ಚಾವಡಿಯನ್ನು ರಚಿಸಲಾಗಿದೆ. ಬಾಗಿಲು ತೆರೆಯುವ ಮತ್ತು ಮುಚ್ಚುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಬಾಗಿಲಿನಿಂದ ನೇರವಾಗಿ ಮೇಲುದುರ್ಗಕ್ಕೆ ಪ್ರವೇಶಮಾಡಲು ಸಾಧ್ಯವಾಗದಂತೆ ಒಳ ಸುತ್ತಿನ ಕೋಟೆಗೋಡೆಯನ್ನು ವಿಸ್ತರಿಸಿದ್ದಾರೆ. ಈ ಗೋಡೆಯನ್ನು ಪ್ರತ್ಯೇಕಿಸಿ ದಕ್ಷಿಣಾಭಿಮುಖವಾಗಿ ದಿಡ್ಡಿಬಾಗಿಲನ್ನು ಇಟ್ಟಿದ್ದಾರೆ. ಇಲ್ಲಿಂದ ಮತ್ತೆ ಪೂರ್ವಾಭಿಮುಖವಾಗಿ ನೇರವಾಗಿ ಮೇಲುದುರ್ಗಕ್ಕೆ ಹೋಗಲು ಸಂಪರ್ಕ ಕಲ್ಪಿಸಲಾಗಿದೆ. ಈ ಭಾಗದಲ್ಲಿ ಎರಡು ಹೊಂಡಗಳಿದ್ದು ಒಂದು ಹೊಂಡಕ್ಕೆ ಕಂಚಿನಹೊಂಡ ಎಂದು ಕರೆಯುತ್ತಾರೆ. ಇದು ೬ ಮೀಟರ್ ಆಳವಿದೆ. ಕೋಟೆಯ ಆಗ್ನೇಯ ದಿಕ್ಕಿಗೆ ಪ್ರಕೃತಿ ನಿರ್ಮಿತ ಬಂಡೆಯ ಮೇಲೆ ಒಂದು ಬುರುಜನ್ನು ನಿರ್ಮಿಸಿರುವುದನ್ನು ಬಿಟ್ಟರೆ ಈ ಭಾಗದಲ್ಲಿ ಯಾವುದೇ ಕೋಟೆಯಿಲ್ಲ. ಪೂರ್ವಭಾಗದ ಇಳಿಜಾರು ಬಂಡೆಯು ಕೋಟೆಯಂತೆ ರಕ್ಷಣೆ ನೀಡಿದೆ.

ಮೇಲ್ಭಾಗದಲ್ಲಿ ವೃತ್ತಾಕಾರದ ಕಾವಲು ಗೋಪುರವಿದ್ದು, ಇದು ಬೆಟ್ಟದಲ್ಲಿಯೇ ಎತ್ತರ ಪ್ರದೇಶವಾಗಿದೆ. ಈ ಬುರುಜಿನ ಮೇಲೆ ನಿಂತುಕೊಂಡರೆ ಎಂಟು ದಿಕ್ಕುಗಳನ್ನು ವೀಕ್ಷಿಸಬಹುದು. ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ಗೋಪುರದ ಸುತ್ತಲೂ ೬ ಅಡಿ ಕೋಟೆಯ ಗೋಡೆ ಇದ್ದು, ಉತ್ತರ ದಿಕ್ಕಿನಿಂದ ಪ್ರವೇಶ ಕಲ್ಪಿಸಲಾಗಿದೆ. ಮೇಲ್ದುರ್ಗದಿಂದ ನೈರುತ್ಯ ದಿಕ್ಕಿನಲ್ಲಿ ಇಳಿಜಾರು ಬಂಡೆಗೆ ಹೊಂದಿಕೊಂಡಂತೆ ಇರುವ ಕೋಟೆಸಾಲು ಮೊದಲನೆ ದ್ವಾರಬಾಗಿಲನ್ನು ಸೇರುತ್ತದೆ. ಈ ಕೋಟೆಸಾಲು ಬಲಿಷ್ಠವಾಗಿದ್ದು ೧೫ ಅಡಿ ಎತ್ತರದಲ್ಲಿದೆ. ಈ ದ್ವಾರಬಾಗಿಲಿನ ಪಕ್ಕದಲ್ಲಿ ಗೋಡೆ ಒಡೆದು ಈಗ ರಸ್ತೆಯ ಸಂಪರ್ಕ ಮಾಡಿಕೊಳ್ಳಲಾಗಿದೆ. ಈ ಕೋಟೆಗೆ ೫ ಮೀ. ಎತ್ತರದವರೆಗೆ ದಪ್ಪಕಲ್ಲುಗಳನ್ನು ಬಳಸಿ ಬಲವಾದ ಗೋಡೆಯನ್ನು ನಿರ್ಮಿಸಿದ್ದಾರೆ. ಇದರ ಮೇಲೆ ೧೦ ರಿಂದ ೧೫ ಅಡಿ ಎತ್ತರ ಮಣ್ಣಿನ ಗೋಡೆಯನ್ನು ಕಟ್ಟಿದ್ದಾರೆ.

ಮೂರನೇ ಸುತ್ತಿನ ಕೋಟೆ ಮತ್ತು ಎರಡನೇ ಸುತ್ತಿನ ಕೋಟೆಯ ಮಧ್ಯಭಾಗದಲ್ಲಿ ಅನೇಕ ಕಣಜಗಳಿವೆ. ವೃತ್ತಾಕಾರವಾದ ಈ ಕಣಜಗಳು ನಾಶವಾಗಿವೆ. ಈ ಕಣಜಗಳ ಪಕ್ಕದಲ್ಲಿ ಬ್ರಹ್ಮದೇವರ ಪಾದಗಳಿವೆ. ಈ ಬ್ರಹ್ಮದೇವರ ಪಾದಗಳನ್ನು ಬಿಟ್ಟರೆ ಧಾರ್ಮಿಕವಾಗಿ ಯಾವುದೇ ದೇವಾಲಯಗಳು ಮೇಲ್ದುರ್ಗದಲ್ಲಿ ಇಲ್ಲ. ಈ ಭಾಗದಲ್ಲಿದ್ದ ಅರಮನೆ, ಗರಡಿಮನೆಗಳು ಪೂರ್ಣವಾಗಿ ನಾಶವಾಗಿವೆ. ಜಾನಕಲ್ಲು ಕೋಟೆಯಲ್ಲಿ ಹೆಚ್ಚಾಗಿ ಕಲ್ಲಿನ ಗೋಡೆಯ ಮೇಲೆ ಮಣ್ಣಿನ ಕೋಟೆ ನಿರ್ಮಿಸಿರುವುದು

[illegible]

ಕಂಡುಬರುತ್ತದೆ. ಈ ರಚನೆ ಚಿತ್ರದುರ್ಗದ ಕೋಟೆಯಲ್ಲಿದ್ದು ಈ ಕೋಟೆ ರಚನೆಯ ಪ್ರಭಾವ ಈ ಕೋಟೆಯಲ್ಲಿಯೂ ಕಾಣಬಹುದಾಗಿದೆ. ಈ ಹಿಂದೆ ಚರ್ಚಿಸಿದಂತೆ ಫ್ರಾನ್ಸ್ ದೇಶದ ತಂತ್ರಜ್ಞ ಜಾನ್ ಎಂಬುವವನ ಪ್ರಭಾವವನ್ನು ತಳ್ಳಿಹಾಕುವಂತಿಲ್ಲ. ಆದರೆ ಕೋಟೆಯ ಭಾಗಗಳು ಇತ್ತೀಚೆಗೆ ಹೆಚ್ಚು ಶಿಥಿಲಗೊಳ್ಳುತ್ತಿವೆ.

ಜಾನಕಲ್ಲಿನಲ್ಲಿ ವೀರಭದ್ರ, ಆಂಜನೇಯ, ಶಂಕರಲಿಂಗ, ತಿಮ್ಮಪ್ಪ, ಗವಿಸಿದ್ದೇಶ್ವರ, ಜೈನಗುಡಿ, ಜುಮ್ಮಾಮಸೀದಿ, ಕೊಲ್ಲಾಪುರದಮ್ಮ, ಬಸವಣ್ಣ ಮುಂತಾದ ದೇವಾಲಯಗಳಿವೆ.

೪.೧೧ ಬೂದಿಹಾಳು ಕೋಟೆ(ಶ್ರೀರಾಂಪುರ)

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿಗೆ ಸೇರಿದ ಬೂದಿಹಾಳು ಹೋಬಳಿ ಕೇಂದ್ರವಾಗಿದೆ. ಹೊಸದುರ್ಗದಿಂದ ಹುಳಿಯಾರಿಗೆ ಹೋಗುವ ಮಾರ್ಗದಲ್ಲಿ ಆಗ್ನೇಯಕ್ಕೆ ೧೬ ಮೈಲಿಗಳ ದೂರದಲ್ಲಿದೆ. ಬೂದಿಹಾಳ್‌ಗೆ ಅನೇಕ ಹೆಸರುಗಳಿರುವುದು ಕಂಡುಬರುತ್ತದೆ. ಅವುಗಳಲ್ಲಿ ಬೂದಾಳು, ಬೂದಿಹಾಲು, ವಿಭೂತಿಪುರ, ಭಸ್ಮಪುರ, ಬೂದಿಪುರ, ಹರಪುರ, ಶರಪುರ, ಗಿರಿಜಾನಗರ, ಅವನಿಗಿರಿ ದುರ್ಗ, ಬೇದಂಡಕೋಟೆ ಮತ್ತು ಕಾಯಿಬೂದಾಳು ಮೊದಲಾದ ಹೆಸರುಗಳಿವೆ.[೧೦೯] ಆಧುನಿಕ ಸ್ಥಳನಾಮಗಳನ್ವಯ ಈ ಪ್ರದೇಶವನ್ನಾಳಿದ ಸಿರುಮನ ಹೆಸರಿನಲ್ಲಿ ಸಿರುಮಣಾಪುರವೆಂದು ಕರೆಯುತ್ತಿದ್ದ ಬಗ್ಗೆ ದಾಖಲೆಗಳಿವೆ. ಜನ ಬಳಕೆಯಲ್ಲಿ ಇಂದಿಗೂ ಸೀರಾಂಪುರ ನಾಮವೇ ಉಳಿದಿದೆ. ಸಿರುಮಣಪುರ, ಸಿರುಮನಪುರ, ಶಿರುಮಪುರ, ಶೀರಾಮಪುರವು ಮುಂದೆ ಶ್ರೀರಾಂಪುರವಾಗಿದೆ.[೧೧೦] ಇತ್ತೀಚೆಗೆ ಈ ಊರನ್ನು ಶ್ರೀರಾಂಪುರ ಎಂಬ ಹೆಸರಿನಿಂದ ಕರೆಯಲಾಗಿದೆ.

ಕ್ರಿ.ಶ.೧೭ನೆಯ ಶತಮಾನದ ಮಧ್ಯಭಾಗದಲ್ಲಿ ಸಿರುಮ ಎಂಬ ಹೆಸರಿನ ಪಾಳೆಯಗಾರನು ಬೂದಿಹಾಳು ಕೋಟೆಯನ್ನು ಕಟ್ಟಿ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದನು. ಅಂದಿನಿಂದ ಇವರು ಬೂದಿಹಾಳು ಪಾಳೆಯಗಾರರೇ ಎಂದು ಕರೆಸಿಕೊಂಡಿದ್ದಾರೆ. ಇವರ ಚರಿತ್ರೆ ಹಾಗೂ ಕೋಟೆಯನ್ನು ಅಧ್ಯಯನ ಮಾಡಲು ಪ್ರಮುಖ ಶಾಸನಾಧಾರಗಳು ದೊರೆಯದಿದ್ದರೂ ಸಾಹಿತ್ಯ ಕೃತಿಗಳು ವಿಪುಲವಾಗಿವೆ. ಸಿದ್ಧ ಕವಿಯ ಸಿರುಮನ ಸಾಂಗತ್ಯ, ಮಲ್ಲಕವಿಯ ಗೊಲ್ಲ ಸಿರುಮನಚರಿತೆ, ರಾಮಕವಿಯ ಸಿರುಮನಚರಿತೆ ಎಂಬ ಕಾವ್ಯಗಳು ಪ್ರಮುಖವಾಗಿವೆ.[೧೧೧] ಅಲ್ಲದೆ ಬೂದಿಹಾಳು ಪರಿಸರದಲ್ಲಿ ದೊರೆಯುವ ಶಾಸನಗಳು ಇವರ ಇತಿಹಾಸವನ್ನು ಬರೆಯಲು ಪೂರಕವಾಗಿ ಸಹಾಯಕವಾಗಿವೆ.

ಸುಮಾರು ೧೫ನೆಯ ಶತಮಾನದ ಪೂರ್ವಭಾಗದಲ್ಲಿ ವಿಜಯನಗರದ ಅರಸರ ೨ನೇ ದೇವರಾಯನ ಬಳಿಯಿದ್ದ ದಕ್ಷನೂ ಶೂರನೂ ನಿಷ್ಠಾವಂತನಾದ ಕಾಚನಾಯಕನೆಂಬುವನಿಗೆ ತನ್ನ ಸಾಮ್ರಾಜ್ಯಕ್ಕೆ ಸೇರಿದ ಸೂಜಿಗಲ್ಲು ಪ್ರದೇಶವನ್ನು ಬಳುವಳಿಯಾಗಿ ನೀಡಿದನು. ಬೂದಿಹಾಳು ಪಕ್ಕದಲ್ಲಿರುವ ಸೂಜಿಗಲ್ಲಿನಿಂದ ಆರಂಭವಾದ ಈತನ ಆಳ್ವಿಕೆಯು ಪ್ರಸಿದ್ಧಿಯಾಗಿದ್ದು ಈತನ ತರುವಾಯ ಬಂದ ಸಿರುಮನಿಂದ, ಈತನು ರಾಜಧಾನಿಯನ್ನು ಸೂಜಿಗಲ್ಲಿನಿಂದ ಬೂದಿಹಾಳು ಪಟ್ಟಣಕ್ಕೆ ವರ್ಗಾಯಿಸಿ ಅಲ್ಲಿ ಕೋಟೆಕೊತ್ತಲಗಳನ್ನು ನಿರ್ಮಿಸಿದನೆಂದು ಹೇಳಲಾಗಿದೆ.[೧೧೨] ಮೈಸೂರು ಗೆಜೆಟಿಯರ್‌ನಲ್ಲೂ ಇದೇ ಅಬಿಪ್ರಾಯವಿದೆ.[೧೧೩] ಆದರೆ ಬೂದಿಹಾಳು ಗ್ರಾಮದಲ್ಲಿರುವ ಹಿರೀಕೆರೆ ಏರಿಯ ಶಾಸನವು ಬೂದಿಹಾಳು ಪಟ್ಟಣವು ೧೨ನೆಯ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿತ್ತೆಂಬ ಮಾಹಿತಿಯನ್ನು ನೀಡುತ್ತದೆ.[೧೧೪] ಈ ಶಾಸನದನ್ವಯ ಬೂದಿಹಾಳು ಸಿರುಮನಿಗಿಂತ ಪೂರ್ವದಲ್ಲಿಯೇ ಪ್ರಸಿದ್ಧ ಪಟ್ಟಣವಾಗಿತ್ತೆಂದು ತಿಳಿದುಬರುತ್ತದೆ. ಬಹುಶಃ ಆ ಕಾಲಕ್ಕಾಗಲೇ ಪ್ರಸಿದ್ಧಿಯಾಗಿದ್ದ ಈ ಪಟ್ಟಣಕ್ಕೆ ಸಿರುಮನು ಕೋಟೆ-ಕೊತ್ತಲಗಳನ್ನು ಕಟ್ಟಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಂತೆ ಕಾಣುತ್ತದೆ.

ಹೊಯ್ಸಳ ಮತ್ತು ವಿಜಯನಗರದ ಅರಸರ ಕಾಲದಲ್ಲಿ ಹುಳಿಯಾರು ಮತ್ತು ಚಿಕ್ಕನಾಯಕನಹಳ್ಳಿ ಸುತ್ತಲೂ ಇರುವ ಪ್ರದೇಶಕ್ಕೆ ಮಗರಮನ್ನೇಯರ ನಾಡು ಎಂದು ಕರೆಯಲಾಗುತ್ತಿತ್ತು.[೧೧೫] ಆಗ ಬೂದಿಹಾಳು ಈ ಮಗರಮನ್ನೇರ ನಾಡಿನಲ್ಲಿ ಒಂದು ಸೀಮೆಯಾಗಿದ್ದಿತು. ಈ ಸೀಮೆಯಲ್ಲಿ ಕುಲವಟಿ, ನೇರಲಕೆರೆ, ಹೆಗ್ಗೆರೆ, ಬೆಲಗೂರು, ಬೂದಿಹಾಳು, ಭೈರದೇವರಗುಡ್ಡ, ಕಲ್ಲಕೆರೆ ಮುಂತಾದ ಗ್ರಾಮಗಳು ಅಂತರ್ಗತವಾದವೆಂದು ಶಾಸನಗಳಿಂದ ತಿಳಿದುಬರುತ್ತದೆ.[೧೧೬] ಬೂದಿಹಾಳು ಪತನಗೊಂಡ ಮೇಲೆ ವಿಜಯನಗರದ ಅರಸರು ನೇಮಿಸಿದ ಅಮರನಾಯಕರು ಆಡಳಿತ ನಡೆಸಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ.[೧೧೭] ಇವರ ನಂತರ ಬೂದಿಹಾಳು ತರೀಕೆರೆ ನಾಯಕರ ವಶವಾಯಿತು.[೧೧೮] ಬಿಜಾಪುರದ ಸುಲ್ತಾನ ಕರ್ನಾಟಕದ ದಕ್ಷಿಣ ಭಾಗವನ್ನು ವಶಪಡಿಸಿಕೊಂಡಾಗ ಬೂದಿಹಾಳು ಪಾಳೆಯವು ಸಿರಾ ಸುಬೆಗೆ ಸೇರಿತು. ಆಗ ಇದು ಸಿರಾದ ಏಳು ಪರಗಣಗಳಲ್ಲಿ ಒಂದೆನಿಸಿತು. ತರುವಾಯ ಚಿತ್ರದುರ್ಗ ಪಾಳೆಯಗಾರರ ವಶವಾಗಿ, ಗಿರಿಜಾಕಲ್ಯಾಣನಗರ ಎಂಬ ಹೆಸರುಪಡೆಯಿತು.[೧೧೯] ನಂತರ ಮರಾಠರು ಪೇಶ್ವೆಗಳ ವಶವಾಗಿವಾಯಿತು. ಕ್ರಿ.ಶ.೧೭೬೧ರಲ್ಲಿ ಮೈಸೂರಿನ ಹೈದರಾಲಿ, ಟಿಪ್ಪು, ಬೂದಿಹಾಳುಗಳನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿದರು. ಟಿಪ್ಪುವಿನ ಕಾಲಕ್ಕೆ ಬೂದಿಹಾಳು ಮೈಸೂರು ಸಂಸ್ಥಾನಕ್ಕೆ ಸೇರಿಸಲಾಯಿತು.

೪.೧೧.೧ ಕಾವ್ಯಗಳಲ್ಲಿ ಬೂದಿಹಾಳು ಕೋಟೆಯ ವರ್ಣನೆ

ಮಲ್ಲಕವಿ ಗೊಲ್ಲಸಿರುಮನ ಚರಿತೆಯಲ್ಲಿ ಹೊಯ್ಸಳ ದೇಶದಲ್ಲಿ ಬೂದಿಹಾಳು ಅತ್ಯಂತ ಖ್ಯಾತಿಗಳಿಸಿತೆಂದು ಹೇಳಿದ್ದಾನೆ. ಕಂಚಿನ ಕೋಟೆ, ಮಿಂಚುವ ತೆನೆಗಳು, ಅಲ್ಲಲ್ಲಿ ಅಣಿಗೊಳಿಸಿದ್ದ ಡೆಂಕಣಿಗಳು ಕೋಟೆಯ ಸುತ್ತ ಇದ್ದ ಅಗಳು, ತುಂಬಿದ ಜಲ, ಅದರಲ್ಲಿ ಮೀನು, ಮೊಸಳೆಗಳು, ತೆನೆಗಳ ಮೇಲೆ ಪೇರಿಸಿಟ್ಟ ಕಲ್ಲುಗಳು, ಸಿದ್ಧವಾಗಿಟ್ಟಿರುವ ಕಾಸಿದ ಅಂಬಲಿ, ಹುರಿದ ಮರಳುರಾಶಿ, ಚೋರಗಂಡಿಗಳು, ಕೊತ್ತಲದಲ್ಲಿ ಪಾಳೆಯಗಾರರು ದಂಡೆತ್ತಿ ಬಂದಾಗ ಅವರನ್ನು ನುಂಗಲು ನಿಂತಿರುವಂತೆ ಕಾಣಿಸುವ ಶೂಲಗಳು, ರಾಮನಾಥ, ಭಯಂಕರ, ಮೀಸರಗಂಡ, ರಣಹೇಣ ಎಂಬ ಹೆಸರಿನ ಕೊತ್ತಲಗಳು ಆ ಕೋಟೆಯಲ್ಲಿ ಶೋಭಿಸುತ್ತಿರಲು, ಪಡುವಲ ಬಾಗಿಲಿನಲ್ಲಿ ಕಾವಲಾಗಿ ನಿಂತಿರುವ ಸತ್ಯ ಸ್ವರೂಪಿ ಏಕನಾಥೇಶ್ವರಿ ಮೂಡಣ ಬಾಗಿಲಿನಲ್ಲಿ ಕಪ್ಪರಿ ವೀರಣ್ಣ ದೇವರು ಕಾವಲಾಗಿರುವರು. ಈಶ್ವರ, ನಿರಾಶೆಮಠ, ಸೂರ್ಯಬೀದಿ, ಚಂದ್ರಬೀದಿಗಳಿಂದ ಬೂದಿಹಾಳು ನಗರ ಶೋಭಿಸುತ್ತದೆ. ಇದನ್ನು ಬಲಿದುರ್ಗವೆಂದೂ, ಕಂಚಿನ ಕೋಟೆಯೆಂದೂ ವರ್ಣಿಸಿದ್ದಾನೆ.[೧೨೦]

ರಾಮಕವಿಯು ಬೂದಿಹಾಳು ಕೋಟೆಯನ್ನು ಇದು ರಾವಣನಿಹ ಲಂಕೆಯು ಭಾವಿಸೆ ಇದು ರಾಮನಿಹ ಕಮ್ಮಟವೋ, ಇದು ವೈರಿ ನೃಪಕೆರೆಲ್ಲಣ ವೆಸುವುದಿಕೆ ಸಾಟಿಯೇ ಮಿಕ್ಕ ನಗರ ಎಂದು ಬೂದಿಹಾಳು ಕೋಟೆಯನ್ನು ಕುಮಾರರಾಮನು ಕಮ್ಮಟದುರ್ಗಕ್ಕೆ ಹೋಲಿಸುತ್ತಾನೆ. ಮೇಲೆ ಹೇಳಿದ ಎಲ್ಲಾ ಅಂಶಗಳನ್ನೊಳಗೊಂಡಂತೆ ಉದ್ದು, ಕಡಲೆ, ಗೋದಿ, ಹಣ್ಣು ಹಂಪಲುಗಳನ್ನು ಮಾರುವ ಅಂಗಡಿಗಳು ಸುಗಂಧ ವಸ್ತುಗಳು, ಹೂ ಮಾರುವ ಅಂಗಡಿಗಳು, ವಿವಿಧ ಚಿತ್ರ ಕೆಲಸಗಳಿಂದ ಬೂದಿಹಾಳು ಮೆರೆಯುತ್ತಿದೆ. ಬ್ರಾಹ್ಮಣರ ಕೇರಿಗಳಲ್ಲಿ ವಡೆ, ಸುಕ್ಕಿನುಂಡೆ, ಚಕ್ಕುಲಿ, ಕರ್ಜಿಕಾಯಿ, ಕಡಬು, ಎಣ್ಣೊರೆಗಳನ್ನು ಮಾಡುತ್ತಿರುವ ಸೊಡರು ತುಂಬಿದೆ. ಪಗಡೆ, ಚದುರಂಗ, ಜೂಜನ್ನಾಡುವ ರಾಜಪರಿವಾರದವರು, ಕೋಳಿ, ಟಗರು ಪಂದ್ಯಗಳನ್ನು ನೋಡಿ ಆನಂದಿಸುವ ಜನಗಳು, ವಿಟರನ್ನು ಮರುಳುಗೊಳಿಸುವ ಸುಂದರ ವೇಶ್ಯೆಯರು ಇವೆಲ್ಲವುಗಳಿಂದ ಬೂದಿಹಾಳು ಪಟ್ಟಣಕ್ಕೆ ಹಂತಕನಂತೆ ಬೂವರಿಸಿದ್ದಾನೆ ಎಂದು ರಾಮಕವಿಯು ವರ್ಣಿಸಿದ್ದಾನೆ.[೧೨೧]

ಸಿದ್ಧ ಕವಿಯು ಪಟ್ಟಣವನ್ನು ಅತಿಶಯ ಗುರುಪೂಜೆ, ಜಂಗಮಾರ್ಚನಗಳಿಂದ ಬೂದಿಹಾಳು ಪ್ರಥಮ ಕಲ್ಯಾಣವೆನಿಸಿತ್ತು. ವ್ಯಾಸನತೋಡು ವೃಷಭಧ್ವಜಗಳಿಂದ ನಿರಾಸೆಯ ಮಟ್ಟವು ಶೋಭಿಸುತ್ತಿತ್ತು. ಈಶ್ವರ, ವೀರೇಶ್ವರಲಿಂಗ, ಬಸವನಗುಡಿ, ಕೆರೆ, ಬನ, ಹೂದೋಟ, ತೆಂಗು, ಕರ್ಜೂರ ಇತ್ಯಾದಿ

ಮರಗಳಿಗೆ ಬರವಿಲ್ಲದ ದೇಶವೆಂದು, ಕೆತ್ತುಗಲ್ಲುಗಳ ಶಂಗಾರ, ಚಿತ್ರದ ತೆನೆಗಳು ಹತ್ತು ಮಾರಿಗೊಂದು ಕೊತ್ತಲ, ಹೂಡೇವು, ಅಲ್ಲಲ್ಲಿ ಅಂಬುಗಂಡಿಗಳು ಕೋಟೆಯ ಸುತ್ತಲೂ ಬಳಸಿದ ನೆಲಗಣ್ಣ, ಚೋರುಗಂಡಿಗಳು ಸುತ್ತಲೂ ಇರುವ ಅಗಳಿ, ಹುಲಿಮುಖ, ವಂಕರಿಗಳು, ಮೈಲಾರನ ಬಾಗಿಲು, ಕಪ್ಪರಿ ವೀರನ ಬಾಗಿಲು, ಬಲಕ್ಕೆ ರಣಕೊತ್ತಲ ಇವೆ. ಊರ ಮಧ್ಯದಲ್ಲಿ ರಾಜಮಾರ್ಗ, ಹಿರಿಯುಪ್ಪರಿಗೆಯ ಸಿರುಮನ ಅರಮನೆ ಮಂತ್ರಿಮನ್ನೆಯರು ಅಧಿಕಾರಿಗಳು ಇದ್ದರೆಂದು ವರ್ಣಿಸುತ್ತದೆ.[೧೨]

ಮೇಲೆ ಹೇಳಿದ ಕಾವ್ಯಗಳ ರೀತಿಯಲ್ಲಿ ಬೂದಿಹಾಳು ಕೋಟೆಯು ಈಗ ಉಳಿದಿಲ್ಲ. ತೀವ್ರಗತಿಯಲ್ಲಿ ಬೆಳೆಯುತ್ತಿರುವ ಊರು ಕೋಟೆಯನ್ನಾವರಿಸಿಕೊಂಡಿದೆ. ಆದರೂ ಅಳಿದುಳಿದ ಅವಶೇಷಗಳಿಂದ ಕೋಟೆಯ ಬಗ್ಗೆ ಹೇಳಲು ಪ್ರಯತ್ನಿಸಲಾಗಿದೆ. ಬೂದಿಹಾಳು ಕೋಟೆಯು ಸ್ಥಳ ದುರ್ಗವಾಗಿದ್ದು ಹೆಚ್ಚುಕಡಿಮೆ, ವೃತ್ತಾಕಾರದ ಕೋಟೆಯಾಗಿದೆ. ಒಂದು ಕಾಲದಲ್ಲಿ ಕುಮಾರರಾಮನ ಕಮ್ಮಟದುರ್ಗಕ್ಕೆ ಹೋಲಿಕೆಯಾಗಿದ್ದ ಬೂದಿಹಾಳಿನಲ್ಲಿ ಈಗ ಕೋಟೆಯ ಸುತ್ತ ಇರುವ ಭಾರೀ ಕಂದಕ, ದೇವಾಲಯಗಳು, ಕೋಟೆಯ ಪಶ್ಚಿಮ ಭಾಗದಲ್ಲಿ ಉಳಿದುಕೊಂಡಿರುವ ಏಕೈಕ ಬುರುಜು ಹಾಗೂ ಅಲ್ಲಲ್ಲಿ ಅವಶೇಷಗಳ ಕುರುಹಾಗಿರುವ ಎತ್ತರದ ಮಣ್ಣಿನ ಕೊತ್ತಲಗಳಿವೆ. ಈ ಕೋಟೆಯು ೧,೨೦೦ ಮೀ. ಸುತ್ತಳತೆಯನ್ನು ಹೊಂದಿದ್ದು, ಪೂರ್ವಪಶ್ಚಿಮ ೬೦೦ ಮೀ. ಉದ್ದವಿದೆ. ಕೋಟೆಯಲ್ಲಿ ೧೦ ದೊಡ್ಡ ಬುರುಜುಗಳು, ೮ ಚಿಕ್ಕ ಬುರುಜುಗಳಿದ್ದು, ಸಿದ್ಧ ಕವಿ ಹೇಳುವಂತೆ ೧೦ ಮಾರಿಗೊಂದು ಬುರುಜುಗಳು ನಿರ್ಮಾಣಗೊಂಡಿವೆ. ಈಗ ಉಳಿದುಕೊಂಡಿರುವ ಪಶ್ಚಿಮದ ಕೊತ್ತಲವು ಕೋಟೆಯ ರಚನೆಯ ಬಗ್ಗೆ ಬರೆಯಲು ಇರುವ ಏಕೈಕ ಆಧಾರವಾಗಿದೆ.

ಸುಮಾರು ೪೦ ಅಡಿ ಎತ್ತರವಿರುವ ಈ ಕೊತ್ತಲದ ಮೇಲೆ ಸುತ್ತಲೂ ತೆನೆಗಳಿವೆ. ಹಾಗೂ ಅಂಬುಗಂಡಿಗಳಿವೆ. ಪಶ್ಚಿಮ ಭಾಗದಲ್ಲಿ ಮೂರು ನಾಲಿಗೆ ಕಲ್ಲುಗಳಿವೆ. ಕಂದಕಕ್ಕೆ ಹೊಂದಿಕೊಂಡಂತೆ ಇದನ್ನು ನಿರ್ಮಿಸಲಾಗಿದೆ. ನಯಗೊಳಿಸಿದ ಮಧ್ಯಮದ ಗಾತ್ರದ ಬಿಳಿ ಗ್ರ್ಯಾನೈಟ್ ಕಲ್ಲುಗಳನ್ನು ಬಳಸಿ ಸುತ್ತಲೂ ಗೋಡೆ ಕಟ್ಟಲಾಗಿದೆ. ಕೊತ್ತಲದ ಕೆಳಭಾಗದಿಂದ ಮೇಲ್ಭಾಗದವರೆಗೂ ೫ ಅಡಿ ಅಂತರದಲ್ಲಿ ಕಟ್ಟಡದ ಭದ್ರತೆಗಾಗಿ ೧x೫ ಅಡಿಯ ಕಲ್ಲುಗಳನ್ನು ಬಳಸಿದ್ದಾರೆ. ಮದ್ಯ ಭಾಗದಲ್ಲಿ ೧x೧ ಅಡಿಯ ಕಲ್ಲುಗಳಿಂದ ಇಡೀ ಕೊತ್ತಲವನ್ನು ಕಟ್ಟಲಾಗಿದೆ. ಇಂತಹ ಕಲ್ಲುಗಳು ಒಳಭಾಗದಲ್ಲಿ ಉದ್ದವಾಗಿವೆ. ಗಾರೆಯನ್ನು ಬಳಸಿ ಹೊರಭಾಗದ ಗೋಡೆಯನ್ನು ನಿರ್ಮಾಣ ಮಾಡಲಾಗಿದೆ. ಒಲಭಾಗದಲ್ಲಿ ಕಲ್ಲುಮಣ್ಣನ್ನು ಬಳಸಿ ಭರ್ತಿ ತುಂಬಲಾಗಿದೆ. ಇಷ್ಟೊಂದು ಸುಂದರವಾದ ಈ ಕೊತ್ತಲವು ಮಲ್ಲಕವಿ

[illegible]

[illegible]

ಹೇಳುವ ಹಾಗೆ ಭಯಂಕರ ಕೊತ್ತಲವಾಗಿದೆ. ಕೊತ್ತಲದ ಮೇಲಕ್ಕೆ ಹತ್ತಲು ಎಲ್ಲೂ ಮೆಟ್ಟಿಲುಗಳಿಲ್ಲ. ಸ್ಥಳೀಯರು ಹೇಳುವಂತೆ ಕೊತ್ತಲಿನ ಪಶ್ಚಿಮ ಭಾಗದಲ್ಲಿರುವ ನಾಲಿಗೆ ಕಲ್ಲುಗಳಿಂದ ಹಗ್ಗವನ್ನು ಕಟ್ಟಿಕೊಂಡು ಕಂದಕಕ್ಕೆ ಇಳಿದು ಹೊರಹೋಗುವ ವ್ಯವಸ್ಥೆ ಇತ್ತೆಂದು ಹೇಳಲಾಗಿದೆ. ಮಲ್ಲಕವಿ ಹೇಳುವಂತೆ ಕೋಟೆಯಲ್ಲಿ ಅಳಿದುಳಿದಿರುವ ರಾಮನಾಥ, ಮೀಸರಗಂಡ, ರಣಹೆಣ ಕೊತ್ತಲಗಳು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗದಿದ್ದರೂ ಅವಶೇಷಗಳು ಉಳಿದುಕೊಂಡಿವೆ. ಕೋಟೆಯ ದಕ್ಷಿಣಕ್ಕಿರುವ ೩೦ ಅಡಿ ಎತ್ತರದ ಕೊತ್ತಲದ ಸುತ್ತ ಇರುವ ಕಲ್ಲುಗಳನ್ನು ಸ್ಥಳೀಯರು ಬಳಸಿಕೊಂಡಿದ್ದು, ಮಣ್ಣಿನ ದಿನ್ನೆ ಮಾತ್ರ ಉಳಿದುಕೊಂಡಿದೆ. ವಿಶಿಷ್ಟವೆಂದರೆ ಈ ಕೊತ್ತಲಗಳೊಳಗೆ ಯಾವುದೇ ಕಲ್ಲುಗುಂಡುಗಳನ್ನು ಬಳಸದೆ ೩ ಅಡಿ ಅಂತರದಲ್ಲಿ ಕೆಂಪು, ಬಿಳಿ, ಕಪ್ಪು ಮಿಶ್ರಿತ ಗಚ್ಚು ಮಣ್ಣನ್ನು ಹಾಕುತ್ತಾ ಹೋಗಿದ್ದಾರೆ. ಇಷ್ಟೊಂದು ವ್ಯವಸ್ಥೆಯಿಂದ ನಿರ್ಮಾಣಗೊಂಡಿರುವುದರಿಂದಲೇ ಈಗಲೂ ಆ ಮಣ್ಣು ಹಾಗೆಯೇ ಉಳಿದುಕೊಂಡಿರುವುದು.

ಸಿದ್ಧ ಕವಿಯು ತನ್ನ ಕಾವ್ಯದಲ್ಲಿ ಹೇಳಿರುವಂತೆ ಪೂರ್ವದಲ್ಲಿರುವ ಕಪ್ಪರಿವೀರನ ಬಾಗಿಲು ಇದರ ಪಕ್ಕದಲ್ಲಿ ಮಣ್ಣಿನ ಅವಶೇಷಗಳಿಂದ ಕೂಡಿರುವ ರಣಕೊತ್ತಲುಗಳು ಶಿಥಿಲಾವಸ್ಥೆಯಲ್ಲಿವೆ. ಇಲ್ಲಿಂದ ನೇರವಾಗಿ ಪಶ್ಚಿಮ ಭಾಗದವರೆಗೆ ರಾಜಮಾರ್ಗವಿದ್ದು, ಹುಲಿಮುಖವೆಂದು ಕರೆಸಿಕೊಂಡಿರುವ ಮೈಲಾರನ ಬಾಗಿಲು ಈಗ ಸಂಪೂರ್ಣವಾಗಿ ಶಿಥಿಲಗೊಂಡಿದೆ. ಸ್ಥಳೀಯರು ಹೇಳುವಂತೆ ಕೋಟೆಯ ಉತ್ತರ ಭಾಗದಲ್ಲಿ ಕೋಟೆಯ ಒಳಭಾಗದಿಂದ ಕಂದಕಕ್ಕೆ ಹೋಗಲು ಒಂದು ಚೋರುಗಂಡೆ ಇತ್ತೆಂದು ಹೇಳುತ್ತಾರೆ. ಹಾಗೆಯೇ ಅದರ ಅವಶೇಷಗಳನ್ನು ತೋರಿಸುತ್ತಾರೆ. ಇಂತಹ ಚೋರಗಂಡಿಗಳು ಬಹಳ ಇದ್ದವೆಂದು ಮಲ್ಲಕವಿಯು ವರ್ಣಿಸಿರುವುದು ನೈಜನೀಯ. ಅಲ್ಲದೇ, ರಾಮಕವಿ ಹೇಳುವಂತೆ ಎರಡೂ ಬಾಗಿಲುಗಳ ಮಧ್ಯೆ ಇದ್ದ ಬೀದಿಯೇ ಸೂರ್ಯಬೀದಿಯಾಗಿರಬಹುದು. ಶಶಿಬೀದಿಯ ಎಲ್ಲಿ ಇತ್ತೆಂದು ಗುರುತಿಸಲು ಈಗ ಸಾಧ್ಯವಿಲ್ಲ. ಆದರೆ ಬ್ರಾಹ್ಮಣರ ಬೀದಿ, ತೇರು ಬೀದಿ, ಆಚಾರ ಬೀದಿಗಳು ಈಗಲೂ ಇವೆ.

ಕೋಟೆಯ ಸುತ್ತ ಹೊರಭಾಗದಲ್ಲಿ ಇರುವ ಭಾರೀ ಕಂದಕವು ಕೆರೆಯಂತಿದ್ದು ಇಡೀ ಕೋಟೆಯನ್ನಾವರಿಸಿದ್ದು, ಬೂದಿಹಾಳು ಕೋಟೆಯನ್ನು ಒಂದು ರೀತಿ ಜಲದುರ್ಗವನ್ನಾಗಿಸಿದೆ. ಈ ಕಂದಕದ ತಳಪಾಯ ೩೫ ಮೀ. ಅಗಲವಿದ್ದು, ಮೇಲೆ ಹೋಗುತ್ತ ೬೦ ಮೀ. ನೊಂದಿಗೆ ಕೊನೆಗೊಂಡಿದೆ. ಮೇಲಿನಿಂದ ಕೆಳಕ್ಕೆ ೨೦ ಅಡಿ ಆಳವಿದೆ. ಇಂತಹ ಕಂಕದವನ್ನು ಕುಮಾರರಾಮನ ಲಾವಣಿಯೊಂದು ಈ ರೀತಿ ವರ್ಣಿಸುತ್ತದೆ :

ಕಾಳಕಟ್ಟಿಗೋಗುವಾಗ ಅವರ ತಾಯಿವ್ವೇನಂದಾಳ

ಜ್ವಾಕಿ ಕಂದಯ್ಯ ಜತನಾವೆ | ಬೂದಾಳ

ಅಗಳ ಏರಿಯ ಮುರಿದೋಳು[೧೨೩]

ಇಂತಹ ಅಗಳುವಿನ ಮಣ್ಣನ್ನು ಕೋಟೆಗೋಡೆಗೆ ಹಾಕಿ ವಪ್ರವನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಈಗಲೂ ಈ ಇಳಿವೋರೆಯನ್ನು ಕಾಣಬಹುದು. ಮಲ್ಲಕವಿಯು ವಿಶಾಲವಾದ ಕಂದಕದಲ್ಲಿ ತುಂಬಿದ ಜಲ, ಕಂದಕದಲ್ಲಿ ಮೀನು, ಮೊಸಳೆಗಳು ಇದ್ದವೆಂದು ಹೇಳುತ್ತಾನೆ.

ಕೋಟೆಯ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಆಂಜನೇಯ ದೇವಾಲಯಗಳಿವೆ. ಪಶ್ಚಿಮ ದಿಕ್ಕಿನ ಆಂಜನೇಯ ೬.೭ ಅಡಿ ಎತ್ತರವಿದೆ. ಪೂರ್ವಭಾಗದಲ್ಲಿ ಕಾಳಿಕಾದೇವಿ ಗುಡಿಯಿದೆ. ಈ ದೇವಾಲಯದ ಮುಂದೆ ೨೦ ಅಡಿ ಎತ್ತರದ ಜೋಡಿ ದೀಪಸ್ತಂಭ ಹಾಗೂ ಜೋಡಿಕಂಬಗಳಿವೆ. ಸಾಮಾನ್ಯವಾಗಿ ದೇವಾಲಯದ ಸುತ್ತ ಪ್ರಾಕಾರವಿರುವುದರಿಂದ ಈ ಜೋಡಿಕಂಬಗಳು ದೇವಾಲಯದ ಒಳಗೆ ಹೋಗುವಾಗ ಇದ್ದ ದ್ವಾರದ ಕಂಬಗಳಾಗಿರಬಹುದು. ಇದರ ಹಿಂಭಾಗದಲ್ಲಿರುವ ವೀರಭದ್ರ ದೇವಾಲಯ ಸುಂದರ ರಚನೆಯಾಗಿದೆ. ಗರ್ಭಗೃಹ, ನವರಂಗ, ಮುಖಮಂಟಪಗಳನ್ನೊಳಗೊಂಡ ದೇವಾಲಯ ಸುಂದರ ಶಿಲ್ಪ ಕೆತ್ತನೆಯನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಕಪ್ಪುಶಿಲೆಯ ವೀರಭದ್ರ, ನವರಂಗದಲ್ಲಿ ಭದ್ರಕಾಳಿ, ಗುಂಡಬ್ರಹ್ಮಯ್ಯ ಶಿಲ್ಪಗಳಿವೆ. ಮಂಟಪದಲ್ಲಿ ನಾಲ್ಕು ಸ್ತಂಭಗಳಿವೆ. ದೇವಾಲಯದ ಸುತ್ತ ಲಜ್ಜಾಗೌರಿ, ಬಸವ, ಗಜ, ಕಾಮಧೇನು ಮುಂತಾದ ಶಿಲ್ಪಗಳಿವೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಚಿಕ್ಕ ಈಶ್ವರ ದೇವಾಲಯವಿದೆ. ಕೋಟೆಯ ಪಶ್ಚಮ ಭಾಗದಲ್ಲಿ ವಿಜಯನಗರ ಶೈಲಿಯ ಲಕ್ಷ್ಮೀಕಾಂತ ದೇವಾಲಯ ಹಂಪಿಯ ಹಜಾರರಾಮಸ್ವಾಮಿ ದೇವಾಲಯವನ್ನು ನೆನಪಿಗೆ ತರುತ್ತದೆ. ಈ ದೇವಾಲಯವನ್ನು ಕ್ರಿ.ಶ.೧೫೫೯ರಲ್ಲಿ ಶ್ರೀಪತಿ ರಂಗರಾಜನು ಕಟ್ಟಿಸಿದನೆಂದು ಹೇಳಲಾಗಿದೆ.[೧೨೪] ಆದರೆ ಶೈಲಜಾ ಅವರು ಈ ದೇವಾಲಯವು ಕ್ರಿ.ಶ.೧೫೫೦ಕ್ಕಿಂತ ಮುಂಚೆಯೇ ನಿರ್ಮಾಣಗೊಂಡಿತ್ತು ಎಂದು ಹೇಳುತ್ತಾರೆ.[೧೨೫] ಈ ದೇವಾಲಯದ ಗರ್ಭಗುಡಿ ಸಂಪೂರ್ಣವಾಗಿ ನಾಶಹೊಂದಿದೆ. ಕೇವಲ ಮಂಟಪದ ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಮಂಟಪದಲ್ಲಿ ನಾಟ್ಯಸುಂದರಿ, ಕಾಮಧೇನು, ನರಸಿಂಹ ಮುಂತಾದ ಶಿಲ್ಪಗಳು ನೋಡಲು ಸೊಗಸಾಗಿವೆ.

ಮಂಟಪದ ಪಶ್ಚಿಮಕ್ಕೆ ಒಂದು ಸುಂದರವಾದ ಕಲ್ಯಾಣಿ ಇದೆ. ಇದನ್ನು ಸ್ಥಳೀಯರು ಲಕ್ಷ್ಮೀಕಾಂತ ಕಾರಂಜಿ ಎಂದು ಕರೆಯುತ್ತಾರೆ. ಒಂದೆ ಇಲ್ಲಿ ತಪ್ಪೋತ್ಸವ ನಡೆಯುತ್ತಿತ್ತು ಎಂದು ಹೇಳಲಾಗಿದೆ.

ಸುಂದರವಾಗಿ ಕಲ್ಲಿನ ಕಟ್ಟಡದಲ್ಲಿ ರಚನೆಗೊಂಡಿರುವ ಈ ಕಲ್ಯಾಣಿಯ ಹಿಂಭಾಗ ಸಿದ್ಧಕವಿ ವರ್ಣಿಸಿರುವಂತೆ ಹೂದೋಟ, ತೆಂಗು, ಖರ್ಜೂರ ಬೆಳೆಯುವ ಶೃಂಗಾರ ತೋಟವಿತ್ತೆಂದು ತಿಳಿದುಬರುತ್ತದೆ. ಉಳಿದಂತೆ ಉಪ್ಪಾರ ಬಾವಿ(ಮಸೀದಿ), ಕುಮಾರರಾಮನ ಗರಡಿ, ನಿರಾಶೆಯ ಮಠ, ಬನಶಂಕರಿ, ಕೊಲ್ಲಾಪುರದಮ್ಮ, ಮೈಲಾರ ಲಿಂಗೇಶ್ವರ, ಬೀರಲಿಂಗೇಶ್ವರ ಮುಂತಾದ ದೇವಾಲಯಗಳಿವೆ.

೪.೧೨ ಸಿಂಗೇನಹಳ್ಳಿ(ರಂಗಯ್ಯನದುರ್ಗ)

ಸಿಂಗೇನಹಳ್ಳಿ ಕೋಟೆಯು ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿಯಿಂದ ೧೦ ಕಿ.ಮೀ. ದೂರದಲ್ಲಿದೆ. ರಾಮಗಿರಿಯಿಂದ ಸಿಂಗೇನಹಳ್ಳಿಗೆ ಹೋಗುವಾಗ ಕೆಂಚಾಪುರದ ಬಳಿ ಎಡಕ್ಕೆ ತಿರುಗಿ ೩ ಕಿ.ಮೀ. ದಕ್ಷಿಣಕ್ಕೆ ಪ್ರಯಾಣಿಸಿದರೆ, ಈ ಕೋಟೆಯನ್ನು ತಲುಪಬಹುದು. ಪ್ರಾಕೃತಿಕವಾಗಿ ಸುತ್ತಲೂ ಬೆಟ್ಟಗುಡ್ಡಗಳಿಂದ ಕೂಡಿರುವ ಈ ಪ್ರದೇಶದ ಮಧ್ಯಭಾಗದಲ್ಲಿರುವ ಎತ್ತರವಾದ ಗುಡ್ಡದ ಮೇಲೆ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ಈ ಕೋಟೆ ಗಿರಿದುರ್ಗವಾಗಿದೆ. ಸುಮಾರು ೪. ಕಿ.ಮೀ ವಿಸ್ತಾರವಾದ ಪ್ರದೇಶವನ್ನು ಬಳಸಿಕೊಂಡು ಈ ಬೆಟ್ಟದ ಮೇಲೆ ಕೋಟೆ ನಿರ್ಮಾಣವಾಗಿದೆ. ಸ್ಥಳೀಯರು ಇದನ್ನು ರಂಗಯ್ಯನ ದುರ್ಗ, ಜಾನೆರಂಗಪ್ಪನ ಬೆಟ್ಟ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಭೂನಕ್ಷೆಯಲ್ಲಿ ೭೬.೧೪ ಉತ್ತರ ಮತ್ತು ೧೩.೫೮ ಪೂರ್ವ ರೇಖಾಂಶದಲ್ಲಿದೆ. ಸಮುದ್ರಮಟ್ಟದಿಂದ ೩೩೪೮ ಅಡಿ ಎತ್ತರವಾಗಿದೆ.

ಸಿಂಗೇನಹಳ್ಳಿ ಅಥವಾ ರಂಗಯ್ಯನ ದುರ್ಗದ ಕೋಟೆಯ ಬಗ್ಗೆ ಸಾಹಿತ್ಯಿಕ ಆಧಾರಗಳಾಗಲಿ, ಶಾಸನಗಳಾಗಲಿ ಸದ್ಯದ ಮಟ್ಟಿಗೆ ದೊರಕಿಲ್ಲ. ಈ ಬೆಟ್ಟವನ್ನು ಅಧ್ಯಯನ ಮಾಡಲು ಇಲ್ಲಿರುವ ಕೋಟೆ ಮತ್ತು ದೇವಾಲಯಗಳೇ ಆಧಾರಗಳಾಗಿವೆ. ಎತ್ತರವಾದ ದೇವರಗುಡ್ಡ ಅರಣ್ಯ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಈ ಕೋಟೆ ಚಿತ್ರದುರ್ಗದ ಪಾಳೆಗಾರರ ಅವಧಿಯಲ್ಲಿ ನಿರ್ಮಾಣಗೊಂಡಿದೆ. ಕೋಟೆಯ ರಚನೆ ಮತ್ತು ವಿನ್ಯಾಸವನ್ನು ಗಮನಿಸಿದರೆ ಕ್ರಿ.ಶ.೧೬ ಅಥವಾ ೧೭ನೆಯ ಶತಮಾನದಲ್ಲಿ ನಿರ್ಮಾಣಗೊಂಡಿದೆ ಎನ್ನಬಹುದು. ಚಿತ್ರದುರ್ಗ ಪಾಳೆಗಾರರಿಗೆ ಪಶ್ಚಿಮ ಮತ್ತು ನೈರುತ್ಯ ದಿಕ್ಕುಗಳ ದಾಳಿಗಳನ್ನು ತಡೆಯಲು ಇದೊಂದು ಆಯಕಟ್ಟಿನ ಸ್ಥಳವಾಗಿತ್ತು.

ಚಿತ್ರದುರ್ಗದ ಪಾಳೆಯಗಾರ ಕಸ್ತೂರಿ ರಂಗಪ್ಪನಾಯಕನ ಹೆಸರಿನಲ್ಲಿ ನಿರ್ಮಾಣಗೊಂಡಿರುವ ಈ ಕೋಟೆಯು ನಂತರದ ಪಾಳೆಯಗಾರರು ಇದನ್ನು ವಿಸ್ತರಿಸಿ ಭದ್ರಗೊಳಿಸಿದಂತೆ ಕಂಡುಬರುತ್ತದೆ. ಈತನ

ಅವಧಿಯಲ್ಲಿ ತರೀಕೆರೆ ಪಾಳೆಗಾರರು ಈ ಭಾಗದಲ್ಲಿ ಪ್ರವೇಶಿಸಿ ಚಿತ್ರದುರ್ಗದ ಗಡಿಕೋಟೆಗಳಲ್ಲಿ ಮುತ್ತಿಗೆ ಹಾಕಿರುವುದನ್ನು ನಾವು ಗಮನಿಸಬಹುದು.[೧೨೬] ಮಲೆನಾಡಿನವರು ಹರಪ್ಪನಹಳ್ಳಿಯವರು, ತರೀಕೆರೆಯವರು ಮುಂತಾದ ಪಾಳೆಗಾರರ ಉಪಟಳವನ್ನು ತಡೆಯಲು ಇಲ್ಲಿ ಗಡಿಕೋಟೆಯನ್ನು ನಿರ್ಮಿಸಿ ಶಸ್ತ್ರಸಜ್ಜಿತವಾದ ಸೈನಿಕರು, ಸೇನಾಪತಿಗಳನ್ನು ಇಲ್ಲಿ ನೆಲೆಗೊಳಿಸಿರುವುದಾಗಿ ತಿಳಿದುಬರುತ್ತದೆ.

ಸಿಂಗೇನಹಳ್ಳಿಯ ಕೋಟೆಯು ಒಂದು ಗಿರಿದುರ್ಗವಾಗಿದ್ದು, ಎತ್ತರವಾದ ಗುಡ್ಡವನ್ನು ಬಳಸಿಕೊಂಡು ಈ ಕೋಟೆಯನ್ನು ಕಟ್ಟಲಾಗಿದೆ. ಕೋಟೆಯನ್ನು ಅನಿಯಮಿತಾಕಾರದಲ್ಲಿ ರಚಿಸಲಾಗಿದೆ. ಕೋಟೆಯಲ್ಲಿ ಶಿಥಿಲಗೊಂಡಿರುವ ಏಳುಬಾಗಿಲುಗಳನ್ನು ಒಳಗೊಂಡಂತೆ ಪೂರ್ವದಲ್ಲಿ ಎರಡು, ದಕ್ಷಿಣದಲ್ಲಿ ಮೂರು, ಉತ್ತರದಲ್ಲಿ ಎರಡು, ಸುತ್ತಿನ ಕೋಟೆಗೋಡೆಯನ್ನು ನಿರ್ಮಾಣ ಮಾಡಲಾಗಿದೆ. ಬೆಟ್ಟದ ತುದಿಯಲ್ಲಿ ಎತ್ತರವಾದ ಎರಡು ಬುರುಜುಗಳನ್ನು ನಿರ್ಮಿಸಿ, ಇವೆರಡು ಬುರುಜುಗಳ ಮಧ್ಯೆ ಎರಡು ಸುತ್ತಿನ ಕೋಟೆಯನ್ನು ನಿರ್ಮಿಸಿ ಕೋಟೆಗೆ ಶೋಭೆ ತರಲಾಗಿದೆ. ಅಲ್ಲದೆ, ಬುರುಜುಗಳಿಂದ ಈ ಪ್ರದೇಶವನ್ನು ರಕ್ಷಿಸಲಾಗಿದೆ. ಕೋಟೆಯ ಸುತ್ತಲೂ ದೊಡ್ಡ ಗುಡ್ಡ, ಕರಡಿಗುಡ್ಡ, ಚಿಜ್ಜನಕಲ್ಲು, ಬಾಚಿಗುಡ್ಡದ ಸಾಲುಗಳಿವೆ.

ಕೋಟೆಗೆ ಪಶ್ಚಿಮದ ಜಲಸರವನ್ನು ಸುತ್ತಿಕೊಂಡು ದಕ್ಷಿಣಭಾಗದಿಂದ ಪ್ರವೇಶ ಮಾಡಬಹುದಾಗಿದೆ. ದಕ್ಷಿಣದಲ್ಲಿ ಕೋಟೆಯಿರುವ ಇಳಿಜಾರು ಪ್ರದೇಶಕ್ಕೆ ೫೦ ಮೀಟರ್ ಎತ್ತರದ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಕಟ್ಟಡವು ಕಂದಕವಾಗಿಯೂ, ಈ ಭಾಗದ ಜನರಿಗೆ ನೀರುಣಿಸುವ ನೀರಿನ ತಾಣವೂ ಆಗಿದೆ. ಇದನ್ನು ಭೂತಪ್ಪನ ಹೊಂಡ ಎಂದು ಕರೆಯುತ್ತಾರೆ. ಈ ಹೊಂಡದ ಏರಿಯ ಮೂಲಕ ಕೋಟೆಯನ್ನು ಪ್ರವೇಶಮಾಡಿ ಹೊರಸುತ್ತಿನ ಕೋಟೆ ತಲುಪಬಹುದು. ಹೊರಸುತ್ತು ಮತ್ತು ಬೆಟ್ಟದ ಮೇಲ್ಭಾಗದ ಒಳಸುತ್ತುಗಳ ಮಧ್ಯೆ ಇಕ್ಕಟ್ಟಾದ ಕಣಿವೆ ಪ್ರದೇಶವಿದ್ದು, ಕಣಿವೆ ಪ್ರದೇಶಗಳಿಗೆ ಅಡ್ಡಲಾಗಿ ಕೋಟೆಗೋಡೆ ಹಾಗೂ ಬಾಗಿಲುಗಳನ್ನು ನಿರ್ಮಿಸಲಾಗಿದೆ. ಒಳಭಾಗದಲ್ಲಿ ರಂಗಯ್ಯನ ಬಾಗಿಲು ಇದೆ. ಹೊರಸುತ್ತಿನ ಕೋಟೆಯ ಮುಂಭಾಗದಲ್ಲಿ ಕೋಟೆರಕ್ಷಕ ಹನುಮಂತನ ದೇವಾಲಯವಿದೆ. ದೇವಾಲಯದ ಪೂರ್ವಕ್ಕೆ ೧೦ ಅಡಿ ಅಗಲ, ೨೦ ಅಡಿ ಎತ್ತರವಾದ ಕೋಟೆ ಗೋಡೆಯು ವ್ಯವಸ್ಥಿತವಾಗಿ ನಿರ್ಮಿತವಾಗಿದೆ. ರಂಗಪ್ಪನ ದೇವಾಲಯದಿಂದ ಪ್ರಾರಂಭವಾದ ಈ ಕೋಟೆಯು ಸುಮಾರು ೧ ಕಿ.ಮೀ.ವರೆಗೂ ಎತ್ತರವಿದ್ದು, ಇದು ಭೂತಪ್ಪನ ಹೊಂಡದ ಬದಿಯಿಂದ ಪಶ್ಚಿಮದವರೆಗೂ ಮುಂದುವರೆದಿದೆ. ಬೆಟ್ಟದ ಪ್ರದೇಶ ಇಳಿಜಾರಾಗಿದ್ದು ಶತ್ರುಗಳು, ಸುಲಭವಾಗಿ ಈ ಪ್ರದೇಶಕ್ಕೆ ಲಗ್ಗೆ ಹಾಕಬಹುದಾಗಿರುವುದರಿಂದ

[illegible]

[illegible]

[illegible]

ಈ ಭಾಗದಲ್ಲಿ ಬಲಿಷ್ಠ ಹಾಗೂ ವ್ಯವಸ್ಥಿತವಾಗಿ ಕೋಟೆಯನ್ನು ನಿರ್ಮಿಸಲಾಗಿದೆ. ಉತ್ತರದ ಕೋಟೆಗೋಡೆಗೆ ೨೫ ಅಡಿ ಎತ್ತರದ ೨೦ ಮೀಟರ್ ವಿಸ್ತಾರವಾದ ವೃತ್ತಾಕಾರದ ಬರುಜುಗಳಿವೆ.

ಈ ಬುರುಜುಗಳ ಮಧ್ಯೆ ಉತ್ತರದಿಂದ ಪ್ರವೇಶಿಸಲು ಬಾಗಿಲು ಇದೆ. ಈ ಬಾಗಿಲಿಗೆ ರಂಗಯ್ಯನ ಬಾಗಿಲೆಂದು ಕರೆಯುತ್ತಾರೆ. ಬಾಗಿಲಿನ ಎರಡೂ ಕಡೆ ಪಹರೆ ಗೃಹಗಳಿವೆ. ಉತ್ತರದ ಹೊರಕೋಟೆಯ ಅಗಲ ೧೫ ಅಡಿ ಇದ್ದು, ಮೂರುಅಡಿ ಅಗಲದ ಅಟ್ಟಾಲಕವಿದೆ. ಅಟ್ಟಾಲಕದಲ್ಲಿ ಶತ್ರುಗಳನ್ನು ವೀಕ್ಷಿಸಲು ಹಾಗೂ ಬಂದೂಕುಗಳಿಂದ ಗುಂಡು ಹೊಡೆಯಲು ಕೋವಿಕಿಂಡಿಗಳಿವೆ. ಕೆಲವು ಕಡೆ ಈ ಅಟ್ಟಾಲಕವನ್ನು ೧೦ ಅಡಿಯವರೆಗೂ ವಿಸ್ತರಿಸಿ ಗೋಡೆಯನ್ನು ೫ ಅಡಿಗೆ ಇಳಿಸಲಾಗಿದೆ. ಕೋಟೆಗೋಡೆಗೆ ೨೫x೧೫ ಇಂಚು ದಪ್ಪದ ಕಲ್ಲುಗಳನ್ನು ಕೆಳಭಾಗಕ್ಕೆ ಬಳಸಿದ್ದಾರೆ. ಕೋಟೆಯ ಮೇಲ್ಭಾಗದಲ್ಲಿ ಚಿಕ್ಕಚಿಕ್ಕ ಕಲ್ಲುಗಳನ್ನು ಬಳಸಿದ್ದಾರೆ. ಕೋಟೆ ಗೋಡೆಗೆ ಕೆಸರು, ಮಣ್ಣನ್ನು ಬಳಸಲಾಗಿದೆ. ಮೇಲ್ಭಾಗದಲ್ಲಿ ೨೫ ಅಡಿ ಎತ್ತರ ೩೫ ಮೀ. ಸುತ್ತಳತೆಯ ಬುರುಜುಗಳನ್ನು ನಿರ್ಮಿಸಲಾಗಿದೆ. ಕೋಟೆಗೆ ಸ್ಥಳೀಯವಾಗಿ ಅನಿಯಮಿತಾಕಾರದ ಗ್ರಾನೈಟ್ ಕಲ್ಲುಗಳನ್ನು ಬಳಸಲಾಗಿದೆ. ಕೋಟೆಗೋಡೆಯ ಕೆಲವು ಕಡೆ ೧೫ ಅಡಿ ಅಗಲವಿದ್ದು, ೩೦ ಅಡಿಯವರೆಗೆ ಎತ್ತರವಾಗಿದೆ. ಕೋಟೆಗೋಡೆಗೆ ೧೦ ಅಡಿ ಅಗಲದ ವೇದಿಕೆಯನ್ನು ನಿರ್ಮಿಸಿ ಕೆಲವು ಕಡೆ ಭದ್ರಗೊಳಿಸಿದ್ದಾರೆ. ಪ್ರತಿ ಕೋಟೆಗೋಡೆಯಲ್ಲಿ ಕೋವಿಕಿಂಡಿಗಳನ್ನು ನಿರ್ಮಿಸಿ ಮೇಲ್ಭಾಗದಲ್ಲಿ ರಂಗಯ್ಯನ ದೇವಾಲಯವಿದೆ. ದೇವಾಲಯದಲ್ಲಿ ಯಾವುದೇ ಮೂರ್ತಿಶಿಲ್ಪ ಇಲ್ಲ. ದೇವಾಲಯದ ಮುಂಭಾಗದಲ್ಲಿ ದೇವರಹೊಂಡ ಮತ್ತು ಕಟ್ಟಡದ ಅವಶೇಷಗಳಿವೆ. ಕೋಟೆಯ ಪಶ್ಚಿಮದ ಹೊರಸುತ್ತಿನ ಕೋಟೆಯ ಕೆಳಭಾಗದಲ್ಲಿ ಗಾರೆ ಹೊಂಡ ಅಥವಾ ಗಚ್ಚಿನ ಹೊಂಡ ಇದೆ. ಉಳಿದಂತೆ ಎತ್ತರವಾದ ಹಾಗೂ ಕಡಿದಾದ ಬಂಡೆಯು ಇಲ್ಲಿ ಇರುವುದರಿಂದ ಕೋಟೆ ಗೋಡೆಯ ಅವಶ್ಯಕತೆಯನ್ನು ಈ ಬಂಡೆಯು ನಿರ್ವಹಿಸಿದೆ. ಈ ಪ್ರದೇಶವನ್ನು ಜೇನುಗೊಂದಿ ಎಂದು ಕರೆಯುತ್ತಾರೆ. ಈ ಕೋಟೆಯ ಸುತ್ತ ೫ ಕಿ.ಮೀ. ಪ್ರದೇಶದಲ್ಲಿ ಯಾವುದೇ ಗ್ರಾಮಗಳು ಇಲ್ಲದಿರುವುದರಿಂದ ಕೋಟೆಯು ದನಗಾಹಿಗಳ ದಾಳಿಗೆ ಸಿಗದೇ ಇತರೆ ಕೋಟೆಗಳಿಗಿಂತ ಅವಶೇಷಗಳು ಹೆಚ್ಚಾಗಿ ಉಳಿದುಕೊಂಡಿವೆ.

೪.೧೩ ರಾಮದುರ್ಗ ಕೋಟೆ(ಹೊಸಗುಡ್ಡ)

ರಾಮದುರ್ಗದ ಕೋಟೆಯು ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಯಿಂದ ದಕ್ಷಿಣಕ್ಕೆ ಸುಮಾರು ೮ ಕಿ.ಮೀ. ದೂರದಲ್ಲಿದೆ. ಹಟ್ಟಿ ಪಾಳೆಗಾರರಲ್ಲಿ(ನಾಯಕನಹಟ್ಟಿ) ಅತ್ಯಂತ ಪ್ರಸಿದ್ಧಿ ಪಡೆದ ಬೋಡಿ.

[illegible]

[illegible]

[illegible]

ಮಲ್ಲಪ್ಪನಾಯಕನು ತನ್ನ ಆಡಳಿತಾವಧಿಯಲ್ಲಿ ರಾಮದುರ್ಗದ ಕೋಟೆ ಮತ್ತು ಇಲ್ಲಿರುವ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದನೆಂದು ಹೇಳಲಾಗಿದೆ.[೨೬] ಹಟ್ಟಿ ಪಾಳೆಯಗಾರರಿಗೆ ರಾಮದುರ್ಗವು ಒಂದು ಆಯಕಟ್ಟಿನ ಸ್ಥಳವಾಗಿತ್ತೆನ್ನಬಹುದು. ಕೋಟೆಗೆ ಸ್ವಲ್ಪ ದೂರದಲ್ಲಿ ದೊರೆಗಳ ಹಟ್ಟಿ ಇದ್ದು, ಈಗಲೂ ಹಟ್ಟಿ ಮನೆತನಕ್ಕೆ ಸಂಬಂಧಪಟ್ಟ ಮನೆತನಗಳಿವೆ. ರಾಮದುರ್ಗವನ್ನು ಸ್ಥಳೀಯರು ಹೊಸಗುಡ್ಡವೆಂದೇ ಕರೆಯುತ್ತಾರೆ. ಹೊಸಗುಡ್ಡವು ಭೂನಕ್ಷೆಯಲ್ಲಿ ಅಕ್ಷಾಂಶ ೭೬°೩೨ ಉತ್ತರ ಮತ್ತು ಪೂರ್ವ ರೇಖಾಂಶವು ೧೪°೩೬ರಲ್ಲಿದ್ದು ಸಮುದ್ರಮಟ್ಟದಿಂದ ೬೬೩ ಮೀ. ಎತ್ತರದಲ್ಲಿದೆ.

ಸರಿಸುಮಾರು ಆಯತಾಕಾರದ ಕೋಟೆಯು ಎರಡು ಸುತ್ತನ್ನು ಒಳಗೊಂಡಿದೆ. ನೆಲಮಟ್ಟದಿಂದ ಸುಮಾರು ೨೦೦ ಅಡಿ ಎತ್ತರದಲ್ಲಿರುವ ಚಿಕ್ಕಗುಡ್ಡದ ಮೇಲೆ ಇರುವ ಕೋಟೆಯನ್ನು ಸ್ಥಳೀಯವಾಗಿ ದೊರೆಯುವ ಮಧ್ಯಮಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಹೊರಸುತ್ತಿನ ಕೋಟೆಯನ್ನು ಪೂರ್ವದಲ್ಲಿ ೧೯೫, ಪಶ್ಚಿಮದಲ್ಲಿ ೨೨೩, ಉತ್ತರದಲ್ಲಿ ೧೬೦ ಮತ್ತು ದಕ್ಷಿಣದಲ್ಲಿ ೭೦ ಮೀ. ವಿಸ್ತಾರದಲ್ಲಿ ಕಟ್ಟಲಾಗಿದೆ. ಹೊರಸುತ್ತಿನ ಕೋಟೆಗೋಡೆ ಎತ್ತರ ೨೦ ಅಡಿ ಎತ್ತರ ೧೦ ಅಡಿ ಅಗಲವಿದೆ. ಈ ಸುತ್ತಿನಲ್ಲಿ ಪೂರ್ವ, ಉತ್ತರ ಹಾಗೂ ದಕ್ಷಿಣದಲ್ಲಿ ಮೂರು ದ್ವಾರಗಳಿವೆ. ಪೂರ್ವದ್ವಾರಕ್ಕೆ ಇರುವ ಬಾಗಿಲ ಪಕ್ಕದ ಕೊತ್ತಲುಗಳು ೩೫ ಮೀ. ಸುತ್ತಳತೆಯನ್ನು ಹೊಂದಿವೆ. ಮತ್ತೆ ಕೆಲವು ೨೫ ಮೀ. ಸುತ್ತಳತೆಯಲ್ಲಿವೆ. ಚೌಕಾಕಾರದ ಬುರುಜುಗಳು ೮x೮ ಚ.ಮೀ. ವಿಸ್ತಾರ ಹೊಂದಿವೆ. ಕೋಟೆಯ ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಹಾಗೂ ಸುಂದರ ರಚನೆಯುಳ್ಳ ಕೊತ್ತಲಗಳಿವೆ. ಕೊತ್ತಲಗಳಿಗೆ ಹೊಂದಿಕೊಂಡಿರುವ ಕೋಟೆಗೋಡೆಗೆ, ಪೂರ್ವ ಮತ್ತು ದಕ್ಷಿಣದಲ್ಲಿ ಎರಡೆರಡು, ಪಶ್ಚಿಮದಲ್ಲಿ ಮೂರು ಚೌಕಾಕಾರದ ಬುರುಜುಗಳಿವೆ. ಹೊರಕೋಟೆಯ ಉತ್ತರಭಾಗದಲ್ಲಿ ಅನೇಕ ಕಟ್ಟಡದ ಅವಶೇಷಗಳಿವೆ. ಪಶ್ಚಿಮದಲ್ಲಿ ಹೊರಕೋಟೆ ಮತ್ತು ಒಳಕೋಟೆಯ ಮಧ್ಯಭಾಗದ ಬಂಡೆಯಲ್ಲಿ ಸುಂದರವಾದ ಗುಹಾಂತರ ದೇವಾಲಯವನ್ನು ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ.[೨೭] ಇದನ್ನು ರಾಮಲಿಂಗೇಶ್ವರ ದೇವಾಲಯವೆಂದೇ ಕರೆಯುತ್ತಾರೆ. ದೇವಾಲಯವನ್ನು ಒಂದೇ ಕಲ್ಲಿನಲ್ಲಿ ಕಡೆಯಲಾಗಿದ್ದು, ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ಅಪರೂಪದ ಗುಹಾಂತರ ದೇವಾಲಯ ಇದಾಗಿದೆ. ದೇವಾಲಯದ ಮುಂಭಾಗದಲ್ಲಿ ನಂದಿ ಇದೆ. ದೇವಾಲಯದಲ್ಲಿ ಪಕ್ಕದ ಬಂಡೆಯ ಮೇಲೆ ಅನೇಕ ಗೀರು ಚಿತ್ರಗಳಿವೆ. ಹೊರಸುತ್ತಿನ ಕೋಟೆಯ ಒಳಭಾಗದಲ್ಲಿ ಆಯತಾಕಾರದ ಮತ್ತೊಂದು ಸುತ್ತಿನ ಚಿಕ್ಕ ಕೋಟೆಯನ್ನು ಎತ್ತರದಲ್ಲಿ ನಿರ್ಮಿಸಲಾಗಿದೆ. ಈ ಕೋಟೆಯ ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಕೊತ್ತಲಗಳಿವೆ.

[illegible]

ಈ ಕೋಟೆಯು ಹೊರಕೋಟೆಯಿಂದ ಪೂರ್ವದಲ್ಲಿ ೫೦, ಪಶ್ಚಿಮದಲ್ಲಿ ೧೦, ಉತ್ತರದಲ್ಲಿ ೧೧೫ ಮತ್ತು ದಕ್ಷಿಣದಲ್ಲಿ ೧೮.೫ ಮೀ. ಅಂತರದಲ್ಲಿ ನಿರ್ಮಿಸಲಾಗಿದೆ. ಉತ್ತರದಲ್ಲಿ ಪೂರ್ವದಿಂದ ಪ್ರವೇಶಿಸಿ ದಕ್ಷಿಣಕ್ಕೆ ಹೋಗುವಂತೆ ೧೫ ಮೀ. ಉದ್ದ ೪.೨೦ ಮೀ. ಅಗಲದ ದ್ವಾರವನ್ನು ನಿರ್ಮಿಸಲಾಗಿದೆ. ದ್ವಾರದ ಒಳಭಾಗದಲ್ಲಿ ಪಹರೆಗೃಹದ ಅವಶೇಷಗಳಿವೆ. ಈ ಕೋಟೆಗೋಡೆಯು ೧೦ ಅಡಿ ಎತ್ತರವಾಗಿದೆ. ಒಳ ಮತ್ತು ಹೊರಕೋಟೆಗಳ ಕೆಳಭಾಗದಲ್ಲಿ ೫ ಅಡಿ ಎತ್ತರದವರೆಗೆ ದೊಡ್ಡ ದೊಡ್ಡ ಕಲ್ಲುಗಳಿಂದ ನಿರ್ಮಿಸಿ, ನಂತರ ಚಿಕ್ಕ ಚಿಕ್ಕ ತುಂಡು ಕಲ್ಲುಗಳನ್ನು ಬಳಸಿದ್ದಾರೆ. ಕಲ್ಲುಗಳು ಸಾಮಾನ್ಯವಾಗಿ ಚೌಕಾಕಾರವಾಗಿವೆ. ಗೋಡೆಯಲ್ಲಿ ಎಲ್ಲೂ ಗಾರೆಯನ್ನು ಉಪಯೋಗಿಸದೆ ಕೆಸರುಮಣ್ಣನ್ನು ಬಳಸಲಾಗಿದೆ. ಕೋಟೆಯ ಗೋಡೆಗೆ ಎಲ್ಲೂ ಬಂದೂಕು ಕಿಂಡಿಗಳಿಲ್ಲ.

ಒಳಸುತ್ತಿನ ಕೋಟೆಯ ಮಧ್ಯಭಾಗದಲ್ಲಿ ಬಂಡೆಯಲ್ಲಿ ಕೊರೆದು ನಿರ್ಮಿಸಿರುವ ಅಕ್ಕತಂಗಿಯರ ಎರಡು ಕಲ್ಲಿನ ತೊಟ್ಟಿಗಳಿವೆ. ಮೊದಲನೇ ತೊಟ್ಟಿಯನ್ನು ೧೫.೬x೧೫x೭ ಅಡಿಗಳಲ್ಲಿ ನಿರ್ಮಿಸಿದ್ದಾರೆ. ಎರಡನೇ ತೊಟ್ಟಿಯನ್ನು ೧೮x೧೭.೪x೧೦ ಅಡಿಗಳು ನಿರ್ಮಿಸಲಾಗಿದೆ. ಎರಡು ತೊಟ್ಟಿಗಳನ್ನು ವ್ಯವಸ್ಥಿತವಾಗಿ ಕಡೆಯಲಾಗಿದೆ. ಇವುಗಳ ಪಕ್ಕದಲ್ಲಿಯೇ ನೈಸರ್ಗಿಕವಾದ ಮೂರು ಹೊಂಡಗಳಿವೆ. ಇವು ಕೋಟೆಯ ಒಳಗಿರುವವರಿಗೆ ನೀರಿನ ಆಶ್ರಯ ತಾಣಗಳಾಗಿದ್ದವು. ಹೊರಕೋಟೆಯ ವಾಯುವ್ಯ ಕೊತ್ತಲದಿಂದ ಸ್ವಲ್ಪ ದೂರದಲ್ಲಿ ಮೆಟ್ಟಿಲುಗಳುಳ್ಳ ಹಾಗೂ ನಯಗೊಳಿಸಿದ ಬಿಳಿ ಗ್ರಾನೈಟ್‌ಗಳಿಂದ (೪.೫x೪.೫) ನಿರ್ಮಿಸಿರುವ ಎರಡು ಬಾವಿಗಳಿವೆ. ಬಾವಿಯ ಗೋಡೆಯ ಮೇಲೆ ವೀರಭದ್ರ, ಕಾಲಭೈರವ ನವಿಲಿನ ಮೇಲೆ ಕುಳಿತ ಕುಮಾರಸ್ವಾಮಿ, ಗಣೇಶ, ಚಕ್ರ, ಮೀನು, ಆನೆ ಮುಂತಾದ ಉಬ್ಬು ಚಿತ್ರಗಳಿವೆ. ಈ ಬೆಟ್ಟದ ತುಂಬಾ ಚಿಕ್ಕ ಚಿಕ್ಕ ಕಲ್ಲುಗಳನ್ನು ಮಂಟಪಾಕಾರದಲ್ಲಿ ನಿಲ್ಲಿಸಿದ್ದಾರೆ. ಬೆಟ್ಟಕ್ಕೆ ಭೇಟಿ ನೀಡಿದವರೆಲ್ಲಾ ಈ ರೀತಿಯ ಚಿಕ ಚಿಕ್ಕ ಮೂರು ಕಲ್ಲುಗಳ ಮನೆಗಳನ್ನು ಕಟ್ಟುತ್ತಾರೆ. ಹೀಗೆ ಮಾಡಿದರೆ ಮಕ್ಕಳಾಗದ ದಂಪತಿಗಳಿಗೆ ಸಂತಾನ ಪ್ರಾಪ್ತಿಯಾಗುತ್ತದೆ ಎಂದೂ ಹಾಗೂ ಈ ದೇವಾಲಯದ ದರ್ಶನ ಮಾಡಿದರೆ ಕಾಶಿಯಾತ್ರೆಯ ಪುಣ್ಯ ಸಿಗುತ್ತದೆ ಎಂಬ ಜನಪದರ ನಂಬಿಕೆಯಾಗಿದೆ. ಪ್ರತಿ ಶಿವರಾತ್ರಿಯ ವಿಶೇಷ ಭಜನೆ, ಪೂಜೆಗಳು ಇಲ್ಲಿ ನಡೆಯುತ್ತವೆ.

ರಾಮಲಿಂಗೇಶ್ವರ ಗುಹಾಲಯದ ಬಳಿ ಹಾಗೂ ಎರಡು ಸುತ್ತಿನ ಕೋಟೆಯೊಳಗೆ ಇರುವ ಬಂಡೆಯ ಮೇಲೆ ಸಾವಿರಾರು ಗೆರೆಗಳನ್ನು ಕೆತ್ತಲಾಗಿದೆ. ಈ ಗೆರೆಗಳು ೧ ರಿಂದ ೩ ಸೆಂ.ಮೀ. ಉದ್ದವಾಗಿವೆ. ಈ ಚುಕ್ಕೆಗಳ ಶಿಲ್ಪ ಹಾಗೂ ಗೆರೆಗಳು, ಶಿಲ್ಪಿಗಳು ಕೆಲಸ ಮಾಡಿದ ದಿನಗಳ ಸಂಖ್ಯೆಯನ್ನು

[illegible]

[illegible]

[illegible]

ಸೂಚಿಸುತ್ತಿರಬಹುದು. ಅಲ್ಲದೆ ಇಲ್ಲಿ ಕಂಡುಬರುವ ಬ, ನಿ, ಗು, ಶ, ಯ, ವ, ಕ, ಸಿ ಮುಂತಾದ ಅಕ್ಷರಗಳು ವ್ಯಕ್ತಿಯ ಪ್ರಾರಂಭದ ಹೆಸರುಗಳನ್ನು ಸೂಚಿಸುವ ಸಾಧ್ಯತೆಯಿದೆ. ಇವು ಕೋಟೆನಿರ್ಮಾಣ ಅಥವಾ ವ್ಯಕ್ತಿಯ ಗುರುತುಗಳು ಅಥವಾ ಗುಹಾನಿರ್ಮಾಣ ಕೆಲಸದ ಗುರುತುಗಳೂ ಆಗಿರಬಹುದು. ಅದರಂತೆ ಇಲ್ಲಿ ಸಿ ಎಂಬ ಅಕ್ಷರ ಮುಂದೆ ೨೪ ಗೆರೆಗಳನ್ನು ಮೂರು ಸಾರಿ ಕೆತ್ತಿ ೨೪ರ ನಂತರ ಒಂದು ಉದ್ದನೆಯ ತ್ರಿಶೂಲವಿರುವಂತೆ ಚಿತ್ರಿಸಿ, ಮತ್ತೆ ೨೪ ಗೆರೆಗಳನ್ನು ಮೂಡಿಸಲಾಗಿದೆ. ಬಹುಶಃ ತಿಂಗಳಲ್ಲಿ ೨೪ ದಿ ಕೆಲಸ ಮಾಡಿರುವುದನ್ನು ಈ ಗೆರೆಗಳು ಸೂಚಿಸಬಹುದು. ಇದರ ಮುಂದೆ "ಅರಮನೆಗೆ ಮಾಡಿದ ನೆಗಬ" ಎಂಬ ಅಕ್ಷರಗಳುಳ್ಳ ಶಾಸನವಿದೆ. ಇಲ್ಲಿ ವಿಶ್ವ, ಬಾಲಯ ಎಂಬ ಹೆಸರುಗಳು ಕಂಡುಬಂದಿರುವುದರಿಂದ ಇವು ಶಿಲ್ಪಿಗಳ ಹೆಸರುಗಳೆಂಬುದು ಸ್ಪಷ್ಟ. ಇದರ ಪಕ್ಕದಲ್ಲಿ ಗುಹಾಂತರ ದೇವಾಲಯವಿರುವುದರಿಂದ ಗಮನಾರ್ಹ ಸಂಗತಿ ಗೆರೆಗಳನ್ನು ಬರೆದು ದಿನಗಳನ್ನು ಎಣಿಕೆ ಮಾಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ.

೪.೧೪ ಐಮಂಗಲದ ಕೋಟೆ

ಐಮಂಗಲವು ಚಿತ್ರದುರ್ಗ-ಹಿರಿಯೂರು ಮಧ್ಯೆ ರಾಷ್ಟ್ರೀಯ ಹೆದ್ದಾರಿ ನಂ. ೪ರಲ್ಲಿದೆ. ಐಮಂಗಲವು ಉತ್ತರ ಅಕ್ಷಾಂಶ ೧೪.೦೬, ಪೂರ್ವ ರೇಖಾಂಶ ೭೬.೩೨ರಲ್ಲಿದೆ. ನೊಳಂಬರ ಶಾಸನದಲ್ಲಿ ಐಮಂಗಲವನ್ನು 'ಐಯಪ್ಪಮಂಗಲ' ಎಂದು ಕರೆಯಲಾಗಿದೆ.[೧೨೯] ಈ ಅಯ್ಯಪ ಮಂಗಲದಿಂದಲೇ ಐಮಂಗಲ ಎಂಬ ಹೆಸರು ಬಂದಿದೆ. ಚಿತ್ರದುರ್ಗ ಪಾಳೆಯಗಾರ ಹಿರೆಮದಕರಿನಾಯಕನಿಂದ ವೀರಶೈವ ಅಯ್ಯನಿಗಾಗಿ(ಅರ್ಚಕ) ಕೋಟೆಯೊಂದು ಕಟ್ಟಿದುದರಿಂದ ಈ ಹೆಸರು ಬಂದಿತೆಂಬ ವಿವರಣೆಯಿದೆ. ದಾಸಯ್ಯನೊಬ್ಬ ತಾನು ಶಂಖವನ್ನೂದಿ ಗಂಟೆಯನ್ನು ಬಾರಿಸಿದಾಗ ಕೋಟೆಯನ್ನು ಕಟ್ಟಲು ಅಸ್ತಿಭಾರವನ್ನು ಹಾಕಿದರೆ ಕೋಟೆ ಅಜೇಯವಾಗಿ ಉಳಿಯುವುದಾಗಿಯೂ, ಆ ಪ್ರಕಾರ ಗ್ರಾಮಸ್ಥರು ಕಾಯುತ್ತಿರಲು ಬೇರೊಬ್ಬ ದಾಸಯ್ಯ ಆ ವೇಳೆಯಲ್ಲಿ ಸೂಚನೆ ನೀಡಲು ಕೋಟೆ ಕೆಲಸ ಪ್ರಾರಂಭವಾಯಿತು. ಈ ತಪ್ಪಿನಿಂದಾಗಿ ಕೋಟೆ ಅಭ್ಯುದಯ ಕಾಣಲಿಲ್ಲ ಎಂಬುದು ಐತಿಹ್ಯ.[೧೩೦]

ಶಾಸನೋಕ್ತವಾಗಿ ಈ ಊರಿನ ಚರಿತ್ರೆ ನೊಳಂಬರ ಕಾಲದಿಂದ ಪ್ರಾರಂಭವಾಗುತ್ತದೆ. ಕ್ರಿ.ಶ.ಸು.೯೭೫ರ ಕಂಬದೇವನ ಗುಡಿಯ ಶಾಸನದಿಂದ ಈ ಪ್ರದೇಶ ನೊಳಂಬರಿಗೆ ಸೇರಿತ್ತೆನ್ನಬಹುದು.[೧೩೧] ಐಮಂಗಲಕ್ಕೆ ೩ ಕಿ.ಮೀ. ದೂರದಲ್ಲಿರುವ ನೊಣಬಿ ಪಟ್ಟಣವು(ಬೇಚರಾಕ್) ನೊಳಂಬರ ಆಳ್ವಿಕೆಯನ್ನು

[illegible]

ಸಮರ್ಥಿಸುತ್ತದೆ.[೧೩೨] ಇವರ ತರುವಾಯ ಹರತಿವಂಶದ ಕೋಟೆಕೆರೆ ಅಬ್ಬೆನಾಯಕನ ಮಕ್ಕಳಾದ ಕಾಮಯ್ಯನಾಯ್ಕ ಈತನ ಸಹೋದರ ಬೊಮ್ಮಯ್ಯನಾಯಕನು ಐಮಂಗಲದಲ್ಲಿ ಆಳ್ವಿಕೆ ನಡೆಸಿದ್ದಾರೆ.[೧೩೩] ಹರತಿ ಪಾಳೆಯಗಾರರು ತಮ್ಮನ್ನು ಹರತಿ ಐಮಂಗಲದ ನಾಯಕರೆಂದೇ ಶಾಸನಗಳಲ್ಲಿ ಕರೆದುಕೊಂಡಿದ್ದಾರೆ.[೧೩೪] ಇವರು ಚಿತ್ರದುರ್ಗದ ಪಾಳೆಯಗಾರರಿಗೆ ಅಧೀನರಾಗಿ ಐಮಂಲದಲ್ಲಿ ಆಳ್ವಿಕೆ ನಡೆಸಿದ್ದಾರೆ.[೧೩೫] ಚಿತ್ರದುರ್ಗ ಪಾಳೆಯಗಾರ ಬಿಚ್ಚುಗತ್ತಿ ಭರಮಣ್ಣನಾಯಕರ ಪುತ್ರರಲ್ಲೊಬ್ಬರಾದ ಹುಚ್ಚುಲಿಂಗಣ್ಣನು ಪ್ರತಿದಿನ ಐಮಂಗಲಕ್ಕೆ ಭೇಟಿ ನೀಡಿ ಅಧಿಕಾರ ನಡೆಸಿದ್ದನೆನ್ನಲಾಗಿದೆ.[೧೩೬] ಹೀಗೆ ಕ್ರಮೇಣ ಚಿತ್ರದುರ್ಗ ಪಾಳೆಯಗಾರರು ಐಮಂಗಲದ ಕೋಟೆಯನ್ನು ತಮ್ಮ ರಾಜಕೀಯ ಹಾಗೂ ಸೈನಿಕ ನೆಲೆಯನ್ನಾಗಿ ಮಾಡಿಕೊಂಡರು. ಇವರ ತರುವಾಯ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಈ ಪ್ರದೇಶವನ್ನು ವಶಪಡಿಸಿಕೊಂಡರು.

ಚಿತ್ರದುರ್ಗ ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ಸ್ಥಳದುರ್ಗಗಳಲ್ಲಿ ಐಮಂಗಲದ ಕೋಟೆಯೂ ಒಂದು. ಕೌಟಿಲ್ಯನು ಹೇಳುವಂತೆ ರಾಜರು ಯುದ್ಧತಂತ್ರಗಳಿಗೆ ಅನುಗುಣವಾಗಿ ಸಮರ್ಥ ರಕ್ಷಣೆ ನೀಡಬಲ್ಲ ಕೋಟೆಗಳನ್ನು ಹೊಂದಿರಬೇಕು. ಈ ನಿಟ್ಟಿನಲ್ಲಿ ಐಮಂಗಲದ ಕೋಟೆಯು ಚಿತ್ರದುರ್ಗ ಪಾಳೆಯಗಾರರಿಗೆ ಒಂದು ಉತ್ತಮ ನೆಲೆಯಾಗಿತ್ತೆಂದು ಹೇಳಬಹುದು. ಏಕೆಂದರೆ ಕೋಟೆಯಲ್ಲಿ ಯಾವುದೇ ರೀತಿಯ ಸ್ಮಾರಕಗಳು ಇಲ್ಲದೆ, ಒಂದು ರೀತಿ ಗರಡಿ ಮನೆಯಂತೆ(ಸೈನಿಕ ತರಬೇತಿ ಶಿಬಿರ) ಇದೆ. ಚಿತ್ರದುರ್ಗ ಪಾಳೆಯಗಾರರ ಅಧೀನಕ್ಕೆ ಒಳಪಟ್ಟಿದ್ದ ಪೂರ್ವದ ದೊಡ್ಡೇರಿ, ಸಾಣೇಕೆರೆ, ಆಗ್ನೇಯ ಭಾಗದ ಹರತಿ, ವೇಣುಕಲ್ಲುಗುಡ್ಡ, ದಕ್ಷಿಣ ಭಾಗದ ಹಿರಿಯೂರು, ಭರಮಗಿರಿ ಕೋಟೆಗಳು ಚಿತ್ರದುರ್ಗಕ್ಕೆ ದೂರದಲ್ಲಿವೆ. ಮಧ್ಯಭಾಗದ ವಿಶಾಲವಾದ ಈ ಮೈದಾನ ಪ್ರದೇಶವು ಆಯಕಟ್ಟಿನ ಸ್ಥಳವೆಂದು ಯೋಚಿಸಿ, ಇಲ್ಲಿ ಕೋಟೆಯೊಂದನ್ನು ಕಟ್ಟಿ ಈ ಅಂತರವನ್ನು ಕಡಿಮೆ ಮಾಡಿರಬಹುದು. ಅಲ್ಲದೆ ಐಮಂಗಲದ ಕೋಟೆಯಲ್ಲಿ ಯಾವಾಗಲೂ ಶಸ್ತ್ರಸಜ್ಜಿತ ಸೈನಿಕ ಪಡೆಯನ್ನು ಇಟ್ಟು, ತುರ್ತು ಸಮಯದಲ್ಲಿ ಪೂರ್ವ ಮತ್ತು ಪಶ್ಚಿಮ ಗಡಿಕೋಟೆಗಳಿಗೆ ಐಮಂಗಲದಿಂದಲೇ ಸೈನ್ಯವನ್ನು ಕಳುಹಿಸುವ ವ್ಯವಸ್ಥೆ ಮಾಡಿಕೊಂಡಿರಬಹುದು. ಇವೆಲ್ಲವುಗಳಿಗಿಂತ ಮುಖ್ಯವಾಗಿ ರಾಜಧಾನಿಗೆ ಯಾವುದೇ ಅಪಾಯವು ಬಾರದಂತೆ ಇಲ್ಲಿ ಕೋಟೆ ಕಟ್ಟಿ ಸೈನ್ಯವನ್ನು ನೆಲೆಗೊಳಿಸಿದ್ದರು. ಇಂದು ವ್ಯವಸ್ಥಿತವಾಗಿ ನಿಂತಿರುವ ಕೋಟೆಯನ್ನು ಇತ್ತೀಚೆಗೆ ಪೋಲೀಸ್ ಇಲಾಖೆಯವರು ತರಬೇತಿ ಶಾಲೆಯನ್ನಾಗಿ ಮಾಡಿಕೊಂಡಿದ್ದಾರೆ.

ಆಯತಾಕಾರದಲ್ಲಿ ಕೋಟೆಯು ೧೬೮೫ ಮೀಟರ್ ವಿಸ್ತೀರ್ಣ ಹೊಂದಿದೆ. ಕೋಟೆಗೆ ಪೂರ್ವ, ಪಶ್ಚಿಮ ಮತ್ತು ಉತ್ತರದಲ್ಲಿ ಮುಖ್ಯದ್ವಾರಗಳಿವೆ. ಕೋಟೆಯ ನಾಲ್ಕು ಮೂಲೆಯಲ್ಲಿ ಎತ್ತರವಾದ ನಾಲ್ಕು ವೃತ್ತಾಕಾರದ ಕಾವಲು ಗೋಪುರಗಳಿವೆ. ಗೋಡೆಗೆ ಹೊಂದಿಕೊಂಡಂತೆ ಪೂರ್ವಭಾಗದಲ್ಲಿ ನಾಲ್ಕು, ಪಶ್ಚಿಮದಲ್ಲಿ ಮೂರು, ಉತ್ತರದಲ್ಲಿ ಒಂಬತ್ತು ಹಾಗೂ ದಕ್ಷಿಣದಲ್ಲಿ ಆರು ಚಚೌಕಾಕಾರದ ಬುರುಜುಗಳು ಸೇರಿದಂತೆ ಒಟ್ಟು ೨೨ ಬುರುಜುಗಳಿವೆ. ಕೋಟೆಯನ್ನು ನಾಲ್ಕು ಕಡೆಗಳಿಂದಲೂ ಕಂದಕ ಸುತ್ತುವರೆದಿದೆ. ಉತ್ತರದ ಕೋಟೆಗೋಡೆಯನ್ನು ಬಿಟ್ಟು ಉಳಿದ ಮೂರು ಕೋಟೆಗೋಡೆಗಳನ್ನು ಲಂಬಕೋನದಲ್ಲಿ ಕಟ್ಟಲಾಗಿದೆ. ಪ್ರತಿ ಕೋಟೆಗೋಡೆ ಹಾಗೂ ಬುರುಜುಗಳು ಉದ್ದ, ಅಗಲ ಮತ್ತು ಎತ್ತರದಲ್ಲಿ ಸಮಾನ ಅಂತರವನ್ನು ಕಾಯ್ದುಕೊಂಡಿವೆ. ಈ ದೃಷ್ಟಿಯಿಂದ ಹೊರಗಿನಿಂದ ಕೋಟೆ ನೋಡುವವರಿಗೆ ಬಹಳ ಸುಂದರವಾಗಿ ಕಾಣುವಂತೆ ವಿನ್ಯಾಸ ಮಾಡಲಾಗಿದೆ.

ಕೋಟೆ ಗೋಡೆಗೆ ಸ್ಥಳೀಯವಾಗಿ ಸಿಗುವ ಅನಿಯಮಿತಾಕಾರದ ಕರಿಚಕ್ಕೆ ಕಲ್ಲುಗಳನ್ನು ಬಳಸಿ ಕಟ್ಟಿದ್ದಾರೆ. ಕಲ್ಲಿನ ಗುಣಮಟ್ಟ ಅಷ್ಟೇನೂ ಪರಿಣಾಮಕಾರಿಯಾಗಿಲ್ಲವಾದರೂ ಗೋಡೆಯು ಎಲ್ಲೂ ಹಿಂದು ಮುಂದಾಗದಂತೆ ಎಚ್ಚರವಹಿಸಿ ಸಿಮೆಂಟ್ ಗೋಡೆಯ ರೀತಿ ಕಟ್ಟಿದ್ದಾರೆ. ಗೋಡೆಯ ಎತ್ತರ ೮ ರಿಂದ ೧೦ ಮೀಟರ್‌ನವರೆಗೆ ಇದೆ. ಅಗರ ೪.೫ ಅಡಿ ಇದ್ದು, ಕೋಟೆಯೊಳಗೆ ಚಲಿಸಲು ಮತ್ತು ಶತ್ರುಗಳನ್ನು ಒಳ ಗೋಡೆಯಿಂದ ವೀಕ್ಷಿಸಲು ಅನುಕೂಲವಾಗುವಂತೆ ೪ ಅಡಿ ಅಗಲದ ಅಟ್ಟಾಲಕವಿದೆ. ಸೈನಿಕರ ಗೋಡೆಯ ಹಿಂಭಾದಲ್ಲಿ ನಿಂತು ಬಂದೂಕು ಕಿಂಡಿಗಳ ಮುಖಾಂತರ ಶತ್ರುಗಳನ್ನು ವೀಕ್ಷಿಸಲು ಇಲ್ಲಿ ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ. ಅಲ್ಲದೆ ಕೋಟೆಯ ಗೋಡೆಯ ಮೇಲೆ ಸೈನಿಕರು ನಡೆದಾಡುವುದಕ್ಕೆ ೪ ಅಡಿ ವಿಸ್ತಾರದ ವೇದಿಕೆಯಿದೆ. ಗೋಡೆಗಳಿಗೆ ಬಳಸಿರುವ ಕಲ್ಲುಗಳು ಗುಣಮಟ್ಟ ವಿಲ್ಲದ ಕಾರಣ ಗೋಡೆಯ ದಪ್ಪವನ್ನು ಚಿಕ್ಕದಾಗಿ ಮಾಡಿದ್ದಾರೆ. ಒಳ ಮತ್ತು ಹೊರ ಕೋಟೆಯ ಮಧ್ಯೆ ಕೆಸರು ಮಣ್ಣನ್ನು ಬಳಸಲಾಗಿದೆ. ಅಗಲ ಕಡಿಮೆ ಇದ್ದು, ಬಾರಿ ಎತ್ತರದಲ್ಲಿ ನಿರ್ಮಾಣಗೊಂಡಿರುವ ಕೋಟೆ ಗೋಡೆಗೆ ಅಪಾಯ ಬಾರದಂತೆ ಕೋಟೆಯ ಒಳಭಾಗದಲ್ಲಿ ಗೋಡೆಯ ಎತ್ತರಕ್ಕೆ ತಕ್ಕಂತೆ ೧೨ ಮೀಟರ್ ಅಗಲದ ಮಣ್ಣಿನ ಇಳಿವೋರೆ ಅಥವಾ ವಪ್ರವನ್ನು ರಚಿಸಿದ್ದಾರೆ. ಗೋಡೆಗೆ ಎತ್ತರವಾಗಿ ಬಾರಿ ಮಣ್ಣನ್ನು ಹಾಕಿ ಗೋಡೆಗೆ ಭದ್ರತೆ ಒದಗಿಸಿದ್ದಾರೆ. ಹೊರಗಿನಿಂದ ಕೋಟೆ ನೋಡುವವರಿಗೆ ಇದೊಂದು ಸಾಮಾನ್ಯ ರೀತಿಯ ಕೋಟೆಯಂತೆ ಕಂಡುಬಂದರೂ, ಗೋಡೆಯ ಹಿಂದೆ ಮಾಡಿರುವ ಈ ವ್ಯವಸ್ಥೆಯಿಂದ ಅಭೇದ್ಯ ಕೋಟೆಯಾಗಿದೆ. ಈ ಕೋಟೆಗೆ ಸ್ಥಳೀಯವಾಗಿ ಮತ್ತು ಪಕ್ಕದ

ಹಳ್ಳಿಯಾದ ಕಲ್ಲಟ್ಟಿ(ಕಲ್ಲುಹಟ್ಟಿ)ಯಿಂದಲೂ ಸಹ ಕಲ್ಲುಗಳನ್ನು ತರುತ್ತಿದ್ದರೆಂದು ಸ್ಥಳೀಯರಿಂದ ತಿಳಿದುಬರುತ್ತದೆ.

ಕಂದಕವನ್ನು ತೋಡುವಾಗ ದೊರೆತ ಕಲ್ಲುಗಳು ಕೋಟೆಗೋಡೆಗೆ ಸಹಾಯಕವಾದರೆ, ಮಣ್ಣು ಗೋಡೆಗೆ ಹಿಂದೆ ನಿರ್ಮಿಸುವ ಇಳಿವೋರೆ ಸಹಾಯಕವಾಗುತ್ತಿತ್ತು. ಕಂದಕವನ್ನು ಹೊಗೋಡೆಗೆ ೧೦ ಅಡಿ ದೂರದಲ್ಲಿ ನಿರ್ಮಿಸಿದ್ದಾರೆ. ಈ ಕಂದಕವು ೫೦ ಮೀಟರ್ ವಿಸ್ತಾರವಾಗಿ ನದಿಯೋಪಾದಿಯಲ್ಲಿ ಕೋಟೆಯನ್ನು ಸುತ್ತುವರೆದಿದೆ. ಗೋಡೆಗೆ ಯಾವುದೇ ಅಪಾಯಬಾರದಂತೆ ಅಲ್ಲಿಯೂ ಸ್ವಲ್ಪ ಎತ್ತರದಲ್ಲಿ ಮಣ್ಣಿನ ಇಳಿವೋರೆಯನ್ನು ರಚಿಸಲಾಗಿದೆ. ಕಂದಕದ ಒಳಮೈ ಕಲ್ಲಿನ ಕಟ್ಟಡ ರಚಿಸಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಪೂರ್ತಿ ಇದ್ದ ಕಟ್ಟಡವನ್ನು ಸ್ಥಳೀಯರು ಮನೆಕಟ್ಟಲು ಉಪಯೋಗಿಸಿದ್ದಾರೆ. ಕಂದಕಕ್ಕೆ ನೀರನ್ನು ಕೋಟೆಯ ಉತ್ತರಭಾಗದಲ್ಲಿರುವ ಕೆರೆಯಿಂದ ತಂದಿದ್ದಾರೆ. ಕೋಟೆಯ ಉತ್ತರಕ್ಕೆ ಹಾಗೂ ಗೋಡೆಯ ಮಧ್ಯಭಾಗಕ್ಕೆ ಉತ್ತರ-ದಕ್ಷಿಣವಾಗಿ ಕೆರೆಯ ಏರಿಯನ್ನು ನಿರ್ಮಿಸಿ, ನೀರನ್ನು ತಡೆದು ಕೋಟೆಯ ಸುತ್ತಲೂ ಕಂದಕದಲ್ಲಿ ನೀರು ಹರಿಸಲಾಗುತ್ತಿತ್ತು. ಈಗಲೂ ಕೆರೆಯಲ್ಲಿ ನೀರಿದ್ದರೆ ಉತ್ತರದ ಕಂದಕದಲ್ಲಿ ಸದಾ ನೀರು ಇರುತ್ತದೆ. ಕೆರೆಯ ಏರಿ ಇರುವ ಭಾಗದಿಂದ ಸುಮಾರು ೧೦೦ ಮೀಟರ್ ಕಂದಕವಿಲ್ಲ. ಇಲ್ಲಿ ಕೆರೆಯೇ ಕಂದಕದ ಪಾತ್ರವಿಹಿಸಿದೆ.

ಕೋಟೆಯ ನಾಲ್ಕು ಮೂಲೆಯಲ್ಲಿರುವ ಬುರುಜುಗಳ ವಿನ್ಯಾಸ ವಿಶೇಷವಾಗಿದೆ. ಗೋಡೆಯಿಂದ ೧೩ ಮೀಟರ್ ಮುಂದಕ್ಕೆ ಚಾಚಿಕೊಂಡಿರುವ ಬುರುಜುಗಳು ೧೦ ಮೀಟರ್ ಎತ್ತರವಾಗಿವೆ. ಆಕಾರದಲ್ಲಿ ಚಚ್ಚೌಕವಾಗಿರುವ ಮುಂಚಾಚಿರುವ ಬುರುಜುಗಳು, ೭ ಮೀಟರ್ ಅಂತರದ ಮೇಲೆ ಕೋವಿಕಿಂಡಿಗಳಿವೆ. ಚೌಕಾಕಾರದ ಬುರುಜಿನ ಮೇಲೆ ಮಧ್ಯಭಾಗದಲ್ಲಿ ವೃತ್ತಾಕಾರದ ಕಾವಲು ಗೋಪುರಗಳಿವೆ. ಉಳಿದಂತೆ ಕೋಟೆಯಲ್ಲಿರುವ ೨೨ ಬುರುಜುಗಳಿಗೂ, ಒಂದು ಬುರುಜನಿಂದ ಮತ್ತೊಂದು ಬಿರುಜಿಗೆ ೬೦ ಮೀಟರ್‌ನಷ್ಟು ಸಮಾನಾಂತರವನ್ನು ಎಲ್ಲಾ ಕಡೆಗಳಲ್ಲಿ ಕಾಯ್ದುಕೊಳ್ಳಲಾಗಿದೆ. ಇವುಗಳು ಕೋಟೆಗೋಡೆ ಯಿಂದ ೬ ಮೀಟರ್ ಅಗಲದಿಂದ ಪ್ರಾರಂಭಿಸಿ ೧೦ ಮೀಟರ್‌ನಷ್ಟು ಮುಂದಕ್ಕೆ ವಿಸ್ತರಿಸಿದ್ದು ೯ ರಿಂದ ೧೦ ಮೀಟರ್‌ವರೆಗೆ ಅಗಲದಲ್ಲಿ ಕೊನೆಗೊಳಿಸಲಾಗಿದೆ. ಕಂದಕವೂ ಇವುಗಗಳಿಗೆ ತಕ್ಕಂತೆ ವಿಸ್ತಾರವಾಗುತ್ತಾ ಹೋಗಿದೆ.

ಕೋಟೆಯ ಪಶ್ಚಿಮಕ್ಕೆ ಗೋಡೆಯ ಮಧ್ಯಭಾಗದಲ್ಲಿ ಮುಖ್ಯದ್ವಾರವಿದೆ. ಗೋಡೆಯಿಂದ ಪಶ್ಚಿಮಕ್ಕೆ ೩೫ ಮೀಟರ್ ಉದ್ದದ ೧೦ ಮೀಟರ್ ಅಗಲದ ಗೋಡೆಯನ್ನು ಕಟ್ಟಿದ್ದಾರೆ. ಇದೇ ಗೋಡೆಯನ್ನು

[illegible]

[illegible]

[illegible]

[illegible]

[illegible]

ಪುನಃ ಉತ್ತರಕ್ಕೆ ೩೦ ಮೀಟರ್‌ವರೆಗೆ ವಿಸ್ತರಿಸಲಾಗಿದೆ. ಪುನಃ ೧೦ ಮೀಟರ್ ಗೋಡೆಯನ್ನು ಪೂರ್ವದ ಕಡೆ ತಂದು, ಉತ್ತರದಿಂದ ಕೋಟೆಯ ಪ್ರವೇಶ ಕಲ್ಪಿಸಿದ್ದಾರೆ. ದೂರದವರೆಗೆ ಈ ಬಾಗಿಲು ಇರುವುದು ಗೊತ್ತಾಗದಿರುವಂತೆ ಹೊರಭಾಗವನ್ನು ಕೋಟೆಯ ಗೋಡೆಯ ಹಾಗೆ ಕಾಣುವಂತೆ ಕಟ್ಟಿದ್ದಾರೆ. ದ್ವಾರದ ಇಕ್ಕೆಲಗಳಲ್ಲಿ ಎತ್ತರವಾಗಿ ನಿಂತಿರುವ ಪ್ರಕಾರಗಳ ನಡುವೆ ಸಾಗುವ ಒಳದಾರಿ ಇದೆ. ಈ ದಾರಿಯು ಅಕ್ರಮಣ ಕಾಲದಲ್ಲಿ ವೈರಿಗಳನ್ನು ಪೇಚಿಗೆ ಸಿಲುಕಿಸಿ ನಿರ್ನಾಮ ಮಾಡುವ ತಂತ್ರಕ್ಕನುಸಾರವಾಗಿ ನಿರ್ಮಿಸಲಾಗಿದೆ. ಉತ್ತರದಲ್ಲಿ ಕೆರೆಯ ಏರಿಯ ಪಕ್ಕ ಇರುವ ಬಾಗಿಲು ೧೫ ಮೀಟರ್ ಅಗಲ, ೧೫ ಮೀಟರ್ ಉದ್ದವಿದ್ದು ಅದೇ ತಂತ್ರವನ್ನು ಬಳಸಿದ್ದಾರೆ. ಪೂರ್ವದ ದ್ವಾರಬಾಗಿಲು ಕೋಟೆಗೆ ಪೂರ್ವದಿಂದ ನೇರವಾಗಿ ಬಂದು ದಕ್ಷಿಣಕ್ಕೆ ತಿರುಗಿ ಮತ್ತೆ ಕೋಟೆಯೊಳಗೆ ಉತ್ತರಕ್ಕೆ ಪ್ರವೇಶಮಾಡುವ ರೀತಿಯಲ್ಲಿ ನಿರ್ಮಾಣಗೊಂಡಿದೆ.

ಪಶ್ಚಿಮದ ದಿಕ್ಕಿನ ದ್ವಾರಬಾಗಿಲ ಹೊರಭಾಗದಲ್ಲಿ ಹೊಂಡವಿದೆ. ಹಾಗೆಯೇ ಒಲಭಾಗದಲ್ಲಿ ಪುಷ್ಕರಣಿ ಮತ್ತು ಬಾವಿಗಳಿವೆ. ಬಾವಿಯ ಪಕ್ಕದಲ್ಲಿ ಲಿಂಗಮುದ್ರೆ ಇರುವ ೨ ಕಲ್ಲುಗಳಿವೆ. ಈ ಕಲ್ಲಿನಲ್ಲಿ ಸೂರ್ಯ, ಚಂದ್ರ, ಶಂಕ ಚಿತ್ರಗಳ ಈ ಚಿನ್ಹೆ ಇದೆ. ಕೆರೆಕೋಟೆಯಲ್ಲಿ ಗ್ರಾಮದೇವತೆ ಕಲ್ಕುಂಟಮ್ಮನ ಗುಡಿ, ಕೆರೆಯ ಮಧ್ಯ ಈಶ್ವರ ದೇವಾಲಯಗಳಿವೆ. ಅಲ್ಲದೆ ಇಲ್ಲಿ ಒಂದು ವಿರಕ್ತಮಠ ಮತ್ತು ವೈಷ್ಣವ ಮಠಗಳಿದ್ದವೆಂದು ಹೇಳಲಾಗಿದೆ.[೧೩೬] ಈಗ ಗ್ರಾಮ ಇರುವ ಪ್ರದೇಶದಲ್ಲಿ ವೀರಭದ್ರ ದೇವಾಲಯವಿದೆ. ಗ್ರಾಮದ ಮುಖ್ಯ ರಸ್ತೆಯ ಉತ್ತರಕ್ಕೆ ವೈಷ್ಣವ ದೇವಾಲಯದ ಹತ್ತಿರದಲ್ಲಿದೆ. ಅಲ್ಲಿಯ ಭಗ್ನಾವಶೇಷ ಗಳನ್ನು ಗಮನಿಸಿದರೆ ಅಲ್ಲಿ ಒಂದು ಅರಮನೆ ಇತ್ತೆಂದು ಕಂಡುಬರುತ್ತದೆ. ಫ್ರಾನ್ಸಿಸ್ ಬುಕಾನನ್ ಕೂಡ ಕೋಟೆಗೆ ಭೇಟಿ ನೀಡಿ ತನ್ನ ಗ್ರಂಥದಲ್ಲಿ ವಿವರಣೆ ನೀಡಿದ್ದಾನೆ.[೧೩೭]

೪.೧೫ ಸಂತೆಗುಡ್ಡದ ಕೋಟೆ

ಸಂತೆಗುಡ್ಡವು ಮೊಳಕಾಲ್ಮೂರು ತಾಲ್ಲೂಕಿನ ರಾಂಪುರದಿಂದ ವಾಯುವ್ಯಕ್ಕೆ ೨೦ ಕಿ.ಮೀ. ದೂರದಲ್ಲಿದೆ. ರಾಂಪುರದಿಂದ ಮೇಗಳಕಣಿವೆ, ಕೆಳಗಳಕಣಿವೆ, ಪರ್ತೇನಹಳ್ಳಿಗಳ ಮೂಲಕ ಸಂತೇಗುಡ್ಡಕ್ಕೆ ತಲುಪಬಹುದು. ಈ ಗ್ರಾಮಕ್ಕೆ ಸಂತೇಗೋವಿ ಎಂಬ ಹೆಸರಿದ್ದಿತ್ತೆಂದು ತಿಳಿದುಬರುತ್ತದೆ.[೧೩೮] ಈ ಗ್ರಾಮದ ಗುಡ್ಡದ ಪಕ್ಕದಲ್ಲಿ ಹಿಂದಿನಿಂದಲೂ ಸಂತೆ ನಡೆಯುತ್ತಿದ್ದರಿಂದ ಸಂತದೇಗುಡ್ಡ ಎಂದು ಹೆಸರಾಗಿದೆ. ಸಂತೇಗುಡ್ಡವು ಭೂನಕ್ಷೆಯಲ್ಲಿ ಅಕ್ಷಾಂಶ ೭೪°೪೩ ಉತ್ತರ ಪೂರ್ವ ರೇಖಾಂಶ ೧೪°೫೮ ರವರೆಗೆ ವ್ಯಾಪಿಸಿದ್ದು, ಸಮುದ್ರಮಟ್ಟದಿಂದ ೨,೫೫೩ ಅಡಿ ಎತ್ತರದಲ್ಲಿದೆ.

[illegible]

[illegible]

[illegible]

ಸಂತೇಗುಡ್ಡದ ಇತಿಹಾಸ ತಿಳಿಯಲು ನಮಗೆ ಪ್ರಮುಖ ಸಾಹಿತ್ಯ ಮತ್ತು ಶಾಸನಾಧಾರಗಳು ಇಲ್ಲವಾದರೂ, ಇಲ್ಲಿರುವ ಸ್ಮಾರಕಗಳಾದ ಕೋಟೆಕೊತ್ತಲ, ಕಲ್ಲುಗಾಣ, ನೂರಾರು ಬಡಿಗಲ್ಲು, ವರ್ಣಚಿತ್ರ, ದೇವಾಲಯ, ಬಜಾರು ಮುಂತಾದವು ಪ್ರಮುಖ ಆಕರಗಳಾಗಿವೆ. ಸಂತೇಗುಡ್ಡವು ಪ್ರಾಚೀನ ಕಾಲದಿಂದಲೂ ಮಾನವನ ವಾಸಸ್ಥಾನವಾಗಿತ್ತೆಂದು ಇಲ್ಲಿರುವ ಅವಶೇಷಗಳಿಂದ ತಿಳಿದುಬರುತ್ತದೆ. ಮೌರ್ಯರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶವು ಅವರ ಅಧೀನವಾಗಿತ್ತೆಂದು ಹೇಳಬಹುದು. ಸಂತೆಗುಡ್ಡಕ್ಕೆ ಅನತಿ ದೂರದಲ್ಲಿರುವ ಜಟಂಗಿರಾಮೇಶ್ವರ, ಬ್ರಹ್ಮಗಿರಿಗಳಲ್ಲಿ ಅಶೋಕನ ಶಾಸನಗಳು ದೊರೆತಿರುವುದನ್ನು ಗಮನಿಸಬಹುದು. ವಿಜಯನಗರ ಅರಸರ ಕಾಲದಲ್ಲಿ ಹನೆಯನಾಡಿನೊಳಗೆ ಸಂತೇಗುಡ್ಡವು ಅಂತರ್ಗತವಾಗಿದ್ದಿತು. ವಿಜಯನಗರದ ಪತನಾನಂತರ ಗುಡೇಕೋಟೆ ಪಾಳೆಯಗಾರರು ಕೋಟೆಯ ಪಶ್ಚಿಮ ದಿಕ್ಕಿನಲ್ಲಿರುವ ಬಾಣರಾವಿ(ಬಾಂಡ್ರವಿ)ಯನ್ನು ಕೇಂದ್ರವಾಗಿಟ್ಟುಕೊಂಡು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಕ್ರಿ.ಶ.೧೬೬೫ರ ತಾಮ್ರ ಸಾಸನವೊಂದು ೩೩ ಹಳ್ಳಿಗಳ ಬಾಣರಾವಿ ಸೀಮೆಯನ್ನು ಬೋರಿನಾಯಕನು ಆಳುತ್ತಿದ್ದನೆಂಬ ಮಾಹಿತಿಯನ್ನು ನೀಡುತ್ತದೆ.[೧೪೦] ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಬಾಣರಾವಿಯು ಒಂದು ಸೀಮೆಯಾಗಿದ್ದುದನ್ನು ದಾಖಲೆಗಳು ದೃಢಪಡಿಸುತ್ತವೆ.[೧೪೧] ಸಾಮಾನ್ಯವಾಗಿ ಈ ಅವಧಿಯಲ್ಲಿ ಇಲ್ಲಿನ ಕೋಟೆಕೊತ್ತಲಗಳು ನಿರ್ಮಾಣಗೊಂಡಂತಿವೆ. ಚಿತ್ರದುರ್ಗ ಪಾಳೆಯಗಾರರ ನಂತರ ಹೈದರಾಲಿಯ ಮತ್ತು ಟಿಪ್ಪು ಅವರ ಅಧೀನಕ್ಕೊಳಪಟ್ಟಿತ್ತು. ಬ್ರಿಟೀಷರ ಕಾಲದಲ್ಲಿ ಸಂತೇಗುಡ್ಡದಲ್ಲಿ ಒಂದು ಪೋಲೀಸ್ ಠಾಣೆಯಿತ್ತೆಂದು ಕೋಟೆ ಕಾಯುತ್ತಿದ್ದ ಕಾವಲಿನ ಮನೆತನದವರು ಹೇಳುತ್ತಾರೆ.

ಗಿರಿದುರ್ಗವಾಗಿದ್ದ ಸಂತೇಗುಡ್ಡದ ಕೋಟೆಯು ಚಿತ್ರದುರ್ಗ ಪಾಳೆಯಗಾರರ ಕಾಲದ ಗಡಿಕೋಟೆಗಳಲ್ಲೊಂದಾಗಿತ್ತು. ರಾಯದುರ್ಗ, ಜರಿಮಲೆ ಮುಂತಾದ ಪಾಳೆಯಗಾರರ ಉಪಟಳವನ್ನು ತಡೆಯಲು ಇದೊಂದು ಆಯಕಟ್ಟಿನ ಪ್ರದೇಶವಾಗಿತ್ತು. ಅಲ್ಲದೇ ಸಂತೇಗುಡ್ಡವು ಪಂಚ ಕರಕುಶಲ ಕರ್ಮಿಗಳ ಕೈಗಾರಿಕಾನೆಲೆಯಾಗಿತ್ತು. ಇವರನ್ನು ಪಂಚಕರ್ಮಿಗಳು, ಪಾಂಚಾಳರು ಅಥವಾ ವಿಶ್ವಕರ್ಮರೆಂದು ಹೇಳಲಾಗಿದೆ. ಇವರನ್ನು ಬಡಗಿ, ಕಂಚುಗಾರ, ಅಕ್ಕಸಾಲಿ, ಶಿಲಾಶಿಲ್ಪಿ ಎಂದು ಲೌಕಿಕವಾಗಿ ಕರೆಯಲಾಗಿದೆ.[೧೪೨] ಸ್ಥಳೀಯ ತಾಮ್ರಶಾಸನವೊಂದು ಇವರ ಬಗ್ಗೆ ಮಾಹಿತಿ ನೀಡುತ್ತವೆ.[೧೪೩] ಅಲ್ಲದೆ, ಕೋಟೆಯಲ್ಲಿರುವ ಕಂಚುಗಾರರ ಬೀದಿ, ಕಲ್ಲುಗಾಣಗಳು, ನೂರಾರು ಬಡಿಗಲ್ಲುಗಳು ಇವರ ಇರುವಿಕೆಯನ್ನು ಸಮರ್ಥ ಪಡಿಸುತ್ತವೆ. ಇವರು ಪಕ್ಕದ ಗುಡ್ಡಗಳಲ್ಲಿ ಸಿಗುತ್ತಿದ್ದ ಅದಿರನ್ನು ಇಲ್ಲಿಗೆ

[illegible]

[illegible]

ತಂದು ಕರಗಿಸಿ ಲೋಹವನ್ನು ಬೇರ್ಪಡಿಸಿ, ವಿವಿಧ ಕರಕುಶಲ ವಸ್ತುಗಳನ್ನು ತಯಾರಿಸುತ್ತಿದ್ದರು. ಇವುಗಳನ್ನು ಇಲ್ಲಿಯೇ ನಡೆಯುತ್ತಿದ್ದ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ಹೀಗೆ ಒಂದು ಕಾಲದಲ್ಲಿ ಪ್ರಮುಖ ವಾಣಿಜ್ಯ ವ್ಯಾಪಾರಕೇಂದ್ರವಾಗಿದ್ದ ಈ ಪ್ರದೇಶದ ಜನರು ಹಾಗೂ ಸಂಪತ್ತನ್ನು ರಕ್ಷಿಸಲು ಸಂತೆ ಪ್ರದೇಶವನ್ನು ಸೇರಿದಂತೆ ಕೋಟೆಯನ್ನು ಕಟ್ಟಲಾಗಿದೆ.

ಸಂತೇಗುಡ್ಡದ ಕೋಟೆಯನ್ನು ಬೆಟ್ಟದ ಮೇಲೆ ಮೂರು ಹಂತದಲ್ಲಿ ನಿರ್ಮಿಸಲಾಗಿದೆ. ಬೂದ್ನುಗುಂಡು ಊರುಗುಡ್ಡಗಳ ಮಧ್ಯೆ ಇರುವ ಸ್ಥಳದುರ್ಗ, ಊರುಗುಡ್ಡಗಳ ಮೇಲೆ ಇರುವ ಎರಡು ಸುತ್ತಿನ ಕೋಟೆ ನಿರ್ಮಿಸಲಾಗಿದೆ. ಊರುಗುಡ್ಡ ಮತ್ತು ದಕ್ಷಿಣದಲ್ಲಿರುವ ಬೂದ್ನು ಗುಂಡುವನ್ನು ಬಳಿಸಿಕೊಂಡು ನಿರ್ವಿಸಿರುವ ಕೋಟೆಯಲ್ಲಿ ಈಗ ಗ್ರಾಮವಿದೆ. ದಕ್ಷಿಣದಲ್ಲಿ ಪೂರ್ವಪಶ್ಚಿಮವಾಗಿ ಹಬ್ಬಿರುವ ಬೂದ್ನುಗುಂಡು ಬೆಟ್ಟದ ಸಾಲು ಪ್ರಾಕೃತಿಕವಾಗಿ ಕೋಟೆಗೆ ರಕ್ಷಣೆ ನೀಡಿದೆ. ಬೂದ್ನುಗುಂಡಿಗೆ ಹತ್ತಿರವಿರುವ ಮಾನಪ್ಪನ ಬುರುಜಿನಿಂದ ಊರು ಗುಡ್ಡಕ್ಕೆ ಒಂದು ಸುತ್ತಿನ ಕೋಟೆ ಇದೆ. ಅದೇ ರೀತಿ ಊರುಕುಂಟೆ ಬುರುಜಿನಿಂದ ಬುರುಜುಗುಂಡಿನ ಮೂಲಕ ಗುಡ್ಡಕ್ಕೆ ಒಂದು ಸುತ್ತಿನ ಕೋಟೆಯನ್ನು ಕಟ್ಟಲಾಗಿದೆ. ಈ ಭಾಗದಲ್ಲಿ ಕೈಗಾರಿಕಾ ಪ್ರದೇಶ, ವಿಶಾಲವಾದ ಊರುಕುಂಟೆ, ಹನುಮಂತನಗುಡಿ, ನಗರೇಶ್ವರ, ಕಾಳಮ್ಮ ಮುಂತಾದ ಸ್ಮಾರಕಗಳಿವೆ. ಅಲ್ಲದೆ, ಕಾಳಮ್ಮನ ಬಜಾರು, ತೇರು ಬಜಾರು, ಕಂಚುಗಾರರ ಬೀದಿ, ನೂರಾರು ಅಡಿಗಲ್ಲುಗಳು ಈ ಭಾಗದಲ್ಲಿವೆ. ಇತ್ತೀಚಿನ ರಸ್ತೆಯು ಪೂರ್ವ ಮತ್ತು ದಕ್ಷಿಣದ ದ್ವಾರಬಾಗಿಲನ್ನು ಶಿಥಿಲಗೊಳಿಸಿದೆ.

ಕೋಟೆಯ ಗೋಡೆಯು ಅನಿಯಮಿತಾಕಾರದಲ್ಲಿದ್ದು, ಗುಡ್ಡದಲ್ಲಿ ಅವಶ್ಯಕತೆ ಇರುವ ಕಡೆ ಮಾತ್ರ ಕೋಟೆ ಕಟ್ಟಲಾಗಿದೆ. ಉಳಿದ ಕಡೆ ಕಡಿದಾದ ಬಂಡೆಗಳು, ಕೋಟೆಯ ಅವಶ್ಯಕತೆಯನ್ನು ದೂರಮಾಡಿವೆ. ಕೋಟೆಯ ಭಾಗಗಳು ತುಂಬಾ ಶಿಥಿಲಗೊಂಡಿವೆ. ದಕ್ಷಿಣದಿಂದ ಮೇಲುದುರ್ಗಕ್ಕೆ ಪ್ರವೇಶ ಮಾಡುವಾಗ, ಬಯಲು ದೊಣೆ ಸಿಗುತ್ತದೆ. ಇದರ ಪಕ್ಕದಲ್ಲಿ ಪೂರ್ವ ಮತ್ತು ಪಶ್ಚಿಮವಾಗಿ ಕಟ್ಟಿರುವ ಕೋಟೆ ಗೋಡೆ ಇದೆ. ಮೂರು ಅಡಿ ಅಗಲ, ಆರು ಅಡಿ ಎತ್ತರವಿರುವ ಕೋಟೆ ಗೋಡೆಗೆ ಮಧ್ಯಮ ಗಾತ್ರದ ಒರಟು ಕಲ್ಲನ್ನು ಉಪಯೋಗಿಸಲಾಗಿದೆ. ಕಲ್ಲುಗಳ ಹಂಚುಗಳು ಒಂದಕ್ಕೊಂದು ಸರಿಯಾಗಿ ಹೊಂದಿಕೊಳ್ಳದೆ ಉಂಟಾದ ಸಂದಿಗಳಲ್ಲಿ ಚಕ್ಕೆಕಲ್ಲುಗಳನ್ನು ಉಪಯೋಗಿಸಿದ್ದಾರೆ. ಕಲ್ಲುಗಳ ಮಧ್ಯದಲ್ಲಿ ಎಲ್ಲಿಯೂ ಗಾರೆಯನ್ನು ಬಳಸಿರುವುದಿಲ್ಲ. ಇಲ್ಲಿ ಸ್ವಾಭಾವಿಕ ದ್ವಾರವಿದ್ದು, ದ್ವಾರದ ಎರಡೂ ಕಡೆ ಪಹರೆ ಗೃಹದ ಅವಶೇಷಗಳಿವೆ. ದ್ವಾರದ ದಕ್ಷಿಣಕ್ಕೆ ಪೂರ್ವಪಶ್ಚಿಮವಾಗಿ ರಕ್ಷಣಾ ಗೋಡೆಯನ್ನು ನಿರ್ಮಿಸಿ ಬಾಗಿಲನ್ನು

[illegible]

ಮರೆಮಾಡಿದ್ದಾರೆ. ಈ ಬಾಗಿಲಿನ ಮುಂಭಾಗದಲ್ಲಿ ಆಂಜನೇಯ ದೇವಾಲಯವಿದೆ. ದೇವಾಲಯದ ಪಕ್ಕದಲ್ಲಿ ಬೃಹತ್ ಬಂಡೆಯ ಕೆಳಗಿರುವ ಗುಹೆಯನ್ನು ಗರಡಿ ಮನೆಯೆಂದು ಹೇಳಲಾಗುತ್ತದೆ. ಗುಹೆಯ ಮಧ್ಯೆ ಹಾಗೂ ಹೊರಗಡೆ ಬಂಡೆಯನ್ನು ಬಳಸಿಕೊಂಡು ಗೋಡೆ ಕಟ್ಟಿ ಗರಡಿಮನೆಯನ್ನು ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ಉಪ್ಪುದೊಣೆಯಿದೆ.

ಗರಡಿ ಮನೆಯ ಪೂರ್ವಕ್ಕೆ ವಕ್ರಮನ ಗುಂಡುಗಳು ಮತ್ತು ಅಕ್ಕತಂಗಿಯರ ದೊಣೆಗಳಿವೆ. ಈ ದೊಣೆಯನ್ನು ನಯಗೊಳಿಸಿದ ಕಲ್ಲುಗಳಿಂದ ನಿರ್ಮಿಸಿದ್ದಾರೆ. ಕಡಿದಾದ ಬಂಡೆಗೆ ಅಡ್ಡ ಕಟ್ಟಿರುವ ಗೋಡೆಯು ೫ ಮೀ. ಎತ್ತರವಿದ್ದು, ೪ ಅಡಿ ಅಗಲವಿದೆ. ಇಡೀ ಬೆಟ್ಟದಲ್ಲಿ ವ್ಯವಸ್ಥಿತವಾಗಿ ನಿರ್ಮಿಸಿರುವ ನೀರಿನ ತಾಣ ಇದಾಗಿದೆ. ಈ ಹೊಂಡದ ಮುಂಭಾಗ ಸುರಂಗಯ್ಯನ ಪೆಂಟೆ ಪಶ್ಚಿಮಕ್ಕೆ ಬೂದಿಸಿದ್ಧಪ್ಪನ ದೊಣೆ ಇದೆ. ಈ ಗುಡ್ಡದ ಮೇಲ್ಭಾಗವನ್ನು ಬಳಸಿಕೊಂಡು ಕಟ್ಟಿರುವ ಕೋಟೆಯನ್ನು ಮೇಲುದುರ್ಗ ಎಂದು ಕರೆಯುತ್ತಾರೆ. ಇಲ್ಲಿ ಕಾಳಮ್ಮನ ಬುರುಜು ಮತ್ತು ಚಿಲುಕುಂಟೆ ಬುರುಜುಗಳನ್ನು ಒಳಗೊಂಡಂತೆ ಒಂದು ಸುತ್ತಿನ ಕೋಟೆ ಇದೆ. ಈ ಕೋಟೆಯೊಳಗಡೆ ಗಚ್ಚುದೊಣೆ, ಕಟ್ಟಡದ ಅವಶೇಷಗಳಿವೆ. ಈ ಭಾಗದಿಂದ ಆಗ್ನೇಯ ದಿಕ್ಕಿನಲ್ಲಿರುವ ಎತ್ತರವಾದ ಪರ್ತೇನಹಳ್ಳಿ ಬುರುಜು, ಮೇಗಳಕಣಿವೆ, ಕೆಳಗಣ ಕಣಿವೆ ಬುರುಜುಗಳು, ಉತ್ತರದಲ್ಲಿ ಬಾಣರಾವಿ ಕೋಟೆ ಕಾಣುತ್ತವೆ. ಕೋಟೆಯ ಪಶ್ಚಿಮ ಭಾಗದಲ್ಲಿ ಭಾರೀ ಕಡಿದಾದ ಬಂಡೆಯಿದ್ದು ಇದು ಕೋಟೆಗೆ ರಕ್ಷಣೆ ನೀಡಿದೆ. ಈ ಭಾಗಕ್ಕೆ ಜೇನುಗೊಂದಿ ಎಂದು ಕರೆಯುತ್ತಾರೆ. ಮ್ಯಾದಾರಪಡೆ ಎಂದು ಕರೆಯುವ ಗುಹೆಯೊಂದರಲ್ಲಿ ಪ್ರಾಚೀನ ಗುಹಾವರ್ಣ ಚಿತ್ರಗಳಿವೆ. ಹೀಗೆ ಸಂತೇಗುಡ್ಡದ ಕೋಟೆಯ ಪರಿಸರವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ.

೪.೧೬ ತುರುವನೂರು ಕೋಟೆ

ತುರುವನೂರು ಚಿತ್ರದುರ್ಗದಿಂದ ಉತ್ತರಕ್ಕೆ ೨೨ ಕಿ.ಮೀ. ದೂರದಲ್ಲಿದೆ. ಹಿಂದೆ ಈ ಊರಿಗೆ ತುರುಬಯಲು ಎಂದು ಕರೆಯಲಾಗುತ್ತಿತ್ತು.[೧೪೪] ತುರುವನೂರು ಪ್ರಾಣಿಗಳ ಎಡೆಯಿಂದ ಬಂದ ಊರಾಗಿದೆ.[೧೪೫] ಐತಿಹ್ಯವೊಂದರ ಪ್ರಕಾರ ತುರುವನೂರು ಗ್ರಾಮಪರಿಸರದ ಅರಣ್ಯ ಪ್ರದೇಶದ ಹಳ್ಳವೊಂದರ ನೀರನ್ನು ಕುಡಿದರೆ ತುರುಗಳು ಬೇಗ ಗರ್ಭಧರಿಸಿ ಒಳ್ಳೆಯ ಕರುಗಳಿಗೆ ಜನ್ಮ ನೀಡುತ್ತಿದ್ದವು ಎಂಬ ನಂಬಿಕೆಯೊಂದು ಈ ಭಾಗದ ಜನರಲ್ಲಿತ್ತು. ಆದ್ದರಿಂದ ಸುತ್ತಮುತ್ತಲಿನವರಲ್ಲದೆ,

[illegible]

[illegible]

[illegible]

[illegible]

[illegible]

ದಕ್ಷಿಣದ ಮೈಸೂರು ಕಡೆಯಿಂದ ತುರುಗಳನ್ನು ಹೊಡೆದುಕೊಂಡು ಇಲ್ಲಿಗೆ ಬರುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ. ಹೀಗೆ ಬಂದ ತುರುಗಳು ಇಲ್ಲಿನ ಹಸಿರನ್ನು ತಿಂದು ನೀರನ್ನು ಕುಡಿದು ಈಗ ಕೋಟೆ ಇರುವ ಪ್ರದೇಶದ ಬಳಿ ವಿಶ್ರಾಂತಿ ತೆಗೆದುಕೊಂಡು ಹೋಗುತ್ತಿದ್ದವೆಂದು ಹೇಳಲಾಗಿದೆ. ಕಾಲಾನಂತರದಲ್ಲಿ ತುರುಗಳು ಇದ್ದ ಈ ವನ ಪ್ರದೇಶದಲ್ಲಿ ಊರು ಬೆಳೆದು ತುರು+ವನ+ಊರು=ತುರುವನ ಊರು ಆಗಿರಬಹುದು. ಜನರು ತಮ್ಮ ಆಡುಭಾಷೆಯಲ್ಲಿ ತುರುನೂರು, ತುರ್ನೂರು, ತುರುವನೂರು ಎಂದೆಲ್ಲಾ ಕರೆಯುತ್ತಾರೆ. ಅಲ್ಲದೆ, ಇಲ್ಲಿಯೇ ಇದ್ದ ತುರುವ ಅಥವಾ ತುರುವಪ್ಪ ಎಂಬ ಸ್ಥಳೀಯ ನಾಯಕನ ನೆನಪಿಗಾಗಿ ಕಟ್ಟಿದ ದೇವಾಲಯವು ಕೋಟೆಯ ಮುಂಬಾಗದಲ್ಲಿದೆ. ಆತನಿಂದಲೇ ಊರಿಗೆ ಈಗಿನ ಹೆಸರು ಬಂದಿರಬೇಕೆಂದು ಹೇಳಲಾಗಿದೆ.[೧೪೭] ತುರುವನೂರು ಉತ್ತರ ಅಕ್ಷಾಂಶ ೭೦°೨೬ ಮತ್ತು ೧೪°೨೪ ಪೂರ್ವ ರೇಖಾಂಶದಲ್ಲಿದ್ದು, ಸಮುದ್ರ ಮಟ್ಟದಿಂದ ೨,೦೫೫ ಅಡಿ ಎತ್ತರದಲ್ಲಿದೆ.

ತುರುವನೂರು ಪ್ರಾಚೀನ ಕಾಲದಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದವರೆಗೆ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಈ ಊರಿನ ಮೂಗಬಸಪ್ಪ ದೇವಾಲಯದ ಮುಂಭಾಗದಲ್ಲಿರುವ ಬೃಹತ್ ಶಿಲಾ ಸಮಾಧಿನೆಲೆ ಈ ಊರಿನ ಪ್ರಾಚೀನತೆಯನ್ನು ದೃಢಪಡಿಸುತ್ತದೆ.[೧೪೮] ಕೋಟೆಯ ಪಶ್ಚಿಮದಲ್ಲಿರುವ ರಾಮಲಿಂಗೇಶ್ವರ ದೇವಾಲಯ ಹಾಗೂ ಇಲ್ಲಿರುವ ಕ್ರಿ.ಶ.೮ನೇ ಶತಮಾನದ ನೊಳಂಬ ಶಾಸನವು ನೊಳಂಬರ ಆಳ್ವಿಕೆಯನ್ನು ಸಮರ್ಥಿಸುತ್ತವೆ.[೧೪೯] ಕ್ರಿ.ಶ.೧೭ನೆಯ ಶತಮಾನದಲ್ಲಿ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಇದೊಂದು ಆಯಕಟ್ಟಿನ ಸ್ಥಳವಾಗಿತ್ತಲ್ಲದೆ, ಅವರ ಸೀಮೆಯೂ ಆಗಿತ್ತು.[೧೫೦] ಬಹುಶಃ ಇಲ್ಲಿರುವ ಕೋಟೆ ಅವರ ಕಾಲದಲ್ಲಿಯೇ ನಿರ್ಮಾಣ ಗೊಂಡಿದೆಯೆಂದು ಹೇಳಬಹುದು. ತುರುವನೂರು ದೇಶದಲ್ಲಿಯೇ ಪ್ರಸಿದ್ಧಿಪಡೆದಿದ್ದು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ. ೧೯೩೭ರವರೆಗೆ ನಡೆದ ಅನೇಕ ಚಳುವಳಿಗಳಲ್ಲಿ ಗ್ರಾಮದ ನೂರಾರು ಸ್ವಾತಂತ್ರ್ಯ ಯೋಧರು ಜೈಲು ಸೇರಿ ಕಠಿಣ ಶಿಕ್ಷೆಯನ್ನು ಅನುಭವಿಸಿದ ದಾಖಲೆಗಳಿವೆ. ಈ ಸ್ವಾತಂತ್ರ್ಯದ ಕುರುಹಾಗಿ ಈ ಊರಿನ ಕೋಟೆಯ ಮೇಲೆ ಗಾಂಧೀಜಿಯ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

ತುರುವನೂರು ಗ್ರಾಮವಿರುವ ಎತ್ತರವಾದ ಪ್ರದೇಶದಲ್ಲಿ ಸ್ಥಳದುರ್ಗವಿದೆ. ಇಡೀ ಕೋಟೆಯನ್ನು ಊರು ಆವರಿಸಿಕೊಂಡಿರುವುದರಿಂದ ಕೋಟೆಯ ಗೋಡೆಯನ್ನು ಗುರುತಿಸುವುದು ಕಷ್ಟವಾಗಿದೆ. ೯೫X೯೫ ಚ.ಮೀ. ವಿಸ್ತಾರ ಇರುವ ಚೌಕಾಕಾರದ ಒಂದು ಸುತ್ತಿನ ಕೋಟೆ ಇದೆ. ಕೋಟೆಯ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಅಗಲವಾದ ಕಂದಕವಿದೆ. ಕೋಟೆಯ ನಾಲ್ಕೂ ಮೂಲೆಗಳಲ್ಲಿ ೧೦ಮೀ. ಎತ್ತರ

[illegible]

೩೦ ಮೀಟರ್ ಸುತ್ತಳತೆಯನ್ನು ಹೊಂದಿರುವ ವೃತ್ತಾಕಾರದ ಬುರುಜುಗಳಿವೆ. ಬುರುಜುಗಳ ಮಧ್ಯೆ ನಾಲ್ಕು ಅಡಿ ಎತ್ತರದ ಮತ್ತೊಂದು ಸುತ್ತಿನ ಗೋಡೆ ಇದ್ದು ಬಂದೂಕುದಾರಿಗಳು ನಿಂತು ಶತ್ರುಗಳನ್ನು ಗುರಿಯಿಟ್ಟು ಒಡೆಯಲು ಅವಕಾಶ ಕಲ್ಪಿಸಲಾಗಿದೆ. ಬುರುಜಿನ ಸುತ್ತಲೂ ಕೋವಿಕಿಂಡಿಗಳಿವೆ. ಈಶಾನ್ಯ ದಿಕ್ಕಿನ ಬುರುಜಿನ ಮೇಲೆ ಇತ್ತೀಚೆಗೆ ಮಹಾತ್ಮ ಗಾಂಧೀಜಿಯವರ ಪುತ್ಥಳಿಕೆಯನ್ನು ಸ್ಥಾಪಿಸಲಾಗಿದೆ.

ಕೋಟೆಯ ಗೋಡೆಯನ್ನು ಸ್ಥಳೀಯವಾಗಿ ಸಿಗುವ ಅನಿಯಮಿತಾಕಾರದ ಕರಿ ಚಕ್ಕೆಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ. ೬ ಅಡಿ ಅಗಲ, ೧೦ ಮೀ. ಎತ್ತರವಿರುವ ಈ ಗೋಡೆಯ ಮಧ್ಯೆ ಕೆಸರುಮಣ್ಣನ್ನು ಬಳಸಿರುವರು. ೨೦ ಅಡಿ ಎತ್ತರದವರೆಗಿನ ಗೋಡೆಯ ಮೇಲೆ ೩ ಅಡಿ ಅಗಲದ ಅಟ್ಟಾಲಕವಿದೆ. ದೂರ ಪ್ರದೇಶದ ಶತ್ರುಗಳನ್ನು ವೀಕ್ಷಿಸಲು ಈ ಅಟ್ಟಾಲಕಗಳನ್ನು ರಚಿಸಲಾಗಿದೆ ಹಾಗೂ ಸೈನಿಕರು ನಿಂತುಕೊಳ್ಳಲು ನಡೆದಾಡಲು ಸಾಕಷ್ಟು ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ. ಗೋಡೆಯಲ್ಲಿ ಅಲ್ಲಲ್ಲಿ ಬಂದೂಕುಕಿಂಡಿಗಳು, ಹರನಾಲಿಗೆಗಳು ಇದ್ದವೆಂದು ಹೇಳಲಾಗಿದೆ. ಕೋಟೆಯ ಪೂರ್ವ ಹಾಗೂ ಪಶ್ಚಿಮಕ್ಕೆ ಎರಡು ದ್ವಾರಗಳಿದ್ದು, ಈಗ ಇರುವ ರಸ್ತೆ ಎರಡೂ ದ್ವಾರದ ಅವಶೇಷಗಳನ್ನು ಇಲ್ಲವಾಗಿಸಿದೆ. ತುರುವನೂರು ಕೋಟೆಯಿಂದ ಚಿತ್ರದುರ್ಗ ಕೋಟೆಯ ಮಧ್ಯೆ ವೀಕ್ಷಣಾ ಸಂಪರ್ಕ ಕಲ್ಪಿಸಲು ಗೋನೂರು, ವೀರಮದಿಕೇರಿಪುರ(ಬೇಚರಾಕ್ ಗ್ರಾಮ), ಕೋನಬೇವುಗಳಲ್ಲಿ ಎತ್ತರವಾದ ಕಾವಲುಗೋಪುರಗಳನ್ನು ನಿರ್ಮಿಸಲಾಗಿದೆ. ಕೋಟೆಗೆ ಹೊಂದಿಕೊಂಡಂತೆ ಪೂರ್ವಭಾಗದಲ್ಲಿ ಕಲ್ಲೇಶ್ವರ, ಚಂದ್ರಮೌಳೇಶ್ವರ, ಕೋಟೆ ಮಾರಮ್ಮ ದೇವಾಲಯಗಳಿವೆ. ಕೋಟೆಯ ಮುಂಭಾಗದಲ್ಲಿ ಆಂಜನೇಯ, ತುರುವಪ್ಪ, ಗಂಗಾಧರೇಶ್ವರ ಮುಂತಾದ ದೇವಾಲಯಗಳಿವೆ.

೪.೧೭ ಭರಮಗಿರಿ ಕೋಟೆ

ಭರಮಗಿರಿಯು ಹಿರಿಯೂರಿನಿಂದ ಪಶ್ಚಿಮಕ್ಕೆ ೧೭ ಕಿ.ಮೀ. ದೂರದಲ್ಲಿದೆ. ವಾಣಿವಿಲಾಸ ಸಾಗರ ಅಥವಾ ಮಾರಿಕಣಿವೆ ಜಲಾಶಯ ಭರಮಗಿರಿಯಿಂದ ೩ ಕಿ.ಮೀ. ದೂರದಲ್ಲಿದೆ. ಚಿತ್ರದುರ್ಗದ ಪಾಳೆಯಗಾರ ಬಿಚ್ಚುಗತ್ತಿ ಭರಮಣ್ಣನಾಯಕನು ತನ್ನ ಹೆಸರಿನಲ್ಲಿ ಕಟ್ಟಿಸಿದ ಗಡಿಕೋಟೆಗಳಲ್ಲಿ ಇದೂ ಒಂದು. ಭರಮಗಿರಿಯು ಭೂನಕ್ಷೆಯಲ್ಲಿ ೧೩°೫೬ ಉತ್ತರ ಅಕ್ಷಾಂಶ, ಪೂರ್ವರೇಖಾಂಶ ೭೬°೪೯ ಇದ್ದು ಸಮುದ್ರಮಟ್ಟದಿಂದ ೨,೦೦೦ ಅಡಿಗಳಷ್ಟು ಮೇಲಿದೆ. ಈ ಕೋಟೆಯು ಗಿರಿದುರ್ಗವಾಗಿದ್ದು, ಸುತ್ತಲೂ ಬೆಟ್ಟದುರ್ಗದವರೆಗೂ ವಿಸ್ತರಿಸಿದೆ. ದಕ್ಷಿಣಕ್ಕೆ ಓಂಡಸನಕಟ್ಟೆ ಬೆಟ್ಟದ ಸಾಲು, ಪೂರ್ವಕ್ಕಿರುವ ಭೂತಪ್ಪನ

[illegible]

ಮಟ್ಟಿಗಳಿವೆ. ಭರಮಗಿರಿಯಲ್ಲಿ ದೊಡ್ಡಮಟ್ಟಿ ಮತ್ತು ಉತ್ತರೆ ಗುಡ್ಡ ಎಂಬ ಎರಡು ಚಿಕ್ಕ ಬೆಟ್ಟಗಳನ್ನು ಬಳಸಿಕೊಂಡು ಒಂದು ಸುತ್ತಿನ ಕೋಟೆಯನ್ನು ಕಟ್ಟಲಾಗಿದೆ. ಈ ಎರಡೂ ಬೆಟ್ಟಗಳ ಮಧ್ಯೆ ಸುಮಾರು ೨೦೦ ಮೀಟರ್ ಅಂತರವಿದೆ.

ಚಿತ್ರದುರ್ಗ ಪಾಳೆಯಗಾರ ಬಿಚ್ಚುಗತ್ತಿ ಭರಮಪ್ಪನಾಯಕನು ಈ ಕಣಿವೆ ಪ್ರದೇಶಗಳಿಂದ ಅಪಾಯ ಸಂಭವಿಸಬಹುದೆಂದು ತಿಳಿದು ಇಲ್ಲಿ ಕೋಟೆಯೊಂದನ್ನು ಕಟ್ಟಿಸಿ ಸೈನ್ಯದ ತುಕಡಿಯನ್ನು ಇಟ್ಟಂತೆ ಕಾಣುತ್ತದೆ. ಅಲ್ಲದೆ, ಇಲ್ಲಿಂದ ಲಕ್ಕಿಹಳ್ಳಿ ಕೋಟೆ, ಹೊಸದುರ್ಗ ತಾಲೂಕಿನ ಜಾನಕಲ್ ಕೋಟೆಗೂ ಪೂರ್ವದಲ್ಲಿ ವೇಣುಕಲ್ಲುಗುಡ್ಡ, ಹಿರಿಯೂರು ಕೋಟೆಗೂ, ಉತ್ತರದಲ್ಲಿ ದೊಡ್ಡ ಗುಡ್ಡಗಳ ಮುಖಾಂತರ ಚಿತ್ರದುರ್ಗಕ್ಕೆ ಸಂಪರ್ಕ ಕಲ್ಪಿಸಿಕೊಳ್ಳಲಾಗಿದೆ. ಹೀಗೆ ಚಿತ್ರದುರ್ಗದ ಗಡಿಭಾಗವಾಗಿ ಈ ಕೋಟೆ ತುಂಬಾ ಮಹತ್ವ ಪಡೆದಿತ್ತೆನ್ನಬಹುದು.

ಭರಮಗಿರಿಯ ಕೋಟೆಗೋಡೆಗಳು ಸಂಪೂರ್ಣವಾಗಿ ಶಿಥಿಲವಾಗಿದ್ದು, ಕೋಟೆಯ ಗೋಡೆಯನ್ನು ಅಳಿದುಳಿದುರುವ ತಳಪಾಯ ಹಾಗೂ ಅವಶೇಷಗಳಿಂದ ಗುರುತಿಸಬಹುದಾಗಿದೆ. ಗೋಡೆಯು ೪.೫ ದಪ್ಪವಿದೆ. ತಳಪಾಯಕ್ಕೆ ದೊಡ್ಡ ದೊಡ್ಡ ಕಲ್ಲುದುಂಡಿಗಳನ್ನು ಬಳಸಿರುವುದು ಕಂಡುಬರುತ್ತದೆ. ಕೋಟೆಯಲ್ಲಿ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಎರಡು ಚಚ್ಚೌಕಾಕಾರದ ಬುರುಜುಗಳು ಉಳಿದುಕೊಂಡಿವೆ. ಉತ್ತರದ ದೊಡ್ಡಮಟ್ಟಿನ ಮೇಲಿನ ಬುರುಜು ಪೂರ್ವಪಶ್ಚಿಮವಾಗಿ ೨೨ ಅಡಿ ಹಾಗೂ ಉತ್ತರ ದಕ್ಷಿಣವಾಗಿ ೨೦ ಅಡಿ ಉದ್ದವಿದ್ದು, ೧೦ ಅಡಿ ಎತ್ತರವಾಗಿದೆ. ಈ ಬುರುಜಿನ ಮೇಲೆ ನಾಲ್ಕು ಅಡಿ ಗೋಡೆಯನ್ನು ಹೊಂದಿರುವ ವೃತ್ತಾಕಾರದ ಬುರುಜಿದೆ. ಇದೇ ಅಳತೆಯಲ್ಲಿ ಉತ್ತರ ಗುಡ್ಡದ ಮೇಲೂ ಬುರುಜಿದ್ದು, ಈ ಎರಡೂ ಬುರುಜಿನ ಮಧ್ಯೆ ಸಮಾನ ಅಂತರವನ್ನು ಕಾಯ್ದುಕೊಳ್ಳಲಾಗಿದೆ. ಬುರುಜುಗಳನ್ನು ಕರಿ ಚಕ್ಕೆಕಲ್ಲುಗಳನ್ನು ಬಳಸಿ ನಿರ್ಮಿಸಿದ್ದಾರೆ. ಮಧ್ಯ ಭಾಗದಲ್ಲಿ ಚಿಕ್ಕ ಗಾತ್ರದ ಕಲ್ಲು ಮತ್ತು ಕೆಸರುಮಣ್ಣನ್ನು ತುಂಬಿಸಲಾಗಿದೆ.

ಕೋಟೆ ಒಳಭಾಗದಲ್ಲಿ ಜನವಸತಿಯ ಕುರುಹುಗಳಿವೆ. ಗುಡ್ಡದ ಮೇಲೆ ಮಾತಂಗಿ, ಗುಡ್ಡದ ಮುಂಭಾಗ ಕಣಿವೆ ಮಾರಮ್ಮನ ದೇವಾಲಯವಿದೆ. ಈಗ ಈ ದೇವತೆ ಉತ್ಸವ ದೇವತೆಯಾಗಿ ಮಾರಿ ಕಣಿವೆಯಲ್ಲಿ ಪ್ರತಿಷ್ಠಾಪನೆಯಾಗಿದೆ. ಪ್ರತಿವರ್ಷ ಇಲ್ಲಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಈ ಮಾರಿ ಕಣಿವೆಯ ಪ್ರಖ್ಯಾತಿಯಿಂದ ಭರಮಗಿರಿ ಸಹಜವಾಗಿ ತನ್ನ ಸ್ಥಾನವನ್ನು ಕಳೆದುಕೊಂಡಿದೆ.

೪.೧೮ ರಾಮಗಿರಿ ಕೋಟೆ

ರಾಮಗಿರಿ ಹೊಳಲ್ಕೆರೆಯಿಂದ ಸುಮಾರು ೨೦ ಕಿ.ಮೀ. ದೂರದಲ್ಲಿದೆ. ಭೂನಕ್ಷೆಯಲ್ಲಿ ರಾಮಗಿರಿಯು ಅಕ್ಷಾಂಶ ೭೬°೦೭ ಉತ್ತರ ಮತ್ತು ೧೩°೫೭ ಪೂರ್ವ ರೇಖಾಂಶದಲ್ಲಿದ್ದು, ಸಮುದ್ರ ಮಟ್ಟದಿಂದ ೨೪೧೨ ಅಡಿ ಎತ್ತರದಲ್ಲಿದೆ. ಸ್ಥಳನಾಮವೇ ಹೇಳುವಂತೆ ರಾಮಗಿಯ ಐತಿಹಾಸಿಕವಾಗಿ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಇಲ್ಲಿರುವ ಶಾಸನಗಳು ಬೆಟ್ಟದ ಮೇಲಿರುವ ದೇವರನ್ನು ರಾಮಲಿಂಗ ಎಂದು ಉಲ್ಲೇಖಿಸಿದೆ.[೧೫೨] ಬಹುಶಃ ಈ ರಾಮನಿಂದಲೇ ರಾಮಗಿರಿ ಎಂಬ ಹೆಸರು ಬಂದಿರಬಹುದು. ಸ್ಥಳೀಯರು ಬೆಟ್ಟದ ಮೇಲಿರುವ ದೇವರಿಗೆ ಕರಿ ಸಿದ್ದೇಶ್ವರ ಎಂದು ಕರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ರಾಮಗಿರಿ ಒಂದು ಪುಣ್ಯ ಕ್ಷೇತ್ರವಾಗಿ ಬೆಳೆಯುತ್ತಿದೆ.

ರಾಮಗಿರಿ ವಿಜಯನಗರ ಅರಸರ ಕಾಲದಲ್ಲಿ ಇದು ಒಂದು ಸೀಮೆಯಾಗಿತ್ತು. ಈ ಸೀಮೆಯಲ್ಲಿ ಹೊನ್ನಗೊಂಡಗಹಳ್ಳಿ, ಬಾಗೂರು ಗ್ರಾಮಗಳು ಅಂತರ್ಗತವಾಗಿದ್ದವೆಂದು ತಿಳಿದುಬರುತ್ತದೆ.[೧೫೩] ನಂತರ ಚಿತ್ರದುರ್ಗದ ಪಾಳೆಗಾರರ ಕಾಲದಲ್ಲಿ ಇದೊಂದು ಆಯಕಟ್ಟಿನ ಸ್ಥಳವಾಗಿದ್ದು ಪದೇ ಪದೇ ಯುದ್ಧಗಳು ಈ ಭಾಗದಲ್ಲಿ ನಡೆಯುತ್ತಿರುವುದು ಇತಿಹಾಸದಿಂದ ಕಂಡುಬರುತ್ತದೆ. ಕ್ರಿ.ಶ.೧೭೩೯ ಮತ್ತು ೧೭೪೧ರಲ್ಲಿ ಮಲೆನಾಡಿನವರು, ಹರಪ್ಪನಹಳ್ಳಿ, ಕೆಳದಿ ಮುಂತಾದವರೊಂದಿಗೆ ಸೇರಿಕೊಂಡು ರಾಮಗಿರಿ ಕೋಟೆಗೆ ಮುತ್ತಿಗೆ ಹಾಕುತ್ತಾರೆ. ನಂತರ ಚಿತ್ರದುರ್ಗದ ಪ್ರಖ್ಯಾತ ಪಾಳೆಗಾರಲ್ಲೊಬ್ಬರಾದ ಹಿರೇ ಮದಕರಿನಾಯಕನು ಶತ್ರುಗಳೊಂದಿಗೆ ನಡೆಸಿದ ಕಾಳಗದಲ್ಲಿ ಕೋಟೆಯನ್ನು ಪುನಃ ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ.[೧೫೪] ಹೀಗೆ ರಾಮಗಿರಿಯು ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ ಅವರ ಸೀಮೆಯು ಮುಂದುವರೆದಿರುವುದು ಅವರ ದಾಖಲೆಗಳಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ಮೊದಲೇ ಇದ್ದ ಕೋಟೆಯನ್ನು ಚಿತ್ರದುರ್ಗ ಪಾಳೆಯಗಾರರು ವಿಸ್ತರಿಸಿದರಲ್ಲದೆ ಭದ್ರಪಡಿಸಿರಬಹುದು.

ರಾಮಗಿರಿ ಕೋಟೆಯು ಗಿರಿದುರ್ಗವಾಗಿದ್ದು, ಬೆಟ್ಟವನ್ನು ಆಕ್ರಮಿಸಿಕೊಂಡು ಅವಶ್ಯಕತೆ ಇರುವ ಕಡೆ ಕೋಟೆಯನ್ನು ನಿರ್ಮಿಸಲಾಗಿದೆ. ಕೋಟೆಯನ್ನು ಅನಿಯಮಿತಾಕಾರದಲ್ಲಿ ಕಟ್ಟಲಾಗಿದೆ. ಕೋಟೆಯ ಅವಶೇಷಗಳು ಬಹುತೇಕ ಶಿಥಿಲಗೊಂಡಿವೆ. ಬೆಟ್ಟದ ಉತ್ತರಭಾಗದಲ್ಲಿ ಮಾತ್ರ ನಾಲ್ಕು ಸುತ್ತಿನ ಕೋಟೆ ಕಟ್ಟಲಾಗಿದೆ. ಈ ಕೋಟೆಗೋಡೆಗಳಲ್ಲಿ ಅಲ್ಲಲ್ಲಿ ಬಾಗಿಲುಗಳಿವೆ. ಇತ್ತೀಚೆಗೆ ಕೋಟೆಯ ಕಲ್ಲುಗಳನ್ನು

[illegible]

[illegible]

[illegible]

ಬಳಸಿ, ಹೊಸದಾಗಿ ಬೆಟ್ಟಕ್ಕೆ ಮೆಟ್ಟಿಲುಗಳುಳ್ಳ ದಾರಿಯನ್ನು ಮಾಡಿರುವುದರಿಂದ ಕೋಟೆಯ ಸ್ವರೂಪವೇ ಬದಲಾಗಿದೆ. ನೆಲಮಟ್ಟದಲ್ಲಿರುವ ಬಸವನಗುಡಿ, ಬಳಸಿಕೊಂಡು ಮುಂದೆ ಹೋದರೆ, ಗಣೇಶನ ದೇವಾಲಯವಿದೆ. ಈ ದೇವಾಲಯದ ಪಕ್ಕದಲ್ಲಿಯೇ ದ್ವಾರಬಾಗಿಲು ಇದೆ. ಬಾಗಿಲು ಎರಡು ಕಡೆ ೧೦ ಅಡಿ ಎತ್ತರದ ಗೋಡೆ ಇದೆ. ಮಧ್ಯೆಮಗಾತ್ರದ ಕಲ್ಲುಗಳನ್ನು ಬಳಸಿರುವ ಗೋಡೆಯು ೬ ಅಡಿ ಅಗಲವಿದೆ. ಮುಂದೆ ಬರುವ ಬಾಗಿಲುಗಳು ಹಾಗೂ ಕೋಟೆಗೋಡೆಯನ್ನು ಇಲ್ಲಿ ಬೆಳೆದಿರುವ ಮರಗಿಡಗಳು ಮರೆಮಾಡಿವೆ. ಬೆಟ್ಟದ ಮೇಲ್ಭಾಗದಲ್ಲಿರುವ ಕರಿಸಿದ್ಧೇಶ್ವರ ದೇವಾಲಯದ ಮುಂದೆ ಇರುವ ಗಂಗೆಬಾಗಿಲು ಈಗಲೂ ಸುಸ್ಥಿತಿಯಲ್ಲಿ ಉಳಿದುಕೊಂಡು ಬಂದಿದೆಯಾದರೂ ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಪಕ್ಕದಲ್ಲಿ ಹೊಂಡಗಳು, ಚೌಡಮ್ಮ, ರುದ್ರಸ್ವಾಮಿ, ನಾಗಪ್ಪ ಮುಂತಾದ ದೇವಾಲಯಗಳಿವೆ. ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಭಾಗದಲ್ಲಿ ಬೆಟ್ಟದ ಬಂಡೆ ಎತ್ತರ ಹಾಗೂ ಕಡಿದಾಗಿಯೂ ಇರುವುದರಿಂದ ಇಲ್ಲಿ ಯಾವುದೇ ಕೋಟೆಸಾಲುಗಳು ಇಲ್ಲ. ಆದರೆ ಅವಶ್ಯಕತೆ ಇರುವ ಕಡೆ ಕಾವಲು ಗೋಪುರಗಳನ್ನು ನಿರ್ಮಿಸಲಾಗಿದೆ.

ಕರಿಸಿದ್ಧೇಶ್ವರ ದೇವಾಲಯದ ಪಕ್ಕದಿಂದ ಮೇಲ್ದುರ್ಗಕ್ಕೆ ಹೋಗುವಾಗ ಕಲ್ಲಿನಲ್ಲಿ ನಿರ್ಮಿಸಿರುವ ತೀರ್ಥಕುಂಡವಿದೆ. ಸ್ಥಳೀಯರು ಇದನ್ನು ಕಾಶೀ ಜಲವೆಂದು ಕರೆಯುತ್ತಾರೆ. ಈ ನೀರನ್ನು ದೇವರಿಗೆ ಮಾತ್ರ ಉಪಯೋಗಿಸುತ್ತಾರೆ. ಇಲ್ಲಿಂದ ಮುಂದೆ ಹೋದರೆ ಬೆಟ್ಟದ ತುದಿಯಲ್ಲಿ ಒಂದು ಶಿಥಿಲವಾಗಿರುವ ಸುತ್ತಿನ ಕೋಟೆ ಹಾಗೂ ಅಲ್ಲಲ್ಲಿ ಬುರುಜುಗಳಿವೆ. ಮಧ್ಯಭಾಗದಲ್ಲಿ ಎತ್ತರವಾದ ಕಾವಲು ಬುರುಜು ಮತ್ತು ನೀರಿನ ಹೊಂಡಗಳಿವೆ. ಬುರುಜಿನ ಪಕ್ಕದಲ್ಲಿಯೇ ಮೈಲಾರಲಿಂಗೇಶ್ವರ ದೇವಾಲಯವಿದೆ. ಇಲ್ಲಿಂದ ಪೂರ್ವಕ್ಕೆ ದೊಡ್ಡ ಗುಡ್ಡದ ಸಾಲುಗಳು, ರಾಮಗಿರಿ ಕಾವಲು, ಪಶ್ಚಿಮದಲ್ಲಿ ಸಿಂಗೇನಹಳ್ಳಿಕೋಟೆ, ರಂಗಯ್ಯನದುರ್ಗ, ಉತ್ತರದಲ್ಲಿ ಬಿ.ದುರ್ಗ, ಆಗ್ನೇಯದಲ್ಲಿ ಹೊಸದುರ್ಗ ಕೋಟೆ ಮುಂತಾದವುಗಳನ್ನು ವೀಕ್ಷಿಸಬಹುದು.

ಕೋಟೆಯ ಉತ್ತರಕ್ಕೆ ರಾಮಗಿರಿ ಕೆರೆ ಕಂದಕದ ಪಾತ್ರ ನಿರ್ವಹಿಸಿದೆ. ಬೆಟ್ಟದ ಕೆಳಗೆ ಕರಿಯಮ್ಮ, ಆಂಜನೇಯ, ಚೌಡಮ್ಮ ಮುಂತಾದ ದೇವಾಲಯಗಳಿವೆ. ಕಾರ್ತಿಕ ಮಾಸದಲ್ಲಿ ಒಂದು ಸಾವಿರ ಸಿಂಬೆಗಳನ್ನು ಎಣ್ಣೆಯಲ್ಲಿ ನೆನೆಸಿ ಸುಡುತ್ತಾರೆ. ಆಗ ಇಡೀ ಬೆಟ್ಟಕ್ಕೆ ದೀಪಾಲಂಕಾರವಾಗಿ ಬೆಟ್ಟವು ನಕ್ಷತ್ರಲೋಕದಂತೆ ಬೆಳಗುತ್ತದೆ.

೪.೧೯ ಕಣಜನಹಳ್ಳಿ ಕೋಟೆ

ಕಣಜನಹಳ್ಳಿಯು ಹಿರಿಯೂರಿನಿಂದ ಪೂರ್ವಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಭೂನಕ್ಷೆಯಲ್ಲಿ ಉತ್ತರ ಅಕ್ಷಾಂಶ ೧೪°೭ ಮತ್ತು ೭೬°೫೦ ಪೂರ್ವ ರೇಖಾಂಶದಲ್ಲಿದೆ. ಕ್ರಿ.ಶ.೧೫ನೇ ಶತಮಾನದಲ್ಲಿ ಕಣಜನಹಳ್ಳಿಯು ನಿಡಗಲ್ಲು ಸಂಸ್ಥಾನದ ಅಧೀನದಲ್ಲಿತ್ತು.[೧೫೫] ನಿಡಗಲ್ಲಿನಿಂದ ಸೊಂಡೂರು ಸಂಸ್ಥಾನಕ್ಕೆ ಸೈನ್ಯದ ರಕ್ಷಣಾ ತುಕಡಿಗಳನ್ನು ಸಾಗಿಸುವ ಮಾರ್ಗದಲ್ಲಿ ಈ ಊರು ಇತ್ತು. ಇಂತಹ ತುರ್ತು ಸ್ಥಿತಿಯಲ್ಲಿ ಬಳಕೆಗಾಗಿ ಧಾನ್ಯಗಳನ್ನು ಸಂಗ್ರಹಿಸುವ ಕೇಂದ್ರವಾಗಿತ್ತು. ಆಗ ಇದನ್ನು ಕಣಜದಹಳ್ಳಿ ಎಂದು ಕರೆಯಲಾಗುತ್ತಿತ್ತು. ಕ್ರಮೇಣ ಇದು ಕಣಜನಹಳ್ಳಿ ಆಗಿರಬಹುದೆಂದು ಅಭಿಪ್ರಾಯಪಡಲಾಗಿದೆ.[೧೫೬] ಅಲ್ಲದೆ ಈ ಗ್ರಾಮದ ಸುತ್ತಲಿನ ಪ್ರಾಂತ್ಯಗಳಿಂದ ಕಂದಾಯ, ಪೊಗದಿ ಇತ್ಯಾದಿಗಳನ್ನು ವಸೂಲು ಮಾಡಿಕೊಂಡು ಇಲ್ಲಿ ದಾಸ್ತಾನು ಮಾಡುತ್ತಿದ್ದರು. ಈಗಲೂ ಊರಲ್ಲಿ ನೂರಾರು ಹಗೇವುಗಳನ್ನು ಕಾಣಬಹುದು. ಸಾಮಾನ್ಯವಾಗಿ ಈ ಸಂದರ್ಭದಲ್ಲಿಯೇ ಇಲ್ಲಿ ಕೋಟೆ-ಕೊತ್ತಲಗಳು ನಿರ್ಮಾಣವಾಗಿರುವ ಸಾಧ್ಯತೆ ಇದೆ. ಬ್ರಿಟೀಷರು ಈ ನೆಲವನ್ನಾಶ್ರಯಿಸಿದ ಮೇಲೆ ಪ್ರಮುಖವಾಗಿ ಮೈಸೂರು ಹಾಗೂ ಚಿತ್ರದುರ್ಗ ಪಾಳೆಯಗಾರರ ಜೊತೆ ನಿಕಟಸಂಪರ್ಕ ಹಾಗೂ ಬಾಂಧವ್ಯ ಇಟ್ಟುಕೊಂಡಿದ್ದರು. ಹೀಗೆ ದಾಸ್ತಾನು ಮಾಡಿದ ಕಣಜಗಳ ಸುತ್ತಲೂ ಕೋಟೆಯನ್ನು ನಿರ್ಮಿಸಿದ್ದು, ಅವರು ಗಡಿಪ್ರದೇಶಗಳಲ್ಲಿ ತಮ್ಮ ಅಸ್ತಿತ್ವ ಇರಬೇಕೆಂಬ ದೂರಾಲೋಚನೆಯಿಂದಾಗಿ, ಅವರ ರೆಜಿಮೆಂಟ್‌ಗಳ ಓಡಾಟ ಹಾಗೂ ಸಂಪರ್ಕಗಳಿಗಾಗಿ ಕಣಜನಹಳ್ಳಿಯನ್ನು ಮದರಾಸ್ ಪ್ರೆಸಿಡೆನ್ಸಿಯಲ್ಲಿಯೇ ಉಳಿಸಿಕೊಂಡರು. ಈ ಕಾರಣದಿಂದ ಕಣಜನಹಳ್ಳಿ ಆ ಕಾಲದ ಒಂದು ಪ್ರಮುಖ ಆಯಕಟ್ಟಿನ ಪ್ರದೇಶವಾಗಿತ್ತೆಂದು ಊಹಿಸ ಬಹುದು.[೧೫೭]

ಈ ಮಧ್ಯೆ ಕುಮಾರರಾಮನು ಹುಳಿಯಾರಿನ ಸಾಮಂತಾಧಿಪತಿ ಮಾರಗೌಡನ ಮೇಲೆ ಯುದ್ಧಕ್ಕೆ ಹೋಗುವಾಗ ಕಣಜನಹಳ್ಳಿಯಲ್ಲಿ ತನ್ನ ಸೈನ್ಯವನ್ನು ಬೀಡು ಬಿಟ್ಟಿದ್ದನೆಂದು ಹೇಳಲಾಗಿದೆ. ಇದನ್ನು ಪುಷ್ಟೀಕರಿಸುವ ಕುಮಾರರಾಮನ ಶಿಲ್ಪವೊಂದು ಈ ಊರಿನಲ್ಲಿದೆ.[೧೫೮]

ಕಣಜನಹಳ್ಳಿಯ ಕೋಟೆಯು ಚೌಕಾಕಾರದ ಒಂದು ಸ್ಥಳದುರ್ಗವಾಗಿದ್ದು, ಊರಸುತ್ತಲೂ ಒಂದು ಸುತ್ತಿನ ಕೋಟೆಯಿದೆ. ಕೋಟೆಯ ವಿಸ್ತೀರ್ಣ ೨೦೦x೨೦೦ ಚ.ಮೀ. ವಿಸ್ತೀರ್ಣವಿದೆ. ಕೋಟೆಯ ಮಧ್ಯೆ ೩೫ ಅಡಿ ಎತ್ತರದ ಕಾವಲು ಬುರುಜಿದೆ. ಕೋಟೆಯ ಮೂಲೆಗಳಲ್ಲಿ ವೃತ್ತಾಕಾರದ ಕೊತ್ತಲಗಳಿದ್ದು, ಕೋಟೆಯಲ್ಲಿ ಒಟ್ಟು ೬ ಚೌಕಾಕಾರದ ಹಾಗೂ ಎರಡು ವೃತ್ತಾಕಾರದ ಬುರುಜುಗಳಿವೆ. ಕೋಟೆಯ

[illegible]

ಶಿಥಿಲವಾಗಿದ್ದು ಗ್ರಾಮವು ಕೋಟೆಯನ್ನು ಆಕ್ರಮಿಸಿದೆ. ಕೋಟೆಯ ಸುತ್ತಲೂ ಆಳವಿದೆ. ಈ ಕಂದಕವು ೨೦ ಮೀ. ಅಗಲ, ೧೦ ಮೀ. ಆಳವಿದೆ. ಅಲ್ಲಲ್ಲಿ ಶಿಥಿಲಗೊಂಡಿದ್ದು ಈಗ ಕೆಲವು ಭಾಗಗಳಲ್ಲಿ ಮಾತ್ರ ಉಳಿದುಕೊಂಡಿದೆ. ಕೋಟೆಗೆ ನಯಗೊಳಿಸದೇ ಇರುವ ಮಧ್ಯಮಗಾತ್ರದ ಕಲ್ಲುಗಳನ್ನು ಉಪಯೋಗಿಸಿದ್ದಾರೆ. ಬುರುಜುಗಳಿಗೆ ಕಲ್ಲುಗುಂಡುಗಳನ್ನು ಬಳಸಿದ್ದಾರೆ.

ಪೂರ್ವದಿಕ್ಕಿನಲ್ಲಿ ದ್ವಾರಬಾಗಿಲಿದೆ. ದಕ್ಷಿಣದಿಂದ ಪ್ರವೇಶಮಾಡಿ ಪಶ್ಚಿಮಕ್ಕೆ ಹೋಗುವಂತೆ ದ್ವಾರಬಾಗಿಲನ್ನು ನಿರ್ಮಿಸಿದ್ದಾರೆ. ದ್ವಾರಬಾಗಿಲು ೧೧ ಅಡಿ ಅಗಲ ಹಾಗೂ ೧೧ ಅಡಿ ಎತ್ತರವಿದ್ದು, ೯ ಅಡಿ ಉದ್ದವಿದೆ. ದ್ವಾರಬಾಗಿಲಿಗೆ ೬ ಕಲ್ಲಿನ ಬಾಗಿಲವಾಡಗಳನ್ನು ಉಪಯೋಗಿಸಿದ್ದು, ಮಧ್ಯಭಾಗದಲ್ಲಿ ಕಟ್ಟಡವಿದೆ. ಒಳಭಾಗದಲ್ಲಿ ದಕ್ಷಿಣಕ್ಕೆ ಎತ್ತರವಾದ ಹಾಗೂ ಶಿಥಿಲವಾದ ಬುರುಜಿದೆ. ಬಾಗಿಲ ಮೇಲೆ ೧೧ ಅಡಿ ಅಗಲ, ೨೦ ಅಡಿ ಎತ್ತರದ ಕೋಟೆಯಿದೆ. ದ್ವಾರಬಾಗಿಲ ಒಳಭಾಗ ಮತ್ತು ಹೊರಭಾಗದಲ್ಲಿ ಆಂಜನೇಯ ದೇವಾಲಯಗಳಿವೆ. ದ್ವಾರಬಾಗಿಲ ಪಕ್ಕದಲ್ಲಿರುವ ವೀರಗಲ್ಲು ಶಾಸನವು ಮೊದಲು ಈ ಊರಿನ ಆಡಳಿತಗಾರರಾಗಿದ್ದ ಬೆಟ್ಟಗೊಂಡ ಮತ್ತು ಜೋಲಿಗೊಂಡರು ಖಂಡೇನಹಳ್ಳಿ ಜಗಳದಲ್ಲಿ ಕಾದಾಡಿ ಮಡಿದ ವಿಚಾರವನ್ನು ತಿಳಿಸುತ್ತದೆ. ಜಾನಪದ ಗೀತೆಯೊಂದರಲ್ಲಿ ಊರಿನ ಕೋಟೆ ಮತ್ತು ಬಾಗಿಲ ರಚನೆಯ ಕುರಿತು ಹೀಗೆ ಹೇಳಲಾಗಿದೆ :

ಕಟ್ಟೆ ಕಟ್ಟೆಂದರೆ ಕಟ್ಟಿಸದೆಂಗಟರಾಯ
ದಿಟ್ಟ ಪ್ರಧಾನಿ ಕೋಲು ಕೋಲು ಕೋಲನ್ನ ಕೋಲ...
ವೆಂಕಟರಾಯ ನಿಡಗಲ್ಲು ಪ್ರಧಾನಿ ಪಾಳೆಯಪಟ್ಟ[೧೫೯]

ಹಿಂದೆ ಬಾಗಿಲ ಮುಂದೆ(ಈಗ ಪಂಚಾಯ್ತಿ ಇರುವ ಜಾಗದಲ್ಲಿ) ೪೮ ಕಂಬಗಳುಳ್ಳ ೫ ಅಡಿ ಎತ್ತರದ ಎರಡು ಬದಿಗಳ ಅಟ್ಟಮಾಳಿಗೆ ಹಾಗೂ ಎರಡು ಗೌಪ್ಯ ಕೊಠಡಿಗಳಿದ್ದವೆಂಬುದು ಸ್ಥಳೀಯರ ಹೇಳಿಕೆ. ಇದು ಜನರು ಕುಳಿತುಕೊಳ್ಳುತ್ತಿದ್ದ ಸ್ಥಾನದಿಂದಲೇ ಅವರ ಮಟ್ಟ ತಿಳಿಯುವಂತೆ ಮಾಡಲಾಗಿದ್ದಿತ್ತೆಂದು ಹೇಳಲಾಗಿದೆ.[೧೬೦] ಕೋಟೆಯ ಮಧ್ಯಭಾಗದಲ್ಲಿ ೧೨ ಮೀ. ಎತ್ತರ ಹಾಗೂ ೬೩ ಮೀ.ಇರುವ ಬುರುಜಿದೆ. ಇದನ್ನು ತವಗದ ಬುರುಜು ಎಂದು ಕರೆಯಲಾಗಿದೆ.[೧೬೧] ಬುರುಜಿನ ಸುತ್ತಲೂ ಇದ್ದ ಕಂದಕ, ರಕ್ಷಣಾಗೋಡೆ ಶಿಥಿಲಗೊಂಡಿವೆ. ತವಗದ ಬುರುಜು ಇಂದಿಗೂ ವ್ಯವಸ್ಥಿತವಾಗಿದೆ. ಬುರುಜಿನ ಮೇಲೆ ಹತ್ತಲು ೨೫ ಮೆಟ್ಟಿಲುಗಳಿವೆ. ಬುರುಜಿನ ಮೇಲ್ಭಾಗದಲ್ಲಿ ಉತ್ತರದಕ್ಷಿಣವಾಗಿ ೧೮ ಮೀ., ಪೂರ್ವಪಶ್ಚಿಮವಾಗಿ ೧೬ ಮೀ. ವಿಸ್ತಾರವಾಗಿದೆ. ಬತೇರಿಯ ಮೇಲಿದ್ದ ರಕ್ಷಣಾಗೋಡೆ, ಫಿರಂಗಿ ಗೂಡುಗಳು ಈಗ ಶಿಥಿಲಗೊಂಡಿವೆ. ಈ ಬುರುಜಿನ ಮೇಲೆ ಈ ಹಿಂದೆ ಹಾರುತ್ತಿದ್ದ ಬಾವುಟ ನಿಡಗಲ್ಲು

[illegible]

[illegible]

[illegible]

ಕೋಟೆಗೆ ಕಾಣುತ್ತಿತ್ತೆಂದು ಹೇಳುತ್ತಾರೆ. ಕೋಟೆಯ ಸುತ್ತ ೨೦ ಮೀ. ಅಗಲ, ೧೦ ಮೀ. ಆಳವಾದ ಕಂದಕವಿದೆ. ಕೋಟೆಯೊಳಗೆ ಈಶ್ವರ, ತಿಮ್ಮಪ್ಪ, ಹೊಸೂರಮ್ಮ, ಬೀರಲಿಂಗೇಶ್ವರ, ಮೈಲಾರಲಿಂಗೇಶ್ವರ ಮುಂತಾದ ದೇವಾಲಯಗಳಿವೆ.

೪.೨೦ ಗುಡ್ಡದಹಳ್ಳಿ ಕೋಟೆ

ಗುಡ್ಡದಹಳ್ಳಿ, ಮೊಳಕಾಲ್ಮೂರಿನಿಂದ ಸುಮಾರು ೮ ಕಿ.ಮೀ. ದೂರದಲ್ಲಿದೆ. ಗುಡ್ಡದ ಪಕ್ಕದಲ್ಲಿ ಗ್ರಾಮವಿರುವುದರಿಂದ ಗುಡ್ಡದಳ್ಳಿ, ಎಂದು ಹೆಸರಾಗಿದೆ. ಭೂನಕ್ಷೆಯಲ್ಲಿ ಅಕ್ಷಾಂಶ ೧೪°೪೭ ಉತ್ತರ, ಪೂರ್ವ ರೇಖಾಂಶ ೭೬°೪೪ ಇದ್ದು, ಸುದ್ರಮಟ್ಟದಿಂದ ೧,೮೦೦ ಅಡಿ ಎತ್ತರದಲ್ಲಿದೆ. ಕೋಡು ಬಂಡೆಗಳ ಮಧ್ಯೆ ಅನೇಕ ಪ್ರಾಕೃತಿಕ ಗುಹೆಗಳಿದ್ದು ಗುಡ್ಡದ ಮೇಲೆ ತೀವ್ರಗತಿಯಲ್ಲಿ ಹಾಳಾಗಿರುವ ಎರಡು ಸುತ್ತಿನ ಕೋಟೆ ಇದೆ. ಕೋಟೆಯಲ್ಲಿರುವ ಭರಮಪ್ಪ ದೇವಾಲಯ ಮತ್ತಿತರ ಅವಶೇಷಗಳನ್ನು ಗಮನಿಸಿದರೆ ಕೋಟೆಯು ಚಿತ್ರದುರ್ಗ ಪಾಳೆಯಗಾರರ ಅವಧಿಯಲ್ಲಿ ನಿರ್ಮಾಣವಾಗದಂತೆ ಕಂಡುಬರುತ್ತದೆ. ಒಟ್ಟಾರೆ, ಕ್ರಿ.ಶ.ಸು.೧೭-೧೮ನೇ ಶತಮಾನದ ಕೋಟೆ ಇದಾಗಿದೆ.

ಕೋಟೆಯನ್ನು ಸ್ವಾಭಾವಿಕ ಕೋಡುಗಲ್ಲು ಬಳಸಿಕೊಂಡು ಕಟ್ಟಲಾಗಿದೆ. ಹೊರಕೋಟೆ ಗೋಡೆಯ ಅಗಲ ೫ ಅಡಿ ಇದ್ದು, ಮತ್ತೆ ಕೆಲವು ಕಡೆ ೪ ಅಡಿ ಇದೆ. ಮಧ್ಯಮ ಗಾತ್ರದ ಬಿಳಿ ಗ್ರಾನೈಟು ಕಲ್ಲುಗಳಿಂದ ಕೋಟೆ ಕಟ್ಟಲಾಗಿದೆ. ಗೋಡೆಯ ಮಧ್ಯೆ ಕೆಸರುಮಣ್ಣನ್ನು ಬಳಸಲಾಗಿದೆ. ಈ ಹೊರಸುತ್ತಿನ ಕೋಟೆಯು ಗುಡ್ಡದಹಳ್ಳಿಯ ಪಶ್ಚಿಮ ಭಾಗವನ್ನು ಸುತ್ತುವರೆದಿದೆ. ಪೂರ್ವದಿಂದ ಪ್ರವೇಶವನ್ನು ಕಲ್ಪಿಸಿರುವ ದಾರಿಯಲ್ಲಿ ಭಾರೀ ಗಿಡಗಂಟೆಗಳು ಬೆಳೆದಿದ್ದು, ದಾರಿಯನ್ನು ಇಲ್ಲವಾಗಿಸಿವೆ. ಹೊರಕೋಟೆಯ ಪ್ರಾರಂಭದಲ್ಲಿ ಭರಮಪ್ಪನ ದೇವಾಲಯ ಇದ್ದರೂ ದೇವಾಲಯದಲ್ಲಿ ಯಾವುದೇ ಮೂರ್ತಿಗಳಿಲ್ಲ. ದ್ವಾರಬಾಗಿಲು ಪೂರ್ಣವಾಗಿ ನಾಶವಾಗಿವೆ. ಹೊರಸುತ್ತಿನ ಕೋಟೆಗೆ ನಾಲ್ಕು ಬುರುಜುಗಳಿವೆ.

ಒಳಸುತ್ತಿನ ಕೋಟೆಗೆ ಐದು ಬುರುಜುಗಳಿದ್ದು, ಬೆಟ್ಟದ ಮೇಲಿರುವ ಕೋಡುಗಲ್ಲುಗಳನ್ನು ಬಳಸಿಕೊಂಡು ಕೋಟೆ ಕಟ್ಟಲಾಗಿದೆ. ಕೋಟೆಯೊಳಗಡೆ ೮x೭ ಚ.ಅಡಿಯ ಅಕ್ಕಮ್ಮನ ದೇವಾಲಯವಿದೆ. ದೊಡ್ಡ ಹುಟ್ಟುಬಂಡೆಯ ಮೇಲೆ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಪೂರ್ವಕ್ಕೆ ಚಿಕ್ಕ ಬಾಗಿಲು ಇರುವ ಈ ದೇವಾಲಯದಲ್ಲಿ ಯಾವುದೇ ಶಿಲ್ಪವಿಲ್ಲ. ಇದರ ಪಕ್ಕದಲ್ಲಿಯೇ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ೧೦ ಅಡಿಯ ಕಣಜವಿದೆ. ಈ ದೇವಾಲಯದ ಮುಂಭಾಗ ದೊಡ್ಡ ಹೊಂಡವಿದೆ.

[illegible]

[illegible]

[illegible]

[illegible]

[illegible]

ಒಳ ಕೋಟೆಯ ದಕ್ಷಿಣ ಬಂಡೆಯ ಮೇಲೆ ಆಂಜನೇಯನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಇದರ ಓಂಭಾಗದಲ್ಲಿ ಕಟ್ಟಡಗಳ ಅವಶೇಷಗಳಿವೆ. ಈ ಗುಡ್ಡದ ಮೇಲಿಂದ ದಕ್ಷಿಣಕ್ಕೆ ಮೊಳಕಾಲ್ಮೂರು, ನುಂಕೆಮಲೆ ಕೋಟೆಗಳು ಕಾಣುತ್ತವೆ. ಕೋಟೆಯ ಮುಂಭಾಗ ಹೊಲವೊಂದರಲ್ಲಿ ಗದ್ದುಗೆ ರೀತಿಯ ವ್ಯವಸ್ಥಿತವಾದ ಕಟ್ಟಡವಿದ್ದು, ಇದನ್ನು ಕಣಶಿಲೆಯ ಚಪ್ಪಡಿ ಕಲ್ಲಿನಲ್ಲಿ ನಿರ್ಮಿಸಿರುವರು. ಸ್ಥಳೀಯರು ಕೊಲ್ಲಾರಮ್ಮನ ಗುಡಿ ಎಂದು ಕರೆಯುವರು. ಇದನ್ನು ದೇವಾಲಯದ ಕಲ್ಲುಚಪ್ಪಡಿಗಳ ಮೇಲೆ ಸುಂದರವಾದ ಸಿಂಹ, ಹಂಸ, ಪದ್ಮ, ಆನೆ, ಕುದುರೆ, ಹಸುಕರು, ಬಿಲ್ಲುಬಾಣದ ಉಬ್ಬುಶಿಲ್ಪಗಳಿವೆ.

೪.೨೧ ಸಿದ್ದವ್ವನದುರ್ಗ

ಸಿದ್ಧವ್ವನದುರ್ಗವು ಚಿತ್ರದುರ್ಗದಿಂದ ಜಗಳೂರಿಗೆ ಹೋಗುವ ರಸ್ತೆಯಲ್ಲಿ ೧೫ ಕಿ.ಮೀ. ಅಂತರದಲ್ಲಿದೆ. ಚಿತ್ರದುರ್ಗ ಪಾಳೆಯಗಾರರು ತಮ್ಮ ರಾಣಿಯರ ಹೆಸರಿನಲ್ಲಿ ನಿರ್ಮಿಸಿರುವ ದುರ್ಗಗಳಲ್ಲಿ ಇದು ಕೂಡ ಒಂದು. ಈ ಊರಿನ ಗುಡ್ಡದ ಮೇಲೆ ಚಿಕ್ಕದಾದ ಎರಡು ಸುತ್ತಿನ ಕೋಟೆಯಿದೆ. ಕೋಟೆಯು ತುಂಬಾ ಶಿಥಿಲಗೊಂಡಿದ್ದು, ಅಳಿದುಳಿದ ಅವಶೇಷಗಳಿಂದ ಕೋಟೆಯ ರಚನೆಯನ್ನು ಹೇಳಬಹುದಾಗಿದೆ. ತಳಗೋಡೆಗಳಿಗೆ ಭಾರೀ ಗಾತ್ರದ ಕಲ್ಲುಗುಂಡುಗಳನ್ನು ಉಪಯೋಗಿಸಿದ್ದು, ೧೩ ಅಡಿ ಅಗಲದ ಕೋಟೆಗೋಡೆಯಿದೆ. ಹೊರಸುತ್ತಿನ ಕೋಟೆಯ ಸುತ್ತಲೂ ಕಂದಕವಿದೆ. ಕೋಟೆಯ ಉತ್ತರ ಭಾಗದಲ್ಲಿ ೩೪ ಅಡಿ ಎತ್ತರದ ಕಾವಲುಗೋಪುರವಿದೆ. ಈ ಕಾವಲು ಗೋಪುರದಿಂದ ಚಿತ್ರದುರ್ಗ ಕೋಟೆಯ ಅವಶೇಷಗಳನ್ನು ವೀಕ್ಷಿಸಬಹುದಾಗಿದೆ. ಈ ಗೋಪುರದ ಮೇಲ್ಭಾಗದಲ್ಲಿ ಕೆಂಚಮ್ಮನ ದೇವಾಲಯವಿದೆ. ಕೋಟೆಗೆ ಪೂರ್ವದಲ್ಲಿ ಇದ್ದ ದ್ವಾರವು ಈಗ ಕಂಡುಬರುತ್ತಿಲ್ಲ. ಸ್ಥಳೀಯರು ಹೇಳುವಂತೆ ಓಂದೆ ಇದ್ದ ಈ ದ್ವಾರಬಾಗಿಲಿಗೆ ರಂಗಯ್ಯನ ಬಾಗಿಲು ಎಂದು ಕರೆಯುತ್ತಿದ್ದರಂತೆ. ಸಿದ್ಧವ್ವನದುರ್ಗವು ಹಿಂದೆ ಈ ಕೋಟೆಯೊಳಗೆ ಇದ್ದು, ಇತ್ತೀಚೆಗೆ ಕೋಟೆಯ ಪಕ್ಕ ಸ್ಥಳಾಂತರಗೊಂಡಿದೆ. ಆಗ ಕೋಟೆಯೊಳಗೆ ಮ್ಯಾದಾರಕೇರಿ, ಲಿಂಗಾಯತರ ಕೇರಿ, ನಾಯಕರ ಕೇರಿಗಳು ಇದ್ದವೆಂದು ಊರಿನ ಪ್ರಮುಖರು ಕೋಟೆಯ ಮುಂಭಾಗದಲ್ಲಿ ಪೂರ್ವಕ್ಕೆ ೨೫-೨೫ ಚ.ಮೀ.ನ ಪುಷ್ಕರಣಿಯಿದೆ. ಉಳಿದಂತೆ ಕೋಟೆಯಲ್ಲಿ ಯಾವ ಅವಶೇಷಗಳೂ ಕಂಡುಬರುವುದಿಲ್ಲ.

ಟಿಪ್ಪಣಿಗಳು

೧. ಎ.ಕ., ಸಂ.೧೧, ಮೊಳಕಾಲ್ಮೂರು-೧೪,೨೧,೩೪
೨. ಅದೇ, ೨೧
೩. ಅದೇ, ೧೨
೪. ಅದೇ, ೨೦
೫. ಕ.ಚ., ಸಂ.೧, ಪು.೧೪
೬. ಲಕ್ಷ್ಮಣ್ ತೆಲಗಾವಿ, ೧೯೯೫, ಮೊಳಕಾಲ್ಮೂರು ತಾಲೂಕಿನ ಅಶೋಕನ ಶಾಸನಗಳು ಕೆಲವು ವಿಚಾರಗಳು, ಸತ್ಯಶುದ್ಧ ಕಾಯಕ, ರಾಜಶೇಖರಪ್ಪ ಬಿ.(ಸಂ), ಸಂ.೫, ಸಂಚಿಕೆ.೩-೪, ಪು.೧೦೩
೭. ಕ.ವಿ.ವಿ., ಪು.೪೦೫
೮. ಎ.ಕ., ಸಂ.೧೧, ಮೊಳಕಾಲ್ಮೂರು-೧೩
೯. ಹು.ಶ್ರೀ.ಜೋ.ಸಂ.ಲೇ., ಪು.೩೪೪
೧೦. ಹು.ಶ್ರೀ.ಜೋ.ಸಂ.ಲೇ., ಪು.೩೪೪
೧೧. ಹರತಿಸಿರಿ, ಪು.೩೬೧
೧೨. ದಿವಾಕರ ಆರ್.ಆರ್., ೧೯೯೨, ಕರ್ನಾಟಕದ ಪರಂಪರೆ, ಭಾಗ ೧, ಪು.೧೧೯
೧೩. ಕ.ಚ.ಸಂ., ಪು.೧೭
೧೪. ಅದೇ, ಪು.೩೫೪
೧೫. ಸುಂದರ ಅ., ೧೯೭೩, ಬ್ರಹ್ಮಗಿರಿ ಮತ್ತ ಚಂದ್ರವಳ್ಳಿ
೧೬. ಎ.ಕ., ಸಂ.೧೧, ಮೊಳಕಾಲ್ಮೂರು-೧೦
೧೭. ಹು.ಶ್ರೀ.ಜೋ.ಸಂ.ಲೇ., ಪು.೩೪೫
೧೮. ಎ.ಕ., ಸಂ.೧೧, ಮೊಳಕಾಲ್ಮೂರು-೨೦
೧೯. ಹು.ಶ್ರೀ.ಜೋ.ಸಂ.ಲೇ., ಪು.೩೪೫
೨೦. ಎ.ಕ., ಸಂ.೧೧, ಮೊಳಕಾಲ್ಮೂರು-೧೨
೨೧. ಹು.ಶ್ರೀ.ಜೋ.ಸಂ.ಲೇ., ಪು.೩೪೫
೨೨. ಕೃಷ್ಣಮೂರ್ತಿ ಪಿ.ವಿ., ೧೯೯೯, ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು, ಪ್ರಾಚೀನ ಕರ್ನಾಟಕದ ಆಡಳಿತ ವಿಧಾನಗಳು, ಕಲಬುರ್ಗಿ ಎಂ.ಎಂ., ಪು.೨೮೭
೨೩. ಎ.ಕ., ಸಂ.೧೧, ಮೊಳಕಾಲ್ಮೂರು-೨೦
೨೪. ಹು.ಶ್ರೀ.ಜೋ.ಸಂ.ಲೇ., ಪು.೩೫೪
೨೫. ಕ.ವಿ.ವಿ., ಪು.೧೦೭೬
೨೬. ಅನ್ನದಾನಿ ವೀರಭದ್ರಪ್ಪ, ಬೆಟ್ಟದ ಮೇಲಿನ ಯಾತ್ರಾಸ್ಥಳಗಳು, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ೯.೧.೧೯೯೦

೨೭. ಮೊಳಕಾಲ್ಮೂರು ನುಂಕೆಮಲೆ ಬಹು ಸಂಸ್ಕೃತಿಯ ನೆಲೆ, ಪ್ರಜಾವಾಣಿ ದಿನಪತ್ರಿಕೆ, ೩.೬.೨೦೦೧

೨೮. ತಿಪ್ಪೇಸ್ವಾಮಿ ಹೆಚ್., ಪ್ರಾಗೈತಿಹಾಸಿಕ ಅವಶೇಷಗಳ ಬೀಡು ನುಂಕಿಮಲೆ, ಪ್ರಜಾವಾಣಿ ದಿನಪತ್ರಿಕೆ, ೨೪.೬.೧೯೯೯

೨೯. ಅದೇ,

೩೦. ಎ.ಕ., ಸಂ.೧೧, ಮೊಳಕಾಲ್ಮೂರು-೪೧

೩೧. ಕ.ವಿ.ವಿ., ಪು.೧೨೦೪

೩೨. ಕುಮಾರಿ ಉಷಾ ಎಂ.ಹೆಚ್., ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೧೫

೩೩. ಹು.ಶ್ರೀ.ಜೋ.ಸಂ.ಲೇ., ಪು.೨೧೬

೩೪. ಕ.ವಿ.ವಿ., ಪು.೧೨೦೩

೩೫. ಕ.ವಿ.ವಿ., ಪು.೪೦೬

೩೬. ಲಕ್ಷ್ಮಣ್ ತೆಲಗಾವಿ ಮತ್ತು ಇತರರು(ಸಂ), ೧೯೮೦, ಚಿತ್ರದುರ್ಗ ದರ್ಶಿನಿ, ಪು.೨

೩೭. ಲಕ್ಷ್ಮಣ್ ತೆಲಗಾವಿ, ೧೯೭೯, ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಕೆ.(ಸಂ), ಪು.೨

೩೮. ಚಿದಾನಂದಮೂರ್ತಿ, ೧೯೯೩, ಹೊಸತು ಹೊಸತು, ಪು.

೩೯. ಕೃಷ್ಣಮೂರ್ತಿ ಹನೂರು, ೧೯೭೯, ಜನಪದ ಸಾಹಿತ್ಯದಲ್ಲಿ ಚಿತ್ರದುರ್ಗ, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಚಾರ್ ಕೆ(ಸಂ), ಪು.೨೨

೪೦. ಕ.ವಿ.ವಿ., ಪು.೪೦೪

೪೧. ಹು.ಶ್ರೀ.ಜೋ.ಸಂ.ಲೇ., ಪು.೨೯

೪೨. ರಾಜಶೇಖರಪ್ಪ ಬಿ., ೨೦೦೧, ದುರ್ಗಶೋಧನ, ಪು.೭

೪೩. ಎ.ಕ., ಸಂ.೧೧, ಚಿತ್ರದುಗ-೮೨

೪೪. ಅದೇ, ೧೧

೪೫. ಅದೇ, ೭,೧೨,೩೨

೪೬. ಶಿವಣ್ಣ ಕೆ.ಎಸ್., ೧೯೭೬, ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ)

೪೭. ಎ.ಕ., ಸಂ.೧೧, ಚಿತ್ರದುರ್ಗ-೨,೩

೪೮. ಶಂಕರ್ ಎಸ್. ಅಥಣಿ, ಹು.ಶ್ರೀ.ಪಾಂಡುರಂಗಜೋಯಿಸ್., ೧೯೮೮, ಚಿತ್ರದುರ್ಗದ ಏಳು ಸುತ್ತಿನ ಕೋಟೆ, ಪು.೫

೪೯. ಚಿತ್ರದುರ್ಗ ದರ್ಶಿನಿ, ಪು.೬

೫೦. ಮಂಜುನಾಥರಾವ್ ಕೆ.ವಿ., ೧೯೭೯, ಚಿತ್ರದುರ್ಗ ಇತಿಹಾಸದಲ್ಲಿ ಐತಿಹ್ಯ, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಚಾರ್ ಕೆ(ಸಂ), ಪು.೧೧೭

೫೧. ಲಕ್ಷ್ಮಣ್ ತೆಲಗಾವಿ, ೧೯೯೭, ಇದು ಚಿತ್ರದುರ್ಗ

೫೨. ಪುಟ್ಟಣ್ಣ ಎಂ.ಎಸ್., ೧೯೨೪, ಪೂರ್ವೋಕ್ತ, ಪು.೫

೫೩. ಲಕ್ಷ್ಮಣ್ ತೆಲಗಾವಿ ಮತ್ತು ಇತರರು, ೧೯೮೦, ಚಿತ್ರದುರ್ಗ ದರ್ಶಿನಿ, ಪು.೨೮

೫೪. ರಾಜಶೇಖರಪ್ಪ ಬಿ., ೨೦೦೧, ದುರ್ಗಶೋಧನ, ಪು.೧೧೪

೫೫. ೧. ಮೀರಾಸಾಬಿಹಳ್ಳಿ ಶಿವಣ್ಣ, ೧೯೯೯, ದುರುಗ ಜಾನಪದ, ಪು.೪೯

೨. ಕೃಷ್ಣಮೂರ್ತಿ ಹನೂರು, ೧೯೭೯, ಜನಪದ ಸಾಹಿತ್ಯದಲ್ಲಿ ಚಿತ್ರದುರ್ಗ, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಚಾರ್ ಕೆ.(ಸಂ), ಪು.೨೪

೩. ಅದೇ,

೪. ಅದೇ,

೫. ಅದೇ, ಪು.೨೭

೬. ಮೀರಾಸಾಬಿಹಳ್ಳಿ ಶಿವಣ್ಣ, ಪೂರ್ವೋಕ್ತ, ಪು.೪೮

೭. ಕ.ರಾ.ಕೃ,(ಸಂ), ೧೯೭೫, ಚಿತ್ರಕಲ್ಲು ಮದಕರಿ, ಪು.೬

೮. ಅದೇ, ಪು.೬

೫೬. ಹು.ಶ್ರೀ.ಪಾಂಡುರಂಗ ಜೋಯಿಸ, ೧೯೭೪, ಚಿತ್ರದುರ್ಗದಲ್ಲಿ ಪರದೇಶಿ ಯಾತ್ರಿಕರು, ಚಿತ್ರಕಲ್ಲು, ಲಕ್ಷ್ಮಣ್ ತೆಲಗಾವಿ(ಸಂ), ಪು.೪-೫

೫೭. ಈ ಮಾಹಿತಿಯನ್ನು ನನ್ನ ಅಧ್ಯಯನಕ್ಕೊದಗಿಸಿದವರು ಚಿತ್ರದುರ್ಗದ ವೆಂಕಣ್ಣಾಚಾರ್ ಕೆ.

೫೮. ಭೀಮಾರೆಡ್ಡಿ ಕೆ.ಎಸ್., ೧೯೮೭, ಮೊಳಕಾಲ್ಮೂರು ದರ್ಶನ, ಪು.೧೦

೫೯. ಅದೇ, ಪು.೧೦

೬೦. ಅನ್ನದಾನಿ ವೀರಭದ್ರಪ್ಪ, ಪೂರ್ವೋಕ್ತ

೬೧. ಕ.ವಿ.ವಿ., ಪು.೧೨೦೩

೬೨. ರೈಸ್ ಬಿ.ಎಲ್. ಗೆಜೆಟೀಯರ್, ೧೮೭೬, ಸಂ.೩, ಪು.೫೩೫

೬೩. ಎ.ಕ., ಸಂ.೧೧, ಮೊಳಕಾಲ್ಮೂರು, ೩೭

೬೪. ಅದೇ, ೩೯

೬೫. ಗಿರಿಜಾ ಟಿ., ೧೯೯೧, ಚಿತ್ರದುರ್ಗ ಜಿಲ್ಲಾದರ್ಶಿನಿ, ಪು.೨೪೫

೬೬. ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ೨೫೬, ಸತ್ಯನ್ ಬಿ.ಎನ್., ೧೯೬೭, ಚಿತ್ರದುರ್ಗ ಪತ್ರಿಕೆ ಗೆಜೇಟಿಯರ್, ಪು.೨೫೬

೬೭. ನಾಗೇಗೌಡ ಹೆಚ್.ಎಲ್., ೧೯೯೯, ಪ್ರವಾಸಿ ಕಂಡ ಇಂಡಿಯಾ, ಸಂ.೧೧, ಪು.೧೧೩

೬೮. ಜಿಲ್ಲಾ ಗೆಜೆಟಿಯರ್, ಪು.೫೬

೬೯. ಹಯವದನರಾವ್, ೧೯೩೦, ಮೈಸೂರು ಗೆಜೆಟಿಯರ್, ಸಂ.೫, ಪು.೧೪೫೪

೭೦. ಕ.ವಿ.ವಿ., ೬೩೪

೭೧. ಎ.ಕ.ಸಂ.೧೧, ಮೊಳಕಾಲ್ಮೂರು-೨೭

೭೨. ಅದೇ, ೩೪

೭೩. ಕ.ವಿ.ವಿ., ಪು.೬೩೫

೭೪. ಅದೇ, ಪು.೬೩೫

೭೫. ಭೀಮಾರೆಡ್ಡಿ ಕೆ.ಎನ್., ಪೂರ್ವೋಕ್ತ, ಪು.೧೭

೭೬. ರಂಗಪ್ಪ ಎಂ., ೧೯೩೬, ನುಂಕಿಮಲೆ ಪಾರಮಾರ್ಥ, ಪು.೨೩೪

೭೭. ಭೀಮಾರೆಡ್ಡಿ ಕೆ.ಎನ್., ಪೂರ್ವೋಕ್ತ, ಪು.೧೭

೭೮. ಎ.ಕ., ಸಂ.೧೧, ಪು.೬

೭೯. ಹು.ಶ್ರೀ.ಜೋ.ಐ.ಲೇ., ಪು.೩೨೫,೩೨೯

೮೦. ಅದೇ, ಪು.೩೨೮

೮೧. ಮಲ್ಲೇಪುರಂ ಜಿ.ವೆಂಕಟೇಶ್(ಸಂ), ೧೯೯೯, ಶಂಬಾ ಕೃತಿ ಸಂಪುಟ, ಸಂ.೩, ಪು.೧೧೪

೮೨. ಇತಿಹಾಸ ಚಂದ್ರಿಕೆ, ಸಂ.೫, ಸಂಚಿಕೆ, ೭,೮, ಪು.೨

೮೩. ಮಲ್ಲೇಪುರಂ ಜಿ.ವೆಂಕಟೇಶ್, ಪೂರ್ವೋಕ್ತ, ಪು.೧೧೪

೮೪. ಕಲಬುರ್ಗಿ ಎಂ.ಎಂ., ೧೯೯೯, ಪೂರ್ವೋಕ್ತ, ಪು.೨೧೭

೮೫. ಎ.ಕ., ಸಂ.೧೧, ಹಿರಿಯೂರು ೩೬

೮೭. ನಾಗರಾಜ್ ಬಿ.ಎಸ್., ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ, ವಿಜಯನಗರ ಅಧ್ಯಯನ ಸಂ.೨, ಪು.೯೬

೮೮. ಶಿವಶಂಕರ ಎಂ.ಎಲ್., ಚೆನ್ನಬಸಪ್ಪ ಎಸ್. ಪಾಟೀಲ್., ೧೯೯೭, ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ, ನಾಗರಾಜ್ ಬಿ.ಎಸ್., ವಿಜಯನಗರ ಅಧ್ಯಯನ, ಸಂ.೨, ಪು.೯೬

೮೯. ಹಸ್ತಪ್ರತಿಯೊಂದರ ಪ್ರಕಾರ

೯೦. ವೇಣಕಲ್ಲುಗುಡ್ಡದ ಮಠದ ಚಂದ್ರಶೇಖರಯ್ಯನವರ ಹತ್ತಿರವಿರುವ ದಾಖಲೆಗಳಲ್ಲಿ ಪ್ರಸ್ತಾಪಿಸಿರುವಂತೆ.

೯೧. ಹಸ್ತಪ್ರತಿಯೊಂದರ ಪ್ರಕಾರ

೯೨. ವೀರಪ್ಪ ಎಂ., ೧೯೯೪, ವೀರ ಮಹೇಶ್ವರಿ ಅಮ್ಮಾಜಿಯರ ಚರಿತ್ರೆ, ಪು.೭

೯೩. ಅದೇ, ಪು.೫

೯೪. ಹಯವದನರಾವ್, ೧೯೩೦, ಮೈಸೂರು ಗೆಜೆಟಿಯರ್, ಸಂ.೫, ಪು.೧೪೫೭ ಮತ್ತು ಬಾಗೂರು ಆರ್. ನಾಗರಜಪ್ಪ, ೧೯೪೮, ಹೊಸದುರ್ಗ ಸುತ್ತ, ಪು.೧೦೪

೯೫. ಪ್ರಾಚೀನ ಶಾಸನ ಲೇಖನ ಸಂಗ್ರಹ, ೧೯೬೫, ಪು.೭೩

೯೬. ಬಾಗೂರು ನಾಗರಾಜಪ್ಪ, ಪೂರ್ವೋಕ್ತ, ಪು.೧೦೪

೯೭. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು.೬೮

೯೮. ಚಿತ್ರದುರ್ಗ ಜಿಲ್ಲೆಯ ಸ್ಥಳನಾಮಗಳು-ಒಂದು ಅವಲೋಕನ, ಪು.೪೩

೯೯. ಜಿಲ್ಲಾ ಗೆಜೆಟಿಯರ್, ಪು.೫೬ ಮತ್ತು ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು.೬೧

೧೦೦. ಶಿವಾನಂದ ವಿ., ೧೯೮೭, ಗುಂಡಬ್ರಹ್ಮಯ್ಯರ ಐತಿಹ್ಯ, ಹರತಿಸಿರಿ, ಲಕ್ಷ್ಮಣ್‌ತೆಲಗಾವಿ(ಸಂ), ಪು.೧೦೭

೧೦೧. ರಾಜಶೇಖರಪ್ಪ ಬಿ., ೨೦೦೧, ಪೂರ್ವೋಕ್ತ, ಪು.೨೩೮

೧೦೨. ಬಾಗೂರು ನಾಗರಾಜಪ್ಪ, ಪೂರ್ವೋಕ್ತ, ಪು.೨೦

೧೦೩. ಶ್ರೀನಿವಾಸ್ ಎಂ.ವಿ., ೧೯೭೪, ಜಾನಕಲ್ಲು, ಚಿತ್ರಕಲ್ಲು, ಲಕ್ಷ್ಮಣ್‌ತೆಲಗಾವಿ(ಸಂ), ೧೯೭೪, ಪು.೧೫

೧೦೪. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು.೨೪೯

೧೦೫. Sheshadri M., 1956, Stone Using Culture of Pre prohistoric Mysore, P.15

೧೦೬. ಎ.ಕ., ಸಂ.೧೧, ಹೊಳಲ್ಕೆರೆ, ೧೦೬

೧೦೭. ಅದೇ, ೧೦೭

೧೦೮. ಬಾಗೂರು, ಪೂರ್ವೋಕ್ತ, ಪು.೨೨

೧೦೯. ತಿಪ್ಪಯ್ಯ ಎ.ಓ., ೨೦೦೦, ಶ್ರೀರಾಂಪುರ ಸ್ಥಳನಾಮ ವಿವೇಚನೆ, ಸಿರುಮ ಸ್ಮರಣ ಸಂಚಿಕೆ, ಈರಣ್ಣ(ಸಂ), ಪು.೨೭

೧೧೦. ಅದೇ, ಪು.೨೭

೧೧೧. ೧. ಕಲಬುರ್ಗಿ ಎಂ.ಎಂ.(ಸಂ), ೧೯೮೩, ಸಿರುಮಣನಾಯಕನ ಸಾಂಗತ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ

೨. ಕಲಬುರ್ಗಿ ಎಂ.ಎಂ.(ಸಂ), ೧೯೯೧, ಸಿರುಮನ ಚರಿತೆ, ಶ್ರೀ ಜಗದ್ಗುರು ಶಿವರಾತ್ರೇಶ್ವರ ಗ್ರಂಥಮಾಲೆ, ಸುತ್ತೂರು, ಸಂಸ್ಥಾನಮಠ, ಮೈಸೂರು

೩. ಕಲಬುರ್ಗಿ ಎಂ.ಎಂ.(ಸಂ), ೧೯೯೪, ಗೊಲ್ಲ ಸಿರುಮನ ಚರಿತ್ರೆ, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ

೧೧೨. ಶೈಲಜಾ ಹೊಸಳ್ಳೇರ, ೨೦೦೧, ಬೂದಿಹಾಳು ಪಾಳೆಯಗಾರರು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ.(ಸಂ), ಪು.೧೩೬

೧೧೩. ಹಯವದನರಾವ್, ೧೯೩೦, ಮೈಸೂರು ಗೆಜೇಟಿಯರ್, ಪು.೧೪೧೪

೧೧೪. ಎ.ಕ., ಸಂ.೧೨, ಚಿಕ್ಕನಾಯಕನಹಳ್ಳಿ-೯,೨೬

೧೧೫. ಹುಲ್ಲೂರು ಶ್ರೀನಿವಾಸ ಜೋಯಿಸರು, ೧೯೭೭, ಸಿರಮನೃಪಾಲ, ಪು.೫

೧೧೬. ದೇವರಕೊಂಡಾರೆಡ್ಡಿ, ಬೂದಿಹಾಳು ನಾಯಿಂದರಶಾಸನ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ೬೫,೧ ಮತ್ತು ೨, ಪು.೮೫

೧೧೭. ಎ.ಕ., ಸಂ.೧೨, ಚಿಕ್ಕ ನಾಯಕನಹಳ್ಳಿ-೫,೬,೭

೧೧೮. ಎಂ.ಎ.ಆರ್., ೧೯೪೭, ಪು.೩೬

೧೧೯. ನಾಗರಾಜಪ್ಪ ಮ., ಇದು ರಾವಣನಿಹ ಲಂಕೆಯೋ, ರಾಮನಿಹ ಕುಮಟವೋ, ಕನ್ನಡಪ್ರಭ ದಿನಪತ್ರಿಕೆ, ೧೦.೬.೧೯೭೯

೧೨೦. ಶೈಲಜ ಸಿದ್ದಪ್ಪ ಹೊಸಳ್ಳೇರ, ೧೯೯೬, ಸಿರುಮನ ಸಾಂಗತ್ಯಗಳು-ಒಂದು ಅಧ್ಯಯನ (ಅಪ್ರಕಟಿತ ಮಹಾಪ್ರಬಂಧ, ಕ.ವಿ.ವಿ., ಧಾರವಾಡ) ಪು.೧೨೦

೧೨೧. ಅದೇ, ಪು.೧೨೭

೧೨೨. ಅದೇ, ಪು.೧೩೪

೧೨೩. ಅದೇ, ಪು.೩೪೬

೧೨೪. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು.೮೪

೧೨೫. ಅದೇ, ಪು.೮೫

೧೨೬. ಪುಟ್ಟಣ್ಣ, ಎಂ.ಎಸ್., ಪೂರ್ವೋಕ್ತ, ಪು.೨೯

೧೨೭. ವಸು ಎಂ.ವಿ.(ಸಂ), ಪೂರ್ವೋಕ್ತ, ಪು.೮೧

೧೨೮. ಎಂ.ಎ.ಆರ್., ೧೯೩೦, ಪು.೩೨

೧೨೯. ಎ.ಕ., ಸಂ.೧೧, ಹಿರಿಯೂರು-೧

೧೩೦. ಕ.ವಿ.ವಿ., ಪು.೧೦೭

೧೩೧. ಎ.ಕ., ಸಂ.೧೧, ಹಿರಿಯೂರು-೧೧

೧೩೨. ಕ.ವಿ.ವಿ., ಪು.೧೦೭

೧೩೩. ಚಿತ್ರಲಿಂಗಯ್ಯ ಎಂ.ವಿ., ೧೯೮೭, ಹರಿತಿ ಪಾಳೆಯಗಾರರ ಮೂಲ ವಂಶಾವಳಿ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೨೯೨

೧೩೪. ಎ.ಕ., ಸಂ.೧೧, ಹಿರಿಯೂರು-೩೬,೩೯

೧೩೫. ಲಕ್ಷ್ಮಣ್ ತೆಲಗಾವಿ(ಸಂ), ಹರತಿಸಿರಿ, ಪು.೨೭೬

೧೩೬. ಗಿರಿಜಾ ಟಿ, ೧೯೯೧, ಚಿತ್ರದುರ್ಗ ಜಿಲ್ಲಾದರ್ಶಿನಿ, ಪು.೧೫೦

೧೩೭. ಕ.ವಿ.ವಿ., ಪು.೧೦೭

೧೩೮. Francis Buchanan, 1988, A Journey From Madras Through the Countries of Mysore, p.342

೧೩೯. ಎ.ಕ.ಸಂ.೧೧, ಮೊಳಕಾಲ್ಮೂರು-೨೫

೧೪೦. ಅದೇ,

೧೪೧. ಇತಿಹಾಸ ಚಂದ್ರಿಕೆ, ಸಂಚಿಕೆ.೨,೩, ಪು.೧

೧೪೨. ಕರೀಗೌಡ ಬೀಚನಹಳ್ಳಿ(ಸಂ), ೨೦೦೦, ಕರಕುಶಲಕಲೆಗಳು, ಪು.೨೬

೧೪೩. ಎ.ಕ., ಸಂ.೧೧, ಮೊಳಕಾಲ್ಮೂರು-೨೫

೧೪೪. ತಿಪ್ಪೇಸ್ವಾಮಿ ಎಸ್., ಚಾರಿತ್ರಿಕವಾಗಿ ತುರುವನೂರು, ಪ್ರಜಾಪ್ರಗತಿ ದಿನಪತ್ರಿಕೆ, ೧೩.೦೨.೨೦೦೨

೧೪೫. ಮಲ್ಲೇಪುರಂ ಜಿ.ವೆಂಕಟೇಶ್, ಪೂರ್ವೋಕ್ತ, ೨೦೦೦, ಪು.೩೯೫

೧೪೬. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ,

೧೪೭. ಕ.ವಿ.ವಿ., ಪು.೭೪೬

೧೪೮. ಎಂ.ಎ.ಆರ್., ೧೯೪೭, ಪು.೩೫

೧೪೯. ಅದೇ,

೧೫೦. ಹಸ್ತಪ್ರತಿಯೊಂದರ ಆಧಾರದ ಮೇರೆಗೆ

೧೫೧. ಮಹಾಲಿಂಗಪ್ಪ, ೧೯೯೬, ತುರುವನೂರು ಗ್ರಾಮದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಹೋರಾಟದ ನೆನಪು ಸ್ಮರಣ ಸಂಚಿಕೆ, ಪು.೩

೧೫೨. ಎ.ಕ., ಸಂ.೧೧, ಹೊಳಲ್ಕೆರೆ-೭೩

೧೫೩. ಕೃಷ್ಣಮೂರ್ತಿ ಪಿ.ವಿ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು, ಕಲಬುರ್ಗಿ ಎಂ.ಎಂ.(ಸಂ), ಪು.೨೨೫,೨೨೬

೧೫೪. ಮುಕುಂದರೆಡ್ಡಿ ಮಾ.ನಾ., ೧೯೮೭, ಹಿರಿಯೂರು ತಾಲೂಕು ದರ್ಶನ, ಪು.೪೩

೧೫೫. ಸಣ್ಣ ಬಾಳಪ್ಪ ಹೊಸಮನಿ, ೧೯೭೯, ಐಸಿರಿ ಹಿರಿಯೂರು, ಪು.೧೨೦

೧೫೬. ಅದೇ, ಪು.೧೨೧

೧೫೭. ಹುಲ್ಲೂರು ಶ್ರೀನಿವಾಸ ಜೋಯಿಸರು, ೧೯೭೯, ಗಂಡುಗಲಿ ಕುಮಾರರಾಮ, ಪು.೧೨೦

೧೫೮. ಅದೇ, ಪು.೧೨೦

೧೫೯. ಗಿರಿಜಾ ಟಿ., ಪೂರ್ವೋಕ್ತ, ಪು.೩೫೨

೧೬೦. ತವಗ ಎಂದರೆ ಕೋಟೆಯ ಮೇಲೆ ಫಿರಂಗಿ ಇಡುವ ಸ್ಥಳ ಎಂದು ಹೇಳಲಾಗಿದೆ (ಶ್ರೀಕಂಠಯ್ಯ ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಮೈಸೂರು ವಿ.ವಿ., ೧೯೮೩ ಪು.೯೪).

❑❑

ಅಧ್ಯಾಯ ೫

ರಕ್ಷಣಾ ಸಂಬಂಧಿ ಸ್ಮಾರಕಗಳು

೫

ರಕ್ಷಣಾ ಸಂಬಂಧಿ ಸ್ಮಾರಕಗಳು

ರಕ್ಷಣಾ ವಾಸ್ತುಶಿಲ್ಪವೆಂದರೆ ಕೇವಲ ಕೋಟೆಗೋಡೆ ಮಾತ್ರವಲ್ಲ ಕೋಟೆಯೊಂದಿಗೆ ಹತ್ತುಹಲವು ಸ್ಮಾರಕಗಳಿವೆ. ಅವುಗಳೆಂದರೆ ಬುರುಜು, ಬತೇರಿ, ಕೊತ್ತಲ, ಕಂದಕ, ದ್ವಾರಬಾಗಿಲು, ದಿಡ್ಡಿ, ಕಾವಲುಗೋಪುರಗಳು ರಕ್ಷಣಾ ವಾಸ್ತುವಿನ ಭಾಗಗಳಾಗಿದ್ದರೆ, ದೇವಾಲಯಗಳು, ನೀರಿನ ಆಶ್ರಯಗಳು, ಗರಡಿಮನೆ, ಮದ್ದಿನಮನೆ, ಸೈನಿಕ ನೆಲೆ, ಅರಮನೆ, ಬಿತ್ತಿಶಿಲ್ಪ, ವೀರಗಲ್ಲು, ಕಣಜ ಮುಂತಾದ ಸ್ಮಾರಕಗಳು ರಕ್ಷಣಾವಾಸ್ತುವಿನ ಇತರೆ ಸ್ಮಾರಕಗಳಾಗಿವೆ. ಎಲ್ಲಾ ಸ್ಮಾರಕಗಳು ಒಂದು ಇನ್ನೊಂದರಿಂದ ರಕ್ಷಣೆ ಪಡೆದು ಕೋಟೆಯ ಸ್ಮಾರಕಗಳು ಎಂದೆನಿಸಿಕೊಂಡಿವೆ. ಈ ಸ್ಮಾರಕಗಳು ಒಂದಲ್ಲಾ ಒಂದು ರೀತಿ ಭಾವನಾತ್ಮಕ ಸಂಬಂಧಗಳನ್ನು ಹೊಂದಿವೆ. ಅನೇಕ ಪ್ರಾಚೀನ ಕಾವ್ಯಗಳು, ಸ್ಥಳ ಪುರಾಣಗಳು ಕೆಲವು ಸ್ಮಾರಕಗಳ ಬಗ್ಗೆ ವರ್ಣನೆ ಮಾಡುತ್ತವೆ. ಇಂತಹ ಸ್ಮಾರಕಗಳ ಹಿಂದೆ ಪುರಾಣ, ಐತಿಹ್ಯ, ಇತಿಹಾಸ ಹಾಗೂ ಘಟನೆಗಳ ಚಿತ್ರಣವೇ ಅಡಗಿದೆ. ಇವು ಬಹುಪಯೋಗಿ ಸ್ಮಾರಕಗಳಾಗಿದ್ದು, ರಕ್ಷಣಾವಾಸ್ತುಶಿಲ್ಪ ಎಂದೆನಿಸಿಕೊಳ್ಳಲು ಅಗತ್ಯವಾಗಿದ್ದವು. ಈ ಎಲ್ಲ ಸ್ಮಾರಕಗಳನ್ನು ನಿರ್ಮಾಣ ಮಾಡಿರುವ ಹಿನ್ನಲೆ, ಉದ್ದೇಶ, ರಚನೆ, ವಿನ್ಯಾಸ, ಪ್ರಾಮುಖ್ಯತೆ, ಮತ್ತಿತರೆ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ತಿಳಿದುಕೊಳ್ಳಲು ಯತ್ನಿಸಲಾಗಿದೆ.

೫.೧ ದ್ವಾರಬಾಗಿಲುಗಳು

"ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಊರು ಬಾಗಿಲು ಹಾಕಿದಂತೆ" ಎನ್ನುವ ಗಾದೆಮಾತು ದ್ವಾರಬಾಗಿಲು ಅಥವಾ ಊರು ಬಾಗಿಲುಗಳ ಪ್ರಾಮುಖ್ಯತೆಯನ್ನು ಸಾರುತ್ತದೆ. ಊರು ಬಾಗಿಲು

[illegible]

[illegible]

[illegible]

[illegible]

ಭದ್ರವಾಗಿದ್ದರೆ ಊರೆಲ್ಲಾ ರಕ್ಷಣೆಯಾಗಿರುತ್ತದೆ. ಹಾಗಾಗಿ ಬಾಗಿಲುಗಳನ್ನು ಭದ್ರವಾಗಿ ನಿರ್ಮಿಸುತ್ತಿದ್ದರು. ಕೋಟೆಗಳಲ್ಲಿ ಇಂತಹ ಬಾಗಿಲುಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ಕೋಟೆಯ ಆಗಮನ ಮತ್ತು ಕೋಟೆಯ ನಿರ್ಗಮನಗಳೆರಡೂ ಹೆಬ್ಬಾಗಿಲುಗಳ ಮೂಲಕವಾದ್ದರಿಂದ ಬಾಗಿಲುಗಳ ರಚನೆಗೆ ಹೆಚ್ಚು ಒತ್ತು ನೀಡುವುದು ಅನಿವಾರ್ಯವಾಗಿತ್ತು. ಹೆಬ್ಬಾಗಿಲುಗಳಿರುತ್ತಿದ್ದ ಕೋಟೆ ಗೋಡೆಯ ಗಾತ್ರ ಮತ್ತು ವಿಸ್ತಾರದಲ್ಲಿ ಹೆಚ್ಚಿರುವುದು ಸಾಮಾನ್ಯವಾಗಿದೆ. ಬಾಗಿಲುಗಳನ್ನು ಶತ್ರುಗಳು ನೇರವಾಗಿ ನುಗ್ಗದಂತೆ ಹಾಗೂ ವಿವಿಧ ದಿಕ್ಕುಗಳಿಂದ ಪ್ರವೇಶ ಮಾಡದಂತೆ ಬಾಗಿಲುಗಳನ್ನು ನಿರ್ಮಿಸಲಾಗುತ್ತಿತ್ತು. ಸಾಮಾನ್ಯವಾಗಿ ಒಂದು ಬಾಗಿಲಿನಿಂದ ಮತ್ತೊಂದು ಬಾಗಿಲಿಗೆ ಪ್ರವೇಶವನ್ನು ನೇರಗೊಳಿಸದಂತೆ ರಚಿಸಿರುವರು. ದೂರದಿಂದ ನೋಡುಗರಿಗೆ ಬಾಗಿಲುಗಳು ಒಂದೇ ನೇರದಲ್ಲಿರುವಂತೆ ಕಂಡುಬಂದರೂ ಇವು ವಿರುದ್ಧ ದಿಕ್ಕಿನಲ್ಲಿ ಇರುತ್ತಿದ್ದವು. ಬಾಗಿಲ ಅಗಲ, ಉದ್ದ ಮತ್ತು ಎತ್ತರಗಳಲ್ಲಿ ವಿಶೇಷ ವಿನ್ಯಾಸ ಹಾಗೂ ತಂತ್ರಗಳನ್ನು ಅಳವಡಿಸಿದ್ದಾರೆ.

ಚಿತ್ರದುರ್ಗ ಕೋಟೆಯಲ್ಲಿರುವ ಬಾಗಿಲುಗಳು ಒಂದೊಂದು ರೀತಿಯ ವಿನ್ಯಾಸವನ್ನು ಹೊಂದಿವೆ. ಈಗಿನ ಮುಖ್ಯ ಪ್ರವೇಶ ದ್ವಾರವಾಗಿರುವ ಕಾಮನಬಾಗಿಲನ್ನು ಹುಲಿಮುಖದ ಬಾಗಿಲು ಎಂದು ಕರೆಯುತ್ತಾರೆ. ಈ ಬಾಗಿಲಿನಿಂದ ಪ್ರವೇಶ ಮಾಡಿದ ಶತ್ರುಗಳು ಹುಲಿಯ ಬಾಯಿಗೆ ಸಿಕ್ಕಂತೆ ಸಾಯುತ್ತಿದ್ದರಿಂದ ಈ ಬಾಗಿಲಿಗೆ ಹುಲಿಮುಖದ ಬಾಗಿಲೆಂದು ಕರೆಯುತ್ತಾರೆ. ಈ ಬಾಗಿಲ ನಂತರ ಸಿಗುವ ಬಾಗಿಲು ಜಾಗಟೆ ಬಾಗಿಲು. ಕೋಟೆಯ ಬಾಗಿಲನ್ನು ತೆಗೆಯುವಾಗ ಜಾಗಟೆಗಳು ಶಬ್ದ ಮಾಡುತ್ತಿದ್ದು, ಮೈಮರೆತು ನಿದ್ರಿಸುತ್ತಿದ್ದ ಪಹರೆಯವರಿಗೆ ಎಚ್ಚರ ಕೊಡುವಂತೆ ಇಂತಹ ಜಾಗಟೆಗಳನ್ನು ಇಲ್ಲಿ ಕಟ್ಟುತ್ತಿದ್ದರೆಂದು ಹೇಳಲಾಗಿದೆ. ಜಾಗಟೆ ಶಬ್ದ ಬಂದಾಗ ಪಹರೆಯವರು ಒಳ ಬರುವವರನ್ನು ಪರೀಕ್ಷಿಸಿಯೇ ಬಾಗಿಲನ್ನು ತೆಗೆಯುತ್ತಿದ್ದರು. ಇದರ ಮುಂಭಾಗದಲ್ಲಿರುವ ಐದನೆ ಸುತ್ತಿನ ಬಾಗಿಲಿಗೆ ಇದೇ ರೀತಿಯ ಗಂಟೆಗಳನ್ನು ಕಟ್ಟುತ್ತಿದ್ದರಿಂದ ಗಂಟೆಯ ಬಾಗಿಲೆಂದು ಹೆಸರಾಗಿದೆ. ಆರನೇ ಸುತ್ತಿನ ಬಾಗಿಲು ನೋಡಲು ತುಂಬಾ ಸುಂದರವಾಗಿ ರಚನೆಗೊಂಡಿದ್ದರಿಂದ ಈ ಬಾಗಿಲನ್ನು ಟೀಕಿನ ಬಾಗಿಲೆಂದೂ ಹಾಗೂ ಕಸ್ತೂರಿ ರಂಗಪ್ಪ ನಾಯಕನು ಈ ಬಾಗಿಲನ್ನು ನಿರ್ಮಿಸಿದ್ದರಿಂದ ಕಸ್ತೂರಿರಂಗಪ್ಪ ನಾಯಕನ ಬಾಗಿಲೆಂಬ ಹೆಸರಿದೆ. ಸುತ್ತಲೂ ಎತ್ತರವಾದ ಪ್ರಾಕಾರ ಗೋಡೆ ಮೂವತ್ತು ಅಡಿ ಎತ್ತರವಿದೆ. ಗೋಡೆಯ ಮೇಲೆ ಫಿರಂಗಿ ಗೂಡುಗಳು, ಗೋಡೆಯ ಮಧ್ಯೆ ಕೋವಿ ಕಿಂಡಿಗಳು ಬಾಗಿಲ ಮೇಲೆ ಕೋಟೆಯ ತೆನೆಗಳು-ಓಗೆ ವಿಶೇಷವಾಗಿ ರಕ್ಷಣಾದೃಷ್ಟಿಯಿಂದಲೇ ನಿರ್ಮಿಸಿರುವ ದ್ವಾರಬಾಗಿಲು ಇದಾಗಿದೆ. ದ್ವಾರಬಾಗಿಲ

[illegible]

[illegible]

ಎರಡೂ ಕಡೆಗಳಲ್ಲಿ ೪೦-೨೫ ಇಂಚಿನ ಅಳತೆಯ ಕಲ್ಲುಗಳ ಮಧ್ಯೆ ಕಬ್ಬಿಣದ ಸರಳನ್ನು ಬಿಗಿದು ಬಾಗಿಲ ಗೋಡೆಯನ್ನು ಆನೆಗಳಿಂದಲೂ ಎಳೆಸಿದರೂ ಕೆಡವಲಾಗದಂತೆ ನಿರ್ಮಿಸಲಾಗಿದೆ.

ಹೊರಕೋಟೆಯ ಲಾಲ್‌ಗಡದ ಬತೇರಿಯ ಬಾಗಿಲನ್ನು ವಿಶೇಷ ರಕ್ಷಣಾ ಚಾತುರ್ಯದಿಂದ ನಿರ್ಮಿಸಲಾಗಿದೆ. ಕಂದಕದ ಬಳಿ ಎರಡು ಬೃಹದಾಕಾರವಾದ ಬತೇರಿಗಳ ಮಧ್ಯೆ ಸ್ವಾಭಾವಿಕ ದಾರಿಯನ್ನು ಕಲ್ಪಿಸಲಾಗಿದೆ. ಬತೇರಿಗಳ ಮುಂಭಾಗ ವಿಸ್ತಾರವಾದ ಚೌಕಾಕಾರದ ಅಂಕಣವನ್ನು ನಿರ್ಮಿಸಲಾಗಿದೆ. ಹೀಗೆ ಅಂಕಣದ ನಾಲ್ಕೂ ಕಡೆ ಎತ್ತರವಾದ ಪ್ರಾಕಾರವಿದೆ. ಅಂಕಣದ ಪಶ್ಚಿಮಕ್ಕೆ ದ್ವಾರಬಾಗಿಲಿದೆ. ಬತೇರಿಗಳ ಮುಂದೆ ಇರುವ ಕಂದಕಕ್ಕೆ ತೂಗು ಸೇತುವೆಯನ್ನು ಅಳವಡಿಸಿದ್ದುದನ್ನು ಅಲ್ಲಿನ ಅವಶೇಷಗಳಿಂದ ಗುರುತಿಸಬಹುದು. ಹೀಗೆ ಇಲ್ಲಿ ಶತ್ರುಗಳನ್ನು ಮೂರು ರೀತಿಯಲ್ಲಿ ದಾರಿತಪ್ಪಿಸಿ ಅವರನ್ನು ಪೇಚಿಗೆ ಸಿಲುಕಿಸಿ ಶಿಕ್ಷೆಗೆ ಒಳಪಡಿಸುವ ತಂತ್ರದಿಂದ ಈ ದ್ವಾರವನ್ನು ನಿರ್ಮಿಸಲಾಗಿದೆ. ಚಿತ್ರದುರ್ಗದ ಕೋಟೆಯಲ್ಲಿ ಸಾಮಾನ್ಯವಾಗಿ ೧೪ ಅಡಿ ಎತ್ತರ, ೮ ಅಡಿ ಅಗಲ, ೩೦.೫ ಅಡಿ ಉದ್ದದ ಕಾಮಬಾಗಿಲನ್ನು ಬಿಟ್ಟರೆ ಉಳಿದಂತೆ ೧೧ ಅಡಿ ಎತ್ತರ ೭.೬ ಅಡಿ ಅಗಲ ಉದ್ದವನ್ನು ಕೋಟೆ ಗೋಡೆಯ ಗಾತ್ರಕ್ಕೆ ತಕ್ಕಂತೆ ವಿಸ್ತರಿಸಿರುವ ದ್ವಾರಬಾಗಿಲುಗಳೇ ಹೆಚ್ಚು. ಈ ಎಲ್ಲಾ ದ್ವಾರಗಳಲ್ಲೂ ಬಾಗಿಲು ಹಾಕುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆದರೆ ಈ ಬಾಗಿಲ ಕದಗಳು ಉಳಿದುಬಂದಿಲ್ಲ. ಬಾಗಿಲುವಾಡಗಳನ್ನು ಸಾಮಾನ್ಯವಾಗಿ ಬಳ್ಳಿ ಸುರಳಿಗಳಿಂದ ಅಲಂಕೃತಗೊಳಿಸಲಾಗಿದ್ದು, ದೇವತೆಯ ಶಿಲ್ಪಗಳನ್ನು ರಕ್ಷಣಾದೃಷ್ಟಿಯಿಂದ ಅಳವಡಿಸಿದ್ದಾರೆ.

ಬ್ರಹ್ಮಗಿರಿ ಕೋಟೆಯಲ್ಲಿ ಸ್ವಭಾವಿಕ ಕಲ್ಲುಗುಂಡುಗಳ ಮಧ್ಯೆ ಬಾಗಿಲುಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಇಂತಹ ಕಲ್ಲುಗುಂಡುಗಳನ್ನು ಬಳಸಿ ನಿರ್ಮಿಸಿದ ಸ್ವಾಭಾವಿಕ ದ್ವಾರ ಜಟಂಗಿರಾಮೇಶ್ವರ ಮತ್ತು ಲುಂಕೇಕೋಟೆಗಳಲ್ಲಿವೆ. ಜಾನಕಲ್ಲು, ಹೊಸದುರ್ಗ, ಮೊಳಕಾಲ್ಮೂರು ಕೋಟೆಗಳಲ್ಲೂ ಚಿತ್ರದುರ್ಗದ ದ್ವಾರಬಾಗಿಲುಗಳಂತೆ ದ್ವಾರಬಾಗಿಲುಗಳನ್ನು ರಚಿಸಲಾಗಿದೆ. ಬಹಳಷ್ಟು ಕೋಟೆಗಳಲ್ಲಿ ದ್ವಾರಬಾಗಿಲುಗಳು ಶಿಥಿಲಗೊಂಡಿವೆ.

ದ್ವಾರಬಾಗಿಲ ಪಕ್ಕದಲ್ಲಿರುವ ದಿಡ್ಡಿಬಾಗಿಲು ದ್ವಾರಬಾಗಿಲಿನಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇವುಗಳನ್ನು ವಿವಿಧ ವಿನ್ಯಾಸದಲ್ಲಿ ರೂಪಿಸಲಾಗಿದೆ. ಮೊಳಕಾಲ್ಮೂರು ಕೋಟೆಯೊಳಗಿನ ದ್ವಾರಬಾಗಿಲ ಮಧ್ಯಭಾಗದಲ್ಲಿ ಬಲಕ್ಕೆ ತಿರುಗಿ ಮುಂದೆ ಪ್ರವೇಶ ಮಾಡಿ ಮತ್ತೆ ದ್ವಾರಬಾಗಿಲನ್ನು ಸೇರುವಂತೆ ರಚಿಸಲಾಗಿದೆ. ಬಾಗಿಲನ್ನು ಹಾಕಿದಾಗ ಮಾತ್ರ ಈ ದಿಡ್ಡಿಬಾಗಿಲಿನಿಂದ ಪ್ರವೇಶಿಸಬಹುದಾಗಿದೆ.

ಚಿತ್ರದುರ್ಗದ ಕೋಟೆಗಳಲ್ಲಿ ಇದೇ ರೀತಿಯ ದಿಡ್ಡಿಬಾಗಿಲುಗಳು ಇವೆಯಾದರೂ ಮತ್ತೆ ಕೆಲವು ದ್ವಾರಬಾಗಿಲಿನಂತೆ, ನೇರ ಪ್ರವೇಶವನ್ನು ಪಡೆದುಕೊಂಡಿವೆ. ಹೊಸದುರ್ಗದ ಕೋಟೆಯ ಹನುಮನಕೊಂಬೆ ಪ್ರದೇಶದಲ್ಲಿರುವ ದ್ವಾರಬಾಗಿಲನ್ನು ಮಧ್ಯಭಾಗದಿಂದ ಬಲಕ್ಕೆ ತಿರುಗಿ ಪುನಃ ಎಡಕ್ಕೆ ಬರುವಂತೆ ರಚಿಸಲಾಗಿದೆ. ವೇಣುಕಲ್ಲು ಗುಡ್ಡದ ಕೋಟೆಯಲ್ಲಿ ದಿಡ್ಡಿಬಾಗಿಲು ಒಬ್ಬ ಮನುಷ್ಯ ಹೋಗಬಹುದಾದಷ್ಟು ಸ್ಥಳಾವಕಾಶ ಹೊಂದಿದ್ದು ಸುರಂಗದ ರೀತಿಯಲ್ಲಿದೆ. ಹೀಗೆ ವಿಶೇಷ ರಚನೆಯ ದಿಡ್ಡಿಬಾಗಿಲುಗಳನ್ನು ಕೋಟೆಗಳಲ್ಲಿ ಕಾಣಬಹುದು.

೫.೨ ಬುರುಜುಗಳು

ಕೋಟೆಯ ಅಂಗಭಾಗಗಳಲ್ಲಿ ಬುರುಜುಗಳು ತುಂಬಾ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಕೋಟೆಯ ಪ್ರಾಕಾರದ ಮೇಲೂ ಗೋಪುರದ ತುದಿಯಲ್ಲೂ ಕಟ್ಟುವ ಮತ್ತೊಂದು ವರ್ತುಲಾಕಾರದ ಕಟ್ಟಡವೇ ಬುರುಜು. ಕೋಟೆಗೋಡೆಯ ಮೇಲಿನ ಬುರುಜನ್ನೇ ಕೊತ್ತಳವೆಂದು ಕರ್ನಾಟಕ ವಾಸ್ತುಶಿಲ್ಪದಲ್ಲಿ ವಿವರಿಸಲಾಗಿದೆ.[೧] ಕೆಲವು ಕಡೆ ಬುರುಜು, ಬತೇರಿ, ಕೊತ್ತಲಗಳನ್ನು ಒಂದೇ ಅರ್ಥದಲ್ಲಿ ಬಳಸಲಾಗಿದೆ. ಈ ಪದಗಳ ಅರ್ಥವನ್ನು ಹುಡುಕುವುದು ಕಷ್ಟವಾದರೂ ಇವುಗಳ ಉದ್ದೇಶ ಒಂದೇಯಾಗಿದೆ. ಗುಡಿ-ಗೋಪುರಗಳು ದೇವಾಲಯಗಳಿಗೆ ಸಂಬಂಧಿಸಿದಂತೆ ಕೋಟೆ-ಕೊತ್ತಲುಗಳು ಕೋಟೆಗೆ ಸಂಬಂಧಿಸಿದವು. ಕೋಟೆ ಗೋಡೆಯ ಹೊರಭಾಗಕ್ಕೆ ನಾಲಿಗೆಯಾಕಾರದಲ್ಲಿ ಚಾಚಿಕೊಂಡಿರುವ ಭಾಗವೇ ಬುರುಜು ಇವುಗಳು ಸಾಮಾನ್ಯವಾಗಿ ವೃತ್ತಾಕಾರ ಚೌಕಾಕಾರವಾಗಿ ಇರುತ್ತವೆ. ಕೆಲವು ಕಡೆ ಅನೇಕ ಕೋನಗಳಲ್ಲಿ ನಿರ್ಮಿಸಲಾಗಿದೆ. ಜಿಲ್ಲೆಯಲ್ಲಿ ಕಂಡುಬಂದಿರುವ ಕೋಟೆಗಳಲ್ಲಿ ವಿವಿಧ ರೀತಿಯ ಬುರುಜುಗಳು ಕಂಡುಬಂದಿವೆ. ಈ ಬುರುಜುಗಳ ರಚನೆ ಮತ್ತು ವಿನ್ಯಾಸದಲ್ಲಿ ಬಹಳಷ್ಟು ಮಾರ್ಪಾಟು ಗಳಾಗಿವೆ. ಐಮಂಗಲ ಕೋಟೆಯಲ್ಲಿ ಬುರುಜುಗಳನ್ನು ೧೦ ರಿಂದ ೧೨ ಮೀ. ವರೆಗೆ ವಿಸ್ತರಿಸಿದ್ದಾರೆ. ಹಾಗೂ ೬ ಮೀ. ಅಗಲದಿಂದ ೧೨ ಮೀ. ಅಗಲದಲ್ಲಿ ಕೊನೆಗೊಳ್ಳುತ್ತವೆ. ಹೆಚ್ಚುಕಡಿಮೆ ಪ್ರತೀ ಬುರುಜುಗಳಿಗೂ ಸಮಾನ ಅಂತರಗಳನ್ನು ಇಲ್ಲಿ ಕಾಯ್ದುಕೊಳ್ಳಲಾಗಿದೆ. ಚಿತ್ರದುರ್ಗದ ಕೋಟೆಯಲ್ಲಿ ವೃತ್ತಾಕಾರದ, ಚೌಕಾಕಾರದ ಬುರುಜುಗಳಿವೆ. ಒಂದು ಬುರುಜಿಗೂ ಮತ್ತೊಂದು ಬುರುಜಿಗೂ ಅಳತೆಯಲ್ಲಿ ವ್ಯತ್ಯಾಸಗಳಿವೆ. ತ್ರಿಕೋನ, ಚತುಷ್ಕೋನ, ಪಂಚಕೋನ, ವರ್ತುಲಾಕಾರದ ಬುರುಜುಗಳಿವೆ. ಕೋಟೆಯ ಪ್ರಾಕಾರವು ಹೆಚ್ಚು ವಿಸ್ತಾರವಾದಂತೆ ಬುರುಜುಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಈ

ರೀತಿಯ ಬುರುಜುಗಳು ಕೋಟೆಗೋಡೆಗೆ ಭದ್ರತೆಯನ್ನು ಒದಗಿಸುತ್ತಿದ್ದವು. ಅಲ್ಲದೆ, ಬುರುಜುಗಳ ಮೇಲೆ ಫಿರಂಗಿಗಳನ್ನಿಟ್ಟು ಶತ್ರುಗಳನ್ನು ನಿಯಂತ್ರಿಸಲಾಗುತ್ತಿತ್ತು. ಹೊರಕೋಟೆಯ ಸುತ್ತಿನಲ್ಲಿರುವ ಬುರುಜುಗಳು ೪೦ ರಿಂದ ೬೦ ಮೀ. ಸುತ್ತಳತೆಯನ್ನು ಹೊಂದಿವೆ. ಸಾಮಾನ್ಯವಾಗಿ ಎಲ್ಲಾ ಬುರುಜುಗಳಲ್ಲಿಯೂ ಬಂದೂಕು ಕಿಂಡಿಗಳಿವೆ.

ಚಿತ್ರದುರ್ಗದ ಹೊರಸುತ್ತಿನ ಕೋಟೆಯ ದಕ್ಷಿಣ ಭಾಗದಿಂದ ಪ್ರಾರಂಭವಾಗಿರುವ ಕೋಟೆಯ ಸಾಲುಗಳಲ್ಲಿ ವಿಶಿಷ್ಟವಾದ ಬುರುಜುಗಳನ್ನು ನಿರ್ಮಾಣ ಮಾಡಲಾಗಿದೆ. ಇಲ್ಲಿರುವ ಬುರುಜುಗಳನ್ನು ಯುದ್ಧ ತಂತ್ರಕ್ಕನುಗುಣವಾಗಿ ರಚಿಸಲಾಗಿದೆ. ಈ ಮೊದಲೇ ರಚನೆಗೊಂಡ ಈ ಬುರುಜುಗಳು ಹೈದರಾಲಿ ಮತ್ತು ಟಿಪ್ಪುಕಾಲದಲ್ಲಿ ಬಹಳಷ್ಟು ಮಾರ್ಪಾಡಾಗಿರುವುದನ್ನು ಗಮನಿಸಬಹುದು. ಮೊದಲೇ ನಿರ್ಮಾಣವಾಗಿದ್ದ ಕಲ್ಲಿನ ಬುರುಜುಗಳ ಮೇಲೆ ೧೦ ಅಡಿ ಎತ್ತರದವರೆಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಬುರುಜುಗಳನ್ನು ಸುಂದರಗೊಳಿಸಿದ್ದಾರೆ. ಈ ಬುರುಜುಗಳ ಮೇಲೆ ಪಹರೆ ಗೃಹಗಳು, ಕೋವಿ ಕಿಂಡಿಗಳು, ಫಿರಂಗಿ ಗೂಡುಗಳನ್ನು ಕ್ರಮವಾಗಿ ರಚಿಸಿದ್ದಾರೆ. ಪಹರೆಗೃಹಗಳಿಗೆ ವಿವಿಧ ದಿಕ್ಕುಗಳಲ್ಲಿ ಪ್ರವೇಶ ಕಲ್ಪಿಸುವಂತೆ ಬಾಗಿಲುಗಳನ್ನು ಏರ್ಪಡಿಸಿದ್ದಾರೆ. ಒಂದೇ ಬಾಗಿಲಿರುವ ಪಹರೆಯಲ್ಲಿ ಎರಡು ಅಂಕಣಗಳನ್ನು ನಿರ್ಮಿಸಿರುವರು. ಪಹರೆ ಗೃಹದ ಮೇಲ್ಭಾಗವನ್ನು ಗಾರೆಯಿಂದ ಅಲಂಕೃತಗೊಳಿಸಲಾಗಿದೆ. ಮಳೆಯ ನೀರು ಮತ್ತು ಬಿಸಿಲಿನಿಂದ ಒಳಗಿರುವವರಿಗೆ ರಕ್ಷಣೆ ನೀಡುವಂತೆ ಇವುಗಳನ್ನು ರಚಿಸಲಾಗಿದೆ. ಅಲ್ಲದೆ, ಪಹರೆ ಗೂಡುಗಳಲ್ಲಿ ತಂಪಾದ ವಾತಾವರಣವಿರುವಂತೆ ವಿಶಿಷ್ಟ ರಚನೆಯನ್ನು ಮಾಡಲಾಗಿದೆ. ಈ ಪಹರೆಗಳಿಗೆ ಚೌಕಾಕಾರ ಮತ್ತು ವೃತ್ತಾಕಾರದ ಕೋವಿಕಿಂಡಿಗಳಿವೆ. ಇವು ಒಳಭಾಗದಲ್ಲಿ ೪.೧ ಇಂಚು, ಹೊರಭಾಗದಲ್ಲಿ ೮.೧ ಇಂಚು ಅಗಲವಿದ್ದು, ೧೦.೧ ಇಂಚು ಉದ್ದವಾಗಿರುವಂತೆ ರಚಿಸಲಾಗಿದೆ. ಮನುಷ್ಯನ ಕಣ್ಣು ಪ್ರಕೃತಿಯನ್ನು ಬಿಂಬಿಸುವಂತೆ ಪಹರೆಯವರ ಒಳನೋಟ, ಶತ್ರುಗಳ ಗುರಿಯನ್ನು ಪ್ರತಿಬಿಂಬಿಸುವಂತಹ ನೋಟವನ್ನು ಇಲ್ಲಿ ಕಾಣಬಹುದು. ಈ ಕಿಂಡಿಗಳನ್ನು ೧೦° ಕೋನದಲ್ಲಿ ರಚಿಸಿದ್ದಾರೆ. ಚೌಕಾಕಾರದ ಕೋವಿಕಿಂಡಿಗಳು ಒಳಭಾಗದಲ್ಲಿ ೪.೧ ಇಂಚು, ಹೊರಭಾಗದಲ್ಲಿ ೮ ಇಂಚು ಅಗಲವಿದ್ದು, ಉದ್ದ ೧೧.೧ ಇಂಚು ಇರುವಂತೆ ರಚಿಸಲಾಗಿದ್ದು, ಇಲ್ಲಿಯೂ ೧೦°ಯನ್ನು ಕಾಯ್ದುಕೊಳ್ಳಲಾಗಿದೆ.

ಪಹರೆಗೃಹದಲ್ಲಿರುವ ಚೌಕಾಕಾರ ಹಾಗೂ ವೃತ್ತಾಕಾರದ ಕಿಂಡಿಗಳಿಂದ ಬೆಟ್ಟದ ಮೇಲಿರುವ ಪ್ರಮುಖ ಬತೇರಿಗಳಿಗೆ ವೀಕ್ಷಣಾಸಂಪರ್ಕವನ್ನು ಕಲ್ಪಿಸಲಾಗಿದೆ. ವಿಶೇಷತೆಯೆಂದರೆ ಒಂದೊಂದು

[illegible]

[illegible]

[illegible]

ಕಿಂಡಿಗಳು ನಿರ್ದಿಷ್ಟಪಡಿಸಿದ ಬತೇರಿಗೆ ವೀಕ್ಷಣಾಸಂಪರ್ಕವನ್ನು ಹೊಂದಿವೆ. ಪಹರೆಗೃಹದ ಪಕ್ಕದಲ್ಲಿ ೫ ಅಡಿ ಎತ್ತರದ ಕೈಪಿಡಿಗೋಡೆ ರಚಿಸಿದ್ದಾರೆ. ಕೈಪಿಡಿಗೋಡೆಗಳಲ್ಲಿ ಒಳಭಾಗದ ಓರೆ ಎತ್ತರ ೪೮ ಇಂಚು ಹೊರಭಾಗದಲ್ಲಿ ೭ ಇಂಚು ಹಾಗೂ ೧೯೬ ಇಂಚು ಉದ್ದವಿರುವಂತೆ, ಫಿರಂಗಿ ಗೂಡುಗಳನ್ನು ಗಾರೆಗಚ್ಚುಗಳಿಂದ ರಚಿಸಿದ್ದಾರೆ. ಈ ಫಿರಂಗಿ ಗೂಡುಗಳು ೨೦° ಕೋನದಲ್ಲಿವೆ. ಪಹರೆಗೃಹ ಮತ್ತು ಫಿರಂಗಿ ಗೂಡುಗಳ ಮಧ್ಯೆ ಬುರುಜುಗಳ ಗೋಡೆಯಲ್ಲಿ ಕೋವಿಕಿಂಡಿಗಳನ್ನು ರಚಿಸಿದ್ದಾರೆ. ಇವುಗಳನ್ನು ೪೦ ಇಂಚು ಹೊರ ಎತ್ತರ, ಒಳ ಇಂಚು ೧೫ ಹಾಗೂ ೯೬ ಇಂಚು ಉದ್ದಗಳಲ್ಲಿದ್ದು, ಇವು ೧೦° ಕೋನಗಳಲ್ಲಿ ರಚಿಸಲಾಗಿದೆ. ಈ ರೀತಿಯ ಬುರುಜುಗಳು ಚಿತ್ರದುರ್ಗದ ಕೋಟೆಗಳಲ್ಲಿ ಸಾಕಷ್ಟು ಕಂಡುಬರುತ್ತವೆ.

ಮೊಳಕಾಲ್ಮೂರು ಕೋಟೆಯಲ್ಲಿ ಕೋಟೆಯ ಬುರುಜುಗಳನ್ನು ಗೋಡೆಯಿಂದ ಬೇರ್ಪಡಿಸಿ ಸಾಕಷ್ಟು ಸಂಖ್ಯೆಯಲ್ಲಿ ನಿರ್ಮಿಸಿರುವುದು ಕಂಡುಬರುತ್ತದೆ. ಇಲ್ಲಿ ಬಹುತೇಕ ಚಿಕ್ಕ ಚಿಕ್ಕ ಕೋಟೆ ಬುರುಜುಗಳಿವೆ. ರಾಮದುರ್ಗದ ಹೊರಸುತ್ತಿನ ಕೋಟೆಯ ನಾಲ್ಕೂ ಮೂಲೆಯಲ್ಲಿ ವೃತ್ತಾಕಾರದ ಬುರುಜುಗಳಿವೆ. ಇವು ೩೫ ಮೀ. ಸುತ್ತಳತೆಯನ್ನು ಹೊಂದಿವೆ. ಒಳಕೋಟೆಯಲ್ಲಿ ಚೌಕಾಕಾರದ ಬುರುಜುಗಳಿವೆ. ಸಿಂಗೇನಹಳ್ಳಿ ಕೋಟೆಯಲ್ಲಿ ೩೦ ರಿಂದ ೫೦ ಅಡಿ ವಿಸ್ತಾರವಾಗಿರುವ ವೃತ್ತಾಕಾರವಾದ ಬುರುಜುಗಳಿವೆ. ಹೊಸದುರ್ಗದ ಕೋಟೆಯಲ್ಲಿ ೪೦ ರಿಂದ ೬೦ ಅಡಿ ವಿಸ್ತಾರವುಳ್ಳ ಬುರುಜುಗಳಿವೆ. ಬುರುಜುಗಳ ಗಾತ್ರಕ್ಕೆ ತಕ್ಕಂತೆ ಕಲ್ಲುಗಳನ್ನು ಬಳಸಿದ್ದಾರೆ. ಕೋಟೆ ಗೋಡೆಗೆ ಬಳಸಿರುವ ಕಲ್ಲುಗಳೇ ಇಲ್ಲಿ ಹೆಚ್ಚಾಗಿ ಬಳಸಲ್ಪಟ್ಟಿವೆ. ಕಟ್ಟಡ ನಿರ್ಮಾಣದಲ್ಲಿ ಕಲ್ಲುಗಳ ಸಾಲುಗಳು ಉದ್ದವಾಗಿಯೂ ನಂತರ ಅಡ್ಡವಾಗಿಯೂ ಕಟ್ಟಲಾಗಿದೆ. ಬುರುಜಿನ ಸುತ್ತ ೪ ರಿಂದ ೬ ಅಡಿಯವರೆಗೆ ಸುತ್ತಲೂ ಗೋಡೆಯನ್ನು ಕಟ್ಟಿ ಮಧ್ಯಭಾಗದಲ್ಲಿ ಚಿಕ್ಕ ಚಿಕ್ಕ ಕಲ್ಲುಗಳು ಹಾಗೂ ಮಣ್ಣನ್ನು ತುಂಬಿರುವುದು ಕಂಡುಬರುತ್ತದೆ. ಮತ್ತೆ ಕೆಲವು ಬುರುಜುಗಳ ಒಳಭಾಗದಲ್ಲಿ ಗಚ್ಚುಮಣ್ಣನ್ನು ಹಂತ ಹಂತವಾಗಿ ಭರ್ತಿ ಮಾಡಿರುವುದು ಕಂಡುಬರುತ್ತದೆ. ವಿವಿಧ ರೀತಿಯ ಮಣ್ಣನ್ನು ೫ ಅಡಿ ಅಂತರದಲ್ಲಿ ಬದಲಾವಣೆ ಮಾಡುತ್ತಾ ಹೋಗಿರುವುದನ್ನು ಬೂದಿಹಾಳು ಕೋಟೆಯಲ್ಲಿ ಕಾಣಬಹುದು. ವೇಣುಕಲ್ಲು ಗುಡ್ಡದ ಕೋಟೆಯ ಬುರುಜಿಗೆ ಸುತ್ತಲೂ ಗಾರೆಯನ್ನು ಬಳಸಿ ಭದ್ರಪಡಿಸಿದ್ದಾರೆ. ಹೀಗೆ ಬುರುಜಿನ ರಚನೆಯಲ್ಲಿ ಅನೇಕ ರೀತಿಯ ಲಕ್ಷಣಗಳನ್ನು ಕಾಣಬಹುದು.

೫.೩ ಕಂದಕ

ಕೋಟೆಯ ಹೊರಭಾಗದ ಸುತ್ತಲೂ ಕೆರೆಯಂತೆ ಕಾಣುವ ತಗ್ಗಾದ ಪ್ರದೇಶಕ್ಕೆ ಕಂದಕ ಎಂದು ಹೆಸರು. ಇದಕ್ಕೆ ಪರಿಖೆ, ಅಗಳು ಎಂತಲೂ ಕರೆಯುತ್ತಾರೆ. ಕೋಟೆಯ ಹೊರಭಾಗದಲ್ಲಿ ಆಳವಾದ

ತಗ್ಗನ್ನು ತೋಡಿ, ಸುತ್ತಲೂ ಕಲ್ಲಿನ ಕಟ್ಟಡವನ್ನು ಕಟ್ಟಿ ಇದರಲ್ಲಿ ನೀರನ್ನು ತುಂಬಿ ವಿಷಯುಕ್ತ ಜಲಚರಗಳನ್ನು ಬಿಡುವ ಮೂಲಕ ಶತ್ರುಗಳಿಗೆ ತಡೆಯೊಡ್ಡುತ್ತಿದ್ದರು. ಇಂತಹ ಕಂದಕಗಳನ್ನು ಹೆಚ್ಚಾಗಿ ಸ್ಥಳದುರ್ಗಗಳಲ್ಲಿ ನಿರ್ಮಿಸಿರುವುದನ್ನು ಕಾಣುತ್ತೇವೆ. ಐಮಂಗಲ, ಹರತಿಕೋಟೆ, ಬೂದಿಹಾಳ್, ಚಿತ್ರದುರ್ಗ ಮುಂತಾದ ಕೋಟೆಗಳಲ್ಲಿ ಆಳವಾದ ಕಂದಕಗಳಿವೆ. ಚಿತ್ರದುರ್ಗ ಕೋಟೆಯ ಪೂರ್ವ ದಿಕ್ಕಿನಲ್ಲಿ ನೆಲೆಮಟ್ಟದಲ್ಲಿರುವ ಎರಡು ಸುತ್ತಿನ ಕೋಟೆಗೆ ನಲವತ್ತರಿಂದ ನೂರು ಅಡಿ ಅಗಲದವರೆಗೆ ನಿರ್ಮಿಸಿರುವ ಕಂದಕಗಳು ಕೆರೆಗಳೋಪಾದಿಯಲ್ಲಿವೆ. ಈ ಕಂದಕಗಳಿಗೆ ನೀರು ತರುವ ವ್ಯವಸ್ಥೆಯಂತೂ ಆಧುನಿಕ ತಂತ್ರಜ್ಞಾನಕ್ಕೆ ಸವಾಲೆಸೆಯುವಂತಿದೆ. ಇಂತಹ ಕಂದಕಗಳಲ್ಲಿ ಕನಿಷ್ಟ ೨೦ ಅಡಿ ನೀರು ನಿಲ್ಲುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕಂದಕಗಳಲ್ಲಿ ನೀರು ಸರಾಗವಾಗಿ ಹೋಗಲು ಎರಡೂ ಬದಿಗಳಲ್ಲಿ ಕಲ್ಲಿನ ಕಟ್ಟಡಗಳನ್ನು ನಿರ್ಮಿಸುತ್ತಿದ್ದರು. ಈ ಕಟ್ಟಡ ನಿರ್ಮಿಸಿರುವುದರಿಂದ ಕಂದಕದ ಕಂಠದಿಂದ ಮಣ್ಣು ಕುಸಿಯುವುದನ್ನು ತಡೆಯಬಹುದಿತ್ತು. ಕಂದಕದಿಂದ ತೆಗೆದ ಭಾರೀ ಮಣ್ಣನ್ನು ಕೋಟೆಯ ಗೋಡೆಗೆ ವಪ್ರವಾಗಿ ಬಳಸುತ್ತಿದ್ದರು.

ಕೋಟೆಯ ಪಶ್ಚಿಮ ಭಾಗದಲ್ಲಿ ಇಳಿಜಾರಾಗಿರುವ ಬೆಟ್ಟಕ್ಕೆ ಕಂದಕ ನಿರ್ಮಿಸಿದ್ದಾರೆ. ಗಿರಿದುರ್ಗದಲ್ಲಿರುವ ಈ ಕಂದಕ ೩೦ ಅಡಿ ಅಗಲ, ೨೦ ಅಡಿ ಎತ್ತರವಾಗಿದೆ. ಎರಡು ಬದಿಯಲ್ಲೂ ಕಡಿದಾದ ಕಲ್ಲಿನ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಕಂದಕವು ನೀರು ನಿಲ್ಲುವಂತಹ ವ್ಯವಸ್ಥೆಯಾಗಿರಲಿಲ್ಲ. ಕಾರಣ ಬೆಟ್ಟದ ಇಳಿಜಾರು ಪ್ರದೇಶ ಇದಾಗಿದ್ದು, ಈ ಕಂದಕದಲ್ಲಿ ನೀರು ನಿಲ್ಲುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇಳಿಜಾರಾಗಿರುವ ಬೆಟ್ಟದಲ್ಲಿ ಶತ್ರುಗಳು ಸುಲಭವಾಗಿ ನುಗ್ಗಬಹುದೆಂಬ ಉದ್ದೇಶವನ್ನಿಟ್ಟುಕೊಂಡು ಈ ರೀತಿಯ ಕಂದಕಗಳನ್ನು ನಿರ್ಮಿಸಿದ್ದಾರೆ. ಇದರಿಂದ ಶತ್ರುಗಳನ್ನು ತಡೆಯಲು ಸಾಧ್ಯವಾಗುತ್ತಿತ್ತು. ಒಂದು ವೇಳೆ ಶತ್ರುಗಳು ಕಂದಕದಲ್ಲಿ ಇಳಿದರೂ ಮತ್ತೆ ಮೇಲಕ್ಕೆ ಹತ್ತಲು ಅಸಾಧ್ಯವಾದ ರೀತಿಯಲ್ಲಿ ಕಂದಕದ ಅಂಚಿಗೆ ಕಟ್ಟಡಗಳನ್ನು ರಚಿಸಲಾಗಿದೆ. ಇಷ್ಟೇ ಅಲ್ಲದೆ ಬೆಟ್ಟದ ಮೇಲಿನಿಂದ ಬರುವ ನೀರು ಸರಾಗವಾಗಿ ಕಂದಕದ ಮುಖಾಂತರ ಹರಿದು ಮುಂದೆ ನಿರ್ಮಿಸಿರುವ ಹೊಂಡಕ್ಕೆ ಸೇರುತ್ತಿತ್ತು. ಹೀಗೆ ಎರಡು ರೀತಿಯ ಉಪಯೋಗಗಳನ್ನು ಈ ಕಂದಕದಿಂದ ಪಡೆಯಲಾಗುತ್ತಿತ್ತು.

ಹರತಿಕೋಟೆಯ ಸುತ್ತಲೂ ಇದ್ದ ಕಂದಕ ಈಗ ಮುಚ್ಚಿಹೋಗಿದ್ದು ಪೂರ್ವ ದಕ್ಷಿಣ ಭಾಗಗಳಲ್ಲಿ ಮಾತ್ರ ಅಲ್ಲಲ್ಲಿ ಉಳಿದುಕೊಂಡಿದೆ. ಈ ಕಂದಕಕ್ಕೆ ಪೂರ್ವ ಮತ್ತು ದಕ್ಷಿಣದಲ್ಲಿರುವ ಕೆರೆಗಳ ನೀರನ್ನು

[illegible]

[illegible]

[illegible]

ತುಂಬಿಸುತ್ತಿದ್ದರು. ಐಮಂಗಲದ ಕೋಟೆಯಲ್ಲಿ ೬೦ ರಿಂದ ೧೦೦ ಅಡಿ ಅಗಲದವರೆಗೆ ಇರುವ ಕಂದಕ ಕೋಟೆಯ ಸುತ್ತಲೂ ಇದೆ. ಇಲ್ಲಿ ಕೋಟೆಯ ಬುರುಜುಗಳನ್ನು ಹೊರಕ್ಕೆ ವಿಸ್ತರಿಸಲಾಗಿದೆ. ಬುರುಜುಗಳ ರಚನೆ ಹೇಗೆ ಸಾಗಿದೆಯೋ ಅದೇ ರೀತಿಯೇ ಕಂದಕವನ್ನೂ ವಿಸ್ತರಿಸಿದ್ದಾರೆ. ಕೋಟೆಯ ಉತ್ತರ ಭಾಗದಲ್ಲಿ ದಕ್ಷಿಣೋತ್ತರವಾಗಿ ಕೆರೆಯ ಏರಿಯನ್ನು ನಿರ್ಮಿಸಿ ಕಂದಕಕ್ಕೆ ನೀರು ತರುವ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ೧೦೦ ಮೀ. ದೂರದವರೆಗೆ ಕಂದಕದ ಪಾತ್ರವನ್ನು ಕೆರೆಯೇ ನಿರ್ವಹಿಸಿದೆ. ಬೂದಿಹಾಳ್ ಕೋಟೆಯ ಸುತ್ತ ೮೦ ರಿಂದ ೧೨೦ ಅಡಿಯಷ್ಟು ವಿಸ್ತಾರವಾಗಿರುವ ಕಂದಕವಿದೆ. ಈ ಕಂದಕಕ್ಕೆ ಪೂರ್ವ ಮತ್ತು ಪಶ್ಚಿಮದ ಎರಡು ಕೆರೆಗಳಿಂದ ನೀರು ಸರಬರಾಜು ಮಾಡುವಂತೆ ರಚಿಸಲಾಗಿದೆ. ಗಿರಿದುರ್ಗಗಳ ಸುತ್ತಲೂ ಕೆರೆಗಳನ್ನು ನಿರ್ಮಿಸುವ ಮೂಲಕ ಶತ್ರುಗಳಿಗೆ ತಡೆಯನ್ನುಂಟು ಮಾಡುತ್ತಿದ್ದರು. ಜಾನಕಲ್ಲು ಕೋಟೆಯು ಇದಕ್ಕೊಂದು ಉತ್ತಮ ಉದಾಹರಣೆ. ಇಲ್ಲಿ ಸುತ್ತಲೂ ಇರುವ ಕೆರೆಗಳು ಒಂದು ರೀತಿಯಲ್ಲಿ ಕಂದಕಗಳೇ ಆಗಿದ್ದವು. ಈ ರೀತಿಯ ಕೆರೆಗಳು ಕೋಟೆಗಳನ್ನು ಜಲದುರ್ಗವನ್ನಾಗಿ ಮಾಡುತ್ತಿದ್ದವು. ಪೂರ್ವದಲ್ಲಿ ಕಾಮನಕೆರೆ, ಪಶ್ಚಿಮದಲ್ಲಿ ಓರೇಕೆರೆ, ಉತ್ತರದಲ್ಲಿ ಬರಗೆರೆ, ದಕ್ಷಿಣದಲ್ಲಿ ದೇವಪುರದ ಕೆರೆಗಳನ್ನು ನಿರ್ಮಾಣ ಮಾಡಿ ಕೋಟೆಯ ಸುತ್ತಲೂ ವಿಶಾಲವಾಗಿ ನೀರು ನಿಲ್ಲಿಸುವ ಮೂಲಕ ಜಾನಕಲ್ಲನ್ನು ಜಲದುರ್ಗವನ್ನಾಗಿಸಿದ್ದಾರೆ. ಇದೇ ರೀತಿ ಚಿತ್ರದುರ್ಗದ ಕೋಟೆಯನ್ನು ವಿದ್ವಾಂಸರು ಜಲದುರ್ಗವೆಂದು ವರ್ಣನೆ ಮಾಡಿರುವರು. ಈ ಕೋಟೆಯ ಪೂರ್ವಕ್ಕೆ ಇದ್ದ ಭಾರೀ ಕಂದಕಗಳು, ದಕ್ಷಿಣಕ್ಕೆ ಇದ್ದ ತಿಮ್ಮಣ್ಣ ನಾಯಕನ ಕೆರೆ ಹಾಗೂ ಆಡುಮಲ್ಲೇಶ್ವರ ಕೆರೆ, ನೈರುತ್ಯ ದಿಕ್ಕಿನಲ್ಲಿರುವ ಚಂದ್ರವಳ್ಳಿ ಕೆರೆ, ಪಶ್ಚಿಮದಲ್ಲಿದ್ದ ಕಂದಕ, ಸಿಹಿನೀರು ಹೊಂಡ, ಉತ್ತರದಲ್ಲಿ ಮಲ್ಲಾಪುರ ಮತ್ತು ಗೋನೂರು ಕೆರೆಗಳಿಂದ ಇದೊಂದು ಜಲದುರ್ಗವಾಗಿತ್ತು. ಕೋಟೆಯ ಸುತ್ತಲೂ ನಿರ್ಮಿಸಿದ್ದ ಹೊಂಡಗಳು, ಕಾಲುವೆಗಳು, ಪುಷ್ಕರಣಿಗಳು ಒಂದು ರೀತಿ ಕಂದಕಗಳೇ ಆಗಿದ್ದವು. ಒಟ್ಟಾರೆ ಈ ಕಂದಕಗಳ ಮುಖ್ಯ ಉದ್ದೇಶ ಶತ್ರುಗಳನ್ನು ತಡೆಯುವುದೇ ಆಗಿತ್ತೆನ್ನಬಹುದು.

೫.೪ ಕಾವಲು ಗೋಪುರಗಳು

ಶತ್ರುಗಳನ್ನು ದೂರದಿಂದಲೇ ವೀಕ್ಷಿಸಿ ಅಪಾಯದ ಸಂಕೇತಗಳನ್ನು ರಾಜನಿಗೆ ತಲುಪಿಸಲು ಮಾಡಿಕೊಂಡ ವ್ಯವಸ್ಥೆಗಳೇ ಕಾವಲು ಗೋಪುರಗಳು. ಇವುಗಳಿಗೆ ಬುರುಜು, ಬತೇರಿ, ತವಗ, ಹುಡೇವು ಎಂಬೆಲ್ಲಾ ಹೆಸರುಗಳಿವೆ. ಗಿರಿದುರ್ಗಗಳಲ್ಲಿ ಇವುಗಳನ್ನು ಕೋಟೆಯ ಸಾಲಿನಿಂದ ಪ್ರತ್ಯೇಕಪಡಿಸಿ

[illegible]

[illegible]

[illegible]

ಎತ್ತರವಾದ ಸ್ಥಳಗಳಲ್ಲಿ ನಿರ್ಮಿಸುತ್ತಿದ್ದರು. ಸ್ಥಳದುರ್ಗಗಳಲ್ಲಿ, ಕೋಟೆಯ ಬುರುಜುಗಳು ಮೇಲೆ ವೃತ್ತಾಕಾರವಾಗಿ ಎತ್ತರವಾದ ಕಾವಲು ಗೋಪುರಗಳನ್ನು ರಚಿಸುತ್ತಿದ್ದರು. ಗಿರಿದುರ್ಗ ಮತ್ತು ಸ್ಥಳ ದುರ್ಗಗಳ ಮಧ್ಯೆ ಸಂಪರ್ಕ ಸಾಧಿಸಲು ಅಲ್ಲಲ್ಲಿ ಕಾವಲು ಗೋಪುರಗಳಿರುತ್ತಿದ್ದವು. ಈ ಕಾವಲು ಗೋಪುರಗಳು ಸಂಪರ್ಕ ಸೇತುವೆಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ರಾಜಧಾನಿಯಿಂದ ದೂರವಿರುತ್ತಿದ್ದ ಗಡಿಕೋಟೆಗಳ ಮಧ್ಯಭಾಗದಲ್ಲಿ ಎತ್ತರವಾದ ಕಾವಲು ಬರುಜುಗಳನ್ನು ನಿರ್ಮಾಣ ಮಾಡಿದ್ದಾರೆ. ಕಾವಲು ಬುರುಜುಗಳಿಗೆ ರಾಜರು ಶಸ್ತ್ರಸಜ್ಜಿತ ಸೈನಿಕರ ತುಕಡಿಗಳನ್ನು ಇಟ್ಟಿರುತ್ತಿದ್ದರಲ್ಲದೆ, ಇವುಗಳನ್ನು ಕೂಡ ಒಂದು ಕೋಟೆಯೆಂದೇ ಪರಿಗಣಿಸುತ್ತಿದ್ದರು. ಇವು ಒಂದಕ್ಕೊಂದು ಸಂಪರ್ಕ ಸೇತುವೆಗಳಾಗಿದ್ದವು. ಈ ರೀತಿಯ ಬುರುಜುಗಳು ಚಿತ್ರದುರ್ಗ ಜಿಲ್ಲೆಯ ಕೋಟೆಗಳಲ್ಲದೆ, ಅನೇಕ ಕಡೆ ಕಂಡುಬಂದಿವೆ.

ಸಾಮಾನ್ಯವಾಗಿ ಕಾವಲುಗೋಪುರಗಳು ವೃತ್ತಾಕಾರವಾಗಿವೆ. ಆದರೂ ಕೆಲವು ಚೌಕಾಕಾರವಾಗಿರುವುದನ್ನು ನೋಡಬಹುದು. ಕೋಟೆ ಗೋಡೆಗೆ ಬಳಸುವ ಕಲ್ಲುಗಳನ್ನೇ ಬುರುಜಿಗೂ ಬಳಸಿಕೊಂಡು ಸುಮಾರು ೩೦ರಿಂದ ೫೦ ಅಡಿ ಎತ್ತರದವರೆಗೆ ನಿರ್ಮಿಸಿದ್ದು, ೫೦ ರಿಂದ ೬೫ ಮೀಟರ್ ವಿಸ್ತೀರ್ಣವನ್ನು ಹೊಂದಿವೆ. ಕೆಲವು ಬುರುಜುಗಳಿಗೆ ಮೆಟ್ಟಿಲುಗಳಿದ್ದರೆ, ಮತ್ತೆ ಕೆಲವು ಕಾವಲು ಗೋಪುರಗಳಿಗೆ ಯಾವುದೇ ಮೆಟ್ಟಿಲುಗಳಿಲ್ಲ. ಕೆಳಭಾಗದಲ್ಲಿ ೫ ರಿಂದ ೧೦ ಅಡಿ ಎತ್ತರದವರೆಗೆ ಭಾರೀ ಗಾತ್ರದ ಕಲ್ಲುಗಳನ್ನು ಬಳಸಿ ಸುತ್ತಲೂ ವೇದಿಕೆಯನ್ನು ನಿರ್ಮಿಸಿ, ವೇದಿಕೆಯ ಮೇಲೆ ಕಾವಲುಗೋಪುರಗಳನ್ನು ಕಟ್ಟಲಾಗಿದೆ. ತಳಭಾಗದಲ್ಲಿ ತುಂಬಾ ವಿಸ್ತಾರವಾಗಿರುವ ಬುರುಜುಗಳು ಮೇಲೆ ಹೋದಂತೆಲ್ಲಾ ಗಾತ್ರದಲ್ಲಿ ಕಡಿಮೆಯಾಗುತ್ತವೆ. ಕೆಲವು ಬುರುಜುಗಳಿಗೆ ಮೇಲ್ಭಾಗದಲ್ಲಿ ಬಾಗಿಲುಗಳಿವೆ. ಇಂತಹ ಬಾಗಿಲಿನಿಂದ ಹತ್ತಿ ಇಳಿಯಲು ಏಣಿಯನ್ನು ಬಳಸುತ್ತಿದ್ದರು. ಮೇಲಿನಿಂದ ಇಳಿಯುವವರು ಮಾತ್ರ ಏಣಿಯನ್ನು ಬಳಸಲು ಸಾಧ್ಯವಿತ್ತು. ಪುನಃ ಮೇಲೆ ಹತ್ತಲು ಮೇಲಿನವರ ಸಹಾಯಪಡೆದೇ ಹತ್ತಬೇಕಾಗಿತ್ತು. ಗೋಪುರಗಳ ಸುತ್ತಲೂ ಕಂದಕವಿದ್ದು, ಕೋಟೆಗೆ ಏರ್ಪಡಿಸುತ್ತಿದ್ದ ವ್ಯವಸ್ಥೆಯನ್ನು ಇಲ್ಲೂ ಏರ್ಪಡಿಸಲಾಗುತ್ತಿತ್ತು. ಕಣಜನಹಳ್ಳಿ ಕೋಟೆಯ ಮಧ್ಯಭಾಗದಲ್ಲಿ ನಿರ್ಮಿಸಿರುವ ತವಗ ಎಂಬ ಬುರುಜು ೬೩ ಮೀ. ಸುತ್ತಳತೆ ಇದ್ದು, ೧೨ ಮೀ. ಎತ್ತರದಲ್ಲಿದೆ. ಇದಕ್ಕೆ ಹತ್ತಲು ೨೫ ಮೆಟ್ಟಿಲುಗಳಿವೆ. ತವಗ ಎಂದರೆ ಕೋಟೆಯಲ್ಲಿ ಫಿರಂಗಿ ಮೊದಲಾದವುಗಳನ್ನು ಇಡುವುದಕ್ಕಾಗಿ ಮಾಡಿದ ವಿಶಿಷ್ಟ ಜಗಲಿ ಎಂದು ಕರೆಯಲಾಗಿದೆ.[೨] ಇಂತಹ ಬುರುಜುಗಳು ಮದ್ದಿನಮನೆಗಳಾಗಿ ಕಾರ್ಯ ನಿರ್ವಹಿಸಿರುವುದಕ್ಕೆ ಈ ಬುರುಜು ಉತ್ತಮ ಉದಾಹರಣೆಯಾಗಿದೆ. ಇದೇ ರೀತಿ ಹಿರಿಯೂರು ತಾಲೂಕಿನ ಲಕ್ಕಿಹಳ್ಳಿ ಕೋಟೆಯ ಮಧ್ಯಭಾಗದಲ್ಲಿರುವ ಬುರುಜು

[illegible]

ಚಚ್ಚೌಕಾರವಾಗಿದ್ದು, ಮತ್ತೆ ಮೇಲ್ಭಾಗದಲ್ಲಿ ಹತ್ತು ಅಡಿ ಎತ್ತರದವರೆಗೆ ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ಈ ಬುರುಜು ಪೂರ್ವಪಶ್ಚಿಮವಾಗಿ ೧೭ ಮೀ. ಇದ್ದು. ಉತ್ತರದಕ್ಷಿಣದಲ್ಲಿ ೨೦ ಮೀ. ವಿಸ್ತಾರವಾಗಿದ್ದು, ೧೫ ಮೀ. ಎತ್ತರವಾಗಿದೆ. ಮೊಳಕಾಲ್ಮೂರು ತಾಲೂಕಿನ ಪರ್ತೇನಹಳ್ಳಿಯ ಕಾವಲುಬುರುಜು ೪೫ ಮೀ. ಸುತ್ತಳತೆ ಹೊಂದಿದ್ದು, ೩೦ ಅಡಿ ಎತ್ತರವಾಗಿದೆ. ಹಿರೇಕಂದವಾಡಿಯ ಕಾವಲುಗೋಪುರ ೪೦ ಮೀ. ವಿಸ್ತಾರವಾಗಿದ್ದು, ೧೫ ಮೀ. ಎತ್ತರವಾಗಿದೆ. ಈ ಗೋಪುರಕ್ಕೆ ಪೂರ್ವಪಶ್ಚಿಮದಲ್ಲಿ ಎರಡು ಬಾಗಿಲುಗಳಿವೆ. ಚಿತ್ರದುರ್ಗ ತಾಲೂಕಿನ ವೀರಮದಕೇರಿಪುರದ(ಬೇಚರಕ್ ಗ್ರಾಮ) ಕಾವಲುಗೋಪುರವು ೪೦ ಮೀ. ಸುತ್ತಳತೆಯಿದ್ದು, ೧೦ ಮೀ. ಎತ್ತರವಾಗಿದೆ. ಈ ಬುರುಜಿನ ಸುತ್ತಲೂ ಕಂದಕವಿದೆ. ಸಾಮಾನ್ಯವಾಗಿ ಈ ಎಲ್ಲಾ ಬುರುಜುಗಳಲ್ಲಿ ಎರಡು ಹಂತದ ಕೋವಿಕಿಂಡಿಗಳಿವೆ.

ಬೂದಿಹಾಳ್ ಕೋಟೆಯ ಬುರುಜಿನಲ್ಲಿ ನಾಲಿಗೆಯಾಕಾರದ ಕಲ್ಲುಗಳಿದ್ದು, ಇವುಗಳನ್ನು ಕಂದಕದ ಕಡೆ ಬಿಟ್ಟಿದ್ದಾರೆ. ಸ್ಥಳೀಯರು ಹೇಳುವ ಪ್ರಕಾರ ಈ ಕಲ್ಲುಗಳಿಂದ ಅಗ್ಗವನ್ನು ಕಟ್ಟಿಕೊಂಡು ಕಂದಕಕ್ಕೆ ಇಳಿದು ಕೋಟೆಯಿಂದಾಚೆ ಹೋಗುವ ವ್ಯವಸ್ಥೆಯನ್ನು ಸೈನಿಕರು ಕಲ್ಪಿಸಿಕೊಂಡಿದ್ದರಂತೆ.

ಜಿಲ್ಲೆಯಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಈ ರೀತಿಯ ಕಾವಲು ಗೋಪುರಗಳು ಹೆಚ್ಚಾಗಿ ಕಂಡುಬರುತ್ತವೆ. ಇವುಗಳನ್ನು ಸಾಮ್ರಾಜ್ಯದಾದ್ಯಂತ ಸ್ಥಾಪಿಸಿ ಸಂಪರ್ಕ ಕಲ್ಪಿಸಿ ಕೊಂಡಿರುವುದನ್ನು ಜಿಲ್ಲೆಯಲ್ಲಿ ಕಾಣಬಹುದು. ಚಿತ್ರದುರ್ಗದ ಉತ್ತರಕ್ಕೆ ತುರುವನೂರು ಮತ್ತು ಚಿತ್ರದುರ್ಗ ಕೋಟೆಗಳ ಮಧ್ಯೆ ಗೋನೂರು, ವೀರ ಮದಕೇರಿಪುರ, ಕೂನಬೇವುಗಳಲ್ಲಿ ಕಾವಲು ಬುರುಜುಗಳಿವೆ. ಚಿತ್ರದುರ್ಗದ ವಾಯುವ್ಯ ಭಾಗದಲ್ಲಿರುವ ಸಿದ್ಧವ್ವನ ದುರ್ಗದ ಮಧ್ಯೆಭಾಗದಲ್ಲಿ ಸೀಬಾರದ ಗುಡ್ಡ, ಆಯಿತೋಳುಗಳಲ್ಲಿ ಕಾವಲು ಬುರುಜುಗಳನ್ನು ಸ್ಥಾಪಿಸಲಾಗಿದೆ. ಪಶ್ಚಿಮ ಭಾಗದಲ್ಲಿ ಚಿತ್ರದುರ್ಗದ ಗಡಿಕೋಟೆಯಾದ ಭರಮಣ್ಣನಾಯಕನ ದುರ್ಗದ ಮಧ್ಯೆಭಾಗದಲ್ಲಿ ಹಿರೇಕಂದವಾಡಿ ಗುಡ್ಡ, ಈಚಲನಾಗೇನಹಳ್ಳಿ ಗುಡ್ಡಗಳಿಂದ ಚಿತ್ರದುರ್ಗದ ಕೋಟೆಯಲ್ಲಿರುವ ರಣಬತೇರಿಗೆ ಸಂಪರ್ಕ ಕಲ್ಪಿಸಲಾಗಿದೆ. ನೈರುತ್ಯ ದಿಕ್ಕಿನಲ್ಲಿರುವ ಹೊಸದುರ್ಗ, ಸಿಂಗೇನಹಳ್ಳಿ, ಕೋಟೆಗಳ ಮಧ್ಯೆ, ರಾಮಗಿರಿ, ದೊಡ್ಡಗುಡ್ಡಗಳನ್ನು ಕಾವಲು ಗೋಪುರಗಳನ್ನಾಗಿ ಬಳಸಿಕೊಳ್ಳಲಾಗಿದೆ. ದಕ್ಷಿಣದಲ್ಲಿ ಕುಂಚಿಗನಾಳ್, ಐಮಂಗಲ, ಭರಮಗಿರಿ, ಹಿರಿಯೂರುಗಳಲ್ಲಿ ಕಾವಲು ಬುರುಜುಗಳಿವೆ. ಈಶಾನ್ಯ ಭಾಗದಲ್ಲಿ ಮೊಳಕಾಲ್ಮೂರು, ಚಿತ್ರದುರ್ಗದ ಮಧ್ಯೆ ನನ್ನಿವಾಳದ ಗುಡ್ಡ, ತಳುಕಿ ಗುಡ್ಡ, ನೇರ್ಲಹಳ್ಳಿಗಳ ಮುಖಾಂತರ ಸಂಪರ್ಕ ಕಲ್ಪಿಸಲಾಗಿದೆ. ನೇರ್ಲಹಳ್ಳಿಯಲ್ಲಿ ಕಾವಲು ಗೋಪುರದ ಮೇಲೆ ೭೬ ಇಂಚು ಉದ್ದ, ೯ ಇಂಚಿನ

[illegible]

ಸುತ್ತಳತೆ ಹೊಂದಿರುವ ಹುಲಿಮುಖವನ್ನು ಹೊಂದಿರುವ ಚಿಕ್ಕ ಫಿರಂಗಿಯೊಂದು ಈಗಲೂ ಇದೆ. ಮೊಳಕಾಲ್ಮೂರಿನಿಂದ ಗಡಿಕೋಟೆಗಳಾದ ಬ್ರಹ್ಮಗಿರಿ, ಲುಂಕಪ್ಪನ ಗುಡ್ಡ, ಸಂತೆಗುಡ್ಡ, ಗುಡ್ಡದಹಳ್ಳಿ, ಕೆಳಗಿನಕಣಿವೆ, ಮೇಗಳಕಣಿವೆ ಮುಂತಾದ ಕಡೆ ಕಾವಲು ಗೋಪುರಗಳಿವೆ. ಬುರುಜುಗಳಿಂದ ಹಗಲು ವೇಳೆಯಲ್ಲಿ ವಿವಿಧ ಬಣ್ಣದ ಭಾವುಟಗಳನ್ನು ಪ್ರದರ್ಶಿಸಿ, ಅಪಾಯದ ಸಂಕೇತಗಳನ್ನು ಕೊಡುತ್ತಿದ್ದು, ರಾತ್ರಿ ವೇಳೆಯಲ್ಲಿ ಬಣ್ಣಗಳಿಂದ ಕೂಡಿದ ಜ್ವಾಲೆಯನ್ನು ಹತ್ತಿಸುವ ಮುಖಾಂತರ ಅಪಾಯದ ಸಂಕೇತಗಳನ್ನು ರಾಜಧಾನಿಗಳಿಗೆ ಕೊಡುತ್ತಿದ್ದರೆನ್ನಲಾಗಿದೆ. ಈ ರೀತಿಯ ಅಪಾಯದ ಸಂಕೇತಗಳು ಬಂದ ತಕ್ಷಣ ರಾತ್ರೋರಾತ್ರಿ ಶಸ್ತ್ರಸಜ್ಜಿತ ಸೈನ್ಯವನ್ನು ರಾಜನು ಅಲ್ಲಿಗೆ ಕಳುಹಿಸಿ ಪರಿಸ್ಥಿತಿಯನ್ನು ನಿಭಾಯಿಸಲು ಕಾವಲು ಗೋಪುರಗಳು ನೆರವಾಗುತ್ತಿದ್ದವು. ಇದೇ ರೀತಿಯ ಕಾವಲುಗೋಪುರಗಳು ಚಿತ್ರದುರ್ಗದ ಬೆಟ್ಟದಲ್ಲಿದ್ದು, ಅವುಗಳನ್ನು ಸುಲಭವಾಗಿ ಗುರುತಿಸಲು ವಿವಿಧ ಹೆಸರುಗಳಿಂದ ಕರೆಯಲಾಗಿದೆ. ರಣ ಬತೇರಿ, ಝುಂಡಾಬತೇರಿ, ತುಪ್ಪದಕೊಳ ಬತೇರಿ, ಲಾಲ್‌ಬತೇರಿ, ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ, ಬಸವನ ಬತೇರಿ, ಒನಕೆಕಿಂಡಿ ಬತೇರಿ, ಸುಣ್ಣದಗುಮ್ಮಿ ಬತೇರಿ, ಸಿಹಿನೀರುಹೊಂಡ ಬತೇರಿ, ಬುರುಜಿನಹಟ್ಟಿ ಬತೇರಿ, ದುಂಡು ನಾಗರಸುತ್ತು ಬತೇರಿ, ಜೋಡುಬತೇರಿ ಹೀಗೆ ಅನೇಕ ಬತೇರಿಗಳನ್ನು ಸ್ಥಾಪಿಸಿ ಒಂದರಿಂದ ಇನ್ನೊಂದಕ್ಕೆ ವೀಕ್ಷಣಾ ಸಂಪರ್ಕವನ್ನು ಕಲ್ಪಿಸಲಾಗಿದೆ.

ಒಟ್ಟಿನಲ್ಲಿ ಈ ಕಾವಲು ಬುರುಜುಗಳನ್ನು ಕೋಟೆಗೆ ಲಗ್ಗೆ ಹಾಕಲು ಬರುವ ಶತ್ರುಗಳ ಮುನ್ಸೂಚನೆ ಯನ್ನು ದುರ್ಗದೊಳಗಿರುವವರಿಗೆ ತಿಳಿಸಿ ಶತ್ರುಗಳನ್ನು ಎದುರಿಸಲು ಯೋಧರು ಸಿದ್ಧರಾಗುವಂತೆ ಸೂಚನೆಯನ್ನು ಕೊಡುವುದರ ಸಲುವಾಗಿ ನಿರ್ಮಿಸಲಾಗುತ್ತಿತ್ತು. ಈ ಕಾವಲು ಗೋಪುರಗಳ ಮೇಲೆ ವಿಶೇಷ ತರಬೇತಿಯುಳ್ಳ ಕಾವಲುಗಾರರನ್ನು ನೇಮಿಸುತ್ತಿದ್ದರು. ಅವರು ತಮ್ಮ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕಾಗುತ್ತಿತ್ತು.

೫.೫ ಗರಡಿ ಮನೆಗಳು

ಕೋಟೆಯ ಅಂಗಭಾಗಗಳಲ್ಲಿ ಗರಡಿಮನೆಗಳು ತುಂಬಾ ಪ್ರಾಮುಖ್ಯತೆ ಪಡೆದುಕೊಂಡಿವೆ. ಉತ್ತಮ ಸೈನಿಕರನ್ನು ಸಿದ್ಧಗೊಳಿಸುತ್ತಿದ್ದ ಸೈನಿಕ ಶಾಲೆಗಳೇ ಗರಡಿಮನೆಗಳು. ಯಾವುದೇ ಆಯುಧಗಳನ್ನು ಬಳಸದೇ, ತಮ್ಮ ದೈಹಿಕ ಶಕ್ತಿಸಾಮರ್ಥ್ಯದ ಮೂಲಕ ಹೋರಾಡಿ ಗೆಲ್ಲುವ ಕ್ರೀಡೆಗಳನ್ನು ಇಲ್ಲಿ ಕಲಿಸಲಾಗುತ್ತಿತ್ತು. ಈ ಗರಡಿಕಲೆ ಸಂಪ್ರದಾಯ ಆಯುಧರಹಿತ ಸಮಾಜದಷ್ಟೇ ಪ್ರಾಚೀನತೆಯನ್ನು

[illegible]

[illegible]

[illegible]

[illegible]

ಪಡೆದುಕೊಂಡಿದೆ.[೩] ವಿಜಯನಗರ ಸಮಕಾಲೀನ ಕಾವ್ಯಗಳಾದ ರಾಮನಾಥ ಚರಿತ, ಚೆನ್ನಬಸವಪುರಾಣಗಳು, ಸೈನಿಕ ತರಬೇತಿಯ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಗರಡಿಮನೆಯಲ್ಲಿ ತರಬೇತಿ ಪಡೆದು ಜಯಗಳಿಸಿದವರನ್ನು ಜಟ್ಟಿ ಅಥವಾ ಪೈಲ್ವಾನ್‌ಗಳೆಂದು ಕರೆಯುತ್ತಿದ್ದರು. ಕೋಟೆಗೇರುವ, ಬಗೆಬಗೆಯ ಬಂಡೆಗಲ್ಲುಗಳನ್ನು ಹತ್ತುವ, ಬರಿಗಾಲಲ್ಲಿ ಎಣ್ಣೆಹಚ್ಚಿ ಜಾರುವ, ಕಾಲನ್ನು ಏರಿಳಿಯುವ ತರಬೇತಿ, ಯುದ್ಧಾಸ್ತ್ರಗಳಲ್ಲಿ ತಯಾರಿ, ಅಶ್ವಾರೋಹಣ, ಗಜಾರೋಹಣ, ಕಾಡುಮೃಗಗಳೊಂದಿಗೆ ಹೋರಾಟ, ಆನೆಕುದುರೆಗಳೊಂದಿಗೆ ಹೋರಾಡುವ ತರಬೇತಿಯನ್ನು ಇಲ್ಲಿ ನೀಡಲಾಗುತ್ತಿತ್ತು. ಅಲ್ಲದೆ, ಗುದಗತ್ತಿ, ಬಾಕು, ಕಠಾರಿ, ಕೋವಿಗಳನ್ನು ಹಿಡಿದು ಹೋರಾಡುವಂತಹ ರಣಶಿಕ್ಷಣವನ್ನು ಕೊಡುತ್ತಿದ್ದರು. ಇವುಗಳಲ್ಲಿ ಕೆಲವನ್ನು ಗರಡಿಮನೆಗಳಲ್ಲಿ ತರಬೇತಿ ನೀಡಿದರೆ ಮತ್ತೆ ಕೆಲವನ್ನು ಬಯಲು ಪ್ರದೇಶದಲ್ಲಿ ನೀಡಲಾಗುತ್ತಿತ್ತು.[೪]

ಚಿತ್ರದುರ್ಗದ ಕೋಟೆಯ ಸಿದ್ಧಯ್ಯನ ಬಾಗಿಲ ಮುಂಭಾಗ ವಿಶಾಲವಾದ ಚೌಕಾಕಾರದ ಅಂಕಣದಲ್ಲಿ ವಿವಿಧ ಮಲ್ಲ ಕ್ರೀಡೆಗಳು ನಡೆಯುತ್ತಿದ್ದವೆನ್ನಲಾಗಿದೆ. ಗೋಪಾಲಸ್ವಾಮಿ ಹೊಂಡದ ಜಾರುಬಂಡೆಯು ಬಂಡೆಯನ್ನೇರುವ ಕ್ರೀಡೆಗಳ ತರಬೇತಿ ತಾಣವಾಗಿತ್ತು. ಇಂತಹ ಕ್ರೀಡೆಗಳಾಡುವ ಯುವಕರಿಗೆ, ಸಾವಿನೊಂದಿಗೆ ಸೆಣಸುವ ಗಂಡೆದೆಯು ಬೇಕಾಗಿರುತ್ತಿತ್ತಂತೆ. ಕೋಟೆಯನ್ನು ಸದಾ ಸಂರಕ್ಷಿಸುವ ಕೋಟಾಗಾರರು ಸಂಸ್ಥಾನದ ಸೈನ್ಯಕ್ಕೆ ಎಲ್ಲಿಲ್ಲದ ಬಲ ತುಂಬುತ್ತಿದ್ದರು. ಧೈರ್ಯ, ಸಾಹಸ, ಶೌರ್ಯಕ್ಕೆ ಇನ್ನೊಂದು ಹೆಸರೇ ಕೋಟಾಗಾರರು.[೫] ಕೋಟೆಗೋಡೆಗಳನ್ನು ಸರಸರನೆ ಹತ್ತುವ ಕುಶಲಮತಿಗಳು ಈ ಕೋಟಾಗಾರರು. ಪ್ರತಿಯೊಬ್ಬರು ಒಂದೊಂದು ರೇಶಿಮೆ ಹಗ್ಗಗಳನ್ನು ಹೊಂದಿ ಯುದ್ಧಕ್ಕೆ ಇಳಿಯುತ್ತಿದ್ದರು. ರಾಜನ ರಕ್ಷಕರಾದ ಇವರಿಗೆ ಬಿಚ್ಚುಗತ್ತಿ ಬೇಡರ ಕಾವಲು ಬೇಕಿತ್ತು. ಗರಡಿ ಕಲೆಗಳಲ್ಲಿ ಮಲ್ಲಯುದ್ಧ ಹೆಚ್ಚು ಪ್ರಖ್ಯಾತಿ ಪಡೆದುಕೊಂಡಿದೆ. ಇದು ಪ್ರಾಚೀನ ಕಾಲದ ೬೪ ವಿದ್ಯೆಗಳಲ್ಲಿ ಅತಿ ಪ್ರಮುಖವಾದ ಯುದ್ಧವಾಗಿದೆ.[೬]

ಚಿತ್ರದುರ್ಗ, ಬ್ರಹ್ಮಗಿರಿ, ಮೊಳಕಾಲ್ಮೂರು, ಜಟಂಗಿರಾಮೇಶ್ವರ, ಸಂತೇಗುಡ್ಡ ಮುಂತಾದ ಕೋಟೆಗಳಲ್ಲಿ ಈಗಲೂ ಗರಡಿ ಮನೆಗಳೆಂದು ಹೇಳುವ ಕಟ್ಟಡದ ಅವಶೇಷಗಳು, ಗುಹೆಗಳು, ಮನೆಗಳಿವೆ. ಮೊಳಕಾಲ್ಮೂರು ಕೋಟೆಯಲ್ಲಿ ಜಟ್ಟಿಗಳ ಶಿಲ್ಪಗಳನ್ನು ಬಿಡಿಸುವ ಮೂಲಕ ಗರಡಿಮನೆಯನ್ನು ತೋರಿಸಿದ್ದಾರೆ. ಇಲ್ಲಿ ಯಾವುದೇ ಕಟ್ಟಡಗಳಿಲ್ಲದೆ ಬರೀ ಪ್ರಾಕೃತಿಕ ಕಲ್ಲಾಸರೆಯನ್ನು ಗರಡಿಮನೆಯಾಗಿ ಬಳಸಿಕೊಳ್ಳಲಾಗಿದೆ. ಚಿತ್ರದಲ್ಲಿ ಜಟ್ಟಿಗಳ ವೇಷಭೂಷಣ ಹಾಗೂ ಆಯುಧಗಳ ಪಕ್ಕದಲ್ಲಿ ಗರಡಿಯವರ ಆರಾಧ್ಯದೈವ ಹನುಮಂತನನ್ನು ಚಿತ್ರಿಸಲಾಗಿದೆ.

ಬ್ರಹ್ಮಗಿರಿ ಕೋಟೆಯಲ್ಲಿ ಎರಡು ಬೃಹತ್ ಬಂಡೆಗಳನ್ನು ಬಳಸಿ ಗುಹೆಯಂತೆ ನಿರ್ಮಾಣ ಗೊಂಡಿರುವ ಕಟ್ಟಡವನ್ನು ಕುಮಾರರಾಮನ ಗರಡಿಮನೆಯೆಂದು ಕರೆಯುತ್ತಾರೆ. ಇದೇ ರೀತಿಯ ಕುಮಾರರಾಮನ ಗರಡಿಮನೆ ಜಟಂಗಿ ರಾಮೇಶ್ವರ ಕೋಟೆಯೊಳಗೆ ಇದೆ. ಸಂತೇಗುಡ್ಡದ ಕೋಟೆಯಲ್ಲೂ ಗರಡಿ ಮನೆಯೆಂದು ಕರೆಯುವ ಒಂದು ಗುಹೆ ಇದೆ. ಗುಹೆಯ ಹೊರಭಾಗದಲ್ಲಿ ಕಟ್ಟಡವನ್ನು ಕಟ್ಟಿ ಎರಡು ಅಂಕಣದ ಕೊಠಡಿ ಇದೆ. ಇದನ್ನು ಸ್ಥಳೀಯರು ಗರಡಿ ಮನೆಯೆಂದು ತೋರಿಸುತ್ತಾರೆ. ಚಿತ್ರದುರ್ಗ ಬೆಟ್ಟದ ಮೇಲೆ ಮತ್ತು ಕೆಳಗೆ ಅನೇಕ ಗರಡಿಗಳಿವೆ. ಜಿಲ್ಲೆಯ ಯಾವ ಕೋಟೆಯಲ್ಲೂ ಇಷ್ಟೊಂದು ಗರಡಿ ಮನೆಗಳು ಕಂಡುಬಂದಿಲ್ಲ. ಜನಪದರು ಚಿತ್ರದುರ್ಗವನ್ನು ಬಯಲು ಗರಡಿ ಮನೆಯೆಂದೇ ಕರೆಯುತ್ತಾರೆ. ಕೆಳಕೋಟೆಯಲ್ಲಿ ಇದ್ದ ಗರಡಿ ಮನೆ ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಗರಡಿಮನೆಯನ್ನು ಉಲ್ಲೇಖಿಸುವ ಶಾಸನವೊಂದು ಏಕನಾಥೇಶ್ವರ ದೇವಾಲಯದ ಹಿಂಭಾಗದಲ್ಲಿ ವಾಯುವ್ಯ ದಿಕ್ಕಿನ ಭೀಮನಕಲ್ಲು ಕೋಡುಗಲ್ಲುಗಳ ಮಧ್ಯೆ ಗರಡಿ ಇದೆ. ಕಡಿದಾದ ಬಂಡೆಗೆ ಕಟ್ಟಡವನ್ನು ಕಟ್ಟಿ ನಿರ್ಮಿಸಲಾಗಿರುವ ಈ ಗರಡಿಯಲ್ಲಿ ಶಾಸನವಿದೆ. ಚಿತ್ರದುರ್ಗದ ಶಾಸನೋಕ್ತ ಗರಡಿಮನೆಯಿದು. ಹುಟ್ಟು ಬಂಡೆಯೊಂದರ ಮೇಲೆ "ಪೆರೆನಾಯಕನ ಮಗ ಗೋಪೆನಾಯಕನ ಆಯಗಳ ಗರುಡಿ" ಎಂಬ ಬರಹವಿದೆ. ಈ ಗರಡಿಯು ಇಂದೂ ಸುಸ್ಥಿತಿಯಲ್ಲಿದೆ. ಸಾಮಾನ್ಯವಾಗಿ ಇಲ್ಲಿರುವ ಅಂಕಣವನ್ನು ಗರಡಿ ಮನೆಯೆಂದು ಭಾವಿಸುತ್ತಾರೆ. ಆದರೆ, ಗುಹೆಯೊಳಗಿನ ಬಂಡೆಯ ಮೇಲೆ ಮಹಿಳೆಯ ಉಬ್ಬುಶಿಲ್ಪವು ಕೈಬೆರಳುಗಳಿಂದ ದಾರಿಯನ್ನು ತೋರಿಸುವಂತೆ ಚಿತ್ರಿಸಲಾಗಿದೆ. ಶಿಲ್ಪವು ದಾರಿ ತೋರಿಸುವ ದಿಕ್ಕಿನಲ್ಲಿ ಒಬ್ಬ ಮನುಷ್ಯ ತೂರಿಹೋಗುವಂತೆ ಒಂದು ಚಿಕ್ಕ ಸುರಂಗವಿದೆ. ಸುಮಾರು ೮ ಅಡಿ ಉದ್ದವಿರುವ ಸುರಂಗದಲ್ಲಿ ಮಲಗಿಕೊಂಡು ಒಳಕ್ಕೆ ತೆವಳುತ್ತಾ ಸಾಗಿದರೆ ಒಂದು ದುರ್ಗಮ ಪ್ರದೇಶ ಕಂಡುಬರುತ್ತದೆ. ಸುಮಾರು ೫೦ ಅಡಿ ಎತ್ತರದ ಕೋಡುಗಲ್ಲುಗಳ ಮಧ್ಯೆ ಮರಳಿನ ರಾಶಿ ಇದೆ.

ಈ ಕೋಡುಗಲ್ಲುಗಳ ಮಧ್ಯೆ ಉತ್ತಮವಾದ ತಂಗಾಳಿ ಬೀಸುತ್ತಿದ್ದು, ಉತ್ತಮವಾದ ಗಾಳಿ-ಬೆಳಕಿನಿಂದ ಕೂಡಿದೆ. ಈ ಸ್ಥಳದಲ್ಲಿದ್ದ ಆಂಜನೇಯ ಮತ್ತಿತರೆ ಚಿತ್ರಗಳು ಬಂಡೆಯ ಮೇಲೆ ಬಿದ್ದ ಮಳೆಯ ನೀರಿನಿಂದ ಸ್ಪಷ್ಟವಾಗಿ ಕಂಡುಬರುತ್ತಿಲ್ಲ.

ಕರುವಿನಕಟ್ಟೆ ಸರ್ಕಲ್ ಬಳಿ ಇರುವ ದೊಡ್ಡಗರಡಿ ಶೃಂಗೇರಿ ಮಠದ ಸಮೀಪದ ಸಣ್ಣ ಗರಡಿ, ಬುರುಜನಟ್ಟಿ ಗರಡಿ, ಹಗಲು ದೀವಟಿಗೆ ಗರಡಿ, ಕೆಳ ಕೋಟೆಯಲ್ಲಿರುವ ರಾಯರ ಹಟ್ಟಿ ಗರಡಿ, ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು ಹಿಂಭಾಗದಲ್ಲಿದ್ದ ಆಂಜನೇಯನ ಗರಡಿ(ಶಿಥಿಲವಾಗಿದೆ)

[illegible]

[illegible]

[illegible]

ಹೊರಪೇಟೆಯ ಅಂಜುಮಾನ್ ಗರಡಿ(ಇತ್ತೀಚಿನದು) ಹೀಗೆ ಒಟ್ಟು ಏಳು ಗರಡಿಗಳು ಚಿತ್ರದುರ್ಗದಲ್ಲಿವೆ. ದೊಡ್ಡಗರಡಿ, ಬುರುಜಿನಹಟ್ಟಿ ಗರಡಿ, ಶೃಂಗೇರಿಮಠದ ಗರಡಿಗಳು, ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿದ್ದರೆ ಉಳಿದ ಗರಡಿಗಳು ಇತ್ತೀಚಿನವೆಂದು ಹೇಳಲಾಗಿದೆ.[೬] ದೊಡ್ಡಗರಡಿ ಮತ್ತು ಬುರುಜಿನ ಹಟ್ಟಿ ಗರಡಿಯಲ್ಲಿ ಈಗಲೂ ಹಿಂದೆ ಬಳಸುತ್ತಿದ್ದ ಕಲ್ಲಿನ ಗುಂಡುಗಳು, ಲೋಡುಗಳು, ಮಲ್ಲಕಂಬ ಮುಂತಾದವುಗಳಿವೆ. ಗರಡಿ ಸಂಪ್ರದಾಯದಲ್ಲಿ ಅತಿ ಮುಖ್ಯವಾದುದು ಮಟ್ಟಿ ಪೂಜೆ. ಇದು ಗರಡಿಯವರ ಬದುಕಿನಲ್ಲಿ ಅಂಟಿ ಬಂದಿರುವ ಗಟ್ಟಿ ಸಂಪ್ರದಾಯ. ಮಟ್ಟಿ ಪೂಜೆಗೆ ಮೊದಲು ಮರಗಾಲು ಹಾಕಿ ಮೆರವಣಿಗೆ ಹೊರಡುತ್ತಾರೆ. ಈ ಸಂಪ್ರದಾಯ ಹಿಂದಿನಿಂದಲೂ ಬಂದಂತೆ ತೋರುತ್ತದೆ. ಮರಗಾಲನ್ನು ಗರಡಿಮನೆಯ ಜಟ್ಟಿಗಳು ಕಟ್ಟುತ್ತಿದ್ದರು. ಹಿಂದೆ ಪಾಳೆಯಗಾರರು ಕೋಟೆಯೊಳಗೆ ಇಂತಹ ಮರಗಾಲು ಪಡೆಯನ್ನು ಇಟ್ಟುಕೊಳ್ಳುತ್ತಿದ್ದರು. ಕಂದಕ ದಾಟಲು ಕೋಟೆಗೆ ಲಗ್ಗೆ ಹಾಗಲು ಕುದುರೆ, ಒಂಟೆ, ಆನೆಗಳ ಮೇಲೆ ಇರುವ ಸೈನಿಕರನ್ನು ತರಿಯಲು, ಕವಣೆ ಕಲ್ಲುಗಳನ್ನು ಬೀಸಲು ಈ ಮರಗಾಲು ಪಡೆ ಬಳಕೆಯಾಗುತ್ತಿತ್ತೆಂದು ಹೇಳಲಾಗಿದೆ.[೮]

ಚಿತ್ರದುರ್ಗ ಪಾಳೆಯಗಾರ ಅಂಗಸಾಧನೆಯಲ್ಲಿ ಬಹು ಘಟಕರಾಗಿದ್ದುದಲ್ಲದೆ ಬಲಶಾಲಿಗಳಾಗಿದ್ದರು. ಒಬ್ಬರು ಉರುಳಿಸುವುದಕ್ಕೆ ಆಗದಂತೆ ಸಾಂಗ್ರಾಣಿ ಕಲ್ಲುಗಳೆರಡನ್ನು ಎರಡೂ ಕೈಯಲ್ಲಿ ಹಿಡಿದು ಇವರೆಡಕ್ಕಿಂತಲೂ ಭಾರವಾದ ಇನ್ನೊಂದು ಕಲ್ಲನ್ನು ಕತ್ತಿಗೆ ತಗಲುಹಾಕಿಕೊಂಡು ಬೈಸಿಗೆ ಸಾಧನೆ ಮಾಡುತ್ತಿದ್ದರು. ಇಂತಹ ಕಲ್ಲುಗಳು ಈಗಲೂ ಚಿತ್ರದುರ್ಗದ ಗರಡಿಗಳಲ್ಲಿವೆ. ಕೊಣತ ಕಂಭಗಳನ್ನು ಬಹುವಾಗಿ ಕಟ್ಟುತ್ತಿದ್ದರು. ದೈಹಿಕಶಕ್ತಿಯಿಂದಲೂ ಪರಾಕ್ರಮದಿಂದಲೂ ರಾಜ್ಯವನ್ನು ಜಯಿಸಿ, ಶತ್ರುಗಳನ್ನು ಗೆದ್ದು ಆಳುತ್ತಿದ್ದ ಇವರಿಗೆ ಅಂಗಸಾಧನೆಯು ತುಂಬಾ ಅವಶ್ಯವಾಗಿತ್ತು. ಅಂಬು ಒಡೆಯುವುದು, ದೊಣ್ಣೆ ವರಸೆ ಮಾಡುವುದು, ಕತ್ತಿ ಪಠ ತಿರುಗಿಸುವುದರಲ್ಲಿ ಚೆನ್ನಾಗಿ ಪರಿಣತರಿದ್ದರು. ಇವರ ದೈಹಿಕಶಕ್ತಿ ಎಷ್ಟಿತ್ತೆಂಬುದಕ್ಕೆ ಉದಾಹರಣೆಗೆ ಹಿರೇಮದಕರಿ ನಾಯಕನು ದೊರೆಯಾಗಿ ಒಡ್ಡೋಲಗದಲ್ಲಿ ಕುಳಿತಿರುವಾಗ ಓಲಗ ಶಾಲೆಯಲ್ಲಿ ಸಭಿಕರು ಕಂಭ ಒರಗಿಗೊಂಡು ಕೂತಿರಲು ದೊರೆಯ ತಮ್ಮನೊಬ್ಬನು ಆ ಕಂಬವನ್ನು ತನ್ನ ಬಲದಿಂದ ಎತ್ತಿ ಹತ್ತಿರ ಕೂತಿದ್ದವರ ಅಂಗಿಯ ಮೇಲಿ ಇಟ್ಟಿದ್ದನು. ಕೊನೆಗೆ ದರ್ಬಾರು ಆದಮೇಲೆ ಆ ಮನುಷ್ಯ ಎದ್ದಾಗ, ಅಂಗಿ ಹರಿದುಹೋಗಿ ಸಭಿಕರ ವಿನೋದಕ್ಕೆ ಗುರಿಯಾಗುತ್ತಿದ್ದನೆಂದು ಹೇಳಲಾಗಿದೆ.[೯] ಈ ರೀತಿ ಗರಡಿ ಮನೆಗಳು ಕೋಟೆಯಲ್ಲಿ ಸಾವಿರಾರು ಯೋಧರಿಗೆ ತರಬೇತಿ ಕೊಟ್ಟು ಕೋಟೆ ಕಾಳಗಕ್ಕೆ ಸಿದ್ಧಪಡಿಸುತ್ತಿದ್ದರು. ಒಟ್ಟಿನಲ್ಲಿ ಇಂತಹ ಗರಡಿಮನೆಗಳು ಅಂದು ಕೋಟೆಯೊಳಗಿನ ಸೈನಿಕ ಶಾಲೆಗಳಾಗಿದ್ದವು.

೫.೬ ಮದ್ದಿನ ಮನೆ

ಕೋಟೆಯಲ್ಲಿ ಮದ್ದುಗುಂಡು ಅಥವಾ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಸ್ಥಳಕ್ಕೆ ಮದ್ದಿನ ಮನೆ ಎಂದು ಕರೆಯುತ್ತೇವೆ. ಈ ಮದ್ದಿನ ಮನೆಗಳಿಗೆ ಆಯುಧ ಶಾಲೆ, ಆಯುಧಾಗಾರ ಎಂದೂ ಕರೆಯುವುದುಂಟು. ಇಂತಹ ಆಯುಧಾಗಾರಗಳನ್ನು ನೋಡಿಕೊಳ್ಳುತ್ತಿದ್ದವನನ್ನು ಆಯುಧಾಗಾರ ಅಧ್ಯಕ್ಷನೆಂದು ಕರೆಯಲಾಗಿದೆ. ಈತನು ಯುದ್ಧಕ್ಕೆ ಬೇಕಾದ, ದುರ್ಗವನ್ನು ರಕ್ಷಿಸಿಕೊಳ್ಳುವುದಕ್ಕೆ ಅವಶ್ಯಕವಾದ ಹಾಗೂ ಶತ್ರುಗಳನ್ನು ನಾಶಮಾಡಲು ಶಸ್ತ್ರಾಸ್ತ್ರಗಳನ್ನು ತಯಾರಿಸಿ ತನ್ನ ಅಧೀನದಲ್ಲಿಟ್ಟುಕೊಳ್ಳುತ್ತಿದ್ದನು.[೧೦] ದುರ್ಗದ ಸಂಪತ್ತುಗಳಲ್ಲಿ ಶಸ್ತ್ರಾಸ್ತ್ರಗಳು ಒಂದು ಬಗೆಯ ಸಂಪತ್ತಾಗಿದ್ದವೆಂದು ನೀತಿವಾಕ್ಯಾಮೃತದಲ್ಲಿ ಹೇಳಲಾಗಿದೆ.[೧೧] ಶುಕ್ರನೀತಿಸಾರವು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.[೧೨] ರಾಜರು ತಮಗೆ ಸಾಕಾಗುವಷ್ಟು ಮದ್ದುಗುಂಡುಗಳನ್ನು ಇಂತಹ ಮದ್ದಿನ ಮನೆಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಕೆಲವೊಮ್ಮೆ ಕೋಟೆಗಳ ಅಳಿವು ಉಳಿವು ಇವರು ಸಂಗ್ರಹಿಸುತ್ತಿದ್ದ ಮದ್ದುಗುಂಡುಗಳ ಮೇಲೆ ನಿರ್ಧಾರವಾಗುತ್ತಿತ್ತು.

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬಂದಿರುವ ಎಲ್ಲಾ ಕೋಟೆಗಳಲ್ಲಿ ಮದ್ದಿನ ಮನೆಗಳು ಇದ್ದವಾದರೂ ಈಗ ಬಹಳಷ್ಟು ಕೋಟೆಗಳಲ್ಲಿ ಇವು ಶಿಥಿಲಗೊಂಡಿವೆ. ಹೊಸದುರ್ಗ, ಚಿತ್ರದುರ್ಗ, ಮೊಳಕಾಲ್ಮೂರು, ಬ್ರಹ್ಮಗಿರಿ ಮೊದಲಾದ ಕೋಟೆಗಳಲ್ಲಿ ಮದ್ದಿನ ಮನೆಗಳು ಇರುವುದನ್ನು ಕಾಣಬಹುದು. ಈ ಮದ್ದಿನ ಮನೆಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ವ್ಯವಸ್ಥಿತವಾಗಿ ನಿರ್ಮಿಸಿರುವುದು ಕಂಡುಬರುತ್ತದೆ. ಇವುಗಳನ್ನು ದ್ವಾರಬಾಗಿಲು, ಬುರುಜು, ಬತೇರಿ, ಅರಮನೆ ಮುಂತಾದ ಸ್ಥಳಗಳಲ್ಲಿಯೇ ಅಲ್ಲದೆ, ಮದ್ದಿನ ಮನೆಗೆ ಯೋಗ್ಯವಾದ ಸ್ಥಳಗಳನ್ನು ಆಯ್ಕೆಮಾಡಿ ನಿರ್ಮಿಸಲಾಗುತ್ತಿತ್ತು. ಮದ್ದಿನ ಮನೆಗಳಿಗೂ ಕೂಡ ಅರಮನೆಗೆ ಇದ್ದ ಹಾಗೆ ಕೋಟೆ, ಕಂದಕ, ಬಾವಿ ಮುಂತಾದವುಗಳನ್ನು ರಚಿಸಬೇಕೆಂದು ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ವಿವರಿಸಿದ್ದಾನೆ.[೧೩] ಅಲ್ಲದೆ, ಯಮನ ಹೆಸರಿನಲ್ಲಿ ಇಂತಹ ಆಯುಧಾಗಾರಕ್ಕೆ ಅರ್ಚನೆಯನ್ನು ಮಾಡಬೇಕೆಂದು ಹೇಳಿದ್ದಾನೆ. ಸಂಗ್ರಹಿಸಿದ ಆಯುಧಗಳನ್ನು ಗಾಳಿ ಮತ್ತು ಬಿಸಿಲು ತಾಗುವಂತೆ ಮೂರು, ನಾಲ್ಕು ದಿನಗಳಿಗೊಮ್ಮೆ ಸ್ಥಳ ಬದಲಾವಣೆ ಮಾಡಬೇಕು. ಶಾಖ ನೀರು, ಕ್ರಿಮಿಗಳಿಂದ ಹಾಳಾಗದಂತಿರಬೇಕು. ಆಯುಧಗಳ ಸ್ವಭಾವ, ಲಕ್ಷಣ, ರೂಪ, ಪ್ರಮಾಣ ತಂದ ಸ್ಥಳ ಹೀಗೆ ಎಲ್ಲವನ್ನೂ ಬರೆದಿಡುವುದು ಆಯುಧಾಗಾರ ಅಧ್ಯಕ್ಷನ ಕರ್ತವ್ಯವಾಗಿತ್ತು.[೧೪]

ಚಿತ್ರದುರ್ಗ ಕೋಟೆಯಲ್ಲಿ ಮದ್ದಿನ ಮನೆಯೆಂದು ಕರೆಯುತ್ತಿರುವ ಸುಮಾರು ೧೦ ಕಟ್ಟಡಗಳಿವೆ. ಇವುಗಳ ರಚನೆ ಮತ್ತು ವಿನ್ಯಾಸದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಅರಮನೆಯ ಪಾಳು ಪ್ರದೇಶದಲ್ಲಿ ಎರಡು ಮದ್ದಿನ ಮನೆಗಳಿವೆ. ೧೭.೫ ಅಡಿ ಉದ್ದ, ೧೦ ಅಡಿ ಎತ್ತರ ಮತ್ತು ೩೪ ಅಡಿ ಅಗಲದ ಸಮಾನ ಅಳತೆಯಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ನಯವಾದ ಹಾಗೂ ೧೧ ಅಡಿ ಉದ್ದ, ೨ ಅಡಿ ದಪ್ಪ, ಅಳತೆಯ ಕಲ್ಲುಗಳಿಗೆ ಗಾರೆ ಬಳಸಿ ವ್ಯವಸ್ಥಿತವಾದ ಗೋಡೆಯನ್ನು ಕಟ್ಟಿದ್ದಾರೆ. ಕಟ್ಟಡದ ಮೇಲ್ಭಾಗದಲ್ಲಿ ಏಳು ಅಡಿ ಎತ್ತರದಲ್ಲಿ ಕಮಾನಿನಂತೆ ಗಾರೆಗಚ್ಚಿನಿಂದ ಮುಚ್ಚಿ ಮಳೆಯನೀರು ಕಟ್ಟಡದೊಳಗೆ ಹೋಗದಂತೆ ಕಟ್ಟಲಾಗಿದೆ. ಎರಡು ಕಟ್ಟಡಗಳಿಗೂ ಮೇಲ್ಭಾಗದಲ್ಲಿ ೩ ಕಳಸಗಳನ್ನು ಸ್ಥಾಪಿಸಲಾಗಿದೆ. ಕಟ್ಟಡದ ಮೇಲ್ಭಾಗದ ಕಲ್ಲು ಚಪ್ಪಡಿಗಳನ್ನು ತೆಗೆಯದಂತೆ ಕಬ್ಬಿಣದ ಮಳೆಗಳಿಂದ ಬೆಸೆಯಲಾಗಿದೆ. ಎರಡೂ ಕಟ್ಟಡಗಳಿಗೆ ಉತ್ತರ ಮತ್ತು ಪಶ್ಚಿಮದಲ್ಲಿ ಏಳು ಅಡಿ ಎತ್ತರದ ಪ್ರಾಕಾರ ಗೋಡೆಗಳಿವೆ. ಮದ್ದಿನ ಮನೆಗಳಿಗೆ ೩.೩x೨.೫x೪.೪ ಅಡಿಯ ಬಾಗಿಲುಗಳಿದ್ದು, ಬಾಗಿಲಲ್ಲಿ ಕಾವಲು ಕಾಯುತ್ತಿರುವ ಸುಂದರವಾದ ಎರಡು ಶಿಲ್ಪಗಳಿವೆ. ಕಟ್ಟಡದಲ್ಲಿ ಎಲ್ಲಿಯೂ ಗಾಳಿಬೆಳಕಿನ ವ್ಯವಸ್ಥೆಯಿಲ್ಲ. ಒಳಭಾಗವನ್ನು ಘಂಟಾಕೃತಿಯಲ್ಲಿ ರಚಿಸಲಾಗಿದ್ದು, ಒಳಮೈಗೆ ಗಾರೆಯ ಲೇಪನ ಮಾಡಲಾಗಿದೆ. ಇವು ಇಡೀ ಬೆಟ್ಟದಲ್ಲಿ ಸುಂದರ ಹಾಗೂ ವ್ಯವಸ್ಥಿತವಾದ ಮದ್ದಿನ ಮನೆಗಳಾಗಿವೆ.

ಇದೇ ರೀತಿ ಗಣಪತಿ ದೇವಾಲಯದ ಪಕ್ಕದಲ್ಲಿರುವ ೨೭x೩೪ ಚ.ಅ.ಯ ಮದ್ದಿನ ಮನೆಯಿದೆ. ಈ ಮದ್ದಿನ ಮನೆಗೆ ಉತ್ತರದ ಕಡೆಯಿಂದ ೩ x ೨ x ೫ ಅಡಿಯ ಬಾಗಿಲಿದೆ. ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ ಕೆಳಭಾಗದ ಕೋಡುಗಲ್ಲಿನ ಮಧ್ಯೆ ಮದ್ದಿನ ಮನೆ ಎಂದು ಕರೆಯಬಹುದಾದ ಕಲ್ಲಿನ ಕಟ್ಟಡವಿದೆ. ಪೂರ್ವಪಶ್ಚಿಮವಾಗಿ ೧೫ ಅಡಿ ಉತ್ತರದಕ್ಷಿಣವಾಗಿ ೧೭ ಅಡಿ ಇದ್ದು, ೭ ಅಡಿ ಎತ್ತರವಿದೆ. ಈ ಕಟ್ಟಡಕ್ಕೆ ಉತ್ತರದ ಕಡೆಯಿಂದ ೨.೯ ಅಡಿ ಅಗಲ, ೩.೬ ಅಡಿ ಎತ್ತರದ ಬಾಗಿಲು ಇದೆ. ಕಟ್ಟಡದ ಸುತ್ತಲೂ ಗಾರೆಯಿಂದ ಭದ್ರಗೊಳಿಸಿದ್ದಾರೆ. ಮನೆಯ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಇದರ ಪಕ್ಕದಲ್ಲಿಯೇ ಬುರುಜು ಇದ್ದು, ಒಳಗಿನಿಂದ ಬುರುಜಿನ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಹೊರ ನೋಡುವಲ್ಲಿ ಇದು ಗೋಚರಿಸದಂತೆ ನಿರ್ಮಿಸಿದ್ದಾರೆ. ರಣಬತೇರಿಯ ಪಶ್ಚಿಮಕ್ಕ ಬಂಡೆಗಳ ಮಧ್ಯೆ ಎರಡು ಮದ್ದಿನ ಮನೆಗಳಿವೆ. ಇದರ ದಕ್ಷಿಣಕ್ಕೆ ೨೦೦ ಅಡಿ ಸುತ್ತಳತೆ ಹೊಂದಿರುವ ಬತೇರಿ ಇದೆ. ಬತೇರಿಗೆ ಹೊಂದಿಕೊಂಡಂತೆ ಕೈಪಿಡಿ ಗೋಡೆಯಲ್ಲಿ ಮೂರು ಅಡಿ ಅಗಲ ಹಾಗೂ ೮ ಅಡಿ ಉದ್ದದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಗೂಡು ಇದೆ. ಈ ಗೂಡಿಗೆ ಉತ್ತರದಲ್ಲಿ ಮೂರು ಅಡಿ ಅಗಲದ,

[illegible]

[illegible]

ಎರಡು ಅಡಿ ದಪ್ಪದ ಗೋಡೆ ಕಟ್ಟಿದ್ದು, ಸುತ್ತಲೂ ಗಾರೆಯಿಂದ ಮುಚ್ಚಲಾಗಿದೆ. ಈ ಗೂಡಿಗೆ ೨x೩x೪ ಅಡಿಯ ಒಂದು ಚಿಕ್ಕ ಬಾಗಿಲಿದೆ. ಸಾಮಾನ್ಯವಾಗಿ ಈ ಬತೇರಿ ಕಾಯುವ ಕಾವಲುಗಾರನಿಗೆ ಬೇಕಾದ ಮದ್ದುಗುಂಡುಗಳನ್ನು ಇಲ್ಲಿಯೇ ಸಂಗ್ರಹ ಮಾಡುತ್ತಿದ್ದುದು ಇದರ ವಿಶೇಷವಾಗಿದೆ. ತುಪ್ಪದ ಕೊಳ ಬತೇರಿಯ ಮೇಲೂ ಮದ್ದು ಸಂಗ್ರಹಿಸುವ ನೆಲಮಾಳಿಗೆಯಾಕಾರದ ಬಾವಿಯಿದೆ. ಬಾವಿಯು ಒಟ್ಟು ೨೫ ಅಡಿ ಉದ್ದವಿದ್ದು, ೪ ಅಡಿ ೧೦ ಅಂಗುಲ ಅಗಲವಿದೆ. ಇದು ನೆಲಮಾಳಿಗೆಯಾದುದರಿಂದ ಗಾಳಿ, ಬೆಳಕು ಬರಲು ಮೇಲೆ ಹಾಕಿರುವ ಚಪ್ಪಡಿ ಕಲ್ಲುಗಳಿಂದ ಮೂರು ಕಿಂಡಿಗಳನ್ನು ಬಿಟ್ಟಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇದೇ ರೀತಿಯ ಮದ್ದಿನ ಮನೆಗಳು ಇರಬೇಕೆಂದು ಹೇಳಲಾಗಿದೆ. ಚಿತ್ರದುರ್ಗ ಬೆಟ್ಟದಲ್ಲಿರುವ ಅನೇಕ ಮದ್ದಿನ ಮನೆಗಳಿಂದ ಇಡೀ ಕೋಟೆಯೇ ಒಂದು ಮದ್ದುಗುಂಡುಗಳ ಸಂಗ್ರಹಾಲಯವಾಗಿತ್ತೆನ್ನಬಹುದು. ಅಪಾಯಕಾರಿ ಸ್ಥಳಗಳಿಗೆ ಮುಂಜಾಗ್ರತೆಯ ಕ್ರಮವಾಗಿ ಮದ್ದುಗುಂಡುಗಳನ್ನು ಪೂರೈಸಲು ಈ ರೀತಿಯ ಮದ್ದಿನ ಮನೆಗಳನ್ನು ಬುರುಜು ಬತೇರಿಗಳಲ್ಲಿ, ದ್ವಾರಬಾಗಿಲುಗಳಲ್ಲಿ ಸ್ಥಾಪಿಸಿರುವುದು ಗಮನಾರ್ಹ. ಕೆಲವು ಕಡೆ ಇಂತಹ ಮದ್ದಿನ ಮನೆಗಳು ಹೊರಜನರಿಗೆ ಕಾಣದ ಹಾಗೆ ಕೋಡುಗಲ್ಲುಗಳ ಮಧ್ಯೆನಿರ್ಮಾಣ ಮಾಡಿದ್ದಾರೆ. ಬಾಗಿಲ ಬಳಿಯಿರುವ ಪಹರೆಗೃಹಗಳಲ್ಲೂ ಮದ್ದು ಗುಂಡುಗಳ ಸಂಗ್ರಹವಿರುತ್ತಿತ್ತು. ಹಾಗಾಗಿ ಪಹರೆ ಗೃಹಗಳು ಒಂದು ರೀತಿಯ ಮದ್ದಿನಮನೆಗಳೇ ಆಗಿರುತ್ತಿದ್ದವು.

ಹೊಸದುರ್ಗದ ಭೈರವನಕೊಂಬೆ ಕೋಟೆ ಪ್ರದೇಶದಲ್ಲಿ ಒಂದು ಮದ್ದಿನ ಮನೆ ಇದೆ. ಈ ಮದ್ದಿನ ಮನೆಯು ಈ ಬೆಟ್ಟದ ಅತ್ಯಂತ ದೊಡ್ಡದಾದ ಕಟ್ಟಡವಾಗಿದೆ. ಇದರ ಒಳಭಾಗದಲ್ಲಿ ೪೪ ಕಂಬಗಳಿದ್ದು, ಸುತ್ತಲೂ ಭಾರೀ ಗಾತ್ರದ ಕಲ್ಲುಗಳನ್ನಿಟ್ಟು ಗೋಡೆಯನ್ನು ಕಟ್ಟಿ ಮೇಲ್ಬಾಗದಲ್ಲಿ ಗಾರೆ ಗಚ್ಚಿನಿಂದ ಮುಚ್ಚಿರುವರು. ಈ ಕಟ್ಟಡಕ್ಕೆ ಪಶ್ಚಿಮದಲ್ಲಿ ಒಂದು ಚಿಕ್ಕ ಬಾಗಿಲಿದೆ. ಮೊಳಕಾಲ್ಮೂರು ಮತ್ತು ಬ್ರಹ್ಮಗಿರಿಗಳಲ್ಲಿ ಮದ್ದಿನ ಮನೆಯ ಕಟ್ಟಡಗಳು ಇವೆಯಾದರೂ ಅವು ತುಂಬ ಶಿಥಿಲಗೊಂಡಿವೆ.

೫.೭ ಕಣಜಗಳು

ಕಣಜಗಳು ಕೋಟೆಯ ಸ್ಮಾರಕಗಳಲ್ಲಿ ಅತಿ ಮುಖ್ಯವಾದ ಅಂಗ ಭಾಗಗಳಾಗಿವೆ. ದುರ್ಗಗಳಲ್ಲಿ ಬಹಳ ವರ್ಷಗಳ ಕಾಲ ಕೆಡದೆ ಉಪಯೋಗಿಸಲು ಯೋಗ್ಯವಾದ ೨೨ ವಸ್ತುಗಳನ್ನು ಸಂಗ್ರಹಿಸಬೇಕೆಂದು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಹೇಳಿದ್ದಾನೆ.[೧೫] ಈ ರೀತಿಯ ವಸ್ತುಗಳನ್ನು ಸಂಗ್ರಹಿಸಲು ನಿರ್ಮಿಸಿದ

[illegible]

[illegible]

[illegible]

[illegible]

ಸ್ಮಾರಕಗಳೇ ಕಣಜಗಳು. ಒಟ್ಟಾರೆ ಇದು, ದಾನ್ಯ ಸಂಗ್ರಹಿಸುವ ಸ್ಥಳವಾಗಿದೆ. ಎಲ್ಲಾ ಸಂಗ್ರಹಗಳಿಗಿಂತ ಮುಖ್ಯವಾದುದು ದಾನ್ಯ ಸಂಗ್ರಹವೆಂದು ನೀತಿ ವಾಕ್ಯಾಮೃತದಲ್ಲಿ ಹೇಳಲಾಗಿದೆ.[೧೬] ಶುದ್ಧವಾದ ಧಾನ್ಯವನ್ನು ಮಾತ್ರ ಸಂಗ್ರಹಿಸಬೇಕೆಂದು ಹಾಗೂ ಹೊಸ ಧಾನ್ಯಗಳು ಬಂದಾಗ ಹಳೆಯ ಧಾನ್ಯಗಳನ್ನು ಖರ್ಚು ಮಾಡಬೇಕೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಿಸಲಾಗಿದೆ.[೧೭] ಕಣಜಗಳಿಗೆ ಕೋಷ್ಠಾಗಾರವೆಂದು ಹೇಳಲಾಗಿದೆ. ಆಹಾರ ವಸ್ತುಗಳನ್ನು ಸಂಗ್ರಹಿಸಿ ದಾಸ್ತಾನು ಮಾಡುವ ಸ್ಥಾನಕ್ಕೆ ಕೋಷ್ಠಾಗಾರವೆಂದು ಹೇಳಲಾಗಿದೆ.[೧೮] ಇದನ್ನು ನೋಡಿಕೊಳ್ಳಲು ಕೋಷ್ಠಾಗಾರನೆಂಬ ಅಧ್ಯಕ್ಷನಿದ್ದನು.[೧೯] ಗಿರಿದುರ್ಗಗಳಲ್ಲಿ ಕಲ್ಲಿನ ಕಣಜಗಳು, ಮಣ್ಣಿನ ಕಣಜಗಳನ್ನು ವಿವಿಧ ವಿನ್ಯಾಸದಲ್ಲಿ ರಚಿಸಲಾಗಿದೆ. ಸ್ಥಳದುರ್ಗಗಳಲ್ಲಿ ಹೆಚ್ಚಾಗಿ ನೆಲದೊಳಗೆ ಕಣಜಗಳನ್ನು ನಿರ್ಮಿಸುತ್ತಿದ್ದರು. ಇವುಗಳಿಗೆ ಹಗೇವುಗಳು ಎಂದು ಕರೆಯಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಎಲ್ಲಾ ಕೋಟೆಗಳಲ್ಲೂ ಕಣಜಗಳು ಕಂಡುಬಂದಿವೆ. ಆದರೆ ಬಹಳಷ್ಟು ಕೋಟೆಗಳಲ್ಲಿ ಈ ಕಣಜಗಳು ಶಿಥಿಲಗೊಂಡಿವೆ. ಕೆಲವು ಕೋಟೆಗಳಲ್ಲಿ ಮಾತ್ರ ಇನ್ನೂ ಉಳಿದುಕೊಂಡು ಬಂದಿವೆ. ಭಾರೀ ಹಗೇವುಗಳನ್ನು ನಿರ್ಮಿಸಿ ಸುತ್ತಲೂ ಕೋಟೆಯನ್ನು ಕಟ್ಟಿರುವ ಕೋಟೆ ಕಣಜನಹಳ್ಳಿ ಕೋಟೆಯಾಗಿದೆ. ಈ ಕೋಟೆಯು ಹೆಸರೇ ಹೇಳುವಂತೆ ಧಾನ್ಯವನ್ನು ಸಂಗ್ರಹಿಸುವ ಕೋಟೆಯಾಗಿತ್ತೆಂದು ಹೇಳಬಹುದು. ಹಿಂದಿನ ಕಾಲದ ರಾಜರು ಧಾನ್ಯ ಸಂಗ್ರಹವಾಗುತ್ತಿದ್ದ ಪ್ರದೇಶದಲ್ಲಿ ಈ ರೀತಿಯ ಧಾನ್ಯಸಂಗ್ರಹಗಳನ್ನು ನಿರ್ಮಿಸಿ ನಂತರ ಅವಶ್ಯಕತೆ ಬಂದಾಗ ರಾಜಧಾನಿಗೆ ತರಿಸಿಕೊಳ್ಳುವ ವ್ಯವಸ್ಥೆ ಮಾಡಿದ್ದಿರಬಹುದು.

ಒಂದೊಂದು ಕೋಟೆಯಲ್ಲೂ ವಿವಿಧ ರೀತಿಯ ಕಣಜಗಳ ರಚನೆಯನ್ನು ಕಾಣಬಹುದು. ಇವುಗಳನ್ನು ವೃತ್ತಾಕಾರವಾಗಿಯೂ ಚೌಕಾಕಾರವಾಗಿಯೂ ನಿರ್ಮಿಸಲಾಗಿದೆ. ಕೆಲವು ಮಣ್ಣಿನಿಂದ ನಿರ್ಮಾಣ ಮಾಡಿದ್ದರೆ, ಮತ್ತೆ ಕೆಲವು ಕಲ್ಲುಗಳಿಂದ ನಿರ್ಮಿಸಲ್ಪಟ್ಟಿವೆ. ಚಿತ್ರದುರ್ಗ ಜಿಲ್ಲೆಯ ಕಣಜಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ನೆಲೆಸಿರುವ ಕಣಜಗಳು ಚಿತ್ರದುರ್ಗ ಕೋಟೆಯಲ್ಲಿವೆ. ಅರಮನೆಯ ಪಾಳು ಪ್ರದೇಶದಲ್ಲಿ ಸುಮಾರು ೧೫ಕ್ಕೂ ಹೆಚ್ಚು ಕಣಜಗಳು ಈಗಲೂ ಉಳಿದುಕೊಂಡು ಬಂದಿವೆ. ಇವುಗಳ ವಿನ್ಯಾಸ ಮತ್ತು ರಚನೆಯಲ್ಲಿ ತುಂಬಾ ವ್ಯತ್ಯಾಸವನ್ನು ಕಾಣಬಹುದು. ವೃತ್ತಾಕಾರದ ಕಣಜಗಳ ಕೆಳಭಾಗದಲ್ಲಿ ಐದು ಅಡಿ ಎತ್ತರದವರೆಗೆ ಕಲ್ಲಿನ ಅಧಿಷ್ಠಾನವನ್ನು ಕಟ್ಟಿ ನಂತರ ಎರಡು ಅಡಿ ಎತ್ತರದ ಗಚ್ಚು ಮಣ್ಣಿನ ನಾಲ್ಕೈದು ಸುತ್ತುಗಳನ್ನು ಒಂದಾದ ಮೇಲೊಂದರಂತೆ ನಿರ್ಮಿಸಿದ್ದಾರೆ. ಈ ಮಣ್ಣಿ ಗೋಡೆಯು ೧೦ ರಿಂದ ೧೫ ಅಡಿ ಎತ್ತರವರೆಗಿದೆ. ಇಂತಹ ಕಣಜಗಳ ಸುತ್ತಳತೆ ೬೫ ರಿಂದ ೧೦೦

[illegible]

[illegible]

ಅಡಿಯವರೆಗೆ ಇರುವುದು ಕಂಡುಬರುತ್ತದೆ. ಕೆಲವು ಕಣಜಗಳಿಗೆ ಮೇಲ್ಭಾಗದಲ್ಲಿ ಬಾಗಿಲುಗಳಿದ್ದರೆ, ಮತ್ತೆ ಕೆಲವು ಕಣಜಗಳಿಗೆ ಬಾಗಿಲುಗಳೇ ಇಲ್ಲ. ಕಲ್ಲಿನಿಂದ ನಿರ್ಮಿಸಿರುವ ಕಣಜಗಳು ಆಯತಾಕಾರವಾಗಿದ್ದು, ನಯಗೊಳಿಸಿದ ಕಲ್ಲುಗಳಿಗೆ ಗಾರೆಯನ್ನು ಬಳಸಿರುವುದು ಕಂಡುಬರುತ್ತದೆ. ಸಂಪಿಗೆ ಸಿದ್ಧೇಶ್ವರನ ದೇವಾಲಯದ ಪಕ್ಕದಲ್ಲಿರುವ ಕಣಜ ೨೨x೮೬x೧೨ ಅಡಿ ವಿಸ್ತಾರದಲ್ಲಿ ನಿರ್ಮಿಸಲಾಗಿದ್ದು, ಕಣಜದ ಸುತ್ತಲೂ ಇಳಿಜಾರು ಬಂಡೆಯಿದ್ದು ಎಂತಹ ಮಳೆ ಬಂದರೂ ಕಣಜಗಳಿಗೆ ನೀರು ಹೋಗದಂತೆ ಹುಟ್ಟುಬಂಡೆಯ ಮೇಲೆ ನಿರ್ಮಿಸಿದ್ದಾರೆ. ಚಿತ್ರದುರ್ಗದ ಪಾಳೆಯಗಾರರ ದಾಖಲೆಗಳು ಹೇಳುವಂತೆ ಸುಮಾರು ೧೨ ವರ್ಷಗಳವರೆಗೆ ಸಾಕಾಗುವಷ್ಟು ದವಸಧಾನ್ಯಗಳನ್ನು ಇಂತಹ ಕಣಜಗಳಲ್ಲಿ ಸಂಗ್ರಹ ಮಾಡಿ ಇಡುತ್ತಿದ್ದರೆನ್ನಲಾಗಿದೆ.[೨೦] ಹುಣಸೇಹಣ್ಣಿನ ಕಣಜ, ರಾಗಿ ಕಣಜ ಮುಂತಾದ ಕಣಜಗಳ ಉಲ್ಲೇಖಗಳು ಕಂಡುಬರುತ್ತವೆ.

ಹೊಸದುರ್ಗದ ಹನುಮನಕೊಂಬೆಯ ಪ್ರದೇಶದಲ್ಲಿ ಕಲ್ಲಿನ ಕಣಜವೊಂದು ಪೂರ್ಣವಾಗಿ ಉಳಿದುಕೊಂಡುಬಂದಿದೆ. ೧೦ ಅಡಿ ಎತ್ತರ, ೩೦ ಅಡಿ ಸುತ್ತಳತೆಯ ಕಣಜವನ್ನು ಬಂಡೆಯ ಮೇಲೆ ಮಧ್ಯಮ ಗಾತ್ರದ ಕಲ್ಲುಗಳನ್ನು ಬಳಸಲಾಗಿದೆ. ಕೆಳಭಾಗದಲ್ಲಿ ವೃತ್ತಾಕಾರವಾಗಿ ಅಗಲವಿರುವ ಕಣಜವು ಮೇಲೆ ಹೋಗುತಾ ಕಿರಿದಾಗಿದೆ. ಹೊರಭಾಗದ ರಚನೆಗಿಂತ ಒಳಭಾಗದ ರಚನೆ ತುಂಬಾ ವ್ಯವಸ್ಥಿತವಾಗಿದೆ. ಒಳಭಾಗದ ಕಲ್ಲುಗಳನ್ನು ನಯಗೊಳಿಸಿ ಕಲ್ಲುಗಳ ಮದ್ಯ ಸಂದು ಬಿಡದ ಹಾಗೆ ಮಣ್ಣನ್ನು ಬಳಸಿ ಒಳ ಭಾಗವನ್ನು ಮೊಟ್ಟೆಯಾಕಾರದಲ್ಲಿ ರಚಿಸಲಾಗಿದೆ. ಕಣಜದ ಮೇಲ್ಭಾಗವನ್ನು ಭುವನೇಶ್ವರಿಗಳಲ್ಲಿ ಇದ್ದಹಾಗೆ ಅಡ್ಡ ಚಪ್ಪಡಿ ಕಲ್ಲುಗಳನ್ನು ನಕ್ಷತ್ರಾಕಾರವಾಗಿ ಒಂದರ ಮೇಲೊಂದರಂತೆ ಇಟ್ಟು, ಮಣ್ಣಿನಿಂದ ಮುಚ್ಚಿದ್ದಾರೆ. ಈ ಕಣಜಕ್ಕೆ ಎಲ್ಲಿಯೂ ಬಾಗಿಲಿಲ್ಲ. ಒಂದು ಸಾರಿ ಧಾನ್ಯ ಸಂಗ್ರಹ ಮಾಡಿ ಮುಚ್ಚಿದ ಕಣಜಗಳು ಇವಾಗಿವೆ. ಧಾನ್ಯ ಬೇಕೆಂದಾಗ ಮೇಲ್ಭಾಗವನ್ನು ತೆಗೆದು ಧಾನ್ಯವನ್ನು ತೆಗೆದುಕೊಂಡ ನಂತರ ಕೆಲವು ದಿವಸಗಳ ಕಾಲ ಅದರ ಒಳಭಾಗವನ್ನು ಸ್ವಚ್ಛಗೊಳಿಸಿ ಗಾಳಿ ಬೆಳಕಿಗೆ ತೆರೆದಿಟ್ಟು, ಪುನಃ ಹೊಸ ಧಾನ್ಯಗಳನ್ನು ತುಂಬಿ ಮೇಲ್ಭಾಗವನ್ನು ಮುಚ್ಚುತ್ತಿದ್ದರು. ಹಾಗಾಗಿ ಇಂತಹ ಕಣಜಗಳಿಗೆ ಬಾಗಿಲುಗಳು ಇರುವುದಿಲ್ಲ. ಬಾಗಿಲೇ ಇಲ್ಲದ ಕಣಜವೊಂದು ಮೊಳಕಾಲ್ಮೂರು ಕೋಟೆಯಲ್ಲಿ ಕಂಡುಬಂದಿದೆ. ಇದಕ್ಕೆ ವಿಶಿಷ್ಟವಾದ ವ್ಯವಸ್ಥೆಯನ್ನು ಆಧುನಿಕ ರೀತಿಯಲ್ಲಿ ಕಲ್ಪಿಸಲಾಗಿದೆ.

ಮೊಳಕಾಲ್ಮೂರು ಕೋಟೆಯ ಬಸವನ ಬಾಗಿಲು ಮುಂಭಾಗ ತಗ್ಗಾದ ಪ್ರದೇಶದಲ್ಲಿ ಶಿಥಿಲಗೊಂಡ ಕಣಜದ ಅವಶೇಷಗಳಿವೆ. ಪೂರ್ವಪಶ್ಚಿಮವಾಗಿ ೩೨ ಮೀ. ಮತ್ತು ಉತ್ತರ ದಕ್ಷಿಣವಾಗಿ ೧೧ ಮೀ.

[illegible]

[illegible]

ವಿಸ್ತಾರವಾದ ಈ ಕಟ್ಟಡದ ಒಂದು ಭಾಗದಲ್ಲಿ ಕಣಜವನ್ನು ನಿರ್ಮಿಸಲಾಗಿದೆ. ಇಡೀ ಕಟ್ಟಡವನ್ನು ೫ ಅಡಿ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಕಟ್ಟಡದ ಉತ್ತರ ಭಾಗಕ್ಕೆ ೩.೨ ಮೀ. ಉದ್ದ ಮತ್ತು ೧೧ ಅಡಿ ಅಗಲ ಅಳತೆಯಲ್ಲಿ ಕಲ್ಲಿನ ಕಣಜವಿದೆ. ಇದರ ಒಳ ಅಳತೆ ೫x೨೫ ಅಡಿ ಇದೆ. ಆಯತಾಕಾರದಲ್ಲಿರುವ ಈ ರಚನೆಯ ಕಣಜದ ವಿಶೇಷತೆಯೆಂದರೆ, ಕಣಜದ ಉತ್ತರ ಭಾಗಕ್ಕೆ ಐದು ತೂಬುಗಳನ್ನು ಬಿಡಲಾಗಿದೆ. ಇವು ಹೊರಗೋಡೆಯಿಂದ ೬.೫ ಅಡಿ ಉದ್ದವಾಗಿದ್ದು, ೩ ಅಡಿ ಅಂತರದಲ್ಲಿ ಕೆಳಕ್ಕೆ ಬಾಗಿವೆ. ಈ ತೂಬುಗಳ ರಚನೆ ಮತ್ತು ವಿನ್ಯಾಸವನ್ನು ಗಮನಿಸಿದರೆ ಕಣಜದಿಂದ ಧಾನ್ಯಗಳು ತೂಬುಗಳ ಮುಖಾಂತರ ಹೊರಬರುವಂತೆ ಮಾಡಿಕೊಂಡಿರುವ ವ್ಯವಸ್ಥೆಯಾಗಿದೆ. ತೂಬುಗಳ ಒಳವ್ಯಾಸ ೧೨ ಇಂಚು ಎತ್ತರವಿದ್ದು, ೯ ಇಂಚು ಅಗಲವಾಗಿ ೨೪ ಇಂಚು ಉದ್ದವಾಗಿವೆ. ಗೋಡೆಯ ಒಳಭಾಗದಿಂದ ನಾಲಿಗೆಯಾಕಾರದ ನಯವಾದ ಚಪ್ಪಡಿ ಕಲ್ಲುಗಳು ಮುಂದಕ್ಕೆ ಇಳಿಜಾರಾಗಿ ಚಾಚಿಕೊಂಡಿವೆ. ತೂಬುಗಳಿಗೆ ಮುಚ್ಚುವ ಹಾಗೂ ತೆಗೆಯುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಐದು ತೂಬುಗಳನ್ನು ಸಮಾನ ಅಂತರದಲ್ಲಿ ರಚಿಸಲಾಗಿದೆ. ಈ ರೀತಿಯ ರಚನೆ ಜಿಲ್ಲೆಯ ಯಾವುದೇ ಕೋಟೆಗಳಲ್ಲೂ ಕಂಡುಬಂದಿಲ್ಲ. ಹೀಗೆ ಜಿಲ್ಲೆಯಾದ್ಯಂತ ವೈವಿಧ್ಯಮಯವಾದ ಕಣಜಗಳು ಕಂಡುಬಂದಿವೆ.

೫.೮ ಸೈನಿಕರ ವಸತಿನಿಲಯಗಳು

ಪ್ರಜಾರಕ್ಷಣೆಯ ಏಳು ಅಂಗಗಳಲ್ಲೊಂದಾದ ಸೇನೆಯ ವಸತಿ ನೆಲೆಗಳು ದುರ್ಗದಷ್ಟೇ ಪ್ರಾಮುಖ್ಯತೆ ಪಡೆದುಕೊಂಡಿವೆ. ಕೋಟೆಗಳಲ್ಲಿ ಕೋಟೆ ಕಾಯುವ ಸೈನಿಕರ ವಸತಿ ನಿಲಯಗಳು ಸಾಮಾನ್ಯವಾಗಿ ಒಳಭಾಗದಲ್ಲಿರುವುದನ್ನು ಕಾಣುತ್ತೇವೆ. ಇಂತಹ ನೆಲೆಗಳಿಗೂ ವಿಶೇಷ ರಕ್ಷಣೆ ನೀಡಿರುವುದನ್ನು ಜಿಲ್ಲೆಯಲ್ಲಿ ಕಂಡುಬಂದಿರುವ ಕೋಟೆಗಳಲ್ಲಿ ಕಾಣಬಹುದು. ಆದರೆ ಇಂತಹ ಕಟ್ಟಡಗಳು ಸಾಮಾನ್ಯವಾಗಿ ಎಲ್ಲಾ ಕೋಟೆಗಳಲ್ಲೂ ಶಿಥಿಲಗೊಂಡಿವೆ. ಕೆಲವು ಕಡೆ ಮಾತ್ರ ಕಟ್ಟಡದ ಅವಶೇಷಗಳು ಉಳಿದುಬಂದಿವೆ. ಸಾಮಾನ್ಯ ಜನರಂತೆ ಜನವಸತಿ ಪ್ರದೇಶಗಳಲ್ಲೂ ಇವರ ವಾಸದ ನೆಲೆಗಳಿವೆ. ಇಂತಹ ಕಟ್ಟಡಗಳು ಗುಂಪು ಗುಂಪಾಗಿ ಕಂಡುಬರುತ್ತವೆ. ಈ ಕಟ್ಟಡಗಳ ಬಳಿ ಜೀವನಾವಶ್ಯಕವಾಗಿ ಬೇಕಾದ ನೀರಿನ ಆಶ್ರಯತಾಣಗಳಾದ ಬಾವಿ, ಕೆರೆ, ಹೊಂಡ, ಪುಷ್ಕರಣಿಗಳು ಇರುತ್ತವೆ. ಅಲ್ಲದೆ, ಈ ಪ್ರದೇಶದಲ್ಲಿ ದೇವಾಲಯಗಳು ಪೇಟೆ ಬಜಾರುಗಳಿರುತ್ತಿದ್ದವು. ಈ ಸೈನಿಕರ ವಸತಿ ನಿಲಯಗಳ ಬಳಿ ಸುತ್ತಲೂ ಭದ್ರವಾದ ಕೋಟೆ, ಕಂದಕ, ಬಾಗಿಲು ಏರ್ಪಡಿಸಿರುವುದುಂಟು. ಕೋಟೆಗಿರುವಂತೆ ದ್ವಾರಬಾಗಿಲುಗಳು,

ಜನವಸತಿ ಪ್ರದೇಶಕ್ಕೆ ಇಲ್ಲದಿದ್ದರೂ ಚಿಕ್ಕ ಬಾಗಿಲುಗಳಿವೆ. ಚಿತ್ರದುರ್ಗ, ಮೊಳಕಾಲ್ಮೂರು, ಬ್ರಹ್ಮಗಿರಿ, ಹೊಸದುರ್ಗ, ಸಿಂಗೇನಹಳ್ಳಿ ಕೋಟೆಗಳಲ್ಲಿ ಇಂತಹ ಬಾಗಿಲುಗಳಿವೆ.

ಸೈನಿಕರು ಕೋಟೆಯ ಸೂಕ್ಷ್ಮಪ್ರದೇಶವನ್ನು ದಿನವಿಡೀ ಕಾವಲು ಕಾಯಬೇಕಾಗುತ್ತಿತ್ತು. ಅವರು ಕೋಟೆಯ ದ್ವಾರ, ಬುರುಜು, ಬತೇರಿ, ಕಂದಕ, ಕಾವಲುಗೋಪುರ, ಮದ್ದಿನ ಮನೆ ಮುಂತಾದ ಸ್ಥಳಗಳಲ್ಲಿ ಸರದಿ ಪ್ರಕಾರ ಕಾವಲು ಕಾಯಬೇಕಾಗುತ್ತಿರುತ್ತಿತ್ತು. ಇಂತಹ ಪ್ರದೇಶಗಳಲ್ಲಿ ಮಂಟಪ, ಚಾವಡಿಗಳನ್ನು ನಿರ್ಮಿಸಿ ಸೈನಿಕರಿಗೆ ವಾಸಿಸಲು ಅವಕಾಶ ಕಲ್ಪಿಸಲಾಗುತ್ತಿತ್ತು. ಚಿತ್ರದುರ್ಗ ಕೋಟೆಯ ನಾಗರಸುತ್ತಿನ ಸಾಲಿನಲ್ಲಿ ಈ ರೀತಿಯ ಮಂಟಪಗಳಿವೆ. ಇಂಥ ಮಂಟಪಗಳನ್ನು ಚಾವಡಿಗಳೆಂದು ಕರೆಯಲಾಗಿದೆ. ಈ ರೀತಿಯ ಚಾವಡಿಗಳು ಚಿತ್ರದುರ್ಗದ ಕೋಟೆಗಳಲ್ಲಿ ಬಹಳಷ್ಟಿವೆ. ತಾ.ರಾ.ಸು ಅವರು ತಮ್ಮ ದುರ್ಗಾಸ್ತಮ ಕಾದಂಬರಿಯಲ್ಲಿ ಈ ಚಾವಡಿಗಳಿಗೆ ಬೊಪ್ಪಯ್ಯನ ಚಾವಡಿ, ಕೊತ್ವಾಲ ಚಾವಡಿ, ಕುಮಾರ ಚಾವಡಿ, ತಳವಾರ ಚಾವಡಿ ಮುಂತಾದ ಹೆಸರುಗಳಿಂದ ಕರೆದಿದ್ದಾರೆ. ಆದರೆ ಇವುಗಳ ಹೆಸರನ್ನು ನಿರ್ದಿಷ್ಟವಾಗಿ ಗುರುತಿಸುವುದು ಕಷ್ಟ. ಮಂಟಪಕ್ಕೆ ಸುತ್ತಲೂ ಮಣ್ಣಿನ ಹೆಂಡೆಗಳಿಂದ ಗೋಡೆಗಳನ್ನು ಕಟ್ಟಿ ವಸತಿನೆಲೆಯನ್ನಾಗಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಮಂಟಪಗಳ ಮೇಲ್ಛಾವಣಿಯನ್ನು ಗಾರೆಗಚ್ಚುಗಳಿಂದ ಮುಚ್ಚಲಾಗಿದ್ದು, ಮಳೆಯನೀರು ಮಂಟಪದೊಳಗೆ ಹೋಗದಂತೆ ರಚನೆ ಮಾಡಲಾಗಿದೆ. ಗುಪ್ತ ಸ್ಥಳಗಳಲ್ಲಿ ಕೋಡುಗಲ್ಲುಗಳ ಮಧ್ಯೆ ಬಂಡೆಯಿಂದ ಬಂಡೆಗೆ ಗೋಡೆ ಕಟ್ಟಿ ಅವುಗಳನ್ನೇ ಸೈನಿಕರ ನೆಲೆಗಳನ್ನಾಗಿ ಮಾಡಿಕೊಂಡಿರುವರು. ಫಲ್ಗುಣೇಶ್ವರ ದೇವಾಲಯದ ಸಮೀಪದಲ್ಲಿ ದಿಡ್ಡಿ ಬಾಗಿಲ ಮುಂಭಾಗದಲ್ಲಿ ಭಾರಿ ಗುಂಡೊಂದರ ಕೆಳಗೆ ನೆಲವನ್ನು ಅಗೆದು ಸುಂದರವಾದ ಗವಿಯನ್ನು ನಿರ್ಮಿಸಲಾಗಿದೆ. ಇಂತಹ ಗವಿಗಳು ಬೆಟ್ಟದಲ್ಲಿ ಸಾಕಷ್ಟು ಕಂಡುಬರುತ್ತವೆ. ಗವಿಗಳಲ್ಲಿದ್ದ ಸೈನಿಕರು ಇದರ ಪಕ್ಕದಲ್ಲೇ ಇದ್ದ ಬಾಗಿಲು ಹಾಗೂ ಕೋಟೆಯನ್ನು ಕಾಯುತ್ತಿದ್ದರು. ಈ ರೀತಿಯ ಗವಿಗಳಿಗೆ ಎಂತಹ ಫಿರಂಗಿ ಗುಂಡುಗಳಿಂದ ಬಂದೂಕುಗಳಿಂದ ಯಾವುದೇ ಅಪಾಯವಿರುತ್ತಿರಲಿಲ್ಲ. ಇನ್ನು ಕೆಲವು ಕಡೆ ಬಾಗಿರುವ ಕೋಡುಗಲ್ಲುಗಳನ್ನು ಬಳಸಿ ವಸತಿಯನ್ನಾಗಿ ಮಾರ್ಪಡಿಸಿಕೊಂಡಿದ್ದಾರೆ. ಕೋಡುಗಲ್ಲಿನ ಒಂದು ಭಾಗಕ್ಕೆ ಸುತ್ತಲೂ ಮಣ್ಣಿನ ಗೋಡೆಯನ್ನು ಕಟ್ಟಿಕೊಂಡಿದ್ದಾರೆ. ಬಂಡೆಯ ಮೇಲಿನ ನೀರು ವಸತಿ ಪ್ರದೇಶಕ್ಕೆ ಹೋಗದಂತೆ ಬಂಡೆಯ ಕೆಳಭಾಗದಲ್ಲಿ ಕಡದಂಗವನ್ನು ಕೊರೆದು ಸುತ್ತಲೂ ಗಾರೆಯಿಂದ ಕಟ್ಟೆ ನಿರ್ಮಿಸಿ ನೀರು ಹೋಗದಂತೆ ಮಾಡಲಾಗಿದೆ. ಇಂತಹ ವಸತಿಪ್ರದೇಶಗಳಿಗೆ ನೇರವಾದ ರಸ್ತೆಗಳಾಗಲಿ, ದಾರಿಗಳಾಗಲಿ ಇರುವುದಿಲ್ಲ. ಸಾಮಾನ್ಯವಾಗಿ ಇವು ದುರ್ಗಮ ಪ್ರದೇಶದಲ್ಲಿರುತ್ತವೆ.

ಸಂಪಿಗೆ ಸಿದ್ದೇಶ್ವರ ದೇವಾಲಯದ ಪೂರ್ವಕ್ಕೆ ಭಾರೀ ಬಂಡೆಗಳ ಸಮೂಹದಲ್ಲಿ ವಿಸ್ಮಯ ಮೂಡಿಸುವ ರೀತಿಯಲ್ಲಿ ಸೈನಿಕರ ನೆಲೆಯೊಂದಿದೆ. ಈ ನೆಲೆಯು ದೊಡ್ಡ ಬಂಡೆಯೊಂದರ ಕೆಳಗೆ ನಿರ್ಮಾಣ ಮಾಡಲಾಗಿದೆ. ಪೂರ್ವ ಮತ್ತು ಉತ್ತರಕ್ಕೆ ಗೋಡೆಗಳನ್ನು ಕಟ್ಟಿ ಗೋಡೆಯ ಹೊರಮೈಯನ್ನು ಗಾರೆಯಿಂದ ಭದ್ರಗೊಳಿಸಲಾಗಿದೆ. ಈ ಗೋಡೆಗಳ ಒಳಭಾಗದಲ್ಲಿ ಮತ್ತೊಂದು ಅಡ್ಡಗೋಡೆಯನ್ನಿಟ್ಟು ಎರಡು ಅಂಕಣವನ್ನು ನಿರ್ಮಿಸಲಾಗಿದೆ. ಮಧ್ಯಭಾಗದ ಗೋಡೆಗೆ ಚಿಕ್ಕ ಬಾಗಿಲಿದೆ. ಈ ಕಟ್ಟಡಕ್ಕೆ ಪೂರ್ವ ಮತ್ತು ಉತ್ತರ ಕಡೆಯಿಂದ ಎರಡು ಚಿಕ್ಕ ಬಾಗಿಲುಗಳಿವೆ. ಆದರೆ ಈ ಬಾಗಿಲುಗಳ ಮಧ್ಯೆ ಇರುವ ಬಂಡೆಗಳು ಬಾಗಿಲುಗಳನ್ನು ಮರೆಮಾಡಿವೆ. ಒಂದು ಬಾಗಿಲಿನಿಂದ ಪ್ರವೇಶ ಮಾಡಿದರೆ ಮತ್ತೊಂದು ಬಾಗಿಲಿನಿಂದ ಹೊರಹೋಗುವಂತೆ ಇದನ್ನು ನಿರ್ಮಿಸಿರುವರು. ಶತ್ರುಗಳಿಗೆ ಸುಲಭವಾಗಿ ಸಿಗದಂತೆ ಪಾರಾಗಲು ಇಲ್ಲಿನ ಬಾಗಿಲುಗಳಿಗೆ ಸಹಾಯಕವಾಗಿವೆ. ಆದರೆ ಈ ಕಟ್ಟಡದಲ್ಲಿ ರಸಸಿದ್ಧರು ವಾಸಮಾಡುತ್ತಿದ್ದರೆಂದು ಹೇಳಲಾಗಿದೆ.[೨೯]

೫.೯ ಕೋಟೆಯ ಬಿತ್ತಿಶಿಲ್ಪಗಳು

ಕೋಟೆಯ ಗೋಡೆ, ಬಾಗಿಲು, ಬಂಡೆ, ದೇವಾಲಯಗಳು ಮತ್ತಿತರೆ ಭಾಗಗಳಲ್ಲಿ ಅನೇಕ ಉಬ್ಬುಶಿಲ್ಪ, ಗೀರುಚಿತ್ರ, ರೇಖಾಚಿತ್ರಗಳು ಕಂಡುಬರುತ್ತವೆ. ವಿಶ್ವಕರ್ಮನು ಕೋಟೆಗೋಡೆಗಳ ಮೇಲೆ ರಾಜಚಿಹ್ನೆಗಳಾದ ಧ್ವಜ, ಸೈನಿಕ, ಸಿಂಹ, ಆನೆ, ಕುದುರೆ, ಹಾವು, ಮೀನು ಮುಂತಾದ ಚಿತ್ರಗಳನ್ನು ನಿರ್ಮಿಸಬೇಕೆಂದು ಹೇಳಿದ್ದಾನೆ. ಈ ಸ್ಮಾರಕಶಿಲ್ಪಗಳು ಅಂದಿನ ಆಚರಣೆ, ಸಂಪ್ರದಾಯಗಳ ಪ್ರತೀಕವೂ ಹೌದು. ಅಂದಿನ ಸತಿಕಲ್ಲು, ವೀರಗಲ್ಲು ಹಾಗೆಯೇ ಕೋಟೆಯ ಹೊರ ಮತ್ತು ಒಳಗೋಡೆಗಳು ಇವು ಅಂದಿನ ಬದುಕಿನ ಸುಸ್ಥಿತಿ ಹಾಗೂ ಸಂಸ್ಕೃತಿಯನ್ನು ಅಭಿವ್ಯಕ್ತಪಡಿಸುತ್ತವೆ. ಇಂತಹ ಚಿತ್ರಗಳು ಕಾಲಾನಂತರದಲ್ಲಿ ಧರ್ಮಶಾಸ್ತ್ರಗಳ ಚೌಕಟ್ಟು ಪಡೆದುಕೊಂಡಿರುವುದು ಸ್ಪಷ್ಟವಾಗುತ್ತದೆ. ಇವುಗಳ ಸಹಾಯದಿಂದ ಕೋಟೆಯ ಜನಜೀವನ, ಕಾಲಮಾನ, ಧಾರ್ಮಿಕ ಆಚರಣೆ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಬಹುದು. ಅಲ್ಲದೆ, ಇವುಗಳ ರಚನೆಯ ಹಿನ್ನೆಲೆ, ಉದ್ದೇಶ, ಆಕಾರ, ಮತ್ತಿತರ ಉದ್ದೇಶಗಳನ್ನು ಇಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ಸಾಮಾನ್ಯವಾಗಿ ಜಿಲ್ಲೆಯ ಕೋಟೆಗಳಲ್ಲಿ ಕಂಡುಬಂದ ಶಿಲ್ಪಗಳಲ್ಲಿ ಸರ್ಪ, ಮೀನು, ಮೊಸಳೆ, ಈಶ್ವರ, ನಂದಿ, ಲಿಂಗ, ಗಣೇಶ, ಪದ್ಮ, ಲಜ್ಜಾಗೌರಿ ಮುಂತಾದವು ಪ್ರಮುಖವಾಗಿವೆ. ಇವುಗಳಲ್ಲಿ

[illegible]

[illegible]

[illegible]

[illegible]

[illegible]

[illegible]

ಕೆಲವು ಉಬ್ಬುಶಿಲ್ಪ ಮತ್ತು ಕೆಲವು ರೇಖಾಶಿಲ್ಪಗಳಿವೆ. ಇವುಗಳನ್ನು ಹೊರತುಪಡಿಸಿ ಅಲ್ಲಲ್ಲಿ ಮೂರ್ತಿಶಿಲ್ಪಗಳು, ವೀರಗಲ್ಲುಗಳು ಕಂಡುಬರುತ್ತವೆ. ಈ ಎಲ್ಲಾ ಚಿತ್ರಗಳ ಹಿಂದೆ ಒಂದು ತಾತ್ವಿಕ ನೆಲೆ, ಹಿನ್ನೆಲಯಿದೆಯೆಂದು ಹೇಳಬಹುದು. ಚಿತ್ರದುರ್ಗ ಜಿಲ್ಲೆಯ ಕೋಟೆಗಳಲ್ಲಿ ಹೆಚ್ಚಾಗಿ ಕಂಡುಬಂದಿರುವುದು ಸರ್ಪಶಿಲ್ಪಗಳು. ಕೋಟೆಗಳಲ್ಲೂ ನಾಲ್ಕು ಇಂಚಿನ ನಾಗಶಿಲ್ಪಗಳಿಂದ ಹಿಡಿದು ೯.೫ ಅಡಿ ಉದ್ದದವರೆಗೆ ಕಂಡುಬಂದಿವೆ. ಚಿತ್ರದುರ್ಗದ ಕಾಮನಬಾಗಿಲ ಭಿತ್ತಿಯಲ್ಲಿರುವ ನಾಗರಹಾವು ಕೋಟೆಗಳಲ್ಲಿ ಕಂಡುಬಂದಿರುವ ಅತೀ ಉದ್ದ ಉಬ್ಬುಶಿಲ್ಪವಾಗಿದೆ. ನಾಗಶಿಲ್ಪಗಳನ್ನು ಗೀರುಚಿತ್ರಗಳಾಗಿ ಉಬ್ಬುಶಿಲ್ಪಗಳನ್ನಾಗಿ ಹಾಗೂ ರೇಖಾಚಿತ್ರಗಳಲ್ಲಿಯೂ ರಚಿಸಲಾಗಿದೆ. ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾದ ಕೋಟೆಗಳಲ್ಲಿ ಈ ಶಿಲ್ಪಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ನಾಗಶಿಲ್ಪಗಳು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡ ಕೋಟೆಗಳೆಂದು ಹೇಳುವುದಕ್ಕೆ ಪುಷ್ಠಿಯಾಗಿವೆ. ಇವುಗಳಿಂದ ಪಾಳೆಯಗಾರರ ಕಾಲದಲ್ಲಿ ನಾಗಾರಾಧನೆ ಹೆಚ್ಚಿದ್ದು, ಇದು ಅವರ ಆರಾಧ್ಯ ದೈವ ಹಾಗೂ ಸಂಕೇತವೂ ಆಗಿದ್ದುದು ಶಿಲ್ಪಗಳಿಂದ ದೃಢವಾಗುತ್ತದೆ.

ಅಲ್ಲದೆ, ಸುಬ್ರಹ್ಮಣ್ಯ ಪೂಜೆಯಲ್ಲಿ ನಾಗಪೂಜೆಯ ಸಂಬಂಧವಿರುವುದನ್ನು ಗಮನಿಸಬಹುದು. ಅಂದರೆ ಸುಬ್ರಹ್ಮಣ್ಯನನ್ನು ನಾಗ ಅಥವಾ ಸರ್ಪದ ರೂಪದಲ್ಲಿಯೂ ಪೂಜಿಸುವ ಪದ್ಧತಿ ಕೋಟೆಗಳಲ್ಲಿ ಹೆಚ್ಚಾಗಿ ಬೆಳೆದುಬಂದಿದೆ. ಕಾರಣ ಸುಬ್ರಹ್ಮಣ್ಯ ಮಹಾಸೇನಾನಿ, ದೇವಸೇನಾಧಿಪತಿ, ದೇವತೆಗಳಿಗೆ ವಿಜಯ ತಂದುಕೊಡುವ ವೀರನೂ ಆಗಿದ್ದಾನೆ.[೨೨] ಅಲ್ಲದೆ, ಶತ್ರುಗಳನ್ನು ನಾಶಪಡಿಸುವುದು, ರೋಗಗಳನ್ನು ಹೋಗಲಾಡಿಸುವುದು ಈ ದೇವತೆಯ ವೈಶಿಷ್ಟ್ಯವಾಗಿದೆ.[೨೩] ನಾಗ ಕೋಟೆಯ ರಕ್ಷಕನಾಗಿ, ಕ್ಷೇತ್ರಪಾಲಕನಾಗಿ ಆ ಪ್ರದೇಶವನ್ನು ರಕ್ಷಿಸುತ್ತಾನೆಂಬ ನಂಬಿಕೆ ಇದೆ. ಹಾವು ಮತ್ತು ಮೀನಿನ ಚಲನೆಗಳನ್ನು ಕಂಡುಹಿಡಿಯುವುದು ಕಷ್ಟಕರವೆಂಬಂತೆ ಈ ಶಿಲ್ಪಗಳನ್ನು ಸಾಮಾನ್ಯವಾಗಿ ಕಂದಕಗಳ ಪಕ್ಕದಲ್ಲಿ, ದ್ವಾರಬಾಗಿಲುಗಳ ಹತ್ತರ ಮುಂತಾದ ಕಡೆ ಬಿಡಿಸಲಾಗಿದೆ. ಈ ರೀತಿಯ ಶಿಲ್ಪಗಳು ಜಿಲ್ಲೆಯ ಎಲ್ಲಾ ಕೋಟೆಗಳಲ್ಲೂ ಸಾಮಾನ್ಯವಾಗಿವೆ.

ದೇವಾಲಯ ಮುಂಭಾಗದ ದೀಪಸ್ತಂಭಗಳ ಮೇಲೆ ಹೆಚ್ಚಾಗಿ ರಾಜ ಪರಿವಾರದವರ ಉಬ್ಬುಶಿಲ್ಪಗಳು ಸಾಮಾನ್ಯವಾಗಿವೆ. ಚಿತ್ರದುರ್ಗ ಕೋಟೆಯ ಏಕನಾಥೇಶ್ವರಿ ದೇವಾಲಯದ ಮುಂಭಾಗದಲ್ಲಿ ಸ್ಥಾಪಿಸಿರುವ ದೀಪಸ್ತಂಭದ ಬುಡದಲ್ಲಿ ಕನಕಮ್ಮ ನಾಗತಿ, ಗಡ್ಡದ ಮದಕರಿ ನಾಯಕನ ಆಕೃತಿಗಳನ್ನು ಉಬ್ಬುಶಿಲ್ಪಗಳಲ್ಲಿ ಕೆತ್ತಲಾಗಿದೆ. ಇದೇ ರೀತಿ ತುಪ್ಪದ ಕೊಳ ಬತೇರಿಯ ಹತ್ತಿರವಿರುವ

[illegible]

[illegible]

[illegible]

[illegible]

ಮೊದಲನೇ ಮೆಟ್ಟಿಲ ಬಳಿ ಈಶ್ವರ ಭಕ್ತರ ಚಿತ್ರಗಳನ್ನು ಬಿಡಿಸಲಾಗಿದೆ. ಬಸವನ ಬುರುಜು ಬತೇರಿಯ ಹೊರಭಾಗದಲ್ಲಿ ಸಿಟ್ಟಿನಿಂದ ಓಡುತ್ತಿರುವ ಕೋಣ, ಹುಲಿಯೊಡನೆ ಕಾದಾಡುತ್ತಿರುವ ವೀರ, ಹುಲಿ-ಆನೆ ಕಾಳಗ, ಮಿಥುನ ಶಿಲ್ಪ, ರಭಸದಿಂದ ಓಡುತ್ತಿರುವ ಆನೆ ಮುಂತಾದ ಶಿಲ್ಪಗಳಿವೆ. ಕಸ್ತೂರಿರಂಗಪ್ಪ ನಾಯಕನ ಬಾಗಿಲ ಮಂಟಪದ ಸ್ತಂಭಗಳಲ್ಲಿ ಮದಿಸಿದ ಆನೆ, ಕಾಳಿಂಗಮರ್ಧನ, ಗಣಪತಿ, ಆಂಜನೇಯ, ಕುಂಭ, ಯೋಧ, ಶಾರ್ದೂಲ ಚಿತ್ರಗಳಿವೆ. ಕಾಮನಬಾಗಿಲ ಬಿತ್ತಿಯ ಮೇಲೆ ಶಿವಲಿಂಗ, ನಂದಿ, ಗಣೇಶ, ವೀರಭದ್ರ, ಗಂಡಭೇರುಂಡ, ಕಮಲ, ಹಂಸ ಶಿಲ್ಪಗಳಿವೆ. ಬೆಟ್ಟದ ಅನೇಕ ಕಡೆ ಗುಹೆಗಳು ಹಾಗೂ ಬಂಡೆಗಳ ಮೇಲೆ ಇತಿಹಾಸಪೂರ್ವ ಕಾಲದ ರಚನೆಗಳು ಕಂಡುಬರುತ್ತವೆ.

ಕೋಟೆಯಲ್ಲಿ ಕಂಡುಬಂದ ಇಂತಹ ಉಬ್ಬುಶಿಲ್ಪಗಳು ಕೋಟೆಯ ಸಾಂಸ್ಕೃತಿಕ ಇತಿಹಾದ ಬಗ್ಗೆ ಬೆಳಕು ಚೆಲ್ಲುತ್ತವೆ. ಈಶ್ವರ, ವೀರಭದ್ರ, ಗಣೇಶ, ಹನುಮಂತ ಮುಂತಾದ ಶಿಲ್ಪಗಳನ್ನು ರಕ್ಷಣಾತ್ಮಕ ಹಿನ್ನೆಲೆಯ ಉದ್ದೇಶದಿಂದ ಬಿಡಿಸಲಾಗಿದೆ. ಹಾವು, ಮೊಸಳೆಗಳು ಎಚ್ಚರಿಕೆಯನ್ನು ಸೂಚಿಸಿದರೆ, ಆಮೆ ರಕ್ಷಣೆಯನ್ನು ಸೂಚಿಸುತ್ತದೆ. ಗಜಲಕ್ಷ್ಮೀ, ಪೂರ್ಣಕುಂಭಗಳು ಶುಭ ಚಿಹ್ನೆಗಳ ಸ್ವರೂಪದಲ್ಲಿ ಹಾಗೂ ಪವಿತ್ರ ಕಲ್ಪನಾಬಂಧಿಗಳಲ್ಲಿ ಸ್ಥಾಪಿಸಿದ್ದಾರೆ. ಲಜ್ಜಗೌರಿ ಶಿಲ್ಪಗಳನ್ನು ಚಿತ್ರದುರ್ಗ, ಹೊಸದುರ್ಗ, ಮೊಳಕಾಲ್ಮೂರು ಮತ್ತಿತರೆ ಕೋಟೆಗಳಲ್ಲಿ ಕಾಣಬಹುದು. ಲಜ್ಜಾಗೌರಿಯು ಮಾತೃದೇವತೆ. ಈಕೆಯು ವಿಶ್ವಸೃಷ್ಟಿಯ ದೇವತೆಯೆಂಬ ಕಾರಣದ ಹಿನ್ನೆಲೆಯಲ್ಲಿ ವೇದಪೂರ್ವ ಕಾಲದಿಂದಲೂ ಭಾರತದಾದ್ಯಂತ ಈಕೆಯ ಉಪಾಸನೆ ಚಾಲ್ತಿಯಲ್ಲಿದೆ.[೨೪] ಸೃಷ್ಟಿಯ ಹಿನ್ನೆಲೆಯಲ್ಲಿ ಈ ದೇವತೆಯನ್ನು ಕೋಟೆಗಳಲ್ಲಿ ಆರಾಧಿಸುತ್ತಿರುವುದು ಕಂಡುಬಂದಿದೆ.

ವೇಣುಕಲ್ಲುಗುಡ್ಡದ ಕೋಟೆಯ ಗಾರೆ ಬುರುಜಿನ ಪಶ್ಚಿಮದ ಹುಟ್ಟುಬಂಡೆಯ ಮೇಲೆ ಹನುಮಧ್ವಯರು ಮತ್ತು ನಾಗರಹಾವು ಶಿಲ್ಪಗಳನ್ನು ಗೀರುಚಿತ್ರದ ಮೂಲಕ ಬಿಡಿಸಿದ್ದಾರೆ. ಇದೇ ಕೋಟೆಯ ಹೊರಭಾಗದಲ್ಲಿ ಹುಟ್ಟುಬಂಡೆಯೊಂದರ ಮೇಲೆ ವೀರಗಲ್ಲಿದೆ. ಈ ಹುಟ್ಟುಬಂಡೆಯು ಕೋಟೆ ಗೋಡೆಯ ಮಧ್ಯಭಾಗದಲ್ಲಿದ್ದು, ಇದು ಅಂದಿನ ಕಾವಲು ಬುರುಜಾಗಿತ್ತು. ಸಾಮಾನ್ಯವಾಗಿ ಈ ಬುರುಜನ್ನು ಕಾಯುತ್ತಿದ್ದವನು ವೀರಮರಣವನ್ನಪ್ಪಿದ್ದರಿಂದ ಅವನ ನೆನಪಿಗಾಗಿ ಈ ಬಂಡೆಗಲ್ಲಿಯೇ ಆತನ ಶಿಲ್ಪವನ್ನು ಬಿಡಿಸಲಾಗಿದೆ. ಕೈಯಲ್ಲಿ ಬಾಣ-ಬಿಲ್ಲುಗಳು, ಸೊಂಟದಲ್ಲಿ ಪಟ್ಟಿ, ಖಡ್ಗ, ಪಕ್ಕದಲ್ಲಿ ಸತಿ ತುಂಬಾ ಸೊಗಸಾಗಿ ಮೂಡಿವೆ. ಇದೇ ಹೊರಕೋಟೆಯ ಮತ್ತೆರಡು ವೀರಗಲ್ಲುಗಳಲ್ಲಿ ವೀರಯೋಧರ ಉಬ್ಬುಶಿಲ್ಪಗಳು ಆಕರ್ಷಣೀಯವಾಗಿವೆ. ತಮ್ಮ ಕೈಯಲ್ಲಿ ಬಿಲ್ಲುಬಾಣ, ಕೊರಳಿನ

[illegible]

ಕಂಠಾಭರಣ, ತೋಳುಬಂಧಿ, ಕೈಕಡಗ, ಕಾಲುಕಡಗ, ಕಿವಿ ಆಭರಣ, ವೀರಗಚ್ಚೆ, ಮಡಿಯನ್ನು ಕಟ್ಟಿಕೊಂಡಿರುವುದು, ದಷ್ಟಪುಷ್ಟವಾದ ಅಂಗಾಂಗ - ಹೀಗೆ ಇಡೀ ಸೈನಿಕನೊಬ್ಬನ ವೇಷಭೂಷಣಗಳನ್ನು ಇಲ್ಲಿ ಮೂಡಿಸಲಾಗಿದೆ. ಇದೇ ರೀತಿಯ ವೀರಗಲ್ಲುಗಳು ಅನೇಕ ಕೋಟೆಗಳಲ್ಲಿ ಕಂಡುಬರುತ್ತವೆ.

ಉಂಕೇಕೋಟೆಯ ಬಂಡೆಯೊಂದರ ಮೇಲೆ ಗದೆಯನ್ನು ಪಕ್ಕಕ್ಕೆ ಇಟ್ಟು ಬಾಲವನ್ನು ಮುಂದಕ್ಕೆ ತಂದು ಕುಳಿತಿರುವ ಗೀರುಚಿತ್ರವಿದೆ. ಜಾನಕಲ್ಲು ಕೋಟೆಯಲ್ಲಿ ಆನೆಯೊಂದಿಗೆ ಹೋರಾಟ ಮಾಡುತ್ತಿರುವ ಚಿತ್ರ, ಮೊಳಕಾಲ್ಮೂರು ಕೋಟೆಯ ಒಳಭಾಗದ ಬಾಗಿಲೊಂದರ ಮೇಲೆ ಖಡ್ಗ ಹಿಡಿದಿರುವ ಶಿಲ್ಪ, ಮತ್ತೆರಡು ಶಿಲ್ಪಗಳಲ್ಲಿ ವೀರನೊಬ್ಬನು ಖಡ್ಗಾಧಾರಿಯಾಗಿ ಕುದುರೆಯ ಮೇಲೆ ಕುಳಿತಿರುವ ಶಿಲ್ಪದ ಪಕ್ಕದಲ್ಲಿ ಸೇವಕನೊಬ್ಬ ಲಾಂಛನವನ್ನು ಎತ್ತಿ ಹಿಡಿದಿರುವುದು ಕಂಡುಬರುತ್ತದೆ. ಗರಡಿ ಸಂಪ್ರದಾಯದ ಆಯುಧಗಳನ್ನು ಹಿಡಿದ ಅಂಗಾಂಗಗಳನ್ನು ಉಬ್ಬಿಸಿರುವ ಶಿಲ್ಪವಿದೆ. ಬ್ರಹ್ಮಗಿರಿ ಕೋಟೆಯಲ್ಲಿ ನಿಂತಿರುವ ಹನುಮಂತನ ಚಿತ್ರವು ಸೈನಿಕರು ಯುದ್ಧಕ್ಕೆ ಹೊರಟು ಸಿದ್ಧರಾಗಿರುವ ವೀರರ ಸಾಲುಗಳು, ಇದರ ಎದುರಿಗೆ ತಮಟೆ ಬಾರಿಸುತ್ತಿರುವ ಚಿತ್ರಗಳಿವೆ. ಹೊಸಗುಡ್ಡದ ಕೋಟೆಯ ಬಿತ್ತಿಯ ಮೇಲೆ ಕುಟ್ಟಿ ಬಿಡಿಸಿದ ಆನೆ, ಅಂಬಾರಿ ಚಿತ್ರ, ನಂದಿ, ಗಣೇಶ, ಲಿಂಗ ಮುಂತಾದ ಶಿಲ್ಪಗಳಿವೆ.

೫.೧೦ ದೇವಾಲಯಗಳು

ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳು. ದೇವಾಲಯಗಳಿಲ್ಲದ ಗ್ರಾಮಗಳಿಲ್ಲ, ದೇವರಿಲ್ಲದ ಸ್ಥಳವಿಲ್ಲವೆಂಬುದು ಹಿರಿಯರ ವಾಡಿಕೆ. ದೇವತೆ ಯಾವುದಾದರೂ ಆರಾಧನೆಯ ಉದ್ದೇಶ, ಒನ್ನೆಲೆ ಎಲ್ಲರಿಗೂ ಒಂದೇ. ಈ ಕಾರಣದಿಂದ ರಾಜರ, ಅಧಿಕಾರಿಗಳ ಆಶ್ರಯದೊಂದಿಗೆ ಹಾಗೂ ಗ್ರಾಮಗಳ ಜನರ ಪೋಷಣೆಯಲ್ಲಿ ದೇವಸ್ಥಾನಗಳು ಬೆಳೆದುಬಂದಿವೆ. ಪ್ರಕೃತಿಯಲ್ಲಿ ಯಾವುದೋ ಒಂದು ಅಗೋಚರ ಶಕ್ತಿಯಿದೆಯೆಂಬ ಅರಿವು ಮಾನವನಿಗೆ ಉಂಟಾದಾಗಿನಿಂದ ಅದರ ಬಗ್ಗೆ ಗೌರವ, ಭಯಭಕ್ತಿಗಳು ಮೂಡಿದವು. ಈ ದೃಷ್ಟಿಯಿಂದ ಪ್ರಕೃತಿಯ ಎಲ್ಲಾ ವಸ್ತುಗಳು ಪೂಜ್ಯಾರ್ಹವಾದವು. ಈ ಸ್ಥಳಗಳಿಗೆ ರಕ್ಷಣಾತ್ಮಕವಾಗಿ ಪ್ರತ್ಯೇಕ ಆಲಯಗಳನ್ನು ಕಟ್ಟಲು ಆರಂಭಿಸಿ, ಇದು ದೇವಾಲಯ ರಚನೆಗೆ ನಾಂದಿಯಾಯಿತು.

ಕೋಟೆಗಳು ಮತ್ತು ರಕ್ಷಣಾತ್ಮಕವಾದ ಪ್ರದೇಶಗಳಲ್ಲಿನ ನಾಲ್ಕು ಬಗೆಯ ನಿವಾಸಿ ಪ್ರದೇಶಗಳನ್ನು ಶಿಲ್ಪಶಾಸ್ತ್ರದಲ್ಲಿ ಹೇಳಲಾಗಿದೆ.[೨೫] ಇದರ ಪ್ರಕಾರ ದೇವಭವನಗಳು ಎಂದು ಕರೆಯುವ ಧಾರ್ಮಿಕ

[illegible]

[illegible]

[illegible]

[illegible]

[illegible]

[illegible]

ಮಂದಿರಗಳು ಪ್ರಮುಖವಾಗಿವೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ದೇವತೆಗಳು ಹಾಗೂ ರಾಜನ ಕುಲದೇವತೆಗಳನ್ನು ಕೋಟೆಗಳಲ್ಲಿ ಸ್ಥಾಪಿಸಿ ದೇವಾಲಯಗಳನ್ನು ನಿರ್ಮಿಸಬೇಕೆಂದು ಹೇಳಿದ್ದಾನೆ.[೨೬] ಇದೇ ರೀತಿ ಆಚಾರ್ಯ ಸೋಮದೇವನ ನೀತಿವಾಕ್ಯಾಮೃತಂನಲ್ಲಿ ದೇವಾಲಯನ ಸ್ಥಾಪನೆಗಳ ಬಗ್ಗೆ ಹೇಳಲಾಗಿದ್ದು, ದೇವಾಲಯಗಳಿಗೆ ಯಾರೂ ತೊಂದರೆ ಕೊಡದಂತೆ ರಾಜಾಜ್ಞೆಗಳಿದ್ದವೆಂದು ತಿಳಿಸುತ್ತದೆ.[೨೭] ಚಿತ್ರದುರ್ಗ ಜಿಲ್ಲೆಯ ಕೋಟೆಗಳಲ್ಲಿ ಅನೇಕ ದೇವತೆಗಳು ಹಾಗೂ ದೇವಾಲಯಗಳಿರುವುದು ಕಂಡುಬರುತ್ತದೆ. ಎಲ್ಲಿಯೂ ದೇವಾಲಯಗಳಿಲ್ಲದ ಕೋಟೆಗಳಿಲ್ಲ. ಎಲ್ಲಾ ಕೋಟೆಗಳಲ್ಲಿ ಸರ್ವೇಸಾಮಾನ್ಯವಾಗಿ ಆಂಜನೇಯ, ಈಶ್ವರ, ಗಣೇಶ, ಮಾರಮ್ಮ, ವೀರಭದ್ರ ಮುಂತಾದ ದೇವತೆಗಳು ಕಂಡುಬರುತ್ತವೆ. ಈ ದೇವಾಲಯಗಳನ್ನು ಕೋಟೆಗಳಲ್ಲಿ ಸ್ಥಾಪಿಸಿದ್ದರ ಹಿನ್ನೆಲೆ ಮತ್ತು ಪ್ರಾಮುಖ್ಯತೆಯನ್ನು ಇಲ್ಲಿ ಸ್ಥೂಲವಾಗಿ ಚರ್ಚೆ ಮಾಡಲಾಗಿದೆ.

ಹನುಮಂತ ಅಂಜನಾದೇವಿಯ ಮಗ. ಇವನ ತಂದೆಯ ಪಾತ್ರ ವಾಯುವಿನದು. ಈತನಿಗೆ ಮಾರುತಿ ಎಂಬ ಹೆಸರಿದೆ. ಈ ಹನುಮ ರಾಮಾಯಣದ ಮಹಾವೀರರಲ್ಲಿ ಒಬ್ಬನಾಗಿ ದೇವತಾಪಟ್ಟ ಕಟ್ಟಿಸಿಕೊಂಡಿದ್ದಾನೆ. ಕರ್ನಾಟಕದಲ್ಲಿ ಹನುಮನಿಲ್ಲದ ಗ್ರಾಮವಿಲ್ಲ, ಪೂಜಿಸಿದ ವ್ಯಕ್ತಿಯಿಲ್ಲ ಎನ್ನುವಂತೆ ಈತನು ಸರ್ವಜನ ಪೂಜಾಭಾಜನನಾಗಿದ್ದಾನೆ. ಈತನು ತನ್ನ ಶೌರ್ಯ, ಸಾಹಸ, ಬುದ್ಧಿವಂತಿಕೆ ಹಾಗೂ ನಮ್ರತೆಯಿಂದ ಜನತೆಯ ಹೃದಯದಲ್ಲಿ ಅಗ್ರಸ್ಥಾನ ಗಳಸಿಕೊಂಡಿದ್ದಾನೆ. ಜನಪದರು ಈತನ ಬಗ್ಗೆ ಅನೇಕ ಕಾವ್ಯ, ಕಥನಗಳನ್ನು ರಚಿಸಿದ್ದಾರೆ. ಹನುಮಂತ ಪರಮಭಕ್ತ, ಮಹಾವೀರ, ಸಂಗೀತ ನಾಟ್ಯಗಳಲ್ಲಿ ಪ್ರವೀಣ, ವೇದಾಂತಿ, ದಾಸರಲ್ಲಿ ಅಗ್ರಗಣ್ಯ, ಭೃತ್ಯರಲ್ಲಿ ಉತ್ತಮನಾಗಿದ್ದಾನೆ. ಈತನನ್ನು ಜನರು ಹಳ್ಳಿಗಳಲ್ಲಿ, ಕೋಟೆಕೊತ್ತಲಗಳಲ್ಲಿ, ಕಾಡುಮೇಡುಗಳಲ್ಲಿ, ಗಿರಿಕಂದರಗಳಲ್ಲಿ ಸ್ಥಾಪಿಸಿಕೊಂಡು ಪೂಜಿಸುತ್ತಿದ್ದಾರೆ.[೨೮]

ಕಾಡುಮೇಡು, ಗಿರಿಕಂದರ, ಕೋಟೆ-ಕೊತ್ತಲಗಳಲ್ಲಿ ಹೆಚ್ಚಾಗಿ ಬಯಲು ಆಂಜನೇಯನಾಗಿದ್ದರೆ, ಗ್ರಾಮಗಳಲ್ಲಿ ಹನುಮಂತ ಸಾಮಾನ್ಯವಾಗಿ ದೇವಾಲಯದೊಳಗೆ ಪೂಜ್ಯಾರ್ಹಗೊಂಡಿದ್ದಾನೆ. ಹನುಮಂತನು ದುಷ್ಟಶಕ್ತಿ, ರೋಗರುಜಿನಗಳನ್ನು ಪರಿಹರಿಸಿ ಗ್ರಾಮವನ್ನು ರಕ್ಷಣೆ ಮಾಡುತ್ತಾನೆನ್ನುವ ನಂಬಿಕೆ ಜನರಲ್ಲಿದೆ. ಇಂತಹ ದುಷ್ಟಶಕ್ತಿಗಳನ್ನು ಊರೊಳಗೆ ಪ್ರವೇಶಿಸುವ ಮುನ್ನವೇ ಈತ ತಡೆಯುತ್ತಾನೆ ಎನ್ನುವ ನಂಬಿಕೆಯಿಂದ ಊರ ಬಾಗಿಲ ಮುಂದೆ ಈತನ ದೇವಾಲಯಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಊರ ಬಾಗಿಲಲ್ಲಿ ಇರುವ ಈ ಹನುಮಂತ ಊರಬಾಗಿಲ ಹನುಮಂತನಾಗಿದ್ದಾನೆ. ಆದ್ದರಿಂದಲೇ "ಊರು

[illegible]

[illegible]

[illegible]

ಸುಟ್ಟರೂ ಹನುಮಂತ ಊರ ಹೊರಗೆ" ಎಂಬ ಗಾದೆ ಮಾತು ಇದೆ.

ಊರು ಮುಂದಿರುವೋನ ಏನೆಂದು ಕರೆಯಾಲಿ
ಓಯನ್ನೋ ಲೆಂಕೆ ಹನುಮಂತ ಶ್ರೀರಾಮರ
ಮೋಹದ ಭಂಟ ಧ್ವನಿತೋರೊ

ಈ ಪ್ರಾರಂಭದ ತ್ರಿಪದಿಯಲ್ಲಿ ಶ್ರೀರಾಮನ ಪ್ರೀತಿಯ ಹನುಮಂತ ಊರಿನ ರಕ್ಷಕ ಎಂಬುದು ಸ್ಪಷ್ಟವಾಗುತ್ತದೆ.[೨೯]

ಈತನ ಶೌರ್ಯ, ಪ್ರತಾಪ ಮತ್ತು ಹೋರಾಟಗಳ ಹಿನ್ನೆಲೆಯಲ್ಲಿ ರಾಜರು ತಮ್ಮ ಸೈನಿಕರಲ್ಲಿ ರಾಜಭಕ್ತಿಯನ್ನು, ಸಾಹಸಕಾರ್ಯ ಶಕ್ತಿಯನ್ನು ಮೂಡಿಸಿ ದುಷ್ಟಶಕ್ತಿ ಹಾಗೂ ಶತ್ರುಗಳಿಂದ ಕೋಟೆಯನ್ನು ರಕ್ಷಿಸಲೆಂದು ಹನುಮಂತನನ್ನು ಸ್ಥಾಪಿಸಿಕೊಂಡಿದ್ದಾರೆ. ಕಂದಕ, ಕೊತ್ತಲ, ನೀರಿನ ಆಶ್ರಯ ತಾಣ, ಗರಡಿ ಮನೆ, ದ್ವಾರ ಬಾಗಿಲು ಮುಂತಾದ ಸ್ಥಳಗಳಲ್ಲಿ ಈತನ ದೇವಾಲಯಗಳಿವೆ. ಕೋಟೆಯ ಬಯಲಿನಲ್ಲಿ ಬಂಡೆಗಳ ಮೇಲೆ ಭಿತ್ತಿಚಿತ್ರಗಳ ಮೂಲಕ ಈತನನ್ನು ಮೂಡಿಸಲಾಗಿದೆ. ಇದರಿಂದ ಸಹಜವಾಗಿಯೇ ಈ ವೀರನ ಪರಾಕ್ರಮ ಪರಿಚಯವಾಗುತ್ತದೆಯೆಂಬ ನಂಬಿಕೆಯಿಂದ ಇಂತಹ ಬಯಲು ಆಂಜನೇಯಗಳನ್ನು ಅಲ್ಲಲ್ಲಿ ಬಿಡಿಸಿರುವುದು ಕಂಡುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಎಲ್ಲಾ ಕೋಟೆಗಳಲ್ಲೂ ಈ ಕೋಟೆ ಹನುಮನನ್ನು ಕಾಣಬಹುದು. ಜಿಲ್ಲೆಯಲ್ಲಿ ಹನುಮನಿಲ್ಲದ ಕೋಟೆಗಳಿಲ್ಲ. ವಿಜಯನಗರ ಮತ್ತು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾದ ಕೋಟೆಗಳಲ್ಲಿ ಈತನಿಗೆ ಪ್ರಮುಖ ಸ್ಥಾನವನ್ನು ಕಲ್ಪಿಸಿರುವುದನ್ನು ನೋಡಬಹುದು. ಈತನ ಹಿಂದೆ ಇರುವ ಐತಿಹ್ಯಗಳಿಂದ ರಾಜರು ಈತನ ಶಿಲ್ಪಗಳನ್ನು ಬಾಗಿಲವಾಡಗಳ ಮೇಲೆ ಕೆತ್ತಿಸಿ ಸ್ಥಾಪಿಸಿದ್ದಾರೆ. ಇಂತಹ ಶಿಲ್ಪಗಳಿಂದ ಹನುಮನ ಬಾಗಿಲೆಂದೇ ಪ್ರಸಿದ್ಧಿಯಾಗಿವೆ. ಹನುಮಂತನು ಬಾಗಿಲನ್ನು ರಕ್ಷಿಸುತ್ತಾನೆನ್ನುವ ಉದ್ದೇಶದಿಂದ ಬಾಗಿಲುಗಳ ಮೇಲೆ ಶಿಲ್ಪಗಳನ್ನು ಕೆತ್ತಲಾಗಿದೆ. ಕೆಲವು ಕಡೆ ಈತನ ದೇವಾಲಯಗಳನ್ನು ಬಾಗಿಲ ಒಳಗೆ ಮತ್ತು ಹೊರಗೆ ಎರಡೂ ಕಡೆ ಸ್ಥಾಪಿಸಿರುವುದನ್ನು ನೋಡಬಹುದು. ಬ್ರಹ್ಮಗಿರಿ, ಕಣಜನಹಳ್ಳಿ, ಚಿತ್ರದುರ್ಗ, ಹೊಸದುರ್ಗ ಮುಂತಾದ ಕೋಟೆಗಳಲ್ಲಿ ಈ ರೀತಿಯ ದೇವಾಲಯಗಳಿವೆ. ಈತನಿಗಿರುವ ವಿವಿಧ ಶಕ್ತಿಗಳಿಗನುಗುಣವಾಗಿ ವೀರಾಂಜನೇಯ, ಭಕ್ತಾಂಜನೇಯ, ಯುದ್ಧಾಂಜನೇಯ, ಭೀಮಾಂಜನೇಯ ಮುಂತಾದ ಹೆಸರುಗಳಿಂದ ಚಿತ್ರಿಸಲಾಗಿದೆ.

[illegible]

[illegible]

[illegible]

[illegible]

ಹನುಮನ ದೇವಾಲಯಗಳು ಎಲ್ಲಾ ಕೋಟೆಗಳಲ್ಲಿದ್ದರೂ ಒಂದೇ ಒಂದು ಕೊಠಡಿ ಇರುವ ಚಿಕ್ಕ ಚಿಕ್ಕ ಗುಡಿಗಳೇ ಹೆಚ್ಚು. ಮಹಾದ್ವಾರ, ಸಭಾಮಂಟಪ, ವಿಮಾನ ಮುಂತಾದ ಭವ್ಯತೆ ಬಲು ಅಪರೂಪ. ಆಂಜನೇಯ ಗುಡಿ ಮತ್ತು ವಿಗ್ರಹಗಳ ಮುಖ್ಯ ಲಕ್ಷಣದಲ್ಲಿ ಒಂದು ವಿಶಿಷ್ಟತೆಯಿದೆ. ಸಾಮಾನ್ಯವಾಗಿ ಈ ದೇವಾಲಯಗಳು ದಕ್ಷಿಣಾಭಿಮುಖವಾಗಿದ್ದು, ಮೂರ್ತಿಯ ಮುಖ ಪೂರ್ವಕ್ಕಿರುವುದೇ ಹೆಚ್ಚು. ಜಿಲ್ಲೆಯಲ್ಲಿ ೮ ಇಂಚು ಎತ್ತರದ ಹನುಮಂತನ ಗೀರುಶಿಲ್ಪ ಉಚ್ಚಂಗಿ ದುರ್ಗದಲ್ಲಿದ್ದರೆ, ೮ ಅಡಿ ಎತ್ತರದ ಆಂಜನೇಯ ಹರ್ತಿಕೋಟೆಯಲ್ಲಿದೆ. ಸಾಮಾನ್ಯವಾಗಿ ಎಲ್ಲಾ ಕೋಟೆಗಳಲ್ಲೂ ೪ ರಿಂದ ೬ ಅಡಿ ಎತ್ತರದವರೆಗಿನ ಹನುಮಂತನ ಶಿಲ್ಪಗಳು ಕಂಡುಬರುತ್ತವೆ. ಹೊಸದುರ್ಗ ಕೋಟೆಯಲ್ಲಿರುವ ಹನುಮನಿಂದ ಇಡೀ ಬೆಟ್ಟವನ್ನು ಈತನ ಹೆಸರಿನಿಂದ ಹನುಮನಕೊಂಬೆ ಎಂದು ಕರೆದಿದ್ದಾರೆ. ಗರಡಿಗಳಲ್ಲಿ ಜಟ್ಟಿಗಳು ಮುಖ್ಯವಾಗಿ ಈತನ ಆರಾಧಕರಾಗಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಂದು ಗರಡಿಗಳಲ್ಲೂ ಹನುಮಂತನನ್ನು ಸ್ಥಾಪಿತಗೊಂಡಿದ್ದಾರೆ. ಇದರ ಉದ್ದೇಶ, ಸಹಜವಾಗಿ ಈ ವೀರನ ಪರಾಕ್ರಮದ ಪರಿಚಯವಾಗುತ್ತದೆ ಹಾಗೂ ಶಕ್ತಿಪುರುಷನಾಗಿ ನಮ್ಮನ್ನು ರಕ್ಷಣೆ ಮಾಡುತ್ತಾನೆ ಎಂಬ ನಂಬಿಕೆಯಿಂದ ಈತನಿಗೆ ಗರಡಿಗಳಲ್ಲಿ ವಿಶೇಷ ಸ್ಥಾನ ಕಲ್ಪಿಸಿದ್ದಾರೆ. ಚಿತ್ರದುರ್ಗ ಪಾಳೆಯಗಾರರ ಲಾಂಛನ ಶ್ರೀ ಹನುಮದ್ಗರುಡವೇ ಆಗಿದೆ. ಒಟ್ಟಾರೆ ಕೋಟೆಯ ರಕ್ಷಕನಾದ ಹನುಮಂತನಿಗೂ ಕೋಟೆಗಳಿಗೂ ಎಲ್ಲಿಲ್ಲದ ನಂಟು ಇತ್ತೆಂದು ಹೇಳಬಹುದು. ಶಕ್ತಿಸಾಹಸಕ್ಕೆ ಪ್ರತೀಕವಾಗಿದ್ದ, ಹನುಮಂತನನ್ನು ಕೋಟೆಗಳಲ್ಲಿ ಇಂದಿಗೂ ಕಾಣಬಹುದು.

ಹನುಮಂತನ ನಂತರ ಕೋಟೆಗಳು ಸ್ಥಾನ ಪಡೆದುಕೊಂಡ ದೇವತೆ ಗಣೇಶ. ಈತನಿಗೆ ನೂರಾರು ಹೆಸರುಗಳಿವೆಯಾದರೂ ಮುಖ್ಯವಾಗಿ ವಿನಾಯಕ, ಗಜಮುಖ, ವಕ್ರತುಂಡ, ಗಣಪ ಮೊದಲಾದ ಹೆಸರುಗಳಿವೆ. ದಕ್ಷಿಣ ದೇಶಗಳಲ್ಲಿ ಬಹಳ ಹಿಂದಿನಿಂದಲೂ ಗಣಪತಿಯ ದೇವಾಲಯಗಳಿವೆ. ಹನುಮಂತನಂತೆ ಈತನು ವಿಘ್ನಗಳ ವಿನಾಶಕನಾಗಿ, ಗ್ರಾಮದೇವತೆಯಾಗಿ, ಗ್ರಾಮರಕ್ಷಕನಾಗಿ, ಕೋಟೆ ರಕ್ಷಕನಾಗಿ ನೆಲೆಗೊಂಡಿದ್ದಾನೆ. ಒಟ್ಟಾರೆ ತಾವು ಕೈಗೊಂಡ ಕೆಲಸದಲ್ಲಿ ಗೆಲುವನ್ನು ಬಯಸುವುದು ಗಣೇಶನನ್ನು ಸ್ಥಾಪನೆಯ ಉದ್ದೇಶವಾಗಿದೆ.[೨೦] ಹಾಗೂ ತಮ್ಮ ಇಷ್ಟಾರ್ಥಗಳು ನೆರವೇರಿಸಿ ಸಿದ್ಧಿಬುದ್ಧಿಯನ್ನು ಕೊಟ್ಟುಬಂದಂತಹ ವಿಘ್ನಗಳನ್ನು ದೂರ ಮಾಡಲೆಂದು ರಾಜರು ಕೋಟೆಯೊಳಗೆ ಗಣೇಶನನ್ನು ಸ್ಥಾಪಿಸಿಕೊಂಡಿರಬಹುದು. ಹನುಮಂತನಂತೆ ಈತನನ್ನು ಬಯಲು ಪ್ರದೇಶಗಳಲ್ಲಿ ಸ್ಥಾಪಿಸದೆ, ಗುಡಿಗಳಲ್ಲಿ, ಬಾಗಿಲ ಮೇಲೆ, ಬಾಗಿಲೊಳಗೆ ಸ್ಥಾಪಿಸಿ ಗೌರವ ವ್ಯಕ್ತಪಡಿಸಿರುವುದು

[illegible]

ಕಂಡುಬರುತ್ತದೆ. ಮೊಳಕಾಲ್ಮೂರು, ಚಿತ್ರದುರ್ಗ, ಹೊಸದುರ್ಗ, ಬ್ರಹ್ಮಗಿರಿ, ಬೂದಿಹಾಳು, ಭರಮಣ್ಣನಾಯಕ ದುರ್ಗ, ರಾಮಗಿರಿ ಮೊದಲಾದ ಕೋಟೆಗಳಲ್ಲಿ ಗಣೇಶನ ದೇವಾಲಯಗಳುಂಟು. ಮೊಳಕಾಲ್ಮೂರು ಮೇಲ್‌ದುರ್ಗದ ಕೋಟೆಯ ದ್ವಾರಬಾಗಿಲನ ಮೇಲೆ ಸ್ಥಾಪಿಸಲಾಗಿರುವ ಗಣೇಶನಿಂದ ಗಣೇಶ ಬಾಗಿಲೆಂದು ಹೆಸರಾಗಿದೆ. ಚಿತ್ರದುರ್ಗ ಕೋಟೆಯಲ್ಲಿರುವ ಏಕನಾಥೇಶ್ವರಿ ಬಾಗಿಲ ಮುಂಭಾಗ ಹುಟ್ಟು ಬಂಡೆಯೊಂದರಲ್ಲಿ ಗಣೇಶ ಮೂರ್ತಿಯನ್ನು ಕೊರೆದು ದೇವಾಲಯವನ್ನು ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿರುವ ಕಸ್ತೂರಿ ರಂಗಪ್ಪನಾಯಕನ ದಿಡ್ಡಿ ಬಾಗಿಲಿನ ಮೇಲೆ ಸುಂದರವಾದ ಗಣಪತಿಯನ್ನು ಸ್ಥಾಪಿಸಲಾಗಿದೆ. ಹಾಗೂ ಆನೆಬಾಗಿಲು ಬಾಗಿಲವಾಡದ ಮೇಲೂ ಗಣೇಶನ ಉಬ್ಬುಶಿಲ್ಪ ವಿದೆ. ಹೀಗೆ ಹಲವಾರು ಕಡೆ ಕೋಟೆಗಳಲ್ಲಿ ವಿನಾಯಕನನ್ನು ಸ್ಥಾಪಿಸಿಕೊಂಡು ಆರಾಧಿಸುತ್ತಾ ಬರಲಾಗಿದೆ.

ಇದೇ ರೀತಿ ಕೋಟೆಗಳಲ್ಲಿ ಕಂಡುಬರುವ ಅಧಿಕ ಸಂಖ್ಯೆಯ ಶಿವ ದೇವಾಲಯಗಳು ಸಹ ಮುಖ್ಯವಾಗಿವೆ. ಚಿತ್ರದುರ್ಗದ ಕೋಟೆಯಲ್ಲಿ ಅನೇಕ ಶಿವ ದೇವಾಲಯಗಳಿರುವುದನ್ನು ಕಾಣಬಹುದು. ಚಿತ್ರದುರ್ಗದ ಪಾಳೆಯಗಾರರು ಈಶ್ವರನ ಮೇಲಿದ್ದ ಭಯಭಕ್ತಿಗೆ ಒಂದು ಉದಾಹರಣೆಯಿದೆ. ಈ ಪಾಳೆಯಗಾರರು ಮಾಯಕೊಂಡ ಕಾಳಗದಲ್ಲಿ ಹಿರೇ ಮದಕರಿನಾಯಕನು ಈಶ್ವರನ ಕೃಪೆಯಿಂದ ನಾವ ಲಡಾಯಿ ಮಾಡುವಾಗಲೆಲ್ಲಾ ಶತ್ರು ಜನರಿಗೆ ಬೆನ್ನು ಕೊಟ್ಟಿಲ್ಲ. ಈವರೆಗೂ ಭಗವಂತ ಯಶಸ್ಸು ಕೊಟ್ಟಿದ್ದಾನೆ. ನಾವು ಈಶ್ವರನ ಪೂಜೆ ಮಾಡಿದ್ದಕ್ಕೆ ಇಲ್ಲಿನ ವೀರ ಸ್ವರ್ಗವೇ ಪರಂತು ಎರಡನೇ ಮಾತಿಲ್ಲ..... ಎಂದು ಹೇಳಲಾಗಿದೆ.[೩೧] ಕೋಟೆ ಕಾಳಗದಲ್ಲಿ ಈತನ ದೈವಶಕ್ತಿ ಎಷ್ಟಿತ್ತು, ಪರೋಕ್ಷವಾಗಿ ಈ ಶಕ್ತಿ ರಾಜರಿಗೆ ಹೇಗೆ ನಂಬಿಕೆ, ಧೈರ್ಯ, ಉತ್ಸಾಹ ಹುಟ್ಟಿಸುತ್ತಿತ್ತು ಎಂಬುದು ಇದರಿಂದ ತಿಳಿದುಬರುತ್ತದೆ. ಜಾನಪದ ಗೀತೆಯಲ್ಲಿ ರಾಜನು ಯುದ್ಧಕ್ಕೆ ಹೊರಡುವಾಗ ಈಶ್ವರನನ್ನು ಬೇಡಿಕೊಂಡ ರೀತಿ ಈ ರೀತಿ ಇದೆ :

ಮೇಲೆ ದುರುಗದ ಮೇಲೆ ಸ್ವಾಮಿ ಸಿದ್ಧೇಶನಿಗೆ |
ಕಾಯೊಡೆದು ಕೈಯ ಮುಗಿದಾನು ||
ಏನಪ್ಪ ಮುನಿಸ್ವಾಮಿ ಭಿನ್ನವ ಮಾಡಿಸದ |
ನನಗೊಂದು ವಾಕ್ಯವ ಕೊಡೆಂದು ||
ನಿನ್ನ ಕತ್ತಿ ಎನ ಕಾರ್‍ಯವು ಸಮಗಾರ್‍ಯವಿಲ್ಲವೆಂದು |
ನೆತ್ತೀಲಿ ಕುಪ್ಪೆ ಕೊಟ್ಯಾನೆ ||[೩೨]

ಈ ರೀತಿ ರಾಜರುಗಳು ಬಿಡದೆ ಈಶ್ವರನ ಅಪ್ಪಣೆಯನ್ನು ಪಡೆದು ಯುದ್ಧಕ್ಕೆ ಹೊರಟಿರುವುದನ್ನು ನೋಡಿದರೆ ಕೋಟೆಗಳಲ್ಲಿ ಈಶ್ವರನಿಗೂ ರಾಜರಿಗೂ ಎಂತಹ ಅನನ್ಯ ಸಂಬಂಧವಿತ್ತೆಂಬುದು ಇದರಿಂದ ಕಂಡುಬರುತ್ತದೆ.

[illegible]

[illegible]

[illegible]

[illegible]

[illegible]

[illegible]

ಚಿತ್ರದುರ್ಗ ಕೋಟೆಯಲ್ಲಿ ಅನೇಕ ಕಡೆಗಳಲ್ಲಿ ವಿವಿಧ ಹೆಸರುಗಳಿಂದ ಈಶ್ವರ ನೆಲೆಗೊಂಡಿದ್ದಾನೆ. ಫಲ್ಗುಣೇಶ್ವರ, ಗಂಗಾಧರೇಶ್ವರ, ನೀಲಕಂಠ, ಚಂದ್ರಮೌಳೇಶ್ವರ, ಚನ್ನಕೇಶ್ವರ, ಕಾಶಿವಿಶ್ವೇಶ್ವರ, ಕರಿವರ್ತೀಶ್ವರ, ಪಾತಾಳೇಶ್ವರ, ಚೋಳೇಶ್ವರ-ಹೀಗೆ ಹಲವಾರು ದೇವಾಲಯಗಳು ಚಿತ್ರದುರ್ಗ ಕೋಟೆಯಲ್ಲಿವೆ. ಇದೇ ರೀತಿ ಸಿಂಗೇನಹಳ್ಳಿ ಕೋಟೆಯಲ್ಲಿ ಜಾನೆಸಿದ್ಧೇಶ್ವರ, ರಾಮಗಿರಿ ಕೋಟೆಯಲ್ಲಿ ಕರಿಸಿದ್ಧೇಶ್ವರ, ಜಟಂಗಿ ರಾಮೇಶ್ವರದ ಕೋಟೆಯಲ್ಲಿ ಜಟಂಗಿ ರಾಮೇಶ್ವರ, ಲುಂಕೇಕೋಟೆಯಲ್ಲಿ ಲುಂಕೇ ಸಿದ್ಧೇಶ್ವರ, ಬ್ರಹ್ಮಗಿರಿ ಕೋಟೆಯಲ್ಲಿ ತ್ರಿಶಂಕೇಶ್ವರ, ಹೊಸದುರ್ಗ ಕೋಟೆಯಲ್ಲಿ ಭೈರವೇಶ್ವರ, ರಾಮದುರ್ಗ ಕೋಟೆಯಲ್ಲಿ ರಾಮಲಿಂಗೇಶ್ವರ, ತುರುವನೂರು ಕೋಟೆಯಲ್ಲಿ ರಾಮಲಿಂಗೇಶ್ವರ ದೇವಾಲಯಗಳಿವೆ. ಹೀಗೆ ವ್ಯಾಪಕವಾಗಿ ಕೋಟೆಗಳಲ್ಲಿ ಈತ ಸ್ಥಾಪಿತಗೊಂಡಿರುವ ಬಗ್ಗೆ ಐತಿಹ್ಯ ಹೊಂದಿದೆ. ಕೋಟೆಯೊಳಗಿನ ಜನರು ಬೆಳಿಗ್ಗೆ ಬಾಗಿಲು ತೆಗೆದ ತಕ್ಷಣವೇ ಬಾಗಿಲ ಮುಂದೆ ಸ್ಥಾಪಿತವಾಗಿದ್ದ ನಂದಿಯ ಮುಖವನ್ನು ನೋಡುವ ಸಂಪ್ರದಾಯವಿತ್ತಂತೆ. ಅದಕ್ಕಾಗಿಯೇ "ಎದ್ದು ನಂದಿಯ ಮುಖವನ್ನು ನೋಡದವ ಹಂದಿಗಿಂತ ಕಡೆ" ಎನ್ನುವ ಗಾದೆ ಮಾತೇ ಪ್ರಚಲಿತದಲ್ಲಿದೆ.[೩೩]

ಇದೇ ರೀತಿ ಕೋಟೆಗಳಲ್ಲಿ ಅನೇಕ ದೇವತೆಗಳನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಹೆಚ್ಚಾಗಿ ಮಾರಮ್ಮ ದುರ್ಗಿ ದೇವಾಲಯಗಳು ಜಿಲ್ಲೆಯ ಕೋಟೆಗಳಲ್ಲಿ ಕಂಡುಬರುತ್ತವೆ. ಗ್ರಾಮ ದೇವತೆಯಾಗಿ ಕೋಟೆಯನ್ನು ರಕ್ಷಿಸುತ್ತಾಳೆ ಎನ್ನುವ ನಂಬಿಕೆಯಿದೆ. ಮಾರಮ್ಮನನ್ನು ವಿವರಣೆ ಹೆಸರುಗಳಿಂದ ಕರೆದು ದೇವಾಲಯಗಳನ್ನು ಕೋಟೆಗಳಲ್ಲಿ ಸ್ಥಾಪಿಸಾಗಿದೆ. ಉಚ್ಚಂಗಿದುರ್ಗದಲ್ಲಿ ಉಚ್ಚಂಗಿ ಎಲ್ಲಮ್ಮ ಕೋಟೆಯ ಅಧಿದೇವತೆಯಾಗಿದ್ದಾಳೆ. ಮೊಳಕಾಲ್ಮೂರು ಕೋಟೆಯಲ್ಲಿ ಬಾಗಿಲೊಂದರ ಮೇಲೆ ಈ ದೇವತೆಯನ್ನು ಸ್ಥಾಪಿಸಿದ್ದರಿಂದ ಮಾರಮ್ಮನ ಬಾಗಿಲೆಂದು ಕರೆಯಲಾಗಿದೆ. ಕಾವಲು ಗೋಪುರಗಳ ಮೇಲೆ ಬುರುಜು ಬತೇರಿಗಳ ಮೇಲೆ ಈಕೆಯನ್ನು ಸ್ಥಾಪಿಸಿರುವ ನಿದರ್ಶನಗಳುಂಟು. ರಾಜಮಹಾರಾಜರು ತಾವು ಆಳುವ ಪ್ರದೇಶದಲ್ಲಿ ತಮಗೆ ದಾರಿ ತೋರಿಸುವ, ಮಾರ್ಗದರ್ಶನ ಮಾಡುವ ದಿಗ್ದೇವತೆಗಳನ್ನು ಸ್ಥಾಪಿಸಿ ಕೊಂಡಿದ್ದರೆಂದು ಹೇಳಬಹುದು. ಹೀಗೆ ಕೋಟೆಗೂ ಈ ದೇವತೆಗಳಿಗೂ ಅನ್ಯೋನ್ಯ ಸಂಬಂಧಗಳಿವೆ.

೫.೧೧ ನೀರಿನ ಆಶ್ರಯತಾಣಗಳು

ನೀರು ಪಂಚಭೂತಗಳಲ್ಲೊಂದು. ನೀರು ಸಕಲ ಪ್ರಾಣಿಗಳ ಜೀವಾಳ. ಕೋಟೆಗಳಲ್ಲಿ ಆಹಾರ ಸಂಗ್ರಹದಷ್ಟೇ ಮುಖ್ಯವಾದುದು ನೀರಿನ ಸಂಗ್ರಹ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ನೀರಿನ ಸಂಗ್ರಹಣೆಯ ಬಗ್ಗೆ ರಾಜರು, ಅಧಿಕಾರಿಗಳು ಅನೇಕ ಕ್ರಮ ಕೈಗೊಂಡಿರುವುದನ್ನು ಕಾಣಬಹುದು.

[illegible]

[illegible]

ಆದಿಮಾನವ ತನ್ನ ಕಾರ್ಯಕ್ಷೇತ್ರವನ್ನು ನೀರಿನ ಸಮೀಪದಲ್ಲಿಯೇ ಹಮ್ಮಿಕೊಂಡಿದ್ದನು. ಕೋಟೆಗಳು ಹೆಚ್ಚಾಗಿ ಪ್ರಕೃತಿಯಲ್ಲಿರುವ ಗಿರಿಶಿಖರಗಳ ಮಧ್ಯೆ ನೀರಿನ ಸಂಪನ್ಮೂಲವಿರುವ ಕಡೆಗಳಲ್ಲಿ ಬೆಳೆದು ಬಂದಿರುವುದನ್ನು ಗಮನಿಸಬಹುದು. ಗಿರಿದುರ್ಗಗಳಲ್ಲಿ ಪ್ರಕೃತಿಯೇ ನಿರ್ಮಿಸಿದ ಹೊಂಡಗಳು, ಹಳ್ಳಕೊಳ್ಳಗಳಿವೆ. ರಾಜರು ಇಂತಹ ಹಳ್ಳಕೊಳ್ಳಗಳಿಗೆ ಅಡ್ಡಲಾಗಿ ಅಡೆತಡಗಳನ್ನು ನಿರ್ಮಿಸಿ ನೀರಿನ ಆಶ್ರಯತಾಣವನ್ನಾಗಿ ಮಾಡಿಕೊಂಡಿರುವುದನ್ನು ಕಾಣುತ್ತೇವೆ. ಸ್ಥಳ ದುರ್ಗಗಳಲ್ಲಿ ನೆಲೆಗಳನ್ನು ತೋಡುವುದರ ಮೂಲಕ ಹೊಂಡ, ಬಾವಿ, ಪುಷ್ಕರಣಿಗಳನ್ನು ತಮ್ಮ ವಸತಿನಿಲಯಗಳಿಗೆ ಹತ್ತಿರವಾಗಿ ನಿರ್ಮಿಸಿಕೊಂಡಿದ್ದಾರೆ. ಕೋಟೆಯ ಒಳಗೆ ಮತ್ತು ಕೋಟೆಯ ಹೊರಗೆ ಮಳೆಯ ನೀರು ವ್ಯರ್ಥವಾಗದಂತೆ ಕೆರೆ-ಕಟ್ಟೆ ಹಾಗೂ ಕಂದಕಗಳನ್ನು ನಿರ್ಮಿಸಿ ರಕ್ಷಣೆ ಮಾಡಿಕೊಂಡಿದ್ದಾರೆ. ಚಿತ್ರದುರ್ಗದ ಕೋಟೆಯಲ್ಲಿ ಗೋಪಾಲಕೃಷ್ಣ ದೇವಾಲಯದ ಮುಂದೆ ಇರುವ ದೊಡ್ಡ ಕೊಳ್ಳವೊಂದಕ್ಕೆ ಒಂದು ಅಡ್ಡಕಟ್ಟೆ ಕಟ್ಟಿ ನೀರು ನಿಲ್ಲುವಂತೆ ಹೊಂಡವನ್ನು ರಚಿಸಿದ್ದಾರೆ. ದೇವಾಲಯದ ಮುಂದೆ ಇರುವ ಈ ಹೊಂಡವನ್ನು ಗೋಪಾಲಸ್ವಾಮಿ ಹೊಂಡವೆಂದೇ ಕರೆಯುತ್ತಾರೆ. ಬೆಟ್ಟದ ಮಧ್ಯೆಭಾಗದಲ್ಲಿರುವ ಈ ಹೊಂಡಕ್ಕೆ ಸುತ್ತಲೂ ಇರುವ ಬೆಟ್ಟಗಳಿಂದ ಬಂದು ಸೇರುವ ಒಳಜಲ, ಈ ಹೊಂಡವನ್ನು ಎಂದೂ ಒಣಗದ ಜಲಾಶಯವನ್ನಾಗಿ ಮಾಡಿದೆ. ಹತ್ತಾರು ವರ್ಷಗಳ ಕಾಲ ಮಳೆ ಬಾರದೆ ಇದ್ದರೂ, ಎಂದೂ ನೀರಿನ ಕೊರತೆಯಾಗದಂತೆ ಬಹಳಷ್ಟು ಪ್ರಮಾಣದ ನೀರನ್ನು ಈ ಹೊಂಡವು ಬೆಟ್ಟದ ಮೇಲಿದ್ದ ಸೈನಿಕರಿಗೆ ಒದಗಿಸುತ್ತಿತ್ತು. ಹೊಂಡದ ಹೆಚ್ಚಾದ ನೀರು ಕೆಳಗೆ ಹೋಗುವಂತೆ ವ್ಯವಸ್ಥೆಯಿದ್ದು, ಈ ನೀರಿಗೂ ಮಧ್ಯಭಾಗದಲ್ಲಿ ಅಡ್ಡಗಟ್ಟೆಯನ್ನು ನಿರ್ಮಿಸಿ ಅಕ್ಕತಂಗಿ ಎಂಬ ಹೊಂಡಗಳನ್ನಾಗಿ ನಿರ್ಮಿಸಲಾಗಿದೆ. ಈ ಅಡ್ಡಗಟ್ಟೆಯನ್ನು ನೀರು ಬಸಿಯುವ ತಂತ್ರದಿಂದ ನಿರ್ಮಿಸಲಾಗಿದೆ. ಇಲ್ಲಿಯೂ ಹೆಚ್ಚಾದ ನೀರು ತಣ್ಣೀರುದೋಣೆ ಮೂಲಕ ಒನಕೆ ಕಿಂಡಿ ಮುಖಾಂತರ ಪಶ್ಚಿಮದ ಕಂದಕವನ್ನು ಸೇರುತ್ತದೆ.

ಪಶ್ಚಿಮದ ಬೆಟ್ಟಗಳಿಂದ ಬಂದಂತಹ ನೀರು ಕಂದಕಗಳ ಮುಖಾಂತರ ಸಿಹಿ ನೀರು ಹೊಂಡಕ್ಕೆ ಸೇರುತ್ತದೆ. ಹೀಗೆ ಪಶ್ಚಿಮ ಭಾಗದ ನೀರನ್ನು ವ್ಯರ್ಥವಾಗದಂತೆ ಹೊಂಡಗಳನ್ನು ನಿರ್ಮಿಸಿ ಬಳಸಿಕೊಳ್ಳಲಾಗಿದೆ. ಸಿಹಿ ನೀರು ಹೊಂಡದ ನೀರನ್ನು ಸುಮಾರು ೧ ಕಿ.ಮೀ. ಸುರಂಗದ ಮೂಲಕ ನಗರದ ಮಧ್ಯೆಭಾಗದಲ್ಲಿ ನಿರ್ಮಿಸಿರುವ ಸಂತೆಯ ಹೊಂಡಕ್ಕೆ ಕೊಂಡೊಯ್ದಿರುವುದು ಅಂದಿನ ತಂತ್ರಜ್ಞಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಈ ವ್ಯವಸ್ಥೆ ಇಂದಿಗೂ ಮುಂದುವರಿದಿರುವುದು ಗಮನಾರ್ಹ ಅಂಶವಾಗಿದೆ. ಸಂತೆ ಹೊಂಡವು ೨೦೮ ಅಡಿ ಉದ್ದ, ೨೦೨ ಅಡಿ ಅಗಲ, ೯೦ ಅಡಿ ಆಳವಿದ್ದು,

[illegible]

[illegible]

ಸುತ್ತಲೂ ನಯವಾದ ಕಲ್ಲುಗಳಿಂದ ಕಟ್ಟಿರುವ ಪೌಳಿ ಗೋಡೆಯಿದೆ. ಹೊಂಡಕ್ಕೆ ಇಳಿದು ಹೋಗಲು ಸುತ್ತಲೂ ೮೦ ಮೆಟ್ಟಿಲುಗಳಿವೆ. ಇಲ್ಲಿಯೂ ಹೆಚ್ಚಾದ ನೀರು ಮುಂದೆ ಮಲ್ಲಾಪುರದ ಕೆರೆಗೆ ಸೇರುತ್ತಿತ್ತು.

ಬೆಟ್ಟದ ದಕ್ಷಿಣ ಹಾಗೂ ಪೂರ್ವ ಭಾಗದಲ್ಲೂ ಇದೇ ತೆರನಾದ ವ್ಯವಸ್ಥೆಯಿದೆ. ಆಗ್ನೇಯ ದಿಕ್ಕಿನಲ್ಲಿರುವ ತಿಮ್ಮಣ್ಣ ನಾಯಕನ ಕೆರೆ ನಂತರ ದೊಡ್ಡಣ್ಣನ ಕೆರೆ, ಕರಿವರ್ತಿ-ಹೀಗೆ ಕ್ರಮವಾಗಿ ಅನೇಕ ಕೆರೆಗಳನ್ನು ನಿರ್ಮಿಸಲಾಗಿದೆ. ಕರಿವರ್ತಿ ಕೆರೆಯನ್ನು ಶ್ರೀರಾಮದೇವರ ಒಡ್ಡು ಎಂದೂ ಕರೆಯುವುದುಂಟು. ಕರಿವರ್ತಿಯಲ್ಲಿ ಹೆಚ್ಚಾದ ನೀರು ಸುರಂಗ ಮಾರ್ಗದಲ್ಲಿ ಹರಿದು ಹೋಗುವಂತೆ ತೂಬಿನ ವ್ಯವಸ್ಥೆಯಿದೆ. ಇಲ್ಲಿಂದ ಹೆಚ್ಚಾದ ನೀರು ಕಾಮನಬಾಗಿಲ ಕೋಟೆಯ ಸುತ್ತಿನ ಕಂದಕಕ್ಕೆ ಹರಿದು ಹೋಗುವಂತೆ ಮಾಡಿರುವ ವ್ಯವಸ್ಥೆ ಆಶ್ಚರ್ಯ ಹುಟ್ಟಿಸುತ್ತದೆ. ಬೆಟ್ಟದ ಮೇಲಿಂದ ಬರುವ ನೀರಿಗೆ ಕರಿವರ್ತಿಯ ಮೇಲ್ಭಾಗದಲ್ಲಿ ಅಡ್ಡಗಟ್ಟಿ ಹೊಂಡಗಳನ್ನು ನಿರ್ಮಿಸಲಾಗಿದೆ. ಈ ಅಡ್ಡಗಟ್ಟೆಯು ೩೫ ಅಡಿ ಎತ್ತರವಾಗಿದ್ದು, ೨೬-೨೫ ಅಂಗುಲದ ಕಲ್ಲುಗಳನ್ನು ಬಳಸಿ ಗೋಡೆಯನ್ನು ಕಟ್ಟಲಾಗಿದೆ. ಇಡೀ ಕಟ್ಟಡವನ್ನು ಬರೀ ಕಲ್ಲುಗಳಿಂದ ಜೋಡಿಸಿ ಕಟ್ಟಿದ್ದಾರೆ. ಎಲ್ಲಿಯೂ ಮಣ್ಣನ್ನು ಬಳಸಿಲ್ಲ. ಮೇಲಿಂದ ಬಂದ ನೀರು ಈ ಕಟ್ಟಡದಿಂದ ಬಸಿದು ಮುಂದೆ ಕರಿವರ್ತಿಗೆ ಸಾಗುತ್ತಿತ್ತು. ಗೋಡೆಯ ತಳಭಾಗದಲ್ಲಿ ೨೨-೧೭ ಅಡಿ ಅಂಗುಲದ ಎರಡು ತೂಬುಗಳಿವೆ. ತೂಬುಗಳ ಮಧ್ಯೆ ಎರಡೆರಡು ಕಬ್ಬಿಣದ ಸರಳುಗಳಿವೆ. ಇಡೀ ಕಟ್ಟಡದಲ್ಲಿ ಹಾಗೂ ಕರಿವರ್ತಿಯಲ್ಲಿ ಸುಮಾರು ೨೦ ಅಡಿ ನೀರು ನಿಲ್ಲುವಂತೆ ಮಾಡಲಾಗಿದ್ದು, ಹೆಚ್ಚಾದ ನೀರು ಭಾರೀ ಕಂದಕದ ಮೂಲಕ ಕೋಟೆಯ ಪೂರ್ವ ದಿಕ್ಕಿನಲ್ಲಿರುವ ಹೊರಕೋಟೆಯ ಕಂದಕಕ್ಕೆ ಹೋಗುವಂತೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹೀಗೆ ಇಡೀ ಬೆಟ್ಟದ ಸುತ್ತಲೂ ಹರಿಯುವ ನೀರನ್ನು ವ್ಯರ್ಥವಾಗದಂತೆ ಸಂಗ್ರಹಿಸಿ ಕೆರೆ, ಹೊಂಡಗಳನ್ನು ದುರ್ಗದ ಸುತ್ತಲೂ ನಿರ್ಮಿಸಿದ್ದಾರೆ. ಈ ವ್ಯವಸ್ಥೆಯಿಂದ ಚಿತ್ರದುರ್ಗದ ಕೋಟೆಯನ್ನು ಜಲದುರ್ಗವನ್ನಾಗಿ ಮಾಡಿದ್ದರೆನ್ನಬಹುದು.

ಬೆಟ್ಟದ ಮೇಲ್ಭಾಗದಲ್ಲಿ ಕೆರೆಕುಂಟೆಗಳನ್ನು ಹೊರತುಪಡಿಸಿ ಅಲ್ಲಲ್ಲಿ ಪ್ರಕೃತಿ ನಿರ್ಮಿತ ಬಂಡೆಗಳ ತಗ್ಗು ಪ್ರದೇಶದ ಸುತ್ತಲೂ ಗಾರೆ ಮತ್ತು ಇಟ್ಟಿಗೆಗಳಿಂದ ತಡೆಗೋಡೆಯನ್ನು ನಿರ್ಮಿಸಿ ಕುಡಿಯುವ ನೀರಿಗೆ ಆಶ್ರಯವನ್ನು ಮಾಡಿಕೊಳ್ಳಲಾಗಿದೆ. ಇಂತಹ ಗಾರೆಹೊಂಡ, ತಣ್ಣೀರುದೋಣೆಗಳು ಸಾಕಷ್ಟು ಸಂಖ್ಯೆಯಲ್ಲಿವೆ.

ಮೊಳಕಾಲ್ಮೂರು ಕೋಟೆಯಲ್ಲಿ ಹಟ್ಟಿ ಮಲ್ಲಪ್ಪನಾಯಕನು ಕಟ್ಟಿಸಿದ ನಾಗತಿಕೆರೆ ಇಡೀ ಕೋಟೆಗೆ ನೀರುಣಿಸುವ ತಾಣವಾಗಿದೆ. ಇವಲ್ಲದೆ ಇಲ್ಲಿರುವ ದೊಡ್ಡ ಹೊಂಡ, ನೀರುಕುಂಟೆ, ಗಾರೆ ಹೊಂಡ,

[illegible]

ನೀಲಮ್ಮನ ಕುಂಟೆ, ಬೋಸೆದೇವರ ಹೊಂಡ, ಕಂಪಳದೇವರ ಹೊಂಡ, ನಾಗರಬಾವಿ, ಉತ್ತರ ಭಾಗದಲ್ಲಿರುವ ಚಿಕ್ಕಕೆರೆ ಮುಂತಾದವು ನೀರಿನ ಪ್ರಮುಖ ಆಶ್ರಯ ತಾಣಗಳಾಗಿವೆ. ಲುಂಕೇಕೋಟೆಯ ಮಧ್ಯೆಭಾಗದಲ್ಲಿ ಎರಡು ಕೆರೆಗಳಿವೆ. ರಥಬೀದಿಯಲ್ಲಿ ಪಶ್ಚಿಮದಲ್ಲಿರುವ ೧೧೧.೫ ಅಡಿ ಉದ್ದದ ೯೪.೫ ಅಡಿ ಅಗಲದ ಪುಷ್ಕರಣಿ ಇದೆ. ಉಳಿದಂತೆ ಮೇಲ್‌ದುರ್ಗದಲ್ಲಿ ಗಾರೆ ಹೊಂಡಗಳಿವೆ. ಬ್ರಹ್ಮಗಿರಿ ಕೋಟೆಯ ಮಧ್ಯೆಭಾಗದಲ್ಲಿರುವ ಹುಲಿಕುಂಟೆಯು ವಿಸ್ತಾರವಾದ ಕೆರೆಯಾಗಿದ್ದು, ಇದು ಇಡೀ ಕೋಟೆಗೆ ನೀರೊದಗಿಸಿದೆ. ತ್ರಿಶಂಕೇಶ್ವರ ದೇವಾಲಯದ ಹಿಂಭಾಗದಲ್ಲಿ ೮೦ ಮೀ. ಅಗಲದ ೭೫ ಮೀ. ಉದ್ದದ ದೊಡ್ಡ ಹೊಂಡವಿದೆ. ಇಷ್ಟೇ ಅಲ್ಲದೆ ಅನೇಕ ತಣ್ಣೀರು ಹೊಂಡಗಳು, ಗಾರೆ ಹೊಂಡಗಳು, ನೀರು ಕುಂಟೆಗಳು ಮುಂತಾದ ನೀರಿನ ಆಶ್ರಯ ತಾಣಗಳಿವೆ. ಹೀಗೆ ಚಿತ್ರದುರ್ಗದ ಎಲ್ಲಾ ಕೋಟೆಗಳಲ್ಲಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಲಾಗಿದೆ.

ಟಿಪ್ಪಣಿಗಳು

೧. ರಮೇಶ್ ಬೆ.ಗೊ., ೧೯೭೭, ಕರ್ನಾಟಕದ ವಾಸ್ತುಶಿಲ್ಪ, ಪು.೩೧

೨. ಶ್ರೀಕಂಠಯ್ಯ ಕೆ., ೧೯೮೩, ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು.೯೪

೩. ಚೆಲುವರಾಜು, ೨೦೦೦, ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪು.೬೦

೪. ಅದೇ, ಪು.೬೦

೫. ರಂಗರಾಜ ದೇವೇಂದ್ರಪ್ಪ, ೧೯೯೫, ಸುರಪುರ ಸಂಸ್ಥಾನ ಒಂದು ಅಧ್ಯಯನ, ಪು.೧೮೨

೬. ಅದೇ ಪು.೨೯೩

೭. ರಾಜಶೇಖರಪ್ಪ ಬಿ.(ಸಂ), ೧೯೯೫-೯೬, ಚಿತ್ರದುರ್ಗದ ಗರಡಿಗಳು, ರಾಧಾಕೃಷ್ಣ .ಟಿ.ಆರ್. ಸಂ.೬, ಸಂ.೧-೨, ಪು.೯೧-೧೧೦

೮. ಅದೇ, ಪು.೯೧-೧೧೦

೯. ಪುಟ್ಟಣ್ಣ ಎಂ.ಎಸ್., ೧೯೨೩, ಪಾಳೆಗಾರರ ಐದು ಉಪನ್ಯಾಸಗಳು, ಪು.೮೨-೮೩

೧೦. ಕೃಷ್ಣಭಟ್ ಕೆ.(ಅನು). ೨೦೦೦, ಕೌಟಿಲ್ಯನ ಅರ್ಥಶಾಸ್ತ್ರ, ಪು.೧೦೨

೧೧. ದೀಕ್ಷಿತ್ ಜಿ.ಎಸ್. ಮತ್ತು ಇತರರು ಸಂ. ೨೦೦೦, ಆಚಾರ್ಯ ಸೋಮದೇವ ವಿಚಲಿತ ನೀತಿವಾಕ್ಯಮೃತಂ, ಪು.೨೧೮

೧೨. ನರಸಿಂಹಶಾಸ್ತ್ರಿ ಕೆ.ಎಲ್., ೧೯೪೯, ಶುಕ್ರನೀತಿಸಾರ, ಪು.೧೨೩

೧೩. ಕೌಟಿಲ್ಯನ ಅರ್ಥಶಾಸ್ತ್ರ, ಪೂರ್ವೋಕ್ತ, ಪು.೧೦೨

[illegible]

೧೪. ಅದೇ, ಪು.೧೪೭

೧೫. ಅದೇ, ಪು.೧೦೦

೧೬. ನೀತವಾಕ್ಯಾಮೃತಂ, ಪು.೨೦೬

೧೭. ಕೌಟಿಲ್ಯನ ಅರ್ಥಶಾಸ್ತ್ರ, ಪೂರ್ವೋಕ್ತ, ಪು.೧೦೩

೧೮. ಅದೇ, ಪು.೧೩೯

೧೯. ಅದೇ, ಪು.೧೩೯

೨೦. ಪುಟ್ಟಣ್ಣ ಎಂ.ಎಸ್., ೧೯೨೩, ಚಿತ್ರದುರ್ಗದ ಪಾಳೆಯಗಾರರು, ಪು.೪೮

೨೧. ಲಕ್ಷ್ಮಣ್‌ತೆಲಗಾವಿ ಮತ್ತು ಇತರರು, ೧೯೮೦, ಚಿತ್ರದುರ್ಗ ದರ್ಶಿನಿ, ಪು.೩೧

೨೨. ರಾಮಚಂದ್ರರಾವ್ ಎಸ್.ಕೆ., ೧೯೭೫, ಮೂರ್ತಿಶಿಲ್ಪನೆಲೆ ಹಿನ್ನೆಲೆ, ಪು.೧೯೮

೨೩. ಅದೇ,

೨೪. ವಿಠಲರಾವ್ ಗಾಯಕ್ವಾಡ್(ಅನು), ೨೦೦೩, ಲಜ್ಜಾಗೌರಿ, ಪು.೬೭

೨೫. Singh A.P., 1987, Forts and Fortitication of India : with special reference to Central India. P.190

೨೬. ಕೌಟಿಲ್ಯನ ಅರ್ಥಶಾಸ್ತ್ರ, ಪೂರ್ವೋಕ್ತ, ಪು.೧೦೦

೨೭. ನೀತಿವಾಕ್ಯಾಮೃತಂ, ಪೂರ್ವೋಕ್ತ, ಪು.೩೩

೨೮. ಶ್ರೀಧರಮೂರ್ತಿ, ೧೯೮೧, ದೇವತೆಗಳು ಮತ್ತು ಹಬ್ಬಗಳು, ಪು.೭೩

೨೯. ಮೈಲಹಳ್ಳಿ ರೇವಣ್ಣ, ೧೯೯೧, ಜನಪದರು ಕಂಡ ಹನುಮಂತ, ಸಂಶೋಧನ, ಲಕ್ಷ್ಮಣ್‌ತೆಲಗಾವಿ(ಸಂ.), ಪು.೪೨೨

೩೧. ರಾಮಚಂದ್ರರಾವ್, ಪೂರ್ವೋಕ್ತ, ಪು.೯೫

೩೧. ಪುಟ್ಟಣ್ಣ ಎಂ.ಎಸ್., ೧೯೨೪, ಪೂರ್ವೋಕ್ತ, ಪು.೭೦

೩೨. ಕೃಷ್ಣಮೂರ್ತಿ ಹನೂರು(ಸಂ), ೧೯೯೮, ಜನಪದ ಮತ್ತು ಬುಡಕಟ್ಟು ಗೀತೆಗಳು, ಪು.೨೦೮

❑❑

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಪ್ರಸ್ತುತ ಮಹಾಪ್ರಬಂಧದಲ್ಲಿ ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ ಎಂಬ ಶೀರ್ಷಿಕೆಯಡಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಕೋಟೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಮಾನವನು ತನ್ನ ಅಸ್ತಿತ್ವವನ್ನು ನೆಲೆಗೊಳಿಸುವ ಸಲುವಾಗಿ ರಾಜ್ಯಗಳನ್ನು ಕಟ್ಟಿ ಅಧಿಕಾರ ಸ್ಥಾಪಿಸುವಲ್ಲಿ ಮುಂದಾದನು. ಹೀಗೆ ಸ್ಥಾಪಿಸಿಕೊಂಡ ಅಧಿಕಾರದ ಉಳುವಿಗಾಗಿ ರಕ್ಷಣಾತ್ಮಕ ಪ್ರಯತ್ನಗಳನ್ನು ಕೈಗೊಂಡನು. ಭೌತಿಕ ಸ್ವರೂಪದ ರಕ್ಷಣಾ ವಾಸ್ತುರಚನೆಗಳು ನಿರ್ಮಾಣಗೊಂಡವು. ಅವುಗಳಲ್ಲಿ ಕೋಟೆಯ ನಿರ್ಮಾಣವು ಸಹ ಒಂದು. ಇದುವರೆಗೂ ಪ್ರಮುಖ ಕೋಟೆಗಳ ಅಧ್ಯಯನಕ್ಕೆ ಮಹತ್ವ ನೀಡಲಾಗಿದ್ದು, ಸಣ್ಣಪುಟ್ಟ ಕೋಟೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿದ್ದವು. ಆದಕಾರಣ ಪ್ರಸ್ತುತ ಅಧ್ಯಯನದಲ್ಲಿ ಚಿತ್ರದುರ್ಗ ಜಿಲ್ಲೆಯ ಎಲ್ಲ ಬಗೆಯ ಕೋಟೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಮೂಲಕ ಪ್ರಾದೇಶಿಕ ಹಾಗೂ ಸ್ಥಳೀಯವಾಗಿ ರೂಪುಗೊಂಡ ರಕ್ಷಣಾವಾಸ್ತುಶಿಲ್ಪದ ವಿವಿಧ ರಚನೆಗಳನ್ನು ಹಾಗೂ ಬೆಳವಣಿಗೆಯನ್ನು ಗುರುತಿಸಲಾಗಿದೆ. ಅಲ್ಲದೆ ಸ್ಥಳೀಯ ಸಂರಕ್ಷಣೆಗೆ ನೀಡಿದ ಆದ್ಯತೆಯನ್ನು ಗುರುತಿಸುವ ಪ್ರಯತ್ನ ಇದೆ.

ಚಿತ್ರದುರ್ಗ ಜಿಲ್ಲೆ, ೧೯೯೭ರ ಜಿಲ್ಲಾ ಪುನರ್‌ವಿಂಗಡಣೆಯ ಪೂರ್ವದಲ್ಲಿ ಒಂಬತ್ತು ತಾಲೂಕುಗಳನ್ನೊಳಗೊಂಡ ವಿಸ್ತಾರವಾದ ಜಿಲ್ಲೆಯಾಗಿತ್ತು. ಈ ಅವಧಿಯವರೆಗೆ ರಚನೆಗೊಂಡ ಎಲ್ಲ ಗ್ರಂಥಗಳಲ್ಲಿ

ಜಿಲ್ಲೆಯ ರಾಜಕೀಯ ಚರಿತ್ರೆಯನ್ನು ಒಂಬತ್ತು ತಾಲೂಕುಗಳನ್ನೊಳಗೊಂಡಂತೆ ರಚಿಸಲಾಗಿತ್ತು. ಆದರೆ ೧೯೯೭ರ ನಂತರ ದಾವಣಗೆರೆಯು ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡಿತು. ಪರಿಣಾಮವಾಗಿ ರಾಜ್ಯದ ವಿಸ್ತೀರ್ಣದಲ್ಲಿ ಏಳನೇ ಸ್ಥಾನದಲ್ಲಿದ್ದ ಚಿತ್ರದುರ್ಗ ಜಿಲ್ಲೆಯು ಒಂಬತ್ತನೇ ಸ್ಥಾನಕ್ಕೆ ಬರಬೇಕಾಯಿತು. ಪ್ರಸ್ತುತ ಅಧ್ಯಯನದ ಜಿಲ್ಲೆಯಲ್ಲಿ ಉಳಿದುಕೊಂಡು ಬಂದಿರುವ ಆರು ತಾಲೂಕುಗಳ ಭೌಗೋಳಿಕ ಮತ್ತು ರಾಜಕೀಯ ಚರಿತ್ರೆಯನ್ನು ಒಂದೆಡೆ ತರಲು ಇಲ್ಲಿ ಯತ್ನಿಸಲಾಗಿದೆ.

ಕೋಟೆಯು ರಕ್ಷಣೆಯ ಪ್ರತಿರೂಪ. ಇದು ನಾಗರೀಕರ ಜೀವನಾಡಿಯೂ ಹೌದು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಕೋಟೆಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಕೋಟೆಯ ರಚನೆ, ಸ್ವರೂಪ, ಅಂಗಭಾಗಗಳು ಮತ್ತು ಅವುಗಳ ಮಹತ್ವವನ್ನು ಇಲ್ಲಿ ವಿವೇಚಿಸಲಾಗಿದೆ. ಬುರುಜು, ಬತೇರಿ, ಕಾವಲುಗೋಪುರ, ದ್ವಾರಬಾಗಿಲು, ಕಂದಕ, ವಪ್ರ, ಕೋಟೆತೆನೆ, ಬಂದೂಕುರಂಧ್ರ, ಶಿಲ್ಪ, ದೇವಾಲಯ, ಮದ್ದಿನಮನೆ, ಸೈನಿಕರ ವಸತಿಗೃಹ, ನೀರಿನ ಆಶ್ರಯ ಮತ್ತು ಕಣಜ ಸ್ಮಾರಕಗಳ ಬಗ್ಗೆ ಅಧ್ಯಯನದಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಇವು ಅಂದಿನ ರಕ್ಷಣಾವ್ಯವಸ್ಥೆಯಲ್ಲಿ ವಹಿಸಿದ ಪಾತ್ರ, ಮಹತ್ವ ಮತ್ತು ರಚನೆ ವಿನ್ಯಾಸಗಳನ್ನು ವಿವರಿಸಲಾಗಿದೆ.

ಪ್ರಸ್ತುತ ಅಧ್ಯಯನವು ಸಂಪೂರ್ಣವಾಗಿ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಈ ಹಿನ್ನೆಲೆಯಲ್ಲಿ ಹಲವು ಕೋಟೆಗಳು ಇಲ್ಲಿ ಅಧ್ಯಯನಕ್ಕೆ ಒಳಪಟ್ಟಿವೆ. ಈವರೆಗೆ ಜಿಲ್ಲೆಯ ಕೋಟೆಗಳನ್ನು ಕುರಿತಂತೆ ಸಮಗ್ರ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕು. ಚಿತ್ರದುರ್ಗ, ಮೊಳಕಾಲ್ಮೂರು, ಹೊಸಗುಡ್ಡ, ಐಮಂಗಲ ಮತ್ತು ಬೂದಿಹಾಳು ಕೋಟೆಗಳನ್ನು ಕುರಿತು ಅಲ್ಲಲ್ಲಿ ಬಿಡಿ ಲೇಖನಗಳು ಹೊರಬಂದಿವೆ. ಚಿತ್ರದುರ್ಗ ಕೋಟೆಗೆ ಸಂಬಂಧಪಟ್ಟಂತೆ ಸಂಶೋಧನ ಲೇಖನ ಮತ್ತು ಪ್ರವಾಸಿ ಕೈಪಿಡಿ, ಸಾಕಷ್ಟು ಸಂಖ್ಯೆಯಲ್ಲಿ ಹೊರಬಂದಿವೆ. ಪ್ರಸ್ತುತ ಅಧ್ಯಯನದಲ್ಲಿ ಮೇಲ್ಕಂಡ ಕೋಟೆಗಳೂ ಸೇರಿದಂತೆ ಇದುವರೆಗೂ ಅಲಕ್ಷ್ಯಕ್ಕೊಳಗಾಗಿದ್ದ ವೇಣುಕಲ್ಲುಗುಡ್ಡ, ಸಂತೇಗುಡ್ಡ, ಉಚ್ಚಂಗಿದುರ್ಗ, ಹೊಸದುರ್ಗ, ಸಿಂಗೇನಹಳ್ಳಿ, ಭರಮಣ್ಣನಾಯಕನ ದುರ್ಗ, ರಾಮಗಿರಿ, ಕಣಜನಹಳ್ಳಿ, ತುರುವನೂರು, ಲುಂಕೆಮಲೆ, ಸಿದ್ಧವ್ವನದುರ್ಗ ಮತ್ತು ಭರಮಗಿರಿ ಕೋಟೆಗಳನ್ನು ಮೊಟ್ಟಮೊದಲಬಾರಿಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಎಲ್ಲ ಕೋಟೆಗಳ ನಕ್ಷೆ ಮತ್ತು ಛಾಯಾಚಿತ್ರಗಳನ್ನು ಒದಗಿಸುವ ಪ್ರಯತ್ನವಿಲ್ಲಿದೆ. ಹೀಗೆ ಜಿಲ್ಲೆಯ ಎಲ್ಲಾ ಕೋಟೆಗಳನ್ನು ಒಂದೆಡೆ ದಾಖಲಿಸುವುದಲ್ಲದೆ, ವಿಶ್ಲೇಷಿಸುವ ಪ್ರಯತ್ನವೂ ಸಹ ಪ್ರಸ್ತುತ ಮಹಾಪ್ರಬಂಧದ ಮುಖ್ಯ ಆಶಯ.

ಚಿತ್ರದುರ್ಗ ಜಿಲ್ಲೆಯ ಬಹುತೇಕ ಕೋಟೆ-ಕೊತ್ತಲಗಳು ವಿನಾಶದ ಅಂಚಿನಲ್ಲಿವೆ. ಗ್ರಾಮ, ಪಟ್ಟಣಗಳು ಆಧುನಿಕ ಕಾಲದಲ್ಲಿ ಬೆಳೆಯುತ್ತಿವೆ. ಹೊಸ ಕಟ್ಟಡಗಳನ್ನು ಕಟ್ಟಲು ನಿವೇಶನಕ್ಕಾಗಿ ಕೋಟೆಗಳ ಸ್ಥಳಗಳನ್ನೇ ಬಳಸಲಾಗುತ್ತಿದೆ; ಬೀಳಿಸಿದ ಕೋಟೆಯ ಕಲ್ಲುಗಳಿಂದಲೇ ಮನೆಗಳು ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ರಸ್ತೆಗಳ ಅಗಲೀಕರಣ. ಹೀಗೆ ಒಂದಲ್ಲ ಒಂದು ಕಾರಣದಿಂದ ಕೋಟೆಗಳು ಕ್ಷೀಣಿಸುತ್ತಾ ವಿನಾಶದ ಅಂಚನ್ನು ತಲುಪಿವೆ. ಉದಾ. ಬೂದಿಹಾಳು ಕೋಟೆಯ ಬುರುಜು ಮತ್ತು ಕಣಜನಹಳ್ಳಿ ಕೋಟೆ ಬುರುಜುಗಳನ್ನು ಕಿತ್ತು ನಿವೇಶನಗಳನ್ನಾಗಿ ಮಾಡಿಕೊಂಡಿದ್ದಾರೆ. ಭರಮಣ್ಣ ನಾಯಕನ ದುರ್ಗದ ಕೋಟೆ ಕಲ್ಲುಗಳನ್ನು ಕಿತ್ತು ಕೆಳಕ್ಕೆ ಉರುಳಿಸಿರುವುದನ್ನು ಕಾಣಬಹುದು. ಚಿತ್ರದುರ್ಗದ ಹೊರಕೋಟೆ ಹಾಗೂ ಬಸವನ ಬುರುಜು ಸುತ್ತಲೂ ಪೇಟೆ ಆವರಿಸಿ ಕೊಂಡಿದೆ. ಹೀಗಾಗಿ ಇವು ಪೂರ್ಣನಾಶವಾಗುವುದಕ್ಕಿಂತ ಮುಂಚೆ ದಾಖಲೀಕರಣ ಮತ್ತು ಅಧ್ಯಯನ ತುರ್ತಾಗಿ ಆಗಬೇಕಿದೆ. ಈ ಕೆಲಸವನ್ನು ಸಾಧ್ಯವಾದಷ್ಟು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಐಮಂಗಲ ಮತ್ತು ಬೂದಿಹಾಳು ಕೋಟೆಗಳನ್ನು ಹೊರತುಪಡಿಸಿದರೆ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಕೋಟೆಗಳು ಬೆಟ್ಟಗುಡ್ಡ ಮತ್ತು ಹಳ್ಳಕೊಳ್ಳಗಳ ಪರಿಸರದಲ್ಲಿ ನಿರ್ಮಾಣಗೊಂಡ ಗಿರಿದುರ್ಗಗಳಾಗಿವೆ. ಸ್ಥಳದುರ್ಗಗಳಿಗಿಂತ ಗಿರಿದುರ್ಗಗಳು ಹೆಚ್ಚು ಸುಭದ್ರ ಹಾಗೂ ಸುರಕ್ಷಿತವೆಂಬುದು ಇದರಿಂದ ಸ್ಪಷ್ಟ ವಾಗುತ್ತದೆ. ಕೆಲವೆಡೆಗಳಲ್ಲಿ ಯುದ್ಧತಂತ್ರ, ಪ್ರವಾಹ, ಮತ್ತಿತರ ನೈಸರ್ಗಿಕ ವಿಕೋಪಗಳಿಂದಾಗಿ ಸ್ಥಳದುರ್ಗಗಳು ವಿಫಲಗೊಂಡ ಪರಿಣಾಮವಾಗಿ ಬಹುಶಃ ಗಿರಿದುರ್ಗಗಳನ್ನು ನಿರ್ಮಿಸಿಕೊಂಡಿರಬೇಕು. ಉದಾ: ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ. ಗಾತ್ರ, ವಿಸ್ತೀರ್ಣ, ರಚನೆ ಮತ್ತು ವಿನ್ಯಾಸದಲ್ಲಿ ಚಿತ್ರದುರ್ಗ ಕೋಟೆಯು ಮೊದಲನೆಯ ವರ್ಗಕ್ಕೆ ಸೇರುತ್ತದೆ. ಚಿತ್ರದುರ್ಗದ ಕೋಟೆಯು ದಕ್ಷಿಣ ಭಾರತದ ಅಭೇದ್ಯ ಗಿರಿದುರ್ಗಗಳಲ್ಲೊಂದು. ಈ ಕೋಟೆಯಲ್ಲಿ ಕಾಲಕಾಲಕ್ಕೆ ಯುದ್ಧತಂತ್ರ ಕೌಶಲ್ಯಕ್ಕೆ ಅನುಗುಣವಾಗಿ ನಿರ್ಮಿಸಿರುವ ಹೊಸಹೊಸ ರಕ್ಷಣಾ ಸೇರ್ಪಡೆಗಳನ್ನು ಕಾಣುತ್ತೇವೆ. ಚಿತ್ರದುರ್ಗದ ಕೋಟೆಯಲ್ಲಿ ಬೇರೆ ಯಾವುದೇ ಕೋಟೆಗಳಲ್ಲಿ ಕಂಡುಬರದ ರಕ್ಷಣಾಸಂಬಂಧಿ ಕಟ್ಟಡಗಳು ನಿರ್ಮಾಣಗೊಂಡಿರುವುದನ್ನು ಗುರುತಿಸಬಹುದು. ಉದಾ: ಮದ್ದು ಬೀಸುವ ಕಲ್ಲು, ಕಣಜ, ಸೈನಿಕರ ವಸತಿ, ಎಣ್ಣೆಕೊಳ್ಳ, ಕಾವಲು ಗೋಪುರ, ಪಹರೆಗೃಹ, ಕಲ್ಲು, ಇಟ್ಟಿಗೆ ಮತ್ತು ಗಾರೆ ಬಳಸಿ ನಿರ್ಮಿಸಿರುವ ಕೋಟೆಯು ಪರಿಪೂರ್ಣ ವೆನಿಸಿದೆ. ಸುಮಾರು ೧೮೦೦ರಲ್ಲಿ ಬ್ರಿಟೀಷರು ತಯಾರಿಸಿದ ಕೋಟೆ ನಕ್ಷೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಕೊಡಲಾಗಿದೆ. ಈ ಮೂಲಕ ಸುಮಾರು ೨೦೦ ವರ್ಷಗಳ ಹಿಂದಿನ ಚಿತ್ರದುರ್ಗದ ಕೋಟೆಯ ವಿಸ್ತಾರ

[illegible]

ಮತ್ತಿತರ ಅವಶೇಷಗಳನ್ನು ಈ ನಕ್ಷೆಯಲ್ಲಿ ನೋಡಬಹುದಾಗಿದೆ. ಈ ನಕ್ಷೆಯ ಮೂಲಕ ಇನ್ನು ಹೆಚ್ಚಿನ ಅಧ್ಯಯನಕ್ಕೆ ಅವಕಾಶವಿದೆ.

ಮೊಳಕಾಲ್ಮೂರು, ಬ್ರಹ್ಮಗಿರಿ ಮತ್ತು ಹೊಸದುರ್ಗ ಕೋಟೆಗಳು ಎರಡನೆಯ ವರ್ಗಕ್ಕೆ ಸೇರುತ್ತವೆ. ಇದೇ ರೀತಿ ಜಾನಕಲ್ಲು, ಭರಮಣ್ಣನಾಯಕನದುರ್ಗ, ವೇಣುಕಲ್ಲುಗುಡ್ಡ, ಸಿಂಗೇನಹಳ್ಳಿ, ಸಂತೇಗುಡ್ಡದ ಕೋಟೆಗಳು ಮೂರನೆಯ ವರ್ಗಕ್ಕೆ ಸೇರಿವೆ. ಬೂದಿಹಾಳು, ಹರ್ತಿಕೋಟೆ ಮತ್ತು ಮತ್ತೋಡು ಕೋಟೆಗಳು ಸ್ಥಳದುರ್ಗಗಳಾಗಿದ್ದು ಶಿಥಿಲಗೊಂಡಿವೆ. ಬೂದಿಹಾಳು ಕೋಟೆಯ ರಚನೆಯನ್ನು ಕಂದಕ, ಅಳಿದುಳಿದಿರುವ ಬುರುಜುಗಳು ಹಾಗೂ ಸಾಹಿತ್ಯಾಧಾರವನ್ನು ಆಧರಿಸಿ ಗುರುತಿಸಲು ಸಾಧ್ಯವಾಗಿದೆ. ಹರ್ತಿಕೋಟೆ ಮತ್ತು ಮತ್ತೋಡು ಕೋಟೆಗಳು ಪೂರ್ಣವಾಗಿ ನಾಶಗೊಂಡಿರುವುದರಿಂದ ಆ ಪಾಳೆಯಗಾರರ ರಾಜಕೀಯ ಚರಿತ್ರೆಯನ್ನಷ್ಟೇ ಅಭ್ಯಸಿಸಲು ಸಾಧ್ಯವಾಗಿದೆ. ಹಾಗಾಗಿ ಮತ್ತೋಡು ಮತ್ತು ಹರ್ತಿಕೋಟೆಯಲ್ಲಿ ಅಳಿದುಳಿದಿರುವ ರಕ್ಷಣಾಸಂಬಂಧಿ ಸ್ಮಾರಕಗಳನ್ನು ಮಾತ್ರ ಸಾಂದರ್ಭಿಕವಾಗಿ ಚರ್ಚಿಸಲಾಗಿದೆ.

ಜಿಲ್ಲೆಯ ಯಾವುದೇ ಕೋಟೆಗಳು ವಾಸ್ತುಶಾಸ್ತ್ರಕ್ಕೆ ಅನುಗುಣವಾಗಿ ನಿರ್ಮಾಣವಾಗಿಲ್ಲ. ಸಾಮಾನ್ಯವಾಗಿ ಈ ಕೋಟೆಗಳು ಅಲ್ಲಿನ ಭೌಗೋಳಿಕ ಲಕ್ಷಣಗಳಿಗೆ ಅನುಗುಣವಾಗಿ ನಿರ್ಮಾಣ ಗೊಂಡಿರುವುದು ಗಮನಾರ್ಹ ಸಂಗತಿ. ಅದೇ ರೀತಿ ಜಿಲ್ಲೆಯ ಕೋಟೆಗಳು ವಿವಿಧ ಆಕಾರಗಳಲ್ಲಿ ರಚನೆಗೊಂಡಿರುವುದು ಮತ್ತೊಂದು ವಿಶೇಷ. ಉದಾಹರಣೆಗೆ ಐಮಂಗಲ ಮತ್ತು ರಾಮದುರ್ಗ ಕೋಟೆಯು ಆಯಾತಾಕಾರದಲ್ಲಿದ್ದರೆ, ಹರ್ತಿಕೋಟೆ ಮತ್ತು ಬೂದಿಹಾಳು ಕೋಟೆಗಳು ವೃತ್ತಾಕಾರದಲ್ಲಿವೆ. ತುರುವನೂರು ಕೋಟೆಯು ಚೌಕಾಕಾರವಾಗಿದ್ದು, ಉಳಿದ ಕೋಟೆಗಳು ಅಲ್ಲಿನ ಭೌಗೋಳಿಕ ಲಕ್ಷಣಕ್ಕೆ ಅನುಗುಣವಾಗಿ ನಿರ್ಮಾಣಗೊಂಡಿವೆ. ಹೀಗಾಗಿ ಹೆಚ್ಚು ಗಿರಿದುರ್ಗಗಳು ಕಂಡುಬರುತ್ತವೆ. ಬೆಟ್ಟಗುಡ್ಡಗಳನ್ನು ಅನುಸರಿಸಿ ಕಟ್ಟಲಾದ ಈ ಕೋಟೆಗಳು ಅನಿಯಮಿತಾಕಾರದಲ್ಲಿವೆ. ಈ ಕೋಟೆಗಳನ್ನು ನಿರ್ಮಿಸಲು ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳನ್ನು ಈ ಮುಂದಿನಂತೆ ವಿಂಗಡಿಸಬಹುದು.

೧. ಕಣಿವೆ ಪ್ರದೇಶಗಳಲ್ಲಿ ಪ್ರಾಕೃತಿಕ ಬಂಡೆಗಲ್ಲುಗಳನ್ನು ಸರಿಸಿ ನಿರ್ಮಿಸಿದ ತಡೆಗೋಡೆಗಳು.

೨. ಪ್ರಾಕೃತಿಕ ಬೆಟ್ಟಗುಡ್ಡಗಳನ್ನು ಕೂಡಿಸಿಕೊಂಡು ರಚಿಸಿರುವ ಕೋಟೆಗಳು.

೩. ದಿಂಡುಗಲ್ಲುಗಳಿಂದ ನಿರ್ಮಿಸಿದ ಕೋಟೆಗಳು.

[illegible]

[illegible]

[illegible]

[illegible]

[illegible]

೪. ಚಕ್ಕೆಕಲ್ಲುಗಳನ್ನು ಪೇರಿಸಿ ನಿರ್ಮಿಸಿದ ಕೋಟೆಗಳು.

೫. ಒರಟುಕಲ್ಲು ಮತ್ತು ಮಣ್ಣನ್ನು ಬಳಸಿಕೊಂಡು ನಿರ್ಮಿಸಿದ ಕೋಟೆಗಳು.

೬. ಇಟ್ಟಿಗೆಯಿಂದ ನಿರ್ಮಿಸಿರುವ ಕೋಟೆಗಳು.

ಹೀಗೆ ವಿವಿಧ ರೀತಿಯ ಕೋಟೆಗಳಿರುವುದನ್ನು ಕಾಣುತ್ತೇವೆ. ಇವುಗಳಲ್ಲಿ ಕೆಲವು ಕೋಟೆಗಳು ಜೀರ್ಣೋದ್ಧಾರಗೊಂಡಿರುವುದಲ್ಲದೆ ಕಾಲಕಾಲಕ್ಕೆ ವಿಸ್ತಾರಗೊಂಡಿವೆ.

ಸಾಂಪ್ರದಾಯಿಕ ಶಸ್ತ್ರಗಳನ್ನು ಹೊರತುಪಡಿಸಿ, ಹೊಸ ಶಸ್ತ್ರಗಳ ಬಳಕೆ ಮತ್ತು ಯುದ್ಧತಂತ್ರಕ್ಕೆ ಅನುಗುಣವಾಗಿ ರಕ್ಷಣಾ ವಾಸ್ತುರಚನೆಗಳಲ್ಲಿ ಬದಲಾವಣೆಗಳನ್ನು ಗುರುತಿಸಬಹುದು. ಉದಾಹರಣೆಗೆ ಪ್ರಾರಂಭದಲ್ಲಿದ್ದ ಒಂದು ಕೋಟೆಕಿಂಡಿಯ ಬದಲಿಗೆ, ಒಂದೇ ಕಿಂಡಿಯಲ್ಲಿ ಅನೇಕ ಕಿಂಡಿಗಳನ್ನು ರಚಿಸಿರುವುದು. ಇದೇ ರೀತಿ ಎತ್ತರವಾದ ಬಂಡೆಗಳ ಮೇಲೆ ಬುರುಜು ಬತೇರಿಗಳನ್ನು ನಿರ್ಮಿಸಿ, ಮೇಲೇರಲು ಕಲ್ಲನ್ನು ಕೊರೆದು ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಈ ಸ್ಥಳಗಳಲ್ಲಿ ಮುಂಜಾಗ್ರತೆಯ ಕ್ರಮವಾಗಿ ಮದ್ದುಗುಂಡುಗಳನ್ನು ಸಂಗ್ರಹಿಸಲು ಮದ್ದಿನಮನೆಗಳನ್ನು ನಿರ್ಮಿಸಲಾಗಿದೆ. ಮದ್ದು ಅರೆಯುವ ಕಲ್ಲು, ಪಹರೆಗೃಹ, ಕೋಟೆಗೋಡೆಯ ಮೇಲೆ ಗಾರೆಯಿಂದಾವೃತ್ತವಾದ ಮೆಟ್ಟಿಲು, ಮತ್ತು ಬಾಗಿಲ ಹತ್ತಿರವಿರುವ ಕಲ್ಲುಗಳನ್ನು ಕಬ್ಬಿಣದ ಸರಳುಗಳಿಂದ ಬೆಸೆದಿರುವುದು ರಕ್ಷಣಾ ವಾಸ್ತುಶಿಲ್ಪದಲ್ಲಿನ ವಿನೂತನ ಬೆಳವಣಿಗೆಯೆನ್ನಬಹುದು.

ಕೋಟೆಗೋಡೆ ಮತ್ತು ಬುರುಜುಗಳ ನಿರ್ಮಾಣದಲ್ಲಿ ಹಾಳುಬಿದ್ದ ಊರಿನ ಮಣ್ಣನ್ನು ಬಳಸಿದ್ದಾರೆ. ಈ ಮಣ್ಣಿನ ಗೋಡೆಗಳಲ್ಲಿ ಪ್ರಾಚೀನ ಮಡಕೆ, ಮೂಳೆ, ಬಳೆಚೂರುಗಳನ್ನು ಕಾಣಬಹುದು. ಈಗಲೂ ಗ್ರಾಮೀಣ ಪ್ರದೇಶದಲ್ಲಿ ಮನೆಗಳ ಗೋಡೆ ನಿರ್ಮಾಣಕ್ಕೆ ಹಳೆ ಊರಿನ ಮಣ್ಣನ್ನು ಬಳಸುತ್ತಾರೆ. ಏಕೆಂದರೆ ಈ ಮಣ್ಣು ಕೃಷಿಗೆ ಬಳಸದೇ ಇರುವುದರಿಂದ ಹೆಚ್ಚು ಶಕ್ತಿಯುತವಾಗಿರುತ್ತದೆ ಹಾಗೂ ಜಿಗುಟುತನದಿಂದ ಕೂಡಿರುತ್ತದೆ.

ಭೌಗೋಳಿಕವಾಗಿ ಚಿತ್ರದುರ್ಗವು ಕರ್ನಾಟಕದ ಮಧ್ಯಭಾಗದಲ್ಲಿದೆ. ಉತ್ತರ ಮತ್ತು ದಕ್ಷಿಣ ಕರ್ನಾಟಕದ ಒಡೆತನಕ್ಕಾಗಿ ಆಯಕಟ್ಟಿನ ಸ್ಥಳವನ್ನಾಗಿ ಮಾಡಿಕೊಂಡಿರುವುದು ಇದುವರೆಗೆ ದೊರೆತ ಶಾಸನಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರ ಪತನದ ನಂತರ ಈ ಭಾಗವನ್ನು ನೇರವಾಗಿ ಆಳಿದ ಪಾಳೆಯಗಾರರ ಕಾಲದಲ್ಲಿ ಹೆಚ್ಚು ಕೋಟೆ-ಕೊತ್ತಲಗಳು ನಿರ್ಮಾಣಗೊಂಡಿರುವುದು ಗಮನಾರ್ಹ. ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದವರಲ್ಲಿ ಚಿತ್ರದುರ್ಗ, ಹರತಿ, ಹಟ್ಟಿ, ಮತ್ತೋಡು ಮತ್ತು ಬೂದಿಹಾಳು

ಪಾಳೆಯಗಾರರು ಮುಖ್ಯವಾಗಿದ್ದಾರೆ. ಈ ಪಾಳೆಯಗಾರರಲ್ಲಿ ಆರ್ಥಿಕ ಮತ್ತು ರಾಜಕೀಯವಾಗಿ ಪ್ರಮುಖರಾಗಿದ್ದವರೆಂದರೆ ಚಿತ್ರದುರ್ಗದ ಪಾಳೆಯಗಾರರು. ಇವರು ತಮ್ಮ ಆಡಳಿತಾವಧಿಯಲ್ಲಿ ಅನೇಕ ಕೋಟೆಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಚಿತ್ರದುರ್ಗ, ಹೊಸದುರ್ಗ, ಭರಮಣ್ಣನಾಯಕನದುರ್ಗ, ವೇಣುಕಲ್ಲುಗುಡ್ಡ, ಭರಮಗಿರಿ, ಸಿದ್ದವ್ವನದುರ್ಗ, ಸಿಂಗೇನಹಳ್ಳಿ, ಐಮಂಗಲ ಕೋಟೆಗಳು ಮುಖ್ಯವಾಗಿವೆ. ಹರ್ತಿಕೋಟೆ, ಮತ್ತೋಡು ಮತ್ತು ಬೂದಿಹಾಳು ಪಾಳೆಯಗಾರರು ಸಹ ತಮ್ಮ ತಮ್ಮ ಪ್ರದೇಶಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದಾರೆ.

ಚಿತ್ರದುರ್ಗದ ಕೋಟೆಯನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲ ಕೋಟೆಗಳ ಗಾತ್ರ ರಚನೆ ಮತ್ತು ವಿನ್ಯಾಸವನ್ನು ಗಮನಿಸಿದರೆ, ಇವು ಯಾವುದೇ ಹೊರಗಿನ ಪ್ರಬಲ ಆಕ್ರಮಣಗಳನ್ನು ಎದುರಿಸಲು ನಿರ್ಮಾಣವಾದ ಕೋಟೆಗಳಲ್ಲವೆಂಬುದು ಸುಸ್ಪಷ್ಟ. ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಪಾಳೆಯಗಾರರಲ್ಲಿ ಪರಸ್ಪರ ದ್ವೇಷ, ಅಸೂಯೆಗಳು ತಲೆದೋರಿ, ಅಂತಃಕಲಹಗಳು ಹೆಚ್ಚಾಗಿದ್ದವೆಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಈ ನಿಟ್ಟಿನಲ್ಲಿ ತಮ್ಮ ಆಳ್ವಿಕೆ ಹಾಗೂ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ಗಡಿದುರ್ಗಗಳನ್ನು ನಿರ್ಮಿಸಿ ರಕ್ಷಣಾತ್ಮಕ ಕಾರ್ಯಗಳನ್ನು ಕೈಗೊಂಡಿದ್ದಾರೆ. ಈ ಕೋಟೆಗಳು ಸ್ಥಳೀಯ ಆಕ್ರಮಣ ಇಲ್ಲವೆ ವಿರೋಧವನ್ನು ಎದುರಿಸಲು ನಿರ್ಮಿಸಿಕೊಂಡ ಕೋಟೆಗಳೆಂಬುದು ಗಮನಾರ್ಹ. ಇಂತಹ ಪಾಳೆಯಗಾರರು ತಮ್ಮ ಆರ್ಥಿಕ ಶಕ್ತಿಗನುಗುಣವಾಗಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಕೊಂಡು ಕೋಟೆಗಳನ್ನು ನಿರ್ಮಿಸಿದ್ದಾರೆ. ಈ ಕೋಟೆಗಳು ಆಯಾಯ ಅರಸರ ಆಳ್ವಿಕೆಯ ಸಾಮರ್ಥ್ಯಕ್ಕೆ ಓಡಿದ ಕೈಗನ್ನಡಿಗಳಾಗಿವೆ.

ಪ್ರಸ್ತುತ ಅಧ್ಯಯನದಲ್ಲಿ ರಕ್ಷಣಾ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ, ವಿಶೇಷವಾಗಿ ಅಸಂಖ್ಯಾತ ಕಾವಲುಗೋಪುರಗಳನ್ನು ಗುರುತಿಸಲಾಗಿದೆ. ಈ ಕಾವಲುಗೋಪುರಗಳನ್ನು ಜಿಲ್ಲೆಯಾದ್ಯಂತ ಅಲ್ಲಲ್ಲಿ ಎತ್ತರವಾದ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಕೆಲವೆಡೆ ಎತ್ತರವಾದ ಬೆಟ್ಟಗುಡ್ಡ ಹಾಗೂ ಹೆಬ್ಬಂಡೆಗಳನ್ನು ಕಾವಲು ಗೋಪುರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಈ ಮೂಲಕ ಶತ್ರುಗಳ ಚಲನವಲನದ ಮಾಹಿತಿಯನ್ನು ಆಡಳಿತ ಕೇಂದ್ರಗಳಿಗೆ ತಲುಪಿಸುತ್ತಿದ್ದರೆಂದು ಹೇಳಬಹುದು. ಭರಮಣ್ಣನಾಯಕನ ದುರ್ಗ ಮತ್ತು ಚಿತ್ರದುರ್ಗದ ನಡುವೆ, ಹಿರೇಕಂದವಾಡಿ ಕಾವಲು ಬುರುಜಿನ ನಂತರ ಕಂದವಾಡಿ ಮತ್ತು ಬೆಟ್ಟದ ನಾಗೇನಹಳ್ಳಿಯ ಪ್ರಾಕೃತಿಕ ಬೆಟ್ಟಗುಡ್ಡಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಇದೇ ರೀತಿ ಚಿತ್ರದುರ್ಗದಿಂದ ಸನ್ನಿವಾಳ, ಥಳುಕಿನ ಗುಡ್ಡಗಳ ಮೂಲಕ ಮೊಳಕಾಲ್ಮೂರು ಪ್ರದೇಶಕ್ಕೆ ವೀಕ್ಷಣಾ

ಸಂಪರ್ಕವನ್ನು ಕಲ್ಪಿಸಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಚಿತ್ರದುರ್ಗ ಬೆಟ್ಟದ ಮೇಲೆ ಅನೇಕ ಬತೇರಿಗಳನ್ನು ರಚಿಸಲಾಗಿದೆ.

ಕೋಟೆ ನಿರ್ಮಾಣ ಮಾಡುತ್ತಿದ್ದ ಶ್ರಮಿಕ ವರ್ಗದವರ ಬಗ್ಗೆ ಯಾವುದೇ ಶಾಸನಾಧಾರಗಳ ಉಲ್ಲೇಖವಿಲ್ಲ. ಆದರೆ ಕೆಲವು ಜಾನಪದ ಗೀತೆ ಮತ್ತು ಕೈಫಿಯತ್ತುಗಳಲ್ಲಿ ಶ್ರಮಿಕ ಜನಾಂಗದ ಉಲ್ಲೇಖವನ್ನು ಕಾಣಬಹುದು.

ಒಡ್ಡರನು ಕರೆಸಿದ ದಿಬ್ಬವ ತೆಗೆಸಿದ
ದೊಡ್ಡ ಫಿರಂಗಿ ನಿಲ್ಲಿಸಿದ...
ಕೋಮಟಿಗರ ಕರೆಸಿದ ಕಾಲುವೆ ತೆಗೆಸಿದ
ಜೋಡಿ ಫಿರಂಗಿ ನಿಲ್ಲಿಸಿದ

ಈ ಜನಪದ ಗೀತೆಯಲ್ಲಿ ಕಾಲುವೆ ತೋಡಿದವರು, ದಿಬ್ಬವನ್ನು ನಿರ್ಮಿಸಿದವರು ಹಾಗೂ ಫಿರಂಗಿ ನಿಲ್ಲಿಸಿದವರು ಒಡ್ಡ ಜನಾಂಗದವರೆಂಬುದು ತಿಳಿದುಬರುವ ಸಂಗತಿ. ಶ್ರಮಿಕ ಜನಾಂಗದವರಲ್ಲಿ ಈ ಜನಾಂಗವು ಪ್ರಮುಖವಾಗಿದೆ. ಚಿತ್ರದುರ್ಗ ಜಿಲ್ಲೆಯಾದ್ಯಂತ ಈಗಲೂ ಅಧಿಕ ಸಂಖ್ಯೆಯಲ್ಲಿ ಈ ಜನಾಂಗದವರಿರುವುದು ಗಮನಾರ್ಹ. ಇವರಲ್ಲಿ ಕಲ್ಲುಒಡ್ಡರು ಮತ್ತು ಮಣ್ಣುಒಡ್ಡರು ಎಂಬ ಎರಡು ವರ್ಗಗಳಿವೆ. ಈ ಎರಡು ವರ್ಗದವರು ಕೋಟೆ ನಿರ್ಮಾಣದಲ್ಲಿ ಪ್ರಧಾನ ಪಾತ್ರವಹಿಸಿದ್ದರೆನ್ನಬಹುದು. ಚಿತ್ರದುರ್ಗದ ಪಾಳೆಯಗಾರರು ಕಣಕುಪ್ಪೆ ಕೋಟೆಯನ್ನು ಕಟ್ಟುವಾಗ ಕಾಮಾಟಿಗಳನ್ನು ಕರೆಸಿ, ಕೋಟೆ ಕಟ್ಟಿಸಿದ ಉಲ್ಲೇಖ ಕೈಫಿಯತ್ತಿನಲ್ಲಿದೆ. ಕೋಟೆ ಕಟ್ಟುವ ಕಾರ್ಯ ಮುಗಿದ ಮೇಲೆ ಕಾಮಾಟಿಗರಿಗೆ ಊಟೋಪಚಾರ ಮಾಡಿಸಿ, ಉಡುಗೊರೆ ತೊಡಿಸಿ, ಗೌರವಿಸಲಾಗುತ್ತಿತ್ತು.

ರಾಮದುರ್ಗ ಮತ್ತು ಜಾನಕಲ್ಲುಗುಡ್ಡ ಕೋಟೆ ಬಂಡೆಗಳ ಮೇಲೆ ಶ್ರಮಿಕವರ್ಗದವರು ಶ್ರಮಿಸಿದ ದಿನಗಳ ಸಂಖ್ಯೆಗಳೆನ್ನಬಹುದಾದ ಗೆರೆಗಳಿವೆ. ಈ ಗೆರೆಗಳ ಪ್ರಾರಂಭದಲ್ಲಿ ಒಂದು ಅಕ್ಷರವಿರುವುದನ್ನು ಗಮನಿಸಿದರೆ ಬಹುಶಃ ಇವು ಕೆಲಸ ಮಾಡಿದ ವ್ಯಕ್ತಿಯ ಹೆಸರಿನ ಪ್ರಾರಂಭದ ಅಕ್ಷರವಿರಬಹುದು. ಈ ಗೆರೆಗಳು ಶ್ರಮಿಕವರ್ಗದವರು ಶ್ರಮಿಸಿದ ದಿನಗಳನ್ನು ಗುರುತಿಸುತ್ತವೆಂದು ಹೇಳಬಹುದಾದರೂ ಇನ್ನೂ ಇವುಗಳ ಬಗೆಗೆ ಅಧ್ಯಯನ ನಡೆಯಬೇಕಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಮಿತಿಗಳನ್ನು ಸಹ ಕಂಡುಕೊಳ್ಳಲಾಗಿದೆ. ಅವುಗಳೆಂದರೆ ಕೆಲವು ಕೋಟೆಗಳ ಕಾಲ ಮತ್ತು ನೆಲೆಯನ್ನು ಗುರುತಿಸುವಲ್ಲಿ ಸಾಧ್ಯವಾಗದಿರುವುದು. ಕೋಟೆಗಳು ಕಾಲಕಾಲಕ್ಕೆ ಜೀರ್ಣೋದ್ಧಾರಗೊಂಡ ಪರಿಣಾಮವಾಗಿ, ಅವುಗಳ ಕಾಲಮಾನವನ್ನು ಗುರುತಿಸುವುದು ಕಷ್ಟಕರ. ಅದೇ

[illegible]

ರೀತಿ ಅನೇಕ ಕೋಟೆಗಳು ಇಂದು ನೆಲಸಮಗೊಂಡಿವೆ. ಅಂತಹ ಕೋಟೆಗಳ ಕಾಲ, ನೆಲೆ ಮತ್ತು ನಿರ್ಮಾಣ ಸ್ವರೂಪವನ್ನು ಗ್ರಹಿಸಲು ಸಾಧ್ಯವಾಗುತ್ತಿಲ್ಲ. ಇನ್ನು ಕೋಟೆಗಳ ನಿರ್ಮಾಣ ಕುರಿತಂತೆ, ಆಧಾರಗಳ ಕೊರತೆ ಎದ್ದು ಕಾಣುತ್ತದೆ. ಹಾಗಾಗಿ ಕೋಟೆಗಳ ನಿರ್ಮಾಣ, ವೆಚ್ಚ, ಅವಧಿ, ನಿರ್ಮಾಪಕ ಮೊದಲಾದ ಮಾಹಿತಿಗಳು ಲಭ್ಯವಾಗಿಲ್ಲ.

ಒಟ್ಟಾರೆ ಈ ಮೇಲಿನ ಅಧ್ಯಯನದಿಂದ, ಚಿತ್ರದುರ್ಗ ಜಿಲ್ಲೆಯಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಬೆಳೆದುಬಂದ ರಕ್ಷಣಾ ವಾಸ್ತುಶಿಲ್ಪದ ಬೆಳವಣಿಗೆ, ಲಕ್ಷಣ, ಶೈಲಿ ಮತ್ತು ಸ್ವರೂಪವನ್ನು ಕಂಡುಕೊಳ್ಳಲು ಯತ್ನಿಸಲಾಗಿದೆ. ಆ ಮೂಲಕ ಸ್ಥಳೀಯ ಆಡಳಿತ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಗ್ರಹಿಸಲು ಸೂಚನೆಗಳು ದೊರೆಯುತ್ತವೆ. ಸ್ಥಳೀಯವಾಗಿ ದೊರೆಯುವ ವಿವಿಧ ಕಟ್ಟಡ ಸಾಮಗ್ರಿಗಳನ್ನೇ ಬಳಸಿಕೊಂಡು ರಕ್ಷಣಾ ಕಟ್ಟಡಗಳನ್ನು ನಿರ್ಮಿಸಿರುವುದು ಮಹತ್ವದ ಸಂಗತಿ. ಚಿತ್ರದುರ್ಗ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪದ ಸ್ವರೂಪವನ್ನು ಅಲ್ಲಿನ ಭೌಗೋಳಿಕ ಲಕ್ಷಣಗಳೇ ನಿರ್ಧರಿಸಿವೆ. ಒಟ್ಟಿನಲ್ಲಿ ಪರಿಸರಕ್ಕೆ ಧಕ್ಕೆಯಾಗದಂತೆ ಕೋಟೆಕೊತ್ತಲಗಳು ನಿರ್ಮಾಣಗೊಂಡು ಸ್ಥಳೀಯ ಆಡಳಿತವನ್ನು ವ್ಯವಸ್ಥೆಗೊಳಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸಿವೆ.

❑❑

ಅನುಬಂಧ

ಭಾರತೀಯ ಕೋಟೆಗಳ ವಿವಿಧ ಪ್ರಕಾರಗಳು

	೧	೨	೩	೪	೫	೬	೭	೮	೯	೧೦	೧೧
ಪ್ರಾಚೀನ ವಾಸ್ತು ಗ್ರಂಥಗಳು ಕೋಟೆಯ ಪ್ರಕಾರಗಳು	ಮಹಾಭಾರತ	ಮನುಸ್ಮೃತಿ	ಕೌಟಿಲ್ಯನ ಅರ್ಥಶಾಸ್ತ್ರ	ಕಾಮಾಂಧಕನ ನೀತಿಸಾರ	ಶುಕ್ರ ನೀತಿಸಾರ	ಮಾನಸೋಲ್ಲಾಸ	ಮಾನಸಸಾರ	ವಾಸ್ತುವಿಶ್ವಕರ್ಮ ಪ್ರಕಾಶ	ಕೋಟಾ ಚಕ್ರಶಾಸ್ತ್ರ	ರಾಜನೀತಿ ರತ್ನಾಕರ	ದೇವದನ್ಯ ವಿಲಾಸ
ದನ್ವದುರ್ಗ	ದನ್ವದುರ್ಗ	ಧನುರ್ದುರ್ಗ	ನಿರುಧಕ	ಧನ್ವನ	ಧನ್ವನ	ಮರುದುರ್ಗ	---	---	---	---	---
ಜಲದುರ್ಗ	ಅಬುದುರ್ಗ	ಅಬುದುರ್ಗ	ಅಂತರ್‌ದ್ವೀಪ	ಔದುಕ	ಜಲದುರ್ಗ	ಜಲದುರ್ಗ	ಸಲಿಲದುರ್ಗ	ಸಲಿಲದುರ್ಗ	ಜಲಕೋಟೆ	ಅಬುದುರ್ಗ	ಜಲದುರ್ಗ
ವನದುರ್ಗ	ವನದುರ್ಗ	ವರಕ್ಷ್ಯದುರ್ಗ	ಪರ್ವತದುರ್ಗ	ವರ್ಕ್ಸದುರ್ಗ	---	ವನದುರ್ಗ	ವನದುರ್ಗ	ವನದುರ್ಗ	---	ವರಕಶದುರ್ಗ	ವನದುರ್ಗ
ಗಿರಿದುರ್ಗ	ಗಿರಿದುರ್ಗ	ಗಿರಿದುರ್ಗ	ಗಿರಿದುರ್ಗ	ಪರ್ವತದುರ್ಗ	ಗಿರಿದುರ್ಗ	ಗಿರಿದುರ್ಗ	ಗಿರಿದುರ್ಗ	ಗಿರಿದುರ್ಗ	ಗಿರಿದುರ್ಗ	ಗಿರಿದುರ್ಗ	ಗಿರಿದುರ್ಗ
ಸ್ಥಳದುರ್ಗ	ಮಹಿದುರ್ಗ	ಮಹಿದುರ್ಗ	ದ್ಯಾನನದುರ್ಗ	---	---	ಮೃತಿಕದುರ್ಗ	ವನದುರ್ಗ	---	ಮೃಣ್‌ದುರ್ಗ	ಮಹಿದುರ್ಗ	---
ಮಾನವನಿರ್ಮಿತದುರ್ಗ	ಮನುಸ್ಯದುರ್ಗ	ನೃದುರ್ಗ	---	---	---	ನರದುರ್ಗ	---	---	---	ನರದುರ್ಗ	---
ದೇವದುರ್ಗ	---	---	---	---	---	---	ದೇವದುರ್ಗ	ದೇವದುರ್ಗ	ದೈವತದುರ್ಗ	---	---
ಕಾಳಗದುರ್ಗ	---	---	---	---	ಸೈನ್ಯದುರ್ಗ	---	---	---	ಯುದ್ಧದುರ್ಗ	---	---
ಪಂಕದುರ್ಗ	---	---	---	---	---	---	---	ಪಂಕದುರ್ಗ	ಪಂಕದುರ್ಗ	---	ಕರದಂದುರ್ಗ
ಕೃತ್ರಿಮದುರ್ಗ	---	---	---	---	---	---	---	---	---	---	ಪೌರುಷದುರ್ಗ
ಮಿಶ್ರದುರ್ಗ	---	---	---	---	---	---	ಮಿಶ್ರದುರ್ಗ	ಮಿಶ್ರದುರ್ಗ	ಮಿಶ್ರದುರ್ಗ	---	---
ಔಪಕದುರ್ಗ	---	---	---	---	---	---	ಬಾಹುದುರ್ಗ	ಪರಿಘುದುರ್ಗ	---	---	---

ಪದಕೋಶ

ಅಂಬುಗಂಡಿ : ಬಾಣಬಂದೂಕುಗಳನ್ನು ಪ್ರಯೋಗಿಸಲು ಮಾಡಿದ ಕೋಟೆಗೋಡೆಯಲ್ಲಿ ರಚಿಸಲಾದ ರಂಧ್ರ

ಅಗಸೆ : ಊರ ಹೆಬ್ಬಾಗಿಲು

ಅಗಳು : ಕೋಟೆಯ ಸುತ್ತಲೂ ಅಗೆದ ತಗ್ಗು, ಕಂದಕ

ಅಟ್ಟಾಲಕ : ಕೋಟೆಗೋಡೆಯ ಮೇಲೆ ಸ್ವಲ್ಪ ಎತ್ತರವಾಗಿ ನಿರ್ಮಿಸಿದ ವೇದಿಕೆ

ಅಡ್ಡಣ : ಗುರಾಣಿ

ಆಳ್ವೇರಿ : ಕೋಟೆಗೋಡೆ

ಇನಾಂ : ಬಹುಮಾನ

ಇಳಿವೋರೆ : ಕೋಟೆಗೋಡೆಯ ಭದ್ರತೆಗಾಗಿ ಹಾಕಿರುವ ಮಣ್ಣಿನ ದಿಬ್ಬ

ಉಡಾಣೆ : ಹರಿಸು

ಕಣಜ : ಧಾನ್ಯ ಸಂಗ್ರಹಿಸುವ ಸ್ಥಳ

ಕಛೇರಿ : ಕಾರ್ಯಾಲಯ

ಕಾರಖಾನೆ : ಕಾರ್ಯಾಗಾರ

ಕಾಮಾಟಿ : ಕೆಲಸಗಾರ

ಕಿಲ್ಲೆ : ಕೋಟೆ

ಕೇತು : ಧ್ವಜ

ಕೋಷ್ಠಾಗಾರ : ಉಗ್ರಾಣದ ಕೊಠಡಿ

ಕೊತ್ತಳ : ಬುರುಜು

ಕೊಳವಿ : ಕೋವಿ

ಗಡ : ಕೋಟೆ

ಗುಮ್ಮ : ಕೋಟೆ ಕಾಳಗದಲ್ಲಿ ಕೋಟೆಯ ಗೋಡೆಯನ್ನು ಒಡೆಯಲು ಉಪಯೋಗಿಸುತ್ತಿದ್ದ ಒಂದು ಯಂತ್ರ

ಗೆಗ್ಗೆ : ಕೋಟೆಯನ್ನು ಹತ್ತುವ ವಿಶೇಷ ಸಾಧನ

ಗೊಂಟು : ಕೋಟೆಗೋಡೆಗಳು ಒಂದಕ್ಕೊಂದು ಸಂಧಿಸುವ ಸ್ಥಳ

ಗೋಲಿ : ಯುದ್ಧ

ಝುಂಡಾ : ಭಾವುಟ

ಠಾಣ್ಯ : ಸೈನ್ಯದ ಶಿಬಿರ

ಡೇರೆ : ಗುಡಾರ, ಬಿಡಾರ

ಡೆಂಕಣಿ : ಒಂದು ಬಗೆಯ ಆಯುಧ

ತಲವಾರ್ : ಕತ್ತಿ

ತವಗ : ಕೋಟೆಯಲ್ಲಿ ಫಿರಂಗಿಯನ್ನಿಡಲು ಮಾಡಿದ ವಿಶೇಷ ಜಗಲಿ

ತಾಕೀತು : ಸೂಚನೆ

ತುಕಡಿ : ಸೇನಾದಳ ವಿಭಾಗ

ತುಗ್ಗಲಿ : ಒಂದು ಜಾತಿಯ ಮರ

ತೆನೆ : ಕೋಟೆಯ ಪ್ರಾಕಾರದ ತುದಿಯ ಗಾಲಿಯಾಕಾರದ ರಚನೆ

ದಂಪು : ಸೇನೆ ಅಥವಾ ತುಕಡಿ

ದರೋಬಸ್ತು : ಸನ್ನದ್ಧ

ದರಬಾರು : ಕರಣಿಕರು

ದರ್‍ವಾಜ : ಬಾಗಿಲು

ದುರ್ಬೀನು : ದೂರದರ್ಶಿ

ದಿವಾಣ : ಪ್ರಧಾನಮಂತ್ರಿ

ದಿಡ್ಡಿ : ಸಣ್ಣಬಾಗಿಲು

ನಿಷಾನಿ : ಚಿನ್ಹೆ ಅಥವಾ ಗುರುತು

ಪತೆದರ್‍ವಾಜ : ಜಯದ ಬಾಗಿಲು

ಪಟ : ಧ್ವಜ

ಪರಿಘ : ದಂಡದಂತೆ ಉದ್ದವಾಗಿರುವ ಒಂದು ಆಯುಧ

ಪಾಳೆಯ : ಶಿಬಿರ ಅಥವಾ ಬೀಡು

ಪ್ರಾಕಾರ : ಸುತ್ತುಗೋಡೆ

ಫಿರಂಗಿ : ಗುಂಡು ಹಾರಿಸುವ ಬೃಹತ್‌ಗಾತ್ರದ ತುಪಾಕಿ

ಪುಲುಮೊಗ : ಕೋಟೆಯ ಹೆಬ್ಬಾಗಿಲು

ಫೌಜು : ಸೇನೆ

ಬತೇರಿ : ಕೋಟೆಯ ಮೇಲಿನ ತೋಪುಖಾನೆ

ಬುರುಜು : ಕೋಟೆಯ ಪ್ರಾಕಾರದ ಮೇಲೂ ಗೋಪುರದ ತುದಿಯಲ್ಲಿ ಕಟ್ಟುವ ವರ್ತುಲಾಕಾರದ ಕಟ್ಟಡ

ಮೊಕ್ಕಾಂ : ಬೀಡು

ಲಡಾಯಿ : ಯುದ್ಧ

ಲಾಲ್ : ಕೆಂಪು

ಸಿಡಿತಲೆ : ಒಂದು ಪ್ರಕಾರದ ಬಲಿ

ಹರಿಗೆ : ಗುರಾಣಿ

ಹಗೇವು : ಧಾನ್ಯಗಳನ್ನು ತುಂಬಲು ನೆಲದಲ್ಲಿ ಮಾಡಿದ ಗುಳಿ

ಹುಡೇವು : ಕೊತ್ತಲ, ಬುರುಜು

ಹುಲಿಮೊಗ : ಕೋಟೆಯ ಹೆಬ್ಬಾಗಿಲು

ಗ್ರಂಥಸೂಚಿ

ಪ್ರಾಥಮಿಕ ಆಕರಗಳು - ಕನ್ನಡ

ಎಫಿಗ್ರಫಿಯ ಕರ್ನಾಟಿಕ, ಸಂ.೯

ಕಲಬುರ್ಗಿ ಎಂ.ಎಂ.(ಸಂ), ೧೯೯೪ : *ಕರ್ನಾಟಕದ ಕೈಫಿಯತ್ತುಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಬುರ್ಗಿ ಎಂ.ಎಂ.(ಸಂ), ೧೯೯೮ : *ಮಾನಸೋಲ್ಲಾಸ*(ಸೋಮೇಶ್ವರ), ಸಂ.೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕೃಷ್ಣಭಟ್ಟ ಕೆ.(ಅನು), ೧೯೭೨ : ಕೌಟಲ್ಯನ *ಅರ್ಥಶಾಸ್ತ್ರ*, ಸಮಾಜ ಪುಸ್ತಕಾಲಯ, ಧಾರವಾಡ

ದೇವೀರಪ್ಪ ಎಚ್.(ಸಂ), ೧೯೯೪ : *ರಾಮನಾಥ ಚರಿತ*, ಸಂ.೨ ಮತ್ತು ೩, ಮೈಸೂರ ವಿಶ್ವವಿದ್ಯಾನಿಲಯ

ಬಸವರಾಜ ಭೂಪಾಲ, ೧೯೯೯ : *ಶಿವತತ್ತ್ವರತ್ನಾಕರ*(ಸಂ.ಮಲ್ಲೇಪುರಂ ಜಿ.ವೆಂಕಟೇಶ) ಸಂ. ೧ ಮತ್ತು ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹೀಶವಾಡಿ(ಸಂ), ೧೯೭೬ : *ಸಮ್ಯಕ್ತ್ವ ಕೌಮುದಿ*(ಮಂಗರಸಕವಿ), ಕನ್ನಡ ಅಧ್ಯಯನ ಪೀಠ, ಧಾರವಾಡ

ವಿರುಪಾಕ್ಷ ಪಂಡಿತ, ೧೯೩೪ : *ಚೆನ್ನಬಸವಪುರಾಣ*, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶಾಮಶಾಸ್ತ್ರಿ ಆರ್.(ಸಂ), ೧೯೭೩ : *ಕಂಠೀರವ ನರಸರಾಜವಿಜಯಂ*(ಗೋವಿಂದ ವೈದ್ಯ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಶಾಮಶಾಸ್ತ್ರಿ ಆರ್.(ಸಂ), ೧೯೭೩ : *ಕೆಳದಿನೃಪ ವಿಜಯಂ*(ಲಿಂಗಣ್ಣಕವಿ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಶ್ರೀಮದ್‌ಜಗದ್ಗುರು ಶ್ರೀ ಕೂಡ್ಲೀ ಶೃಂಗೇರಿ ಸಂಸ್ಥಾನ(ಸಂ), ೧೯೬೪ : *ಪ್ರಾಚೀನ ಶಾಸನ ಲೇಖನ ಸಂಗ್ರಹ*, ಭಾಗ-೧, ರಜತೋತ್ಸವ ಕಾಣಿಕೆ, ಶ್ರೀ ಕೂಡ್ಲೀ ಕ್ಷೇತ್ರ

ಹುಲ್ಲೂರು ಶ್ರೀನಿವಾಸ ಜೋಯಿಸರು(ಸಂ), ೧೯೬೮ : *ಚಿತ್ರದುರ್ಗದ ಬಖೈರು*, ತಳುಕಿನ ವೆಂಕಣ್ಣ ಸ್ಮಾರಕ ಗ್ರಂಥಮಾಲೆ, ಮೈಸೂರು

ಹಿರೇಮಠ ಆರ್.ಸಿ.(ಸಂ), ೧೯೭೩ : *ಮೋಹನ ತರಂಗಿಣಿ*(ಕನಕದಾಸರು), ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪೂರಕ ಗ್ರಂಥಗಳು - ಕನ್ನಡ

ಅನಂತಶರ್ಮ ರಾಳ್ಳಪಲ್ಲಿ, ೨೦೦೧ : *ಸಾಹಿತ್ಯ ಮತ್ತು ಜೀವನ ಕಲೆ*, ಮೈಸೂರು, ಕಾವ್ಯಾಲಯ, ಈರಣ್ಣ ಸಂ. ಸಿರುಮ ಸ್ಮರಣ ಸಂಚಿಕೆ, ಶ್ರೀಗೋಪಾಲಕೃಷ್ಣ ವಾಚನಾಯ ಮತ್ತು ೧೯೭೧, ಮನೋರಂಜನಾ ಕೇಂದ್ರ, ಶ್ರೀರಾಂಪುರ

ಅಶೋಕವರ್ಧನ, ೧೯೯೪ : *ಬೆಟ್ಟಗುಡ್ಡಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರೀಗೌಡ ಬೀಚನಹಳ್ಳಿ, ೨೦೦೦ : *ಕರಕುಶಲ ಕಲೆಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಬುರ್ಗಿ ಎಂ.ಎಂ., ೧೯೯೯ : *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಬುರ್ಗಿ ಎಂ.ಎಂ.(ಸಂ), ೧೯೯೪ : *ಗೊಲ್ಲಸಿರುಮನ ಚರಿತೆ,* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಲಬುರ್ಗಿ ಎಂ.ಎಂ.(ಸಂ), ೧೯೯೪ : *ಕರ್ನಾಟಕದ ಕೈಫಿಯತ್ತುಗಳು,* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಲಬುರ್ಗಿ ಎಂ.ಎಂ.(ಸಂ), ೧೯೯೪ : *ಸಾರಂಗಶ್ರೀ ಸ್ಮರಣ ಸಂಚಿಕೆ,* ಚೆನ್ನವೀರ ಸ್ವಾಮೀಜಿ, ಪ್ರತಿಷ್ಠಾನ, ಸಾರಂಗಮಠ, ಸಿಂಧಗಿ

ಕಲಬುರ್ಗಿ ಎಂ.ಎಂ., ೧೯೮೦ : *ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು,* ಐ.ಬಿ.ಎಚ್. ಬೆಂಗಳೂರು

ಕಲಬುರ್ಗಿ ಎಂ.ಎಂ.(ಸಂ), ೧೯೯೧ : *ಸಿರುಮನ ಚರಿತೆ,* ರಾಮಕವಿ, ಶಿವರಾತ್ರಿ ದೇಶಿಕೇಂದ್ರ, ಪುತ್ತೂರು, ಸಂಸ್ಥಾನಮಠ, ಮೈಸೂರು

ಕಲಬುರ್ಗಿ ಎಂ.ಎಂ.(ಸಂ), ೧೯೮೩ : *ಸಿರುಮಣ ನಾಯಕನ ಸಾಂಗತ್ಯ,* ವೀರಶೈವ ಅಧ್ಯಯನ ಸಂಸ್ಥೆ, ಗದಗ

ಕರ್ನಾಟಕ ಚರಿತ್ರೆ, ಸಂಪುಟಗಳು, ೧೯೯೫-೯೭ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುಮಾರಸ್ವಾಮಿ ಕೆ.ಎಸ್., ೧೯೯೬ : *ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕೃಷ್ಣರಾವ್ ಎಂ.ವಿ., ಕೇಶವಭಟ್ಟ ಎಂ., ೧೯೭೦ : *ಕರ್ನಾಟಕದ ಇತಿಹಾಸ ದರ್ಶನ,* ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು

ಕೃಷ್ಣಶರ್ಮ ಬೆಟಗೇರಿ, ೧೯೮೩ : *ಕರ್ನಾಟಕ ಜನಜೀವನ,* ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು

ಕೃಷ್ಣಮೂರ್ತಿ ಹನೂರು, ೧೯೯೩ : *ಮ್ಯಾಸಬೇಡರ ಸಂಸ್ಕೃತಿ,* ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕೃಷ್ಣಮೂರ್ತಿ ಹನೂರು, ೧೯೯೧ : *ಜನಪದ ಮತ್ತು ಬುಡಕಟ್ಟು ಗೀತೆಗಳು,* ರೇಖಾ ಪ್ರಕಾಶನ, ದಾವಣಗೆರೆ

ಕೃಷ್ಣಮೂರ್ತಿ ಪಿ.ವಿ., ವಸಂತಲಕ್ಷ್ಮೀ(ಸಂ), ೨೦೦೧ : *ಸೂರ್ಯಕೀರ್ತಿ,* ಡಾ.ಸೂರ್ಯನಾಥ್ ಕಾಮತರ ಅಭಿನಂದನ ಗ್ರಂಥ, ಬೆಂಗಳೂರು

ಕೃಷ್ಣಮೂರ್ತಿ ಕ.ರಾ.(ಸಂ), ೧೯೭೫ : *ಚಿತ್ರಕಲ್ಲು ಮದಕರಿ,* ಜಾನಪದ ಅಕಾಡೆಮಿ, ಬೆಂಗಳೂರು

ಕೃಷ್ಣಮೂರ್ತಿ ಕ.ರಾ.(ಸಂ), *ಪಾಳೆಯಗಾರರ ಪದಗಳು,* ಜಾನಪದ ಸಾಹಿತ್ಯ ಅಕಾಡೆಮಿ, ಮೈಸೂರು

ಕೃಷ್ಣ ಎಂ.ಹೆಚ್., ೧೯೫೩ : *ಕರ್ನಾಟಕದ ಪೂರ್ವ ಚರಿತ್ರೆ,* ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ

ಕೃಷ್ಣಯ್ಯ ಎ.ಡಿ.(ಸಂ), ೧೯೭೯ : *ಭಾರತದ ವೀರ ಮಹಿಳೆ ಒನಕೆ ಓಬವ್ವ,* ಹೇಮಂತ ಪ್ರಕಾಶನ, ಮೈಸೂರು

ಕುವೆಂಪು ಕೆ.ವಿ., *ಯುಗಯಾತ್ರಿ ಭಾರತೀಯ ಸಂಸ್ಕೃತಿ,* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಗಂಡುಗಲಿ ಟಿ.ಎನ್., ೧೯೯೫ : *ಪ್ರಮುಖ,* ಮದಕರಿ ಪ್ರಕಾಶನ, ಚಿತ್ರದುರ್ಗ

ಗಿರಿಜಾ ಟಿ., ೧೯೯೧ : *ಚಿತ್ರದುರ್ಗ ಜಿಲ್ಲಾದರ್ಶಿನಿ,* ರೇಖಾ ಪ್ರಕಾಶನ, ದಾವಣಗೆರೆ

ಗೋಪಾಲರಾವ್ ಎಚ್.ಎಸ್., ೧೯೯೪ : *ನಾಗಾಭಿನಂದನ,* ಎಂ.ಜಿ.ನಾರಾಯಣ್‌ರಾವ್ ಅಭಿನಂದನಾ ಸಮಿತಿ, ಬೆಂಗಳೂರು

ಗೋವಿಂದಮೂರ್ತಿ ದೇಸಾಯಿ, ೧೯೯೯ : *ಸವಣೂರು ನವಾಬರು,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ ಐತಾಳ, ೧೯೭೨ : *ಚೆಲುವು ಚೆಲ್ಲಿದಲ್ಲಿ,* ಸುರುಚಿ ಪ್ರಕಾಶನ, ಮೈಸೂರು

ಚನ್ನಬಸಪ್ಪ ಎಸ್.ಪಾಟೀಲ್, ೧೯೯೯ : *ಕರ್ನಾಟಕ ಕೋಟೆಗಳು,* ಸಂ.೧, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಿದಾನಂದಮೂರ್ತಿ ಎಂ., ೧೯೬೬ : *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಚಿದಾನಂದಮೂರ್ತಿ ಎಂ., ೧೯೯೩ : *ಹೊಸತು ಹೊಸತು,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚೆಲುವರಾಜು, ೨೦೦೦ : ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ತ.ರಾ.ಸು, ೨೦೦೧ : *ದುರ್ಗಾಸ್ತಮಾನ,* ಕಾವ್ಯಾಲಯ, ಮೈಸೂರು

ತೀ.ತಾ.ಶರ್ಮ, ೧೯೭೧ : *ಚಾರಿತ್ರಿಕ ದಾಖಲೆಗಳು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ದೀಪಾ, ೧೯೮೬ : *ಚಿತ್ರದುರ್ಗ ತಾಲೂಕು ದರ್ಶನ,* ಐ.ಬಿ.ಎಚ್. ಬೆಂಗಳೂರು

ದಿವಾಕರ ಆರ್.ಆರ್., ೧೯೯೨ : *ಕರ್ನಾಟಕದ ಪರಂಪರೆ,* ಭಾಗ ೧ ಮತ್ತು ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ನರಸಿಂಹಶಾಸ್ತ್ರಿ ಕೆ.ಎಲ್., ೧೯೪೯ : *ಶುಕ್ರನೀತಿಸಾರ,* ಶ್ರೀ ಮಜ್ಜಗದ್ಗುರು ಶ್ರೀ ಕೂಡ್ಲಿ ಶೃಂಗೇರಿ ಮಹಾಸಂಸ್ಥಾನ, ಚಿತ್ರದುರ್ಗ

ನಂಜಣ್ಣನವರ ಎಸ್.ಎಸ್., ೨೦೦೦ : *ಮಾನವ ಭೂಗೋಳಶಾಸ್ತ್ರ,* ವಿಜಯ ಪ್ರಕಾಶನ, ತೃತೀಯ ಮುದ್ರಣ, ಗದಗ

ನಾಗೇಗೌಡ ಎಚ್.ಎಲ್., : *ಪ್ರವಾಸಿ ಕಂಡ ಇಂಡಿಯಾ,* ಸಂ.೧,೮ ಮತ್ತು ೧೧

ಪರಮಶಿವಮೂರ್ತಿ ಡಿ.ವಿ., ೧೯೯೯ : *ಕನ್ನಡ ಶಾಸನಶಿಲ್ಪ,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪುಟ್ಟಣ್ಣ ಎಂ.ಎಸ್., ೧೯೨೪ : *ಚಿತ್ರದುರ್ಗದ ಪಾಳೆಯಗಾರರು,* ಕಾವ್ಯಾಲಯ, ಮೈಸೂರು

ಪುಟ್ಟಣ್ಣ ಎಂ.ಎಸ್., ೧೯೨೩ : *ಪಾಳೆಯಗಾರರ ಐದು ಉಪನ್ಯಾಸಗಳು,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪುರುಷೋತ್ತಮ ರಾಲ, ೧೯೯೭ : *ಕಂಬನಿಮಂಬಿದ ಕಲ್ಲುಗಳು,* ಸತ್ಯಪುರುಷ ಭದ್ರಾವತಿ

ಪ್ರಭಾಕರ ಎಸ್., ೧೯೯೯ : *ಮ್ಯಾಸಬೇಡರ ಕಥನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬಾಗೂರು ಆರ್.ನಾಗರಾಜಪ್ಪ, ೧೯೮೪ : *ಹೊಸದುರ್ಗ ಸುತ್ತ*, ಅಭಿವ್ಯಕ್ತ ವೇದಿಕೆ, ಹೊಸದುರ್ಗ

ಭೀಮಾರೆಡ್ಡಿ ಕೆ.ಎನ್., ೧೯೮೭ : *ಮೊಳಕಾಲ್ಮೂರು ತಾಲೂಕು ದರ್ಶನ*, ಐ.ಬಿ.ಎಚ್. ಬೆಂಗಳೂರು

ಮಹದೇವ ಸಿ., ೧೯೯೮ : *ವಿಜಯನಗರೋತ್ತರ ಕಾಲದಲ್ಲಿ ಬಳ್ಳಾರಿ ಪ್ರದೇಶದ ಗ್ರಾಮರಕ್ಷಣಾ ವಾಸ್ತು ಮತ್ತು ರಾಜಕೀಯ ಸ್ಥಿತಿಗತಿ*, ವಿಜಯನಗರ ಅಧ್ಯಯನ, ಸಂ.೨, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಮಲ್ಲಿಕಾರ್ಜುನಸ್ವಾಮಿ ಎಂ., ೧೯೭೫ : *ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು*, ಕರ್ನಾಟಕ ದರ್ಶನ

ಮಲ್ಲೇಪುರಂ ಜಿ.ವೆಂಕಟೇಶ್(ಸಂ), ೧೯೯೯ : *ಶಂಬಾಕೃತಿ ಸಂಪುಟ-೩*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಮುಕುಂದರೆಡ್ಡಿ ಮಾ.ನಾ., ೧೯೮೭ : *ಹಿರಿಯೂರು ತಾಲೂಕು ದರ್ಶನ*, ಐ.ಬಿ.ಎಚ್., ಬೆಂಗಳೂರು

ಮೀರಾಸಾಬಿಹಳ್ಳಿ ಶಿವಣ್ಣ, ೧೯೯೨ : *ದುರುಗ ಜಾನಪದ*, ಶೃತಿ ಪ್ರಕಾಶನ, ಬೆಂಗಳೂರು

ಮುದ್ದೇಬಿಹಾಳ, ೧೯೯೪ : *ಬೇಡನಾಯಕರ ಪಾಡು*

ರಂಗಪ್ಪ ಎಂ., ೧೯೩೬ : *ಮೊಳಕಾಲ್ಮೂರು ನುಂಕೆಮಲೆ ಪಾರಮಾರ್ಥ*, ಮೊಳಕಾಲ್ಮೂರು

ರಾಮೇಗೌಡ, ೧೯೯೨ : *ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು*, ಚಿತ್ರಕೂಟ, ಮೈಸೂರು

ರಮೇಶ ಬೆ.ಗೋ., ೧೯೮೫ : *ಸಂಪನ್ಮೂಲಗಳು ಮತ್ತು ಕೈಗಾರಿಕಾವಕಾಶಗಳು*, ಚಿತ್ರದುರ್ಗ ಜಿಲ್ಲೆ, ಐ.ಬಿ.ಎಚ್., ಬೆಂಗಳೂರು

ರಾಜಶೇಖರಪ್ಪ ಬಿ., ೨೦೦೧ : *ನಿರಂತರ ಶ್ರೀಲೋಕಪಾವನಿ ಪ್ರಕಾಶನ*, ಪಾಂಡವಪುರ

ರಾಜಶೇಖರಪ್ಪ ಬಿ., ೨೦೦೧ : *ದುರ್ಗಶೋಧನ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ರಾಜಶೇಖರಪ್ಪ ಬಿ., ೨೦೦೧ : *ಇತಿಹಾಸ ಕಥನ*, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು

ರಾಜಶೇಖರಪ್ಪ ಬಿ.(ಸಂ), ೧೯೯೫ : *ಸತ್ಯಶುದ್ಧಕಾಯಕ*, ಜಗದ್ಗುರು ಮುರುಘ ರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ

ರಾಜಶೇಖರಪ್ಪ ಬಿ.(ಸಂ), ೧೯೯೮ : *ದುರ್ಗಸಿರಿ*, ದುರ್ಗೋತ್ಸವ ಸ್ಮರಣ ಸಂಚಿಕೆ, ಚಿತ್ರದುರ್ಗ

ರಂಗರಾಜ ದೇವೇಂದ್ರಪ್ಪ, ೧೯೯೫ : *ಸುರಪುರ ಸಂಸ್ಥಾನ ಒಂದು ಅಧ್ಯಯನ*(ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲಕ್ಷ್ಮಣ್ ತೆಲಗಾವಿ(ಸಂ), ೧೯೭೭-೭೮ : *ಚಿನ್ಮೂಲಾದ್ರಿ*, ವಾರ್ಷಿಕ ಸಂಚಿಕೆ, ಮದಕರಿ ಬಳಗ ೧, ಮೈಸೂರು

ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ), ೧೯೭೬ : *ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು*, ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ

ಲಕ್ಷ್ಮಣ್ ತೆಲಗಾವಿ, ವೆಂಕಣ್ಣಚಾರ್ ಕೆ.(ಸಂ), ೧೯೭೯ : *ಐತಿಹಾಸಿಕ ಚಿತ್ರದುರ್ಗ*, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ

ಲಕ್ಷ್ಮಣ್ ತೆಲಗಾವಿ ಮತ್ತು ಇತರರು(ಸಂ), ೧೯೮೦ : *ಚಿತ್ರದುರ್ಗ ದರ್ಶಿನಿ*, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ

ಲಕ್ಷ್ಮಣ್ ತೆಲಗಾವಿ(ಸಂ), ೧೯೮೭ : *ಹರತಿಸಿರಿ*, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ

ಲಕ್ಷ್ಮಣ್ ತೆಲಗಾವಿ(ಸಂ), ೧೯೯೧ : *ಸಂಶೋಧನ*, ಡಾ.ಎಂ.ಚಿದಾನಂದಮೂರ್ತಿ ಅಭಿನಂದನಾ ಸಮಿತಿ, ಬೆಂಗಳೂರು

ಲಕ್ಷ್ಮಣ್ ತೆಲಗಾವಿ, ೧೯೯೭ : *ಇದು ಚಿತ್ರದುರ್ಗ*, ಸ್ವಾತಿ ಪ್ರಕಾಶನ, ಬೆಂಗಳೂರು

ಹುಲ್ಲೂರು ಶ್ರೀನಿವಾಸ ಜೋಯಿಸರು, ೧೯೭೭ : *ಸಿರುಮನೃಪಾಲ*, ಜಿಲ್ಲಾ ಇತಿಹಾಸ ಸಂಶೋಧನ ಮಂಡಳಿ, ಚಿತ್ರದುರ್ಗ

ಹುಲ್ಲೂರು ಶ್ರೀನಿವಾಸ ಜೋಯಿಸರು, ೧೯೪೧ : *ಗಂಡುಗಲಿ ಕುಮಾರರಾಮ*, ಮಿಂಚಿನಬಳ್ಳಿ, ಧಾರವಾಡ

ವಸು ಎಂ.ವಿ.(ಸಂ), ೨೦೦೧ : *ದಕ್ಷಿಣ ಕರ್ನಾಟಕದ ಅರಸು ಮನೆತನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೆಂಕಣ್ಣಚಾರ್ ಕೆ., ೧೯೮೨ : *ಹುಲ್ಲೂರು ಶ್ರೀನಿವಾಸ ಪಾಂಡುರಂಗ ಜೋಯಿಸರು*, ಚಿತ್ರದುರ್ಗ ಮಾರ್ಗದರ್ಶಿ, ಪ್ರಸನ್ನ ಪ್ರಕಾಶನ, ಚಿತ್ರದುರ್ಗ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨ : *ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಠಲರಾವ್ ಗಾಯಕ್‌ವಾಡ(ಅನು), ೨೦೦೩ : *ಲಜ್ಜಾಗೌರಿ*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೀರಣ್ಣ ದಂಡೆ(ಸಂ), ೧೯೯೨ : *ಜಾನಪದ ಕರ್ನಾಟಕ*, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ವಿಶ್ವೇಶ್ವರಪ್ಪ, ೧೯೭೫ : *ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು*, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವೀರಪ್ಪ ಎಂ., ೧೯೯೪ : *ಶ್ರೀವೀರ ಮಹೇಶ್ವರಿ ಅಮ್ಮಾಜಿಯವರ ಚರಿತ್ರೆ*, ಬೆಂಗಳೂರು

ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ, ೧೯೯೯ : *ಗಳಗನಾಥ ಕಾದಂಬರಿ*, ಸಂ.೨, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಣ್ಣಬಾಳಪ್ಪ ಹೊಸಮನಿ, ೧೯೭೯ : *ಐಸಿರಿ ಹಿರಿಯೂರು*, ಚೇತನಾ ಪ್ರಕಾಶನ, ಹಿರಿಯೂರು

ಸುಂದರ ಅ., ೧೯೭೩ : *ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ*, ಐ.ಬಿ.ಎಚ್., ಬೆಂಗಳೂರು

ಸೋಮಶೇಖರ್ ಎಸ್.ವೈ., ೧೯೯೯ : *ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ*(ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ವಾಮಿ ಜಿ.ಎಲ್., ೧೯೮೨ : *ಚಿತ್ರದುರ್ಗ ಡಿಸ್ಟ್ರಿಕ್ಟ್ ಕೈಪಿಡಿ*, ಜಿಲ್ಲಾ ಆಡಳಿತ ಚಿತ್ರದುರ್ಗ, ಪ್ರಸನ್ನ ಪ್ರಕಾಶನ, ಚಿತ್ರದುರ್ಗ

ವರದರಾಜ ಹುಯಿಲಗೋಳ(ಸಂ), ೧೯೮೭ : *ಭಾರತದ ಗ್ಯಾಸಟೇಯಿರ್ ಭಾರತ ದೇಶಕೋಶ ಸಂ.೨,* ಬೆಂಗಳೂರು

ಶಂಕರ್ ಎಸ್.ಅಥಣಿ, ಹು.ಶ್ರೀ.ಪಾಂಡುರಂಗಜೋಯಿಸ, ೧೯೮೮ : *ಚಿತ್ರದುರ್ಗ ಏಳು ಸುತ್ತಿನ ಕೋಟೆ,* ಜಯಭಾರತಿ ಪ್ರಕಾಶನ, ಚಿತ್ರದುರ್ಗ

ಶರ್ಮ ತಿ.ತಾ., ೧೯೭೧ : *ಚಾರಿತ್ರಿಕ ದಾಖಲೆಗಳು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಶಿವತಾರಕ ಕೆ.ಬಿ., ೨೦೦೧ : *ಕರ್ನಾಟಕದ ಪುರಾತತ್ವ ನೆಲೆಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೇಷಶಾಸ್ತ್ರಿ ಆರ್., ೧೯೮೨ : *ಕರ್ನಾಟಕದ ವೀರಗಲ್ಲುಗಳು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಶ್ರೀಕಂಠಯ್ಯ ಕೆ., ೧೯೮೨ : *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ,* ಮೈಸೂರು

ಶ್ರೀಕಂಠಯ್ಯ ಕೆ., ೧೯೮೩ : *ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು,* ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶ್ರೀಕಂಠಶಾಸ್ತ್ರಿ ಎಸ್., ೧೯೭೪ : *ಭಾರತೀಯ ಸಂಸ್ಕೃತಿ,* ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶ್ರೀಕಂಠಶಾಸ್ತ್ರಿ ಎಸ್., ೧೯೬೦ : *ಪುರಾತತ್ವ ಶೋಧನೆ,* ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶ್ರೀಧರಮೂರ್ತಿ ಮ., ೧೯೮೧ : *ದೇವತೆಗಳು ಮತ್ತು ಹಬ್ಬಗಳು,* ಪುನರ್ವಸು, ಬೆಂಗಳೂರು

ಶ್ರೀಧರಮೂರ್ತಿ ಎಚ್.ಜೆ., ೨೦೦೨ : *ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ,* ಶಿವರಾಮ ಕಾರಂತ, ಅಧ್ಯಯನ ಕೇಂದ್ರ, ಪುತ್ತೂರು

ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ೧೯೭೬ : *ಚಂದ್ರವಳ್ಳಿ,* ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ

ಶೈಲಜಾ ಸಿದ್ದಪ್ಪ ಹೊಸಳ್ಳೆರ, ೧೯೯೬ : *ಸಿರುಮನ ಸಾಂಗತ್ಯಗಳು-ಒಂದು ಅಧ್ಯಯನ,* (ಅಪ್ರಕಟಿತ ಮಹಾಪ್ರಬಂಧ) ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಶಿಲಾಕಾಂತ ಪತ್ತಾರ, ೨೦೦೦ : *ಬಾದಾಮಿ ಸಾಂಸ್ಕೃತಿಕ ಅಧ್ಯಯನ*(ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಷೇಕ್ ಅಲಿ, ೧೯೭೮ : *ಟಿಪ್ಪುಸುಲ್ತಾನ್,* ನ್ಯಾಷನಲ್ ಬುಕಟನ್, ಇಂಡಿಯಾ, ನವದೆಹಲಿ

ಜ್ಞಾನಾನಂದ ಜಿ., ೨೦೦೨ : *ಶಿಲ್ಪದರ್ಶಿ,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪತ್ರಿಕೆಗಳು ಮತ್ತು ಇತರೆ

ಇತಿಹಾಸದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವಿಜಯನಗರ ಅಧ್ಯಯನ ಸಂಪುಟಗಳು, ರಾಜ್ಯ ಪ್ರಾಚ್ಯವಸ್ತು ಮತ್ತುಸಂಗ್ರಹಾಲಯಗಳ ನಿರ್ದೇಶನಾಲಯ,ಮೈಸೂರು

ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

EPIGRAPHICAL SOURCES

Annual Reports of the Mysore Archaeological Department

Annual Reports of the Archaeological Survey of India, Southern Circle, Madras

Epgraphica Carnatica, Vol-11,12

Epigraphics Indica

Rice B. Lewis, *Mysore and Coorg from the Inscriptions,* Bangalore, 1886

Rice B. Lewis, *Mysore and Coorg from the Inscriptions,* Bangalore, 1879

Taylor, William, *List of the Meckenzie Inscriptions in the ceded Districts,* Madras

TRAVEL ACCOUNTS

Buchanan, Francies M.D., 1807 : *A Journey from Madras through the Countries of Mysore,* Canara and Malbar etc. (2 Vols.), London

Edward Moore, *Narrative of the Operations of Captain Littles Detachment*

Hamilton, Alexander, 1930 : *A New Account of the East India with numerous maps and illustrations,* new edition, With introduction and notes by Sir William Foster (2 Vol.s), London

Mundy, Peter, 1919 : *The Travels in Europe and Asia,* ed. By Lt.col. Sir Richard Carnal, Temple, Hakluyat Society, London

LITERARY SOURCES

Aiyangar, Krishnaswami S., 1919 : *The Sources of Vijayanagara History selected and edited for Madras University,* Camp, Saraswati Rangaswami, Madras

Fazl, Abdul, Allami, 1894 : *The Ain-I-Akbari,* Translated from The Original Persian by H. Blochmann and Jarrett Kittel, Rev. F., A Kannada English Dictonary

Robson, Francis, 1786 : *Late Captain in the Hon. East India Company's Fources.* The Life of haidar Alli. With an account of his Usurpation of the Kingdom of Mysore and other contigeous provinces, to which is annexed a genuine narrative of the surrerrings of the British Prisoners of war taken by his son Tippoo Sai, London

Wilson H.H., 1882 : The Meckenzie Collection, *A descriptive Catalogue of the Oriental manuscripts and other articles illustrative of Literature,* History, Statistics and

antiquities of the South India, collected by the late H.H.Wilson(2 vols), Calcutta, 1828, Madras

MODERN WORKS

Acharya P.K., 1927 : *Indian Architecture According to Shilpashastra,* Alahabad

Acharya P.K., 1927 : *Manasara and Encylopaedia of Hindu Architecture,* Alahabad

Krishnaswami Aiyangar S., 1930 : *Hindu Administrative Institutions in South India,* Madras

Krishnaswami Aiyangar S., 1923 : *South India and her Mahammadan Invaders,* Calcutte

A New English Dictionary on Historical principles, Ed. By Sir James Murray, VII, Part II

Basavaraj K.R.(Ed), 1978 : *The Vijayangara Urbanity,* Hospet, N.S.U.P

Brain Ferguson R.(Ed), 1984 : *Warfare*, Culture and Environment, Orlando, Academic Press

Chakravarthi P.C., 1972 : *The Art of war in Ancient India,* Delhi, Oriental Publishing House

Chitnis K.N., 1974 : *Keladi Polity,* Karnataka University, Dharwar

Coomarswamy A.K., 1930 : *Cities and City Gates,* Eastern Art, Vol-II, London

Data G.T., 1929 : *Art of War in Ancient India,* London

Desai P.B & Others, 1970 : *History of Karnataka,* Karnataka University, Dharwar

Deshpande H.T., 1979 : *The Chitradurga State,* University of Poona(Unpublished Ph.D. Thesis)

Fas Virginia, 1986 : *The of Forts of India,* Culcutta

Hayawadana Rao C., 1913 : *Mysore Gazetter,* Vol-II, Part û II, III & IV, Vol-V, New Edition, Mysore

Henderson, *The Coins of Hyder Alli & Tippu Sulthan,* R.K. Publication, Delhi

Joshi S.K., 1985 : *Defence Architecture in Early Karntaka,* Sandeep Prakashana, Delhi

J. Duncan M. Derrett, 1957 : *The Hoysalas,* Oxford Univerity Press

Kamalapur J.N., 1964 : *The Deccan Forts,* Bombay

Kingsely Mortin, *War History and Culture,* Bombay

KrishnaMurty M.S., 1980 : *The Nolabambas,* Mysore University, Mysore

Mahalingam T.V., 1967 : *South Indian Polity,* Madras

Mishra B.D., 1993 : *Forts and Fortresses of Gralior and its Interland,* Manohara Publisher and Distrubutors, Delhi

Mohibbul Husain, 1971 : *History of Tipusultan,* Calcutta

Muddachari B., 1969 : *The Mysore Maratha Relations in the 17th Century,* Mysore

Nilakanta Shastri K.A., 1966 : *A History of South India,* Madras, A.E.S

Narvane M.S., 1995 : *Forts of Maharashtra*, New Delhi

Panikkar K.N., 1938 : *Origin and evolution of Kingship in India*, Baroda

Panchamukhi R.S., 1953 : *Archaeology of Karnatik*, Kannada Research Institute, Dharwar

Ramachandra Murthy N.S., 1995 : *Forts of Andhra Pradesh*, Bharatiya Kala Pradarshana, Delhi

Ramachandra Rao P.B., 1944 : *The Palegars of Mysore & there Civilization*, Trichinapalli

Rangachari K., : *Town Planning and House Building in Ancient India*

Sarkar J.N., 1984 : *The Art of War in Medival India*, M.M. Publications, Private Ltd. Dlehi

Saletore B.A., 1934 : *Social and Political Life in the Vijayanaga Empire*, (2 Vols.) with a forward by Dr. S. Krishnaswami, Aiyangar, Madras

Sathyan B.N., 1940 : *Chitradurga District Gazetteer*, Bangalore

Singh A.P., 1987 : *Forts and Fortifications in India : with Special Reference to Central India*, Delhi

Sir- Richard Buran, *The Cambridge History of India*, Vol-IV, S. Chand & Co. Delhi,

Straith H., *Treatise on Fortification and Artillary*

Sewell, Robert, 1900 : *A Forgotten Empire - A Contribution to the History of India*, London, Reprinted in 1924, 1962, Delhi

Subhadra B.S., 1991 : *Art & Architecture of the Keladi Nayakas*(Unpublished Ph.D. Thesis) Karnataka University, Dharwar

Shivasharanappa K. Aruni, 1998 : *History and Culture of Surapura Samsthana*, North Karnataka, 1650-1858(Unpublished Ph.D.Thesis), Deccan Collage, Post graduate and Research Institute, Pune

ARTICALS & REPORTS

Srikanta Sastri, 1927 : *Capitulation of Chitradurga*, Q.J.M.S., Vol-XVIII, Oct

S. Srikanthayya, 1940-41: *Chataldurg*, Q.J.M.S., P.338-356

Ramachandra Rao P.B., 1940 : *Poligers of Mysore and their Civilization*, Q.J.M.S., Vol-XX, No. 4

D.S. Achuta Rao, 1940 : *Haidar Ali - Character, Personality Public and Private Life*, Q.J.M.S., Vol-XXXI

Jagadisa Ayyar P.V., 1921-22 : *Constructions of Forts*, Q.J.M.S., Vol-xii

Wheelar R.E.M., 1947 : *Brhamagiri and Chandravalli*, A.I.No.4

Krishna M.H., 1929 : *Excarvations at Chandravalli*, Supplement to A.R. Mysore Archaeological Dept.,

Ranga Raju N.S.: *Recent Archaeological Exploration in Karnataka*, Recent Researches in Karnataka Archaeology, Mysore, P.7-15

Khare V.V. : *Aitihasik Lekha Sangraha*, Vol-II to VII

Sir Thomas Munro, 1892 : *Extracts from the old Bellary Records*, Early Reports

Foreign Political Consultations, 1800-1802 : Nos. 133-38, National Archives of India, New Delhi, Records of the Ceded Districts, Vol.No.396/18761

ENCYCLOPEDIAS & DICTIONARIES :

The New Encyclopedia Britanica - International Edition, Vol-vii

The Encyclopedia America - International Edition, Vol-ii

International Encyclopedia of the Social Sciences


Webstar's Third New International Dictionary


□□

ನಕ್ಷೆಗಳು

ಕೋಟೆ ನಕ್ಷೆಯ ಸ್ಥಳಸೂಚಿ ಸಂಕೇತಗಳು

 = ದ್ವಾರಬಾಗಿಲು

 = ಪುಷ್ಕರಣಿ

 = ನೀರಿನ ದೊಣೆ


 = ಬೆಟ್ಟ ಅಥವಾ ಬಂಡೆ


 = ದೇವಾಲಯ


 = ಬತೇರಿ


 = ಕೋಟೆ ಮತ್ತು ಬುರುಜು

 = ಸೈನಿಕರ ವಸತಿ

 = ಗರಡಿ ಮನೆ

 = ಮಂಟಪ ಅಥವಾ ಪಹರೆ

 = ಕಟ್ಟಡದ ಅವಶೇಷಗಳು

 = ಕಣಜಗಳು

ಬ್ರಹ್ಮಗಿರಿ ಕೋಟೆ ನಕ್ಷೆ







CHITEL DROOG

ಕೃಪೆ.ಶಂಕರ್ ಎಸ್.ಅಥಣಿ


ಮೊಳಕಾಲ್ಮೂರು ಕೋಟೆ ನಕ್ಷೆ



ಉಚ್ಚಂಗಿದುರ್ಗದ ಕೋಟೆ ನಕ್ಷೆ




ವೇಣುಕಲ್ಲುಗುಡ್ಡದ ಕೋಟೆ ನಕ್ಷೆ




ಹೊಸದುರ್ಗ ಕೋಟೆ ನಕ್ಷೆ




ಭರಮಣ್ಣನಾಯಕನ ದುರ್ಗದ ಕೋಟೆ ನಕ್ಷೆ




ಜಾನಕಲ್ಲು ದುರ್ಗದ ಕೋಟೆ ನಕ್ಷೆ




ರಾಮದುರ್ಗ ಕೋಟೆ ನಕ್ಷೆ




ಸಿಂಗೇನಹಳ್ಳಿ ಕೋಟೆ ನಕ್ಷೆ




ಐಮಂಗಲ ಕೋಟೆ ನಕ್ಷೆ



ಸಂತೇಗುಡ್ಡದ ಕೋಟೆ ನಕ್ಷೆ




ತುರುವನೂರು ಕೋಟೆ ನಕ್ಷೆ




ತುರುವನೂರು ಕೋಟೆ ನಕ್ಷೆ


ಕಣಜನಹಳ್ಳಿ ಕೋಟೆ ನಕ್ಷೆ



ಕೃಪೆ : ಕಣಜನಹಳ್ಳಿ ನಾಗರಾಜ್

ಜೋಡು ಬತೇರಿ ಬಾಗಿಲು [ಚಿತ್ರದುರ್ಗ]





ಕಾಮನ ಬಾಗಿಲು, ಚಿತ್ರದುರ್ಗ ಕೋಟೆ

ಛಾಯಾಚಿತ್ರಗಳು



೧. ಪ್ರಾಚೀನ ಹನೆಯ ಕೋಟೆ ದ್ವಾರಬಾಗಿಲು - ಬ್ರಹ್ಮಗಿರಿ



೨. ಪ್ರಾಚೀನ ಹನೆಯ ಕೋಟೆ ತಡೆಗೋಡೆ - ಬ್ರಹ್ಮಗಿರಿ



೩. ಪ್ರಾಚೀನ ಹನೆಯ ಕೋಟೆ ಸಾಲು - ಬ್ರಹ್ಮಗಿರಿ



೪. ಮೇಲುದುರ್ಗದ ಕೋಟೆ - ಬ್ರಹ್ಮಗಿರಿ



೫. ಪಾಳೆಯಗಾರರ ಕಾಲದ ಕೋಟೆ - ಬ್ರಹ್ಮಗಿರಿ



೬. ಕೋಟೆಗೋಡೆ - ಲುಂಕೆಮಲೆ




೭. ಕಾಮನಬಾಗಿಲು - ಚಿತ್ರದುರ್ಗ



೮. ಕಸ್ತೂರಿ ರಂಗಪ್ಪ ನಾಯಕನ ಬಾಗಿಲು - ಚಿತ್ರದುರ್ಗ



೯. ಪ್ರಾಚೀನ ಕೆಂಪಯ್ಯನ ಕೋಟೆ - ಚಿತ್ರದುರ್ಗ



೧೦. ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟದ ಪ್ರಾಚೀನ ಕೋಟೆ ಗೋಡೆ - ಚಿತ್ರದುರ್ಗ



೧೧. ಕಣಜಗಳು - ಚಿತ್ರದುರ್ಗ



೧೨. ಮದ್ದಿನ ಮನೆಗಳು - ಚಿತ್ರದುರ್ಗ



೧೩. ಗಾಳಿಮಂಟಪ ಮತ್ತು ತುಪ್ಪದಕೊಳ ಬತೇರಿಗಳು - ಚಿತ್ರದುರ್ಗ



೧೪. ಕಹಳೆಬತೇರಿ - ಚಿತ್ರದುರ್ಗ



೧೫. ಬುರುಜಿನ ಮೇಲಿರುವ ಪಹರೆಗಳು - ಚಿತ್ರದುರ್ಗ




೧೬. ಮದ್ದು ಬೀಸುವ ಕಲ್ಲುಗಳು - ಚಿತ್ರದುರ್ಗ



೧೭. ಅರಮನೆಯ ಪಾಳು ಒಂದು ನೋಟ - ಚಿತ್ರದುರ್ಗ



೧೮. ಮೇಲುದುರ್ಗದ ಒಂದು ನೋಟ - ಚಿತ್ರದುರ್ಗ



೧೯. ನಾಗರಸುತ್ತು ಕೋಟೆ - ಚಿತ್ರದುರ್ಗ



೨೦. ಏಸಕ ಕಂಟಿ ಕೋಟೆಗಾಲು - ಚಿತ್ರದುರ್ಗ



೨೧. ಪ್ರಾಕೃತಿಕ ಕಲ್ಲುಗುಂಡುಗಳನ್ನು ಬಳಸಿಕೊಂಡು ನಿರ್ಮಿಸಿರುವ ಕೋಟೆ - ಚಿತ್ರದುರ್ಗ



೨೨. ಕೋಟೆ ಸಾಲು ಮತ್ತು ಬುರುಜುಗಳು - ಚಿತ್ರದುರ್ಗ



೨೩. ನಾಗರಸುತ್ತು ಕೋಟೆ ಸಾಲು - ಚಿತ್ರದುರ್ಗ



೨೪. ಪಶ್ಚಿಮ ದಿಕ್ಕಿನ ಎರಡನೇ ಕೋಟೆ ಸಾಲು ಮತ್ತು ಕಂದಕ - ಚಿತ್ರದುರ್ಗ



೨೫. ಕೋಟೆಗೋಡೆ - ಮೊಳಕಾಲ್ಮೂರು



೨೬. ಕೋಟೆ ಮತ್ತು ಕಣಜ - ಮೊಳಕಾಲ್ಮೂರು



೨೭. ಹನುಮನ ಬಾಗಿಲು - ಮೊಳಕಾಲ್ಮೂರು





೨೯. ಕೋಟೆಯ ದ್ವಾರ ಮತ್ತು ಬುರುಜು - ಜಟಂಗಿರಾಮೇಶ್ವರ



೩೦. ಕೋಟೆಗೋಡೆ - ಉಚ್ಚಂಗಿದುರ್ಗ



೩೨. ಗಾರೆಬುರುಜು ಕೋಟೆಸುತ್ತು ಮತ್ತು ದಿಡ್ಡಿಬಾಗಿಲು - ವೇಣುಕಲ್ಲುಗುಡ್ಡ



೩೧. ಕೋಟೆಗೋಡೆ - ಉಚ್ಚಂಗಿದುರ್ಗ



೩೩. ಕೋಟೆಯನ್ನೊಳಗೊಂಡ ಬೆಟ್ಟ - ವೇಣುಕಲ್ಲುಗುಡ್ಡ



೩೪. ಹನುಮನ ಕೊಂಬೆ ಕೋಟೆಸುತ್ತು - ಹೊಸದುರ್ಗ



೩೫. ನಾಗರಪಡೆ ಉತ್ತರ ದಿಕ್ಕಿನ ಕೋಟೆಸಾಲು - ಹೊಸದುರ್ಗ



೩೬. ನಾಗರಪಡೆ ದಕ್ಷಿಣ ದಿಕ್ಕಿನ ಕೋಟೆಸಾಲು - ಹೊಸದುರ್ಗ



೩೭. ನಾಗರಪಡೆ ಕೋಟೆ ಅವಶೇಷಗಳು - ಹೊಸದುರ್ಗ



೩೮. ಕೋಟೆಸಾಲು ಮತ್ತು ಬುರುಜು - ಭರಮ್ಮಣ್ಣನಾಯಕನದುರ್ಗ

೩೯. ದಿಡ್ಡಿ ಬಾಗಿಲು - ಭರಮ್ಮಣ್ಣನಾಯಕನದುರ್ಗ






೪೦. ಬ್ರಹ್ಮದೇವರ ಕೋಟೆ ಸುತ್ತು - ಚಾಸಕಲ್ಲು



೪೧. ಕೋಟೆ ಬುರುಜು - ಜಾನಕಲ್ಲು



೪೨. ಬತೇರಿ - ಬೂದಿಹಾಳು



೪೩. ರಂಗಪ್ಪ ದೇವರ ಕೋಟೆಯ ಸುತ್ತು - ಸಿಂಗೇನಹಳ್ಳಿ



೪೪. ಕೋಟೆ ಬುರುಜು - ಸಿಂಗೇನಹಳ್ಳಿ



೪೫. ಕೋಟೆ ಗೋಡೆ ಅವಶೇಷಗಳು - ಸಿಂಗೇನಹಳ್ಳಿ



೪೬. ಹೊರಸುತ್ತಿನ ಕೋಟೆ - ರಾಮದುರ್ಗ



೪೭. ಪಶ್ಚಿಮ ದಿಕ್ಕಿನ ಕೋಟೆ ಸಾಲು - ರಾಮದುರ್ಗ



೪೮. ಕೋಟೆಯ ಸಾಲು - ರಾಮದುರ್ಗ



೪೯. ಪಶ್ಚಿಮ ದಿಕ್ಕಿನ ಕೋಟೆ ಸಾಲು - ಐಮಂಗಲ



೫೦. ದಕ್ಷಿಣ ದಿಕ್ಕಿನ ಕೋಟೆ ಸಾಲು - ಐಮಂಗಲ



೫೧. ಕೋಟೆ ಸಾಲು - ಸಂತೇಗುಡ್ಡ



೫೨. ಕೋಟೆ ಬುರುಜು - ಸಂತೇಗುಡ್ಡ



೫೩. ಶಿಥಿಲಗೊಂಡ ಕೋಟೆ ಸಾಲು - ತುರುವನೂರು



೫೪. ಕೋಟೆ ಬುರುಜು - ತುರುವನೂರು



೫೫. ಕೋಟೆಸಾಲು -ರಾಮಗಿರಿ



೫೬. ತವಗ ಎಂಬ ಬುರುಜು - ಕಣಜನಹಳ್ಳಿ



೫೭. ಕಣಜ ಮತ್ತು ದೇವಾಲಯ - ಗುಡ್ಡದಹಳ್ಳಿ



೫೮. ಕೋಟೆಬುರುಜು - ಸಿದ್ದವ್ವನದುರ್ಗ



೫೯. ಕಾವಲುಗೋಪುರ - ಪರ್ತೇನಹಳ್ಳಿ



೬೦. ಬತೇರಿಯ ಮೇಲಿರುವ ಚಿಕ್ಕ ಫಿರಂಗಿ - ನೇರಲಹಳ್ಳಿ



೬೧. ಕಾವಲುಗೋಪುರ - ಹಿರೇಕಂದವಾಡಿ



೬೨. ಹನುಮನಕೊಂಬೆ ದ್ವಾರಬಾಗಿಲ ಹಿನ್ನೋಟ - ಹೊಸದುರ್ಗ